UNIVERSAL LIBRARY
OU_200816
UNIVERSAL LIBRARY

**OSMANIA UNIVERSITY LIBRARY**

Call No. K 81·6 N 21 P    Accession No. K 4769

Author [illegible] and others.

Title [illegible]

This book should be returned on or before the date last marked below.

ಪ್ರದೇಶ ಪರಿಷತ್ತಿನ ಪ್ರಕಟನೆ—೩.

# ಪದ್ಯರತ್ನಾಕರ

ಸಂಪಾದಕರು :

ನರಸಿಂಗರಾವ್ ಮಾನ್ವಿ, ಎಂ.ಎ., ಎಲ್‌ಎಲ್.ಬಿ.
ಎಫ್. ಜಿ. ಮಠದ, ಎಂ.ಎ., ಬಿ.ಓ.ಎಲ್.
ಸಿದ್ಧಯ್ಯ ಪುರಾಣಿಕ, ಬಿ.ಎ., ಎಲ್‌ಎಲ್.ಬಿ.

ಹೈದರಾಬಾದು ಪ್ರದೇಶ
ಕನ್ನಡ ಸಾಹಿತ್ಯ ಪರಿಷತ್ತು, ಹೈದರಾಬಾದು.

ಪ್ರಕಾಶಕರು :
**ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತು,**
೮-೪೨. ಸಿ.ಐ.ಬಿ. ಲಿಂಗಂಪಲ್ಲಿ, ಹೈದರಾಬಾದು-ದ. ೧.

ಮೊದಲನೆಯ ಮುದ್ರಣ – ೧೯೫೬.

**ಬೆಲೆ :**

| | |
|---|---|
| ಸಾದಾ ಪ್ರತಿ | **ರೂ. ೫–೮–೦** |
| ಉತ್ತಮ ಪ್ರತಿ | **ರೂ. ೭–೮–೦** |

ಮುದ್ರಕರು :
**ಶ್ರೀ ಅನ್ನದಾನಯ್ಯ ಪುರಾಣಿಕ,** ಬಿ. ಕಾಮ್., ಎಲ್‌ಎಲ್. ಬಿ.
**ಶ್ರೀ ಭಾರತೀ ಪ್ರಿಂಟರಿ,** ಲಿಂಗಂಪಲ್ಲಿ, ಹೈದರಾಬಾದು–ದಕ್ಷಿಣ ೧.

# ಪ್ರಕಾಶಕರ ಮಾತು

ಕನ್ನಡ ಕಾವ್ಯದ ವ್ಯಾಪ್ತಿ ಬಹು ದೊಡ್ಡದಾಗಿದ್ದು ಅದರ ಸಾರವತ್ತಾದ ಭಾಗವನ್ನು ಆಯ್ದು ಅಚ್ಚುಮಾಡಿಸುವುದರಿಂದ ಓದುಗರಿಗೆ ಸಹಾಯವಾಗಿ ಕನ್ನಡ ಪದ್ಯಕಾವ್ಯದ ಸಮಗ್ರ ಪರಿಚಯ ಸಂಕ್ಷೇಪವಾಗಿ ಆಗುವುದೆಂಬ ಭರವಸೆಯಿಂದಲೂ, ಕನ್ನಡ ಸಾಹಿತ್ಯ ಪ್ರಚಾರದ ದೃಷ್ಟಿಯಿಂದ ಇಂಥ ಒಂದು ಕಾವ್ಯ ಸಂಕಲನವು ಉಪಕಾರಿಯಾದೀತೆಂದೂ ಅಲ್ಲದೆ ಕನ್ನಡ ಸಾಹಿತ್ಯದ ಅಭ್ಯಾಸಿಗಳಿಗೆ ನೆರವಾಗಬಹುದೆಂದೂ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತು **ಪದ್ಯರತ್ನಾಕರವನ್ನು ಸಂಕಲಿಸಿ ಪ್ರಕಟಿಸಿದೆ.**

ಇಂಥ ಸಂಕಲನದ ಕಾರ್ಯ ಹೊಣೆಗಾರಿಕೆಯದೆಂದು ಪರಿಷತ್ತು ಬಲ್ಲುದು. ಇದಕ್ಕಾಗಿ ಅನೇಕ ಆಧಾರ ಗ್ರಂಥಗಳೂ, ವಿಶಿಷ್ಟ ಪಾಂಡಿತ್ಯವುಳ್ಳ ಮಹಾ ವಿದ್ವಾಂಸರೂ ಆಗತ್ಯ. ಆದರೆ ಈ ಅಂಶಗಳಲ್ಲಿ ಅಡಚಣೆಗಳಿದ್ದರೂ ಕೆಲಸವು ಅಗತ್ಯವಾದುದರಿಂದ ಇದ್ದ ಅನುಕೂಲ್ಯಗಳಲ್ಲಿ ಈ ಕಾರ್ಯವನ್ನು ಕೈಕೊಂಡು ನೆರವೇರಿಸಬೇಕೆಂದು ಪರಿಷತ್ತು ಬಗೆದುದು ಕ್ಷಮ್ಯವೆಂದು ವಿದ್ವಾಂಸರು ಒಪ್ಪಬಹುದು. ಸಂಕಲನ ಕಾರ್ಯದಲ್ಲಿ ಮತ್ತು ಅಚ್ಚಿನಲ್ಲಿ ನ್ಯೂನತೆಗಳಿದ್ದರೆ ಮುಂದಿನ ಮುದ್ರಣದಲ್ಲಿ ಅವನ್ನು ತಿದ್ದಿಕೊಳ್ಳಬಹುದು. ಕನ್ನಡ ಸಾಹಿತಿಗಳೂ ಮತ್ತು ಪಂಡಿತರೂ ತಮ್ಮ ಸೂಕ್ತ ಸಲಹೆಗಳಿಂದ ಪರಿಷತ್ತಿಗೆ ಉಪಕರಿಸಬೇಕೆಂದು ಪ್ರಾರ್ಥನೆ.

ಆರಂಭ ಕಾಲದಿಂದ ಹಿಡಿದು ಆಧುನಿಕ ಕಾಲದ ಮೊದಲಿನವರೆಗೆ ಉಪಲಬ್ಧವಿದ್ದ ಎಲ್ಲ ಮಹಾಕೃತಿಗಳಿಂದ ಉದ್ಧರಣಗಳನ್ನು ಆಯ್ದು ಕೊಡಲಾಗಿದೆ. ಸುಮಾರು ೬೬ ಕವಿಗಳ ಕಾವ್ಯಭಾಗಗಳನ್ನು ಇದರಲ್ಲಿ ಸೇರಿಸಲಾಗಿದೆ. **ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ**ರಂಥ ಮಹಾಕವಿಗಳ ಗ್ರಂಥಗಳಿಂದ ಹೆಚ್ಚು ಸಂಖ್ಯೆಯಲ್ಲಿ ಪದ್ಯಗಳನ್ನು ಆಯ್ದುಕೊಳ್ಳಲಾಗಿದೆ. ಎಷ್ಟು ಸಂಕ್ಷೇಪವಾಗಿ ಸಂಕಲನವನ್ನು

ಸಿದ್ಧ ಮಾಡಬೇಕೆಂದು ಬಗೆದರೂ ಗ್ರಂಥದ ವ್ಯಾಪ್ತಿ ೬೦೦ ಪುಟಕ್ಕೆ ಮೀರಿದೆ. ಆಯುವಾಗ ಯಾವ ಭಾಗವನ್ನು ಬಿಡಬೇಕು ಯಾವ ಭಾಗವನ್ನು ಇಟ್ಟುಕೊಳ್ಳಬೇಕೆಂಬ ಸಂಕೋಚವಾಗಿ ವ್ಯಾಪ್ತಿ ದೊಡ್ಡದಾದರೂ ಕನ್ನಡ ಕಾವ್ಯದ ಸಾರ್ವದೇಶಿಕ ಪರಿಚಯ ಓದುಗರಿಗೆ ಆಗಬೇಕೆಂಬ ಉದ್ದೇಶದಿಂದ ಇಷ್ಟು ದೊಡ್ಡ ಸಂಕಲನವನ್ನು ಅಚ್ಚು ಮಾಡಲಾಗಿದೆ. ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ಕವಿ ಕಾವ್ಯವಿಚಾರ ಮತ್ತು ಶಬ್ದಕೋಶವನ್ನೂ ಕೊನೆಯಲ್ಲಿ ಕೊಡಲಾಗಿದೆ.

ಕೊನೆಯದಾಗಿ, ಎಲ್ಲ ಕಾವ್ಯೋಪಾಸಕರಿಗೆ ಈ ಸಂಕಲನವು ಸೇವೆ ಸಲ್ಲಿಸಲೆಂದು ಹಾರೈಸಿ ಇದರಲ್ಲಿದ್ದ ಎಲ್ಲ ನ್ಯೂನತೆಗಳಿಗಾಗಿ ಪ್ರದೇಶ ಪರಿಷತ್ತು ಹೊಣೆಗಾರಿಕೆಯನ್ನು ಹೊತ್ತು ತಿದ್ದುಪಡಿಗಾಗಿ ಸದಾ ಸಿದ್ಧವಿದೆಯೆಂದು ಅರಿಕೆ ಮಾಡಿಕೊಳ್ಳುತ್ತೇವೆ. ಗ್ರಂಥವನ್ನು ಉತ್ತಮಗೊಳಿಸುವ ಯಾವ ಸಲಹೆಯನ್ನೂ ಪ್ರದೇಶ ಪರಿಷತ್ತು ಕೃತಜ್ಞತೆಯಿಂದ ಒಪ್ಪಿಕೊಳ್ಳುವುದು.

ಈ ಸಂಕಲನವನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಹಲವರು ಹಲವಾರು ರೀತಿಯಿಂದ ನೆರವಾಗಿದ್ದಾರೆ. ಸಿದ್ಧಗೊಳಿಸಿದ ಸಂಕಲನದ ಅಚ್ಚಾದ ಪ್ರತಿಯನ್ನು ಒಮ್ಮೆ ಆದ್ಯಂತವಾಗಿ ನೋಡಿ ಕೆಲವು ನ್ಯೂನತೆಗಳನ್ನು ಸರಿಪಡಿಸಲು ಸೂಚಿಸಿ ಆಚಾರ್ಯ ಡಿ. ಎಲ್. ನರಸಿಂಹಾಚಾರ್ಯ, ಎಂ.ಎ. ಅವರು ಉಪಕಾರ ಮಾಡಿದ್ದಾರೆ. ಅವರಿಗೂ ಈ ಸಂಕಲನದ ಹೊಣೆಯನ್ನು ನಿರ್ವಹಿಸಿದ ಸಂಪಾದಕ ಮಂಡಲಿಯವರಿಗೂ, ಅಚ್ಚಿನ ಹಿರಿಯ ಹೊಣೆಯನ್ನು ಹೊತ್ತು ಈ ಗ್ರಂಥವನ್ನು ಸುಂದರವಾಗಿ ಸಕಾಲದಲ್ಲಿ ಮುದ್ರಿಸಿದ ಶ್ರೀ ಅನ್ನದಾನಯ್ಯ ಪುರಾಣಿಕರಿಗೂ ಪರಿಷತ್ತು ಕೃತಜ್ಞತೆಯನ್ನು ಸೂಚಿಸುತ್ತದೆ.

**ನರಸಿಂಗರಾವ್ ಮಾನ್ವಿ,**
ಅಧ್ಯಕ್ಷ,
ಹೈದರಾಬಾದು ಪ್ರದೇಶ ಕನ್ನಡ
ಸಾಹಿತ್ಯ ಪರಿಷತ್ತು.

ಹೈದರಾಬಾದು
೧೫ ಅಗಸ್ಟ್,೧೯೫೬.

# ಒಳಪಿಡಿ


| ವಿಷಯ | ಕವಿ | ಪುಟ |
|---|---|---|
| ೧. ತಮಟಕಲ್ಲಿನ ಶಾಸನ | | ೧ |
| ೨. ಶ್ರವಣಬೆಳ್ಗೊಳದ ಯತಿಗಳು | | ೨ |
| ೩. ಬಾದಾಮಿಯ ಶಾಸನ | | ೩ |
| ೪. ಕನ್ನಡನಾಡು | ನೃಪತುಂಗ | ೪ |
| ೫. ಕವಿ ಕಾವ್ಯ | ,, | ೫ |
| ೬. ಕರ್ಣನ ಜನ್ಮ | ಪಂಪ | ೬ |
| ೭. ಕರ್ಣನ ಯೌವನ | ,, | ೧೦ |
| ೮. ಇಂದ್ರನ ಭೇದ | ,, | ೧೧ |
| ೯. ಕೃಷ್ಣನ ಭೇದ | ,, | ೧೨ |
| ೧೦. ಕರ್ಣನ ನಿಶ್ಚಯ | ,, | ೧೩ |
| ೧೧. ಕುಂತಿ-ಕರ್ಣ ಸಂವಾದ | ,, | ೧೪ |
| ೧೨. ಕರ್ಣನ ಯುದ್ಧ | ,, | ೧೭ |
| ೧೩. ಬಾಹುಬಲಿಯ ವಿರಾಗ | ,, | ೨೪ |
| ೧೪. ವತ್ಸಕಾವತೀ ವರ್ಣನ | ಪೊನ್ನ | ೨೬ |
| ೧೫. ದಿವ್ಯ ತಪಸ್ವಿನಿ | ನಾಗವರ್ಮ | ೨೯ |
| ೧೬. ವಸಂತಲಕ್ಷ್ಮಿ | ರನ್ನ | ೩೬ |
| ೧೭. ಅಭಿಮಾನಧನ ಸುಯೋಧನ | ,, | ೩೮ |
| ೧೮. ಧೃತರಾಷ್ಟ್ರ ಗಾಂಧಾರಿ ಸಂದರ್ಶನ | ,, | ೪೩ |

| | | |
|---|---|---|
| ೧೯. ದುರ್ಯೋಧನನ ಪ್ರಲಾಪ | ರನ್ನ | ೪೬ |
| ೨೦. ಭೀಷ್ಮ ಸಂದರ್ಶನ | ,, | ೫೦ |
| ೨೧. ಭೀಮಸೇನಾಡಂಬರ | ,, | ೫೪ |
| ೨೨. ಗದಾಯುದ್ಧ | ,, | ೫೬ |
| ೨೩. ರಾಜನೀತಿ | ದುರ್ಗಸಿಂಹ | ೫೯ |
| ೨೪. ನಾಗಶ್ರೀಯ ಪಾಂಡಿತ್ಯ ಸೌಂದರ್ಯ | ಶಾಂತಿನಾಥ | ೬೧ |
| ೨೫. ಚಂದ್ರೋದಯ | ನಾಗಚಂದ್ರ | ೬೨ |
| ೨೬. ರಾವಣನ ಎರಡು ಚಿತ್ರಗಳು | ,, | ೬೩ |
| ೨೭. ಒಳ್ಳೆಯ ಕಾವ್ಯದ ಲಕ್ಷಣ | ನಯಸೇನ | ೭೧ |
| ೨೮. ಸುನೀತಿ ಸಾರ | ಬ್ರಹ್ಮಶಿವ | ೭೩ |
| ೨೯. ವನಶ್ರೀ | ಕರ್ಣಪಾರ್ಯ | ೭೪ |
| ೩೦. ಬಂಧುರ ಕಾವ್ಯ ನಿಬಂಧ | ನಾಗವರ್ಮ ೨ | ೭೬ |
| ೩೧. ಗಿರಿಜೆಯ ಬಾಲ್ಯ | ಹರಿಹರ | ೭೮ |
| ೩೨. ತಪೋಮೂರ್ತಿ ವಿರೂಪಾಕ್ಷ | ,, | ೮೦ |
| ೩೩. ಪುಷ್ಪಾರ್ಚನೆ | ,, | ೮೨ |
| ೩೪. ಕಾಮದಹನ | ,, | ೮೫ |
| ೩೫. ರತಿ ಪ್ರಳಾಪ | ,, | ೮೭ |
| ೩೬. ಗಿರಿಜೆಯ ತಪಸ್ಸು | ,, | ೯೦ |
| ೩೭. ಈಶ್ವರಾಗಮನ | ,, | ೯೩ |
| ೩೮. ಬೀಳ್ಕೊಡುವಿಕೆ | ,, | ೧೦೦ |
| ೩೯. ಭಕ್ತ ಹರಿಹರ | ,, | ೧೦೪ |

| | | | |
|---|---|---|---|
| ೪೦. | ಸೊಪ್ಪಿನ ಹಸುಮ್ಮ | ಕೆರೆಯ ಪದ್ಮರಸ | ೧೦೭ |
| ೪೧. | ವಿಶ್ವೇಶ್ವರ ಸಾಕ್ಷಾತ್ಕಾರ | ರಾಘವಾಂಕ | ೧೦೮ |
| ೪೨. | ಬಾಲ್ಯದ ಮರೆಯ ಬೊಮ್ಮ | ,, | ೧೧೪ |
| ೪೩. | ಕವಿಗಳ ಅಗ್ಗಳಿಕೆ | ನೇಮಿಚಂದ್ರ | ೧೨೫ |
| ೪೪. | ಪುರಾಂಗನೆಯರು | ,, | ೧೨೭ |
| ೪೫. | ಬಾಲಲೀಲೆ | ರುದ್ರಭಟ್ಟ | ೧೨೯ |
| ೪೬. | ಗೊಮ್ಮಟ ಸ್ತುತಿ | ಬೊಪ್ಪಣ ಪಂಡಿತ | ೧೩೨ |
| ೪೭. | ನೀತಿ | ,, | ೧೩೩ |
| ೪೮. | ಸಿರಿಗರಂ ಸೊಡೆದವರು | ಅಗ್ಗಳ | ೧೩೫ |
| ೪೯. | ವಾಣಿ | ,, | ೧೩೬ |
| ೫೦ | ಬೇಡರು | ,, | ೧೩೭ |
| ೫೧ | ಪಾಮರಿಯರು | ,, | ೧೩೮ |
| ೫೨. | ಸೋಮೇಶ್ವರ ಶತಕ | ಪಾಲ್ಕುರಿಕೆ ಸೋಮನಾಥ | ೧೩೯ |
| ೫೩. | ಬಲರಾಮನ ಪ್ರಲಾಪ | ಆಚಣ್ಣ | ೧೪೨ |
| ೫೪. | ಜೀವಸಂಬೋಧನೆ | ಬಂಧುವರ್ಮ | ೧೪೩ |
| ೫೫. | ಸುಪ್ರಭಾತ | ದೇವಕವಿ | ೧೪೫ |
| ೫೬. | ರಾಜದೂತ | ಪಾರ್ಶ್ವಪಂಡಿತ | ೧೪೭ |
| ೫೭. | ಚಂಡಶಾಸನನ ದುರಂತ | ಜನ್ನ | ೧೪೮ |
| ೫೮. | ಮನಸಿಜನ ಮಾಯೆ | ,, | ೧೬೪ |
| ೫೯. | ಮಾಗಿ | ಸೋಮರಾಜ | ೧೬೯ |
| ೬೦. | ಗ್ರೀಷ್ಮ | ಎರಡನೆಯ ಗುಣವರ್ಮ | ೧೭೧ |
| ೬೧. | ಸಂಧ್ಯಾರಾಗ | ಕಮಲಭವ | ೧೭೨ |
| ೬೨. | ಪುನರ್ಮಿಲನ | ಆಂಡಯ್ಯ | ೧೭೪ |
| ೬೩. | ಸಲಿಲ ಕೇಳಿ | ಚೌಂಡರಸ | ೧೭೮ |

| | | |
|---|---|---|
| ೬೪. ಬಸವಣ್ಣನ ಭಕ್ತಿ | ಭೀಮಕವಿ | ೧೮೧ |
| ೬೫. ನವ್ಯ ಕಾವ್ಯ | ಮಧುರ ಕವಿ | ೧೮೩ |
| ೬೬. ವನಲಕ್ಷ್ಮಿ | ಪದ್ಮಣಾಂಕ | ೧೮೭ |
| ೬೭. ವನಲಲನೆ | ಭಾಸ್ಕರಕವಿ | ೧೯೨ |
| ೬೮. ಮಾಯೆಯ ಸೋಲು | ಚಾಮರಸ | ೧೯೫ |
| ೬೯. ಪಾಂಡುರಾಜನ ದುರಂತ | ಕುಮಾರವ್ಯಾಸ | ೨೧೫ |
| ೭೦. ದ್ರೌಪದೀ ಸ್ವಯಂವರ | ,, | ೨೨೦ |
| ೭೧. ಅಕ್ಷಯಾಂಬರ | ,, | ೨೧೫ |
| ೭೨. ಉತ್ತರನ ಪೌರುಷ | ,, | ೨೬೯ |
| ೭೩. ವೀರದ್ರೌಪದಿ | ,, | ೨೯೨ |
| ೭೪. ವಿದುರನ ಭಕ್ತಿಕೇಳಿ | ,, | ೩೦೪ |
| ೭೫. ದಾತಾರನ ಕೈವಾರ | ,, | ೩೨೬ |
| ೭೬. ಸುರನದೀನಂದನನ ಹರಕೆ | ,, | ೩೩೩ |
| ೭೭. ವೀರ ಅಭಿಮನ್ಯು | ,, | ೩೪೧ |
| ೭೮. ಕಾವ್ಯವಿಹಾರ: | ಮಗ್ಗೆಯ ಮಾಯಿದೇವ | ೩೭೯ |
| ಪ್ರಬೋಧ | ಗುರುಬಸವ | ೩೮೧ |
| ಇಂಚರ | ಚಂದ್ರಕವಿ | ೩೮೨ |
| ಸದ್ಧರ್ಮ ಯುಗ | ವಿಜಯಣ್ಣ | ೩೮೫ |
| ಪರಮೆಯ ಸೌಂದರ್ಯ | ಬೊಮ್ಮರಸ | ೩೮೬ |
| ಸಾಹಿತ್ಯಜ್ಞರ ಅಪೂರ್ವತೆ | ಚತುರ್ಮುಖ ಬೊಮ್ಮರಸ | ೩೮೭ |
| ೭೯. ಶ್ರೀರಾಮನ ವನವಾಸ ಪ್ರತಿಜ್ಞೆ | ಕುಮಾರ ವಾಲ್ಮೀಕಿ | ೩೮೮ |
| ೮೦. ಪ್ರಾಣಲಿಂಗಿ ಬಸವಣ್ಣ | ಸಿಂಗಿರಾಜ | ೩೯೩ |
| ೮೧. ಸುಬೋಧಸಾರ | ಮುಪ್ಪಿನ ಷಡಕ್ಷರಿ | ೩೯೯ |
| ೮೨. ಜಾಣಕೋಗಿಲೆ | ನಿಜಗುಣ ಶಿವಯೋಗಿ | ೪೦೬ |

| | | | |
|---|---|---|---|
| ೮೩. | ಜೇಡುವೆಸಭವ | ನಿಜಗುಣ ಶಿವಯೋಗಿ | ೪೦೭ |
| ೮೪. | ಬೇಂಟೆ | ಸುರಂಗ ಕವಿ | ೪೦೯ |
| ೮೫. | ಬಿರುದುಗಳು | ವಿವಿಧ ಕವಿಗಳು | ೪೧೩ |
| ೮೬. | ಭೀಮಾರಣ್ಯ | ಮಂಗರಸ | ೪೧೫ |
| ೮೭. | ಸುಮನಸ ಮಹಾವನ ವಿಲಾಸ | ,, | ೪೧೯ |
| ೮೮. | ಶರತ್ಕಾಲ | ,, | ೪೨೧ |
| ೮೯. | ಚೋಳದೇಶ | ಗುಬ್ಬಿ ಮಲ್ಲಣಾರ್ಯ | ೪೨೨ |
| ೯೦. | ಕಾಲಲೀಲೆ | ,, | ೪೨೪ |
| ೯೧. | ಪ್ರಹ್ಲಾದ | ಚಾಟು ವಿಟ್ಠಲನಾಥ | ೪೨೭ |
| ೯೨. | ಇದನಾದರು ಕೊಡದಿದ್ದರೆ | ಶ್ರೀಪಾದರಾಯರು | ೪೨೯ |
| ೯೩. | ಉಗಾಭೋಗ | ವ್ಯಾಸರಾಯರು | ೪೩೧ |
| ೯೪. | ವೃಂದಾವನ | ,, | ೪೩೧ |
| ೯೫. | ಮಾನವಜನ್ಮ | ಪುರಂದರದಾಸರು | ೪೩೪ |
| ೯೬. | ಮನವ ಶೋಧಿಸಬೇಕು | ,, | ೪೩೫ |
| ೯೭. | ಮೂರ್ಖರು | ,, | ೪೩೬ |
| ೯೮. | ರಂಗ ಕೊಳಲನೂದಲು | ,, | ೪೩೮ |
| ೯೯. | ಎಲ್ಲವೂ ನಿನ್ನದು | ಕನಕದಾಸರು | ೪೪೧ |
| ೧೦೦. | ಅವರ್ಣನೀಯ | ,, | ೪೪೨ |
| ೧೦೧. | ನವನ ವಿಕಾರ ರೂಪ | ,, | ೪೪೩ |
| ೧೦೨. | ತಾಳ್ಮೆಯ ತಪ | ವಾದಿರಾಜ | ೪೪೯ |
| ೧೦೩. | ದಾರಿಗಾಣದು | ರಾಘವೇಂದ್ರಸ್ವಾಮಿ | ೪೫೦ |
| ೧೦೪. | ಬಿನ್ನಪ | ಗೋಪಾಲದಾಸರು | ೪೫೧ |
| ೧೦೫. | ಚಂಚಲ ಮನಸ್ಸು | ವಿಜಯದಾಸರು | ೪೫೪ |
| ೧೦೬. | ಶ್ರೀಚರಣ | ,, | ೪೫೫ |

| | | | |
|---|---|---|---|
| ೧೦೭. | ದುರಾಚಾರ ನಿವಾರಣೆ | ವಿಜಯದಾಸರು | ೪೫೮ |
| ೧೦೮. | ಕೋಲುಹಾಡು | ಮೋಹನದಾಸರು | ೪೬೧ |
| ೧೦೯. | ವಿರಾಟಪೂಜೆ | ಜಗನ್ನಾಥದಾಸರು | ೪೬೭ |
| ೧೧೦. | ಕರುಣಾಮಯತೆ | ,, | ೪೬೯ |
| ೧೧೧. | ವ್ಯಾಪ್ತಿ | ,, | ೪೭೪ |
| ೧೧೨. | ಹೇಸಬಾರದೆ ಮನುಜ | ಸರ್ಪಭೂಷಣ ಶಿವಯೋಗಿ | ೪೮೧ |
| ೧೧೩. | ದೇವರದೇವ | ,, | ೪೮೨ |
| ೧೧೪. | ಶರೀರವೆಂಬ ಹೊಲ | ,, | ೪೮೩ |
| ೧೧೫. | ಜ್ಯೋತಿ ಬೆಳಗುತಿದೆ | ವೈಲಾರದ ಬಸವಲಿಂಗ | ೪೮೫ |
| ೧೧೬. | ಊರಿಗೆ ಸೇರೋ | ಘನಮಠದಾರ್ಯರು | ೪೮೬ |
| ೧೧೭. | ಚಿತ್ಸೂರ್ಯ | ಮಹಂತ ಶಿವಯೋಗಿಗಳು | ೪೮೭ |
| ೧೧೮. | ಪರಬ್ರಹ್ಮರು | ,, | ೪೮೮ |
| ೧೧೯. | ಭರತ ಚಕ್ರೇಶ್ವರ | ರತ್ನಾಕರವರ್ಣಿ | ೪೮೯ |
| ೧೨೦. | ಸುಲೋಚನೆಯ ಸ್ವಯಂವರ | ,, | ೪೯೧ |
| ೧೨೧. | ಜಲಕನ್ನಿಕಾ ನಾಟ್ಯ | ,, | ೪೯೭ |
| ೧೨೨. | ಆತ್ಮ ಕರ್ಮ ಮುಕ್ತಿ | ,, | ೫೦೧ |
| ೧೨೩. | ರಾಜನೀತಿ | ವಿರೂಪಾಕ್ಷ ಪಂಡಿತ | ೫೦೪ |
| ೧೨೪. | ನೀತಿ | ಸಿದ್ಧನಂಜೇಶ | ೫೦೯ |
| ೧೨೫ | ಪಾಶುಪತಾಸ್ತ್ರ ಪ್ರದಾನ | ಷಡಕ್ಷರ ದೇವ | ೫೧೨ |
| ೧೨೬. | ಕುಮಾರೋದಯ | ,, | ೫೧೮ |
| ೧೨೭. | ಕುಲವಧು | ಹೊನ್ನಮ್ಮ | ೫೨೨ |
| ೧೨೮. | ಸೀತಾ ಪರಿತ್ಯಾಗ | ಲಕ್ಷ್ಮೀಶ | ೫೨೫ |
| ೧೨೯. | ಲವಕುಶರ ಬಾಲ್ಯ | ,, | ೫೩೬ |
| ೧೩೦. | ಸರ್ವಜ್ಞನ ವಚನಗಳು | ಸರ್ವಜ್ಞ | ೫೪೨ |

| | | |
|---|---|---|
| ೧೩೧. ಸುಧಾಸೂತಿ ಬಿಂಬ | ಬಸಪ್ಪ ಶಾಸ್ತ್ರಿ | ೫೪೭ |
| ೧೩೨. ಸಂಧಾನ | ಪಾರ್ತಿ ಸುಬ್ಬ | ೫೫೦ |
| ೧೩೩. ಸಮುದ್ರವರ್ಣನೆ | ಮುದ್ದಣ | ೫೫೨ |
| ೧೩೪. ನೀತಿಮಂಜರಿ | ಆರ್. ನರಸಿಂಹಾಚಾರ್ | ೫೫೭ |
| ೧೩೫. ಕವಿ ಕಾವ್ಯ ವಿಚಾರ | | ೫೬೧ |
| ೧೩೬. ಶಬ್ದಕೋಶ | | ೫೬೯ |
| ೧೩೭. ಒಪ್ಪೋಲೆ | | |

## ೧. ತಮಟಕಲ್ಲಿನ ಶಾಸನ

**ಸು. (೫೦೦) ?**

ಬಿಣಮಣಿ (ಫಣಿಮಣಿ) ಅನ್ತುಭೋಗಿ ಬಿಣ (ಫಣ) ದುಳ್ಮಣಿವಿಲ್ಮನ
ದೋನ್ ।
ರಣಮುಖದುಳ್ಳ ಕೋಲಂ ನೆರಿಯಕ್ಕರ್ಮನಿನ್ದ್ಯಗುಣನ್ ॥
ಪ್ರಣಯಿಜನಕ್ಕೆ ಕಾಮನಸಿತೋತ್ಪಲವರ್ಣ್ಣನವನ್ ।
ಗುಣಮಧುರಾಂಕ್ಕ ದಿವ್ಯಪುರುಷನ್ ಪುರುಷಪ್ರವರನ್ ॥

## ೨. ಶ್ರವಣಬೆಳ್ಗೊಳದ ಯತಿಗಳು

**ಸು. (೭೦೦)**

ಶ್ರೀ ಭದ್ರಬಾಹು ಸಚಂದ್ರಗುಪ್ತ ಮುನೀಂದ್ರ ಯುಗ್ಮದಿನೊಪ್ಪೆ ವಲ್
ಭದ್ರವಾಗಿದ ಧರ್ಮಮಂದುವೞಿಕ್ಕೆ ವಂದಿಸಿಸಳ್ಕಲೋ
ವಿದ್ರುಮಾಧರ ಶಾಂತಿಸೇನ ಮುನೀಶನಾಕ್ಕಿಎ ವೆಳ್ಗೊಳ [ತ್ತ್]
ಅದ್ರಿಮೇಲಶನಾದಿವಿಟ್ಟುಪುನರ್ಭವಕ್ಕೆಱೆ ಆಗಿ [ದಾನ್]

ಶ್ರೀ ಮಾಸೇನರ್ ಪರಮಪ್ರಭಾವ ಋಷಿಯರ್ ಕಟ್ವಪ್ಪಿನಾ ವೆಟ್ಟದುಳ್
ಶ್ರೀ ಸಂಗಂಗಳ ಪೇೞ್ದ ಸಿದ್ಧಸಮಯಂ ತಪ್ಪಾದೆ ನೋನ್ತಿಂಬಿನಿನ್
ಪ್ರಾಸಾದಾಂತರಮಾನ್ ವಿಚಿತ್ರ ಪ್ರಜ್ವಲ್ಯದಿನ್ ಮಿಕ್ಕುದಾನ್
ಸಾಸಿರ್ವರ್ ವರಪೂಜೆದಂದುಯೆ ಅವರ್ ಸ್ವರ್ಗಾಗ್ರಮಾನೇಱಿದಾರ್

ನೆಱೆದಾದ ವ್ರತಶೀಲನೋನ್ಪಿ ಗುಣದಿಂ ಸ್ವಾಧ್ಯಾಯ ಸಂಪತ್ತಿನಿಂ
ಕಱೆಯಿಲ್ ನಲ್‌ತಪ ಧರ್ಮದಾ ಸಸಿಮತಿ ಶ್ರೀಗಂತಿಯರ್ ವಂದುಮೇಲ್
ಅಱಿದಾಯುಷ್ಯಮನೆಂತು ನೋಡೆನಗೆ ತಾನಿಂತೆಂದು ಕಟ್ವಪ್ಪಿನುಳ್
ತೊಱೆದಾರಾಧನೆ ನೋನ್ತು ತೀರ್ಥಗಿರಿಮೇಲ್ ಸ್ವರ್ಗಾಲಯಕ್ಕೇಱಿದಾರ್

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ ಮಂಜುವೋಲ್ ತೋಱಿ ಬೇಗಂ
ಪಿರಿಗುಂ ಶ್ರೀ ರೂಪ ಲೀಲಾ ಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗಂ
ಪರಮಾರ್ಥಂ ಮೆಚ್ಚೆನಾನೀ ಧರಣಿಯುಳಿರವಾನೆಂದು ಸಂನ್ಯಾಸನಂ ಗೆ
ಯ್ದುರುಸತ್ವನ್ ನಂದಿಸೇನಪ್ರವರ ಮುನಿವರನ್ ದೇವಲೋಕಕ್ಕೆ ಸಂದಾನ್

(ಶಾಸನಗಳಿಂದ)

**'ಬಾವುಟ'**

# ೩. ಬಾದಾಮಿಯ ಶಾಸನ

## ಸು. (೭೦೦)

ಸಾಧುಗೆ ಸಾಧು ಮಾಧುರ್ಯನ್ಗೆ ಮಾಧುರ್ಯಂ ।
ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್ ।
ಮಾಧವನೀತನ್ ಪೆಱನಲ್ಲ ॥

ಒಳ್ಳಿತ್ತ ಕೆಯ್ವೊರಾರ್ ಪೊಲ್ಲದುಮದಱಂತೆ ।
ಬಲ್ಲಿತ್ತು ಕಲಿಗೆ **ವಿ**ಪರೀತಾ ಪುರಾಕೃತ ।
ಮಿಲ್ಲಿ ಸಂದಿಕ್ಕುಮದು ಬಂದು ॥

ಕಟ್ಟಿದ ಸಿಂಘಮನ್ ಕೆಟ್ಟೋದೇನೆಮಗೆಂದು ।
ಬಿಟ್ಟವೋಲ್ ಕಲಿಗೆ ವಿಪರೀತಂಗಹಿತರ್ಕ್ಕಳ್ ।
ಕೆಟ್ಟರ್ ಮೇಣ್ ಸತ್ತರವಿಚಾರಂ ॥

# ೪. ಕನ್ನಡ ನಾಡು

**ಕಂ||** ಕಾವೇರಿಯಿಂದಮಾ ಗೋ ।
ದಾವರಿವರಮಿರ್ದ್ದ ನಾಡದಾ ಕನ್ನಡದೊಳ್ ॥
ಭಾವಿಸಿದ ಜನಪದಂ ವಸು ।
ಧಾವಳಯವಿಲೀನವಿಶದವಿಷಯವಿಶೇಷಂ ॥ ೧

ಅದಱೊಳಗಂ ಕಿಸುವೊೞಲಾ ।
ವಿದಿತಮಹಾಕೊಪಣನಗರದಾ ಪುರಿಗೆಱೆಯಾ ॥
ಸದಭಿಸ್ತುತಮಪ್ಪೊಂಕುಂ ।
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥ ೨

ಪದನಱಿದು ನುಡಿಯಲುಂ ನುಡಿ ।
ದುದನಱಿದಾರಯಲುಮಾರ್ಪರಾ ನಾಡವರ್ಗಳ್ ॥
ಚದುರರ್ನಿಜದಿಂ ಕುಱಿತೋ ।
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ ॥ ೩

ಕುಱಿತವರಲ್ಲದೆ ಮತ್ತಂ ।
ಪೆಱರುಂ ತಂತಮ್ಮ ನುಡಿಯೊಳೆಲ್ಲಂ ಜಾಣರ್ ॥
ಕಿಱುವಕ್ಕಳ್ಮಾಮೂಗರು ।
ಮಱಿಪಲ್ಕಱಿವರ್ವಿವೇಕಮಂ ಮಾತುಗಳಂ ॥ ೪

ಜಾಣರ್ಕಳಲ್ಲದವರುಂ ।
ಪೂಣಿಗರಱಿಯದೆಯುಮಱಿವವೋಲವಗುಣದಾ ॥
ತಾಣಮನಿನಿಸೆಡೆವೆತ್ತೊಡೆ ।
ಮಾಣದೆ ಪಿಡಿದದನೆ ಕೃತಿಗಳಂ ಕೆಡೆ ನುಡಿವರ್ ॥ ೫

**(ನೃಪತುಂಗ - ಕವಿರಾಜಮಾರ್ಗ)**

## ೫. ಕವಿ-ಕಾವ್ಯ

**ಕಂ||** ಕುಱಿವಂತು ಪೆಱರ ಬಗೆಯಂ
ತೆಱೆದಿರೆ ಪೆಱರ್ಗಱಿಪಲಾರ್ಪ್ಪವಂ ಮಾತಱಿವಂ ।
ಕಿಱಿದಱೊಳೆ ಪಿರಿದುಮರ್ತ್ಥಮ
ನಱಿಪಲ್ಕೆಱೆವಾತನಾತನಿಂದಂ ನಿಪುಣಂ ||

ನುಡಿಯುಂ ಛಂದದೊಳೊಂದಿರೆ
ತೊಡರ್ಚ್ಚಲಱಿವಾತನಾತನಿಂದಂ ಜಾಣಂ ।
ತಡೆಯದೆ ಮಹಾಧ್ವಕೃತಿಗಳ
ನೊಡರಿಸಲಾರ್ಪ್ಪಾತನೆಲ್ಲರಿಂದಂ ಬಲ್ಲಂ ||

ಮಾತಱಿವರ್ಕ್ಕೆಲಬರ್ಜಗ
ತೀತಳಗತಮನುಜರೊಳಗೆ ಮಾತಱಿವವರೊಳ್ ।
ನೀತಿವಿದರಮಳಕವಿತಾ
ನೀತಿಯುತರ್ಕ್ಕೆಲರೆ ಪರಮಕವಿವೃಷಭರ್ಕ್ಕಳ್ ||

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ ।
ಖೋಪಾತ್ತಮಿದೆಂದಱಿಪುಗು
ಮಾ ಪರಮಕವಿಪ್ರಧಾನರಾ ಕಾವ್ಯಂಗಳ್ ||

ಲೌಕಿಕಸಾಮಯಿಕೋರುವಿ
ವೇಕಮುಮಭ್ಯುದಯಪರಮನಿಃಶ್ರೇಯಸಮುಂ ।
ಪ್ರಾಕಟಮಕ್ಕುಂ ವಿದಿತಾ
ನೇಕಕವೀಶಪ್ರಯೋಗಪದಪದ್ಧತಿಯೊಳ್ ||

ಅಧಿಕೃತಸತ್ಪುರುಷಾರ್ಥ
ಪ್ರಧಾನಧರ್ಮಾರ್ಥಕಾಮಮೋಕ್ಷಂಗಳವಾ ।
ಬುಧಜನವಿವಿಕ್ತ ಕಾವ್ಯ
ಪ್ರಧಾರಿತಾರ್ಥಂಗಳಖಿಳಭುವನಹಿತಂಗಳ್ ॥

ಲೋಕದೊಳದಱಿಂ ಕಾವ್ಯ
ಶ್ರೀಕರಣೋದ್ಯುಕ್ತನಕ್ಕೆ ಕವಿ ತನ್ನಱಿವಂ ।
ತಾಕಲ್ಪಾಂತಸ್ಥಾಯಿ
ಶ್ರೀಕೀರ್ತಿವಧೂಪ್ರಧಾನವಲ್ಲಭನಕ್ಕುಂ ॥

ಕವಿಭಾವಕೃತಾನೇಕ
ಪ್ರವಿಭಾಗವಿವಿಕ್ತಸೂಕ್ತಮಾರ್ಗಂ ಕಾವ್ಯಂ ।
ಸವಿಶೇಷಶಬ್ದರಚನಂ
ವಿವಿಧಾರ್ಥವ್ಯಕ್ತಿವರ್ತಿತಾಲಂಕಾರಂ ॥

(ನೃಪತುಂಗ–ಕವಿರಾಜಮಾರ್ಗ)

## ೬. ಕರ್ಣನ ಜನ್ಮ

**ಕಂ||** ಪುಚ್ಛವಣಂ ನೋಡುವೆನೆ- ।
ನ್ನಿಚ್ಛೆಯೊಳೀ ಮುನಿಯ ವರದ ಮಹಿಮೆಯನೆನುತಂ- ।
ದುಚ್ಚಸ್ತನಿ ಗಂಗೆಗೆ ಶಫ- ।
ರೋಚ್ಚಳಿತತರತ್ತರಂಗೆಗೊರ್ವಳೆ ಬಂದಳ್ ||

ಬಂದು ಸುರನದಿಯ ನೀರೊಳ್ ।
ಮಿಂದಿನನಂ ನೋಡಿ ನಿನ್ನ ದೊರೆಯನೆ ಮಗನ ||
ಕ್ಕೆಂದಾಹ್ವಾನಂಗೆಯ್ಯಲೊ ।
ಡಂ ದಲ್ ಧರೆಗಿೞಿದನಂದು ದಶಶತಕಿರಣಂ ||

**ವ||** ಅಂತು ನಭೋಭಾಗದಿಂ ಭೂಮಿಭಾಗಕ್ಕಿೞಿದು ತನ್ನ ಮುಂದೆ ನಿಂದರವಿಂದಬಾಂಧವನಂ ನೋಡಿ ನೋಡಿ, ಕೊಡಗೂಸುತನದ ಭಯದಿಂ ನಡುಗುವ ಕನ್ನಿಕೆಯ ಮನದ ಶಂಕೆಯುಮಂ ನಡುಗುವ ಮೆಯ್ಯ ನಡುಕವ ುಮಂ ಕಿಡೆನುಡಿದಿಂತೆಂದಂ-

**ಕಂ||** ಬರಿಸಿದ ಕಾರಣಮಾವುದೋ ।
ತರುಣಿ ಮುನೀಶ್ವರನ ಮಂತ್ರಮೇದೊರೆಯೆಂದಾಂ ||
ಮರುಳಿಯೆನೆಯಱಿದುಮಱಿಯದೆ ।
ಬರಿಸಿದೆನಿನ್ನೇೞಿಮೆಂದೊಡಾಗದು ಪೋಗಲ್ ||

ಮುಂ ಬೇಡಿದ ವರಮಂ ಕುಡ- ।
ದಂಬುಜಮುಖಿ ಪುತ್ರನೆನ್ನ ದೊರೆಯಂ ನಿನಗ ।
ಕ್ಕೆಂಬುದುಮೊದವಿದ ಗರ್ಭದೊ- ।
ಳಂಬುಜಮಿತ್ರನನೆ ಪೋಲ್ವ ಮಗನೊಗೆತಂದಂ ||

ಒಡವುಟ್ಟಿದ ಮಣಿಕುಂಡಲ ।
ಮೊಡವುಟ್ಟಿದ ವಜ್ರಕವಚಮುಮುರ್ದುಂ ತನ್ನೊಳ್ ॥
ತೊಡರ್ದಿರೆಯುಂ ಬಂದಾತಂ ।
ನಡುಕಮನೊಡರಿಸಿದನಾಗಳಾ ಬಾಲಿಕೆಯಾ ॥

**ವ**॥ ಅಂತು ನಡನಡನಡುಗಿ ಜಲದೇವತೆಗಳಪ್ಪೊಡಂ ಮನಗಾಣ್ಬರೆಂದು ನಿಧಾನಮನೀಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳಿತ್ತ ಗಂಗಾದೇವಿಯುಮಾ ಕೂಸಂ ಮುಳುಗಲೀಯದೆ ತನ್ನ ತೆರೆಗಳೆಂಬ ನಳಿತೋಳ್ಗಳಿನೊಯ್ಯನೊಯ್ಯನೆ ತಳ್ಕೈಸಿ ತರೆ ಗಂಗಾತೀರದೊಳಿರ್ಪ ಸೂತನೆಂಬವಂ ಕಂಡು,

**ಉ**॥ ಬಾಳದಿನೇಶಬಿಂಬದ ನೆಟಿಲ್ ಜಲದೊಳ್ ನೆಲಸಿತ್ತೊ ಮೇಣ್ ಫಣೀಂ ।
ದ್ರಾಳಯದಿಂದಮುರ್ಚಿದ ಫಣಾಮಣಿಮಂಗಳರಶ್ಮಿಯೋ ಕರಂ ॥
ಮೇಳಿಸಿದಪ್ಪುದೆನ್ನೆರ್ದೆಯನೆಂದು ಬೊದಿಲ್ಲೆನೆ ಪಾಯ್ದು ನೀರೊಳಾ ।
ಬಾಳನನಾದಮಾದರದೆ ಕಂಡೊಸೆದಂ ನಿಧಿಗಂಡನಂತೆವೋಲ್ ॥

**ವ**॥ ಅಂತು ಕಂಡು ಮನಂಗೊಂಡೆತ್ತಿಕೊಂಡು ಮನೆಗೆ ತಂದು ರಾಧೆಯೆಂಬ ತನ್ನ ನಲ್ಲಳ ಸೋಂಕಿಲೊಳ್ ಕೂಸನಿಟ್ಟೊಡಾಕೆ ರಾಗಿಸಿ ಸುತನಸೂತಕಮಂ ಕೊಂಡಾಡೆ,

**ಕಂ**॥ ಅಗುಟ್ದಿರಲಾ ಕುಟಿಯೊಳ್ ತೊ- ॥
ಟ್ಟನೆ ನಿಧಿಗಂಡಂತೆ ವಸುಧೆಗಸದಳಮಾಯ್ತಾ- ॥
ಮುಗನಂದಮೆಂದು ಲೋಗರ್ ।
ಬಗೆದಿರೆ ವಸುಷೇಣನೆಂಬ ಪೆಸರಾಯ್ತಾಗಳ್ ॥

ಅಂತು ವಸುಷೇಣನಾಲೋ-, ।
ಕಾಂತಂಬರಮಳವಿ ಬಳೆಯೆ ಬಳದೆಸಕಮದೋ- ॥
ರಂತೆ ಜನಜನಿತಕರ್ಣೋ- ।
ಪಾಂತದೊಳೊಗೆದೆಸೆಯೆ ಕರ್ಣನೆಂಬನುವಾದಂ ॥

**ಪಂಪ – ಭಾರತ**

## ೭. ಕರ್ಣನ ಯೌವನ

**ವ||** ಆಗಿಯಾತಂ ಶಸ್ತ್ರಶಾಸ್ತ್ರವಿದ್ಯೆಯೊಳತಿಪರಿಣತನಾಗಿನವಯೌವನಾರಂಭದೊಳ್–

**ಚಂ||** ಪೊಡೆದುದು ಬಿಲ್ಲ ಜೇವೊಡೆಯೆ ಮಿಾಱುವ ವೈರಿನರೇಂದ್ರರಂ ಸಿಡಿ ।
ಲ್ದೊಡೆದವೊಲಟ್ಟಿಮುಟ್ಟಿ ಕಡಿದುಕ್ಕಿದುದಾದೆಡರಂ ನಿರಂತರಂ ||
ಕಡಿಕಡಿದಿತ್ತ ಪೊನ್ನೆ ಬುಧಮಾಗಧವಂದಿಜನಕ್ಕೆ ಕೊಟ್ಟ ಕೋ ।
ಡೆಡರದೆ ಬೇಡಿಮೋಡಿಮಿದು ಚಾಗದ ಬೀರದ ಮಾತು ಕರ್ಣನಾ ||

**ಪಂಪ – ಭಾರತ**

## ೮. ಇಂದ್ರನ ಭೇದ

**ವ**|| ಅಂತು ಭುವನಭವನಕ್ಕೆಲ್ಲಂ ನೆಗಟ್ದ ಕರ್ಣನ ಪೊಗೞ್ತೆಯಂ ನೆಗೞ್ತೆಯುಮನಿಂದ್ರಂ ಕೇಳ್ದು ಮುಂದೆ ತನ್ನಂಶದೊಳ್ ಪುಟ್ಟಿವರ್ಜುಸಂಗಮಾತಂಗಂ ದ್ವಂದ್ವಯುದ್ಧಮುಂಟೆಂಬುದಂ ತನ್ನ ದಿವ್ಯಜ್ಞಾನದಿಂದಮಱಿದುವಿಂತಲ್ಲದೀತನನಾತಂ ಗೆಲಲ್ಬಾರದೆಂದು,

**ಕಂ**|| ಬೇಡಿದೊಡೆ ಬಲದ ಬರಿಯುಮು ।
ನೀಡಾಡುಗುಮುಗಿದು ಕರ್ಣನೆಂದಾಗಳೆ ಕೈ ||
ಗೂಡಿದ ವಟುವಾಕೃತಿಯೊಳೆ ।
ಬೇಡಿದನಾ ಸಹಜಕವಚಮಂ ಕುಂಡಳಮಂ ||

ಬೇಡಿದುದನರಿದುಕೊಳ್ಳೆನೆ ।
ಬೇಡಿದುದಂ ಮುಟ್ಟಲಾಗದೆನಗೆನೆ ನೆಗಟ್ದ ||
ಲ್ಲಾಡದೆ ಕೊಳ್ಳೆಂದರಿದೀ ।
ಡಾಡಿದನಿಂದ್ರಂಗೆ ಕವಚಮಂ ರಾಧೇಯಂ ||

ಎಂದುಂ ಪೋಗೆಂದನೆ ಮಾ ।
ಣೆಂದನೆ ಪೆಱತೊಂದನೀವೆನೆಂದನೆ ನೊಂದಃ ||
ಎಂದನೆ ಸೆರಗಿಲ್ಲದೆ ಪಿಡಿ ।
ಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ ||

**ಪಂಪ – ಭಾರತ**

# ೯. ಕೃಷ್ಣನ ಭೇದ

**ವ॥** ರಥಾಂಗಧರಂ ರಥಮನೇಱಿ ಕರ್ಣನ ಮನೆಯ ಮುಂದನೆ ಬಂದು ಮೇಲೆ ಬಿೞ್ದಿರ್ಮ್ಮ ಕಿಱಿದಂತರಂ ಕಳಿಪಿ ಮಗುೞ್ವೆ ಬಾ ಪೋಪ ಮೆಂದು ತನ್ನೊಡನೆ ರಥಮನೇಱಿಸಿಕೊಂಡು ಪೋಗಿ ಮುಂದೊಂದೆಡೆ ಯೊಳ್ ನಿಂದು,

**ಉ॥** ಭೇದಿಸಲೆಂದೆ ದಲ್ ನುಡಿದರೆನ್ನದಿರೊಯ್ಯನೆ ಕೇಳ ಕರ್ಣ ನಿ– ।
ನ್ನಾದಿಯೊಳಬ್ಬೆ ಕೊಂತಿ ನಿನಗಮ್ಮನಹರ್ಪತಿ ಪಾಂಡುನಂದನರ್ ॥
ಸೋದರರೆಯ್ದೆ ಮಯ್ದುನನೆನಾಂ ಪೆಱತೇಂ ಪಡೆಮಾತೊ ನಿನ್ನದೀ ।
ಮೇದಿನಿ ಪಟ್ಟಮುಂ ನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ ॥

**ಚಂ॥**ಎನೆಯೆನೆ ಬಾಷ್ಪವಾರಿ ಪುಳಕಂ ಬೆರಸೊರ್ಮೆಯೆ ಪೊಣ್ಮೆಮುನ್ನೆ ನೀ।
ಮೆನಗಿದನೇಕೆ ಪೇೞ್ದಿರೊ ನೆಗೞ್ತೆ ಪೊಗೞ್ತೆಯನಾಂಪಿನಂ ಸುಯೋ– ॥
ಧನನೆನಗೊಳ್ಳಿಕೆಯ್ದ ಕೃತಮಂ ಪೆಱಗಿಕ್ಕಿ ನೆಗೞ್ತೆ ಮಾಸೆ ನ ।
ಣ್ಪಿಸ ನೆವದಿಂದೆ ಪಾಂಡವರನಾನೊಳಪೊಕ್ಕೊಡೆ ನೀಮೆ ಪೇಸಿರೇ ॥

**ಉ॥**ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ।
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ ॥
ಳ್ಕುತ್ತಿರೆಯೇವಮಿಲ್ಲದಿವನಾಯ್ವುದೊ ತಪ್ಪದೆ ಪೇೞಿಮೆಂಬ ಭೂ– ।
ಪೋತ್ತಮನಂ ಬಿಸುಟ್ಟೆರದೆ ನಿಮ್ಮೊಳ್ ಪೊಕ್ಕೊಡೆ ಬೇಡನಲ್ಲನೇ ? ॥

**ಪಂಪ – ಭಾರತ**

# ೧೦. ಕರ್ಣನ ನಿಶ್ಚಯ

ವ|| ಇತ್ತಲಂಗರಾಜನುಮಾತ್ಮಾಲಯಕ್ಕೆವಂದು ಚಿಂತಾಕ್ರಾಂತನಾಗಿ–

**ಚಂ**|| ಕುರುಪತಿಗಿಲ್ಲ ದೈವಬಲಮಾಜಿಗೆ ಮೇಲ್ಮಲೆಗೆಯ್ವರಾಗಳುಂ |
ಗುರುಗುರುಪುತ್ರಸಿಂಧುಸುತರಾಳ್ದನುಮೆನ್ನನೆ ನಚ್ಚಿಪೆರ್ಚಿಮುಂ– ||
ಪೊರೆದನಿದಿರ್ಚಿ ಕಾದುವರುಮೆನ್ನಯ ಸೋದರರೆಂತು ನೋಡಿಕೊ– |
ಕ್ಕರಿಸದೆ ಕೊಲ್ವೆನೆನ್ನೊಡಲನಾಂ ತವಿಪೆಂ ರಣರಂಗಭೂಮಿಯೊಳ್ ||

**ಮ**|| ಅಱಿದೆಂ ಸೋದರರೆಂದು ಪಾಂಡವರನಿನ್ನೆಂತೆನ್ನರಂ ಕೊಲ್ವೆನ– |
ೞ್ಕಱೊಳೆನ್ನಂ ಪೊರೆದೆಯ್ದೆ ನಂಬಿದ ನೃಪಂಗೆಂತಾಜಿಯೊಳ್ ತಪ್ಪುವೆಂ||
ತಱಿಸಂದುದ್ಧತವೈರಿಭೂಪಬಲದೊಡ್ಡಳ್ಳಾಡೆ ಲೆಕ್ಕಕ್ಕೆ ತ– |
ಱ್ತಿಱಿದೆನ್ನಾಳ್ದನಿನಾನೆ ಮುಂಚೆ ನಿಱಿಪೆಂ ಕೆಯ್ಕೊಂಡು ಕಟ್ಟಾಯಮಂ||

**ಪಂಪ – ಭಾರತ**

## ೧೧. ಕುಂತಿ-ಕರ್ಣ ಸಂವಾದ

**ಕಂ||** ಸಂಗತತರಂಗಯುತೆಯಿಂ ।
ಮಂಗಳಲಕ್ಷಣೆಯನಂದು ಭೋಂಕನೆ ಕಂಡಂ ||
ಗಂಗಾಂಗನೆಯಂ ಕಾಣ್ಬವೊ ।
ಲಂಗನೃಪಂ ಮುಂದೆ ನಿಂದ ಕೊಂತಿಯನಾಗಳ್ ||

**ವ||** ಅಂತು ಕಂಡು ಮನದೊಳಾದೆಱಕದಿಂ ಸಾಷ್ಟಾಂಗಮೆಱಗಿ ಪೊಡೆವಟ್ಟ ನಿಜನಂದನನನಕ್ಕಱಿಂದಪ್ಪಿಕೊಂಡು ಪರಮಾಶೀರ್ವಚನಂಗಳಿಂಪರಸಿ

ಆಗಳೆ ಮಗನಂ ಪೆತ್ತವೊ ।
ಲಾಗಿ **ಲ**ತಾಲಲಿತೆ ನೊಸಲ ಕಣ್ಬೆತ್ತವೊಲಂ ||
ತಾಗಡೆ ರಾಗಕ್ಕಾಗರ ।
ಮಾಗೆ ದಿನಾಧಿಪತನೂಜನೊಸೆದಿರ್ಪಿನೆಗಂ ||

**ವ||** ಗಂಗಾದೇವಿಯುಂ ದಿವ್ಯಮೂರ್ತಿಯಂ ಕೆಯ್ಕೊಂಡು ಬಂದು,

**ಕಂ||** ಒಪ್ಪಿಸಿದೆಂ ಕೆಯ್ಯೆಡೆಯೆಂ ।
ದಪ್ಪೈಸಿದ ನಿನ್ನಮಗನನೀಗಳೆ ನಿನಗೆಂ- ||
ದಪ್ಪೈಸಿ ಗಂಗೆ ಪೋಪುದು ।
ಮೊಪ್ಪುವ ನಿಜಬಿಂಬದೊಳಗಣಿಂದಂ ದಿನಪಂ ||

ಪೊಱಮಟ್ಟು ಬರಲ್ ತನ್ನಡಿ ।
ಗೆಱಗಿದ ನಿಜಸುತನನಕ್ಕಱಿಂ ಪರಸಿ ಮನಂ- ||
ಮಱುಗಿ ರವಿ ನುಡಿದನೆನ್ನುಮ ।
ನುಱದೆ ಮರುಳ್ಮಗನೆ ಹರಿಗೆ ಕವಚಮನಿತ್ತೈ ||

ನುಡಿಯೆನದಂ ನಿನ್ನಂಬಿಕೆ ।
ಪಡೆಮಾತೇಂ ಕೊಂತಿ ಹರಿಯ ಮತದಿಂ ಕಾಯ ॥
ಲ್ಕೊಡರಿಸಿ ಬಂದಳ್ ಸುತರಂ ।
ಕುಡದಿರ್ ಪುರಿಗಣೆಯನೆನಿತು ಲಲ್ಲೈಸಿದೊಡಂ ॥

ಎಂದರವಿಂದ ಪ್ರಿಯಸಖ- ।
ನಂದಂಬರತಳಮನಡರ್ವುದುಂ ಕೆಯ್ಮುಗಿದಿಂ ॥
ತೆಂದಂ ಕುಂತಿಯನಬ್ಬೇ ।
ವಂದಿರ್ಪುದದೆನಗೆ ಸಯ್ಪು ಬರ್ಪಂತೀಗಳ್ ॥

ಚಲಮುಂ ಚಾಗಮುಮಳವುಂ ।
ಕಲಿತನಮುಂ ಕುಲಮುಮಿಾಗಳೆನ್ನಯ ಮೆಯ್ಯೊಳ್ ॥
ನೆಲಸಿದುವು ನಿಮ್ಮ ಕರುಣಾ- ।
ಬಲದಿಂ ನೀವೆನ್ನನಿಂದು ಮಗನೆಂದುದಱಿಂ ॥

ಪಡೆದರ್ ತಾಯುಂ ತಂದೆಯು ।
ಮೊಡಲಂ ಪ್ರಾಣಮುಮನವರವವು ಕೆಯ್ಯೆಡೆಯುಂ ॥
ಕುಡುವುದರಿದಾಯ್ತೆ ನೀಮೆನ ।
ಗೆಡೆಮಡಗದೆ ಬೆಸಪ ತೊಟ್ಟುವೆಸನಂ ಬೆಸಸಿಂ ॥

ಎಂಬುದುಮಂಬಿಕೆ ಮಗನೆ ಮ ।
ನಂ ಬೆಳಱದೆ ನೀನುಮಿತ್ತೆಯಾನುಂ ಪೆತ್ತೆಂ ॥
ನಂಬಿದ ನಿನ್ನನುಜರ್ ನಿ ।
ನ್ನಂ ಬೆಸಕೆಯೆ ನೀನೆ ನೆಲನನಾಳ್ವುದು ಕಂದಾ ॥

ನಿನಗಪ್ಪರಸಂ ದುರ್ಯೋ ।
ಧನನೊಲವಂ ಮುಂದುಗೆಯ್ದು ಬೆಸಕೆಯ್ವರೆ ನಿ ॥
ನ್ನನುಜರೆರೞ್ದಿಸೆಗಂ ಕಿಸು ।
ಱನಿಸಾಗದು ಮಗನೆ ನೀನೊಡಂಬಡವೇೞ್ಕುಂ ॥

ವ॥ ಎಂಬುದುಮದೆಲ್ಲಮಂ ಕೇಳ್ದು ಕರ್ಣಂ ಮುಗುಳ್ನಗೆ ನಕ್ಕು,

ಮ॥ಭಯಮುಂಲೋಭಮುಮೆಂಬ ತಮ್ಮತೆರಡುಂ ಪಾಪಕ್ಕೆ ಪಕ್ಕಾಗೆ ಪಾ
ಱಿಯನೊಕ್ಕಾಳ್ದನ ಗೆಯ್ದ ಸತ್ಕೃತಮುಮಂ ಪಿಂತಿಕ್ಕಿ ಜೋಳಕ್ಕೆ ತ-॥
ಪ್ಪಿಯುಮಿಂ ಬಾೞ್ವುದೆ ಪೊಣ್ದು ನಿಲ್ಲದಿಕೆಯಿಂ ಬಾೞ್ವಂತು ವಿಖ್ಯಾತ ಕೀ।
ರ್ತಿಯುಮೋಲೀಯೊಡಲಬ್ಬೆ ಪೇೞಿಮೆನಗೇಂ ಕಲ್ಪಾಂತರ ಸ್ಥಾಯಿಯೋ॥

ಮಿಾಂಗುಲಿಗನೆನಾಗಿಯುಮಣ- ।
ಮಾಂ ಗುಣಮನೆ ಬಿಸುಟೆನಿಲ್ಲ ನಿಮಗಂ ಮಗನಾ- ॥
ದಂಗೆನಗೆ ಬಿಸುಡುಲಕ್ಕುಮೆ ।
ನೀಂಗಳ ಪಂಬಲನೆ ಬಿಸುಡಿಮಿನ್ನೆನ್ನೆಡೆಯೊಳ್ ॥

ವ॥ ಎಂಬುದುಂ ಕೊಂತಿ ಭೋಂಕನೆರ್ದೆದೆಱಿದು-

ಮ॥ಅಱಿದೆಂ ನೆಟ್ಟನೆ ಬೆಟ್ಟನಿಂತು ನುಡಿವಯ್ ನೀಂ ಕಂದ ಪೋಗಿಂದೆ ಕೆ।
ಟ್ಟೞಿದತ್ತಾಗದೆ ಸೋಮವಂಶಮೆನಗಿಂ ಬಾೞ್ವಾಸೆಯೆಲ್ಲಿತ್ತೊ ಬಿ-॥
ಟ್ಟುೞಿದೆಂ ಮತ್ತಿನ ಮಕ್ಕಳಾಸೆಯುಮನಾನೆಂದಳ್ಗಿ ಶೋಕಾಗ್ನಿ ಪೊಂ
ಪುೞಿವೋಗುತ್ತಿರೆ ಕರ್ಣನೆಂದನಿನಿತೇಂ ಪೇೞಬ್ಬೆ ಚಿಂತಾಂತರಂ ॥

ಪಿಡಿಯೆಂ ಪುರಿಗಣೆಯಂ ನರ- ।
ನೆಡೆಗೊಂಡೊಡಮುೞಿದ ನಿನ್ನ ಮಕ್ಕಳನಿನ್ನೇ ॥
ರ್ದೊಡಮೞಿಯೆಂ ಪೆರ್ಜಸಮನೆ ।
ಪಿಡಿದೆನ್ನನೆ ರಣದೊಳಱಿವೆನಿರದಡಿಯೆತ್ತಿಂ ॥

**ಪಂಪ – ಭಾರತ**

## ೧೨. ಕರ್ಣನ ಯುದ್ಧ

**ಚಂ**|| ಮಗನೞಲೊಂದು ಭೂಪತಿಯ ತಮ್ಮನೊಳಾದೞಲೊಂದು ನೊಂದು ಬಿ |
ನ್ನಗೆ ಮೊಗದಿಂ ಪೆ ಕುಂದಿ ಫಣಿಕೇತನನಿರ್ದೞಲೊಂದು ತನ್ನನಾ– ||
ವಗೆಯುರಿಯುೞ್ವವೋಲಳುರೆ ತನ್ನ ನೆಗೞ್ತೆಗೆ ಮುಯ್ವನಾಂತು ಮುಂ |
ಪೊಗೞಿಸಿ ಬೞ್ದುದಂ ನೆನೆದು ಕರ್ಣನಸುಂಗೊಳೆ ಬಂದು ತಾಗಿದಂ ||

**ವ**|| ಅಂತಿರ್ವರುಮೊರ್ವರೊರ್ವರಂ ಮುಟ್ಟೆವಂದಲ್ಲಿ ವಿಕ್ರಾಂತತುಂಗ
ನಂಗಾಧಿರಾಜನನಿಂತೆಂದಂ–

**ಕಂ**|| ಪೆಸರೆಸೆಯೆ ಬೀರಮಂ ಪಾ– |
ಡಿಸಿಯುಂ ಪೊಗೞಿಸಿಯುಮುರ್ಕಿ ಬಿೞ್ದಾಹವದೊಳ್ ||
ಕುಸಿದು ಪೆಱಸಿಂಗಿ ಪೇೞ್ ಮಾ |
ನಸರೇನಿನ್ನೊಱು ವರ್ಷಮಂ ಬೞ್ದಿಪರೇ ||

ಮತ್ತನಯನರಸನನುಜನ |
ಸತ್ತೞಲಂ ನಿನ್ನೊಳಱಸಲೆಂದಿರ್ದೆಂ ಬೆ ||
ಳ್ಪತ್ತಿರ್ದೆನಪ್ಪೊಡೇತೊದ– |
ಳಿತ್ತಣ ದಿನನಾಥನಿತ್ತ ಮೂಡುಗುಮಲ್ತೇ ||

ಕಸವರದ ಸವಿಯುಮಂ ಭಯ– |
ರಸಕದ ಸವಿಯುಮನದೆಂತುಮಾನಱಿಯದುದಂ ||
ವಸುಮತಿಯಱಿವುದು ನೀಂ ಪುರು– |
ಡಿಸಿ ನುಡಿದೊಡೆ ನಿನ್ನ ನುಡಿದ ಮಾತೇಱುಗುಮೇ ||

ಒಡಲುಂ ಪ್ರಾಣಮುಮೆಂಬಿವು |
ಕಿಡಲಾದುವು ಜಸಮದೊಂದೆ ಕಿಡದದನಾಂ ಬ |

ಲ್ವಿಡಿವಿಡಿದು ನೆಗಟ್ದಿನುಟಿದಟಿ ।
ವಡೆವಾತಂ ಮಾಡಿ ನೀನೆ ಕೆಮ್ಮನೆ ನುಡಿವೈ ।

**ಚಂ**॥ ಬಿದಿನಸವಿಂವೆ ಪುಟ್ಟುವುದು ಪುಟ್ಟಿಸುವಂ ಬಿದಿ ಪುಟ್ಟಿದಂದಿವಂ ।
ಗಿಮು ಬಿಯವೊಳ್ವಿವಂಗಿದು ವಿನೋದಮಿವಂಗಿದು ಸಾವ ಪಾಂಗಿವಂ ॥
ಗಿದು ಪಡೆವಾತಿರಂಗಿದು ಪರಾಕ್ರಮಮೆಂಬುದನೆಲ್ಲ ಮಾಟ್ಕೆಯಿಂ ।
ಬಿದಿ ಸಮಕಟ್ಟೆ ಕೊಟ್ಟೊಡೆಡೆಯೊಳ್ ಕಿಡಿಸಲ್ ಕುಡಿಸಲ್
ಸಮರ್ಥರಾರ್ ॥

**ಕಂ**॥ ಎಂದೀ ಬಾಯ್ವಾತಿನೊಳೀ ।
ವಂದಪುದಮ್ಮಣ್ಮಿ ಕಾದುಕೊಳ್ಳೆನುತುಂ ಭೋ ॥
ರೆಂದಿಸೆ ಪೊಸಮುಸೆಯುಂಬಿನ ।
ತಂದಲ ಬೆಳ್ಸರಿಗಳಿರದೆ ಕವಿದುವು ನರನಂ ॥

**ವ**। ಆಗಳ್ ಮದ್ರರಾಜನಂಗಾಧಿರಾಜನನಿಂತೆಂದನೀಯಂಬುಗಳೊಳೀಂ ತೀರ್ವಪುವು. ದಿವ್ಯಾಸ್ತ್ರಂಗಳಿಂದೆಚ್ಚು ಪಗೆಯುಂ ಸಾಧ್ಯಂಮಾಡೆಂಬುದುಂ ಕೊಂತಿಗೆ ತನ್ನ ನುಡಿದ ನುಡಿವಳಿಯಂ ನೆನೆದು ಪುರಿಗಣೆಯ ದೊಣೆಗೆ ಕೆಯ್ಯಂ ನೀಡದೆ ರೌದ್ರಶರದ ದೊಣೆಗೆ ಕೆಯ್ಯಂ ನೀಡಿದಾಗಳ್

**ಕಂ**॥ ಮುಳಿಸಂ ನೆಱಪಲ್ಕಧರ್ಾ ।
ವಳೀಶರರೂಪದಿಂದಮುಂಗೊಳೆ ದೊಣೆಯಿಂ ॥
ಪೊಳೆದು ಬರೆ ಕೆಯ್ಗೆ ತಾಂ ವಿ ।
ಸ್ಫುಳಿಂಗಪಿಂಗಳಿತಭುವನಭವನಾಭೋಗಂ ॥

ತುಡೆ ಕರ್ಣನದಂ ನಡನಡ ।
ನಡುಗಿ ಸುಯೋಧನನ ಸಕಲರಾಜ್ಯಶ್ರೀಯುಂ ॥
ಸಡಿಲಿಸಿದ ತೋಳನಾಗಳ್ ।
ಸಡಿಲಿಸಲಣ್ಮಳೆ ದಲದಱಗುರ್ವೇಂ ಪಿರಿದೋ ॥

ಆಕರ್ಣಾಂತಂ ತೆಗೆ ನೆಱೆ ।
ದಾ ಕರ್ಣನಿಸಲ್ಕೆ ಬಗೆದೊಡುಡುಗುಡುಗಿಸಲೀ ॥
ಭೀಕರ ಬಾಣಮನಾದ ವಿ ।
ವೇಕದಿಸುರದೆಡೆಗೆ ತುಡದೆ ತಲೆಗೆಯೆ ತುಡುವಾ ॥

ಉರದೆಡೆಗೆ ತುಡೆ ಜಯಶ್ರೀ ।
ಗಿರಲೆಡೆ ನಿನಗಪ್ಪುದಾ ಸುಯೋಧನನೊಳ್ ಶ್ರೀ ॥
ಗಿರಲೆಡೆಯಪ್ಪುದು ಮೇಣ್ ದಿನ ।
ಕರ ಸುತ ತೊದಳುಂಟೆ ಬಗೆಯೆ ಸಂದೆಯಮುಂಟೇ ॥

ವ॥ ಎಂಬುದುಂ ಶಲ್ಯನ ನುಡಿದ ನುಡಿಯನವಧಾರಿಸಿ ತನ್ನ ಮನದೊಳೆ ಕರ್ಣನಿಂತೆಂದಂ—

ಮ॥ ಎನಿತುಂ ಶಲ್ಯನ ಪೇೞ್ದ ಪಾಂಗೆ ತೊದಳಿಲ್ಲಿಂತಾದೊಡಾ ಶಕ್ರ ಪು।
ತ್ರನನಾಂ ಕೊಂದೊಡೆ ಧರ್ಮಪುತ್ರನೞಿಗುಂ ತಾಯೆಂದೆ ಮುಂ ಕೊಂತಿ ಬಂ ॥
ದಿನಿಸಂ ಪ್ರಾರ್ಥಿಸಿ ಪೋದಳೆನ್ನನದನಾಂ ಮಾಣ್ದೆರ್ದೆನಿರ್ದಾಗಳೊ ।
ಳ್ಪಿನ ಪೆರ್ಮಾತಿನ ನನ್ನಿ ಬನ್ನದೊಳೊಡಂಬಟ್ಟಿರ್ಪುದಂ ಮಾೞ್ಪೆನೇ ॥

ಚಂ॥ ತನಗುೞಿವಂತುಟಾಗೆ ಕಡು ನನ್ನಿಯ ಪೆಂಪುಮನಾಂತು ಭೂಭುಜರ್।
ತನಗಿನಿತೂನಮಾಗೆ ಮೆೞೆದಾ ಭುಜವೀರ್ಯಮನಾಂತು ಮಾಣ್ಬುದೇಂ ॥
ತನಗುೞಿವೊಂದು ನನ್ನಿಯನೆ ಪೂಣ್ದು ಕರಂ ಪಿರಿದುಂ ಬಲಸ್ಥನ ।
ಪ್ಪನನೆ ಕೞುತ್ತು ಕಾದಿ ನೆಗೞ್ದಾತನೆ ನನ್ನಿಯ ಬೀರದಾಗರಂ ॥

ಮ|| ಅಱಿಯರ್ ಪಾಂಡವರೆನ್ನ ನಿನ್ನ ಮಱಿಪಲ್ ನೀಮೆಂದದಂ ಚಕ್ರಿಗಾ|
ನಱಿಪಿರ್ದಂ ಪೃಥೆಯುಂ ಮದೀಯ ಸುತರೊಳ್ ವೈಕರ್ತನಂ ನನ್ನಿಯಂ||
ನಿಱಿಸಲ್ಕಾರ್ಕುಮಮೋಘಮೆಂದು ಮನದೊಳ್ ನಂಬಿರ್ದಳಿನ್ನಿಲ್ಲಿ ಪೆಂ–|
ಪೆಱಕಂ ಬೆತ್ತಿರೆ ಕಾವೆನೆನ್ನ ನುಡಿಯಂ ಕೆಯ್ಕೊಂಡ ಕಟ್ಟಾಯಮಂ ||

ಅರಿಗನ ಬಟ್ಟಿನಂಬುಗಳ ಬಲ್ಸರಿ ಸೋಂಕುಗುಮೇೞಿಮೆನ್ನ ತೋ– |
ಳ್ಸಿರಮೆನಗೆನ್ನ ಬಿಲ್ಲೆ ನೆರಮೆಂದು ವರೂಥ ತುರಂಗಮಂಗಳಂ ||
ತುರಿಪದೆ ತಾನೆ ಚೋದಿಸುತುಮಾರ್ದಿಸುತುಂ ಕಡಿಕೆಯ್ದು ಕಾದೆ ಭೀ |
ಕರರಥಚಕ್ರಮಂ ಪಿಡಿದು ನುಂಗಿದಳೊರ್ಮೆಯೆ ಧಾತ್ರಿ ಕೋಪದಿಂ ||

ವ|| ಅಂತು ತನ್ನಂ ಮುನ್ನೆ ಮುಯ್ಯೇೞ್ ಸೂಳ್ಪಿರಮೊಲ್ಲಣಿಗೆಯಂ ಪಿೞಿವಂತೆ ಪಿಂಡಿ ಪಿೞಿದ ಪಗೆಗೆ ರಥಚಕ್ರಮಂ ನುಂಗುವುದುಂ ರಥದಿಂದಿೞಿದು ಗಾಲಿಯನೆತ್ತುವಾಗಳವನನೀ ಪದದೊಳ್ ಕಡಿದೊಟ್ಟದಾಗಳ್ ಗೆಲಲಾಱಿಯೆಂದು ನುಡಿದ ಮುಕುಂದನ ನುಡಿಗೆ ಕೊಕ್ಕರಿಸಿ ಜಗದೇಕ ಮಲ್ಲನಿಂತೆಂದಂ–

ಮ|| ಬಱುವಂ ಸಾರಥಿಯಿಲ್ಲ ಮೆಯ್ಗೆ ಮಱಿಯುಂ ತಾನಿಲ್ಲದೆಂತೀಗಳಾ|
ನಿಱಿವೆಂ ನೋಡಿರೆ ಮತ್ತಮೊಂದನಿಸಲುಂ ಕೆಯ್ಯೇೞದೇಕೆಂದುಮಾ– |
ನಱಿಯೆಂ ಕೂರ್ಮೆಯೆ ಮಿಕ್ಕು ಬಂದಪುದಿದರ್ಕೇಗೆಯ್ವೆನೇನೆಂಬೆನಾಂ |
ಮಱಿದೆಂ ಮುನ್ನಿನದೊಂದು ವೈರಮನಿದಿಂತೇ ಕಾರಣಂ ಭೂಧರಾ ||

ವ|| ಎಂಬುದುಮೆನಿತಱಿಯದಿರ್ದೊಡಂ ಸೋದರಿಕೆಯೆ ಮಿಕ್ಕು ಬರ್ಕು-ಮಾಗದೆಯೆಂದು ತನ್ನಂತರ್ಗತದೊಳ್ ಬಗೆದಸುರಾಂತಕನಿಂತೆಂದಂ.

**ಚಂ**|| ನೆಗೞ್ದಭಿಮನ್ಯುವಂ ಚಲದಿನೊಂದಿಱಿದಿಂದು ನಿಜಾಗ್ರಜಾತನಂ |
ಸುಗಿವಿನಮೆಚ್ಚು ಬೀರದೊಳೆ ಬೀಗುವ ಸೂತಸುತಂಗೆ ನೀನುಮಾ- ||
ಜಿಗೆ ಸೆಡೆದಿರ್ದೆಯಪ್ಪೊಡಿರು ಚಕ್ರ ನಿಘಾತದಿನಿಕ್ಕಿ ಬೀರಮು |
ರ್ವಿಗೆ ಪಡಿಚಂದಮಾಗೆ ತಱಿದೊಟ್ಟೆ ಜಯಾಂಗನೆಗಾಣ್ಮನಾದಪೆಂ ||

ವ|| ಎಂಬನ್ನೆಗಂ ಧರಾತಳಮುಳಱಿ ರಥದ ಗಾಲಿಯಂ ಕಿೞ್ತು ಮತ್ತಂ ರಥಮನಪ್ರತಿರಥನೇಱಿ ನಿಟ್ಟಾಲಿಯಾಗೆ ಮುಟ್ಟೆವಂದು ಕಿಡಿಗುಟ್ಟೆ ಮರ್ಪೋ{ತ್ಪಾ}ಟನಂಗೆಯ್ದು ಕಾದುವಾಗಳ್ ಕಪಿಧ್ವಜಂ ವನ ದಂತಿಯಂತೆ ಧ್ವಾಂಕ್ಷಧ್ವಜಮನುಡಿದು ಕೆಡೆವಿನಮೆಚ್ಚಾಗಳ್-

**ಕಂ**|| ಪಟಿಯಿಗೆ ಬಿಱಿಪ್ಪೊಡೆ ಬೀರದ |
ಪಟಿವಿಗೆಯಂ ನಿಱಿಸಲೆಂದೆ ಹರಿ ವಕ್ಷಮನ- ||
ಲ್ಲಟಿವೋಗೆಯೆಚ್ಚು ಮುಳಿಸವ |
ಗಟಿಯಿಸುತಿರೆ ನರನ ಬಿಲ್ಲ ಗೊಣೆಯುಮನೆಚ್ಚಂ ||

ಬೆಳಗುವ ಸೊಡರ್ಗಳ ಬೆಳಗ- |
ಗ್ಗಳಿಸುವವೋಲ್ ಪೋಪ ಪೊೞ್ತಱೊಳ್ ತೇಜಂ ಪ ||
ಜ್ಜಳಿಸೆ ತಟಿತಟಿಸಿ ತೊಳ ತೊಳ ||
ತೊಳಗಿದನಸ್ತಮಯ ಸಮಯದೊಳ್ ದಿನಪಸುತಂ ||

ವ|| ಅಂತು ಕರ್ಣ ನಿಶಿತವಿಕರ್ಣ ಹತಿಯಿಂದಮಸುರಾಂತಕಂ ಕಱಿಯೆನೊಂದು-

**ಕಂ**|| ಕಸೆಯಂ ಬಿಟ್ಟುಜಿದಭಿಮಂ- |
ತ್ರಿಸಿ ಚಕ್ರಮನಸುರವೈರಿಯಿಡುವಾಗಳ್ ಬಾ- ||
ರಿಸಿ ಪೆಜಿತು ಗೊಣೆಯದಿಂದೇ- |
ಱಿಸಿ ಬಿಲ್ಲಂ ತ್ರಿಭುವನಂಗಳಳ್ಕಾ ಡ{ಃ}ಪಿನಂ ||

ವ|| ಮುನ್ನಮಿಂದ್ರಕೀಲ ನಗೇಂದ್ರದ್ಠೊಳ್ ಪಶುಪತಿಯನಾರಾಧಿಸಿ ಪಾಶುಪತಾಸ್ತ್ರಂಬಡೆದಂದು ತೆಲ್ಲಟಿಯೆಂದು,

ಚಂ|| ಗಿರಿಜೆಯ ಮೆಚ್ಚಿಕೊಟ್ಟ ನಿಶಿತಾಸ್ತ್ರಮನಂಜಲಿಕಾಸ್ತ್ರಮಂ ಭಯಂ-।
ಕರತರಮಾಗೆ ಕೊಂಡು ವಿಧಿಯಿಂದಭಿಮಂತ್ರಿಸಿ ಪೂಡೆ ಬಿಲ್ಲೊಳು ||
ರ್ವರೆ ನಡುಗಿತ್ತಜಾಂಡಮೊಡೆದತ್ತು ನೆಲಂ ಪಿಡುಗಿತ್ತು ಸಪ್ತಸಾ ।
ಗರಮುಡುಗಿತ್ತು ಸಾಹಸಮದೇಂ ಪಿರಿದೋ ಕದನ ತ್ರಿಣೇತ್ರನಾ ||

ವ|| ಆಗಳಖಿಳ ಭುವನಭವನಸಂಹಾರಕಮಪ್ಪಂಜಲಿಕಾಸ್ತ್ರಮನವೋಘಾಸ್ತ್ರ ಧನಂಜಯನಾಕರ್ಣಾಂತಂಬರಂ ತೆಗೆದಾ ಕರ್ಣಾಂತಂ ಮಾಡಲ್ ಬಗೆದು ಕಂಧರ ಸಂಧಿಯಂ ನಿಟ್ಟಿಸಿ—

ಮ|| ಸ|| ಮುಳಿದೆಚ್ಚಾಗಳ್ ಮಹೋಗ್ರ ಪ್ರಳಯ ಶಿಖಿ ಶಿಖಾನೀಕಮಂ ವಿಸ್ಫುಲಿಂಗಂ ।
ಗಳುಮಂ ಬೀಱುತ್ತುಮೌರ್ವಜ್ವಳನ ರುಚಿಯುಮಂ ತಾನೆ ತೋಱುತ್ತು ಮಾಟಂ ||
ದಳುರುತ್ತುಂ ಬಂದು ಕೊಂಡಾಗಳೆ ಗಗನತಳಂ ಪಾಯ್ದು ಕೆನ್ನೆತ್ತರಿಂದು।
ಚ್ಚಳಿಸುತ್ತಿರ್ಪನ್ನೆಗಂ ಬಿಟ್ಟುದು ಭರದೆ ಸಿಡಿಲ್ದತ್ತ ಕರ್ಣೋತ್ತಮಾಂಗಂ||

ವ|| ಅಂತು ತಲೆ ನೆಲದೊಳುರುಳ್ದೊಡೆ ಲೋಕಕ್ಕೆಲ್ಲಮುಗುಂದಲೆಯಾದ ಬೀರಮೆಸೆಯೆ ಪ್ರಾಣಮೊಡಲಿಂದಂ ತೊಲಗೆಯುಂ ತೊಲಗದ ನನ್ನಿಯನುದಾಹರಿಸುವಂತೆ ಪತ್ತೆಂಟು ಕೋಲನೆಚ್ಚಟ್ಟೆಯುಂ ನೆಲದೊಳಾಚಂದ್ರಸ್ಥಾಯಿಯಾಗೆ ಚತುರ್ದಶ ಭುವನಂಗಳಂ ಪಸರಿಸಿ ನಿಂದೊಡೆಸೆದುದಾಹರಣಮೊಳ್ಪಿನುದಾಹರಣಮುಮಾಗೆ ಗುಣಾರ್ಣವನ ಶರಪರಿಣತಿಯಿಂದೆ ಕುಲಶೈಲಂ ಬೀಳ್ವಂತೆ ನೆಲನದಿರೆ ಬೀಳ್ವಾಗಳ್,

**ಕಂ**॥ ಚಾಗದ ನನ್ನಿಯ ಕಲಿತನ ।
ದಾಗರಮೆನೆ ನೆಗೞ್ದ ಕರ್ಣನೊಡಲಿಂದೆಂತುಂ ॥
ಪೋಗಲ್ಕಱಿಯದೆ ಸಿರಿ ಕರ ।
ಮಾಗಳ್ ಕರಿ ಕರ್ಣ ತಾಳ ಸಂಚಳಿಯಾದಳ್ ॥

ಕುಡುಮಿಂಚಿನ ಸಿಡಿಲುರುಳಿಯೊ ।
ಳೊಡಂಬಡಂ ಪಡೆಯೆ ಕರ್ಣನೊಡಲಿಂದಾಗಳ್ ॥
ನಡೆ ನೋೞೆ ನೋೞೆ ದಿನಪನೊ- ।
ಳೊಡಗೂಡಿದುದೊಂದು ಮೂರ್ತಿ ತೇಜೋರೂಪಂ ॥

ಪಿಡಿದನೆ ಪುರಿಗಣೆಯನೆರ ।
ೞ್ನುಡಿವನೆ ಬಳ್ಕಿದನೆ ತಾನೆ ತನ್ನನೆ ಚಲಮುಂ ॥
ಪಿಡಿದಱಿದನೆಂದು ದೇವರ ।
ಪಡೆ ಗಡಣದೆ ಪೊಗೞ್ದುದಿನತನೂಜನ ಗಂಡಂ ॥

**ಚಂ**॥ ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ ।
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ ।
ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ ।
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ ॥

**ಪಂಪ–ಭಾರತ**
(೯೪೧)

# ೧೩. ಬಾಹುಬಲಿಯ ವಿರಾಗ

**ಕಂ||** ಪಾತಕಿಯೊಳ್ ಲಕ್ಷ್ಮಿಯೊಳತಿ
ಕಾತರಕಾಪುರುಷಗಣನೆಯೊಳ್ ನೆರೆಯಲ್ಕಿಂ |
ತೀತನೆ ಬಗೆಗಾಂ ಪುರುತನು
ಜಾತರ ಬಗೆದುದನೆ ಬಗೆವೆನಳಿಪಂ ಬಗೆಯೆಂ ||

ವಿಷಧಿಗಳೊಳಗೊಯ್ದುದ್ದುರ್ವ
ವಿಷಮರಣಾಂಗಣಮನಿರದೆ ಪುಗಿಸುವ ನಾನಾ |
ವಿಷಯಂಗಳಂ ತೊಡರ್ಚ್ಚುವ
ವಿಷಯಸುಖಂಗಳೊಳೆ ತೊಡರ್ದ್ದು ಬಿರ್ದ್ದಪುದು ಜಗಂ ||

ಇನಿಯವು ಮೊದಲೊಳ್ ನಂಜಿನ
ಪನಿವೊಲ್ ಬೞಿಕೆಯ್ದೆ ಮುಳಿದು ಕೊಂದಿಕ್ಕುವುವಿಂ |
ತೆನೆಯೆನೆ ವಿಷಯ ವಿಷಾಸ್ವಾ
ದನದೊಳ್ ಲಂಪಟರಿದೇಕೆಯೋ ನರಪಶುಗಳ್ ||

ಕಿವಿ ಮೆಯ್ ಕಣ್ ನಾಲಗೆ ಮೂ
ಗಿವು ಶಬ್ದಸ್ಪರ್ಶರೂಪರಸಗಂಧಸಮು |
ದ್ಭವಸುಖದೊಳ್ ತೊಡರ್ವ್ವುದೆ ಸುಖ
ಮವಿಲ್ಲದಂದಿಲ್ಲದರ್ಕ್ಕತೀಂದ್ರಿಯಮೆ ಸುಖಂ ||

ಕಿಡುವೊಡಲ ಕಿಡುವ ರಾಜ್ಯದ
ಪಡೆಮಾತುಗೊಳಲ್ಕಮೆನ್ನ ಮೆಯ್ಯಗಿದಪುದೀ |
ಗಡೆ ಜೈನದೀಕ್ಷೆಯಂ ಕೊಂ
ಡಡಿಗೆಱಗಿಸುವೆಂ ಸಮಸ್ತಸುರಸಮುದಯಮುಂ ||

ಎಂದಿಂತು ಬಗೆದು ಭರತನ
ನೆಂದಂ ಚಕ್ರೇಶ ಸಿಗ್ಗನುಱೆ ಮುಳಿಸಂ ಸೀ ।
ನೆಂದಿಂಗಂ ಬಿಸುಡೀತ
ಮ್ಮಂದಿರೊಳಿಂತಿಂತು ಕಟ್ಟುವಪ್ಪುದು ಪೆಂಪೇ ॥

ನಿನ್ನೀಬೆಸಸಿದ ಚಕ್ರಮು
ದೆನ್ನೀದೇಹಾದ್ರಿಯಂ ಗೆಲಲ್ ನೆಱೆಯದು ನೀಂ ।
ಬಿನ್ನನಿದೇಕಿರ್ಪ್ಪೆಯದೆಂ
ತೆನ್ನ ಗೆಲಲ್ ವಜ್ರಗಿರಿಯನಾರ್ಕ್ಕುಮೆ ವಜ್ರಂ ॥

**ಚಂ**॥ ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀ ಭಟ ಖಡ್ಗ ಮಂಡಲೋ
ತ್ಪಲವನವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ ।
ವಲಮಯನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗಟ್ತೆ ಮಾಸದೇ ॥

ಅವಧರಿಸದೆ ನಿನ್ನೊಳ್ ಪಿರಿ
ದವಿನಯಮಂ ನೆಗಟ್ಟಿ ದೋಷಮಂ ತಪದೊಳ್ ನೀ ।
ಗುವೆನಣ್ಣ ಕಲುಷಮಂ ಬಿಸು
ಡುವುದೊರ್ಮ್ಮೆಗೆ ಮಱೆವುದೆನ್ನ ದುರ್ವ್ವಿಳಸನಮಂ ॥

**ಪಂಪ–ಆದಿಪುರಾಣ**
(೯೪೦)

# ೧೪. ವತ್ಸಕಾವತೀ ವರ್ಣನ

ವ|| ನೆಗೞ್ದ ಪೂರ್ವ್ವವಿದೇಹದೊಳ್ಕಾಮರಾಜಕಮನೀಯ ಮನೋರಥಜನ್ಮ ಭೂಮಿಯಪ್ಪ ವತ್ಸಕಾವತೀವಿಷಯದಾವಾವೆಡೆಯೊಳಂ ನಿಮ್ನಪ್ರದೇಶಂದಪ್ಪದೆ ಪಥಿಕ ಜನದ ಮನಕ್ಕಂ ಪಸರಂಬಡೆದು ನೆಱೆ ಸೊಗಯಿಸುವ ಸರಸ ಸರಸೀರುಹಾಕರಂಗಳೊಳ್ ||

ಚಂ|| ವಿದಳಿತ ಹೇಮತಾಮರಸಸಾಂದ್ರಲಸನ್ಮಕರಂದಸಕ್ತಷ
ಟ್ಪದತತಿ ಪಾಯ್ದುಪಾಯ್ದು ಸರಸೀರುಹದಿಂ ಸರಸೀರುಹಕ್ಕೆ ಪೋ |
ಲ್ತುದು ಮಧುವುಂ ಮನೋಭವನುಮುೞ್ತಿಯೊಳಾಡುವ ಪೊನ್ನಬಟ್ಟನೊ
ರ್ವೋದಲೆ ಮನೋಜಕಾಂತೆ ಮುಳಿಸಿಂ ದೆಸೆಗೋವದೆ ಸೂಸುವಂದಮುಂ ||

ವ|| ಮತ್ತಮಾನಾಡೂರೂರ್ದಪ್ಪದೆ ವಿಚಿತ್ರಕ್ಷೇತ್ರಂಗಳೊಳ್ಪವಿತ್ರಪುಣ್ಯಬೀಜಪ್ರರೋಹದ ಬೆಳಸಿನ ಸಿರಿಯ ಕಣ್ಬೊಲಂಗಳೆನಿಸುವ ಕೆಯ್ಬೊಲಂಗಳೊಳ್ ||

ಕಂ|| ಅಮಿತಗುಣವರ್ಣನಪ್ರ
ಕ್ರಮಕ್ಕೆ ಸಲೆ ನಾಣ್ಚಿ ತಲೆಯನೆಱಗಿದ ಸುಜನೋ |
ತ್ತಮರಂತೆ ಭರದಿನೆಱಗಿದು
ವಮೇಯುಪರಿಪಕ್ವ ಗಂಧಶಾಲಿವನಂಗಳ್ ||

ತತ್ಕಳಮಕಣಿಶಕಬಳಸ
ಮುತ್ಕಶುಕಪ್ರಕರಮೊಸೆಯೆ ಪೊಸನೇತ್ರದ ಚಂ |
ಚತ್ಕಂಚುಕಮನಿಳಾವಿಳ
ಸತ್ತಾಮಿನಿ ತೊೞ ಪೋೞೆಯಂ ಪೞಿಸುಗುಂ ||

ವ|| ಮತ್ತಂ ತದುಪಾಂತದೊಳ್ ||

ಕಂ|| ಬಹುಪೋಷಮನಿಮ್ಮಾವಿನ
ಸಹಕಾರದ ಸೊನೆಯ ಸೋನೆ ಬಳೆಯಿಸೆ ಬೆಳೆಗುಂ |
ಮಹಿಯೆನೆ ಬಣ್ಣಿಸುವ ಪಿತಾ
ಮಹಂಗಮರಿದೆಗ್ಗವೊಗ್ಗೆ ನಿನಗಮುದೆನಗಂ ||

ವ|| ಅದಲ್ಲದೆಯುಂ |

ಕಂ|| ನವಶಶಿಕಳೆಗಳನಮೃತ
ದ್ರವಂಗಳೊಳ್ತೀವಿತೀವಿ ನಿಱಿಸಿದರೆನೆ ತ |
ದ್ಧವಳೇಕ್ಷುಲಕ್ಷ್ಮಿ ನಡೆನೋ
ಡುವ ಜನಪದಜನದ ಮನಮನುಱೆ ಸೆಱೆವಿಡಿಗುಂ ||

ವ|| ದುಗ್ಧಾಬ್ಧಿಫೇನಪಿಂಡೋಪಮಾನಮುಂ ಸುಧಾಸಮುದ್ರಲಲಿತಲಹರಿ
ಕಾಸಮಾನಮುಮಪ್ಪ ಬಿಳಿಯ ಕಬ್ಬಿನ ಕೆಯ್ಗಳೊಳೆರಡುಂ
ದೆಸೆಗಳೊಳಂ ಮನೋಜರಾಜರಾಜದ್ರಾಜಧಾನೀನಿಕಾಶಮಪ್ಪು
ದ್ಯಾನಂಗಳೊಳ್ ||

ಉ|| ಮೆಯ್ವಸವೊಂದೆ ಪೂವಿನೊಳ್ ಪೋಗೆ ಕೆಲಂದಿರಿದಳ್ಳೆಗೊಂಬಿನೊ
ಳ್ಪಾಯ್ವುದುವೊಂದೆ ಪಣ್ಣರಸಮಂ ಸವಿಗಾಣದೆ ಚಂಚುವಂ ನೆಲ|
ಕ್ಕುಯ್ವುದುವೊಂದೆ ಕೋರಕವಿಪಾಟನಕಳ್ಕಮೆವೆತ್ತವಚತ್ತು ಲಂಘನಂ
ಗೆಯ್ವುದುಮಾದುದಾ ಮಧುಪ ಕೀರ ಪಿಕಾಳಿಗೆ ನಂದನಂಗಳೊಳ್||

ಚಂ|| ನಯಮಳವಟ್ಟ ಪಚ್ಚೆ ಸಹಕಾರದೊಳಿಂಗುಳಿಕಂ ತಳಿರ್ತ್ತಶೋ
ಕೆಯೊಳರಿದಾಳಮುಳ್ಳಲರ್ದ ಸಂಪಗೆಯೊಳ್ಕಡುಗಪ್ಪು ಭೃಂಗಕೋ
ಟಿಯೊಳೆಸೆದಿರ್ದ್ದ ನೀಲಿ ಗಿರಿಮಲ್ಲಿಕೆಯೊಳ್ಸಮನಾಗೆ ಚೀರಘ
ಟ್ಟಿಯೆ ಬರೆದಿಟ್ಟ ಚಿತ್ರದ ಬನಕ್ಕೆಣೆಯಾಯ್ತು ಬನಂ
ವಿದೇಹದೊಳ್ ||

ಪೊನ್ನ – ಶಾಂತಿಪುರಾಣ
(೯೫೦)

## ೧೫. ದಿವ್ಯ-ತಪಸ್ವಿನಿ.

ಕಡೆದರೊ ಶಂಖದಿಂ ತೆಗೆದರೊ ನವಮೌಕ್ತಿಕದಿಂ ಮೃಣಾಳದಿಂ
ಪಡೆದರೊ ದಂತದಿಂದೆಸೆಯೆ ಮಾಡಿದರೋ ರುಚಿರೋಜ್ಜ್ವಲಾಂಗವಂ
ಬಿಡದಮೃತಾಂಶುರಶ್ಮಿಗಳ ಕುಂಚಿಗೆಯಿಂದವೆ ಕರ್ಚಿ ಪಾರದಂ
ದೊಡೆದರೊ ಪೇೞೆನಲ್ ಕರಮೆ ಕಣ್ಗೆಸೆದಿರ್ದುದು ರೂಪು ಕಾಂತೆಯಾ

ಪೊಳೆವೆಳನೇಸಱಿಂ ತೆಗೆದ ರಶ್ಮಿಗಳಂತೆ ಮಡಲ್ತು ಕಾಂತಿಯಂ
ತಳೆದೆಳಮಿಂಚಿನೊಳ್ದಳಿರ್ಗಳಂತೆ ಕವಲ್ತು ಮೃಗಾಂಕಮೌಳಿ ನಿ
ರ್ಮಳಪದ ಭಸ್ಮರೇಣುಗಳೆನಲ್ ನವಮಜ್ಜನವಾಃಕಣಂಗಳಂ
ತಳೆದು ಪೆಗಲ್ವರಂ ಬಳೆದು ರಂಜಿಸುಗುಂ ಜಡೆಗಳ್ ಮೃಗಾಕ್ಷಿಯಾ

ಶಿವನಾಮಾಂಕಿತಮಂ ರ
ತ್ನ ವಿರಚಿತಮನುತ್ತಮಾಂಗದೊಳ್ ಪಾದೂಯು
ಗ್ಮವನೆಸೆಯೆ ತಳೆದು ಭಕ್ತಿಯೆ
ಭವಸನ್ನಿಧಿಯಲ್ಲಿ ರೂಪುಗೊಂಡಂತಿರ್ದಳ್

ವನರುಹನಾಭನಾಭಿ ಸಿತಪಂಕಜಬೀಜಮೊ ಪದ್ಮಗರ್ಭನಾ
ನನದೆ ಪೊದಳ್ದ ವೇದವಿಮಳಾಕ್ಷರಮಾಲೆಯೊ ಕಯ್ಯ ಸೋಂಕು ಪಾ
ವನತರಮೆಂದು ಸಪ್ತಮುನಿಮಂಡಲಮಿರ್ಪುದೊ ಬಂದು ಪೇೞೆನಲ್
ವನಿತೆಯ ಮೌಕ್ತಿಕಾಕ್ಷವಲಯಂ ಕೊರಲೊಳ್ ಕರಮೊಪ್ಪಿ ತೋಱುಗುಂ

ಎಳವೆಱೆಯೊಳ್ಗದಿರ್ಗಳ್ ಬಂ
ದೆಳಸಿದುವೀಶ್ವರನ ಸನ್ನಿಧಾನದೊಳೆಸೆವೀ
ಲಲಿತಾಂಗೆಯನೆಂಬಿನೆಗಂ
ಪೊಳೆಯುತ್ತಿಂ ಬ್ರಹ್ಮಸೂತ್ರಮೇನೊಪ್ಪಿದುದೋ

ದಿವಿಜತೆಯಿಂ ದಿವಸಂಗಳ
ಪವಣಱಿಯಲ್ಬಾರದಾದೊಡಂ ಸೊಗಯಿಸಿ ತೋ
ರ್ಪವಯವದಿಂದಂ ಪದಿನೆಂ
ಟು ವರಿಸದಾಕೃತಿಯಿನಬ್ಜಮುಖಿ ಕಣ್ಗೆಸೆದಳ್

ಒದವಿದ ಭಕ್ತಿಯಿನೀಶನ
ಹೃದಯದೊಳಿರ್ದಪಳೆನಲ್ಕೆ ನವಮೌಕ್ತಿಕ ಲಿಂ
ಗದ ನಡುವೆ ರೂಪು ಮಾರ್ತೊಳ
ಗಿದುದೆತ್ತಂ ವಿಮಲಕಮಲದಳಲೋಚನೆಯಾ

ರಸಮೊಸರ್ವಂತು ಪಾಡುತಿರೆ ಶುದ್ಧಮನೋಮಣಿದೀಪ್ತಿ ಪೊಣ್ಮಿ ರಾ
ಜಿಸಿದಪುದೋ ಸ್ತುತಿಪ್ರಕರನಿರ್ಮಳವರ್ಣಸಮೂಹಮೊತ್ತುಗೊಂ
ಡೆಸೆವುದೊ ಪೇಱೆನಲ್ ಪೊಳೆವ ದಂತಮರೀಚಿಗಳಿಂದಮೀಶ್ವರಂ
ಗೊಸೆದಭಿಷೇಕಮಂ ಮಗುೞ್ಮಾಡ್ಪುವವೊಲ್ ಬಗೆಗೊಪ್ಪಿ ತೋಱಿದಳ್

ಅಂತು ವಿರೂಪಾಕ್ಷದೇವರನಾರಾಧಿಸುತ್ತುಮಿರ್ದ

ಅತಿಗಂಭೀರೆಯನೂರ್ಜಿತ
ಮತಿಯಂ ನಿರ್ಮಳೆಯನಮಳಧೈರ್ಯಾದಿ ಗುಣಾ
ನ್ವಿತೆಯಂ ದೃಢಪಾಶುಪತ
ವ್ರತೆಯಂ ಕನ್ಯಕೆಯನಂದು ಕಂಡಂ ಕ್ಷಿತಿಪಂ

ಅಂತು ಕಂಡವನಿತಳಕ್ಕವತರಿಸಿ ತುರಂಗಮನೊಂದು ತರುಶಾಖೆಯೊಳ್ ಕಟ್ಟಿ ಭಗವದಿಂದುಮೌಳಿಯ ಪುರೋಭಾಗದೊಳ್ ನಿಂದು ಪೊಡವಟ್ಟು ದಿವ್ಯ ಕಾಂತೆಯ ರೂಪಸಂಪತ್ತಿಗಂ ಕಾಂತಿಗಮುಪಶಾಂತಿಗಂ ವಿಸ್ಮಯಂಬಟ್ಟು ನೋಡುತ್ತುಮಿರ್ದು

ಕಿನ್ನರಯುಗ್ಮಮೆತ್ತ ವನಮೆತ್ತ ಸರೋರುಹಷಂಡಮೆತ್ತ ಗೀ
ತಂ ನಯದಿಂದೆ ಬಂದೆಸೆವುದೆತ್ತ ಭವಾಲಯಮೆತ್ತ ಭೋಂಕನೀ
ಕನ್ನೆಯ ಕಾಣ್ಕೆಯೆತ್ತ ಮನುಜಂಗೆನಗೆಂದು ನರೇಂದ್ರನಂದನಂ
ತನ್ನೊಳೆ ತಾನೆ ವಿಸ್ಮಯದೆ ಭಾವಿಸುತಿರ್ದನದೊಂದು ಜಾವಮಂ

ಅಂತು ಭಾವಿಸುತ್ತುಮಿರ್ದು

ಮನುಜನೆನ್ನನಿೀಕ್ಷಿಸಿ ಭವಾದ್ರಿಯನೇಱದೆ ನಾಡೆ ನೋಡಿ ತೊ
ಟ್ಟನೆ ಕೊಳೆ ಮಾಯಮಾಗದೆ ನಭಕ್ಕೊಗೆದಾಗಳೆ ಪೋಗದಿರ್ದೊಡೊ
ಯ್ಯನೆ ಬೆಸಗೊಳ್ವೆನಾರ್ಗೆ ಸತಿ ನೀಂ ಪೆಸರೇಂ ನಿನಗಿಂತು ತೋರ್ಪ ಜ
ವ್ವನದೊಳಗೀ ತಪಕ್ಕೆ ಗುಱಿಮಾಡಿಸಿದುಬ್ಬೆಗಮಾವುದೆಂಬುದಂ

ಎಂದು ಭಾವಿಸುತ್ತಮಾ ರಮಣೀಯದೇವಾಯತನ ನೂತ ಸ್ತಂಭಮಂ ನೆಮ್ಮಿ ನಿಂದಿರ್ದು ತದಂಗನಾ ಗೀತಾವಸಾನಸಮಯಮಂ ಪಾರುತ್ತುಮಿರ್ಪುದಂ

ಮೃದುಮಧುರ ವಲ್ಲಕೀಗೇ
ಯದ ದನಿ ಮಾಣಲ್ಕೆ ಗೀತದವಸಾನದೊಳು
ನ್ಮದಮಧುಕರಸ್ವನಂ ಪೊ
ಣ್ಮದ ಕುಮುದಿನಿಯಂತೆ ಕಾಂತೆ ಕಣ್ಗೆಸೆದಿರ್ದಳ್

ಅನಂತರಮಾಕೆ ತ್ರೈಲೋಕ್ಯರಕ್ಷಾಮಣಿಯಂ ಪ್ರದಕ್ಷಿಣೀಕರಣ ಪೂರ್ವಕಂ ನಮಸ್ಕರಿಸಿ

ಒಸೆದಾಶ್ವಾಸಿಸುವಂತೆ ಪುಣ್ಯತತಿಯಿಂದಂ ಮುಟ್ಟುವಂತಚ್ಛತೀ
ರ್ಥಸಮೂಹಾಂಬುಗಳಿಂದವಂದಭಿಷವಂ ಮಾಳ್ಪಂತೆ ಪೂತತ್ವಮಂ
ಪಸರಿಪ್ಪಂತೆ ಬರಂಗಳಂ ಪದಪಿನಿಂದೀವಂತೆ ದೃಕ್ತೃಪ್ತಿ ರಾ
ಜಿಸೆ ದಿವ್ಯಾಂಗನೆ ನೋಡಿದಳ್ ತಗುಳ್ದು ಚಂದ್ರಾಪೀಡಭೂಪಾಲನಂ

ಸ್ವಾಗತಮೇ ನಿನಗೆ ಮಹಾ
ಭಾಗನೆ ಮದ್ಭೂಮಿಗೆಂತು ಬಂದಯ್ ನೀನ
ಭ್ಯಾಗತನಾಗಲ್ವೇಟ್ಕಿಂ
ದಾಗಳ್ ನೃಪಸುತನನಲ್ಕಱಿಂ ಸತಿ ನುಡಿದಳ್

ಅಂತು ನುಡಿದನಿತಱೊಳೆ ಕೃತಾರ್ಥನಾದೆನೆಂದು ಬಗೆಯುತ್ತುಂ ದೇವಿಯರ್ ಬೆಸಸಿದಂತೆ ಗೆಯ್ವೆನೆಂದಾ ಕಾಂತೆಯ ಬೆಂಬಟಿವಿಡಿದು ನಡೆವ ಶಿಷ್ಯನಂತೆ ಪೋಗೆವೋಗೆ ಕಿಱುದಂತರದೊಳ್

ಕಾಲದ ಮರ್ವು ಪರ್ವಿದವೊಲಿರ್ದ ತಮಾಲವನಂಗಳಿಂದೆ ಭೃಂ
ಗಾಳಿಯ ಗಾವರಂ ಪುದಿದ ಪುಷ್ಪಲತಾಗೃಹದಿಂದೆ ಚಂದ್ರಿಕಾ
ಜಾಲದವೋಲ್ ಕೆಲಂಬಿಡಿದು ಭೋರ್ಗರೆಯಲ್ ಸುರಿತರ್ಪ ನಿರ್ಝರ
ಸ್ಖಾಲನ ಶೀಕರಪ್ರಸರದಿಂದೆಸೆದತ್ತು ಬೃಹದ್ಗುಹಾಂಗಣಂ

ಅಂತಾ ಗುಹಾಂಗಣದ ಮುಂಧೆ ನಿಂದು ನೋಟ್ಪಲ್ಲಿ

ಅದು ಸುರಭೂಜವಲ್ಕವಸನದ್ವಯಮಂತದು ದಂಡಮಲ್ಲಿ ನೇ
ಱಿದುದದು ಜೋಗವಟ್ಟೆಗೆ ಕಮಂಡಲವಂತದು ಭಸ್ಮಶಯ್ಯೆಯುಂ
ತದ. ಶಶಿಮಂಡಲಾಕೃತಿವೊಲಿರ್ದುದು ಶಂಖದ ಪಾತ್ರೆಯೆಂದು ನೋ
ಡಿದನತಿವಿಸ್ಮಯಂಬೆರಸು ತದ್ಗುಹೆಯಂ ನೃಪರೂಪಚಂದ್ರಮಂ

ಅನಂತರಮಾ ದಿವ್ಯತಪಸ್ವಿನಿ ಮಾಟ್ಪತಿಥಿಪೂಜೆಯಂ ವಿನಯ ಪುರಸ್ಸರಂ ಕಯ್ಕೊಂಡು ದರ್ಭಾಸನದೊಳ್ ಕುಳ್ಳಿರಲಾ ನಿತಂಬಿನಿ

ರಕ್ಷಾಂಕಿತ ತನು ಮೆಲ್ಲನೆ
ವೃಕ್ಷಂಗಳ ಕೆಲಗೆ ಪೋಗಿ ನಿಂದಿರ್ದಾಗಳ್
ಭಿಕ್ಷಾಂ ದೇಹಿಯೆನಲ್ಕಂ
ತಾ ಕ್ಷಣದೊಳ್ ತೀವಿದತ್ತು ಭಿಕ್ಷಾಪಾತ್ರಂ

ಅಂತು ತೀವಿದ ಭಿಕ್ಷಾಪಾತ್ರದ ಪಣ್ಣಲಂಗಳಂ ತಂದು ಕುಡೆ ನಿರ್ಝರ ಜಲಂಗಳೊಳ್ ಮಿಂದು ಅಮೃತರಸಸ್ವಾದುಗಳಪ್ಪ ತತ್ಫಲಂಗಳಂ ಮೆಲ್ದು ನೀರಂ ಕುಡಿದೊಂದುದೆಸೆ ತೊಲಗಿರ್ಪುದುಮಾ ಕನ್ನಿಕೆಯುಂ ಕೃತ ಫಲಜಲಾಹಾರೆಯಾಗಿ ಬಂದೊಂದು ಶಿಲಾತಳದೊಳ್ ಕುಳ್ಳಿರ್ದು ನೋಡುತ್ತುಮಿರ್ಪುದುಮಾ ಗಾಂಭೀರ್ಯರತ್ನಾಕರನುಮನತಿದೂರಮಪ್ಪ ಶಿಲಾತಳದೊಳ್ ವಿಶ್ರಮಿಸಿ ತನ್ನ ಬಂದ ವೃತ್ತಾಂತಮನೆಲ್ಲಮಂ ನೆಱೆಯೆ ಪೇೞ್ದು ಮತ್ತಮಾ ದಿವ್ಯಕಾಂತೆಯನಿಂತೆಂದಂ

ಪಿರಿದೆನಿಸಿರ್ದ ನಿಮ್ಮಯ ಪ್ರಸಾದಮನಾಂ ಪಡೆದೊಂದು ಗರ್ವದಿಂ
ಪರಿಚಿತನಂತೆ ಬಿನ್ನವಿಸಲುಂ ಬಗೆದಂದಪೆನಂತುಟಲ್ತೆ ಬಿ
ತ್ತರಿಪೊಡಧೀರರಪ್ಪ ಮನುಜರ್ ಪ್ರಭುಗಳ್ ದಯೆಯಿಂದೆ ತಮ್ಮನಾ
ದರಿಸಿದೊಡಾಗಳಂತೆ ಗೞಪಲ್ ಬಗೆದರ್ಪುದಿದಾವ ವಿಸ್ಮಯಂ

ಆದೊಡಂ

ಮನುಜಂಗೆ ಕೌತುಕಾವಹ
ಮಿನಿತೊಂದಾಶ್ಚರ್ಯಮದಱಿನಿನ್ ಬೆಸಗೊಳ್ಳ
ಲ್ಕನುಗೆಯ್ಯುತ್ತಿರ್ದಪುದೀ
ಮನಮನನುಗ್ರಹಿಸಿ ದೇವಿ ಪೇೞಲ್ವೇೞ್ಕುಂ

ಸುರಮುನಿಸಿದ್ಧಖೇಚರರೊಳಾವ ಕುಲಂನಿಜಜನ್ಮದಿಂನಲಂ
ಕರಿಸಿತೊ ಪಂಚಭೂತಮಯಮಾಗಿಯುಮೀ ತನುವಿಂದುಕಾಂತಿಯಂ
ತಿರೆ ಪೊಳೆಯುತ್ತುಮಿರ್ದಪುದಿದೇಂ ಪೊಸಜವ್ವನದೇೞ್ಗೆಯೊಳ್ ತಪ
ಶ್ಚರಣಮಿದೇಂ ಪೊದಲ್ದಿಡಿದ ಕಾನನದೊಳ್ ಬಿಡದೊರ್ಬಳಿರ್ಪುದೇಂ

ಎಂದು ಬೆಸಗೊಳ್ವುದಂ ಕೇಳ್ದು ಬೇಗಂ ತನ್ನೊಳ್ ತಾನೆ ಭಾವಿಸಿ

ಪೊಳೆವಲರ್ಗಣ್ಗಳಿಂ ಮಿಳಿರ್ವ ಬೆಳ್ಪು ರಸಾತ್ಮಕಮಾಗಿ ಗಂಡಮಂ
ಡಳತಳದಿಂದಮಂದಿೞಿಯುತಿರ್ದುದೆನಲ್ ನಯನಾಂಬು ಲೋಚನಂ
ಗಳಿನಿರದುಣ್ಮೆ ಶಬ್ದಮಣಮಿಲ್ಲದೆ ತೊಟ್ಟನೆ ಕಣ್ಮಗುಟ್ದಿಳ
ಗ್ಗಳಿಪಟಲಿಂದೆ ಮಾನಿನಿ ಮನಕ್ಕತಿವಿಸ್ಮಯಮಾಗೆ ಭೂಪನಾ

ಅಂತಾ ಕಾಂತೆ ಶೋಕಾಕ್ರಾಂತೆಯಾಗಿ

ರಸೆಯಂ ತಾಂ ತಾಂಕಿಕಲ್ಪಾಂತದಬಱಸಿಡಿಲೆಯ್ತುಂದುಪೊಯ್ಯಲ್ ನೆಲಂಕಂ
ಪಿಸುವಂತತ್ಯಂತಶೋಕಾಕುಲಿತೆಯಿನಱಿತಿರ್ದಪ್ಪಳೋರಂದದಿಂ ಮ
ಱ್ಗಿಸಲಿನ್ನಾರಾರ್ಪರೀ ಶೋಕಮನೆನುತೆ ಭಯಂಗೊಂಡಿದೆತ್ತತ್ತಲೀಗಳ್
ಬೆಸೆಗೊಂಡೆಂ ಕೆಮ್ಮನೆಂದುಮ್ಮಳಿಸಿ ಪಿರಿದುಮಂದಾನೃಪಂ ವ್ಯಗ್ರನಾದಂ

ಅಂತು ನೃಪನತಿವ್ಯಗ್ರನಾಗಿ ಮುಖಪ್ರಕ್ಷಾಳನಾರ್ಥಂ ಪೇರಡ ವಿಯೊಳಂಜುಳಿಯಿಂ ಜಲಮಂ ತಂದು ದೇವಿಯರವಧಾರಿಸುವುದೆಂದು ಭೂಪನಿಳಿಂಪನುಪರೋಧಿಸುತ್ತುಮೆೞೆಯೆ

ಅಳವಿಲ್ಲದೞುತ್ತಿರೆ ಕೆಂ
ಪೆಳಸಿದ ಬಾಷ್ಪಾಂಬುಪೂರ್ಣಲೋಚನಮಂ ತ
ಜ್ಜಳದಿಂದ ಕರ್ಚೆ ವಲಕ್ಷಂ
ಚಲದಿಂ ನಿಜವದನಬಿಂಬಮಂ ಸತಿ ತೊಡೆದಳ್

ಅಂತಾ ಕಾಂತೆ ಶೋಕಾಕ್ರಾಂತೆಯಾಗಿರ್ಪುದಂ ಕಂಡಿಂತಪ್ಪವರು ಮಱುಮಂದಮದ್ಭುತಮೆಂದು ಮನದೊಳ್ ಭಾವಿಸುತ್ತುಮಿರೆ

ಉರಗಮುಖೋಗ್ರದಂಷ್ಟ್ರ ಸಹಜಾತೆಯನೂರ್ಜಿತಕಾಲಪಾಶ ನಿ
ಷ್ಠುರತರರೂಪೆಯಂ ಸಹಜಶಾಕಿನಿಯಂ ವಿಷಕನ್ಯಕಾ ಸಹೋ
ದರಿಯನಪಾರಘೋರ ದುರಿತಾರ್ಣವ ಜಾತೆಯನಾತ್ಮವಲ್ಲಭಾಂ
ತರಿತೆಯನೆನ್ನನಣ್ಣ ಬೆಸಗೊಳ್ವುದೆ ಪೇೞ್ವೆನೆ ತತ್ಪ್ರಸಂಚಮಂ

ಗತಭಾಗ್ಯೆಯೆನಿಪ ಪಾಪಾ
ನ್ವಿತೆಯಂ ಪತಿದುಃಖಭಾಜನೆಯ ವೃತ್ತಾಂತ
ಸ್ಥಿತಿಯನದೇಂ ಕೇಳ್ದಪೆ ನೃಪ
ಸುತಕೌತುಕಮೆಂಬೆಯಪ್ಪೊಡುಸಿರ್ದಪೆನೀಗಳ್

ನಾಗವರ್ಮ – ಕರ್ನಾಟಕ ಕಾದಂಬರಿ
ಸು. (೯೯೦)

## ೧೬. ವಸಂತ ಲಕ್ಷ್ಮಿ

ಅವಿರಳತಮಾಳಭೂರುಹ ।
ನಿವಹದ ಮೇಲೋಳಿವಟ್ಟು ಪಾಱುವ ಗಿಳಿ ಪೋ ॥
ಲ್ತುವು ಕಱಿಯ ಮುಗಿಲ ಮೇಲೊ ।
ಪ್ಪುವ ರುಂದ್ರಸುರೇಂದ್ರಚಾಪರುಚಿರಶ್ರೀಯಂ ॥

ನಂದನವನದೊಳಗೇನೆಂ ।
ಬಂದವೊ ಮರನೆಂದು ಕಂತು ಬೆಸಗೊಳೆ ಮಾವಿಂ ॥
ಬಂದಿರ್ದುವೆಂದು ಬಿನ್ನವಿ ।
ಪಂದದೆ ಕೋಗಿಲೆಗಳುಲಿದುವಾಮ್ರದ್ರುಮದೊಳ್ ॥

ಬಂದಿರೆ ಮಾಮರಂಗಳಿರ ಮಲ್ಲಿಗೆ ಬಂದಿರೆ ಕೋಕಿಲಾಳಿನೀ ।
ವೃಂದಮೆ ಬನ್ನಿಮಿತ್ತ ಶುಕ ನೀಂ ಸ್ಫೋಕಮೇ ರಜನೀಂದ್ರಚಂದ್ರಸ್ಯೆ ॥
ಪಿಂದಮೆ ಬಂದಿರೇ ಕುಶಲಮೇ ನಿಮಗೆಂದು ಮಧುಪ್ರವೇಶದೊಳ್ ।
ಬಂದು ಮನೋಜನೇನನಿತುಮಂ ಪೆಸರ್ಗೊಂಡನೊ ಕೂಡಿಕೊಂಡನೋ ॥

ಅಳಿಸಾತ್ಕೃತಕುಸುಮಂ ಕೋ ।
ಕಿಳಸಾತ್ಕೃತಕೋರಕಾಂಕುರಂ ರಾಜಶುಕಾ ॥
ವಳಿಸಾತ್ಕೃತಕೋಮಲಫಲ ।
ಮಿಱಿಸಿರ್ದುದು ದೊರೆಗೆ ಚೂತತರು ಸುರತರುವಂ ॥

ಎಳವೆಱೆ ದಾಡೆ ಕೆಂದಳಿರೆ ನಾಲಗೆ ಮಾಮರನಳ್ಳೆಗೊಂಬಿನೊಳ್
ಮಿಳಿರ್ವೆಳವಳ್ಳಿ ಬಾಲಮಲರ್ಗೊಂಚಲೆ ಕೇಸರಮೆಂಬಿನಂ ಮನಂ ॥
ಗೊಳೆ ಮಧುಮಾಸಕೇಸರಿ ವಿಯೋಗಿಗಳೆಂಬ ಮೃಗಂಗಳಂ ಭಯಂ ।
ಗೊಳಿಸಿದುದುತ್ಕಕೀರಮದಕೋಕಿಲಗರ್ಜಿತತರ್ಜಿತಂಗಳಿಂ ॥

ನವಕಳಿಕಾಂಕುರಪ್ರಕರಮಂನವ ಕೋಕಿಲ ಕುಟ್ಮಲಂಗಳಂ ।
ನವಫಲಕಂಗಳಂ ಮಿಳಿರ್ವ ಕೊಂಬುಗಳೆಂಬ ಕರಂಗಳಿಂ ಮಧೂ ॥
ತ್ಸವದೊಳಿವೆಮ್ಮ ತಂದೊಡವೆಯೆಂದಿದಿರೊಳ್ ಪಿಡಿದಂಗಜಂಗೆ ಲೆ ।
ಕ್ಕವಣೆಗೆ ದೋಱುವಂತೆಸೆದು ತೋಱಿದುವಂದಿನ ಬಂದವೂವುಗಳ್ ॥

ಪಡೆದಧಿರಾಜನಾದೆನಗೆ ಮಾಮರನಂ ಯುವರಾಜನಾಗೆ ಮಾ ।
ಟ್ಟಿದು ಪದನೆಂದು ಮನ್ಮಥನೃಪಂ ಸಹಕಾರಮಹೀರುಹಕ್ಕೆ ಕ॥
ಟ್ಟಿದ ಯುವರಾಜಕಂಠಿಕೆವೊಲಾಯ್ತಡೆಗೊಟ್ಟಿಡೆಗೊಟ್ಟು ನಿಂದ ಷ ।
ಟ್ಪದಗಣಮುಂ ಪ್ರಸೂನಭರಮುಂ ಮಕರಂದಗುಣಾಭಿಶೋಭಿತಂ ॥

ಸ್ಮರಶರಮೇವುವೆಂಬ ಶಿಶಿರಾಂಶುವ ತಣ್ಗದಿರೇವುವೆಂಬ ತೆಂ ।
ಬೆರಲರಲೇವುವೆಂಬ ಕಳಕಂಠಿಯ ಬಗ್ಗಣೆಯೇವುವೆಂಬ ಗಾ ॥
ವರಿಪಳಿಯೇವುವೆಂಬ ಮಧುಮಾಸದ ಗೋಸಣೆಯೇವುದೆಂಬ ಬ ।
ದ್ದರನೞಿಯಟ್ಟಿ ಸಂತಮಿರಲೀಯದೆ ಬಾಳಬಸಂತವಾರಣಂ ॥

ವಿಲಸದಶೋಕಪಲ್ಲವತಲಂ ವಿಕಚಾಬ್ಜದಳಾಕ್ಷಿ ಮತ್ತಕೋ ।
ಕಿಲಕಲನಿಸ್ವನಂ ಸಕಲಚಂದ್ರವಿಲಾಸಮುಖಂ ಸಸೌರಭಾ ॥
ನಿಲರಮಣೀಯನಿಶ್ವಸಿತಮುಸ್ಥಿರಭೃಂಗಚಲಾಲಕಂ ಮನಂ ।
ಗೊಳೆ ಪರಿಪೂರ್ಣಮಾಯ್ತು ನವಯೌವನಲಕ್ಷ್ಮಿ ವಸಂತಲಕ್ಷ್ಮಿಯಾ

**ರನ್ನ–ಅಜಿತತೀರ್ಥಂಕರ ಪುರಾಣ**
(೯೯೦)

## ೧೭. ಅಭಿಮಾನಧನ ಸುಯೋಧನ

ಪ್ರತಿಕೂಲದೈವನಯ್ ನೀಂ
ಪ್ರತಿನೃಪರನುಕೂಲದೈವರಸಹಾಯನೆ ನೀಂ
ಪ್ರತಿನೃಪರಸಹಾಯ[ಜಿತ]
ಪ್ರತಿಬಲ[ರ]ದಱಿಂದನರ್ಥಕಂ ವಾಕ್ಯಾರ್ಥಂ

ಎಂದು ನುಡಿದ ಸಂಜಯನ ನುಡಿಗೆ ದುರ್ಯೋಧನಂ ನಿರ್ವ್ಯಸಿ

ಸಮರಜಯಂ ದೈವಾಯ
ತ್ತಮದಱಿನಾ ಪುರುಷಕಾರಮೆನಗಾಯ್ತಾಗಳ್
ಯಮನಂದನಾದಿಗಳೊಳೊಂ
ದೆ ಮೆಯ್ಯೊಳಾಂತಿಱಿವೆನೆನ್ನ ಚಲಮಂ ಮೆಱೆವೆಂ

ಸುರಸಿಂಧೂದ್ಭವಕುಂಭಜನ್ಮದಿನಕೃತ್ಪುತ್ರಾದಿಗಳ್ ಸಾಯೆ ಸಂ
ಗರದೊಳ್ ಪಾಂಡವರಂ ಗೆಲಲ್ ನೆಱೆಯನಿನ್ನೇಕಾಕಿ ದುರ್ಯೋಧನಂ
ಸೆರಗಂ ಪಾರ್ದಪನೆನ್ನಗುವಿಾ ಧರೆ ಭುಜಾದಂಡಂ ಗದಾದಂಡಮುಂ
ಬೆರಡುಂ ಸಂಜಯ ಮಜ್ಜಯಕ್ಕೆ ನೆರವಿಂ ಮತ್ತನ್ಯರಂ ಪಾರ್ವೆನೇ

ಮದವತ್ಕರಿಗಳ ಬಿದುವಂ
ವಿದಾರಣಂಗೆಯ್ದು ಕೊಲ್ವ ಕಂಠೀರವಕಂ
ಕದನದೊಳರಿನೃಪರಂ ಕೋ-
ಪದೆ ಕೊಲ್ವೆನಗಂ ಸಹಾಯರೆಂಬರುಮೊಳರೇ

ಎಂದು ನುಡಿದು ಕಾಲದಂಡಪ್ರಚಂಡಮಪ್ಪ ತನ್ನ ಗದಾದಂಡಮಂ ಭುಜಾದಂಡದೊಳಳವಡಿಸಿಕೊಂಡು ಸಮರಾಭಿಮುಖನಾಗಿ ನಡೆವ ಫಣಿ ರಾಜಕೇತನನಂ ಸಂಜಯನಂಜದೆ ಮಾರ್ಕೊಂಡು

ಪವನಾತ್ಮಜಂ ಮಹಾರಥ-
ನವನಿಪ ಸಮರಥನೆ ನೀನದರ್ಕಧಿಕನೊಳಾ
ಪವನಾತ್ಮಜನೊಳ್ ಮಱಿ ಬ
ದ್ಧವೈರಮಂ ಸಂಧಿಮಾಳ್ಪುದುತ್ತಮಪಕ್ಷಂ

ಎಂದು ನುಡಿದ ಸಂಜಯನ ನುಡಿಗೆ ಪಿಂಗಾಕ್ಷನತಿವಿಷಮಪರುಷ ವೇಷಾವೇಶಧರನಾಗಿ

ಅತಿರಥನಾತಂ ಗಡ ಬಲ-
ಯುತ[ನಾಂ] ಸಮರಥನೆ[ನ]ಧಿಕಬಲವಂತಂ ಮಾ-
ರುತಿ ಗಡ ಮಹಾರಥಂ ಮಾ-
ರುತಿಯುಂ ತದ್ರಥದ ಗಾಲಿಗಳ್ ದೊಡ್ಡಿದುವೇ

ಪೆಱರಂ ಪೊಗಟ್ಟಿಪೆ ಯೆಮ್ಮಂ
ಕಿಱಿಯರ್ ಮಾಡಿದಪೆ ಯೆಲವೊ ಸಂಜಯ ! ನೀನುಂ
ಪೆಱನೊರ್ವಂ ಬಿಲ್ಗೋಜಂ
ಪೆಱನೊರ್ವಂ ಸಿಂಧುಪುತ್ರನಾಗಲ್ ಬಗೆವೋ ?

ಎಂದರಸನವಂಗೆ ವಿರಸವಾಗಿ ಪರುಷಮಂ ನುಡಿಯೆ ಸಂಜಯನಂಜಿ

ಎನಿತೆನಿತಂ ಕಲಿಸಿದೊಡಂ-
ತನಿತನಿತು ನಿಜಸ್ವಭಾವಮುಕ್ಕುಂ ನೃಪನಂ-
ದನನಂತುಮಂತು ಕರ್ಕಶ-
ತನುವಂತಃಶೂನ್ಯಮಕ್ಕುಮುನ್ನತವಂಶಂ

ಎಂದಱಿದು 'ಮೌನಂ ಸರ್ವಾರ್ಥಸಾಧನಂ' ಎಂಬುದು ಈತಂಗೆ ಅನುಕೂಲವೃತ್ತಿಯುಂ ಸ್ವಚ್ಛಂದಾನುವೃತ್ತಿಯುಮಾಗಿ ನೆಗ[ಳ್ವುದು]

ಎಂತುಂ 'ಆರಾಧ್ಯಂ ನ ಪ್ರಕೋಪಯೇತ್' ಎಂದು ಮೋನಂಗೊಂಡು ಸಂಜಯಂ ಕಿಱಿದು ಬೇಗಮಿರ್ದು ಫಣಿರಾಜಕೇತನಂ ಯುದ್ಧ ಸನ್ನದ್ಧನಾಗಿ ನಡೆವುದಂ ಕಂಡು ಮತ್ತಮಾ ಸಂಜಯಂ ನಿಸರ್ಗಮೂರ್ಖನುಂ ಸ್ವಭಾವದೃಢನುಂ ಸ್ವಾಮಿಹಿತವನುಂ ಅಪ್ಪುದಱಿಂದಿರಲಾಱದೆ

ಆ ಬಲದೇವಾಶ್ವತ್ಥಾಮರುಮಿರ್ದರ್ ಆವರಿರ್ವರುಮಲ್ಲದೆ ಕೃಪ ಕೃತವರ್ಮರುಮಿರ್ದರ್ ಅಂತು ನಾಲ್ವರೊಳೊರ್ಬಂಗೆ ವೀರಪಟ್ಟಮಂ ಕಟ್ಟಿ ವೀರಪ್ರಮುಖಂಗೆ ಸೇನಾಧಿಪತ್ಯಾಭಿಷೇಕಮಂ ಮಾಡಿ ಪಗೆಯಂ ಕಯ್ಗೆ ಮಾಟ್ಪುದು ಎಂಬುದುಂ ಸಂಜಯನ ನುಡಿಗೆ ದುರ್ಯೋಧನನಿಂತೆಂದಂ

ತ್ರಿದಶನದೀಸುತನಿಂ ತೀ
ರದ ಕಜ್ಜಂ ಮುನ್ನೆ ಕಳಶಸಂಭವನಿಂ ತೀ
ರದ ಕಜ್ಜಮಿನಜನಿಂ ತೀ
ರದ ಕಜ್ಜಂ ದ್ರೋಣಪುತ್ರನಿಂ ತೀರ್ದಪುದೇ !

ದ್ರೋಣನೆಮಗೊಳ್ಳಿಕೈದಂ
ದ್ರೋಣನ ಸುತನೊಳ್ಳಿಕೈಯದಿರ್ಕುಮೆ ? ಸಮರ
ಕ್ಷೋಣಿಯೊಳಿನ್ನವನಾಸೆಯ ?
ಮಾಣೆಯಱಂ, ಕಯ್ಪೊಸೊರೆಯ ಕುಡಿಯೇಂ ಮಿಡಿಯೇಂ ?

ಮಡಿವೊಡೆ ಪಗೆ, ರವಿಸುತನಿಂ
ಮಡಿಗುಂ, ಮೇಣ್ ಶೌರ್ಯಶಾಲಿ ದುಶ್ಯಾಸನನಿಂ
ಮಡಿಗುಂ, ಮೇಣೆನ್ನಿಂದಂ
ಮಡಿಗುಂ, ಪೆಱಪೆಱರಿನೆನ್ನ ಪಗೆ ಮಡಿದಪುದೇ ?

ಕಾನೀನಂ ದ್ರೋಣ ನದೀ
ಸೂನುಗಳಟಿದಿಂ ಬಟಿಕ್ಕೆ ಪೆಱರೆನಗಿಲ್ಲೆಂ
ದಾನೆ ಗಳಿತಾಶ್ರುಜಲದಿಂ
ಸೇನಾಪತ್ಯಾಭಿಷೇಕಮಂ ಮಾಡಿದಪೆಂ

ಎನಗೆ ಮನಮಿಂದು ಶೂನ್ಯಂ
ಮನೆ ಶೂನ್ಯಂ ಬೀಡು ಶೂನ್ಯಮಾದುದು ಸಕಲಾ
ವನಿ ಶೂನ್ಯಮಾಯ್ತು, ದುಶ್ಶಾ
ಸನನಿಲ್ಲದೆ ಕರ್ಣನಿಲ್ಲದಾನೆಂತಿರ್ಪೆಂ ?

ಬಾಂಧವರನಿಱಿಸಿ ಸರಸಿಜ
ಬಾಂಧವತನಯನುಮನೆನ್ನ ತಮ್ಮನುಮಂ ನ-
ಮ್ಮಂಧನರೇಂದ್ರನ ಮೊಗಮಂ
ಗಾಂಧಾರಿಯ ಮೊಗಮನಾವ ಮೊಗದೊಳ್ ನೋೞ್ಪೆಂ

ಎನೆ ಸಂಜಯನಾ ಪ್ರಸ್ತಾವದೊಳ್ ಭೀಷ್ಮ ದ್ರೋಣ ಕರ್ಣ ದುಶ್ಶಾಸನ ಶಲ್ಯ ಶಕುನಿ ಸೈಂಧವ ಭೂರಿಶ್ರವಃ ಸೋಮದತ್ತ ಭಗದತ್ತ ಸೌಬಲ ಬೃಹದ್ಬಲ ಬಾಹ್ಲೀಕ ವಿಂದಾನುವಿಂದಾದಿಗಳ ಸಾವಿನೊಳ್ ಸರ್ವಾಂಗವಿಕಳ ರಾಗಿರ್ದ ಧೃತರಾಷ್ಟ್ರಗಾಂಧಾರಿಯರ ಚರಣಾರವಿಂದ ವಂದನಂಗೆಯ್ದು ದೇವರ ಮನಃಕ್ಷತಮನಾಱಿಸಲ್ವೇೞ್ಪುದು ಬೀಡಿಂಗೆ ಬಿಜಯಂಗೆಯ್ವುದೆನೆ

ಸವಳದೆ ಗುರುಜನದಲ್ಲಿಗೆ
ಯುವರಾಜನುಮಂಗರಾಜನುಂ ಬೆರಸು ರಣೋ-
ತ್ಸವದಿಂ ಪೋದೆಂ ನಾಣ್ಚುವೆ-
ನವರಿರ್ವರುಮಿಲ್ಲದೀಗಳಲ್ಲಿಗೆ ಪೋಗಲ್

ಪತಿಶೋಕವಿಕಳ ಪಾರ್ಥಿವ-
ನಿತಂಬಿನೀಜನಮನೀಕ್ಷಿಸಲ್ ಸಂಜಯ ಲ-
ಜ್ಜಿತನೆನ್ನಿರ್ಪಿರವಿಂದೇ
ಕೆ ತೋರ್ಪೆನಾನೆನ್ನ ಮೊಗಮನತಿದುಃಖಿತನೆಂ

ರನ್ನ–ಗದಾಯುದ್ಧ

೯೯೩

# ೧೮. ಧೃತರಾಷ್ಟ್ರ ಗಾಂಧಾರೀ ಸಂದರ್ಶನ

ಎಂಬನ್ನೆಗಂ ಸಕಲಚತುರಂಗಬಲವಿಕಳನಾಗಿ ಸಪ್ತಾಂಗರಾಜ್ಯಸಮಾಲಿಂಗಿತನಾಗಿ ಸಂಗ್ರಾಮರಂಗದೊಳಿರ್ದನೆಂಬುದಂ ಆಪ್ತಚರರಱಿಪೆ ಕೇಳ್ದು ಗಾಂಧಾರಿಯುಂ ಧೃತರಾಷ್ಟ್ರನುಂ ಶೋಕಾಕುಲೀಕೃತಚಿತ್ತರಾಗಿ ತಮ್ಮ ಮಗನನಾರಯ್ಯಲುಂ ಮನಃಕ್ಷತಮನಾಱಿಸಲುಮೆಂದು ಅಱಸುತ್ತುಂ ಬಂದು

ಪಡೆ ಪನ್ನೊಂದಕ್ಷೋಹಿಣಿ-
ಗೊಡೆಯನೆ ಮೂರ್ಧಾಭಿಷಿಕ್ತನಯ್ ಮೂಱುಂ ಬೆ-
ಳ್ಗೊಡೆಯ ನಡುವಿರ್ಪ ನೀನಿ-
ರ್ದೆಡೆಯುಮನೆಮಗಱಿಯದಂತುಟಾದುದೆ ಮಗನೇ

ಎಂದು ಪೞಿಯಿಸುತ್ತುಂ ಬರ್ಪ ಗುರುಜನದ ಸರಮಂ ಸಂಜಯನಱಿದು ಕರಕಮಲಮುಕುಳಿತಾಂಜಲಿಯಾಗಿ ದೇವಾ ನಿನ್ನಲ್ಲಿಗೆ ನಿಜಜನನೀಜನಕರ್ ಅಱಸುತ್ತುಂ ಬಂದರ್ ಎಂಬುದುಂ ಉದ್ಧೃತ ಗೋತ್ರಾಭಿಮುಖಂ ವಜ್ರಾಘಾತಮಾದಂತೆ ಸಿಗ್ಗಾಗಿ ತಲೆಯಂ ಬಾಗಿ

ಅರಿಭೂಪಾಲರನಿಕ್ಕಿ ಗೆಲ್ದೊಸಗೆಯಿಂ ತೂರ್ಯಸ್ವನಂ ಪೊಣ್ಮೆ ಸೋ
ದರರುಂ ಮಕ್ಕಳುಮಾಪ್ತರುಂಬೆರಸು ಬಂದಾನಂದದಿಂ ಕಾಣ್ಬೆನೆಂ
ದಿರಲಿಂತಾಯ್ತು ವಿಧಾತ್ರ ಮದ್ಗುರುಗಳಂ ದುಃಖಾತ್ಮರಂ ಶೋಕತ
ಪ್ತರರಂ ಮೆಯ್ಯೊಳೆ ಬೀೞ್ವ ಕಣ್ಬನಿಗಳಿಂ ಕಾಣ್ಬಂತುಟಂ ಮಾಡಿದಯ್

ಕಂದ ನಿಜಾನುಜರೆಲ್ಲಿದ
ರೆಂದೆನ್ನಂ ಜನನಿ ಬಂದು ಬೆಸಗೊಂಡೊಡದೇ
ನೆಂದು ಮಱುಮಾತುಗುಡುವೆಂ ?
[illegible]

ಶೋಕಂ ಮಿಗೆ ಫಣಿರಾಜಪ-
ತಾಕಂ ವಿಗಳಿತವಿವೇಕನವಿರಳಬಾಷ್ಪೋ-
ದ್ರೇಕಂ ಹಾ ದುಶ್ಶಾಸನ
ಹಾ ಕರ್ಣಾ ಎನುತಮಂತೆ ಮೂರ್ಛೆಗೆ ಸಂದಂ

ಮೂರ್ಛೆಯಿಂದೆಟ್ಟಿತ್ತು ನಿಜಜನನೀಜನಕರಂ ಕಂಡು ಲಜ್ಜಾಭರದಿಂ ಶಿರಮನಾನತಂ ಮಾಡೆ ಸಮರಾನುಬಂಧಮಂ ಮಾಣ್ಬುದು ಎನ್ನೆಂಬುದ ನಿಂಬುಕಯ್ವುದು ಎಂದ ಧೃತರಾಷ್ಟ್ರನ ನುಡಿಯಂ ಗಾಂಧಾರಿ ಸಮಭ್ಯರ್ಥಿಸಿ ತಾನುಂ ಪ್ರಾರ್ಥಿಸಿ

ಸಮರವ್ಯಾಪಾರಂ ಮಾ
ಣ್ದು ಮಗನೆ ನಿಜಶಿಬಿರದತ್ತ ಬಿಜಯಂಗೆಯ್ ಸ-
ತ್ತ ಮಗಂದಿರ್ ಸತ್ತರ್, ನೀ
ನೆಮಗುಳ್ಳೊಡೆ ಸಾಲ್ವುದವರನಿನ್ ತಂದಪೆವೇ

ತನ್ನೊಡವುಟ್ಟಿದರ್ ಪೆಸರ ನಾಲ್ವರೊಳೊರ್ವರುಮಿಲ್ಲದಿರ್ದೊಡಂ
ತನ್ನಸುವಂ ನಿವೇದಿಸುವನಗ್ನಿಗೆ ಧರ್ಮತನೂಜನೆಂದೊಡಾ-
ನೆನ್ನೊಡವುಟ್ಟಿದರ್ ಪೆಸರ ನೂರ್ವರೊಳೊರ್ವರುಮಿಲ್ಲ ಬಾೞ್ವೆನೆಂ-
ಬೆನ್ನಱಿಯಾಸೆಯಂ ಬಿಸುಡಿಮೆನ್ನವರಾದುದನಾಗದಿರ್ಪೆನೇ

ಸಾಧಿಸುವೆಂ ಫಲ್ಗುಣನಿಂ
ಸಾಧಿಸುವೆಂ ಪವನಸುತನ ಬಸಿಱಿಂ ಹಾ ಕ
ರ್ಣಾ ! ದುಶ್ಶಾಸನ ! ತೆಗೆವೆಂ,
ನಿರ್ದೋಷಿ ಬೞಿಕ್ಕೆ ಯಮಜನೊಳ್ ಪುದುವಾೞ್ವೆಂ

ಅಂ ಮಗನೆ ನಿಮಗೆ ಧರ್ಮಜ
ನೇಂ ಮಗನಲ್ಲನೆ ಬೞಿಕ್ಕೆ ನೀವುಂ ತಾಮುಂ
ನಿಮ್ಮೊಳ್ ನೇರ್ಪಡುಗಿಡದೆ ಸು
ಖಂ ಮುನ್ನಿನ ತೆಱದೆ ಬಾೞ್ವುದಾಂಬೆಸಕಯ್ವೆಂ

ನೀನೆಂತುಮೆಮ್ಮ ಪೇೞ್ದುದಂ ಕಯ್ಕೊಳ್ಳದೆ ಛಲಮನೆ ಕಯ್ಕೊಂಡು ಪಾಂಡುನಂದನರೊಳ್ ಕಾದಿದಲ್ಲದೆ ಸಂಧಿಯನೊಡಂಬಡೆಯಪ್ಪಿನಂ ನೀನೆಮಗಿನಿತನೊಳ್ಳಿಕಯ್ಯಲ್ವೇೞ್ವುದು ನೆಗಟ್ಟ ಕಜ್ಜಮಾವುದುಮಂ ನಿಮ್ಮಜ್ಜನೊಳಾಲೋಚಿಸಿ ನೆಗಟ್ವುದು ಅಲ್ಲಿಗೆ ಬಿಜಯಂಗೆಯ್ವುದೆನೆ ಮಹಾಪ್ರಸಾದಮೆಂದು ಅದನೊಡಂಬಟ್ಟು ಅಂತು ಪೋಗೆ

**ರನ್ನ–ಗದಾಯುದ್ಧ**

(೯೯೩)

# ೧೯. ದುರ್ಯೋಧನ ಪ್ರಲಾಪ

ಇಭಶೈಲಂಗಳನೇಱಿಯೇಱಿ ರುಧಿರಸ್ರೋತಂಗಳಂ ದಾಂಟಿ ದಾಂ-
ಟಿಭದೋರ್ನಿರ್ಗಲಲತಾಪ್ರತಾನ ವಿಪಿನವ್ರಾತಂಗಳೊಳ್ ಸಿಲ್ಕಿ ಸಿ-
ಲ್ಕಿ ಭರಂಗೆಯ್ದು ಐದೆಯ್ದಿ ಸಂಜಯಶಿರಃಸ್ಕಂಧಾವಲಂಬಂ ಕುರು-
ಪ್ರಭು ಕಂಡಂ ಶರಜಾಲಜರ್ಜರಿತಗಾತ್ರತ್ರಾಣನಂ ದ್ರೋಣನಂ

ಅಂತು ನಿಸರ್ಗದುಷ್ಟಧೃಷ್ಟದ್ಯುಮ್ನಕರವಿಲುಳಿತಮೌಳಿಯಾಗಿರ್ದ ಭಾರದ್ವಾಜನಿರವಂ ರಾಜರಾಜಂ ನೋಡಿ

ಅಱಿಯೆಮೆ ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು ಪಿನಾಕಪಾಣಿಯುಂ
ನೆಱೆಯನಿದಿರ್ಚೆ ನಿಮ್ಮೊಡನೆ ಕಾದಿ ಗೆಲಲ್ಕಿದು ನಿಮ್ಮುಪೇಕ್ಷೆಯಿಂ
ದಱಿಯೆನಿದೆನ್ನ ಕರ್ಮವಶಮೆಂದಱಿಯೆಂ ನಿಮಗಿಂತು ಸಾವುಮೀ-
ತೆಱದಿನಕಾರಣಂ ನೆಱೆಯೆ ಸಂಭವಿಸಿರ್ದುದೊ ಕುಂಭಸಂಭವಾ

ಎಂದು ಕುಂಭಸಂಭವನಂ ತ್ರಿಃಪ್ರದಕ್ಷಿಣಂಗೆಯ್ದು ಬರುತ್ತುಂ ಆ ದಿಶಾ ಭಾಗದೊಳ್

ಅರೆಮುಗಿದಿರ್ದ ಕಣ್ಮಲರಲರ್ದ ಮೊಗಂ ಕಡಿವೋದ ಕಯ್ಯುಮಾ-
ಸುರತರಮಾಗೆ ಕರ್ಚಿದವುಡುಂ ಬೆರಸನ್ಯಶರಪ್ರಹಾರ ಜ-
ರ್ಜರಿತಶರೀರನಾಗಿ ನವಲೋಹಿತವಾರ್ಧಿಯೊಳಟ್ದು ಬಿಟ್ದಿನಂ
ಕುರುಪತಿ ನೋಡಿ ಕಂಡನಭಿಮನ್ಯುಕುಮಾರನನಾಜಿವೀರನಂ

ಅಸಮಬಲ ನಿನ್ನ ವಿಕ್ರಮ
ಮಸಂಭವಂ ಪೆಱರ್ಗೆ ನಿನ್ನನಾನಿನಿತಂ ಪ್ರಾ
ರ್ಥಿಸುವೆನಭಿಮನ್ಯು ನಿಜಸಾ
ಹಸೈಕದೇಶಾನುಮರಣಮೆಮಗಕ್ಕೆ ಗಡಾ

ಕಿಱಿದೆಡೆಯಂ ಪೋಗಿ ತನ್ನ ತಮ್ಮನ ನಿರ್ದೆರವಂ ಕಂಡು ಸೈರಿಸ ಲಾಱದೆ

ನಿಜಜೀವಂ ಪರಲೋಕದೊಳ್ ನಿಜಮಹಾಮಾಂಸಂ ಪಿಶಾಚಾಸ್ಯದೊಳ್
ನಿಜರಕ್ತಂ ರಿಪುಕುಕ್ಷಿಯೊಳ್ ನಿಜಶಿರಂ ನಕ್ತಂಚರೀಹಸ್ತದೊಳ್
ನಿಜಕಾಯಂ ಕುರುಭೂಮಿಯೊಳ್ ನೆಲಸೆ ಗಾಂಧಾರೀಜ ದುರ್ಯೋಧನಾ
ನುಜ ದುಶ್ಶಾಸನ ಭೀಮಭೀಮಗದೆಯಿಂ ಪಂಚತ್ವಮಂ ಪೊರ್ದಿದಯ್

ನಿನ್ನಂ ಕೊಂದಂ ಗಡಮೊಳ-
ನಿನ್ನಂ ಕೊಂದವನನಿಕ್ಕಿ ಕೊಲ್ಲದೆ ಮಾಣ್ದಾ-
ನಿನ್ನುಮೊಳೆಂ ಗಡ ಸಾಲದೆ
ನಿನ್ನಯ ಕೂರ್ಮೆಗಮದೆನ್ನ ಸೌಧರ್ಮಿಕೆಗಂ

ಜನನೀಸ್ತನ್ಯಮನುಂಡೆನಾಂ ಬಳಿಕೆ ನೀಂ ಸೋಮಾಮೃತಂ ದಿವ್ಯಭೋ
ಜನಮೆಂಬಿಂತಿವನುಂಡೆನಾಂ ಬಳಿಕೆ ನೀಂ ಬಾಲತ್ವದಿಂದೆಲ್ಲಿಯುಂ
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂಱ್ ತಡಮಾಯ್ತಿದೊಂದೆಡೆಯೊಳಂ ಹಾ ವತ್ಸ ದುಶ್ಶಾಸನಾ

ದಿನಕರತನೂಜನಂ ರಾಜರಾಜಂ ನೋಡಿ ಬಾಷ್ಪವಾರಿ ಧಾರಾಪೂರಿತ ಲೋಚನನುಂ ಮನ್ಯೂದ್ಗತಕಂಠನುಂ ಅಸಹ್ಯಶೋಕಾನಲದಹ್ಯ ಮಾನಾಂತಃಕರಣನುಮಾಗಿ

ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕಱಿದ ಬಱಿ
ಕ್ಕಾನುಂ ನೀನೆ ದಲೀಗಳ್
ನೀನುಂ ಮಗುೞ್ದಿತ್ತವೋದೆ ? ಅಂಗಾಧಿಪತೀ

ಅನೃತಂ ಲೋಭಂ ಭಯಮೆಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮಣ್ಮೆಂ
ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೇೞಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ

ನಿನ್ನಂ ಕೊಂದ ಕಿರೀಟಿಯು
ಮೆನ್ನನುಜನನಿಕ್ಕಿ ಕೊಂದ ಭೀಮನುಮೊಳನಾ
ನಿನ್ನುಮೊಳೆಂ ಗಡ ! ಸಾಲದೆ
ನಿನ್ನಯ ಕೂರ್ಮೆಗಮುದೆನ್ನ ಸೌಥರ್ಮಿಕೆಗಂ

ಇನಸುತನಿರವಂ ದುಶ್ಶಾ
ಸನನಿರವಂ ಕಂಡುಮಿನ್ನುಮೆನ್ನಸುವಿದು ನೆ
ಟ್ಟನೆ ಪೋದುದಿಲ್ಲ ಕಲ್ಲೆರ್ದೆ
ತನದಿಂದೆನ್ನಂತು ಬಲ್ಬಿನಾವನುಮೊಳನೇ

ಕೆಳೆಯಂಗಾಯ್ತುಸುಮೋಕ್ಷಮಾಗದೆನಗಂ ಬಾಷ್ಪಾಂಬುಮೋಕ್ಷಂಧರಾ-
ತಳಮಂ ಕೊಟ್ಟನಿವಂ ಜಳಾಂಜಳಿಯುಮಂ ನಾಂ ಕೊಟ್ಟೆನಿಲ್ಲನ್ಯಮಂ-
ಡಳಮಂ ಸುಟ್ಟನಿವಂ ಪ್ರತಾಪಶಿಖಿಯಿಂದಾನೀತನಂ ಸತ್ಕ್ರಿಯಾ-
ನಳನಿಂ ಸುಟ್ಟೆನುಮಿಲ್ಲ ಮತ್ಕ್ರಿಯತಮಂ ಕರ್ಣಂಗಿದೇಂ ಕೂರ್ತೆನೋ

ಗುರು ದೀಕ್ಷಾವಿಧಿಗಳ್ಗೆ ಮಂತ್ರಿ ಹಿತಕಾರ್ಯಾಳೋಚನಕ್ಕಾಳ್ದನು-
ವರ್ತೆಯಿಂ ಕಾವ ಗುಣಕ್ಕೆ ನರ್ಮಸಚಿವಂ ಕ್ರೀಡಾರಸಕ್ಕಾನೆಯಾಳ್

ಗುರುಭಾರಕ್ಕಿಱಿವಾಳ್ ರಣಕ್ಕೆ ತುೞಿಲಾಳ್ ಕಟ್ಟಾಯದೊಳ್ ಮೇಳದಾಳ್
ಪರಿಹಾಸಕ್ಕೆನಿಸಿರ್ದನೆಂತು ಮಱೆವಂ ದುರ್ಯೋಧನಂ ಕರ್ಣನಂ

ಎಂದು ಶೋಕರಸಮುಂ ಕೋಪರಸದಮೇಲಿಕ್ಕೆ ಮಾರ್ಪಡೆಯೆಯ್ತ
ರ್ಪುದಂ ನೋಡಿ ನಡೆವ ದಂದಶೂಕಪತಾಕನ ಮುಳಿಸಿನಂದಮುನಱಿದು
ಸಂಜಯನೆಂದಂ ಎಲೆ ದೇವಾ ಭೀಷ್ಮರಿತ್ತಲಿರ್ದಪರ್ ಇತ್ತ ಬಿಜಯಂ
ಗೆಯ್ಯಿಂ ಎಂತುಂ ನಿಜಗುರುಜನಪ್ರಾರ್ಥನಾಭಂಗಂ ಮಾಡಲಾಗದು ಇಂ
ನೀಂ ನೆಗೞ್ವ ಕಜ್ಜಮಾವುದುಮಂ ನಿಮ್ಮಜ್ಜನೊಳಾಳೋಚಿಸಿ ನೆಗೞ್ವುದು
ಎಂದು ಪೇೞ್ವುದುಂ ಸಂಜಯನ ಮಾತಂ ಮೀಱದೆ ಶರಶಯನಗತನಾ
ಗಿರ್ಪ ನದೀನಂದನನ ಚರಣಾರವಿಂದವಂದನಂ ಗೆಯ್ಯಲೆಂದು ಗಾಂಧಾರೀ
ನಂದನಂ ಎಯ್ದೆವಂದಂ

**ರನ್ನ–ಗದಾಯುದ್ಧ**
(೯೯೩)

# ೨೦. ಭೀಷ್ಮ ಸಂದರ್ಶನ

ಅಂತು ಎಯ್ದಿವಂದಾಗಳ್

ನರಶರಕೋಟಿ ಜರ್ಜರಿಸೆ ತನ್ನ ಶರೀರಮನಸ್ತ್ರವೇದನಾ-
ಪರವಶನಾಗಿಯುಂ ಮಱೆದನಿಲ್ಲ ಮುಕುಂದನನೇಕಚಿತ್ತದಿಂ
ಸ್ಮರಿಯಿಸುತಿರ್ದುಮತ್ತ ಕುರುಭೂಮಿಯೊಳೀಗಳದೆಂತುಟಾದುದೋ
ಕುರುಪತಿಗೆಂದನಾ ಪರಮಯೋಗಿಗಮಿಂತುಟು ಮೋಹವಾಗದೇ

ಅಂತಿರ್ದ ನದೀನಂದನನಂ ರಾಜರಾಜಂ ನೋಡಿ ಮನ್ಯೂದ್ಗತ ಕಂಠನಾಗಿ

ವಿನಯಮನೊಕ್ಕು ನಿಮ್ಮ ಗುರುವೃದ್ಧರ ಪೇಳ್ದ ಹಿತೋಪದೇಶಮಂ
ಮನದೊಳಿಳಿಂಕೆಗೊಂಡನಿಲನಂದನನ್ವೈರದೆ ನಿಮ್ಮನಿಂದ್ರನಂ-
ದನನೊಡನಾನೆ ಕಾದಿಸಿದೆನಾನೆ ಕಡಂಗಿದೆನೆನ್ನ ಪಾಪಕ-
ರ್ಮನ ಕತದಿಂದಮೀ ನಿಮಗಮೀ ಯಿರವಾದುದೆ ಸಿಂಧುನಂದನಾ

ಏಕಾಕಿಯಾಗಿ ಬಂದ ಧೃತರಾಷ್ಟ್ರನಂದನನ ಬರವಿನೊಳ್ ಸರಿತ್ಸುತಂ ಸಮರವೃತ್ತಾಂತಮನಱಿದು ವಿಸ್ಮಯಾಕ್ರಾಂತಸ್ವಾಂತನುಮಾಗಿ

ಎಲ್ಲಿದುವೊ! ಧವಳಚಾಮರ
ಮೆಲ್ಲಿತ್ತೇಕಾತಪತ್ರಮಹಿಕೇತನಮಿ
ನ್ನೆಲ್ಲಿತ್ತೊ! ಮೃಗೇಂದ್ರಾಸನ
ಮೆಲ್ಲಿದುವೋ! ಲೋಲಪಾಳಿಕೇತನತತಿಗಳ್

ಮಗನೆ ಪಾಂಡವರನೊಡಂಬಡಿಸಿ ಸಂಧಿಯಂ ಮಾಡಿ ಪೂರ್ವ ಕ್ರಮದೊಳ್ನಡೆವಂತು ಮಾಳ್ಪೆಂ; ಇನ್ನುಮವರೆಮ್ಮೊಂದುದಂ ಇಂಬುಕೆಯ್ಯದದಂಮಿಾಱುವರಲ್ಲ; ನೀನುಮೆಮ್ಮ ಪೇಳ್ದುದಂ ಮಿಾಱದೆ ನೆಗುೞ್ವೆಯಪ್ಪೊಡೆ ಮನೆ ಸುಯೋಧನಂ ಮುಗುಳ್ನಗೆ ನಕ್ಕು

ನಿಮಗೆ ಪೊಡೆವಟ್ಟು ಪೋಪೀ
ಸಮುಕಟ್ಟಂ ಬಂದೆನಹಿತರೊಳ್ ಸಂಧಿಯನೇಂ
ಸಮುಕೊಳಿಸಲೆಂದು ಬಂದೆನೆ!
ಸಮರದೊಳೆನಗಜ್ಜ ! ಪೇೞಿಮಾವುದು ಕಜ್ಜಂ

ಕಲಿಗಂ ಶಂಕೆಯೆ! ಚಾಗಿಗಂ ಬೆರಗೆ! ಮೇಣ್ ಕಟ್ಟಾಳ್ಗೆರಂ ಬಾರ್ವನೇ !
ಕುಲಜಂಗಂ ಮಱುವಾಳೆ ! ಸಜ್ಜನಿಕೆಗಂ ಕಲ್ಪೋಜೆಯೇ ! ಧರ್ಮಿಗಂ
ಕೊಲೆಯೇ ! ಮಂತ್ರಿಗಮಿಚ್ಛೆಗಾಱತನಮೇ ! ತಕ್ಕಂ ಪಿಸುಣ್ಪೇೞ್ವನೇ
ಚಲಮಂ ಗಂಡುಮನಪ್ಪುಕೆಯ್ವನಗಮಾ ಕೌಂತೇಯರೊಳ್ ಸಂಧಿಯೇ

ನೆಲಕಿಱಿವೆನೆಂದು ಬಗೆವಿರೆ !
ಚಲಕಿಱುವೆಂ ಪಾಂಡುಸುತರೊಳೀನೆಲನಿದು ಪಾ
ೞ್ಗೊಲನೆನಗೆ ದಿನಪಸುತನಂ
ಕೊಲಿಸಿದ ನೆಲದೊಡನೆ ಮತ್ತೆ ಪುದುವಾೞ್ವಪೆನೇ

ಬಾಡಮುನ್ನೆದನವರ್ಮಂ
ಬೇಡಿದೊಡಂನಿತ್ತೆನಿಲ್ಲ ! ರಾಜ್ಯಾರ್ಧಮನಾಂ
ಬೇಡಿಯುವರಲ್ಲಿಗಟ್ಟಿದೊ
ಡೇಡಿಸಿ ಱೋಡಿಸನೆ! ಪವನನಂದನನೆನ್ನಂ

ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು-
ಳ್ಳನ್ನೆಗಮೊಲ್ಲೆನೆನ್ನೊಡಲೊಳೆನ್ನಸುವುಳ್ಳಿನಮಜ್ಜ ಸಂಧಿಯಂ
ಮುನ್ನಮವಂದಿರಿರ್ಬರುಮನಿಕ್ಕುವೆನಿಕ್ಕಿ ಬೞಿಕ್ಕೆ ಸಂಧಿಗೆ-
ಯ್ವೆಂ ನೆಗೞ್ದಂತಕಾತ್ಮಜನೊಳೆನ್ನಬಲಾಱಿದೊಡಾಗದೆಂಬೆನೇ

ಪುದುವಾೞಲ್ಕಣಮಾಗದೆಂತುಮವರೊಳ್ ಸಂಧಾನಮಂ ಮಾಡಲಾ
ಗದು ! ನೀಮಿಲ್ಲದೆಯಜ್ಜ ! ಬಿಲ್ಲ ಗುರುಗಳ್ತಾಮಿಲ್ಲದಾಕರ್ಣನಿ

ಲ್ಲದೆ ದುಶ್ಶಾಸನನಿಲ್ಲದಾರೊಡನೆ ರಾಜ್ಯಂಗೆಯ್ವೆನಾರ್ಗೆನ್ನ ಸಂಪದಮಂ ತೋಱುವೆನಾರ್ಗೆ ತೋಱಿ ಮೆಱೆವೆಂ ಸಾನಾವಿನೋದಂಗಳಂ

ಖಂಡಿತಮೆನಿಪ್ಪ ವರಮಹಿ-
ಮಂಡಲಧವಳಾತಪತ್ರಸಂಪದವೆನಗೇ-
ಭಂಡಮದನೊಲ್ಲೆನೊಲ್ಲೆನ-
ಖಂಡಿತಮಭಿಮಾನಮದನೆ ಬಲ್ವಿಡಿವಿಡಿವೆಂ

"ಮಗನೆ ನೀನೆಂತುಮೆಮ್ಮಪೇೞ್ದುದಂ ಕೈಕೊಳ್ಳದೆ ಛಲಮನೆ ಕೈಕೊಂಡು ಪಾಂಡುನಂದನರೊಳ್ ಕಾದಿದಲ್ಲದಿರೆನೆಂಬೆಯಪ್ಪೊಡೆ ತೀರ್ಥಯಾತ್ರೆಗೆ ಪೋದ ಬಲದೇವಂ ಬರ್ಪನ್ನೆಗಂ ನೀನಿರ್ದೆಡೆಯ ನಱಿಯದಂತು ಮೆಯ್ಗಱೆದು, ಅಶ್ವತ್ಥಾಮಕೃಪಕೃತವರ್ಮರ್ ಬರ್ಪನ್ನೆಗಂ ಕಾಲವಂಚನಂಗೆಯ್ವುದು ಮೇಣ್ ಜಲಮಂತ್ರ ವಿದ್ಯಾಭ್ಯಾಸಮಂ ಕಯ್ಕೊಂಡು ಕುರುಕ್ಷೇತ್ರದುತ್ತರದಿಶಾಭಾಗ ದೊಳಿರ್ಪ ವೈಶಂಪಾಯನ ಸರೋವರಮಂ ಪೊಕ್ಕಿರ್ದು ಇಂದಿ ನೊಂದಿರುಳಂ ಕಳಿಪಿ, ನಾಳೆ ನಿಮ್ಮ ನೆಗೞ್ವುದಂ ನೆಗೞ್ವೆ ದೆನೆ; ಮಹಾಪ್ರಸಾದಮೆಂದದರ್ಕೊಡಂಬಟ್ಟು, ಅಂತೆಗೆಯ್ವೆನೆಂದು ಯಥೋಚಿತಹಿತೋಪದೇಶಂಬೆರಸು ಜಲಮಂತ್ರೋಪದೇಶಮಂ ಕೈಕೊಂಡು, ಕುರುಕುಲಪಿತಾಮಹನಂ ಬೀೞ್ಕೊಂಡು ನಿಜಭುಜಗ ದಾಸಹಾಯನುಮಾಗಿ ಸಂಗ್ರಾಮರಂಗದೊಳಗನೆ ಬರುತ್ತುಂ ತನ್ನಂತರ್ಗತದೊಳ್

ಅರಿಯರ್ ಪಾಂಡವರವರೊಳ್
ವಿರೋಧಮಂ ಬಿಸುಟು ಸಂಧಿಯಂ ಮಾಡುವುದೆಂ-
ಬರ ನುಡಿಯಂ ಕೇಳಲ್ಕೆಂ
ದೆರಡುಂ ಕಿವಿಗಳುಮನೆನಗೆ ಬಿದಿ ಮಾಡಿದನೇ

ಎನುತಂ ಬಂದು ತತ್ಸರೋವಳದ ಸಮೀಪಮಂ ಕುರುಕುಲ ಪ್ರದೀಪನೆಯ್ದುವಂದಾಗಳ್

ಕುರುಕುಳಸರೋರಾಜಹಂಸಂ ಮುನ್ನಂ ತನ್ನ ಮೆಯ್ಯೊಳ್ ಕೆನ್ನೈಸಿದ ಕೆನ್ನೆತ್ತರಂ ಕರ್ಚಿ ಕಳೆದು ಕರಚರಣವದನಪ್ರಕ್ಷಾಳನಂಗೆಯ್ದು ಮುಕ್ಕುಳಿಸಿಯುಗುೞ್ದಾಚಮನಕ್ರಿಯೆಗಳಂ ಮಾಡಿ ಜಲದೇವತಾನಮಸ್ಕಾರಂ ಗೆಯ್ದು ಜಲಮಂತ್ರೋಪದೇಶದಿಂ ಜಲಜಾಕರಮನಭಿಮಂತ್ರಿಸಿ ಜಲನಿಲಯನಾಗಿ ಪರಮಯೋಗಿಯವೊಲ್ ಮಂತ್ರಪದಾಕ್ಷರಂಗಳಂ ಮಿನುಗುತುಮಿರ್ದಂ

ಅನ್ನೆಗಮಿತ್ತ ತ್ವರಿತಗತಿಯಿಂ ವಿಂಧ್ಯಕನೆಂಬ ಕಿರಾತದೂತಂ ಬಂದು ದೂರಪ್ರಣತನಾಗಿ ದೇವಾ ದುರ್ಯೋಧನನಂ ಕುರುಕ್ಷೇತ್ರದೊಳೆಲ್ಲಿಯುಮಱಸಿಯುಂ ರೂಪುಗಾಣದೆ ಮಧ್ಯಂದಿನಸಮಯದೊಳ್ ತಪನತಾಪದಿಂ ತೃಷ್ಣಾಭಿಭೂತನಾಗಿ ಸಕಲಜನಾಪ್ಯಾಯನಕಾರಿಯಪ್ಪ ವೈಶಂಪಾಯನಸರೋವರಕ್ಕೆ ನೀರ್ಗುಡಿಯೆ ಪೋಗಿ ಹಲ ಕುಲಿಶ ಕಮಲ ಶಂಖ ಚಕ್ರ ಲಾಂಛನಮಪ್ಪ ಅಡಿವಜ್ಜೆಯಂ ಕೊಳದ ತಡಿಯೊಳ್ ಕಂಡೆಂ ಅಲ್ಲಿ ಪೊಱಮಟ್ಟ ಪಜ್ಜೆಯಲ್ಲದೆ ಪೊಕ್ಕ ಪಜ್ಜೆಯಂ ಕಾಣೆನೆನೆ ಪವನತನಯನವನನೊಡಗೊಂಡು ಬಂದು ಧರ್ಮತನಯಾದಿಗಳ್ಗೆ ತದ್ವೃತ್ತಾಂತಮನೆಲ್ಲಮನಱಿಪಿ ಧರ್ಮನಂದನಾದಿಗಳನೊಡಗೊಂಡು ಬಂದಂ

ರನ್ನ–ಗದಾಯುದ್ಧ
(೯೯೩)

## ೨೧. ಭೀಮಸೇನಾಡಂಬರ

ಕಿರಾತ ದೂತಸಂಸೂಚಿತಮಪ್ಪ ಅಡಿವಜ್ಜೆಯಂ ಕಂಡು

ಈ ಬೂತು ಎನ್ನ ಸರಂಗೇಳ್ದೊಡಲ್ಲದೆ ಪೋಜಿಮಡುವನಲ್ಲಂ ಇವಂಗಾನೆ ಬಲ್ಲೆನೆಂದು ಭೀಮಸೇನನುದ್ದಾಮ ಕೋಪಾಟೋಪವಿರಚಿತಬದ್ಧಭ್ರುಕುಟಿಯಾಗಿ

ಜಳದೊಳ್ ಮಿಾನಿರ್ಪವೋಲ್ನೀನ್ ಕೋಳದೊಳೆ ಮುಳುಗಿರ್ದಕ್ಕಟಾ !
ಕೋಡ ಸೇಡಿಂ
ಗೊಳಗಾದೈ ನಿನ್ನ ದುರ್ಯೋಧನವೆಸರ್ಗಿದು ಲಜ್ಜಾಕರಂ ತೋಱಿದೈ ನಿ
ನ್ನಳವಂ ! ಚೀಃ! ಸತ್ತೊಡೇಂ ಪುಟ್ಟರೆ! ಪೋಜಿಮಡು ನೀಂ!
ಕೈದುಗೊಳ್ಳಾರವೇಂದ್ರಾ
ಚಳವಜ್ರಂ ಬಂದನೀಗಳ್ ಕುರುಕುಲಮಥನೋದ್ಭೀಕರಂ ಭೀಮಸೇನಂ

ಹರಿ ಸಂಧಾನಕ್ಕೆ ವಂದಂದವಗಡಿಸಿದಹಂಕಾರಮೆಲ್ಲಿತ್ತೊ, ಕೃಷ್ಣಾಂಬರಕೇಶಾಕೃಷ್ಟಿಯಂ ಮಾಡಿಸಿದ ಮದಮದೆಲ್ಲಿತ್ತೊ, ಕೌಂತೇಯರಂ ಮಚ್ಚರದಿಂ ಕಾಂತಾರದೊಳ್ ತಿಱ್ರನೆ ತಿರಿಪಿದ ಸೊರ್ಕೀಗಳೇನಾದುದೆಂದಾ ಕುರುವಂಶಾಧೀಶನಂ ಮೂದಲಸಿದನದಟಂ ಭೀಮನುದ್ದಾಮಭೀಮಂ

ಎಂದು ಮತ್ತಮಿರದೆ

ಒಡೆಯಲಜಾಂಡಂ ಕುಲಗಿರಿ
ಕೆಡೆಯಲ್ ಪಿಟಿಯಲ್ಕೆ ಧಾತ್ರಿ ದಿವಿಜರ್ನಡುಗ
ಲ್ಕೊಡರಿಸುವಿನಂ ಜಟಾಸುರ
ಹಿಡಿಂಬಬಕವೈರಿ ಸಿಂಹನಾದಂಗೆಯ್ದಂ
ಆ ರವಮಂ ನಿರ್ಜಿತಕಂ
ಠೀರವರವಮಂ ನಿರಸ್ತಘನರವಮಂ ಕೋ
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ

ಅಂತು ಬೆಮರ್ತುಮ್ಮಳಿಸಿ ಸೈರಿಸಲಾರದೆ ಜಲಮಂತ್ರಮನೇನುಮಂ ಬಗೆಯದೆ ಕೋಪೋದ್ರೇಕಮನೆ ಬಗೆದು

ರಸೆಯಿಂ ಕಾಲಾಗ್ನಿರುದ್ರಂ ಪೊಱಮಡುವವೊಲಂತಾಸರೋಮಧ್ಯದಿಂ ಸಾ
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಱಮಟ್ಟಿಲ್ಲಿದಂ ಭೀಮನೆಂದೆ
ಣ್ದೆಸೆಯಂ ನೋಡುತ್ತೆ ಮತ್ತದ್ಭುತನಟನಿಟಿಲಾಲೋಲಕೀಲಾಕ್ಷಿವೋಲ್ದ
ಳ್ಳಿಸೆ ಕೋಪಾರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ

ಧರ್ಮನಂದನಂ ಧೃತರಾಷ್ಟ್ರನಂದನಂ ಮುನ್ನೆ ಗೆಯ್ದ ಅಧರ್ಮಮಂ ನೆನೆಯದೆ ನಿರ್ಮಲಕ್ಷತ್ರಧರ್ಮಮಂ ನೆನೆದು

ಆಗದು ಸಮರಂ ಗುಣಯುತ
ನಾಗು ಮಹಾಭೋಗಭಾಗಿ ನಿನ್ನಾಳ್ವ ಮಹೀ
ಭಾಗಮುಮಂ ಸಕಲಮಹೀ
ಭಾಗಮುಮಂ ನೀನೆ ಕೊಂಡು ಸುಖಮಿರಲಾಗಾ !

ಎನೆ ಹರಿಯೆಂದಂ ದುರ್ಯೋ
ಧನ ! ಧರ್ಮತನೂಜನೊಳ್ಳಿತಂ ಪೇೞ್ದಪನಾ
ತನ ಪೇೞ್ದುದೆಸಗಿ ನೀನರ
ಸನಾಗಿ ವಸುಮತಿಯನಾಳ್ವುದಾವುದು ದೋಷಂ

ನೀಂ ಗಡ ! ಮಧ್ಯಸ್ಥಂ ನುಡಿ
ವಂ ಗಡ ! ಪುದುವಾೞ್ಕೆಯೆನಗಮವರ್ಗಂ ಸಂಧಾ
ನಂ ಗಡ ! ಸಂಧಿಯ ಮಾತಂ
ಲಂಘಿಸಿದೆಂ ಮುನ್ನಮಿನ್ನೊಡಂಬಟ್ಟಪನೇ

ಎಂಬುದುಂ ಮಾರುತಿಗಂ ಫಣಿರಾಜಕೇತನಂಗಂ ಧರ್ಮನಂದನಾದಿಗಳಿರ್ದು ಧರ್ಮಯುದ್ಧಮನೆ ಸಮಕಟ್ಟಿದರ್

**ರನ್ನ–ಗದಾಯುದ್ಧ**

# ೨೨. ಗದಾಯುದ್ಧ

ವಾರಣರಕ್ತಸಿಕ್ತ ಮೃಗರಾಜಯುಗಕ್ಕೆ ನವಪ್ರಸೂನರಾ
ಗಾರುಣಕಿಂಶುಕದ್ರುಮಯುಗಕ್ಕೆ ಸಧಾತುಕುಭೃದ್ಯುಗಕ್ಕೆ ಸಿಂ
ದೂರಿತಗಂಧಸಿಂಧುರಯುಗಕ್ಕೆಣೆಯೆಂಬಿನಮಣ್ಮಿ ಕಾದಿದರ್
ಕೌರವರಾಜನುಂ ಕುರುಕುಲಾಂತಕನುಂ ರುಧಿರಾಕ್ತಮೂರ್ತಿಗಳ್

ಕರಿಯಂ ನುಂಗಿ ಕಳಿಂಗನಂ ನೊಣೆದ ದರ್ಪಕ್ಕೊಂದುಗೊಳ್ ಮತ್ಸಹೋ
ದರರಂ ಕೋಪದೆ ತಿಂದುದರ್ಕೆರಡುಗೊಳ್ ದುಶ್ಶಾಸನೋರಃಸ್ಥಳ
ಕ್ಷರದಸ್ರಾಂಬುವನಾರ್ದು ಪೀರ್ದ ಮುಳಿಸಿಂಗಂ ಮೂಱುಗೊಳ್ಕೆಂದು ಮ
ತ್ಸರದಿಂದೋವದೆ ಪೊಯ್ದನೆತ್ತಿ ಗದೆಯಂ ದುರ್ಯೋಧನಂ ಭೀಮನಂ

ಎಂದು ಮುಟ್ಟೆ ಮೂದಲಿಸೆ

ಇದು ಲಾಕ್ಷಾಗೇಹದಾಹಕ್ಕಿದು ವಿಷಮವಿಷಾನ್ನಕ್ಕಿದಾ ನಾಡಜೂದಿಂ
ಗಿದು ಪಾಂಚಾಲೀಪ್ರಪಂಚಕ್ಕಿದು ಕೃತಕಸಭಾಳೋಕನಭ್ರಾಂತಿಗೆಂದೋ
ವದೆ ಪೊಯ್ದಂ ಕಾಲ್ಗಳಂ ತೋಳ್ಗಳನಗಲುರಮಂ ಕೆನ್ನೆಯಂ ನೆತ್ತಿಯಂ ಕೋ
ಪದಿನಯ್ಪುಂ ದುರ್ನಯಕ್ಕಯ್ದೆಡೆಯನುರುಗದಾದಂಡದಿಂ ಭೀಮಸೇನಂ

ತೆಱಪಂ ನಿಟ್ಟಿಸಿ ಕುರುಪತಿ
ಬಱಸಿಡಿಲೆಱಗುವವೊಲೆಱಗಿ ಪೊಯ್ಯಲೊಡಂ ಮೆಯ್
ಮಱೆದು ಪವನಜನದೇಕೆಂ
ದಱಿಯೆಂ ಮತಿವಿಕಳನಾಗಿ ಮೂರ್ಛೆಗೆ ಸಂದಂ

ಆ ಪ್ರಸ್ತಾವದೊಳ್ ಧಾತುನಿರ್ಜರಗಿರಿ ಕೆಡೆವಂತು ಕೆಡೆದಿರ್ದ ಪಗೆಯಂ ನೋಡಿ ಧರ್ಮಯುದ್ಧಮಂ ನೆನೆದು

ಇಱಿಯಿಂ ಬಿಟ್ಟನನೆಂಬೀ
ಬಿಱುಬಿಂದಂ ಬೀಸೆ ಗದೆಯ ಗಾಳಿಯ ಕೋಳಿ-
ಟ್ಚೆಱಿಸಿದುದು ಭೀಮನಂ ಮೆಯ್-
ಮಱೆದವನಂ ತಂದೆ ಸುತರ್ಗೆ ಕೂರದರೊಳರೇ

ಅಂತು ಮೂರ್ಛೆಯಿಂ ಮಾರುತಿಯೆಚ್ಚೆತ್ತಾಗಳ್

ಪೊಡೆಯಲರಾತಂ ರಾಗದೆ
ತೊಡೆಯಂ ಪೊಯ್ದಾರ್ದ ನೆವದೆ ನೆಱನೀತಂಗೀ-
ಯೆಡೆಯೆಂದು ತೋಱಿ ಕುಡೆ ಪೊಲ-
ಗಿಡದಱಿದಂ ಪರಮಪಂಡಿತಂ ಪವನಸುತಂ

ತಿಳಿದಾಗಳ್ ನೆಱನಿಂತುಟೆಂದು ನೆಲನಂ ಮಾಱುದ್ದಿ ಕಯ್ಯಿಂ ಧರಾ-
ತಳದೊಳ್ ಸೂಸಿದ ತನ್ನ ತೀವ್ರಗದೆಯಂ ಕಂಡೆತ್ತಿಕೊಂಡಂಬರ-
ಸ್ಥಳದಿಂದಂ ಸಿಡಿಲೇಟ್ಗೆಯಿಂದೆಱಗಿ ಪೊಯ್ವಾಗಳ್ ಗದಾದಂಡದಿಂ
ಮುಳಿದಿಟ್ಟಂ ಕಲಿ ಸತ್ತಿಗಂ ಕುರುಕುಭೃಚ್ಚಂಡೋರುದಂಡಂಗಳಂ

ಇಡೆ ತೊಡೆಯನುಡಿದು ನೆಟ್ಟನೆ
ಕೆಡೆಯುತ್ತುಂ ಕರ್ಚಿ ನೆಲನನಾನಿದನೆಂತುಂ
ಬಿಡೆನೆಂಬ ತೆಱದೆ ಕುಲಗಿರಿ
ಕೆಡೆವಂದದೆ ಕೆಡೆದು ಕೌರವೇಂದ್ರಂ ಮಡಿದಂ

ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಮುಗ್ರತೇ
ಜಂ ಕಿಡುತಿರ್ಪಿನಂ ನಿಜಕರಂಗಳನಂದುಡುಗುತ್ತುಮಿರ್ದು ಚ
ಕ್ರಾಂಕಮಗಲ್ವಿನಂ ಕ್ರಮದಿನಂಬರಮಂ ಬಿಸುಟುರ್ವಿಗಂಧಕಾ
ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್

ನುಡಿದುದನೆಯ್ದೆ ತುತ್ತತುದಿಯೆಯ್ದುವಿನಂ ನುಡಿದಂ ಚಲಂ ಚಲಂ
ಬಿಡಿದುದನೆಯ್ದೆ ಮುಂ ಪಿಡಿದುದಂ ಪಿಡಿದಂ ಸಲೆ ಪೂಣ್ದು ಪೂಣ್ಕೆ ನೇ
ರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡ
ಲ್ವಡುವಿನಮಣ್ಮುಗುಂದನೆ ದಲೇನಭಿಮಾನಧನಂ ಸುಯೋಧನಂ

**ರನ್ನ–ಗದಾಯುದ್ಧ**
(೯೯೩)

# ೨೩. ರಾಜನೀತಿ

ಆಱಡಿ ಬಂದಿ ಠಕ್ಕು ಕಳವೊಟ್ಟಜೆ ತಾಂ ಪರಿ ಮುತ್ತು ಡಾವರಂ
ಸೂಱೆ ನಿರೋಧ ನಿಗ್ರಹಮುಪದ್ರವಮಾಯಿಲಮೊತ್ತು ಜೊತ್ತು ಮೇ ।
ಲೇಱೊಳಗೇೞು ದೂೞು ಮಱವೊಳ್ನುಡಿ ವಂಚನೆಯೆಂಬುಪಾಯಮಂ
ಪಾಱಿಸಿ ಧರ್ಮಮಂ ನಿಱಿಸಿ ಪಾಲಿಸವೇೞ್ಪುದು ದೇಶಮಂ ನೃಪಂ ॥

ದೋಷಿಗೆ ತಕ್ಕ ದಂಡನೆಯ ಮಾೞ್ಪುದು ಮಾಡದುಪೇಕ್ಷಿಸಿರ್ದೊಡಾ
ದೋಷಿ ಬೞಿಕ್ಕೆ ಧಾರಿಣಿಯೊಳಂಕುಶಮಿಲ್ಲದ ಹಸ್ತಿಯಂತೆ ನಿ ।
ರ್ದೋಷಿಗಳಂ ಮದಾಂಧಗುಣದಿಂ ತುೞಿಗುಂ ತುೞಿದಂದು ದೇಶಮುಂ
ದೋಷದೊಳೊಂದಿಪೋಕುಮದಱಿಂದಮೆ ಪೆರ್ಚಿದರ್ಗಿಕ್ಕೆಯುಗ್ನಿಯಂ ॥

ಬೆಳೆಯಿಸಬೇಡರಾತಿತರುವಂ ಬೞಿಸಂದದು ಕೂಡೆ ಕೊರ್ಬಿ ಸಂ
ಚಳಿಸದೆ ಪೆರ್ಚಿ ಬೇರ್ಪರಿದು ದಾಂಗುಡಿವೋಗದೆ ಮಾಣದಂತದಂ ।
ಮೊಳೆಯೊಳೆ ತೋಡಿ ಸೀಂಟಿ ಕಳೆಯಲ್ ಬಗೆದಪ್ಪುದು ಮಾಡದಾಗಳು
ಮ್ಮಳಿಸಿ ಬೞಿಕ್ಕ ಪೆರ್ಗೊಡಲಿಗೊಳ್ವವೊಲಕ್ಕುಮದೊಳ್ಳಿತಕ್ಕುಮೇ ॥

ಆಱನೆಯ ಭಾಗದೊಳ್ ಮೈ
ದೋಱಿರೆ ಸಂದೊಂದುಭಾಗಮಂ ಕೊಂಡು ನೃಪಂ ।
ಮೀಱದೆ ರಕ್ಷಿಸೆ ನಾಡಂ
ಬೀೞುಗುಮಾ ನಾಡುಮವನ ರಾಜ್ಯಶ್ರೀಯಂ ॥

ಎರವಿನ ಬೀರದೇೞ್ಗೆಗಳನೞ್ತಿಯೆ ಪಾಡಿಸಿ ಪೊಂಗಿ ಮೀಸೆಯಂ
ಮುರಿದು ವಿಲಾಸದಿಂದೊದೆದು ಘಟ್ಟಿಸಿ ಱಚ್ಚೆಯೊಳಿರ್ದು ಬೆಟ್ಟದಿಂ ।
ಪಿರಿಯುವೆನಿಪ್ಪ ಮಾತುಗಳನಾಡಿ ಬೞಿಕ್ಕೊಳಸಾರ್ವಗಂಡರಂ
ಧರಣಿಪರಾಳ್ವುದೇ ಬಿಡದೆ ಕೂರಸಿಯಂ ಪಿಡಿದೇೞ್ವ ಭಂಡರಂ ॥

ಚತುರುಪಧಾವಿಶುದ್ಧನಭಿಮಾನಿ ದಯಾಳು ಕುಲಜ್ಞ ನಾಜಿಗೂ
ರ್ಜಿತವಿಜಯಪ್ರಸನ್ನನಧಿಕಾರಿ ಧುರಂಧರನೇಕವಾಕ್ಯನು ।
ನ್ನತಮತಿ ಶಕ್ತಿಯುಕ್ತನಮಲಂ ವ್ಯವಹಾರವಿಶಾರದಂ ಬಹು
ವ್ರತಪಥನೆನಿಪಾತನಲ್ತೆ ಮನೆವೆಗ್ಗಡೆ ಭೂಪತಿಗಪ್ಪುದೊಪ್ಪುಗುಂ ।

ಕ್ಷಿತಿಪತಿಯಾಳಲ್ಕಾಗದು
ಮತಿಹೀನನನಧಿಕದೋಷಿಯಂ ಮಂದನನು ।
ದ್ಧತನಂ ಭೃತ್ಯನನೆಂದುಂ
ಪ್ರತಿಪಕ್ಷದೊಳೊಂದಿದವನನಾತ್ಮಂಭರಿಯಂ ॥

ಸುರತಾಸಕ್ತನನನ್ಯಕಾರ್ಯರತನಂ ನಿದ್ರಾಳುವಂ ಕೋಪ ಭೀ
ಕರನಂ ವಾದಿತನೃತ್ಯಗೀತಮಧುರಾಳಾಪೇಷ್ಟಗೋಷ್ಠೀಮನೋ ।
ಹರನಂ ಕುಕ್ಕುಟ ಮಲ್ಲ ಮೇಷ ಮಹಿಷೇಭದ್ವಂದ್ವಯುದ್ಧಕ್ರಿಯಾ
ಭರನಂ ಭೂಪನನೆಯ್ದಿ ಬಿನ್ನವಿಸಬೇಡೇನಾದೊಡಂ ಸೇವಕಂ ॥

ಭೀತನನಲಸಿದನಂ ಕಾ
ರ್ಯಾತುರನಂ ಪಸಿದನಂ ತೃಷಾಪೀಡಿತನಂ ।
ದ್ಯೂತಮೃಗವ್ಯವ್ಯಸನೋ
ಪೇತನನಱಿದಱಿದು ಬಿನ್ನವಿಪ್ಪಂ ಗಾಂಪಂ ॥

**ದುರ್ಗಸಿಂಹ-ಪಂಚತಂತ್ರ**
(೧೦೩೦)

## ೨೪. ನಾಗಶ್ರೀಯ ಪಾಂಡಿತ್ಯ ಸೌಂದರ್ಯ

ಪ್ರತಿಭಾಸಂಸ್ಕೃತಿಯಿಂ ಸಲಕ್ಷಣತರಂಗೋಪಾಂಗದಿಂ ವಿಶ್ವವಿ ।
ಶ್ರುತವರ್ಣಾರ್ಥದಿನರ್ಥದೃಷ್ಟಿಯಿನಳಂಕಾರೋಕ್ತಿಯಿಂ ನಿರ್ಣಯೋ ॥
ಚಿತವಿನ್ಯಾಸದಿನತ್ಯುದಾತ್ತರಸದಿಂದಾಕನ್ಯೆ ಸಾಕ್ಷಾತ್ಸರ ।
ಸ್ವತಿ ತಾನೆಂಬಿನಮೇಂ ಪ್ರಭಾವಿಸಿದಳೋ ನಾನಾಕಳಾಳಾಪಮಂ ॥

ನೆರೆದಾರಾಜಸಭಾಂತರಾಳದೊಳುದಾತ್ತಾರ್ಥೋಕ್ತಿಯಿಂ ತನ್ನೊಳಾರ್ ।
ದೊರೆಯೆಂಬನ್ನೆಗಮುದ್ಧತಪ್ರಥಿತಶಬ್ದಾರ್ಥೋಕ್ತಿಯಿಂ ವ್ಯಕ್ತಮಾ ॥
ಗಿರೆ ವಕ್ಖಾಣಿಸಿ ತದ್ವಿದರ್ ಪೊಗಳ್ದುಬಾಪ್ಪೆಂಬನ್ನೆಗಂ ತತ್ಪತಿಂ ।
ವರೆ ವೇದಾದಿಕಳಾಕಳಾಪಮನಶೇಷಾಳಾಪದಿಂದೋದಿದಳ್ ॥

ಸಕಲವ್ಯಾಕರಣಾರ್ಥಶಾಸ್ತ್ರನಿಪುಣರ್ ಮಾರ್ಕೊಂಡರಿಲ್ಲುರ್ಕಿ ತಾ ।
ರ್ಕಿಕರೊಟ್ಟೈಸಿದರಿಲ್ಲ ಸತ್ಕವಿಗಳಡ್ಡಂಬಂದರಿಲ್ಲುಂತೆ ಭುಂ ॥
ಭುಕವಿಾಲೋಕದೊಳಾರೊಳಂ ಜನಿಯಿಸಿತ್ತಿಲ್ಲೆಂಬಿನಂ ವಿಪ್ರಕ ।
ನ್ಯಕೆ ವಿದ್ವಜ್ಜನದಿಂದವಮುಂದು ಪಡೆದಳ್ ಪಾಂಡಿತ್ಯಸೌಂದರ್ಯಮಂ

**ಶಾಂತಿನಾಥ-ಸುಕುಮಾರ ಚರಿತೆ**

ಸು. (೧೦೭೦)

## ೨೫. ಚಂದ್ರೋದಯ

ಪುಗಿಸಿದುವಟ್ಟೆ ಪರ್ವತಗೃಹಾಂತರಮುಂ ಕೆಲವಂ ಗವಾಕ್ಷದಿಂ
ದುಗಿದುವು ದೇವಸದ್ಮದೊಳಡಂಗಿದುವಂ ಬಯಲಿಂಗೆ ಬಿಟ್ದುವಂ ।
ತಗುಳ್ದಱಿಯಟ್ಟೆ ನುಂಗಿದುವು ಪೆರ್ಮರದೊಳ್ ಸೆಱಗೆಯ್ದು ಪರ್ಣಸಂ
ಧಿಗಳೆಡೆಯಿಂದಲಿಟ್ಟೆಱಸಿ ಕೊಂದುವು ಕತ್ತಲೆಯಂ ಹಿಮಾಂಶುಗಳ್ ॥

ದಾಂಗುಡಿಯಿಟ್ಟುದಿಂಗಡಲ ಬೆಳ್ಪು ಕರಂ ಮೊಳೆವೋದುದಿಂದುಕಾಂ
ತಂಗಳ ಬೆಳ್ಪು ಮೋದಿದುದು ನೆಯ್ದಿಲ ಬೆಳ್ಪು ಮಡಲ್ತುದಚ್ಚವೆ।
ಳ್ದಿಂಗಳ ಬೆಳ್ಪು ಬಳ್ಳಿವರಿದತ್ತೆಳವೆಂಡಿರ ಕಣ್ಣ ಬೆಳ್ಪು ಸೌ
ಧಂಗಳ ಬೆಳ್ಪು ಪರ್ಬಿದುದು ಬೆಳ್ಪಿನ ಬಲ್ಸರಿಯಿಂ ಸುಧಾಂಶುವಾ ॥

ಇಂಗಡಲೆ ಕಡಲ್ಗಳ್ ಸೌ
ಧಂಗಳೆ ಸದನಂಗಳಿಂದುಕಾಂತವೆ ಕಲ್ಗಳ್ ।
ಗಂಗೆಯೆ ತೊಱೆಗಳೆನಲ್ ಬೆ
ಳ್ಳಂಗೆಡೆದುದು ಕುಮುದುವನದ ಸಿರಿ ಬೆಳ್ದಿಂಗಳ್ ॥

ಲವಣಾಂಭೋನಿಧಿ ದುಗ್ಧವಾರ್ಧಿಚಯದಂತಿರ್ದತ್ತು ಕಾಳಿಂದಿ ಜಾ
ಹ್ನವಿಯಂತಿರ್ದುದು ನೀಲಪರ್ವತಮೆ ಕೈಲಾಸಾದ್ರಿಯಂತಿರ್ದುದೀ ।
ಭುವನಂ ಕಪ್ಪುರದಿಂದೆ ಕಂಡರಿಸಿದಂತಿರ್ದತ್ತು ಕೃಷ್ಣಂ ಸದಾ
ಶಿವನಂತಿರ್ದನೆನಲ್ಕದೇವೊಗೞ್ವೆನೋ ಪೇೞಚ್ಚವೆಳ್ದಿಂಗಳಂ ॥

ನಳಿನೀಸಂಮೋಹನಾಸ್ತ್ರಂ ಕುಮುದನಯನಕರ್ಪೂರಕಾಂಡಂ ಚಕೋರೀ
ತಿಳಕಂ ಶೃಂಗಾರಸಿಂಧುಪ್ಲವಬಿಸಲತೆ ತಾರಾಪುರಂಧ್ರೀಕಪೋಲ ।
ಸ್ಥಳಪತ್ರಂ ಚಂದ್ರಕಾಂತೋಪಳಪರಿಸಲಿಲಾಮೋದಶಸ್ತ್ರಂ ಮನೋಜಾ
ನಳಜಿಹ್ವಾಕ್ಷೀರಧಾರಾಹುತಿ ಪಸರಿಸೆ ಪರ್ವಿತ್ತು ಚಂದ್ರಾಂಶುಜಾಲಂ ॥

**ನಾಗಚಂದ್ರ-ಮಲ್ಲಿನಾಥ ಪುರಾಣ**

ಸು. (೧೧೦೦)

# ೨೬. ರಾವಣನ ಎರಡು ಚಿತ್ರಗಳು

## ೧. ರಾವಣನ ವ್ಯಾಮೋಹ

ಆ ಸಮಯದೊಳ್ ದಶಾಸ್ಯನೊಂದು ತಣ್ಬುಱಿಲ ತಾಣದೊಳ್ ಬಱಿಸಿಡಿಲ ಬಱಿವಿಡಿದು ಪೊಳೆವ ಕುಡುಮಿಂಚಿನಂತೆ ಬಲಭದ್ರನ ಕೆಲದೊಳಿರ್ದ ಸೀತೆಯಂ ಕಂಡು

ಬಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ
ಣ್ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ

ತಳತಳಿಸಿ ಪೊಳೆಯೆ ಸೀತೆಯ
ಚಳನಯನಂ ಖಚರ ಚಕ್ರವರ್ತಿಯ ಚಿತ್ತಂ
ಕೊಳದೊಳಗೆಳವಾಳೆ ತೆಱಂ
ಬೊಳೆವಂತೆ ಕಲಂಕಿ ಕದಡಿದತ್ತಾ ಕ್ಷಣದೊಳ್

ಹಾರ ಮರೀಚಿ ಮಂಜರಿ ಸುಧಾರಸ ಧಾರೆ ಸುಧಾಂಶು ಲೇಖೆ ಕ
ರ್ಪೂರ ಶಲಾಕೆ ನೇತ್ರಸುಖದಾಯಕಮೀ ದೊರೆತಲ್ಲಮೀಕೆ ಶೃಂ
ಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸಿದನೀಕ್ಷಿಸಿ ಕಣ್ಣಱಿದಾರೆ ಮನ್ಮಥಂ

ಪಲರುಂ ವಿದ್ಯಾಧರ ಸ್ತ್ರೀಯರುಮಮರಿಯರುಂ ಮಾನವಸ್ತ್ರೀಯರುಂ ತ
ಮ್ಮೊಲವಿಂ ಮೇಲ್ವಾಯ್ದೊಡಂ ಮುನ್ ಬಗೆಯದ ಬಗೆಯೇನಾದುದೆಂ ದುದ್ಧತಂಮೂ
ದಲಿಸುತ್ತುಂ ರೂಪಿನೊಳ್ ಮಚ್ಚರಿಸುವನೆನಗೆಂದಂಬನಂಬಟ್ಟುವನ್ನಂ
ಪಲಕಾಲಕ್ಕೇಸುವೆತ್ತುಂ ದಶಮುಖನೆನುತಂ ಮನ್ಮಥಂ ಮಾಣದೆಚ್ಚಂ

ನಡೆನಡುಕೋಲ್ವರಂ ದಶಮುಖಂ ಮನಮಂ ಸುಮನಶ್ಶಿಲೀವಮುಖಂ
ನಡೆಗಿಡೆ ಕೀರ್ತಿ ಬಾರ್ತೆಗಿಡೆ ಲಕ್ಷ್ಮಿ ಮೊದಲ್ಗಿಡೆ ಮಾನಸಿಕ್ಕೆ ನೇ
ರ್ಪಡುಗಿಡೆ ಸತ್ಯಶೌಚಗುಣಸಂಪದಮೇಳಿದನಾದನೆನ್ನರುಂ
ಕಿಡಿ ಮಸಿಯಾದವೊಲ್ ವಿಷಯಲೋಭದಿನೇಳಿದರಾಗದಿರ್ಪರೇ

ವಿಹಿತಾಚಾರಮನನ್ವಯಾಗತ ಗುಣಪ್ರಖ್ಯಾತಿಯಂ ದುಷ್ಟನಿ
ಗ್ರಹ ಶಿಷ್ಟಪ್ರತಿಪಾಲನಕ್ಷಮತೆಯಂ ಕಯ್ಗಾಯದನ್ಯಾಂಗನಾ
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ
ವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟವೇ

ಅವಿವೇಕಿ ದಶಮುಖಂ ದೃ
ಷ್ಟಿ ವಿಷಾಹಿಯ ಪೆಡೆಯ ಮಣಿಶಲಾಕೆಗೆ ಕಯ್ ನೀ
ಡುವ ಗಾಂಪನಂತೆ ರಘುವೀ
ರ ವಧೂ ಜನಕಜೆಗೆ ಮನದೊಳಳಿಪಂ ತಂದಂ

ಪರವಧುಗಾಸೆಗೆಯ್ವಧಿಕ ಪಾತಕವೊಂದು ರಘುಪ್ರವೀರನೊಳ್
ಧುರದೊಳಿದಿರ್ಚದೋಸರಿಸಿ ವಂಚಿಸಿ ಸೀತೆಯನುಯ್ವ ಭೀತಿಯೊಂ
ದೆರಡಱೊಳಂ ಜಸಂ ಮಸುಳೆ ತನ್ನವಲೋಕಿನಿಯಂ ದಶಾನನಂ
ಸ್ಮರಿಸಿದನಾತ್ಮಸತ್ವಗುಣಹಾನಿಯೆ ಸೂಚಿಸದೇ ವಿನಾಶಮಂ

ಅಂತು ನೆನೆಯಲೊಡಮವೆಲೋಕಿನೀವಿದ್ಯೆ ಬಂದು ಬೆಸನಾವುದೆನೆ ದಶಮುಖನಿವರಾರೆಂಬುದುಮಯೋಧ್ಯಾಸಿಂಹಾಸನಕ್ಕಧಿಪತಿಯುಮಿಕ್ಷ್ವಾಕುವಂಶಸಂಭವನುಮಪ್ಪನರಣ್ಯತನೂಭವಂ ದಶರಥನರನಾಥಂ ತದಪತ್ಯರಿವರ್ ಈಕಾಲದ ಬಲದೇವ ವಾಸುದೇವರ್ ದೇವತಾಧಿಷ್ಠಿತಂಗಳಪ್ಪ ವಜ್ರಾವರ್ತ ಸಾಗರಾವರ್ತ ಚಾಪರತ್ನಂಗಳನಪ್ರಯತ್ನದಿಂ ಪಡೆದ ರಾಮಲಕ್ಷ್ಮಣರೆಂಬರ್ ಮಹಾಬಲ ಪರಾಕ್ರಮರೀಕೆ ರಾಮನ ಮಹಾದೇವಿ ಮಿಥಿಲಾ ಪುರವರೇಶ್ವರನಪ್ಪ ಹರಿವಂಶದ ಜನಕನ ತನೂಭವೆ

ರಥನೂಪುರ ಚಕ್ರವಾಳ ಪುರಮನಾಳ್ವ ಚಂಡಬಲನಪ್ಪ ಪ್ರಭಾಮಂಡಲನ ತಂಗೆ ಸೀತಾದೇವಿಯೆಂಬುದುಮೀಕೆಯನೀತನಿಂದಗಲ್ಚುವುಪಾಯಮಾವುದೆನೆ ದೇವತೆ ಚಕಿತಚಿತ್ತೆಯಾಗಿ

ಆರಯ್ಯೆ ವಿರೋಧಂ ಸಾ
ಧಾರಣ ಪುರುಷರೊಳಮುಚಿತಮಲ್ತಧಿಕಬಲರ್
ಕಾರಣಪುರುಷರಿವರ್ ನಿ
ಷ್ಕಾರಣಮಿವರೊಳ್ ವಿರೋಧಮಂ ಮಾಡುವುದೇ

ಕಾವ ಬೆಸಂ ನಿನ್ನದು ಸಕ
ಲಾವನಿಯನಧರ್ಮನಿರತರಂ ನಿಯಮಿಸಿ ನೀ
ನೀ ವಿಷಯಕ್ಕೆಱಗುವುದುಂ
ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ

ಅನ್ನೆಯದಿಂ ನಡೆವವರಂ
ನೀನ್ ನಿಯಮಿಸುವೈ ದಶಾಸ್ಯ ಪೆಱನಾವಂ ನಿ
ನ್ನನ್ ನಿಯಮಿಸುವಂ ಮುನ್ನೀರ್
ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೇ

ಪದಿನಾಲ್ಸಾಸಿರ ಮುಖ್ಯನಾಯಕರಸಂಖ್ಯಾತಂ ಬಲಂ ಖೇದದಿಂ
ದಿದಿರಾದರ್ ಖರದೂಷಣರ್ ಬಗೆದನಿಲ್ಲತ್ತಲ್ ಭರಂಗೆಯ್ದು ಕಾ
ದಿದಪಂ ಲಕ್ಷ್ಮಣನಿತ್ತಲೀಕೆಯೊಡನೀತಂ ವೀತಶಂಕಂ ವಿನೋ
ದದೊಳಿರ್ದಂ ರಘುವೀರನಿನ್ನಿರಿವರೊಳ್ ವಿದ್ವೇಷಣಂ ದೂಷಣಂ

ಎಂದು ತೆಱೆಯೆ ನುಡಿದುದರ್ಕೆ ಕಡುಮುಳಿದು

ಮದನಯಶಃಪಟಹ ಧ್ವನಿ
ಪುದಿಯೆ ವಿಯಚ್ಚರನ ಕರ್ಣಮಂ ಹೃದಯಕ್ಕೆ

ಯ್ದಿದುದಿಲ್ಲ ದಿವ್ಯವಚನಂ
ಬಿದಿಯಂ ಮೀಱುಗುಮೆ ಪೆಱರ ಪೇೞ್ದುಪದೇಶಂ

ಅನೊಂದಂ ಬೆಸಗೊಂಡೊಡೆ
ನೀನೊಂದನಿದೇಕೆ ಪೆೞ್ದೆ ಪೇೞ್ದುದನೇಗೊಳ್
ಏನೆಂದು ಕೇಱಿ ನುಡಿವಯ್
ಮಾನವರಾಂತಪರೆ ಮರುಳೆ ಲಂಕಾಪತಿಯಂ

ಎಂಬುದುಂ ವಿದ್ಯಾದೇವತೆ ಕನಲ್ದು

ಜನಕಜೆಯನುಯ್ಯೆ ದಶರಥ
ತನೂಜರಿಂ ಮರಣಮಾಗಲೆಂದಿರ್ದಪುದೀ
ತನ ಕಯ್ಯೊಳವಲ್ತು ಪುರಾ
ತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ

ಗೆಲಲೆನಗೆ ರಿಪುಬಲಂ ಬ
ಲ್ವಲಮಾದೊಡೆ ಸಿಂಹನಾದಮಂ ಮಾೞ್ಪೆಂ ಬೆಂ
ಬಲಮಾಗಿ ಬರ್ಪುದೆಂದೀ
ಬಲದೇವಂಗಱಿಪಿ ವಾಸುದೇವಂ ಪೋದಂ

ಎಂದು ರಾವಣಂಗೆ ಪೇೞ್ವುದುಮವಂ ರಣಕ್ಷೋಣಿಗೆ ಪೋಗಿ ಲಕ್ಷ್ಮ ಣಂ ಕೇಳದಂತು ವೈಕುರ್ವಣ ಶಕ್ತಿಯಿಂ ಸಿಂಹನಾದಂಗೆಯ್ಯೆನೆ ವಿದ್ಯಾದೇವತೆ ಪೋಗಿ ಅಂತೆಗೆಯ್ವುದುಮಾ ಧ್ವನಿಯುಂ ಕೇಳ್ದು

ಧುರದೊಳ್ ದುರ್ಜಯನಾರ್ಗಮೆನ್ನನುಜನೆಂಬೀ ನಿಶ್ಚಯಂಗೆಟ್ಟು ಸಿಂಹರವಂದೋಱಿದನಾಹವಂ ವಿಷಮುಮೆಂಬೀ ವಿಸ್ಮಯಂ ಚಿತ್ತದೊಳ್ ದೊರೆಕೊಂಡತ್ತು ರಘೂದ್ವಹಂಗಮುೞಿದಂದೆಂತಕ್ಕುಮೋ ಜಾನಕೀ ಹರಣಂ ಕರ್ಮವಿಪಾಕಮಾರ ಬಗೆಗಂ ವೈಕಲ್ಯಮಂ ತಾರದೇ

ಕಾಪಂ ಪೇೞ್ದು ಜಟಾಯುವ '
ನೋಪಳನಿರವೇೞ್ದು ವೈರಿಬಲಮುಂ ತವಿಸಲ್
ಪೋಪಂತಿರೆ ದಂಡಧರಂ
ಚಾಪಧರಂ ಬಲನವಂಧ್ಯ ಕೋಪಂ ಪೋದಂ

ಅನ್ನೆಗಮಿತ್ತಲ್

ಅೞಿಪಿ ಪರವಧುಗಧೋಗತಿ
ಗಿೞಿಪುದನಭಿನಯಿಸುವಂತೆ ಸೀತೆಯ ಸಾರ
ಣ್ಗೆೞಿದಂ ನಭದಿಂ ಖಚರಂ
ಪೞಿಗಂ ಪಾಪಕ್ಕಮಂಜದವರೇಗೆಯ್ಯರ್

ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುಱುವಂ ಕಡಂಗಿ ಕಾಳೋರಗನಂ
ಕೂಸು ಪಿಡಿವಂತೆ ಪಿಡಿದಂ
ಸಾಸಿಗನವಿವೇಕಿ ಸೀತೆಯಂ ದಶಕಂಠಂ

## ೨. ರಾವಣನ ಉದ್ವೇಗ

ಸಮಧಿಕರಾರ್ ಜಗತ್ರ್ರಯದೊಳಿನ್ನೆನಗೆನ್ನೊಳಿದಿರ್ಚುವನ್ನರಾರ್
ಸಮರದೊಳೆಂದು ತನ್ನ ಭುಜದಂಡಮನೀಕ್ಷಿಸಿ ಜಾನಕೀಮುಖಾ
ಬ್ಜಮನವಲೋಕಿಸಲ್ ಕರಮೆ ಕಾತರನಾಗಿ ವಿಯಚ್ಚರಾಧಿಪಂ
ಪ್ರಮದವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ

ಅಂತು ಭೋಂಕನೆ ಬರ್ಪ ರಾವಣನ ಗಂಡಗಾಡಿಯಂ ಕೆಲದೊಳಿರ್ದ ಖಚರಕಾಂತೆಯರ್ ಸೀತಾದೇವಿಗೆ ತೋರ್ಪುದುಂ

ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯ ತೆಱದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್

ಏನಂ ಕೇಳ್ದಪೆನೋ ರಘು
ಸೂನುವ ಲಕ್ಷ್ಮಣನ ಪೊಲ್ಲವಾರ್ತೆಯನಿನ್ನೆಂ
ದಾ ನಳಿನಾನನೆ ಬರ್ಪ ದ
ಶಾನನನಂ ಕಂಡು ತಾಳ್ದಿದಳ್ ತಲ್ಲಣಮಂ

ಅಂತು ತಲ್ಲಣಿಸುತಿರ್ದ ಮಾನಿನಿಯನೆಯ್ದೆವಂದು ದಶಾನನನಿಂತೆಂದಂ ಬಹುರೂಪಿಣೀ ವಿದ್ಯೆ ಸಾಧಿತವಾದುದಿನ್ನೆನಗಸಾಧ್ಯಮಪ್ಪ ಮಱುವಕ್ಕ ಮಿಲ್ಲ ನಿನ್ನ ನಚ್ಚಿನ ರಾಮನ ದೆಸೆಯುಂ ಬಿಟ್ಟೆನಗೊಡಂಬಟ್ಟು ಸಾಮ್ರಾಜ್ಯ ಸುಖಮನನುಭವಿಸೆನೆ ಸೀತೆ ವಿಹ್ವಲೀಭೂತ ಚಿತ್ತೆಯಾಗಿ

ಕರುಣಿಸುವೊಡೆನಗೆ ದಶಕಂ
ಧರ ಧುರದೊಳ್ ರಘುತನೂಜನಾಯುಃಪ್ರಾಣಂ
ಬರೆಗಂ ಬಾರದಿರೆನುತಂ
ಧರಿತ್ರಿಯೊಳ್ ಮೆಯ್ಯನೊಕ್ಕು ಮೂರ್ಛೆಗೆ ಸಂದಳ್

ಜಾನಕಿ ಮೂರ್ಛಿತೆಯಾಗೆ ದ
ಶಾನನನನುಕಂಪೆ ಪುಟ್ಟೆ ಕರುಣಿಸಿ ತನ್ನಂ
ತಾನೆ ಪೞಿದುೞಿದು ಕರ್ಮಾ
ಧೀನ ಸಮುತ್ಪನ್ನದುರಘದುಷ್ಪರಿಣತಿಯಂ

ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟವಲ್ತೆ ನೀಲೀರಾಗಂ

ಪತ್ತುವಿಡದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ ಮನದಳಿಪಿಂ
ದೆತ್ತಾನುಂ ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿರ್ದಪನೇ

ಅಂತು ಮನದೊಳೊಗೆದ ಕಾರುಣ್ಯರಸಮೆ ಸೀತೆಯೊಳಾದನುರಕ್ತತೆಯುಂ ಕರ್ಚಿ ಕಳೆವುದುಂ ಸ್ವಭಾವ ಪರಿಣತಿಯೊಳ್ ನಿಂದು ಸ್ವಕೀಯಾಪ್ತ ಪುರುಷ ಪರಿಷಜ್ಜನಕ್ಕಿಂತೆಂದಂ

ಗುಣಪರಿಪಾಲನಾರ್ಥಮೆನಗಂ ಬಗೆದೋಱಿದಳಿಲ್ಲ ದಿವ್ಯ ಭೂ
ಷಣ ವಸನಾಂಗರಾಗಮುಮನೊಲ್ಲದೆ ಖೇಚರ ರಾಜ್ಯಲಕ್ಷ್ಮಿಯುಂ
ತೃಣಸಮನಾಗೆ ಭಾವಿಸಿದಳೀ ಸತಿಯುಂ ಮೊದಲಾಗಿ ಪೌರುಷ
ಪ್ರಣಯಿಯೆನಿಂತಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ

ಇವರಂ ಪ್ರಾಣಪ್ರಿಯರಂ
ನೆವಮಿಲ್ಲದೆ ಕರ್ಮವಶಮೆ ನೆವಮೆನೆ ಕಂದ
ರ್ಪವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪಳಿವಿನೆಗಂ

ರಾಮನಿನಗಲ್ಚಿ ತಂದಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
ಕಾಮ ವ್ಯಾಮೋಹದಿನಾ
ಶಾ ಮುಖಮಂ ಪುದಿಯೆ ದುರ್ಯಶಃಪಟಹ ರವಂ

ಎನಗೆ ವಿಭೀಷಣಂ ಹಿತಮನಾದರದಿಂದಮೆ ಪೇೞೆ ಕೇಳದಾ
ತನನವಿನೀತನೆನ್ ಗಜಱಿ ಗರ್ಜಿಸಿ ಬಯ್ದನುಜಾತನಂ ವಿನೀ
ತನನಱೆಯಟ್ಟಿ ದುರ್ವ್ಯಸನಿಯೆನ್ ಕಱಿದೆಂ ವ್ಯಸನಾಭಿಭೂತನಾ
ವನುಮನುರಾಗ ವೇಗದೆ ಹಿತಾಹಿತ ಚಿಂತೆಯನೇಕೆ ಮಾಡುಗುಂ

ಜಸದೞಿವಂ ಪರಾಭವದ ಪೆರ್ಚುಗೆಯುಂ ದೊರೆವೆತ್ತ ತಮ್ಮ ಮಾ
ನಸಿಕೆಯ ಕೇಡನುನ್ನತಿಯ ಬನ್ನಮನನ್ಯಭವಾನುಬದ್ಧಮ
ಪ್ಪಸುಗತಿಯುಂ ಸುಹೃಜ್ಜನದ ಬೇವಸಮುಂ ಜನತಾಪವಾದಮುಂ
ವ್ಯಸನಿಗಳಾರುಮೆತ್ತಲಱಿವರ್ ವಿಷಯಾಸವ ಮತ್ತ ಚೇತಸರ್

ಎಂದುದ್ವೇಗಪರನಾಗಿ ನುಡಿದಾತ್ಮಗತದೊಳಿಂತೆಂದಂ

ಇರದುಯಿಮ್ಹಾಗಳೆ ಕೊಟ್ಟೊಡೆನ್ನ ಕಡುಪುಂ ಕಟ್ಟಾಯಮುಂ ಬೀರಮುಂ
ಬಿರುದುಂ ಬೀಸರಮುಕ್ಕುವೋಸರಿಸಿದಂತಾಗಿರ್ಕುಮಂತಾಗದಂ
ತಿರೆ ದೋರ್ಗರ್ವಮನಿರ್ವಲಂ ಪೊಗೞ್ವಿನಂ ಸೌಮಿತ್ರಿಯುಂ ರಾಮನಂ
ವಿರಥರ್ ಮಾಡಿ ರಣಾಗ್ರದೊಳ್ ಪಿಡಿದು ತಂದಾನ್ ಕೊಟ್ಟಪೆಂ
ಸೀತೆಯುಂ

**ನಾಗಚಂದ್ರ–ರಾಮಚಂದ್ರ ಚರಿತ ಪುರಾಣ**

ಸು (೧೧೦೦)

# ೨೭. ಒಳ್ಳೆಯ ಕಾವ್ಯದ ಲಕ್ಷಣ

ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ
ದಸದೃಶಮಪ್ಪಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತು ರಂ |
ಜಿಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ಕವಿರತ್ನನೋಜೆ ಶೋ
ಭಿಸೆ ನೆಲಸಿರ್ಕೆ ಧಾರಿಣಿಮನಂಗೊಳೆ ಮತ್ಕೃತಿಯೊಳ್ನಿರಂತರಂ ||

ರಸಭಾವಂ ಗಮಕಂ ಕಾ
ಣಿಸೆ ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ |
ಕುಸುಱಿಯ ಬಗೆಯಿಂದಿನಿತಱೊ
ಳಿಸೆಯದ ಕೃತಿ ಕೃತಿಯೆ ಬಗೆದು ನೋೞ್ಪೊಡೆ ಜಗದೊಳ್ ||

ಪೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ |
ತಿಸಿ ಕೂಡಲಾರಱದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ ||

ಸಕ್ಕದಮಂ ಪೇೞ್ವೊಡೆ ನೆಱೆ
ಸಕ್ಕದಮಂ ಪೇೞ್ಗೆ ಸುದ್ಧಗನ್ನಡದೊಳ್ತಂ |
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ||

ಪರಿಣತರೆನಿಸುವ ನಿರ್ಮ
ತ್ಸರರಂ ಮೆಚ್ಚಿಪುದು ಗಹನಮಲ್ಲದು ಜಡರಂ |
ಕರಮಱಿದು ತಿಳಿಪಲೆಂತೆನೆ
ಖರಕರನಂ ಗೂಗೆಗೆಯ್ದೆ ತೋರ್ಪಂತಕ್ಕುಂ ||

ಪೊಲ್ಲಮೆಗಂಡದನಱಿದುಂ
ಮೆಲ್ಲನೆ ಸಯ್ತಾಗೆ ತಿರ್ದುವರ್ಸುಕವೀಶರ್ ।
ಪೊಲ್ಲಮೆಯಿಲ್ಲದೊಡಂ ಲೇ
ಸಲ್ಲದು ಕೃತಿಯೆಂದು ಕುಕವಿನಿಕರಂ ಪೞಿಗುಂ ॥

ಮಱೆಯಿಲ್ಲದೆ ಪೊಯ್ನೀರಿಂ
ಬೆಳೆಗುಮೆ ಧರೆ ಮೞುಗಿ ಕುದಿದು ಶಾಸ್ತ್ರದ ಬಲದಿಂ ।
ದಳಿಪಿಂ ಪೇೞ್ವೊಡಮದು ಕೋ
ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ ॥

ಉಪ್ಪಿಲ್ಲದೆ ಕೇಳೊಕ್ಕಳ
ತುಪ್ಪವನೆೞೆದುಣ್ಬೆನೆಂಬೊಡುಂಬುಣಿಸೇಂ ಸ್ವಾ
ದಪ್ಪುದೆ ಸಹಜಂ ತನಗಿನಿ
ಸಪ್ಪೊಡಮಿಲ್ಲದನ ಕವಿತೆ ರುಚಿವಡೆದಪುದೇ ॥

**ನಯಸೇನ-ಧರ್ಮಾಮೃತ**
(೧೧೦೦)

# ೨೮. ಸುನೀತಿಸಾರ

ಉಡುಗದೆ ಸೊರ್ಕಿದಂದದೊಳೆ ಗೆಲ್ವೆಡೆಯೊಳ್ ಸಲೆ ಬಾಯ್ಗೆವಂದುದಂ
ನುಡಿವರಟಿಲ್ದು ಸೋಲ್ತು ಪದದೊಳ್ ದೆಸೆಗಾಣದೆ ಮಾನ್ಯರಪ್ಪರಂ
ಜಡಿವರನರ್ಥಮಂ ಬಗೆಯರಂತದಱಿಂದಮೆ ಜೂದನಾಡಲುಂ
ನುಡಿಯಲುಮಾಗ ಸದ್ಗುಣಿ ವಿಭಾವಮನೆಯ್ದುವನೆಂಬ ದೂಸಱಿಂ

ಆವಂಗಂ ತನ್ನಿಂದಂ
ಸಾವುಂ ಕೇಡುಂ ಭಯಂಗಳುಂ ವಿಕಳತೆಯುಂ
ನೋವುಮಿನಿಸಾಗದಂತಿರ
ಲಾವಂ ಸಲೆ ನುಡಿವನೆಂತುಮಾತನೆ ದೇವಂ

ಅಪವರ್ಗೋಚಿತಮಾರ್ಗಮುಸ್ತದುರಿತಾತಂಕಂ ಸದಾಚಾರಸೌ
ಖ್ಯಪದಂ ಸಜ್ಜನಸನ್ನುತಂ ಬಗೆಯೆ ಸತ್ಯಂ ನಾಸ್ತಿ ಸತ್ಯಾತ್ಪರಂ
ತಪ ಎಂದಿರ್ದಪುದಾಗಮೋಕ್ತಮದಱಿಂದಾರಾದೊಡಂ ಸತ್ಯವಾ
ಕ್ಯಪವಿತ್ರೀಕೃತವಕ್ತ್ರರಾಗಿ ಪಡೆಯಿಂ ನಿರ್ವಾಣಕಲ್ಯಾಣಮಂ

ಕಲಿಸದೆ ಮುಂ ಪೆಱಪೆಱತಂ
ಕಲಿಪುದು ಮಕ್ಕಳ್ಗೆ ದೇವತಾರಾಧನೆಯಂ
ಕಲಿಸುವುದು ಜೀವದಯೆಯುಂ
ಕಲಿಪುದು ಸತ್ಪಾತ್ರಮಱಿದು ದಾನಮನೀಯಲ್

**ಬ್ರಹ್ಮಶಿವ–ಸಮಯಪರೀಕ್ಷೆ**
ಸು. (೧೧೨೫)

## ೨೯. ವನಶ್ರೀ

ಅನುಪಮಮಮಾಗೆ ಬಂದ ನನೆ ನುಣ್ಣನೆ ಗೊಂದಳಿಸಿರ್ಪ ಕೆಂದಳಿರ್
ಕೊನರ ಸುಸೌರಭದ್ರುವದ ಸೇವೆಯಿನುರ್ವಿ ಕುಕಿಲ್ವ ಕೋಕಿಳಂ
ಘನತರದಿಂಚರಂ ನೆಗೆಯೆ ಮುಂಚಿನ ಪೂವಿನ ಗೊಂಚಲಂ ಕರಂ
ಜನಿತವಿಮೋಹದಿಂ ಮುಸುಱಿ ಮುತ್ತುವ ಮತ್ತಮದಾಳಿ ಮಾವಿನೊಳ್

ಸ್ಮರನೆನ್ನಲರಂಬಿಂದಂ
ಹರಿಹರಸರಸಿರುಹಗರ್ಭರಂ ಗೆಲ್ದನೆನು
ತ್ತುರುಮುದದಿಂದಂ ಬಿಬ್ಬರ
ಬಿರಿವಂತಿರೆ ಬಿರಿದುವಂದು ಮಲ್ಲಿಗೆ ವನದೊಳ್

ಬಗ್ಗಿಪ ಪಿಕಾಳಿ ಕಳಕಳಿ
ಪೊಗ್ಗಿನ ಗಿಳಿ ಮೊರೆವ ತುಂಬಿ ಯೆಂಬಿವು ತನಗಂ
ದಗ್ಗದ ಪರಿಜನವಾಗಲ್
ಸುಗ್ಗಿಯೊಳಾ ಮದನನೃಪತಿ ಬನದೊಳಗಿರ್ದಂ

ಪಡಿಯಱವಕ್ಕಿಗೆ ಕೊನರಂ
ಪಡಯನಗಾಯಕಚಯಕ್ಕೆ ಪೂವಂ ಮಿಡಿಯಂ
ನುಡಿದೊಪ್ಪುವ ಗಿಳಿಗಿತ್ತಂ
ಮೃಡರಿಪು ಜೀವಿತಮನವಕೆ ಚೂತವ್ರಜದೊಳ್

ಒದವಿರಲಂಧಕಾರಮುರುಚೂತಮಹೀಜಸಮಾಜಮಧ್ಯದೊಳ್
ಪುದಿದಡರ್ದಿರ್ದ ಕುಟ್ಮಳನಿಕಾಯವಿಕೀರ್ಣತೆವೆತ್ತು ಶೋಭೆಯಿಂ
ಮದನನ ರಾಜಗೇಹನಿವಹಂಗಳೊಳೊಪ್ಪುವ ದೀಪಮಾಲೆ ಯೆಂ
ಬುದನೆನಿಸಿತ್ತು ಸಂಪಗೆ ಕರಂ ಮಿಗೆ ಕಂಪುಗೆ ನಂದನಂಗಳೊಳ್

ಮದನಪ್ರತಾಪಪಾವಕ ,
ನೊದವಿದ ಜಿಹ್ವಾಕಳಾಪದುರ್ವ್ವೆನೆ ತಳಿರಿಂ
ಪುದಿದೆಸೆದು ಕುಸುಮಿಸಿದಶೋ
ಕದ ಭೂಜವ್ರಾತಮೆಸೆದುವಂತಾ ಬನದೊಳ್

**ಕರ್ಣಪಾರ್ಯ–ನೇಮಿನಾಥ ಪುರಾಣ**

ಸು. (೧೧೫೦)

## ೩೦. ಬಂಧುರ ಕಾವ್ಯನಿಬಂಧ

ಪ್ರತಿಭಾನಂ ಕಾವ್ಯವಿದ್ಯಾಪ್ರಚಯಪರಿಚಯಂ ವೃದ್ಧಸೇವಾನುರಾಗಂ
ಸತತಾಭ್ಯಾಸಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇೞ್ವೊಡಂತಾ
ಪ್ರತಿಭಾನಂ ಶಕ್ತಿ ಲೋಕಾಗಮಸಕಲಕಲಾವೇದನಂ ವಿದ್ಯೆ ಶಾಸ್ತ್ರಾ
ನ್ವಿತನಪ್ಪಂ ವೃದ್ಧನಾಲಸ್ಯಮನುೞಿದೆಸಪುದ್ಯೋಗಮಭ್ಯಾಸಕರ್ಮಂ

ಶ್ರುತವಾರಿನಿಧಿಯ ಪಾರಮ
ನತಿಪ್ರಬಂಧಾಭಿಯೋಗರಾರೆಯ್ದಿದೊಡೇಂ
ಕೃತಪುಣ್ಯಂಗಲ್ಲದೆ ವಿ
ಶ್ರುತಕವಿತಾರತ್ನಮಲ್ಲಿ ಸಂಭವಿಸುಗುಮೇ

ಮದಮಿಲ್ಲದಿಭಂ ಮಧುವಿ
ಲ್ಲದ ಕುಸುಮಂ ಚಂದ್ರನಿಲ್ಲದಿರುಳಾಳಾಪ್ಪಿ
ಲ್ಲದ ನೃಪತಿ ಕವಿತೆಯಿಲ್ಲದ
ವಿದಗ್ಧತಾಗುಣಮದೇಂ ಮನಂಗೊಳಿಸುಗುಮೇ

ಪರಮಪ್ರೀತಿನಿಮಿತ್ತಂ
ನಿರತಿಶಯಯಶೋನಿದಾನಮಪ್ಪುದಱಿನಿಹಂ
ಪರಮೆಂಬೆರಡರ್ಕ್ಕಂ ಬಂ
ಧುರಕಾವ್ಯನಿಬಂಧದಿಂ ಹಿತಂ ಪೆಱತುಂಟೇ

ಕೃತಿಸತಿಯ ಮೆಯ್ಯೊಳೆಳ್ಳನಿ
ತು ತಾನದೊಂದಱಿಯೆ ದೋಷಮಾಗೆ ತದಾವ।
ರ್ಜಿತಮಪ್ಪ ಕೀರ್ತ್ತಿಯುಂ ನಿಂ
ದಿತಮಕ್ಕುಂ ದರ್ಪಣಾರ್ಪಿತಚ್ಛಾಯೆಯವೊಲ್

ಅದಱಿಂದುಪೇಕ್ಷೆಗೆಯ್ಯದೆ ,
ಸದಭಿಮತೋದಾತ್ತಕೀರ್ತಿಯಂ ಬಯಸುವವಂ
ಪದವಾಕ್ಯಾರ್ಥಂಗಳೊಳೊಂ
ದದಂತು ಪಿಂಗಿಸುಗೆ ದೋಷಮಂ ಕೃತಿಯಿಂದಂ

**ನಾಗವರ್ಮ ೨ – ಕಾವ್ಯಾವಲೋಕನ**
ಸು. (೧೧೪೫)

## ೩೧. ಗಿರಿಜೆಯ ಬಾಲ್ಯ

ಇಂತು ಸಕಲಸೌಂದರ್ಯಮಂ ಬೀಱುವ ಬಾಲದುಡಿಗೆವೆರಸು ಲೀಲೆ ಮಿಕ್ಕು,

ತರದಿಂ ಗೆಜ್ಜೆಗಳುಲಿಯು-
ತ್ತಿರೆ ಮಾಂಗಾಯುಲುಗೆ ಮೂಡೆ ಮೆಲ್ಲಗೆ ನಲವಿಂ
ಪರಿಪಂದು ಪೋಗಿ ಗಿರಿಸುತೆ
ಹರಿಸಂ ಮಿಗೆ ಹರನ ನಿಳಯದೊಳ್ ನೆಲೆಸಿರ್ಪಳ್

ನಲಿವಳ್ ನಗುವಳ್ ರಾಗಿಪ-
ಳುಲಿವಳ್ ಮುದ್ದಿಸುವಳಳುವಳಪ್ಪುವಳಂತಿಂ-
ತೊಲಿವಳ್ ನಿಲ್ವಳ್ ಮೇನೆಯ
ಮೊಲೆಯಂ ಮಱೆದಭವನಾಟದೊಳ್ ಸಂದಿರ್ಪಳ್

ಎಲ್ಲಿ ಸರೋಜಮೆಲ್ಲಿ ವಿಮಳೋತ್ಪಲಮೆಲ್ಲಿ ಲತಾವಿತಾನದೊ-
ಳ್ಪೆಲ್ಲಿ ವನಂಗಳೆಲ್ಲಿ ಕೃತಕಾಚಳಮೆಲ್ಲಿ ವಿಶಾಲಮಪ್ಪ ತ-
ಣ್ಪೆಲ್ಲಿ ತಟಾಕಮೆಲ್ಲಿ ಪುಳಿನಸ್ಥಳಮೆಲ್ಲಿ ನದೀನದಾಳಿ ತಾ-
ನಲ್ಲಿ ಭವಾನಿ ಭಕ್ತಿ ಮಿಗೆ ಭಾವಿಸಿ ಭರ್ಗನನೊಲ್ದು ಪೂಜಿಪಳ್

ಕಣ್ಮಲರಿಂದಶ್ರುಜಲಂ
ಪೊಣ್ಮುತ್ತಿರೆ ತನುವಿನಲ್ಲಿ ಪುಳಕಂ ಸಾಲ್ಗೊಂ-
ಡುಣ್ಮುತ್ತಿರೆ ಗಿರಿಪತಿಸುತೆ
ನುಣ್ಮಳಲಿಂ ದಿವ್ಯಲಿಂಗಮಂ ವಿರಚಿಸುವಳ್

ವಿರಚಿಸುವ ಲಿಂಗದೊಳ್ ಮೃದು-
ಕರಾಂಗುಲಿಸ್ಪರ್ಶಸುಖಮನೆಳಸುತೆ ಶರ್ವಂ
ಪರಿತಂದು ನಿಲ್ವನೆಂದೊಡೆ
ಗಿರಿಜೆಯ ಸೌಭಾಗ್ಯದಿರವನಾರ್ ಬಣ್ಣಿಸುವರ್

ಇಂತು ಬಾಲಲೀಲೆ ಶಿವಲೀಲೆಯಾಗಿ ಕೆಲನಱಿಯದೆ ಬಲನಱಿಯದೆ ಪಸಿವಱಿಯದೆ ತೃಷೆಯಱಿಯದೆ ದೆಸೆಯಱಿಯದಿರುಳ್ಪಗಲಱಿಯದೆ ಪರಿಜನಮಂ ಪರೀಕ್ಷಿಸದೆ ಶಿವನಂ ಮರುಳ್ಗೊಂಡು ಭವಾನಿಯಿರೆ ಕಂಡು ಕೌತುಕಂಗೊಂಡು ಸಹಚರಿಯರ್ ತಮತಮಗಂಜಿ ಭಾರತಿಗೋರನ್ನಳಪ್ಪ ನಾರಿಯೊರ್ವಳಂ ಗಿರಿರಾಜನಲ್ಲಿಗೆ ಭರದಿಂ ಕಳುಪಿದೊಡಾ ತರುಣಿ ಭೀತಿಯಿಂ ಪರಿತಂದರಮನೆಯಂ ಪೊಕ್ಕು ಓಲಗದೊಳ್ ನಿಂದು ನಗಾಧಿಪಂಗೆ ನಯಂ ಮಿಗೆ ಭಯಭಕ್ತಿಯಿಂ ಮೆಯ್ಯಿಕ್ಕಿ ಕೆಯ್ಮುಗಿದು ನಿಂದು,

ದೇವ ಕುಮಾರಿ ಬಾಲೆ ಸುಕುಮಾರಿ ಸಮರ್ಥೆಯತಿಸ್ವತಂತ್ರೆ ನಾ-
ನಾವಿಧಶೈಲರಾಜಿ ವನರಾಜಿ ಸರೋವರರಾಜಿ ಸಲ್ಲತಾಂ-
ತಾವಳಿ ಸೈಕತಾವಳಿ ಲತಾವಳಿಯೆಂಬಿವಱಲ್ಲಿ ಸಂತತಂ
ದೇವರ ದೇವನಂ ಶಿವನನರ್ಚಿಸುತಿರ್ದಪಳೊಲ್ಲಳೇನುಮಂ

ಬರೆದರೊ ಬೈತರೊ ಪೊಲ್ದರೊ
ಪೊರೆದರೊ ಬೆಚ್ಚರೊ ಮಗಳ್ಗೆ ಕಱುವಿಟ್ಟರೊ ಕಂ-
ಡರಸಿದರೊ ಕಡೆದರೋ ಎನೆ
ಗಿರಿರಾಜತನೂಜೆ ಪೂಜೆಯೊಳ್ ರಾಜಿಸುವಳ್

ಬೇಡೆಂದೊಡೆ ಮಾಣಳ್ ನಲಿ-
ದಾಡುವಳಪ್ಪುವಳಮರ್ಚುವಳ್ ಪುಳಕಿಪ್ಪಳ್
ಮಾಡುವ ಲಿಂಗಾರ್ಚನೆಯೊಳ್
ನೋಡಳ್ ನುಡಿಯಳ್ ಭವಾನಿಯೇನೆಂದಱಿಯಳ್

**ಹರಿಹರ–ಗಿರಿಜಾಕಲ್ಯಾಣ**
ಸು. (೧೨೦೦)

## ೩೨. ತಪೋಮೂರ್ತಿ ವಿರೂಪಾಕ್ಷ

ವಿಳಸತ್ಪದ್ಮಾಸನಂ ಭಾಸುರಭರಿತವಪುರ್ವಲ್ಕಲಂ ಧ್ಯಾನಮುದ್ರಾಂಗುಳಿ ರುದ್ರಾಕ್ಷಾಕ್ಷಮಾಲಾರುಚಿನಳಿನಗುಣವ್ರಾತಯಜ್ಞೋಪವೀತಂ ಲಳಿತಾಸ್ಯಂ ಸ್ನಿಗ್ಧಗಂಡಂ ಮುಕುಳಿತನಯನಂ ಚಿತ್ತನಿಷ್ಕಂಪನಂ ಪಿಂಗಳವರ್ಣೋದ್ಯಜ್ಜಟಾಮಂಡಳಮೆಸೆಯೆ ತಪೋವೇಷದಿಂದೀಶನಿರ್ದಂ

ಇದು ವಿದ್ಯುತ್ಪ್ರಭವಪ್ರಭಾಪ್ರಸರಮೋ ಸಂಪೂರ್ಣಚಂದ್ರಾಂಶುಸಂಪದಮೋ ಶಾಶ್ವತಸೂರ್ಯಕೋಟಿರುಚಿಪ್ರದ್ಯೋತಮೋ ಮೀಱಿ ಪೊಣ್ಮಿದ ಸರ್ವೇಶನಿಜಪ್ರಕಾಶನಿಧಿಯೋ ಪೇಳೆಂಬಿನಂ ತೋಱುತಿರ್ದುದು ದಿಕ್ಸಂಕುಳನಿರ್ಮಳೀಕೃತವಿರೂಪಾಕ್ಷಪ್ರಭಾಮಂಡಲಂ

ಇರೆ ಕಾಣುತೆ ಗಿರಿರಾಜಂ
ಪರಮಸುಖಂಬಡೆದು ಪಿಡಿದು ಮೆಲ್ಲಡಿಗಳನಾ-
ದರದಿಂ ಹರ್ಷಂ ಮೂಡು-
ತ್ತಿರೆ ಪುಳಕದ ಮೆಯ್ಯೊಳೊಲ್ದು ಮೆಯ್ಯಿಕ್ಕಿರ್ದಂ

ಅಂತು ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು ಪಾರ್ವತಿಯಂ ಕರೆದು,

ನಿಧಿಯಿದೆ ಭಕ್ತರ ಬಯ್ಕೆಯ
ನಿಧಾನವಿದೆಯಚ್ಚಶರಣರನುವಿದೆ ಕರುಣಾಂ-
ಬುಧಿಯಿದೆ ಸುಧೆಯಿದೆ ಕೇಳ್ ನಿ-
ನ್ನಧಿಪಂ ಶಶಿಮೌಳಿಯೆಂಬ ಕಲ್ಪಮಹೀಜಂ

ಸದಮಳಮಿದೆ ಪರತತ್ತ್ವದ
ನಿಧಾನಮಿದೆಯಾದ್ಯರಱಿದು ಕುಱುಪಿಟ್ವಾನಂ-
ದದ ಮೊದಲಿದೆ ಪರಮಾರ್ಥದ
ತುದಿಯಿದೆ ಗಿಂಜಾತೆ ನೋಡು ನೆನೆ ಹೊಗಳೆಂದಂ

ಎಂದು ಗಿರಿರಾಜಂ ಹರನಪರತತ್ತ್ವಮುಮಂ ಸೌಂದರ್ಯರೂಪಮುಂ ಗಿರಿಜೆಗೆ ತೋಱುತ್ತುಂ ಪೊಡೆಮಡು ಪೊಡೆಮಡೆನೆ ಪಾರ್ವತೀದೇವಿಗೆ ಕೌತುಕ ರಸದೊಳಾನಂದಂ ಪುಟ್ಟೆ ಭಯರಸದೊಳ್ ಭಕ್ತಿಯುಣ್ಮೆ ಸ್ನೇಹರಸದೊಳ್ ತಾತ್ಪರ್ಯಂ ಪೊಣ್ಮೆ ಶೃಂಗಾರರಸದೊಳ್ ಲಜ್ಜೆವೆರಸಿ ಕಲ್ಪತರುವಿನ ಬೀಳಲ್ ಮಹಾನಿಧಾನಕ್ಕೆಱಗುವಂತೆ ಮಂದಾನಿಳನ ಸೋಂಕಿಂದಂ ಪುಷ್ಪಮಾಲೆ ಬಳ್ಕುವಂತೆ ಕುಸುಮಚಾಪಂ ಕಾಲ್ಗೆಱಗುವಂತೆ ಪಂಚಬಾಣಂ ಹೊಡೆಗೆಡೆವಂತೆ ಮುಂದೆ ನಿನ್ನ ವಾಮಭಾಗಮಂ ಸೂಱೆಗೊಳ್ವುದರ್ಕಿದೆ ಕುಱುಪೆಂಬಂತೆ ಬಿಂಕದಿಂ ಕೊಂಕಿ ನಿಂದು ವಿಲಾಸದಿಂದೆಡದುಂಗುಟಮಂ ಲಲಾಟದಿಂ ಮುಟ್ಟೆ ಪೊಡೆಮಟ್ಟು ನಿಂದು,

ಆನಿರ್ದಂತಿರದೇಕೆ ಬೇಡ ತಪವೆಂದೆಂಬಂತಹಂಕಾರದಿಂ
ನೀನೇ ಸದ್ಗತಿ ದೇವದೇವ ದಯೆಗೆಯ್ಯೆಂಬಂತೆ ಕಾರ್ಪಣ್ಯದಿಂ
ಸಾನಂದಾತ್ಮಕನೆನ್ನನೇಕಜೀವನೆಂದೆಂಬಂತೆ ನಿರ್ವೇದದಿಂ
ನಾನಾಭೋಗದೊಳೆಂದು ಕೂಡಿದಪೆನೆಂಬಂತಾಸೆಯಿಂ ನೋಡಿದಳ್

ಶಿವನೀತಂ ನಿಜವಲ್ಲಭಂ ಮಮಗುರು ಪ್ರಖ್ಯಾತನತ್ಯೂರ್ಜಿತಂ
ಭವನೆನ್ನಾಳ್ದನೆನಿಪ್ಪುದಂ ತಿಳಿದೆನಾಂ ನೀಂ ಪೋಗು ನಿತ್ಯಾರ್ಚನೋ-
ತ್ಸವದಿಂ ಸಂತಸದಿಂ ಸದಾತುರತೆಯಿಂ ಸಾನಂದದಿಂದಿರ್ಪೆನೆಂ-
ದು ವಿಳಾಸಾಬ್ಧಿ ಭವಾನಿ ನೋಡಿ ನುಡಿದಳ್ ಭೂಭೃತ್ಕುಲಾಧೀಶನೊಳ್

**ಹರಿಹರ–ಗಿರಿಜಾಕಲ್ಯಾಣ**
ಸು. (೧೨೦೦)

## ೩೩. ಪುಷ್ಪಾರ್ಚನೆ

ಪರಿಮಳದಧಿದೇವತೆಯೋ
ವರಕುಮುದದ ಕೂಡೆ ಬಂದ ಶಶಿಕಳೆಯೋ ವಾ-
ರಿರುಹದ ನಡುವೆಯ್ದುಂದಿಂ-
ದಿರೆಯೋ ಎನೆ ದೇವಿ ಪೂವನೋವುತ್ತಿರ್ದಳ್

ಅಂತೋವುತ್ತುಮಿರ್ದು,

ಮುಟ್ಟಿದೊಡಾಗಾಳೆ ಕಂದುವ
ನೆಟ್ಟನೆ ನೋಡಿದೊಡೆ ಕೋಡಿ ಬಾಡುವ ನೆನೆಯಲ್
ತೊಟ್ಟನೆ ಕೊರಗುವ ಪೂವಂ
ಕಟ್ಟುವ ಪರಿಯೆಂತೆನುತ್ತೆ ಚಿಂತಿಸುತಿರ್ದಳ್

ಅಂತು ಚಿಂತಿಸಿ ನೋಡಿ ಭಕ್ತಿಯೊಳ್ ಕೂಡಿ ಪೂಜಿಸಲ್ವೇಡಿ ಪೂವಂ ಪೂ ಸೋಂಕೆ ಕೊರಗದೆಂಬಂತೆ ತನ್ನ ಕರಕಮಲಮಂ ನೀಡಿ,

ಅತಿಸುಕುಮಾರೆ ಸುಖಾಕರೆ
ನುತಗುಣಗಣಯುಕ್ತೆ ಶಾಂತೆ ಸಾತ್ತ್ವಿಕರೂಪಾ-
ನ್ವಿತೆ ಸರ್ವಕಳಾನಿಧಿ ಪಾ-
ರ್ವತಿ ಸತಿ ಶತಪತ್ರಸೂತ್ರಮಂ ತೆಗೆಯುತ್ತುಂ

ವದನಕ್ಕಂ ಕುಸುಮಕ್ಕಂ
ಪದೆದೆಱಗುವ ಮಧುಕರಂಗಳಂ ಸೋವುತ್ತುಂ
ಮೃದುತರಸರಳಾಂಗುಲಿಯಿಂ
ಸದಮಲೆಯಿರವಂತಿಯರಲನೊಲವಿಂ ಪಿಡಿದಳ್

ಇರುಳುಂ ಪಗಲುಂ ಕಾಮಂ
ತರದಿಂ ತೆಗೆದೆಚ್ಚ ಕುಸುಮಬಾಣಮಿದೆಂದಾ
ಗಿರಿಶಂಗೆ ತೋರ್ಪ ತೆಱದಿಂ
ನೆರಪಿದಳಭವಾಂಘ್ರಿಗಳ್ಗೆ ಪುಷ್ಪಾಂಜಲಿಯಂ

ಭರದಿಂದಂ ನವಕುಸುಮಾ-
ಭರಣಂಗಳನಭವನಂಗದೊಳ್ ಸಿಂಗರಿಸು
ತ್ತುರಳುತ್ತುಱ್ಱುತೆ ಕೊಱ್ಱುತೆ
ಗಿರಿಸುತೆ ನಱುಸುಯ್ಯ ಧೂಪಮಂ ಪದೆದಿತ್ತಳ್

ಇಂತು ಪಾರ್ವತಿ ಪಲವುಂ ಭೋಗಂಗಳಂ ರಾಗದಿಂ ರಾಜಮೌಳಿ-ಗೊಲ್ದು ಪೂಜೆಯ ನೆವದಿಂ ನಿವೇದಿಸಿ ಸಂಪದಮನೋಲಗಿಪ ಸಿಂಗರ-ದಂತೆ ಧರ್ಮಮಂ ಬಳೆಯಿಸುವ ಸಂಪದದಂತೆ ಪುಣ್ಯಮಂ ಸೇವಿಪ ಧರ್ಮದಂತೆ ಭಕ್ತಿಯಂ ಬಯಸುವ ಪುಣ್ಯದಂತೆ ಶಿವಜ್ಞಾನಮನೆಳೆಸುವ ಭಕ್ತಿಯಂತೆ ಮುಕ್ತಿಯಂ ನಿಶ್ಚಯಿಪ ಶಿವಜ್ಞಾನದಂತೆ ಶಿವಸಂಗಮಂ ಬಯಸಿ ಮನ್ಮಥಮನೋರಥದುರ್ಲಭವಲ್ಲಭನಂ ನೋಡುವಾಗಳ್

ಪೊಸಜೆಡೆಯೊಳ್ ತೊಡಂಕಿ ನೊಸಲೊಳ್ ನಡೆಪಾಡಿ ಕಪೋಲಭಾಗದೊಳ್ ಪಸರಿಸಿ ಲೋಚನಂಗಳೊಳಮರ್ಚಿ ತದಾಸ್ಯದೊಳೊಂದಿ ಕಂಠದೊಳ್ ಮಿಸುಗಿ ಭುಜಾಗ್ರದೊಳ್ ತೊಳಗಿ ವಕ್ಷದೊಳಾಳ್ದು ಕರಂಗಳೊಳ್ ವಿರಾ-ಜಿಸಿ ಪದದಲ್ಲಿ ಬಿಳ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್

ಬೆಮರ್ವಳ್ ಬೆಚ್ಚುವಳುಱ್ಱುವ
ಳಮರ್ವಳ್ ಪೆರೆಸಾರ್ವಳಂಜಿ ನಿಲ್ವಳ್ ಸೋಂಕಲ್
ನಿಮಿರ್ವಳ್ ನೆನೆವಳ್ ಮುನಿವಳ್
ಸಮಸಲ್ವಳ್ ಗಿರಿಜೆ ಸೆಡೆದು ಸುಯ್ವಳ್ ಕಾಯ್ವಳ್

ಚಾರುತರಕಾಂತಿಮುಯುಸುಕು-
ಮಾರಾವಯವಂಗಳಂ ನಿರೀಕ್ಷಿಸಿ ನಲಿವಳ್
ತಾರಾಚಳನಾಥನ ಘನ-
ವೈರಾಗ್ಯಕ್ಕಂಜಿ ನಡುಗಿ ಸಿಡಿಮಿಡಿಗೊಳ್ವಳ್

ಹರನಂ ಶಿವನಂ ಮೃಗಧರ-
ಧರನಂ ಸುಸ್ನೇಹಮುಡರೆ ನವನವಕುಸುಮೋ-
ತ್ಕರದಿಂದೆ ನಚ್ಚಿ ಮಚ್ಚಿಯೆ
ಗಿರಿಜಾವಧುವರ್ಚಿಸುತ್ತುಮಿರ್ಪಿನಮತ್ತಲ್

**ಹರಿಹರ–ಗಿರಿಜಾಕಲ್ಯಾಣ**
ಸು. (೧೨೦೦)

## ೩೪. ಕಾಮದಹನ

ತೆಗೆದಾಕರ್ಣಂಬರಂ ಶಂಬರರಿಪು ನೆಱೆ ಹೂಡಿರ್ದ ಪುಷ್ಪಾಸ್ತ್ರದೊಂದು-
ಜ್ಜುಗಮಾಕಾಶಸ್ಥನಾಕೌಕರೊಳೊದವಿದನೂನಾರ್ತಿ ಕೂರ್ತೆಯ್ದೆ ನಿಂದಿ-
ರ್ಪ ಗಜಾಚಿತ್ತಾಭಿಲಾಷಾವಿತತಿ ನೆರೆದು ಭೂತೇಶಚಿತ್ತಾಂತದೊಳ್ ಪೊ-
ಕ್ಕು ಗಭೀರೋದ್ಯತ್‌ತಪೋಬೀಜಮನತಿಭರದಿಂದೊತ್ತಿ ಮುತ್ತಿತ್ತು ಸುತ್ತಂ

ನೋಡದ ಮುನ್ನಂ ಕೋಪಂ
ನಾಡೆಯುಮೊತ್ತರಿಸಿ ನೀಳ್ದ ನಿಟಿಲೇಕ್ಷಣದೊಳ್
ಕೂಡೆ ಬಳೆಬಳೆದು ಸುಳಿಸುಳಿ-
ದೀಡಿಱಿದೊಳಗೊಳಗೆ ಘುಳುಘುಳಿಸಿ ಕುದಿದಾಗಳ್

ಪೊಗೆದುದು ಪೊತ್ತಿದತ್ತು ಕಿಡಿಯಿಟ್ಟುದು ನಾಲ್ದೆಸೆದೋಱಿದತ್ತು ಬಾನ್-
ಗೊಗೆದುದು ನಿಂದು ಪೊಂಬೆಳಗುಮಂ ಪರಪುತ್ತುದು ಧಂ ಧಗಿಲ್ ಧಗಿಲ್
ಧಗಿಲೆನುತಟ್ಟಿತಟ್ಟಿದುದು ಮುಟ್ಟಿತು ಸುಟ್ಟಿತು ತಿಂದು ತೇಗಿದ-
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ

ಅರರೇ ಭುಘುರ್ಗು ಭಾಪುರೇ ಭುಗುಭುಗು ಪ್ರಜ್ವಾಲೆ ಮಜ್ಜಯ್ಯ ದೇ-
ವುರೆ ಮೇಘಾನಲವಿಸ್ಫುಲಿಂಗಮುಮಮ ಪ್ರದ್ಯೋತವಯ್ಯಯ್ಯ ಭೀ-
ಕರವಾಹಾ ಛಿಣಿಛಿಳ್ ಛಿಟಿಲ್ ಭಲರೆ ಭಾಳಾಭೀಳಮೆಂದೆಂದು ನಿ-
ರ್ಜರಲೋಕಂ ಬೆಱಗಾಗೆ ಸುಟ್ಟುದು ವಿರೂಪಾಕ್ಷಾಕ್ಷಿ ಕಂದರ್ಪನಂ

ಇಂತತಿಸ್ವತಂತ್ರಂ ಶತಪತ್ರನೇತ್ರಪೂಜಿತಪಾದಂ ಹೇಮಕೂಟಾಗ್ರದ ಮತಂಗಪರ್ವತದೊಳ್ ಮದನನಂ ಸುಟ್ಟುರುಪುತ್ತನಂಗಭಸ್ಮೋದ್ಧೂಳಿತಗಾತ್ರನಾಗಿ,

ಮುಂತಿರ್ದೊಪ್ಪುವ ಗಿರಿಜಾ-
ಕಾಂತೆಯನೀಕ್ಷಿಸದೆ ನುಡಿಯಿಸದೆ ಸೋಂಕದೆ ನಿ-
ಶ್ಚಿಂತಂ ಸ್ವತಂತ್ರನಹಿಧರ-
ನಂತರ್ಧಾನಕ್ಕೆ ಸಂದನಲ್ಲಿಂ ಬಳಿಯಿಂ

**ಹರಿಹರ–ಗಿರಿಜಾಕಲ್ಯಾಣ**

ಸು. (೧೨೦೦)

# ೩೫. ರತಿಪ್ರಳಾಪ

ಶಿವನಧಿಕಾಕ್ಷಕ್ರೋಧೋ-
ದ್ಭವಶಿಖಿಯಿಂ ಮದನನುರಿಯೆ ರತಿಗತಿಶೋಕಂ
ಕವಿದಳ್ಕಿದಳಿಂದುಗುಪ-
ಪ್ಲವಮಾಗೆ ಚಕೋರಿ ಕರಗಿ ಕೊರಗುವ ತೆಱದಿಂ

ಇಂತು ಮನಮಳ್ಕಿ ತನು ಬಳ್ಕಿ ಕೋಡಿ ಕರಣಂ ಬಾಡಿ ಮತಿ ಕೆಟ್ಟು ರತೀದೇವಿಗತಿದುಃಖಂ ಪುಟ್ಟೆ ನಿಲಲಾಱದೆ ಕೊರಗುತುಂ ಪರಿದು ಬಂದು,

ಬೆಂದಿರ್ದ ಕಾಮನಂ ಕಂ-
ಡಂದಳಲೊಳಗೇಱಿ ನುಡಿಯಲಱಿಯದೆ ನಿಲೆ ಶೋ-
ಕಂ ದಳವೇಱುತೆ ಮೀಱುತೆ
ಸಂದಣಿಸುತ್ತಳಿಸಿತಸ್ತರತಿಯುಂ ರತಿಯಂ

ಅದೆಂತೆಂದೊಡೆ,

ಎತ್ತಣ ಹರನೆತ್ತಣ ತಪ-
ಮೆತ್ತಣ ತಾರಕನ ಬಾಧೆ ಎತ್ತಣ ಬಿಸುಗಣ್-
ಎತ್ತಣುರಿ ಎತ್ತಣೆರವಿದು
ಎತ್ತಣ ಕೋಟಲೆಯನೆನಗೆ ಮಾಡಿದೆ ಮದನಾ

ಲಾವಣ್ಯಂ ಲಯಮಾಯ್ತು ವಿಭ್ರಮವಿಳಾಸಂ ಮಾಯಮಾಯ್ತುತ್ಕಟಾ ಜೀವಂ ಬೆಂದುದು ಚೆಲ್ವು ಸತ್ತುದು ಸುಖಂ ಹಾಳಾಯ್ತು ಕಂದರ್ಪ ಸದ್-ಭಾವಂ ಭಸ್ಮಮದಾಯ್ತು ಮೆಯ್ಮೆ ಮುಡಿಯಿತ್ತುತ್ಸಾಹವಿಂಗಿತ್ತದಿ-ನ್ನೇವೇಳ್ವೆಂ ನಡೆದೆತ್ತ ಸಾರ್ವೆನಿಳೆಗಿನ್ನೇನಪ್ಪೆನೆಂತಿರ್ಪೆನೋ

ಹಾ ಮದನ ಹಾ ಮನೋಹರ
ಹಾ ಮಕರಪತಾಕ ಹಾ ಮಹಾವಿಭ್ರಮ ಹಾ-

ಹಾ ಮನ್ಮಥ ಹಾ ಸಮ್ಮದ
ಹಾ ಮತ್ಪ್ರಾಣೇಶ ಹಾ ವಿಳಾಸವಿನೋದಾ

ಮದಕರಿ ಎತ್ತಪೋದೆ ವರಮೂರ್ತಿ ಅದೆತ್ತಲದೃಶ್ಯಮಾದೆ ಮದ್-
ವದನಸರೋಜಭೃಂಗನೆ ಅದೆತ್ತಲಡಂಗಿದೆ ನೀನದೆತ್ತ ಮು-
ಳ್ಗಿದೆ ಮಧುಮಿತ್ರ ಎತ್ತ ಲಯವಾದೆ ಮದೀಶ್ವರ ಎತ್ತಣಕ್ರಮು-
ಕ್ಕೊದವಿದೆ ಎತ್ತ ಸಾರ್ದೆ ಕಳಿದೆತ್ತಲಣಂ ತವಿಲಾದೆ ಮನ್ಮಥಾ

ಮೊಱೆಯೋ ಮೊಱೆಯೋ ಶಿವಘೋ
ಕಱೆಗೊರಲನ ಕಣ್ಣ ದಾಳಿ ಕುಸುಮಾಯುಧನಂ
ನೆಱೆ ಮುತ್ತಿತ್ತಯ್ಯೋ ಇದ-
ನಱೆವವರಿಲ್ಲಕ್ಕಟಾ ಕೃಪಾಳುಗಳಿಲ್ಲಾ

ನೆಲನೇ ನಭವೇ ಶಿಖಿಯೇ
ಜಲವೇ ರವಿಯೇ ಶಶಾಂಕನೇ ಮಾರುತನೇ
ಬಲವಳಿದವಳನನಾಥೆಯ-
ನಲಘುತರಾಘೌಘೆಯಂ ಪರಿರಕ್ಷಿಸಿರೆನ್ನಂ

ವನದೇವತೆಯರಿರಾ ನಂ-
ದನದೇವತೆಯರಿರ ದೆಸೆಯ ದೇವತೆಯರಿರಾ
ಘನಪಾಪಂ ಪುದಿದಿರ್ದೀ
ವನಿತೆಯನೊಳಕೊಳ್ಳಿರೇ ಅನಾಥೆಯನೆನ್ನಂ

ಗಿರಿಸುತೆ ಬಂದು ಕಂಡು ಬೆಱಗಾಗಿ ಕೃಪಾಕರಚಿತ್ತೆ ಹತ್ತೆಸಾ-
ರ್ದುರತಿಯ ಮೆಯ್ಯುಮಂ ಮೊಗಮುಮಂ ತಡವುತ್ತಿರೆ ಸೋಂಕಿನಿಂದೆಚೇ-
ತರಿಸುತೆ ಕಣ್ಗಳಂ ತೆಱೆದು ಪಾರ್ವತಿಯಂ ನಡೆ ನೋಡುತಂ ದಯಾ-
ಪರೆ ಭುವನೈಕಮಾತೆ ಪದೆದೀಕ್ಷಿಪುದೆನ್ನಯ ದುಃಖಮೊಪ್ಪಮಂ

ಎಂದಳಲ್ಪು ನುಡಿದು ನಿಲಲಾಱದೆ,

ಗಿರಿಜೆಯ ಪದಯುಗದೊಳ್ ರತಿ
ಪೊರಳ್ದು ಪುಯ್ಯಲ್ಚಿ ಪೆರ್ಚಿದಳಲಿನ್ಮಡಿಸು-
ತ್ತಿರೆ ಪಳಯಿಸುತುಂ ದುಃಖಾ
ತುರೆ ಶೋಕಂಗೆಯ್ದು ಸುಯ್ದು ಪೊಯ್ದಳಲುತ್ತುಂ

ಕರುಣಿಸು ತಾಯೇ ತವರೇ
ಪರಿರಕ್ಷಿಸು ದಯೆಯೊಳೀಕ್ಷಿಸುಡುಗಿಸು ನೋವಂ
ಪರಿಹರಿಸು ದುಃಖಮಂ ವರ-
ಗಿರಿರಾಜತನೂಜೆ ಕಾದುಕೊಳ್ಳೆನ್ನಸುವಂ

ಎಂದಳಲ್ವ ರತಿಯಂ ಕಂಡು ಮನಂಗೊಂಡು,

ಬೇಡುಡುಗು ಶೋಕರಸಮಂ
ನೀಡಾಗದೆ ನಿನ್ನ ವಲ್ಲಭನನೀಶ್ವರನಂ
ಬೇಡುವೆನಾವರ್ಥದೊಳಂ
ಮಾಡುವೆನೆಲೆ ಪರಮಹರ್ಷಮಂ ನಿನಗೆ ರತೀ

**ಹರಿಹರ–ಗಿರಿಜಾಕಲ್ಯಾಣ**
ಸು. (೧೨೦೦)

## ೩೬. ಗಿರಿಜೆಯ ತಪಸ್ಸು

ಇಂತು ರತಿಗಭಯಮಂ ಕೊ-
ಟ್ಟಂತಕಹರನಿರದೆ ಪೋದ ಪರಿಯಂ ಭರದಿಂ
ಚಿಂತಿಸಿ ಜಯೆವಿಜಯೆಗಳೊಡ-
ನಿಂತೆಂದಳ್ ಗಿರಿಜೆ ಮನದ ಮುನಿಸಿಂದಾಗಳ್

ಆನಿಂತಿಂತರ್ಚಿಸುತ್ತುಂ ಗತಿ ಮತಿ ಪತಿಯೆನ್ನಾಯುವೆನ್ನಾತ್ಮತತ್ತ್ವಂ
ತಾನೆಂದುತ್ಸಾಹದಿಂದಿರ್ದಚಳಪತಿಯ ಮೇನಾಖ್ಯೆಯೊಂದಳ್ಕಱಿಂ ಬಿ-
ಟ್ಟಾನಂದಂಗೂಡಿ ಕಾರುಣ್ಯಮನನವರತಂ ಪಾರುತಿರ್ಪಲ್ಲಿ ಕೇಳಿಂ-
ತೇನೆಂದುಗ್ರಂ ಸಮಗ್ರಂ ರಜತಗಿರಿಗೆ ಪೋದಂ ನಿಕೃಷ್ಟಾತ್ಮನಾದಂ

ಅಂತುಮಲ್ಲದೆ,

ತಾನಿರ್ದಲ್ಲಿಗೆ ನಡೆತಂ-
ದಾನರ್ಚಿಸೆ ಕಾಮವೈರಿ ನುಡಿಯಿಸದಂತ-
ರ್ಧಾನಕ್ಕೆ ಸಂದನದಱಿಂ-
ದಾನಿರ್ದಲ್ಲಿಗೆ ಸಮಂತು ತನ್ನನೆ ತರ್ಪೆಂ

ಉಗ್ರತಪೋಭರಾಕೃತಿಯನಾಂತು ಜಗಂ ಬೆಱಗಾಗೆ ನಿಶ್ಚಲಾ-
ವ್ಯಗ್ರಮನೋಬಲಪ್ರಬಲೆಯಾಗಿ ಬಿಸಿಲ್ಮಳೆಶೀತದೊಳ್ ನಗ-
ಪ್ರಾಗ್ರದೊಳಂ ಕುಜಪ್ರತತಿಯೊಳ್ ಸರಸೀಕುಳದೊಳ್ ವಿರಾಜಿಸು-
ತ್ತುಗ್ರನನೀಶನಂ ವಿಪುಳನಿಶ್ಚಳನಂ ಚಲದಿಂದೆ ತಂದಪೆಂ

ಸರಸಿಜನೇತ್ರೆ ಪುಣ್ಯಮಯಗಾತ್ರೆ ಸದಾಶಿವನಂಗಪಾತ್ರೆಯ-
ತ್ಯುರುತರಮಾನಿ ನಿರ್ಮಳಭವಾನಿ ನಿರಂತರದಾನಿ ನವ್ಯಸುಂ-
ದರವರಮೂರ್ತಿ ಶರ್ವನ ಸುಕೀರ್ತಿ ಮಹೇಶ್ವರನಾರ್ತಿ ಬಂದಳೊ-
ಪ್ಪಿರೆ ಗಿರಿಜಾತೆ ಲೋಕಜಯಮಾತೆ ಜಗಕ್ಕೆ ವಿನೂತೆಯುಳ್ಕಱಿಂ

ಚಲದಿಂದಂ ನಗರಾಜಪುತ್ರಿ ಹೃದಯಾಬ್ಜಾವಾಸದೊಳ್ ಭಾಪು ನಿ-
ಶ್ಚಲನಂ ನಿರ್ಮಳನಂ ನಿರಾವರಣನಂ ನಿರ್ಮಾಯನಂ ನಿತ್ಯನಂ
ನಿಲಿಸುತ್ತುನ್ನತವಕ್ತ್ರೆ ಸನ್ನುತತಪೋವಿಸ್ತಾರೆ ಮಾರ್ತಂಡಸಂ-
ಕುಲತೇಜೋನಿಧಿ ನಿಂದಳುಗ್ರತಪದೊಳ್ ಲೋಕಕ್ಕಗುರ್ವಪ್ಪಿನಂ

ದೆಸೆಯುಂ ಕಾಱೇಱುತ್ತುಂ ತೃಣಕುಲಲತೆಯುಂ ಸೀದುಕರ್ಪೇಱುತ್ತುಂ
ರಸೆಯುಂ ಸಂತಾಪಿಸುತ್ತುಂ ಜಳಭರಿತತಟಾಕಂಗಳಂ ಶೋಷಿಸುತ್ತುಂ
ಸಸಿಯುಂ ವೃಕ್ಷಾಳಿಯುಂ ಸುಟ್ಟುರಿಪುತೆ ಮೃಗಮುಂ ಬೇಯಿಸುತ್ತದ್ರಿಯುಂ ದ-
ಳ್ಳಿಸಿ ಸೀಳುತ್ತುಂ ವಿಶಾಳಂ ದವಶಿಖಿಯವೊಲೆಳ್ದತ್ತಮೋಘಂ ನಿದಾಘಂ

ದಶಭುಜನ ಮನೋವಲ್ಲಭೆ
ದಿಶಾವಳೀಭರಿತಕೀರ್ತಿಯುತೆ ಘೋರತಪೋ-
ವಶೆ ನೆಱೆ ಗಂಗಾಧರನಂ
ಶಶಿಧರನಂ ನೆನೆದು ಕಳೆದಳಾ ಬೇಸಗೆಯುಂ

ನಲಿದುದು ಸೋಗೆ ನುಣ್ಪನೆಡೆಗೊಂಡುದು ಚಾದಗೆವಕ್ಕಿ ಮಿಕ್ಕು ಪೂ-
ತಲರ್ದುದು ಸೊಂಪಿನಿಂ ಕಡವು ತಣ್ಪನೆ ಹೇಱಿದುವೆಯ್ದೆ ಬೆಟ್ಟು ಬಂ-
ದಲೆದುದು ಪಶ್ಚಿಮಾನಿಳನಮರ್ಚಿತು ಕೇತಕಿ ಪೂದೊಡಂಬೆಯುಂ
ಬಿಲದೊಳೆ ಪೊಕ್ಕುವಂಚೆ ಮುಗಿಲೊಡ್ಡಣೆಯೊಡ್ಡಿತು ಕಾರ ಕೊರ್ವಿನೊಳ್

ಸುರಿದುದು ಮಳೆ ತಣಿಯಿತ್ತಿಳೆ
ನೆರೆದುದು ಬೆಳೆ ಕಾನನಂಗಳೊಳ್ ನೆಱೆ ವಿಸಟಂ-
ಬರಿದುವು ಹೊಳೆ ನಾಂದುವು ಶಿಳೆ
ಧರಣಿಗೆ ಮೊಳೆ ಪಿಡಿದ ತಳೆಗಳಾದುವು ಮಳೆಯೊಳ್

ಮಾಣ್ದುದು ಮಳೆ ಶರದಮಳತೆ
ಪೂಣ್ದುದು ಕಳಹಂಸಮಾಲೆ ಮೆಲ್ಲನೆ ಬಿಲದೊಳ್

ಕಣ್ದೆಱೆದುವು ತೊೞತೊಳಗು-
ತ್ತೆಣ್ದೆಸೆ ನೆರೆ ತಿೞಿದುವೀಗಳವಧಾರಗಜೇ

ರವಿಕಿರಣಂ ನೀರೋಡು-
ತ್ತಿವೆ ತಣ್ಪಂ ಬೀರುತಿವೆ ರಥಾಂಗಕುಲಂಗಳ್
ತವೆ ತಣ್ಬಿಸಿಲೊಳ್ ನಿಂದಿ-
ರ್ದಿವೆ ಮೇಘಂ ಹಿಂಡಿ ಹರಹಿದಂತಿವೆ ನಭದೊಳ್

ಮತ್ತಮಾ ಶೀತಾತಿಸಮಯದಲ್ಲಿ

ಪುಟ್ಟಿತು ಚಳಿ ಬಳೆದುದು ಚಳಿ
ಕೊಟ್ಟುದು ಚಳಿ ಕೊಂಡುದೆಲ್ಲಮುಂ ಚಳಿಚಳಿಯೆಂ-
ದುಟ್ಟುದು ಚಳಿ ತೊಟ್ಟುದು ಚಳಿ
ಮೆಟ್ಟಿತು ಚಳಿ ಮುಟ್ಟಿತೆಲ್ಲ ಚಳಿ ಪೊಸಚಳಿಯೊಳ್

**ಹರಿಹರ–ಗಿರಿಜಾಕಲ್ಯಾಣ**
ಸು. (೧೨೦೦)

# ೩೭. ಈಶ್ವರಾಗಮನ

ಇಂತು ನಿದಾಘನಿಷ್ಠುರತೆಯೊಳಂ ಮಳೆಗಾಲದ ಪ್ರಳಯ ಜಲದೊಳಂ ಮಾಗಿಯ ಮಹಾಶೀತಲದೊಳಂ ಭಾಳಲೋಚನನ ಭಾಮಿನಿ ಗಂಗಾಧರನ ಗರುವೆ ಚಂದ್ರಧರನರಸಿಯೆನಿಪ ಗಿರಿರಾಜತನೂಜೆಯಿರ್ದ ನಿರುಪಮಾನತಪಃಪ್ರಭಾವಂ ವಿರೂಪಾಕ್ಷನ ಕರಣಂಗಳೊಳ್ ಬೆರಸಿ ಬಳೆಯೆ ಪುರಹರನೆಳ್ಚತ್ತು ಕೆಚ್ಚುಗಟ್ಟಿದ ಧೈರ್ಯಮನೊಡೆದು ಮೂಡಿ ಪಿಡಿದೆಳೆವ ಕಾರುಣ್ಯಕ್ಕೆ ಪಕ್ಕಾಗಿ ಪನ್ನಗಭೂಷಣನಿನ್ನಿರಲ್ ಬಾರದೆಂದು ತನ್ನೊಳ್ ಬಗೆದತಿಸ್ವತಂತ್ರಂ ಗಿರಿಜೆಯ ಮನಮನೊರೆದು ನೋಡುವ ಭರದಿಂ ವಟು ವೇಷಮುಂ ತಳೆದು,

ಮಿಗೆ ಶೀತಾಂಶು ಚಕೋರಿಯಲ್ಲಿಗೆ ವಸಂತಂ ರಾಜಿಪುದ್ಯಾನದ-
ಲ್ಲಿಗೆ ಸೂರ್ಯಂ ಸರಸೀಜದಲ್ಲಿಗೆ ವರಪ್ರಾಣಾನಿಳಂ ದೇಹದ-
ಲ್ಲಿಗೆ ಮೇಘಂ ಶಿಖಿಯಲ್ಲಿಗೊಪ್ಪುವ ಮರಾಳಂ ಪೂರ್ಣಕಾಸಾರದ-
ಲ್ಲಿಗೆ ಬರ್ಪಂತೆ ಭವಾನಿಯಲ್ಲಿಗಭವಂ ಬಂದಂ ಜಗದ್ವಲ್ಲಭಂ

ಇಂತು ಭೂಲೋಕಕ್ಕಿಳಿತಂದು ಹೇಮಕೂಟದೊಳ್ ಹೈಮವತಿಯಿರ್ಪ ತಪೋವನಮುಂ ಪುಗುತರ್ಪಾಗಳ್,

ಬರೆ ಗಿರಿಶಂ ವಸಂತಋತುವಲ್ಲದೊಡಂ ಮುದದಿಂದೆ ಭೋಂಕನಂ-
ಕುರಿಸಿತು ಮಾವು ಪಲ್ಲವಿಸಿತಲ್ಲಿಯಶೋಕೆ ವಸಂತದೂತಿಯೊ-
ಪ್ಪಿರೆ ನೆಱೆ ಪೂತುದನ್ಯಭೃತನುನ್ನತಿಯಿಂ ಕರೆದತ್ತು ಮಲ್ಲಿಕಾ-
ಪರಿಮಳಭಾರದಿಂ ಕುಸಿದು ಮೆಲ್ಲನೆ ತೀಡಿತು ದಕ್ಷಿಣಾನಿಳಂ

ಜಯೆವಿಜಯೆಗಳಿದು ಪೊಸತತಿ-
ಶಯಮೀ ಶಿಶಿರದೊಳಿದೇಂ ಭವಾನಿ ವಸಂತೋ-
ದಯಸೂಚನೆಯಾದುದು ನಿ-
ಮ್ಮಯೆ ಪುಣ್ಯತಪಃಪ್ರಭಾವಕಾರಣಮಲ್ತೇ

ಎನುತಿರೆ ಬಂದು ಭಾವಿಸಿ ತಪೋವನಮಂ ಶಶಿಮೌಳಿ ಪೊಕ್ಕು ಮೆ-
ಲ್ಲನೆ ಬರುತುಂ ಪಥಶ್ರಮವನಾಂತು ಬಳಲ್ದವೊಲಾಗಿ ತೇಂಕುತುಂ
ಮನದೊಳನೂನಸಂಪದಮನೆಯ್ದುತುಮಿಾಕ್ಷಿಸುತಿರ್ಕೆಲಂಗಳಂ
ಘನಮಹಿಮಂ ಸ್ವತಂತ್ರವಿಭು ಪೊರ್ದಿದನೊಂದು ವಿನೂತ್ನಚೂತಮಂ

ಇಂತು ಪೊರ್ದಿ ಕಪಟವಟುವೇಷಮಂ ತಳೆದ ಕಪರ್ದಿ ಪಾರ್ವತೀ-
ದೇವಿಯರ್ ತಪದೊಳಿರ್ಪ ಸೀಮಾಸಮೀಪದ ವಿಶಾಲಬಾಲಚೂತ-
ಶೀತಳಚ್ಛಾಯೆಯೊಳ್ ಕುಳ್ಳಿರೆ ಸಹಚರಿಯರಪ್ಪ ಜಯೆವಿಜಯೆಗಳ್
ಕಂಡು,

ತರಳನಪೂರ್ವಗನತಿಥಿ-
ಸ್ವರೂಪನೀಷದ್ವಿಭೂತಿಲಸಿತಲಲಾಟಂ
ವರವಿಪ್ರನೆನುತೆ ಬಂದಾ-
ದರಿಸಿದರೊಲವಿಂದೆ ಚರಣತಳಮಂ ತೊಳೆದರ್

ಅಂತು ತೊಳೆದು,

ಎಳವಾಳೆಯ ಸುಳಿಯೆಲೆಯೊಳ್
ನಳನಳಿಸುವ ಕಂದಮೂಲಮಂ ನವಜಂಬೂ-
ಫಳವಾಮ್ರಫಳಂ ಕದಳೀ-
ಫಳಂಗಳಂ ತೀವಿ ತಂದು ಮುಂದಿಳಿಪುತ್ತುಂ

ಎಲೆಯತಿಥೀ ಬಳಲ್ದಿರಿಮಿಾ
ಫಲದಿಂದಂ ನಿಮ್ಮ ಪಸಿವನುಡುಗಿಸಿಯೆನೆ ಸ್ವೈ-
ಫಲವಂ ಕೆಯ್ಕೊಂಡಪೆವೀ
ಲಲನೆಯದಾರ್ ತಪವಗಣ್ಯವಾವನ ಪುಣ್ಯಂ

ಎಂದು ನುಡಿಯೆ ಜಯೆವಿಜಯೆಗಳ್ ಕೇಳ್ದು,

ಇವರಿರವಿನ ಚಿಂತಾರತಿ
ನಿವಗೇಕೀ ಕ್ಷುಧೆಯನೀ ಪಥಶ್ರಮಮಂ ತೀ-
ರ್ಚುವ ಬಗೆಯಂ ಬೇಗಂ ಮಾ-
ಡುವುದೆನೆ ನಸುನಗುತೆ ವಿಪ್ರನಂದಿಂತೆಂದಂ

ಬೆಸಗೊಂಡೊಡೆ ದೋಷಮೆ ಈ
ಪೊಸಕನ್ನೆ ತಪೋನಿರೋಧದಿಂದಿರ್ದೊಡೆ ಸೈ-
ರಿಸಬರ್ಪುದೆ ತಪಮಂ ಮಾ-
ಣಿಸುವವರಿಲ್ಲಾ ಸಹಾಯಸಂಪದಮಿಲ್ಲಾ

ಎನೆ ಕೇಳ್ದು ಗಿರಿಜೆ ಮನದೊಳ್
ಮುನಿಯುತ್ತುಂ ಜಪವನುಡುಗಿ ಜಪಮಾಲೆಯನೊ-
ಯ್ಯನೆ ಕೆಯ್ಯೊಳೋಸರಿಸಿ ಮೆ-
ಲ್ಲನೆ ಕಣ್ದೆಱೆಯುತ್ತೆ ಕಂಡಳಾ ವರವಟುವಂ

ಆ ಸಮಯದೊಳ್,

ಇಂದುಗೆ ಮೇಘಂ ಕವಿದೊಡ-
ಮಂದೀ ಲೋಕಕ್ಕೆ ತಣ್ಪು ತಪ್ಪದ ತೆಱದಿಂ-
ದಿಂದುಧರಂ ವರವಟುವೇ-
ಷಂದಳೆದೊಡಮಗಜೆಗಾದುದತಿಹರ್ಷಮುಖಂ

ಅಂತು ಹರ್ಷವನಿಮಿತ್ತಮೇಕಾದುಪುದೆಂದು ನಿಮಿತ್ತಮನಱಿಯದೆ ಬೆಱಗಾಗಿ ನೋಡುತಿರ್ಪಲ್ಲಿ,

ಗಿರಿಸುತೆಯ ಮಧುರದೃಷ್ಟಿಗ-
ಳುರವಣೆಯಿಂ ತಾಗೆ ತನ್ನನಾಗಳ್ ವಿಪ್ರಂ
ಕರಗಿ ನಿಲಲಾರದೆಳ್ದಾ-
ತುರಪುಳಕಮನಂತುಮಿಂತು ಸಂತಮಿಡುತ್ತುಂ

ನೆಗೆವ ಜಡೆಮುಡಿಯನೊತ್ತು-
ತ್ತೊಗೆವ ಭುಜಾಳಿಯನಡಂಗಿಸುತ್ತೂರುಗಳಿಂ
ಮಿಗುವ ವೃಷೇಂದ್ರನನೌಂಕು-
ತ್ತಗಲದೆ ನಿಜಮೂರ್ತಿಯೊಳಗೆ ಗಜಬಜಿಸುತ್ತುಂ

ಎಂತಾನುಂ ನಿಜರೂಪಂ
ಸಂತವಿಡುತ್ತಲ್ಲಿ ವಿಪ್ರನತಿಧೈರ್ಯತೆಯಂ
ಮುಂತಿಟ್ಟು ಗಿರಿಜೆಯೊಡನುಸಿ-
ರ್ದಂ ತಡಬಡಿಸುತ್ತೆ ಮಿಸುಪ ಪೊಸಪುಸಿವಾತಂ

ಈ ಸುಕುಮಾರತೆಯಿಾ ನಿಲ-
ವೀ ಸುಕುರತೆಯಿಾ ನವೀನಯೌವನಮದವೀ
ಭಾಸುರತೆಯಿಾ ಸುಧಾಮಯ-
ವೀ ಸುಖದೊಳ್ ತಪಮಿದೆಂತು ಬಂದುದು ಮುಗ್ಧೇ

ಮಿಸುಗುವ ಶಶಿವದನಂ ಕಡು-
ಬಿಸಿಲಿಂ ಕೊರಗಿತ್ತು ಕುಸುಮಮಾಳಿಕೆಯಿಂ ರಾ-
ಜಿಸುವ ಕಚಭಾರಮಯ್ಯೋ-
ಪೊಸಜಡೆಯಂ ಪಡೆದುದಕಟ ಘನಯೌವನದೊಳ್

ಬಿಸಿಲೆನ್ನದೆ ಮಳೆಯೆನ್ನದೆ
ಶಿಶಿರಮಿದೆನ್ನದೆ ತೃಷೋನ್ನತಿ ಕ್ಷುಧೆ ನಿದ್ರಾ
ವಿಸರಮುಮಂ ನೆಱೆ ಗೆಲ್ದೀ
ವಸುಮತಿ ಬೆಱಗಾಗೆ ತಪದೊಳಿರ್ದವರುಂಟೇ

ವನಜಾನನೆ ಏಱುಂಜ-
ವ್ವನದೊಳ್ ವನದೊಳ್ ನಿರೋಧದೊಳ್ ಪೇಳಿಂತಾ-
ವನನುದ್ದೇಶಿಸಿ ತಪಮಿದ
ನೆನಗಱಿಪಿದೊಡೇನೊ ದೋಷಮೇ ಮೃಗನಯನೇ

ಎಂದು ಪ್ರೇಮಜನಪ್ರಣಯಕಲಹಲೀಲಾಲೋಲಚಿತ್ತನಪ್ಪ ವಿರೂ-ಪಾಕ್ಷಂ ಪರಮುವಟುವೇಷದಿಂ ನುಡಿದ ಮೃದುಕಠಿನಾಕ್ಷೇಪಗರ್ಭಿತ-ವಚೋವಿಳಾಸಮಂ ಶೈಳಜೆ ಕೇಳ್ದು ಚಿಂತೆಯಂ ತಾಳ್ದು,

ಬೆಸಗೊಂಡಪನಮಳದ್ವಿಜ-
ನುಸಿರಲ್ ತಾಂ ಬಾರದುಸಿರದಿರಬಾರದೆನು-
ತ್ತುಸದೃಶತಪಮಂ ಮನದು
ಬ್ಬಸದಿಂದೆ ಭವಾನಿ ಮಾನಿ ಮೆಲ್ಲನೆ ನುಡಿದಳ್

ಬಗೆವೆರ್ಚಿ ಕೇಳುತಿರ್ದಪೆ
ಮಿಗೆ ಪೇಳ್ದಪೆನೆಲೆಲೆ ಧೂರ್ತವಿಪ್ರನೆ ಕೇಳ್ ಶಂ-
ಭುಗೆ ಕಾರುಣ್ಯಾಬ್ಧಿಗೆ ಶೂ-
ಲಿಗೆ ಕರುಣಂ ಪುಟ್ಟುವಂತೆ ತಪದಿಂದಿರ್ಪೆಂ

ಎನುತುಂ ಗದ್ಗದಿಸುತೆ ಪುಳ-
ಕನಿಕಾಯಮನಾನುತಶ್ರುವಂ ಕಳೆಯುತ್ತುಂ
ಘನಹರ್ಷಚಿತ್ತೆಯಾಗು-
ತ್ತೆ ನಗೇಶ್ವರಪುತ್ರಿ ಶಂಕರನ ಪೆಸರ್ಗೊಂಡಳ್

ಎಂದು ವಿರೂಪಾಕ್ಷಂಗೆ ತಪವಿರ್ದಪೆನೆಂಬ ನುಡಿಯಂ ಕೇಳ್ದು ದುಷ್ಟ-ಧರಾಮರನಟ್ಟಹಾಸದಿಂದಿತೆಂದಂ,

ಅಕ್ಕಕ್ಕು ಕಾಮಹರನೊಳ್
ಮುಕ್ಕಣ್ಣನೊಳಖಿಳವೇದಶಾಸ್ತ್ರಕ್ರಮಮಂ
ವಿಕ್ಕವನೊಳ್ ಪಿತೃವನದೊಳ್
ಪೊಕ್ಕವನೊಳದೆಂತು ಚಿತ್ತವಿಟ್ಟೆ ಲತಾಂಗೀ

ಭೀಕರವಪ್ಪ ಶೂಲಿಯಭಿಲಾಷೆಯೊಳೀ ತಪವಾತನೇಕೆ ನೀ-
ನೇಕೆ ಕೃಪಾಣವೇಕೆ ಲತೆಯೇಕೆ ಲಸತ್ಕರಿಯೇಕೆ ರಂಭೆ ತಾ-
ನೇಕೆ ಕೃಶಾನುವೇಕೆ ಪೊಸಪೂವಿನ ಮಾಲೆಯದೇಕೆ ಭಾನುವೇ-
ಕಾ ಕುಮುದಂ ದಲೇಕೆ ಸಿಡಿಲೇಕೆ ಮರಾಳನದೇಕೆ ಲೋಕದೊಳ್

ನೀನಿನಿಯಳ್ ವಿಷಮಾತಂ
ನೀನತಿಮೃದು ಕಠಿನಗುಣಗಣಾಶ್ರಯನಾತಂ
ನೀನಬಲೆಯುಗ್ರನಾತಂ
ನೀನುರುತರಭೀರು ಸರ್ಪಭೂಷಣನಾತಂ

ಪುಲಿದೊವಲುಡುಗೆಯ ಹಾವಿನ
ನೆಲೆದೊಡಿಗೆಯ ನೊಸಲಕಣ್ಣ ಖಟ್ವಾಂಗದ ಪಂ-
ದಲೆಗಳ ಮಾಲೆಯ ಶೂಲದ
ಕಲಿಗಂಜದೆ ಮನವನೆಂತು ಮಾಡಿದೆ ಮುಗ್ಧೇ

ಎಂದು ವಿಪ್ರಂ ನುಡಿದ ಶಿವನಿಂದೆಗೆ ಭವಾನಿ ಮುನಿದು ಕನಲ್ದು ಕಿನಿಸಿ ಕಿಡಿಕಿಡಿವೋಗಿ,

ತಪವಂತದಿರ್ಕೆ ಮಾಡುವ
ಜಪವಿರ್ಕೆ ಮೃಗಾಂಕಮೌಳಿಯುಂ ಭರದಿಂ ಧ್ಯಾ-
ನಿಪುದಿರ್ಕೆ ಶಂಭುವಂ ನಿಂ-
ದಿಪುದಂ ಕೇಳ್ದೊಂದು ಪಾಪಮಿಂದೆನಗಾಯ್ತೇ

ಘೋರತಪದಲ್ಲಿ ಕೋಪಿಸ-
ಬಾರದು ತಾಂ ತಪದ ಕೇಡು ಪತಿನಿಂದೆಯುಮಂ
ಸೈರಿಸಬಾರದೆನುತ್ತೆ ವಿ-
ಚಾರಮನುಳಿದಗಜೆ ಮನದ ಮುಳಿಸಿಂದಾಗಳ್

ಆದ ನಿರೋಧದ ನಿಂದೆಯ-,
ನಾದರಿಸದೆ ಭಸಿತದಿಂದೆ ವಿಪ್ರನನಿಡೆ ಪೋ-
ಪೋದುದು ವಟುವೇಷಂ ಶಿವ-
ನಾದೊಡದೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್

ಮುಗಿಲ ತೆಱೆ ಸರಿದ ಶಶಿಯಂ
ತೊಗೆದ ತಮಂ ತೆಗೆದ ತರುಣತರಣಿಯ ತೆಱದಿಂ
ಪೊಗೆತಳ್ಗಿದಗ್ನಿಯಂತಿರೆ
ಮಿಗೆ ವೇಷಂ ತೊಲಗಿ ಶಂಭು ತೊಳಗುತ್ತಿರ್ದಂ

ಜಡೆಮುಡಿ ಪಂಚಮುಖಂ ನೆಗೆ-
ದುಡುಪತಿಕಳೆ ದಶಭುಜಂ ತ್ರಿಣೇತ್ರಂ ಗಾತ್ರಂ-
ಬಿಡಿದ ನವಭೂತಿ ಪುಲಿದೊವ-
ಲುಡಿಗೆಗಳಿಂ ಶಂಕರಂ ಕರಂ ಮೆಱೆದಿರ್ದಂ

ಆ ಸಮಯದೊಳ್,

ಸರಿದುದು ಪುಸಿವೇಷದ ತೆಱೆ
ಸುರಿದುದು ಕೆಯ್ನೀರ ತೆಱದೆ ಪೂವಳೆ ಸರಿಸಂ-
ಬರಿದುದು ಜೀರಿಗೆ ಬೆಲ್ಲದ
ಪರಿಯಿಂ ಮುಳಿದಿಟ್ಟ ಭಸಿತಮದೆ ಮದುವೆಯವೋಲ್

**ಹರಿಹರ–ಗಿರಿಜಾಕಲ್ಯಾಣ**
ಸು. (೧೨೦೦)

# ೩೮. ಬೀಳ್ಕೊಡುವಿಕೆ

ಸಂಗಂ ಬಸವನೊ ಬಸವಂ
ಸಂಗನೊ ತಮ್ಮಿರ್ಬರೊರ್ಬರಂತೊರ್ಬರೊ ಮೇಣ್
ಸಂಗಂ ಬಸವನೊ ಬಸವಂ
ಸಂಗನೊ ಎನಿಪೊಂದಭೇದಭಾವದೊಳಿರ್ದರ್

ಇಪ್ಪಲ್ಲಿ ಕನಸಿನೊಳು....ಎಳವಿಸಿಲ ಬೆಳಗಂ ತರುಣ ತರಣಿಗೆ ಕಡಂಗೊಡುವ ಪ್ರಭಾದುಕೂಲದಂತಿರ್ದ ಪುಲಿದೊಗಲಿಂದೊಪ್ಪಿ, ಪಶುಪತಿ ಬಸವನ ಮನದ ಮೊನೆಯೊಳೊಪ್ಪೆ ಮೂರ್ತಿಗೊಂಡು;

ಎಲೆ ಮಗನೆ ಬಸವ ಬಸವಣ್ಣ ಬಸವಿದೇವ, ನಿನ್ನಂ ಮಹೀತಳದೊಳು ಮೆಱೆದಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು-ಎಂಬ ನುಡಿಯೊಡನೆ ಕನಸಿನ ಮಾತು ಮನ್ನವನಿಮ್ಮೈಗಂಡು, ನಿದ್ರೆ ತಿಳಿದು ಕಣ್ದೆಱೆದು ಕೆಲಬಲನಂ ನೋಡಿ ಬೆಚ್ಚಿ ಬೆಗಡುಗೊಂಡು ಅನುತಾಪ ವೇಱೆ ವಿರಹಂ ಹೊಮ್ಮಿ ಕಣ್ಗೆಟ್ಟಗಲಲಾಱದೆ ರಂಗಮಂಟಪದ ಕಂಭಮಂ ಘಳಿಲನೆ ಹಾಯ್ದು ದೇವ ದೇವ ಸಂಗ ಕಂಡ್ಯೆ. ಕೆಟ್ಟೆ, ಕೆಟ್ಟೆಂ ಎಂದೊಟ್ಟೆ ಒಱಲಿ ಪರಿತಂದು ಸಂಗನಂ ತಕ್ಕೈಸಿ ಪಳವಿಸಿ ಪಲುಂಬಿ ಗೋಳಿಟ್ಟು ಆಲಿಟ್ಟು ಸಿವದಿಟ್ಟು ಮೊಱೆಯಿಟ್ಟು ಮೂರ್ಛಿಸುತ್ತೆಂತಕ್ಕೈಚ್ಚತ್ತು ಮೆಲ್ಲಮೆಲ್ಲನಾಲಿಂಗನಮುಂ ಸಡಿಲ್ಚಿ ನಡೆತಂದು;

ಘನವಲ್ಲದ ಮನದೊಳಗ್ಘವಣಿ ಹೂಗಳಂ ಬೇಗಂ ತಂದಂತಂತೆ ಪೂಜೆಗೆಯ್ದಾರೋಗಣೆಗಿತ್ತು, ಮೋಹದ ಮುನಿಸು ಮನದೊಳ್ ತೀವಿ ಪ್ರಣಯ ಕಲಹಂ ಬಲಿದು ಪ್ರಸಾದಮನೊಲ್ಲದೆ ಬಸವಂ ಮುಸುಂಕಿಟ್ಟು ಪಶುಪತಿಯ ಪದದ ಕೆಳಗೆ ನಿರ್ವೇಗದಿಂ ಪಟ್ಟಿರ್ದಿರೆ; ರಾತ್ರಿಯೊಳು ನೇತ್ರತ್ರಯಂ ಭಕ್ತನಿರವಂ ನೋಡಿ ಕೊರಗಿ ಮೋಹದ ಮಹಿಮೆಗೆ ಮರವಟ್ಟು ಭಕ್ತಿಯ ಭರಕ್ಕೆ ಕೌತುಕಂಗೊಂಡಗಲಲಾಱದ ಮಗಂಗೆ ಮಿಗೆ

ಕರುಣಿಸಿ, ಮತ್ತೆ ಕನಸಿನೊಳು ಬಂದು-ಎಲೆ ಮಗನೆ ಎಲೆ ಕಂದ ಎಲೆ ಬಸವ, ನಿನ್ನನಗಲಿ ನಾನಿರಲಾಱೆ. ನಿನಗಿನಿತು ನಿರೋಧವೇಕೆ ? ಬೇಡಯ್ಯ ಬೇಡೆನ್ನರಸ, ಬೇಡೆನ್ನ ಭಕ್ತನಿಧಿಯೆ, ನಿನ್ನೊಡನೊಡನೆ ಬಿಡದೆ ಬಪ್ಪೆಂ....

ಇಂತು ಬೆಸಸುತ್ತಮಿರೆ ಬಸವನಾಗಳೆ ಕೇಳ್ದು
ಅಂತಸ್ಥದೊಳು ವಿರಹಚಿಂತೆಯಂ ಮಿಗೆ ತಾಳ್ದು
ಸಲೆ ಮತ್ತೆ ಮತ್ತೆ ಪೋಗೆಂದಪಂ ಸಂಗಮಂ
ನಲಿದು ಪೂಜಿಸಲೀಯನಕ್ಕಟಾ ಸಂಗಮಂ
ಆದಡಂ ಪೋಗಿ ನೋಡುವೆನೆಂದು ಬಗೆಗೊಂಡು
ಆದರಂ ಕುಂದುತ್ತೆ ಚಿಂತೆಯಂ ಕೈಕೊಂಡು
ಶಿವಭಕ್ತ ಸಂತತಿಗೆ ಬೆಸಕಯ್ವುಪಾಯಮಂ
ಶಿವಭಕ್ತಿ ನೆಲೆಗೊಳ್ವ ಸಮುಸುಖ ಸಹಾಯಮಂ
ನೆನೆದು ತನ್ನೊಳಗೊಳಗೆ ತಿಳಿದಂ ಶಿವಧ್ಯಾನಿ
ಅನುಪಮ ಶಿವೈಕ ಸಮ್ಯಗ್ಜ್ಞಾನಿ ಕಡುಮಾನಿ
ಅಕ್ಷರ ಜ್ಞಾನಮುಂಟದನ್ನೆಡೆ ಮಾಱುವೆಂ
ತ್ರ್ಯಕ್ಷನಣುಗರ್ಗಾದ ಹೊಂಗಳಂ ಬೀಱುವೆಂ
ಅವರ ಪ್ರಸಾದಮಂ ನಲವಿಂದ ತಾಳುವೆಂ
ಅವರ ಕಾರುಣ್ಯರಸಜಲದೊಳೋಲಾಡುವೆಂ
ಎಂದಲ್ಲಿ ಗಣಕ ಕಾಯಕಮಂ ಮನಂಗೊಂಡು
ನಿಂದದಕ್ಕನುಕೂಲವೇಷಮಂ ಕೈಕೊಂಡು
ಸಂಗಂಗೆ ಬಿನ್ನೈಸಲೆಂದು ಹತ್ತಿರೆ ಬಂದು

ಹಿಂಗಲಾಱದೆ ಕಣ್ಗಳಿಂ ಶೋಕಜಲಬಿಂದು
ತೆರಳೆ ಸೆರೆ ಬಿಗಿದು ಗದುಗದಿಸಿ ಬಿಕ್ಕುತೆ ಬಿದ್ದು
ಹೊರಳುತ್ತುಳುತ್ತಗಲಲಾಱದೊಱಲುತ್ತಿದ್ದು
ನಿಂದಿರುತ್ತಿಲೆ ಸಂಗ ಹೋಗಿ ಬಂದಪೆನೆಯ್ಯ
ತಂದೆ ನಿನ್ನಂ ನಂಬಿ ನಚ್ಚಿ ಹೋದಪೆನೆಯ್ಯ
ಅಗಲಲಾಱೆಂ ದೇವದೇವ ಕರುಣಿಪುದೆನುತೆ
ಬಗೆ ಹೆಚ್ಚಿ ತನು ಹೆಚ್ಚಿ ಕೊಟ್ಟಂತೆ ನಿಂದಿರುತೆ
ಮುಂದಿರ್ದ ಬಸವನಂ ಕಂಡು ಸಂಗಂ ಮಱುಗಿ
ಬಂದಪ್ಪಿ ಕಣ್ಣ ನೀರಂ ತೊಡೆದು ಮಿಗೆ ಮಱುಗಿ
ಬೇಡೆನ್ನ ಕಂದ ನಿನ್ನೊಡನೆ ಬಪ್ಪೆಂ ಬಸವ
ನೋಡು ನಿನ್ನಾಣೆ ನಿನ್ನೊಡನೆ ಬಪ್ಪೆಂ ಬಸವ
ನಿನ್ನನಗಲಿರಲಾರ್ಪನೇ ಬಸವ ಬಸವಣ್ಣ
ಇನ್ನಿಂತಳುತ್ತಿಪ್ಪಡೆನಗರಿದು ಬಸವಣ್ಣ
ಕಂದ ಬೇಡಯ್ಯ ಬೇಡಯ್ಯ ನೇಹದ ನಿಧಿಯೆ
ಹಿಂದುಗೊಂಡೇ ಬಪ್ಪೆನೆನ್ನ ಸುಕೃತದ ಸುಧೆಯೆ
ನೆನೆಯೆ ಮುಂದಿರ್ದಪೆಂ ಕರೆದೊಡೋ ಎಂದಪೆಂ
ಮನದೊಳಗೆ ಕರದೊಳಗೆ ತನುವಿನೊಳಗಿರ್ದಪೆಂ
ನಿಂದಲ್ಲಿ ನಿಂದಪೆಂ ನಡೆದಲ್ಲಿ ನಡೆದಪೆಂ
ಬಿಟ್ಟುದಂ ಬಿಟ್ಟಪೆಂ ಪಿಡಿದುದಂ ಪಿಡಿದಪೆಂ
ನಟ್ಟುದಂ ನಟ್ಟಪೆಂ ಕೇಳ್ದುದಂ ಕೇಳ್ದಪೆಂ
ಆಡಿದುದನಾಡುವೆಂ ನೋಡಿತಂ ನೋಡುವೆಂ

ಮಾಡಿತಂ ಮಾಡುವೆಂ ಕೂಡಿತಂ ಕೂಡುವೆಂ
ನಡೆಯಯ್ಯ ನಡೆ ಮಗನೆ ನಡೆ ಕಂದ ಬಸವಣ್ಣ
ಪೊಡವಿಗಧಿಪತಿಯಾಗಿ ಬಾಳಿನ್ನ ಬಸವಣ್ಣ
ಎಂದಲ್ಲಿ ಕರುಣಿಸಿದ ಮಾತು ಸಂಬಳವಾಗಿ
ಬಂದನೆಂತೆಂತಕ್ಕೆ ಅಗಲಲಾಱದೆ ರಾಗಿ
ಸಂಗಮನ ಕರುಣವೇ ತನಗೆ ಬೆಂಬಲವಾಗಿ
ಸಂಗಮ ಧ್ಯಾನವೇ ತನಗೆ ಸಂಗಡವಾಗಿ.

**ಹರಿಹರ–ಬಸವರಾಜದೇವರ ರಗಳೆ**
ಸು. (೧೨೦೦)

## ೩೯. ಭಕ್ತ ಹರಿಹರ

ಕರೆವುದದೆಂದು ಕಾಲ್ವಿಡಿಸಿಕೊಳ್ವುದದೆಂದು ದಯಾಕಟಾಕ್ಷದಿಂ
ಪೊರೆವುದದೆಂದು ಮೆಲ್ನುಡಿಗಳಿಂ ಮದವೇಱಿಪುದೆಂದು ಸೋಂಕಿನಿಂ
ಹರಿಪುದದೆಂದು ಸಂತಸದೆ ಪೆರ್ಚಿಪುದೆಂದು ಮನಸ್ಸಿ ನೀಂ ಕರಂ
ಕರಗಿಪುದೆನ್ನನೆಂದೊಸೆದು ಪೇಳೆನಗಿಂದೆಲೆ ಹಂಪೆಯಾಳ್ದನೇ

ನೋಡದ ಕಣ್ಗಳೇಕೆ ಸಲೆ ಕೇಳದ ಕರ್ಣಮದೇಕೆ ಭಕ್ತಿಯಿಂ
ಪಾಡದ ಬಾಯದೇಕೆ ಪೆಸರ್ಗೊಳ್ಳದ ಜಿಹ್ವೆಯದೇಕೆ ಪೂಜೆಯಂ
ಮಾಡದ ಕೈಗಳೇಕೆ ನೆಱೆ ಸೋಂಕದ ದೇಹಮದೇಕೆ ಕೂಡಿಯ
ಳ್ಕಾಡದ ಚಿತ್ತವೇಕೆನಗೆ ಹಂಪೆಯ ಲಿಂಗವೆ ನಿಮ್ಮೊಳಕ್ಕಱಿಂ

ಸತಿಪುತ್ರರ್ ಮಿತ್ರರಾಪ್ತರ್ ತನುಧನಮನವೆಂಬಿಂತಿವಂ ನಿತ್ಯಮೆಂದು
ಚ್ಚತರ ವ್ಯಾಸಂಗದಿಂ ಮೆಯ್ಯಱಿಯದೆ ಮರುಳಾಗಿರ್ದೆನೆನ್ನಂ ದುರಾಶಾ
ವೃತನಂ ದುರ್ಮೋಹಿಯಂ ದುಸ್ತರವಿಷಯವ್ಯಾಪ್ತನಂ ದುರ್ಧರೈನೋ
ಹತನಂ ದುರ್ಬೋಧನಂ ರಕ್ಷಿಪುದೆಲೆ ಕೃಪೆಯಿಂದಂ ವಿರೂಪಾಕ್ಷಲಿಂಗಾ

ಮೋಹಕ್ಕೇರೊರ್ಮೆ ಮಾಧುರ್ಯದ ನುಡಿನೆಲೆಗೋರೊರ್ಮೆ ಸಂದಿರ್ದ ಕಾಮೋ
ತ್ಸಾಹಕ್ಕೋರೊರ್ಮೆ ಮೆಯ್ವೆರ್ಚಿದವಿದ ಮದಕೋರೊರ್ಮೆ ಪೆರ್ಚಿರ್ದ ಲೋಭ
ವ್ಯೂಹಕ್ಕೋರೊರ್ಮೆ ಕೋಪೋನ್ನತಿಯನುಮತಿಗೋರೊರ್ಮೆ ಮೆಯ್ವೆರ್ಚಿ ಮದ್ದೇ
ಹೋಹಂ ಎಂದೆಂಬುದಂ ಮಾಣಿಸು ಮನಕಮಿದೊಂದಂ ವಿರೂಪಾಕ್ಷ ಲಿಂಗಾ

ನವನಿಧಿ ಬಾರ ಪುಣ್ಯನಿಧಿ ಬಾರ ಮಹಾನಿಧಿ ಬಾರ ಭಕ್ತರು
ತ್ಸವನಿಧಿ ಬಾರ ಭಾಗ್ಯನಿಧಿ ಬಾರ ಕೃಪಾನಿಧಿ ಬಾರ ಕಾಂತಿಯು

ದ್ಭವನಿಧಿ ಬಾರ ನಿತ್ಯನಿಧಿ ಬಾರ ಕೃಪಾನಿಧಿ ಬಾರ ಸತ್ಯಸಂ
ಭವನಿಧಿ ಬಾರ ತತ್ತ್ವನಿಧಿ ಬಾರೆಲೆ ಬಾರೆಲೆ ಹಂಪೆಯಾಳ್ದನೇ

ಹರನಂ ಶಂಕರನಂ ಶಶಾಂಕಧರನಂ ಕಾಪಾಲಿಯಂ ಕಾಲಸಂ
ಹರನಂ ಶೂಲಿಯನೀಶನಂ ಗಿರಿಶನಂ ಭಾಳಾಕ್ಷನಂ ನೀಲಕಂ
ಧರನಂ ಭರ್ಗನನುಗ್ರನಂ ಪರಮನಂ ಸರ್ವಜ್ಞನಂ ಶಂಭುವಂ
ಗಿರಿಜಾವಲ್ಲಭನಂ ಮನೋಜಹರನಂ ಕಂಡೆಂ ವಿರೂಪಾಕ್ಷನಂ

ಎನ್ನಾನಂದಸುಧಾಬ್ಧಿವರ್ಧನಕಳಾ ಸಂಪನ್ನನಂ ಚೆನ್ನನಂ
ಮುನ್ನಾರುಂ ನೆಱೆ ಕಾಣಬಾರದ ಲಸತ್ ಕಾಪಾಲಿಯಂ ಶೂಲಿಯಂ
ಭಿನ್ನಾಭಿನ್ನಮೆನಲ್ಕೆ ಬಾರದ ಮಹಾನಿಸ್ಸೀಮನಂ ಭೀಮನಂ
ಚೆನ್ನಂಗಂದುಱೆ ತನ್ನನಿತ್ತ ವಿಭುವಂ ಕಂಡೆಂ ವಿರೂಪಾಕ್ಷನಂ

ಮನೆ ನೆಳಲಾಗೆ ಪೆಂಡಿರಿನಿದಾಗೆ ಸುತರ್ ಪಿರಿದಾಗೆ ಅರ್ಥದಾ
ರ್ಜನೆ ಘನವಾಗೆ ಯೌವನಮುದಾಗೆ ಬಳಿಕ್ಕದನೇನನೆಂದಪೆಂ
ತನತನಗುಬ್ಬುತಂಕುರಿಸುತುಂ ನೆಱೆ ಪಲ್ಲವಿಸುತ್ತೆ ಪರ್ವುತುಂ
ನನೆಕೊನೆವೋಗಿ ಮಾಯೆ ಕೊಱಚಾಡದೆ ಮಾಣ್ಬಳೆ ಹಂಪೆಯಾಳ್ದನೇ

ಪೋಗೆನೆ ಪೋಪ ಬಾರೆಲವೋ ಬಾರೆನೆ ಜೀಯ ಹಸಾದವೆಂದು ಬೆ
ಳ್ಳಾಗುತೆ ಬರ್ಪ ಮಾಣೆಲವೊ ಸುಮ್ಮನಿರೆಂದೊಡೆ ಸುಮ್ಮನಿರ್ಪ ಮ
ತ್ತಾಗಳೆ ಬಗ್ಗಿಸಲ್ ನಡುಗಿ ಬೀಳುವ ಸೇವಿಪ ಕಷ್ಟವೃತ್ತಿಯಂ
ನೀಗಿದೆನಿಂದು ನಿಮ್ಮ ದಯೆಯಿಂ ಕರುಣಾಕರ ಹಂಪೆಯಾಳ್ದನೇ

ಸಡಿ ಘಡ ಮಾನವರ್ ಕುಡುವರೆಂಬುದನಾಡದಿರೆನ್ನ ಮುಂದೆ ಕ
ಪ್ಪಡದ ಶರೀರಗಳ್ ತೃಣದ ಹಾಹೆಗಳಕ್ಕಟ ! ಮಣ್ಣ ಬೊಂಬೆಗಳ್
ಕುಡುವುವೆ ? ಬೇಡು ಬೇಡಿದುದನೀವ ಮಹಾನಿಧಿಯಂ ಮಹೇಶನಂ
ಮೃಡನನನೂನದಾನಿಯನಲಂಪಿನ ಪೆಂಪಿನ ಹಂಪೆಯಾಳ್ದನಂ

ಸತಿ ಕಾರುಣ್ಯಂ ಕುಮಾರಂ ಮತಿ ಸಖನುರು ಸತ್ಯಂ ಪ್ರಧಾನಂ ವಿವೇಕಂ
ಸ್ತುತಿ ಭಂಡಾರಂ ಸುಧರ್ಮಂ ಕರಿತುರಗರಥಾಖ್ಯಂ ನಿರಾಶಾ-ಸ್ವದೇಶಂ
ಸತತಂ ತಾನಾಗಿ ಶಾಂತಿಸ್ಥಲದೊಳೆಸೆವ ಸದ್ಭಕ್ತಿಸಪ್ತಾಂಗರಾಜ್ಯ—
ಸ್ಥಿತನಾಗಿರ್ಪಂತೆ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ

ನಿಮಗೆನ್ನಂ ಮಾಱುಗೊಟ್ಟೆಂ ಪುರಹರ ನಿಮಗೆನ್ನಂ ಸಪಾ ತೊಳ್ತುಗೊಟ್ಟೆಂ
ನಿಮಗೆನ್ನಂ ಸೂಱೆಗೊಟ್ಟೆಂ ನಿಮಗೆ ಹರುಷದಿಂದೊಚ್ಚತಂ ಕೊಟ್ಟೆನಾಹಾ
ನಿಮಗೆನ್ನಂಮುಚ್ಚುಗೊಟ್ಟೆಂಗುರುವೆಘನವೆಸಂತೋಷದಿಂದೊಪ್ಪುಗೊಟ್ಟೆಂ
ನಿಮಗೆನ್ನಂ ದೇವ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ

ಬಿಡೆನೀಶಾನಿಮ್ಮಪಾದಾಬ್ಜಮನೆಲೆಲೆಬಿಡೆಂ ಸೀಳ್ದೊಡಂ ಪೋಳ್ದೊಡಂ ಪೊ-
ಯ್ದೊಡಮಂದಿಂದೆಂದುಮೆಂತುಬಿಡೆನಭವಬಿಡೆಂ ಶಂಕರಾಮಾಣೆನಾಂಬಲ್
ವಿಡಿದೆಂ ಮತ್ತತ್ತಮಿತ್ತಂ ಚಲಿಯಿಸದೆಲೆ ಮಾತ್ ಸ್ವಾಮಿನಿಮ್ಮಾಜ್ಞೆಯಿಂದಂ
ಮೃಡನೇ ಭಕ್ತಾರ್ಥಿ ಪಂಪಾಪುರದರಸ ವಿರೂಪಾಕ್ಷ ರಕ್ಷಿಪ್ಪುದೆನ್ನಂ

ಕರಣಂಗಳ್ ಕಳೆಯೇಱೆ ಲೋಚನಯುಗಂ ನೀರೇಱೆ ಮೆಯ್ಯೆಲ್ಲವಂ-
ಕುರವೇಱಲ್ ನುಡಿ ಕಂಪವೇಱೆ ಚರಣಂಗಳ್ ಲೀಲೆಯೇಱಲ್ ಮೊಗಂ
ಸಿರಿಯೇಱಲ್ ತಲೆಗೇಱೆದುತ್ಸವದೆ ನಿಮ್ಮಂ ಪೂಜಿಸುತ್ತಾನುಮಾ-
ದರದಿಂದೀಕ್ಷಿಸುತಾಡುತಿರ್ಪುದೆನಗಿನ್ನೆಂದೋ ವಿರೂಪಾಕ್ಷನೇ

ಶಿವ ಶಿವ ಪುಣ್ಯಬಂಧುವೆ ಪುರಾತನಬಂಧುವೆ ಸರ್ವಜೀವಬಂ-
ಧುವೆ ಪರಮಾರ್ಥಬಂಧುವೆ ಸುಖಪ್ರದಬಂಧುವೆ ಬಾರನಾಥಬಂ-
ಧುವೆಯನಿಮಿತ್ತಬಂಧುವೆ ಮನೋಹರಬಂಧುವೆ ಅತ್ಯಪೂರ್ವಬಂ-
ಧುವೆ ಸಕಲೈಕ ಚೇತನಸುಬಂಧುವೆ ಬಂಧುವೆ ಹಂಪೆಯಾಳ್ವನೇ

**ಹರಿಹರ—ರಕ್ಷಾಶತಕ, ಪಂಪಾಶತಕ.**

ಸು. (೧೨೦೦)

## ೪೦. ಸೊಮ್ಮಿನ ಹಮ್ಮು

ಒಡವೆಯಾರದು ಒಡೆಯರಾರೆಂಬುದನು ಅಱಿಯೆ
ಕಡುಲೋಭಿಜಡನೆಯಕಟಱಿಯಲಾ ನರಗುಱಿಯೆ

ಕಟ್ಟೊಡೆಯತನವ ಬಲಿದಿಂತು ಹೋರುವೆ ನೀನು
ಹುಟ್ಟುವಾಗಲೆ ಧನವ ಕಟ್ಟಿ ತಂದೆಯೊ ನೀನು

ನೀ ತಾರದೊಡೆ ನಿನ್ನ ತಾತ ತಂದನೊ ಇದಂ
ಏತಱಿಂದಾಯ್ತು ನಿನಗೊಡೆತನಂ ಪೇೞಿದಂ

ಬರುತ ತಾರದೊಡೇನು ಆಯ್ತು ನಿನಗೆಂದೊಡಂ
ಹರಣದೊಡನೊಯ್ಯಬೇಡಾವೊಡೆಯನಾದೊಡಂ

ಹುಟ್ಟುವಲಿ ತಾರೆ ಹೊಂದುವಲೊಯ್ಯೆ ಕಂಡಿದಕೆ
ನಟ್ಟನಡುವೆಹಗಾಯ್ತು ಒಡೆತನಂ ಪೇೞಿದಕೆ

ನಿನ್ನದಾದೊಡೆ ನಿನ್ನ ವ್ಯಯಕೆ ಸಲುತಿರದೇಕೆ
ಕನ್ನದಿಂ ನೃಪದಾಯರಿಂದ ಸರಿಯಲದೇಕೆ

ಹೋಗುತ್ತ ತನ್ನಳತೆಯಲಿ ತಾನೆ ಹೋದುದೇ
ಬೇಗೆಯಿಂ ನಿನ್ನ ಹರಣವನೊಯ್ಯದಾದುದೇ

ಇದುಕಾರಣಂ ನಿನ್ನ ಸೊಮ್ಮಲ್ಲ ಎಲೆಮರುಳೆ
ಕುದಿದು ಕೋಟಲೆಗೊಂಡೊಡಂ ಇಲ್ಲ ಎಲೆಮರುಳೆ

**ಕೆರೆಯ ಪದ್ಮರಸ-ದೀಕ್ಷಾಬೋಧೆ**
ಸು. (೧೨೦೦)

# ೪೧. ವಿಶ್ವೇಶ್ವರ ಸಾಕ್ಷಾತ್ಕಾರ

ಇಂದೆನ್ನ ಕುಲಜನೆನಿಸುವ ಹರಿಶ್ಚಂದ್ರನಂ
ಹೆಂದದ ಚತುರ್ದಶಜಗಂಗಳಱಿವಂತು ತರು
ಣೇಂದುಧರನಹ ವಿಶ್ವಪತಿ ಮೆಱೆವ ಸಂಭ್ರಮದ
ಸಡಗರವ ನೋಳ್ಪೆನೆಂದು
ಕುಂದದುದ್ಧವನೇಱಿ ನಿಂದಿರ್ದನೋ ಎನಿ
ಪ್ಪಂದದಿಂದುದಯಗಿರಿಶಿಖರಕ್ಕೆ ರಾಗದಿಂ
ಬಂದನಂಬುಜಮಿತ್ರನೆಂದೆನಿಪನಪವಿತ್ರ
ತಿಮಿರಪಟಲಾಮಿತ್ರನು

ಹೆಡಗಯ್ಯ ಬಿಗಿದ ನೇಣಂ ಕೊಯ್ದು ಬಿಸುಟು ನಿಡು
ದಡದಲ್ಲಿ ಮೂಡ ಮುಂತಾಗಿ ಕುಳ್ಳಿರಿಸಿ ಹಿಂ
ದೆಡದಲ್ಲಿ ಕುಸಿದು ನೀಡಡಿಯಿಟ್ಟು ನಿಂದು ಖ
ಡ್ಗವ ಸೆಳೆದು ಜಡಿದು ನೋಡಿ
ಹೆಡತಲೆಗೆ ಮೋಹಿ ಕೈಯೆತ್ತಿ ಕಂಧರ ಹಱಿಯೆ
ಹೊಡೆಯಲನುವಾದೆನನುವಾದೆನನುವಾಗಾಗು
ಮಡದಿ ನೆನೆ ನಿನ್ನ ದೈವವನು ಬಿಡದೆನ್ನೊಡೆಯ
ನಂ ಹರಸು ಹರಸೆಂದನು

ಆ ಹೊಯ್ವನಾ ಹೊಯ್ದನೆಲೆಲೆ ಶಿವಶಿವ ಅಷ್ಟ
ದೇಹಿ ನೀನೇ ಶರಣು ರಕ್ಷಿಸಬಲೆಯನು ದು
ರ್ಮೋಹಿ ವಿಶ್ವಾಮಿತ್ರ ಪಾಪಿ ಇನ್ನಾದಡಂ ಸತಿಯ
ಕೊಲೆಯಂ ನಿಲಿಸಲು

ಹೋಹುದೇನೆಂದೋವಿ ಬೇಡಿಕೊಳುತಂ ಸುರ
ವ್ಯೂಹಮಂಬರದಲ್ಲಿ ಹೂಮಳೆಗಳಂ ಪಿಡಿದು
ಮೋಹರಂಬೆತ್ತು ನೋಡುತ್ತಿರಲು ನಾರಿ ಹರ
ಕೆಗಳನವಧರಿಸೆಂದಳು

ಬಲಿದ ಪದ್ಮಾಸನಂ ಮುಗಿದಕ್ಷಿ ಮುಚ್ಚಿದಂ
ಜುಳಿವೆರಸಿ ಗುರುವಸಿಷ್ಠಂಗೆಱಗಿ ಶಿವನ ನಿ
ರ್ಮಲರೂಪ ನೆನೆದು ಮೇಲಂ ತಿರುಗಿ ನೋಡಿ ಭೂ
ಚಂದ್ರಾರ್ಕತಾರಂಬರಂ

ಕಲಿ ಹರಿಶ್ಚಂದ್ರರಾಯಂ ಸತ್ಯವೆರಸಿ ಬಾ
ಳಲಿ ಮಗಂ ಮುಕ್ತನಾಗಲಿ ಮಂತ್ರಿ ನೆನೆದುದಾ
ಗಲಿ ರಾಜ್ಯದೊಡೆಯ ವಿಶ್ವಾಮಿತ್ರ ನಿತ್ಯನಾ
ಗಲಿ ಹರಕೆ ಹೊಡೆಯೆಂದಳು

ಹರಕೆಯಂ ಕೇಳಿ ಹವ್ವನೆ ಹಾಱಿ ಬೆಱಗಾಗಿ
ಮರವಟ್ಟು ನಿಂದು ಭಾಪುರೆ ವಿಧಿಯ ಮುಳಿಸೆ ಹೋ
ದಿರುಳೆನ್ನ ಸುತನ ದುರ್ಮರಣಮಂ ತೋಱಿ ಕೈ
ಯೊಡನೆ ಮತ್ತೀಗಳೆನ್ನ

ವರಸತಿಯ ತಲೆಯನಾನೆನ್ನ ಕೈಯಾರೆ ಪಿಡಿ
ದರಿವಂತೆ ಮಾಡಿದೆಯಿದಕ್ಕೆ ನಾನಿನಿತು ಹೇ
ವರಿಸುವವನಲ್ಲ ಪತಿಯಾಜ್ಞೆಯುಳಿದಡೆ ಸಾಕೆ
ನುತ್ತ ಕೊಲಲನುವಾದನು

ಮನದ ಶಂಕೆಯನುಳಿದು ಹೊಡೆಯಲನುವಾದ ಭೂ
ಪನ ಭಾವಮಂ ಕಂಡು ಹೊಡೆಯಬೇಡೆನ್ನ ನಂ
ದನೆಯರಂ ಮದುವೆಯಾದೊಡೆ ಸತ್ತ ಮಗನನೆ
ತ್ತುವೆನಿವಳ ತಲೆಗಾವೆನು

ವಿನಯದಿಂ ಕೊಂಡ ಧನಮುಂ ಕೊಟ್ಟು ನಿನ್ನ ಬಂ
ಧನಮೋಕ್ಷಮುಂ ಮಾಡಿ ರಾಜ್ಯಮುಂ ಪೊಗಿಸಿ ಮು
ನ್ನಿನ ಪರಿಯಲಿರಿಸುವೆಂ ಕೇಳೆಂದನಂಬರದೊ
ಳಿದ್ದು ವಿಶ್ವಾಮಿತ್ರನು

ತಿರುಗಿ ಮೇಲಂ ನೋಡಿ ಕಂಡಿದೇಂ ಮುನಿ ನಿಮ್ಮ
ಹಿರಿಯತನಕೀ ಮಾತು ಯೋಗ್ಯವೇ ಕೇಳೆನ್ನ
ಸಿರಿಪೋದಡೇನು ರಾಜ್ಯಂ ಪೋದಡೇನು ನಾ
ನಾರ ಸಾರಿರ್ದಡೇನು

ವರಪುತ್ರನಸುವಳಿದು ಪೋದಡೇಂ ನಾನೆನ್ನ
ತರುಣಿಯಂ ಕೊಂದಡೇಂ ಕುಂದೆ ಸತ್ಯವನು ಬಿ
ಟ್ಟರನೆನಿಸಿದಡೆ ಸಾಕು ಎಂದೆತ್ತಿ ಹಿಡಿದ ಖ
ಡ್ಗವ ಜಡಿಯುತಿಂತೆಂದನು

ಎನ್ನ ದುಷ್ಕರ್ಮವಶದಿಂದಾದ ಕರ್ಮವೆಂ
ದಿನ್ನೆಗಂ ಬಗೆದೆನಾನಿಂದುತನಕಂ ಕಡೆಗೆ
ನಿನ್ನ ಗೊಡ್ಡಾಟವೇ ಹೊಲೆಯನಾದವನಿನ್ನು
ಸತಿಗಿತಿಯ ಕೊಲೆಗೆ ಹೇಸಿ

ಬೆನ್ನೀವೆನೇ ಇದಂ ತೋಱಿ ಸಿಕ್ಕಿಸಬಂದ
ಗನ್ನಗತಕಕ್ಕೆ ಸೆಡೆವೆನೆ ಸಡಿಫಡೆನುತಾರ್ದು
ಸನ್ನಿಕಾಱಿಂ ವಧುವನೆಲೆಲೆ ಶಿವಶಿವ ಮಹಾ
ದೇವ ಹೊಡೆದಂ ಹೊಡೆದನು

ಹೊಡೆದ ಕಡುಗದ ಬಾಯಕಡೆಯ ಹೊಡೆಗಳನಾಂತು
ಮಡದಿಯೆಡೆಗೊರಳ ನಡುವಡಸಿ ಮೂಡಿದನು ಕೆಂ
ಜಡೆಯ ಶಶಿಕಳೆಯ ಸುರನದಿಯ ಬಿಸಿಗಣ್ಣ ಫಣಿ
ಕುಂಡಲದ ಪಂಚಮುಖದ

ಎಡದ ಗಿರಿಜೆಯ ತಳಿತ ದಶಭುಜದ ಪುಲಿದೊಗಲಿ
ನುಡಿಗೆಯ ಮಹಾವಿಷ್ಣುನಯನವೇಱಿಸಿದ ಮೆ
ಲ್ಲಡಿಯ ಕಾಶೀರಮಣ ವಿಶ್ವನಾಥಂ ಸುರರ
ನೆರವಿ ಜಯಜಯವೆನುತಿರೆ

ನೆನೆದು ಚಾಂಡಾಲಕಿಂಕರನಾಗಿ ಹೊಲೆವೇಷ
ವನು ಹೊತ್ತು ಸುಡುಗಾಡ ಕಾದು ಶವಶಿರದಕ್ಕಿ
ಯನು ಹೇಸದುಂಡು ಜೀವಿಸುವ ವರಪುತ್ರನಳಿ
ದುದನು ಕಣ್ಣಾರೆ ಕಂಡು
ಘನಪತಿವ್ರತೆಯಪ್ಪ ನಿಜಸತಿಯು ಕೊಂದ ನೀ
ಚನು ಮೂರ್ಖನಾನೆನ್ನ ಠಾವಿಂಗಿದೇಕೆ ಪಾ
ವನಮೂರ್ತಿ ನೀವು ಬಿಜಯಂಗೆಯ್ದಿರೆಂದಭವ
ನಂಘ್ರಿಯಲಿ ಸೈಗೆಡೆದನು

ಘನ ಸತ್ಯವೇ ಜೀವವೆಂದಿರ್ದ ನಿನ್ನ ಹೊಲೆ
ಯನ ಸೇವೆ ಗುರುಸೇವೆ ಹೊತ್ತ ಹೊಲೆವೇಷ ಪಾ
ವನಪುಣ್ಯವೇಷ ಸುಡುಗಾಡ ರಕ್ಷಿಸುವಿರವು
ತಾ ಯಜ್ಞರಕ್ಷೆಯಿರವು
ಅನುದಿನಂ ಭುಂಜಿಸಿದ ಶವದ ಶಿರದಕ್ಕಿಯ
ಲ್ಲನಪೇಯ ಚಾಂದ್ರಾಯಣಂ ಪುತ್ರನಳಿವು ಜ
ನ್ಮನಿಕಾಯದಳಿವಂಗನಾಹನನ ಮಾಯಾಹ
ನನವಂಜಬೇಡೆಂದನು

ಏಳು ಭೂರಮಣ ಎಂದಭವ ಪರಸುತ್ತ ಕ
ಣ್ಣಾಲಿಜಲವಂ ತೊಡೆದು ಸಂತೈಸಿ ಭಸಿತಮಂ
ಭಾಳದೊಳಗಿಟ್ಟು ತೆಗೆದಪ್ಪಿ ಕೌಶಿಕನ ಕರೆ
ದೆಲೆ ಮುನಿಪ ಸುಕುಮಾರನ

ತೋಳ ಹಿಡಿದೆತ್ತಿ ತಾ ಬೇಗೆಂದೆನಲ್ಕೆ ಮುನಿ
ಪಾಳಕಂ ವಿಷವೇಱ ಸತ್ತರಸುಪುತ್ರನಂ
ಏಳೇಳು ಲೋಹಿತಾಶ್ವಾಂಕ ಎನೆ ಬೆಬ್ಬಳಿಸು
ತೆದ್ದನೇವಣ್ಣಿಸುವೆನು

ಅತಿ ಹುಸಿವ ಯತಿ ಹೊಲೆಯ ಹುಸಿಯದಿಹ ಹೊಲೆಯನು
ನ್ನತಯತಿವರನು ಹುಸಿದು ಮಾಡುವ ಮಹಾಯಜ್ಞ
ಶತವೆಯ್ದೆ ಪಂಚಪಾತಕ ಸತ್ಯವೆರಸಿದ
ನ್ಯಾಯವದು ಲಿಂಗಾರ್ಚನೆ

ಶ್ರುತಿಮತವಿದೆನ್ನಾಜ್ಞೆ ನಿನ್ನಂತೆ ಸತ್ಯರೀ
ಕ್ಷಿತಿಯೊಳಿನ್ನಾರುಂಟು ಹೇಳೆಂದು ಪಾರ್ವತೀ
ಪತಿ ಹರಿಶ್ಚಂದ್ರನಂ ತಲೆದಡವಿ ಬೋಳೈಸಿ
ಕೌಶಿಕಂಗಿಂತೆಂದನು

ನುಡಿಯೊಳನೃತಂ ತೋಱದಂತೆ ನಿನ್ನಲೆಗೆ ನಿಂ
ದಡೆ ಮೆಚ್ಚಿ ಮೇಲೇನ ಕೊಡುವೆನೆಂದೆಂದೆಯದ
ಕೊಡು ಬೇಗದಿಂದ ವಿಶ್ವಾಮಿತ್ರ ಎಂದಡಾ
ನೈವತ್ತುಕೋಟಿ ವರುಷ

ಬಿಡದೆ ಮಾಡಿದ ತಪಃಫಲದೊಳರ್ಧವನಾಂತೆ
ಕಡುಮುಳಿದು ಕಾಡಿ ನೋಡಿದೆನು ಮೆಚ್ಚಿದೆನಿನ್ನು
ಹಿಡಿಯೆಂದುಸಿರ್ದು ಫಲವೆಲ್ಲವಂ ಕೊಟ್ಟನರ
ಸಂಗೆ ಮುನಿಗಳ ದೇವನು

ಧರೆಯೊಳು ಹರಿಶ್ಚಂದ್ರಚಾರಿತ್ರಮಂ ಕೇಳ್ದ
ನರರೇಳು ಜನ್ಮದಿಂ ಮಾಡಿರ್ದ ಪಾತಕವು
ತರುಣಿಯುದಯದ ಮುಂದೆ ನಿಂದ ತಿಮಿರದ ತೆಱವೆ
ಹರೆಯುತಿಹುದೇಕೆಂದಡೆ

ಹರನೆಂಬುದೇ ಸತ್ಯ ಸತ್ಯವೆಂಬುದು ಹರನು
ಎರಡಿಲ್ಲವೆಂದು ಶ್ರುತಿ ಸಾಱುತಿರಲಾ ವಾಕ್ಯ
ವರರೆ ನಿರುತವ ಮಾಡಿ ಮೂಜಗಕೆ ತೋಱಿದ ಹ
ರಿಶ್ಚಂದ್ರಕಥೆಗೇಳ್ದಡೆ

**ರಾಘವಾಂಕ–ಹರಿಶ್ಚಂದ್ರಕಾವ್ಯ**
ಸು. (೧೨೨೫)

## ೪೨. ಬಾಲ್ಯದ ಮರೆಯ ಬೊಮ್ಮ

ಮಱೆಯದೀ ತೆಱದೊಳಂದಂದಿಂಗೆ ಕಱುಗಾವ
ತೆಱದಿ ಲಿಂಗಾರ್ಚನಾ ಸುಖವಡೆಯುತಂ ಹಾಲ
ಮಱೆಯ ಘೃತದಂತೆ ಮಾತಿನ ಮಱೆಯ ಸತ್ಯದಂತೊಡಲ
ಮಱೆಯಾತ್ಮನಂತೆ
ಉಱುವ ಸಮತೆಯ ಮಱೆಯ ಪುಣ್ಯದಂದದಿ ಮರನ
ಮಱೆಯಗ್ನಿಯಂತೆ ಪುಷ್ಪದ ಮಱೆಯ ಫಲದಂತೆ
ಮೆಱೆವ ಬಾಲ್ಯದ ಮಱೆಯ ಪರಬೊಮ್ಮವಾಗಿ ಮೆಱೆಯುತ್ತಿರ್ದ
ನಪ್ರತಿಮನು

ಅಡಿಯಿಟ್ಟ ಧರೆ ಮಹಾಕ್ಷೇತ್ರ ವಱಿಯದೆ ಹೊಕ್ಕ
ಮಡು ದಿವ್ಯತೀರ್ಥ ತುಡುಕಿದ ಜಲಂ ಸಿದ್ಧಾಂಬು
ನುಡಿದ ನುಡಿಗಳು ಮೂಲಮಂತ್ರವಾಡುತ್ತ ಮಂಡೆಯಲಿ ಕೈಯಿಟ್ಟಾತನು
ಕಡೆಗೆ ಜೀವನ್ಮುಕ್ತನಜ್ಞಾನದಿಂ ಸೋಂಕು
ವಡೆದಾತ ಸುರನಿತ್ತುದೇ ನಿಧಿ ನಿರೀಕ್ಷಿಸಿತೆ
ಪೊಡವಿಪಾವನವಮಮ ಸಿದ್ಧರಾಮಂ ಪುಣ್ಯನಾಮನಭಿನವ ಸೋಮನು

ಒಂದು ದಿನವೆಂದಿನಂದದಿ ಕಱುಗಳಂ ಹೊಡೆದು
ತಂದು ನಳನಳಿಸಿ ಕೋಮಲತೆಯಿಂ ಕೊಬ್ಬಿ ನಲ
ವಿಂದೆ ಮಡಲಿಱಿದಡಸಿ ಬೆಳೆದು ಭಾರೈಸಿ ತನ್ನಂ ಹೊತ್ತ ಭೂವನಿತೆಗೆ
ವಂದಿಸುವ ತೆಱದಿಂದ ಬಾಗಿ ಬಳುಕುವ ತೆನೆಗ
ಳಿಂದೆಸೆವ ತಮ್ಮ ನವಣೆಯ ಕೆಯ್ಯ ಬಳಿಯೊಳಾ
ನಂದದಿಂದಿರ್ಪ ಸಿದ್ಧೇಂದ್ರನಂ ಮೆಱೆಯಲನುಗೆಯ್ದನಗಜಾರಮಣನು

ಭುವನದೊಳು ಹರವರಿಯ ಕುಱುಹುಳ್ಳ ತನ್ನ ವೇ
ಷವನು ಜಂಗಮರೂಪಿನೊಳು ಮಡಗಿ ನಡೆತಂದು
ಶಿವಮಸ್ತು ನಿತ್ಯನಾಗೆಂದು ಭಸಿತವನಿತ್ತು ಕೆಲಸಾರ್ದು ನಿಂದಿರ್ದೊಡೆ

ರವಿ ಮುಗಿಲ ಮಱೆಗೊಂಡೊಡಂ ಬೆಳಗು ಲೋಕಮಂ
ಧವಳಿಸುವ ತೆಱದಿ ನಿಜಮಂ ಮಾಜಿ ಕೃತಕದೊಳ
ಗವಿದೊಡಂ ಹಳಹಳನೆ ಹೊಳೆಹೊಳೆದು ದೇವಕಳೆ ಮನಕೆ
ಮಂಗಳವಿತ್ತುದು

ನ್ಯಾಯದಿಂ ಕಣ್ಣಱಿಯದಿರ್ದೊಡಂ ಕರುಳಱಿಯು
ವೇಯಾಗಳಂತಲ್ಲಿ ಕಾಣುಹ ತಡಂ ನೆನೆದು
ಘೇಯೆಂದು ಮೆಯ್ಯಿಕ್ಕಿ ಕುಣಿದು ಕುಕಿಲಿಱಿದಾಡಿ ಹಾಡಿ ಪದರಜದಿ
ಹೊರಳಿ
ಕಾಯದಿಂ ಕರಣದಿಂ ಚರಣಂಗಳಂ ಮುಸುಕಿ
ಹಾಯೆಂದು ಹಾರೈಸಿಯತಿತುಷ್ಟಿಯಿಂ ದೇವ
ರಾಯನೀಕ್ಷಿಸಿ ಮೆಚ್ಚಿ ಮುಚ್ಚಲಱಿಯದೆ ನಿಜವ ತೋಱಲುದ್ಯೋಗಿ
ಸಿದನು

ಜಡೆಯು ಮಕುಟದ ಶಶಿಯ ಸುರನದಿಯ ಕುಂಡಲದ
ನಡುಗಣ್ಣ ಪಂಚಾಸ್ಯದೀರೈದು ಭುಜದ ಕೊರ
ಲೆಡೆಯ ಗರಳದ ತಳೆದ ಭಸಿತದಹಿಭೂಷಣದ ಹೊದೆದ ಹೊಸ
ಗಜಚರ್ಮದ
ಹಿಡಿದ ಡಮರುಗ ಶೂಲ ಫಲಕ ಧನು ಸರ್ಪನುಂ
ಖಡುಗ ಶಿಖಿ ಪರಶು ಮೃಗ ಪುಲಿದೊವಲು ಸುತ್ತಿ ಬಿಗಿ
ದುಡಿಯ ಹರಿನಯನವೆರಸಿದ ಮೆಲ್ಲಡಿಯ ನಿಜದ ಮೂರ್ತಿಯಂ
ತೋಱಿಸಿದನು

ಘನಮೇಘಮಂ ಕಂಡ ನವಿಲಂತೆ ದೇವರಾ
ಯನ ನಿಜಕೆ ಬೆಱಗಾಗುತುಸಿರಲಮ್ಮದ ಸುಖವ
ನನುಭವಿಸಿ ತಳಿರೆತ್ತ ಬಿಸಿಲೆತ್ತ ಹಂಸಶಿಶುವೆತ್ತ ಕಲುವೊರಡಿಯೆತ್ತ

ನೆನಹು ನಿಲುಕದ ಸಹಜ ಸುಕುಮಾರ ನೀನೆತ್ತ
ಲನಿಮಿತ್ತಮೀಯೆಡೆಗೆ ಬರವೆತ್ತ ನೀನಾರು
ಮನೆಯಲ್ಲಿ ಹೆಸರಾವುದಾವ ನಾಡವನೆಂದು ಕೇಳ್ದನಗಜೇಶ್ವರನನು

ಪತಿತಪಾವನ ಪರ್ವತಾಶ್ರಮದಲಿಪ್ಪೆನು
ನ್ನತ ಮಲ್ಲಿನಾಥನೆಂದೆನ್ನ ನಾಮಂ ನಿನ್ನ
ನತಿ ನೇಹದಿಂ ನೋಡಿ ಹಂಜಕ್ಕಿಯಂ ಬೇಡಿ ಮೆಲಬಂದೆನೆಂದು ನುಡಿಯೆ
ಅತುಳಬಳ ಹರುಷವನು ತಳೆದು ಕೆಯ್ಯೊಳು ತನ್ನ
ಮತಿಗೆ ಮಂಗಳವಪ್ಪ ತೆನೆಯನಱಿಸಿದನು ಸುರ
ಪತಿ ಸುರಭಿಗಿಕ್ಕಲೆಂದಮೃತ ಫಳಮಂ ಕಲ್ಪತರುವನದೊಳಱಿಸುವಂತೆ

ನಸಿದು ಬೆಳೆಯದೆ ಕೊಬ್ಬಿ ದೊಡ್ಡಿತಹ ತೆನೆಗಳೊಳು
ನಸುಗೆಂಪಿನಿಂ ಬೀಗಿ ಬಾಗಿ ತೂಗುವ ಚೆಲುವ
ಹೊಸಹಾಲ ಹನಿಗಳಡಸಿದ ತೆಱದ ತೆನೆಗಳಂ ತಿಱಿತಿಱಿದು ತಂದುತಂದು
ಒಸೆದೊಸೆದು ಹೊಸೆ ಹೊಸೆದು ರಸವುಳ್ಳ ಹಸುರುಳ್ಳ
ಬಿಸಿಯುಳ್ಳ ಹಸಿಯ ಕೆಂಪುಳ್ಳವಲನಿತ್ತು ಬೋ
ಧಿಸಿದನುರೆ ಕಲ್ಪಭೂಜವನು ಚಿಂತಾಮಣಿಯು ಚಿಣ್ಣನುಪಚರಿಸುವಂತೆ

ದೇವಪತಿ ದೇವಾಧಿದೇವ ದೇವರ ಗಂಡ
ದೇವ ನೆಱೆ ತಣಿದು ತಲೆಯೆತ್ತುವನ್ನಂ ಸವಿದು
ಕಾವುದೆನ್ನಂ ತಂದೆಯೆಂದು ಬಂದಡಿಗಡಿಗೆ ಪೊಡಮಟ್ಟು ನೀಡಿ ನೀಡಿ
ಭಾವಿಸುವ ಸುತನ ಕಡುಮೋಹಮುಂ ಮುದನವನ
ಽದಾವನೀಕ್ಷಿಸಲಾಱದಾತನಂ ನಾನಿಪ್ಪ
ಶಿಖಾವಿಂಗೆ ಬರಿಸುವುದಕಾವುದೋ ಬುದ್ಧಿಯೆಂದಱಿಸಿ ಕಂಡಿಂತೆಂದನು

ಎಳ ಅವಲಿನಿಂ ತಣಿದೆನಳಿಯುಂಬಕಳಕೆ ಮನ
ವೆಳಸಿತ್ತು ನನಗೆಂದು ತಂದುದುಂಟೇ ಇಲ್ಲ
ನಿಳಯದಿಂ ತಂದಪಾ ತಪ್ಪೆನೆನೆ ತಾ ಪೋಪೆನೇ ಪೋಗು ಬೇಗವೆನಲು
ಹುಲಿಯುಂಟು ಕರಡಿಯುಂಟಮ್ಮಾವು ಉಂಟಲ್ಲಿ
ಖಳ ಮೂರ್ಖ ಚೋರರುಂಟೆಂತಿರಿಸಿ ಪೋಪೆನೆಂ
ದಳವಳಿಯುತಿರಲೆನ್ನ ದೆಸೆಗಂಜಬೇಡ ಹೋಗೆಂದನಡಗುವ ಭರದೊಳು

ಇರಲಾಱದಗಲಲಾಱದೆ ಸಂಕಟಂಗೊಂಡು
ಹಿರಿಯ ಮೆಳೆಯಡಿಯಲ್ಲಿ ಹೊದಕೆಯಂ ಹಾಸಿ ಕು
ಳ್ಳಿರಿಸಿ ವಂದಿಸಿ ಪೋಗಿ ಪೋಗಲಾಱದೆ ತಿರುಗಿ ಬಂದೋವಿ ಬಲ್ಪಿನಿಂದ
ತಿರುಗಿ ನೋಡುತ್ತ ಬಾಡುತ್ತ ಕಣ್ಮಱೆಯಾಗೆ
ಮರಳಿ ನೋಡುತ್ತ ಮೆಳೆ ಮಱೆಯಾಗೆ ಮಱುಗುತ್ತ
ಹರಿದು ಮನೆವೊಕ್ಕು ಜನನಿಯನಪ್ಪಿ ಬೇಡಿದಂ ಭುಲ್ಲವಿಸಿ ಲಲ್ಲೆಗಱೆದು

ಹಿಂದೆ ಕರೆವಡೆ ಬಾರ ನುಡಿಸೆ ನುಡಿಯಂ ಕೊಟ್ಟ
ಡೊಂದುಮಂ ಕೊಳ್ಳನಿಕ್ಕಿದಡುಣ್ಣನಿಂದು ತ
ನ್ನಿಂದ ತಾಂ ಬೇಡಿದಂ ಮಗನೆಂದು ಸಡಗರಿಸಿ ಕಡೆದ ತಾರೆಗಳ ತಿರುಳ
ಚಂದದೋಗರದೊಳಗೆ ಚಂದ್ರಿಕೆಯ ಹೊಸ ಹಳುಕಿ
ನಂದದೆಮ್ಮೆಯ ಮೊಸರು ನೆಲ್ಲಿ ಮಾವ್ ಮೆಣಸುಗರೆ
ಯೆಂದಿವೆಲ್ಲವನಿರಿಸಿ ಕಟ್ಟಿಕೊಟ್ಟಳು ಕಂದ ಕೋ ಎಂದು ಸಂತಸದೊಳು

ಸಿಂದಿರದೆ ಬಪ್ಪಾಗಳೆಡದ ಭಾಗಂ ಕೆತ್ತಿ
ಜೆಂದೆನೆನ್ನಯ ತಂದೆ ಹುಲಿ ಕರಡಿಗಳು ಕಚ್ಚಿ
ನೊಂದನೋ ಹಸಿದು ಬೆಂಡಾದನೋ ಹೋದನೋ ಏನಾದನೋ ಎನುತ್ತ

ಒಂದೊಂದನೆಣಿಸುತ್ತ ಬಂದು ನೋಳ್ಪಾಗಳ
ಲ್ಲಿಂದ ಮುನ್ನವೆ ಶಿವಂ ಹೋಗೆ ಕುಳ್ಳಿರ್ದ ಮೆಳೆ
ಇಂದು ತೊಲಗಿದ ರಾತ್ರಿಯಂತೊಪ್ಪವಳಿದಿರಲು ಕಂಡನಾ ಸಿದ್ಧೇಂದ್ರನು

ಬಹ ತವಕದಿಂ ಹೊಲಬುಗೆಡೆನಲೇ ನಮ್ಮ ಕೆ
ಯ್ಯಹುದೊ ಅಲ್ಲವೋ ಎನುತ್ತಂ ಸುತ್ತಲುಂ ನೋಡಿ
ಸಹಸಿಗನ ಹಾವುಗೆಯ ಹಜ್ಜೆಯಿವೆ ನಿಂದಿರ್ದನಿಲ್ಲಿ ಕುಳ್ಳಿರ್ದನಿಲ್ಲಿ
ಬಹಳವೆಳಗಿನ ಕಮಂಡಲುವನಿಳುಹಿದನಿಲ್ಲಿ
ಕುಹಕದಿಂ ಹಂಜಕ್ಕಿಯಂ ಸವಿದನಿಲ್ಲಿ ಬಳಿ
ಕ್ಕೆಹಗಡಗಿ ಹೋದನೋ ತಾನೆ ಬಲ್ಲಂ ಕುಱುಹು ತಪ್ಪದೆನುತಾರೈದನು

ಬೆಳಗೆಯ್ಯ ಹೊದಱಿನೊಳು ಮುನ್ನಾಡಿದೆಡೆಗಳೊಳು
ತಳಿತ ಮರನಡಿಗಳೊಳಗೆಳಲತೆಯ ತಂಪಿನೊಳು
ತಿಳಿಗೊಳನ ತೀರದೊಳು ದೇವಭವನದೊಳು ಕೆಱೆಯೊಳು ಪುಷ್ಪ ವಾಟಿಗಳೊಳು
ಗುಳಿಗಳೊಳು ಗುಡ್ಡೆಗಳ ಮಱೆಯೊಳೆಡೆಯಾಡುವವ
ರೊಳು ಮೇವ ತುಱುವಿಂಡಿನೊಳು ದಾರಿಯೊಳು ಸುತ್ತಿ
ಸುಳಿದಱಸಿದಂ ಸಿದ್ಧರಾಮನಾ ಪರ್ವತಾಗ್ರಣಿ ಮಲ್ಲಿಕಾರ್ಜುನನನು

ಬನ್ನವೆತ್ತಿದರಂತೆ ಮಱುಗಿ ಕಾಣದ ಕೋಪ
ದಿಂ ನಿನ್ನನಗಲಿದೆನೆನುತ್ತೋಗರವ ಕೆದಱಿ
ಕೆನ್ನೆಯಲಿ ಕೈಯಿಟ್ಟು ತಲೆಯೆತ್ತಿ ಬಿರಿಬಿರಿದು ಬಿಕ್ಕಿ ಬಾಯ್ವಿಟ್ಟೊಱಲುತ
ಚೆನ್ನಮಲ್ಲಯ್ಯ ಮಲ್ಲಯ್ಯ ಬಾ ಬಾ ಕಾಡ
ದೆನ್ನ ಮಲ್ಲಯ್ಯ ಎನ್ನಯ್ಯ ಮಲ್ಲಯ್ಯ ಬಾ

ಹರಿಹರಿದು ಕರೆದು ಕರೆದತ್ತತ್ತು ಧಾತುಗೆ
ಟ್ಟುರಿವರಿವ ಬಿಸಿಲೊಳಗೆ ಕಾದ ಬಟ್ಟೆಯ ಹುಡಿಯ
ಹರಳೊಳಗೆ ಬಿದ್ದು ಮಲ್ಲಯ್ಯ ಮಲ್ಲಯ್ಯ ಎನುತಿಪ್ಪಾಗಳಿತ್ತ ಪಿಡಿದ
ಪರಿಪರಿಯ ಸತ್ತಿಗೆಯ ಸಂದಣಿಸುವಂದಣದ
ತರತರದ ತುರಗದೆತ್ತುಗಳ ಮೊತ್ತದ ಮುಂದೆ
ನೆರೆದ ವೃಷಭಧ್ವಜದ ಗಾಢದಿಂ ಶ್ರೀಪರ್ವತದ ಪರುಷೆ ಬರುತಿರ್ದುದು

ಕಂಗೆ ಮಂಗಳವಪ್ಪ ಪರಿಪರಿಯ ಶಿವಲಾಂಛ
ನಂಗಳಿಂದುಬ್ಬಟೆಯ ಭಾಷೆಯಿಂ ವಿವಿಧ ನೇ
ಮಂಗಳಿಂ ಬಹಳ ಭಕ್ತಿಜ್ಞಾನ ವೈರಾಗ್ಯದಿಂ ಬಲಿದ ತನುಗಳಾದ
ಜಂಗಮರಿನೆಸೆಯುತ್ತ ಬಹ ಪರುಷೆಯೊಳಗೆ ಮಾ
ತಂಗ ಮೊದಲಿಱುಹೆ ಕಡೆಯೆನೆ ನೋಯಿಸದ ದಯಾ
ಸಂಗಿಗಳು ಬರುತ ಕಂಡರು ಬಟ್ಟೆಯೊಳ್ ಬಿದ್ದು ಬಾಯ್ಬಿಡುವ ಬಾಲಕನನು

ಹಿಡಿದೆತ್ತಿ ಕುಳ್ಳಿರಿಸಿ ನೆಳಲೊಳಗೆ ಬೀಸಿ ವೈ
ದೊಡೆದು ಬಾಯಳಿದಾರನಱಸಿದಪೆಯೆಂದಡೆ
ನ್ನೊಡೆಯನನದೆಲ್ಲಿಹನು ಪರ್ವತದಲೇಂ ಪೆಸರು ಮಲ್ಲಿಕಾರ್ಜುನನೆಂಬುದು
ಕಡೆಗವರ ಕಾಣಬೇಕೇ ಬೇಕು ಬೇಹಡೆ
ಮ್ಮೊಡನೆ ಬಾ ತೋರ್ಪೆವೆನೆ ಹೈ ಬಂದಪೆಂ ತೋಱಿ
ಕೊಡಿರಯ್ಯ ಎಂದು ಪೊಡಮಟ್ಟು ನಂಬುಗೆಗೊಂಡು ಹೋದನಾ ಪರುಷೆಯೊಡನೆ

ಅಲ್ಲಲ್ಲಿ ನೋಡುತವರವರ ಕೇಳುತ್ತ ನೆರ
ವಿಲ್ಲದಿರೆ ನಿಲುತ ಕೂಡಿದೊಡಾಗ ನಡೆಯುತ್ತ
ಮೆಲ್ಲನೀತಂ ಬರಲು ಮುಂದೆ ಮುಂಚಿದ ಪರುಷೆಯೊಡನೊಡನೆ ದಾರಿಯೊಳಗೆ

ಮಲ್ಲಯ್ಯ ಮಲ್ಲಯ್ಯಯೆಂದು ಕರೆಯುತ್ತ ಬಿ
ಟ್ಟಲ್ಲಿ ಬಿಡದೆಯ್ದಿ ಕಾಂಬಾತುರದ ತವಕದಿಂ
ಪಲ್ಲವಿಸಿ ಪರ್ವತವನೇಱಿದಂ ಸಿದ್ಧರಾಮಂ ದುರಿತಗಜಭೀಮನು

ಅಟ್ಟಡವಿಯೆನ್ನದೂರೆನ್ನದೆಡೆಯೊಳು ಬಪ್ಪ
ಬಟ್ಟೆಯೆನ್ನದೆ ಹಗಲಿರುಳದೆನ್ನದೇ ನಿನ್ನ
ಹುಟ್ಟಿದೂರ್ ಮೊದಲಿಲ್ಲಿ ತನಕೊಱಲಿ ಕರೆದು ಕರೆದಲವತ್ತು ಹಂಬಲಿಸುತ
ಬೆಟ್ಟದೊಳು ಘಟ್ಟದೊಳು ಸರುವಿನೊಳು ದರುವಿನೊಳು
ಕೆಟ್ಟ ಸಂದಿಯೊಳು ಗೊಂದಿಯೊಳಱಸಿ ಬಳಲಿ ಮನ
ನಟ್ಟು ಕಣ್ ದಣಿವನ್ನ ನೋಡು ಬಾ ತಂದೆಯೆಂದೊಯ್ದರಾ ಶಿವನಿಳಯಕೆ

ಎಲ್ಲಿರ್ದಪಂ ತೋಱಿರಯ್ಯ ದಮ್ಮಯ್ಯ ತಳು
ವಿಲ್ಲಲೇ ಇಲ್ಲೀಗ ಕಂಡೆನಾದಡೆ ಚರಣ
ದಲ್ಲಿ ದೊಪ್ಪನೆ ಬಿದ್ದು ಬಿಗಿದು ತೆಕ್ಕೈಸಿ ಬಸಿಱಿಂ ಬಗಿದು ಹೊಕ್ಕು ಬೆರಸಿ
ತಲ್ಲೀಯವಪ್ಪೆನೆಂದಲವರುವ ಕರಣಂಗ
ಳೆಲ್ಲವಂ ಕಣ್ಣಬಾಗಿಲೊಳಿಟ್ಟು ಕೊಂಡೆಯ್ದಿ
ಮಲ್ಲಯ್ಯ ಮಲ್ಲಯ್ಯಯೆನೆ ಮುಂದಿಯಂ ಬಗಿದು ಲಿಂಗವಂ ತೋಱಿಸಿದರು

ಹಿಂದೆ ಕಂಡಾ ಮೂರ್ತಿಯೆಂದು ಬಗೆದತ್ಯಾರ್ತ
ದಿಂದ ನಡೆನೋಡಿ ಲಿಂಗಾಕಾರಮಂ ಕಂಡು
ನೊಂದಡವಿಯೊಳಗೆ ಹೊಲಗೆಟ್ಟವ್ವೆಗತ್ತನ್ಯಳಂ ಕಂಡ ಶಿಶುವ ಪೋಲ್ತು
ತಂದೆ ಬಾ ತೋಱಿದಪೆವೆಂದಡಱಿಯದೆ ನಂಬಿ
ಬಂದು ಕೆಟ್ಟೆಂ ಕೆಟ್ಟೆನೆಂದು ಮುಂದಿಗೆ ಮಱುಗು
ತಂದು ಮಱುಗು ಮಱುಗುವೆನುತಲಿ ಸಿದ್ಧರಾಮಯ್ಯ ಚಿಂತಿಸಿದನು

ಬಱಿದೇಕೆ ಬಾಯ್ಬಿಡುವೆ ತಮ್ಮ ಬೇಡೀ ಲೋಕ
ವಱಿಯುತಿರೆ ಮಲ್ಲಿಕಾರ್ಜುನನೀತನೆಂದೊಡಾ
ನಱಿಯೆನೇ ಸಾರೀತನಲ್ಲೆನಲು ನೀನಱಿವ ಕುಱುಹಾವುದೆನೆ
ಮುಡಿಯೊಳು
ಹೆಱೆಯುಂಟು ತೊಱೆಯುಂಟು ಜಡೆಯುಂಟು ಕೊರಳೆಡೆಯ
ಕಱೆಯುಂಟು ಪಂಚಮುಖವುಂಟು ದಶ ಭುಜವುಂಟು
ಕಿಱಿಯ ಫಣಿದೊಡವುಂಟು ನೊಸಲ ಕಣ್ಣುಂಟಾತನಂ ತೋಱಿಕೊಡಿ
ಯೆಂದನ

ಆತನಂ ತೋಱಲಾವಱಿಯೆವಳಬೇಡೆಂದ
ಡೀತೆಱದೊಳಂ ಮಾಣದಿರ್ದೊಡಾಸತ್ತು ಬಿ
ಟ್ಟೈತಂದರಿತ್ತಲಿವನೆಂಶುಮಱಸುತ್ತಾಗಳಳಲುರಿಯ ವಿರಹದಿಂದ
ಭೀತಿ ಬೀತಾಱೇಳವಸ್ಥೆ ತಲೆದೋಱೆ ಕಾ
ಬಾತುರದೊಳಿದ್ದು ಹೊಱವಂಟು ಬಳಿಕಾನಾವ
ಗೋತೆನಾರ್ಗೆಲ್ಲಿರ್ದೆನೇನಾದೆನೆಂದಱಿಯದಱಸಿದನದೇ
ವೊಗಳ್ವೆನು

ಗಿಡುಗಳೊಳು ಹೊಕ್ಕು ಮಲ್ಲಯ್ಯ ಮಲ್ಲಯ್ಯ ಕ
ಮ್ಮಡುಗಳೊಳು ಹೊಕ್ಕು ಮಲ್ಲಯ್ಯ ಮಲ್ಲಯ್ಯ ಪೇ
ರಡವಿಯೊಳು ಹೊಕ್ಕು ಮಲ್ಲಯ್ಯ ಮಲ್ಲಯ್ಯ ಮಾರ್ದನಿಗೊಡುವ ಗುಹೆ
ಗುಹೆಗಳ
ನಡುವೆ ಹೊಕ್ಕಯ್ಯ ಮಲ್ಲಯ್ಯ ಮಲ್ಲಯ್ಯ ಹೊದ
ಱೆಡೆಯ ಹೊಕ್ಕಯ್ಯ ಮಲ್ಲಯ್ಯ ಮಲ್ಲಯ್ಯ ಬಾ
ತಡೆಯದೋಯೆನ್ನ ಮಲ್ಲಯ್ಯ ಮಲ್ಲಯ್ಯಯೆಂದೊದಱಿ
ಕರೆದಂ ಕರೆದನು

ಆವೆಡೆಯೊಳಿರ್ಪೆಯೋ ಮಲ್ಲಯ್ಯ ನೀನಿರ್ಪ
ಠಾವಿದೆಂದಱಿಪಿಯಡಗುವರೆ ಎಲೆ ಮಲ್ಲಯ್ಯ
ಗಾವಿಲನು ಮರುಳನಿವನತ್ತಡೇನೆಂದೇಳಿಲವ ಮಾಡದಿರು ಬಲ್ಲಡೆ
ಆವುದುಂ ಗತಿಯಿಲ್ಲದಭಿಮಾನಿ ಸಜ್ಜನರು
ಆವವಸ್ಥೆಯನ್ನೈದಲದು ನಿನ್ನ ತಾಗುವುದು
ಸಾವನ್ನ ಶ್ರವ ಬೇಡ ನಿಜರೂಪ ತೋಱೆಂದು ಒದಱಿ
ಕರೆದಂ ಕರೆದನು

ಸುತ್ತಿದಳಿಗಿಳಿ ಕೋಗಿಲೆಯು ಸೊಗಸುತಿಹ ನಾದ
ದತ್ತಲಿರ್ದಪನೆಂದು ಹೋಗಿ ಕಾಣದೆ ಬಾಯಿ
ಬತ್ತಲೊಱಲಿದು ಕರೆದು ಕೇಳದಿರೆ ಹಂಬಲಿಸಿ ಹರಿಯುತ್ತ ಗಿರಿತಟದಲಿ
ಬೆತ್ತಬಿದಿರಿಂಡಿದಡಸಿ ಬೆಳೆದ ಮೆಳೆಗಳ ನಡುವೆ
ಹುತ್ತಡರ್ದಱಿಯದ ಸಮಾಧಿ ನಿಷ್ಠುರ ಚಿತ್ತ
ಹತ್ತಿದಡೆ ಸಿಲುಕಿ ನಿಂದೆಯೊ ಏಕೆ ಓಯೆನ್ನೆ ಮಲ್ಲಯ್ಯ ಎಂದತ್ತನು

ಗಂಗೆಯನು ತಳೆದನಾವೆಡೆಯೊಳಿರ್ದಪನೊ ಮಱಿ
ದಿಂಗಳನು ಮುಡಿದನೆಲ್ಲಿರ್ದಪನೊ ಹೊಳೆವ ಫಣಿ
ಪಂಗಳನು ತೊಟ್ಟವನು ಎತ್ತ ಹೋದಂ ಎತ್ತನೇಱಿರ್ದನೇನಾದಪಂ
ಅಂಗನೆಯನೆಡದ ದೇಹದೊಳು ಮಡಗಿಟ್ಟವನ
ಕಂಗಳಿಂಗಳದಿಂದ ಪುರವ ನೆಱೆ ಸುಟ್ಟವನ
ನಂಗಭಸಿತನ ಕಂಡಿರೇನಯ್ಯ ಅಯ್ಯ ಎಂದವರವರ್ಗೆ ಬಾಯ್ಬಿಟ್ಟನು

ಕರೆಕರೆದು ಗಹ್ವರದ ಮಾರ್ದನಿಗಳಂ ಕೇಳ್ದು
ಗಿರಿಶನೋಯೆಂದನೆಂದೆಯ್ದೆ ಕಣ್ಮುಚ್ಚಿ ಹೃ
ತ್ಸರಸಿಜದೊಳಿರ್ದ ರೂಪಂ ಕಂಡು ಕಣ್ದೆಱೆದು ನೋಡಿ

ಭರವಸದಿ ನಡೆಯುಡುಗಿ ಬಿಱುಬಿಸಿಲೊಳಲ್ಲಲ್ಲಿ
ಹರಿಹರಿದು ಬಗಿಬಗಿದು ನೊಂದು ಪರಿಪರಿಯ ಕ
ಮ್ಮರಿಗಳೊಳು ನೋಡುತ್ತ ಬಾಡುತ್ತ ನೆಱೆ ರುದ್ರಗಮ್ಮರಿಗೆ
ನಡೆತಂದನು

ಕಡುಮೋಹವಱೆಯಲಾನಡಗಿದಡೆ ಭಾಷೆಯಂ
ಪಿಡಿದನೇಗುವೆನಿವಂ ಕರೆದ ಬಾಯಿಂದೆ ಪೋಱ
ಮಡುವೆನೋ ಕರೆದಡೋಯೆಂಬೆನೋ ಕರೆದ ದೆಸೆಯಿಂದೆದ್ದು
ಹರಿತಪ್ಪೆನೊ
ಪೊಡವಿಯಂ ಬಗಿದೇಳ್ವೆನೋ ಮೀಱೆ ಗಗನದಿಂ
ದೊಡಬೀಳ್ವೆನೋ ಬೀಳ್ವ ಕಮ್ಮರಿಯ ದರಿ ಗುಣ್ಪು
ಗೆಡೆ ಪೊಳ್ದು ಬೆಳೆವೆನೋ ಎಂದು ಶಿವನನುಗೆಯ್ಯುತಿರ್ದನತಿ ತವಕದಿಂದ

ಕೊರಳೆತ್ತಿ ಕೈಮುಗಿದು ನೆಗಪಿ ಕಣ್ಣಂ ಮುಚ್ಚಿ
ತರುಣಾಬ್ಧಿ ಮಲ್ಲಿನಾಥಾ ಎಂದಡೋ ಕಂದ
ಕರೆದು ಬಳಲಿಸೆಯನುತ್ತೆತ್ತಿ ತಕ್ಕೈಸಿ ತಲೆದಡವಿ ಮುಂಡಾಡಿ ನೋಡಿ
ಕರುಣೇಂದು ಸುರನದಿ ಜಟಾಮುಕುಟವಸಮಾಕ್ಷ
ವುರಗಕುಂಡಲವೈದು ವದನವೀರೈದು ತೋಳ್
ಗರಳಗಳ ವಿಭಚರ್ಮವೆಡದ ಗಿರಿಸುತೆವೆರಸಿ ತೋ
ಱಿದಂ ನಿಜರೂಪನು

ವರಮೂರ್ತಿಯಂ ಕಂಡು ಹಿಗ್ಗಿ ಹಾರೈಸಿ ಸೈ
ತಿರಿಸಲಱೆಯದೆ ಕುಣಿದು ಕುಕಿಲಿಱಿದು ಕುಂಬಿಕ್ಕಿ
ಚರಣದಲಿ ಬಿದ್ದ ಬಾಲಕನ ತೊದಳಂತುವಂ ಕೈಯ
ಕಂಪನದ ಕಡುಹಂ

ಸುರಿವ ಸುಖಜಲದ ಹೊನಲಂ ಸ್ವೇದದೊಱತೆಯಂ
ಪರವಸದ ಮಱವೆಯಂ ಗದುಗದದ ಭಾರಮಂ
ನೆರೆದ ಪುಳಕದ ಘಟ್ಟಿಯಂ ಕಂಡು ಬೆಱಗಾದರಾ
ಪುಣ್ಯದಂಪತಿಗಳು

**ರಾಘವಾಂಕ–ಸಿದ್ಧರಾಮ ಚಾರಿತ್ರ**
ಸು. (೧೨೨೫)

## ೪೩. ಕವಿಗಳ ಅಗ್ಗಳಿಕೆ

ಪಾಪಶುಭೋದಯಮಂ ವಾ
ಗ್ವ್ಯಾಪಾರದಿನನತನತರ್ಗೆ ಮಾಳ್ಕುಂ ಸಹಜಂ
ಕೋಪಪ್ರಸಾದಮೆಂದೊಡೆ
ಶಾಪಾನುಗ್ರಹಸಮರ್ಥರಲ್ಲರೆ ಕವಿಗಳ್

ಕಡುಗಱಿದಯಶಂ ಪೆಸರಿಡೆ
ಕಡುವಿಳಿದಾಯಿತ್ತು ಕೀರ್ತಿ ಕವಿಗಳ್ ಕಱಿದೆಂ
ದೊಡೆ ಕಱಿದವರ್ಗಳ್ ಬಿಳಿದೆಂ
ದೊಡೆ ಬಿಳಿದೇಕವರನುಱದೆ ಕಿಡುವರ್ ಕೆಲಬರ್

ಸುಭಗಕವಿವೃಷಭಶುಭದ
ಸ್ವಭಾವಸರಸಪ್ರಬಂಧಬಂಧುರಗುಣಸೌ
ರಭಮಂ ಪೊತ್ತೆಸಗುವ ವಾ
ಗ್ವಿಭವಮುಮುಂಟಾದೊಡವನೆ ಸೇವ್ಯಂ ಜಗದೊಳ್

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನಿಕ್ಕೆ ಗಂಟಲಂ
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್
ಮುಟ್ಟಿದರಿಕ್ಕೆ ಮೆಟ್ಟಿದರಿದೇನಳವಗ್ಗಳಮೋ ಕವೀಂದ್ರರಾ!

ಮರನೀಗುಂ ಮಣಿಯಾಗುಮೊಂದು ಪಶುವೀಗುಂ ಕೇಳಿಮೆಂದೋಳಿ
ಯೊಳ್
ಪುರುಡಂ ಪುಟ್ಟಿಸಿ ಕಾಷ್ಠಮಂ ಕೊನರಿಪರ್ ಕಲ್ಲಲ್ಲಿ ನಾರೆತ್ತುವರ್!
ಮರುಳಂ ಪೋ! ಪುರುಗಳಾಗಿಪರ್! ಕವಿಗಳೊಳ್ ಪೀಯೂಷಮಂ
ಪಿಂಡಲು
ವ್ವರೆಯೊಳ್ ಸಂದ ಕವಿಪ್ರವೇಕರೆ ವಲಂ ಬಲ್ಲರ್ ಪೆಱರ್ ಬಲ್ಲರೇ

ನಿಟ್ಟಿಗೆ ವಂದು ಕೋಮಳಗುಣಂ ಗೆಡೆಗೊಂಡಿರೆ ಪೂವಿನಂತಿರಾ
ಯ್ದಿಟ್ಟ ಪದಂ ಬೆಡಂಗೆನಿಸೆ ಬಣ್ಣಸರಂ ಪೊಸತಾಗೆ ನುಣ್ಪೊಡಂ
ಬಟ್ಟಿರೆ ಬಂದಮೊಂದೆ ಚತುರಾಳಿ ಕರಂ ಬಸದಾಗೆ ಬಾಸಿಗಂ
ಗಟ್ಟುವನಂತು ಕಟ್ಟುವುದು ಕಬ್ಬಮನುಬ್ಬಿನಮಾಗೆ ಕಬ್ಬಿಗಂ

ಅಕ್ಕರಿಗರ ಬಗೆಗಂ ಬೆ
ಳ್ಳಕ್ಕರಿಗರ ಬುದ್ಧಿಗಂ ಪ್ರಭಾವಾರ್ಥತೆಯಿಂ
ಸಕ್ಕದಮುಂ ಕನ್ನಡಮುಂ
ಸಕ್ಕಸಮಂ ಕೇಳ್ಪೊಡೆನಿಸಿ ಪೇೞ್ವುದು ಕೃತಿಯಂ

ರಸಿಕರ ಪೊಸಬಗೆಗಿಂಪಂ
ಪೊಸತಂ ಪೊಸಯಿಸುತುಮೊಂದೆ ಪೊರೆಯೆತ್ತಲೊಡಂ
ರಸಮೊಸರದೊಡೇಂ ಬಸನವೆ
ಬಿಸುಡುವುದಾ ಪುೞಿತ ಕಬ್ಬುವಂ ಕಬ್ಬಮುಮಂ

ಎಣಿಸದೆ ಗುಣಮಂ ಕಾಚಿನ
ಮಣಿಯಂ ಮಾಱುವವೊಲಹಹ ನಿನಗಂ ತನಗಂ
ಪಣಕೆ ಕೃತಿಯೆಂಬ ಚಿಂತಾ
ಮಣಿಯಂ ಮಾಱುವನ ಬುದ್ಧಿಗಾಂ ಬೆಱಗಾದೆಂ

ಬೆಲೆಯಿಂದಕ್ಕುಮೆ ಕೃತಿ ಗಾ
ವಿಲ ಭುವನದ ಭಾಗ್ಯದಿಂದಮಕ್ಕುಂ ನೋೞ್ಪಂ
ಬೆಲೆಗೊಟ್ಟು ತಾರ ಮಧುವಂ
ಮಲಯಾನಿಲನಂ ಮನೋಜನಂ ಕೌಮುದಿಯಂ

**ನೇಮಿಚಂದ್ರ**
**ಲೀಲಾವತಿ–ನೇಮಿನಾಥಪುರಾಣ**
(ಸು. ೧೨೦೦)

# ೪೪. ಪುರಾಂಗನೆಯರು

ಅಲ್ಲಿ ಲತೆವನೆಯಲ್ಲಿ ಮಲ್ಲಿಕಾವನದಲ್ಲಿ
ತಳಿರ ಕಾವಣದಲ್ಲಿ ಕುಳಿರ್ವ ತಿಳಿಗೊಳದಲ್ಲಿ
ಸಂಪಗೆಯ ಜೊಂಪದೊಳ್ ಕಂಪಿಸುವ ಜಂಪದೊಳ್
ನನೆಗೊಂಚಲಂ ಮುಱಿದು ವನದಲರ್ಗಳಂ ತಿಱಿದು
ಮಧುವಿಂಗೆ ಬೊಬ್ಬಿಟ್ಟು ಮಧುರತೆಗೆ ಮುಂಬಿಟ್ಟು
ತನಿಗಂಪನಣ್ಪೆಕ್ಕಿ ವನಜದರಲಂ ಸೆಕ್ಕಿ
ಕುಸುಮರಜಮಂ ತಳಿದು ಮುಸುರ್ವ ತುಂಬಿಗೆ ಮುಳಿದು
ಕೆಂದಳಿರ್ಗೆ ಕಣ್ಣಿಟ್ಟು ಕರ್ಣ ಪೂರಮನಿಟ್ಟು
ಕುಂದಕುಟ್ಮಳಮೌಕ್ತಿಕಾಭರಣಮಂ ತೊಟ್ಟು
ಮಾಮಿಡಿಗಳಂ ತೆಗೆದು ಪಚ್ಚೆಸಾರಮನಿಕ್ಕಿ
ಪೂಮುಡಿಗಳೊಳ್ ತಳಿರ ಲಂಬಣಮನೆಱಲಿಕ್ಕಿ
ತೋರಮಲ್ಲಿಗೆಮುಗುಳ ಮೂಕುತಿಯನೊಸೆದಿಕ್ಕಿ
ಹಾರಮಂ ಸುರಯಿಯುರಲಿಂ ಸಮೆದು ಮುಱಿದಿಕ್ಕಿ
ಸಿರಿಸದಲರ್ಗೇಸರಮನಲೆವ ಕುರುಳೊಳ್ಸೂಸಿ
ಸುರಿವ ಮಕರಂದಮಂ ಮುದ್ದುವೊಗದೊಳ್ಪೂಸಿ
ಕೇದಗೆಯ ಕರ್ಣಪತ್ರಂ ಪೊಳೆಯೆ ಪಾಳೆಯೊಳ್
ಪಾದರಿಯ ಪಿಂಡುಗಂಕಣಮಮರೆ ಲೀಲೆಯೊಳ್
ಬಗೆಗೊಳಿಸೆ ಸಂಪಗೆಯ ನೂಪುರಂ ಚರಣಮಂ
ನಗುವಂತೆ ನನೆದೊಡವು ಮುತ್ತಿನಾಭರಣಮಂ
ನಸು ಬಿರಿದ ಬಾಯ ಕಂಪಿಂ ಬೆರಸಿದೆಲರಿಂದೆ
ಪಸದನಂಗೊಂಡೆಸೆಯೆ ಮನಮೆಚ್ಚಿದಲರಿಂದೆ
ಕೈಯ ಕೆಂಪಂ ತಳಿರ್ಗೆ ಮೈಯ ಪಸುರಂ ಬಿದಿರ್ಗೆ
ಲಪನಗಂಧಮನಳಿಗೆ ಚಪಳತೆಯನರಗಿಳಿಗೆ

ಸೋಗೆಗಾಟಮನಿತ್ತು ಕೋಗಿಲೆಗೆ ಸರವಿತ್ತು
ರತಿಯ ಸೊಬಗಂ ಗೆಲ್ದು ಲತೆಯನಂದದೆ ನೇಲ್ದು
ಕಾಣ್ಬ ಜಸಮೆನೆ ಮಿಸುಗೆ ಕಣ್ಬೆಳಗು ದೆಸೆದೆಸೆಗೆ
ನಗೆಮೊಗದ ಮಿಗೆ ನೆಗೆದ ನೆಲೆಮೊಲೆಯ ಕಿಱುನೆಲೆಯ
ಪೆಱ್ನೊಸಲ ಪದಗೊರಲ ನಸುನಗೆಯಪೊಸಬಗೆಯ
ಗುರುಕಟಿಯ ಸವಿದುಟಿಯ ಬಿಡುಮುಡಿಯ ಪೊಳೆವಡಿಯ
ಸುಳಿಗುರುಳ ನಳಿತೋಳ ಚಳತರಳಲೋಚನದ
ಮೃಗಮದದ ಮಗಮಗಿಪ ನಸುಸುಯ್ಯ ಮೆಲ್ಮಯ್ಯ
ಛವಿಮುಗುಳ್ವ ಪದಪುಗುಳ್ವ ನುಣ್ಬೊಗರ ಸೆಳ್ಪುಗುರ
ಕಳರವದ ಸಲೆತವದ ಮದವೆಸೆವ
ನಡುನಳಿವ ನಡೆಸೆಳೆವ ಕುಱುನಡೆಯ ಕಣ್ಗಡೆಯ
ನಳಿತೋಳ ಕಡುಮೋಳಮೌವಳಿಪ ಸಂಚಳಿಪ
ಪುರವರದ ಕಾಂತೆಯರ್ ತರಳಾಳ ಕಾಂತೆಯರ್
ಲಲಿತಸುಖಮೂರ್ತಿಯರ್ ಪೊಸದೇಸೆಕಾರ್ತಿಯರ್
ಸೊಬಗಿನಿಂ ಮದನಂಗೆ ಪೂಜೆಯಂ ಮಾಡುವರ್
ವಿಬುಧವಿದ್ಯಾಧರನ ಗೀತಮಂ ಪಾಡುವರ್

**ನೇಮಿಚಂದ್ರ–ಲೀಲಾವತಿ**
ಸು. (೧೨೦೦)

## ೪೫. ಬಾಲಲೀಲೆ

ಎಡೆಗಿಱಿದಿರೆ ಪೊಂಗವಡಿಕೆ
ಬಿಡೆ ಘುಲುಕೆನೆ ಗೆಜ್ಜೆ ಮಿರುಗೆ ದಶನಾಂಶು ಕುರುಳ್
ಜಡಿಯೆ ತೊದಲ್ನುಡಿಯ ತಳ
ರ್ನಡೆಯ ಬೆಡಂಗಸುರವೈರಿಗಡಿಗಡಿಗೆಸೆಗುಂ

ಘನಗುಣೆ ಗೋಪಿ ಪಾಲ್ಗಡೆಯುತಂ ಮನೆವಾರ್ತೆಗೆ ಪೋಗೆ ಗೆಜ್ಜೆಯಿಂ
ದನಿ ನಸುಪೊಣ್ಮೆದಂತು ಪರಿತಂದೆಡಗೈಯೊಳೆ ತೋಡಿ ಬೆಣ್ಣೆಯಂ
ತಿನುತಿರೆ ಗೋಪಿ ಕಂಡೆಲೆಲೆ ಕಳ್ಳತನಂಗಳನಣ್ಣ ಕಂಡೆವಾ
ವೆನೆ ಕಡೆವಾಯಬೆಣ್ಣೆವೆರಸೊಯ್ಯನೆ ಪಿಂಗುವ ಕೃಷ್ಣನೊಪ್ಪಿದಂ

ಮತ್ತೊಂದು ಸಮಯದೊಳ್ ಪಾಲ್ಕುಡಿಯಲೊಲ್ಲದಾಟಿಗುಟ್ಟುವ
ದಾಮೋದರನಂ ಯಶೋದೆ ಕಂಡು,

ಶಕಟವಿಮರ್ದನಾ ಮುಸಲಿ ಬಾರದ ಮುನ್ನಮೆ ನಮ್ಮ ಹೇಮಘಂ
ಟಿಕೆ ಘಣಿಲೆಂಬ ನಂದಿನಿಯ ಪಾಲಿದೆ ನೀ ಕುಡಿಯಲ್ಕೆನಿನ್ನಚೆಂ
ಡಿಕೆಬೆಳೆದಪ್ಪುದೆಂದಬಳೆ ನಂಬಿಸೆ ಪಾಲ್ಕುಡಿದೀಗಳೆಂಬೆ ಚೆಂ
ಡಿಕೆಯೆನಿತುದ್ದವಾದುದೆನುತಂ ಬೆಸಗೊಳ್ವಮುಕುಂದನೊಪ್ಪಿದಂ

ಚಾರಿವೆಟ್ಟುವಭಂಗಿ ದೋರ್ವ್ವಲನಂ ಮನಂಗೊಳೆಮಂಜುಮಂ
ಜೀರಕಂಕಣಕಿಂಕಿಣೀರುತಿ ಪೊಣ್ಮೆವಕ್ರಿತಕಂಧರಂ
ಸ್ಮೇರವಕ್ತ್ರಸರೋರುಹಂ ಲಲಿತಾಯತೇಕ್ಷಣನಾಗಿ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಱೆಗಾಡಿದಂ

ನೀರದೋತ್ಪಲವರ್ಣನಾಡಿದನಾಡಿದಂ ಕಮಲೇಕ್ಷಣಂ
ಚಾರುಹಾಸವಿಲಾಸನಾಡಿದನಾಡಿದಂ ಸುಭಗಂ ಶುಭಾ

ಕಾರನಾಡಿದನೆಂದು ಗೋಪಿಯರಾಡಿಸುತ್ತಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಜಿಗಾಡಿದಂ

ಕ್ಷೀರಲಂಪಟನಾಡಿದಂ ನವನೀತಚೋರಕನಾಡಿದಂ
ದಾರಕವ್ರಜಮಲ್ಲನಾಡಿದನಾಡಿದಂ ಹರಿ ಗೋಕುಲಾ
ಧಾರನಾಡಿದನೆಂದು ಗೋಪಿಯರಾಡಿಸುತ್ತಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಜಿಗಾಡಿದಂ

ದಾರುಣಾಕೃತಿಪೂತನಾಂತಕನಾಡಿದಂ ಶಕಟಾದಿಸಂ
ಹಾರನಾಡಿದನಾಡಿದಂ ಯಮಳಾರ್ಜುನದ್ರುಮಘಾತಿಯೆಂ
ಬೀರವಂ ನೆಗಟಲ್ಕೆ ಗೋಪಿಯರಾಡಿಸುತ್ತಮಿರಲ್ಕೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಜಿಗಾಡಿದಂ

ವೀರದೈತ್ಯರನಿಕ್ಕಲಾಗಿಯೆ ಪುಟ್ಟಿದಂ ಹರಿಯೆಂದು ಕೈ
ವಾರದಿಂದವೆ ಮಾತನಾಡೆ ವಿರೋಧಿಗಳ್ ಯಮಲೋಕಮಂ
ಸಾರಲಾಡೆ ಯಶೋದೆ ರಾಗರಸಾಬ್ಧಿಯೊಳ್ಮುಳುಕಾಡೆ ಸಂ
ಸಾರನಾಟಕಸೂತ್ರಧಾರಿ ಮುರಾರಿ ಕೈಪಜಿಗಾಡಿದಂ

ಆನಂದಮೂರ್ತಿ ಸುಖಲ
ಕ್ಷ್ಮೀನಿಳಯಂ ಸಕಲಸಾರಸರ್ವಸ್ವವೆನಿ
ಪ್ಪಾನೀರಜನೇತ್ರನ ಲೀ
ಲಾನುಷ್ಠಿತಬಾಲಕೇಳಿ ಬಣ್ಣಿಪರಳವೇ!

ಕಥೆಯಂಕೇಳಲೆ ಕಂದ! ಹುಂ! ರಘುಜನೆಂಬಂ! ಹುಂ! ಸಕಾಂತಂ ವನ
ಸ್ಥಿತನಾದಂ ಗುರು ಪೇಟಿ! ಹುಂ! ದಶಶಿರಂ ಕೊಂಡುಯ್ದನಾರಾಮನಾ
ಸತಿಯಂತಾನೆನೆ ಪೂರ್ವಮಂ ನೆನೆದು ಹುಂಹುಂಕೊಳ್ಳದುತ್ಕ್ಷೇಪಹೂಂ
ಕೃತಿಯಂ ಮಾಡುತಮಾಂಡುಗಟ್ಟಿ ಕಿಸುಗಣ್ಬಿಟ್ಟಚ್ಯುತಂ ರಂಜಿಕುಂ

ಆಡುತ್ತಂ ಸಹಪಾಂಸು
ಕ್ರೀಡಿತದೊಳ್ ಕೃಷ್ಣನಮ್ಮ ಮಣ್ಣಂ ತಿಂದಂ
ನೋಡೆಂದು ಹಳಧರಂ ಪಿಸು
ಣಾಡಲ್ ಕೇಳ್ದೊವ್ಮೆ ಗೋಪಿ ಸೆಳೆವಿಡಿದೊಲವಿಂ

ಹರಿ! ನೀಂ ಮಣ್ತಿಂದೆ! ತಿನ್ನೆಂ ಜನನಿ! ಹುಸಿದನೆಮ್ಮಗ್ರಜಂ! ತೋಱು ವಕ್ತ್ರಾಂ
ತರಮಂ! ನೋಡೆಂದು ಬಾಯಂ ತೆರುವುದುಮದರೊಳ್ ವಾರ್ಧಿಯೇೞುಂ ಕುಳೋರ್ವೀ
ಧರವೇೞುಂ ದ್ವೀಪವೇೞುಂ ಬೆರಸು ಜಗಮನೀರೇೞುಮಂಕೂಡೆ ಕಂಡ
ಚ್ಚರಿವಟ್ಟಂ ಮುಚ್ಚುಮುಚ್ಚಾನನಮನೆನುತವಾಕಾಂತೆ ವಿಭ್ರಾಂತೆಯಾದಳ್

ರುದ್ರಭಟ್ಟ–ಜಗನ್ನಾಥವಿಜಯಂ
ಸು. (೧೨೦೦)

# ೪೬. ಗೊಮ್ಮಟ ಸ್ತುತಿ

ಅತಿತುಂಗಾಕೃತಿಯಾದೊಡಾಗದದಱೊಳ್ ಸೌಂದರ್ಯಮೌನ್ನತ್ಯಮುಂ
ನುತಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮುಂ
ನುತಸೌಂದರ್ಯಮುಮೂರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ
ಕ್ಷಿತಿಸಂಪೂಜ್ಯಮೊ ಗೊಮ್ಮಟೇಶ್ವರಜಿನಶ್ರೀರೂಪಮಾತ್ಮೋಪಮಂ

ನೆಲಗಟ್ಟಾನಾಗಲೋಕಂ ತಳಮವನಿ ದಿಶಾಭಿತ್ತಿ ಭಿತ್ತಿವ್ರಜಂ ಸ್ವ
ಸ್ತಲಭಾಗಂ ಮುಚ್ಚಣಂ ಮೇಗಣ ಸುರರ ವಿಮಾನೋತ್ಕರಂ ಕೂಟ
ಜಾಳಂ
ವಿಲಸತ್ತಾರೌಘಮಂತರ್ವಿತತಮಣಿವಿತಾನಂ ಸಮಂತಾಗೆ ನಿತ್ಯಂ
ನಿಲಯಂ ಶ್ರೀ ಗೊಮ್ಮಟೇಶಂಗೆನಿಸಿದುದು ಜಿನೋಕ್ತಾವಳೋಕಂ
ತ್ರಿಳೋಕಂ

**ಬೊಪ್ಪಣ ಪಂಡಿತ**
ಸು. (೧೨೦೦)

# ೪೭. ನೀತಿ

ನಡೆವುದು ನಗೆಗೆಡೆಯಾಗದೆ
ನುಡಿವುದು ನಯನೀತಿಯಲ್ಲಿ ಸುಜನರೊಳೆಂತುಂ
ಬಿಡುವುದು ಕೆಡೆನುಡಿವವರಂ
ಜಡರೊಡನಾಡಲ್ಕೆ ವೇಡ ಸುಜನೋತ್ತಂಸಾ

ಒರ್ವರ ಸಿರಿಯೊರ್ವರ ಜಸ
ಮೊರ್ವರ ಸಾಮರ್ಥ್ಯಮೊರ್ವರಾಕಾರಂ ಮ
ತ್ತೊರ್ವರ್ ಬಯಸಿದೊಡಪ್ಪುದೆ
ಪೂರ್ವಾರ್ಜಿತಮಿಲ್ಲದರ್ಗೆ ಸುಜನೋತ್ತಂಸಾ

ಗಿರಿಗಿರಿಯೊಳ್ ಮಾಣಿಕಮುಂ
ಕರಿಕರಿಯೊಳ್ ಮುತ್ತು ಚಂದನಂ ವನವನದೊಳ್
ಧರೆಧರೆಯೊಳ್ ಕತ್ತುರಿಯುಂ
ಪುರಪುರದೊಳ್ ನೃಪರುಮುಂಟೆ ಸುಜನೋತ್ತಂಸಾ

ಪ್ರೀತಿಯ ಮೊನೆಯಱಿಯದಬೞಿ
ಕಾತುರಿಸಿದೊಡುಂಟೆ ನಂಟು ಬತ್ತಿದಗಿಡುವಿಂ
ಗೀತವನೆತ್ತಿದೊಡದು ತಾಂ
ಚೇತರಿಪುದೆ ಮುನ್ನಿನಂತೆ ಸುಜನೋತ್ತಂಸಾ

ಎಲ್ಲರನೆಲ್ಲಾತೆಱದಿಂ
ಬಲ್ಲಂದದೆ ತನ್ನ ಕಡೆಗೆ ಮಾೞ್ಪನೆ ಚದುರಂ
ಪುಲ್ಲೇವುದೆನಲ್ವೇಡಂ
ಪುಲ್ಲುಂ ಪಲ್ಲೆಡೆಗೆ ಬಹುದು ಸುಜನೋತ್ತಂಸಾ

ಮಱೆವೊಕ್ಕವರಂ ಕಾಯದೆ
ತಱಿದೊಟ್ಟದೆ ರಣದೊಳಾಂತ ರಿಪುಭೂಭುಜರಂ
ಸೆಱೆಗೆಯ್ಯದೆ ದುರ್ಜನರಂ
ಬಱಿದೊಲ್ವಳೆಭಾಗ್ಯಲಕ್ಷ್ಮಿ ಸುಜನೋತ್ತಂಸಾ

ಆವುಂ ಮಾವುಂ ಪಾವುಂ
ಬೇವುಂ ತಾವುಂಡೊಡೊಂದು ಕಾಲಿನ ನೀರಂ
ಭಾವಿಸೆ ಭಿನ್ನರುಚಿತ್ವಮ
ನಾವರಿಸವೆ ಧಾತ್ರಿಯೊಳಗೆ ಸುಜನೋತ್ತಂಸಾ

**ಬೊಪ್ಪಣ ಪಂಡಿತ**
ಸು. (೧೨೦೦)

## ೪೮. ಸಿರಿ ಗರಂ ಪೊಡೆದವರು

ನವರಾಜ್ಯಾಭಿಷವಾತಿಶೀತಜಲದಿಂದಂ ಸನ್ನಿಪಾತಂ ತಗು
ಟ್ಟಿವೊಲಂತಿನ್ನುಡಿಯರ್! ತದುತ್ಸವಸಮುದ್ಯದ್ದುಂದುಭಿಧ್ವಾನದಿಂ
ಕಿವಿಗೆಟ್ಟಂತಿರೆ ಕೇಳರಾನೊಸಲ ಪಟ್ಟಂ ಜೋಲ್ದು ಕಣ್ಗಾವಗಂ
ಕವಿದಿರ್ದಂದದೆ ಕಾಣರಿನ್ನುಮರಸರ್ ಸಂಪನ್ಮದೈಕಾಲಸರ್

ತೊದಳಂ ನುಡಿವರ್ ನಡೆಯರ್
ಪದುಳಂ ಕಿಸುಗಣ್ಚಿ ನೋಡುವರ್ ತಮ್ಮುಮನಿಂ
ತಿದಿರುಮನೇನೆಂದಱಿಯರ್
ಮದಿರೋನ್ಮತ್ತರವೊಲವನಿಪಾಲರ್ ಪಲರುಂ

ಮಱೆದುಂ ಕಾಣರ್ ಕಂಡೊಡ
ಮಱಿಯರ್ ಮಾನ್ಯರಿವರೆಂದು ಮತ್ತಱಿದೊಡಮೇಂ
ತೊಱೆವರ್ ದಾಕ್ಷಿಣ್ಯಮುಮಂ
ತೆಱನಿಂತುಟು ನೋಡೆ ಸಿರಿಗರಂ ಪೊಡೆದವರಾ

ಕನಕಾಭಿಧಾನಸಾಮ್ಯದೆ
ಜನಿಯಿಪುದುನ್ಮತ್ತವೃತ್ತಿಯಂ ಧುತ್ತೂರಂ
ಕನಕಮೆ ತಾಂ ತತ್ ಕ್ಷಣದೊಳ್
ಜನಿಯಿಪುದಚ್ಚರಿಯೆ ಜನದ ಮನದೊಳ್ ಮದಮಂ

ಸಿರಿಯೆಂಬ ಪಾಣ್ಬೆಯಾಗಳೆ
ಸರಕ್ತೆಯಾಗಳೆ ವಿರಕ್ತೆಯವಳೊಲವನದಂ
ಚಿರಮೆಂದು ನಚ್ಚುವಂಗಂ
ಚಿರಮಕ್ಕುಮೆ ಬಗೆವೊಡಱಿವುಮಱವುಂ ನೆರವುಂ

**ಅಗ್ಗಳ–ಚಂದ್ರಪ್ರಭ ಪುರಾಣ**
ಸು. (೧೨೦೦)

## ೪೯. ವಾಣಿ

ಅವಳ ಕಯ್ಯ ಪುಸ್ತಕದೊಳಿರ್ಪುವು ಲೋಕದ ಸಾರಸೂಕ್ತಿಯಿ
ನ್ನಾವಳ ವಾಗ್ವಿಲಾಸಚತುರತ್ವದೆ ಪೋದುದು ಪದ್ಮಜಂಗೆ ಮು
ನ್ನಾವರಿಸಿರ್ದ ಛಾಂದಸಿಕೆಯಾವಳ ಪೋಲ್ವೆಯ ಪುತ್ರಿ ಕೀರ್ತಿ ಲ
ಕ್ಷ್ಮೀವಧುವಾದಳಾ ವಧುಗೆ ಕಾವ್ಯದ ನಾಂದಿಯೊಳರ್ಘ್ಯವೆತ್ತುವೆಂ

ದುರಿತವ್ರಾತಲತಾಕೃಪಾಣಿ ವಿಸರದ್ದುರ್ಬೋಧರೋದಸ್ವಿನೀ
ತರಣದ್ರೋಣಿ ಸಮುನ್ನತಾಕ್ಷಯಃಪದ ಪ್ರಾಸಾದ ನಿಶ್ರೇಣಿ ಬಂ
ಧುರಸಾಹಿತ್ಯ ಸುರತ್ನ ರೋಹಣಮಹೇಂದ್ರಕ್ಷೋಣಿ ತಾಳ್ದಿರ್ಕೆ ವಿ
ಸ್ತರದಿಂ ವಾಣಿ ಮದೀಯ ಮಾನಿತ ಮುಖಶ್ರೀಯೊಳ್ ಸಖೀಲೀಲೆಯಂ

## ೫೦. ಬೇಡರು

ಅತಿಕುಟಿಲಕೋಟಿಹಸ್ತರ್
ಕೃತಕೌಲೇಯಕಬಲಗ್ರಹರಾ ವನಮೃಗಸಂ
ತತಿಗೆ ದೃಢಕಠಿಣಕಾಯರ್
ಕೃತಾಂತದೂತರ್ಕಳಂತೆ ಬರೆ ಬೇಂಟೆಯವರ್

ಪದವಿಲ್ ಕಟ್ಟಿದ ಗೇಣ್ ಪೊಸ
ಪೊದೆ ಪೆಗಲೊಳ್ ಕೋದ ಕೊಂಬು ಬಡಿಕೋಲ್ ಬಲೆ ಪಾ
ಶದ ವಿಶ್ವಕದ್ರು ದೇಸಿಯ
ನೊದವಿಸಿ ನಡೆದತ್ತು ಬೇಂಟೆಗಾಱರ ತಂಡಂ

ಕೋಸುವಲೆ ದೋಂಟಿವಲೆ ಬಾ
ಣಾಸನವಲಗಂಬು ಕಲ್ಲಿ ಕೈಪೊಡೆ ಗಾಳಂ
ಮಾಸಿದ ಮಯಣದ ಹಳೆಯೊರೆ
ಪಾಶದ ನಾಯ್ವೆರಸು ಬನಕೆ ಬೇಡರ್ ನಡೆದರ್

ಸೋಪಿನ ತೋಪಿನ ಪಳಹದ
ಕೋಪಿನ ಪಾಳಿವದ ಗೋರಿವೇಂಟೆಗೆ ಮತ್ತಂ
ಚಾಪಪ್ರವೀಣರುದ್ಧತ
ಕೋಪರ್ನಡೆತಂದರಲ್ಲಿ ಮುಂದೆ ಪುಳಿಂದರ್

ವಿಕರಾಳಾಲೋಕನೀಕ್ಷಜ್ಜ್ವಳಗತನಳಿನೀಶ್ಯಾಮನುದ್ಭ್ರಾಮ್ಯದೇಕಾ
ಸ್ತ್ರಕರಾಗ್ರಂ ವೇಣುಬಾಣಾಸನವಿನಿಹಿತಕಕ್ಷಂ ಸಕೌಳೇಯಕಸ್ತ್ರೀ
ನಿಕರಂ ಹ್ರಸ್ವಾಸಿಧೇನುಸ್ಥಗಿತಜಘನನಂದೊಪ್ಪಿದಂ ದ್ವೀಪಿಲಾಂಗೂ
ಲಕೃತೋಷ್ಣೀಷಂ ಶಿರಾಳಂಕೃತದರವಿಕಸತ್ಕಿಂಕಿರಾತಂ ಕಿರಾತಂ

**ಅಗ್ಗಳ-ಚಂದ್ರಪ್ರಭ ಪುರಾಣ**
(ಸು ೧೧೮೯)

## ೫೧. ಪಾಮರಿಯರು

ತರಳಾಪಾಂಗಮರೀಚಿಗಳ್ ಕಳಮಕೇದಾರಕ್ಕೆ ಬೆಳ್ವಾರದೋ
ಲಿರೆ ಸುತ್ತುಂ ಗಿಳಿಸೋವ ನುಣ್ದನಿಯದೆತ್ತಂ ಗೋರಿಯಂ ಪಾಡುವಂ
ತಿರೆ ಪಾಂಥರ್ ಬಲವಂದು ಬೆಳ್ಮೃಗದವೋಲ್ ಸಾರ್ತಂದು ಬೆಳ್ವಾಗೆ ಪಾ
ಮರಿಯರ್ ಕಾಮನ ಬೇಂಟೆಗಾರ್ತಿಯರೆನಿಪ್ಪಾ ಶಂಕೆಯಂ ಮಾಡುವರ್

ಗಗನದೊಳೆಯ್ದೆ ಮಂಡಳಿಸಿ ನಿಂದ ಶುಕಾಳಿಯನಂದು ಬೆರ್ಚಿಪು
ಜ್ಜುಗದೊಳೆ ನೋಟ್ಪಿ ಪಾಮರಿಯ ಚಾರುಕಟಾಕ್ಷಮರೀಚಿ ನೀಳ್ದು ಶೋ
ಭೆಗೆ ನೆಲೆಯಾಯ್ತು ತತ್ಕಳಮಭೂರಮೆಗೆತ್ತಿದ ಪಚ್ಚನಪ್ಪ ಸ
ತ್ತಿಗೆಗಳವಟ್ಟು ತೋರ್ಪ ಶಶಿಕಾಂತದ ಕಾಂತದ ಕಾಪಿದೆಂಬಿನಂ

. . . . . . .

## ೫೨. ಸೋಮೇಶ್ವರ ಶತಕ

ಕೆಲವಂ ಬಲ್ಲವರಿಂದೆ ಕಲ್ತು ಕೆಲವಂ ಶಾಸ್ತ್ರಂಗಳಿಂ ಕೇಳುತಂ
ಕೆಲವಂ ಮಾಳ್ಪವರಿಂದೆ ಕಂಡು ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಂತೆ ಕೇಳ್
ಪಲವುಂ ಪಳ್ಳ ಸಮುದ್ರಮೈ ಹರಾಹರಾ ಶ್ರೀ ಚೆನ್ನಸೋಮೇಶ್ವರ

ಇರಿಯಲ್ ಬಲ್ಲೊಡೆ ವೀರನಾಗು ಧರೆಯೊಳ್ ನಾನಾಚಮತ್ಕಾರಮಂ
ಅರಿಯಲ್ ಬಲ್ಲೊಡೆ ಮಂತ್ರಿಯಾಗು ವಿಭುವಾಗಾರೆಂದೊಡಂ
ಕೋಪಮಂ
ತೊರೆಯಲ್ ಬಲ್ಲೊಡೆ ಯೋಗಿಯಪ್ಪುದರಿಷಡ್ವರ್ಗಂಗಳಂ ಗೆಲ್ವೊಡಂ
ತೆರಬಲ್ಲರ್ ಪೊಣೆಯಪ್ಪುದೈ ಹರಾಹರಾ ಶ್ರೀ ಚೆನ್ನಸೋಮೇಶ್ವರ

ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ
ನಿಜಮಂತ್ರೀಶ್ವರ ತಂದೆತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ
ಭಜಕಂ ದೈವದೆ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀ ಚೆನ್ನಸೋಮೇಶ್ವರ

ಹಿತವಂ ತೋರುವನಾತ್ಮಬಂಧು ಪೊರೆವಾತಂ ತಂದೆ ಸಾಧ್ವೀತ್ವದಾ
ಸತಿಯೇ ಸರ್ವಕೆ ಸಾಧನಂ ಕಲಿಸಿದಾತಂ ವರ್ಣಮಾತ್ರಂ ಗುರು
ಮತಮಾರ್ಗಂ ಬಿಡದಾತ ಸುವ್ರತಿ ಮಹಾಸದ್ವಿದ್ಯೆಯೇ ಪುಣ್ಯದಂ
ಸುತನೇ ಸದ್ಗತಿದಾತನೈ ಹರಹರಾ ಶ್ರೀ ಚೆನ್ನಸೋಮೇಶ್ವರಾ

ಧರೆ ಬೀಜಂಗಳ ನುಂಗೆ ಬೇಲಿ ಹೊಲನೆಲ್ಲಂ ಮೇದೊಡಂ ಗಂಡ ಹೆಂ
ಡಿರನತ್ಯುಗ್ರದಿ ಶಿಕ್ಷಿಸಲ್ ಪ್ರಜೆಗಳಂ ಭೂಪಾಲಕಂ ಬಾಧಿಸಲ್
ತರುವೇ ಪಣ್ಗಳ ಮೆಲ್ಲೆ ಮಾತೆ ವಿಷಮಂ ಪೆತ್ತರ್ಭಕಂಗೂಡಿಸಲ್
ಹರ ಕೊಲ್ಲಲ್ ಪರ ಕಾವನೇ ಹರಹರಾ ಶ್ರೀ ಚೆನ್ನಸೋಮೇಶ್ವರ

ಚರಿಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲ್ ಫಲಂ ತೀವಿದಾ
ಮರಗಳ್ ಪುಟ್ಟವೆ ಪುಷ್ಪವೊಂದು ಬಳಲಲ್ ಭೃಂಗಕ್ಕೆ ಪೂವಿಲ್ಲವೇ
ದುರುಳಂ ಸತ್ಕವಿಗೊರ್ವ ಗರ್ವಿ ಪುಸಿಯಂ ತಾಂ ಪೇಳ್ದೊಡೇಂ ಲೋಭದಿಂ
ಧರೆಯೊಳ್ ದಾತರು ಪುಟ್ಟರೇ ಹರಹರಾ ಶ್ರೀ ಚೆನ್ನಸೋಮೇಶ್ವರ

ರವಿಯಾಕಾಶಕೆ ಭೂಷಣಂ ರಜನಿಗಂ ಚಂದ್ರಂ ಮಹಾಭೂಷಣಂ
ಕುವರಂ ವಂಶಕೆ ಭೂಷಣಂ ಸರಸಿಗಂಭೋಜಾಳಿ ತಾಂ ಭೂಷಣಂ
ಹವಿ ಯಜ್ಞಾಳಿಗೆ ಭೂಷಣಂ ಸತಿಗೆ ಪಾತಿವ್ರತ್ಯವೇ ಭೂಷಣಂ
ಕವಿಯಾಸ್ಥಾನಕೆ ಭೂಷಣಂ ಹರಹರಾ ಶ್ರೀ ಚೆನ್ನಸೋಮೇಶ್ವರ

ಚಿಗುರೆಂದುಂ ಮೆಲೆ ಬೇವು ಸ್ವಾದವಹುದೇ ತೇಳ್ ಚಿಕ್ಕದೆಂದಕ್ಕರಿಂ
ತೆಗೆಯಲ್ ಕಚ್ಚದೆ ಪಾಲನೂಡಿ ಪುಲಿಯಂ ಸಾಕಲ್ಕೆ ವಿಶ್ವಾಸಿಯೇ
ಖಗನಂ ಸಾಕುವೆವೆಂದು ಗೂಗೆಮರಿಯಂ ಸಂಪ್ರೀತಿಯಿಂದೋವರೇ
ಪಗೆಯಂ ಬಾಲಕನೆಂಬರೇ ಹರಹರಾ ಶ್ರೀ ಚೆನ್ನಸೋಮೇಶ್ವರ

ಮುಕುರಂ ಕೈಯೊಳಿರಲ್ಕೆ ನೀರ ನೆಳಲೇಕೈ ಕಾಮಧೇನಿರ್ದುಮಾ
ಟಕೆ ಗೊಡ್ಡಾಕಳನಾಳ್ವರೇ ಗುಣಯುತರ್ ಪಾಲುಂಡು ಮೋಲುಂಬರೇ
ಶುಕನೋಂದಿಗುರೆ ಚೆಲ್ವೆ ಕಾಕರವ ರಂಭಾನೃತ್ಯದಿಂ ಡೊಂಬರೇ
ಸಖರಿಂದುನ್ನತವಸ್ತುವೇ ಹರಹರಾ ಶ್ರೀ ಚೆನ್ನಸೋಮೇಶ್ವರ

ಉಡುರಾಜಂ ಕಳೆಗುಂದಿ ಪೆರ್ಚದಿಹನೇ ನ್ಯಗ್ರೋಧಬೀಜಂ ಕೆಲಂ
ಸಿಡಿದುಂ ಪೆರ್ಮರನಾಗದೇ ಎಳಗರುಂ ಎತ್ತಾಗದೇ ಲೋಕದೊಳ್
ಮಿಡಿಪಣ್ಣಾಗದೆ ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ತಾಂ
ಬಡವಂ ಬಲ್ಲಿದನಾಗನೇ ಹರಹರಾ ಶ್ರೀ ಚೆನ್ನಸೋಮೇಶ್ವರ

ಕೊಡಬೇಕುತ್ತಮನಾದವಂಗೆ ಮಗಳಂ, ಸತ್ಪಾತ್ರಕಂ ದಾನಮಂ,
ಬಿಡಬೇಕೈ ಧನಲೋಭಮಂ ಸ್ವಜನರೊಳ್, ದುಷ್ಟಾತ್ಮರೊಳ್ ಗೋಷ್ಟಿಯಂ

ಇಡಬೇಕೀಶ್ವರನಲ್ಲಿ ಭಕ್ತಿರಸಮಂ, ವಿಶ್ವಾಸಮಂ ಸ್ವಾಮಿಯೋ-
ಳಿಡಬೇಕಿರ್ದುಣ ಬೇಕೆಲೈ ಹರಹರಾ ಶ್ರೀ ಚೆನ್ನಸೋಮೇಶ್ವರ

ಅತಿಗಂಭೀರನುದಾರ ಧೀರನು ಮಹಾ ಸಂಪನ್ನ ಸತ್ಯಾತ್ಮನೂ
ರ್ಜಿತ ನಾನಾಲಿಪಿಭಾಷೆಯೊಳ್ ಪರಿಚಿತಂ ಲಂಚಕ್ಕೆ ಕೈನೀಡದಂ
ವ್ರತಿ ಸದ್ಧರ್ಮ ವಿಚಾರಶಾಲಿ ಚತುರೋಪಾಯಂಗಳಂ ಬಲ್ಲವಂ
ಪ್ರತಿಕಾರ್ಯಂ ವರ ಮಂತ್ರಿಯೈ ಹರಹರಾ ಶ್ರೀ ಚೆನ್ನಸೋಮೇಶ್ವರಾ

**ಪಾಲ್ಕುರಿಕೆ ಸೋಮನಾಥ–ಸೋಮೇಶ್ವರ ಶತಕ**

ಸು. (೧೨೦೦)

## ೫೩. ಬಲರಾಮನ ಪ್ರಲಾಪ

ಗರುಡಿಯೊಳಾರೊಳಿಂ ನಲವಿನಾಡುವೆನಾರೊಡನೇಱ್ ತೋಱುವೆಂ
ಕರಿತುರಗಂಗಳಂ ನಗುವೆನಾರೊಡನಾರೊಡನಣ್ಣ ಮೆಚ್ಚಿದಂ
ತಿರೆ ಮನದಿಚ್ಛೆಯಂ ನುಡಿವೆನಾರೊಡನಾಡುವೆನಕ್ಕಟಾ ಸಹೋ
ದರನನನಾಥನಂ ಬಿಸುಟು ಕೆಮ್ಮನೆ ತಮ್ಮನೆ ಪೋಗಲಕ್ಕುಮೇ

ಸರಸತಿ ನಿನ್ನ ಭಾಗ್ಯ ಪರಿಯಾದುದೆ ಹಾ ನಿನತೋಲೆವಾಗ್ಯವೋ
ಸರಿಸಿದುದೇ ಧರಿತ್ರಿ ಸಿರಿ ನಿನ್ನಯ ಮೆಯ್ಸಿರಿ ಸೂಱೆವೋಯ್ತೆ ಮೆ
ಯ್ಗರೆದುದೆ ವೀರಲಕ್ಷ್ಮಿ ನಿನತ್ತೈದೆತನಂ ಬಿದಿ ಮೇರೆದಪ್ಪಿ ನಿ
ಷ್ಕರುಣದೆ ನಿಮ್ಮ ಬಾಱ್ಮೊದಲನಕ್ಕಟ ವಂಚಿಸಿ ಕೊಂಡುಪೋದನೇ

ಸೊಗಯಿಪ ನಿನ್ನ ಸುಣ್ಚರದ ಗೀತಿಗೆ ಮೆಚ್ಚುವರಾರೊ ಭೃಂಗ ಕಂ
ತುಗೆ ಬರವೀವ ನಿನ್ನ ಬರವಿಂಗಿದಿರ್ವರ್ಪರಾರೊ ಚೂತ ದೇ
ಸೆಗೆ ನೆಲೆಯಾದ ನಿನ್ನಯ ಮುಗುಳ್ನಗೆಯುಂ ಬಗೆಗೊಳ್ವರಾರೊ ಮ
ಲ್ಲಿಗೆ ಮಱಪಿಕ್ಕಿ ನಿಮ್ಮರಸನಂ ಜವನುಯ್ದುದನಿತ್ತ ಕೇಳಿರೇ

**ಆಚಣ್ಣ–ವರ್ಧಮಾನ ಪುರಾಣ**

ಸು. (೧೨೦೦)

## ೫೪. ಜೀವಸಂಬೋಧನೆ

ಪೞಿಯಂ ಬರಿಸದೆ ಪೆಱರಂ
ಪೞಿಯದೆ ತನ್ನಳವಿಯಿಂದಮೆಂತುಂ ಧರ್ಮ
ಕ್ಕೞಲದೆ ವಿಶುದ್ಧವೃತ್ತಿಗೆ
ಬೞಲದೆ ನೆಗೞ್ವನನಘಂಗಳೇಂ ಪೊರ್ದುಗುಮೇ

ಕುಡಲಾರ್ಪೊಡೊಡೆಯನಪ್ಪುದು
ಕುಡಲಾಱದೆ ಬೇಡಿದವರ್ಗಳಂ ಮಱುಗಿಸುತಿ
ರ್ಪೊಡಮೆಯಿನಾರ್ಗಂಮಱುಕಮ
ನೊಡರಿಸದಿರ್ಪೊಂದು ಬಡತನಂ ಲೇಸಲ್ತೇ

ಎಲೆ ಎಲೆ ಜೀವರಾಶಿಗಳಿರಾ ಮಱೆದಿನ್ನೆಗಮಿರ್ದು ಕೆಟ್ಟಗಾ
ವಿಲಿಕೆಯೆ ಸಾಲ್ಗುಮಿನ್ನಱಿದು ಬಂಧನಹೇತುಗಳಪ್ಪುವೆಲ್ಲಮಂ
ತೊಲಗಿಪುದಾರ್ತರ್ಗೆ ತಕ್ಕೆಡೆಯೊಳೀವುದು ಕಾವುದು ಸದ್ಗುಣಂಗಳಂ
ಸಲಿಸುವುದೀಮನುಷ್ಯಭವಮಂ ಪಡೆದುಂ ಮಱೆದಿರ್ಪುದೊಳ್ಳಿತೇ

ಪಟ್ಟಂಗಟ್ಟಿದನೆಂಗುಮೋ ಬಡವನಂ ಪೋ ಬಟ್ಟು ಮಾಣೆಂಗುಮೋ
ಕಟ್ಟಾಳೆಂಗುಮೊ ಪಂದೆಯೆಂದು ಕಡೆಗಣ್ಚುತ್ತಿರ್ಕುಮೋ ಲೋಭಿ ನೀಂ
ಮುಟ್ಟೆಂದಿರ್ಕುಮೊ ಜಾಣನಿ ಮೆಚ್ಚಿದನಿವಂ ಬಾೞ್ಗೆಂಗುಮೋ ಕೆಮ್ಮನೇ
ಗೆಟ್ಟತ್ತೆಂಬವೊಲಟ್ಟಿ ಕೊಂದಪನಿವಂ ಮಾಯಾಂತಕಂ ಪಾತಕಂ

ಧರ್ಮಮನೆ ಕಿಡಿಸಿ ಮೆಯ್ಗನಿ
ಸಾರ್ಮಮಿದೆಂದಱಿಸುಕಕ್ಕೆ ಮೋಹಿಸುವುದೆ ಪೇೞ್
ಪೆರ್ಮರನಂ ಕಡಿದೋವದೆ
ನಿರ್ಮೂಲಂಮಾಡಿ ಪಣ್ಡಿನಲ್ ಬಯಸುವವೊಲ್

ಸುರಧನುವೆಂತುಟಂತೆ ವಿಳಸಜ್ಜಳಬುದ್ಬುದವೆಂತುಟಂತೆ ಪೆ
ರ್ದೆರೆಯಿರವೆಂತುಟಂತೆ ಕಿಸುಸಂಜೆಯ ರಂಜನೆಯೆಂತುಟಂತೆ ಭೂ
ಧರನದಿಯೆಂತುಟಂತೆ ಮುಗಿಲೊಡ್ಡಣದಾಕೃತಿಯೆಂತುಟಂತೆ ಮ
ರ್ತ್ಯರ ತನುವುಂ ಕಳತ್ರಜನಮುಂ ಧನಮುಂ ಬಗೆದೆಂತು ನೋೞ್ಪೊಡಂ

ಪೞಿಯ ಮೊದಲ್ ಪರಾಭವದ ಮೊತ್ತಮೊದಲ್ ಖಳಮೋಹರಾಜನೆಂ
ಬೞಿಪನ ಬಾೞ್ಮೊದಲ್ ಬಳೆದ ಕರ್ಮದ ಬಿತ್ತುಮೊದಲ್ ನಿತಾಂತಮೆಂ
ದೞಿಪುವ ಕಾವ ಪೆರ್ಚಿಸುವ ಚಿಂತೆಯನರ್ಥದೊಳುಂಟುಮಾಡದೊ
ಳ್ಪೞಿಯದೆ ಮೋಹಮಂ ಬಿಸುಟ ಮಾನಸರಿಲ್ಲಿಯೆ ದೇವರಲ್ಲರೇ

ತನುಬಳವುಂ ವಿಳಾಸದಳವುಂ ಧನಸಂಕುಳವುಂ ವಿನೂತಯೌ
ವನಭರವುಂ ಕಳತ್ರದಿರವುಂ ಸುತರಾದರವುಂ ಸರಾಗಿಯ
ಪ್ಪನ ಸಲವುಂ ಲತಾಂಗಿಯೊಲವುಂ ಸಿರಿಯೊಳ್ ನಿಲವುಂ ನಿತಾಂತಮೆಂ
ದಿಸಿತುಮನಿತ್ಯಮೆಂದಿವಱಿಗಳ್ಕೆಗೆ ದುಃಖಿಗಳಾಗಲಕ್ಕುಮೇ

ಬಗೆ ಗಡ ಗರ್ಭದೊಳ್ ಬಳೆವುದಂ ಬಗೆ ಪುಟ್ಟುವ ಮುಟ್ಟುಗೊಡ್ಡಮಂ
ಬಗೆ ಬಳೆವಂದಿನೇಳಿದಿಕೆಯಂ ಬಗೆ ಕುತ್ತದೊಳಾದವಸ್ಥೆಯಂ
ಬಗೆ ಕಡುಮುಪ್ಪವೌಂಕುವೆಡೆಯಂ ಬಗೆ ಸಾವಿನೊಳಪ್ಪ ಸೇದೆಯಂ
ಬಗೆವಡಲೇವುದೆಂದು ನೆಗಟಿಲ್ಲದೊಡೆಲ್ಲಿಯಮಾತೊ ಜೀವನೇ

**ಬಂಧುವರ್ಮ–ಜೀವಸಂಬೋಧನೆ.**
ಸು. (೧೨೦೦)

## ೫೫. ಸುಪ್ರಭಾತ

ಪನಿಪುಲ್ಲಂಬುಕಣಂಗಳಂ ಕೆದಱುತುಂ ಕೋಕಂಗಳೊಳ್ ರಾಗಮಂ
ನನೆವೊಯ್ದುಣ್ಮಿಸುತುಂ ಪತತ್ರಿಗಳೊಳಿರ್ಪಾತೂಂಕಡಂನೂಂಕುತಂ
ವನಜಕ್ಕೊಯ್ಯನಲರ್ಕೆಯಂ ಸಮನಿಸುತ್ತೋರಂತೆ ಮೆಯ್ವೆರ್ಚೆ ತ
ಣ್ಣನೆ ತೀಡಿತ್ತೆನಸುಂ ಪ್ರಭಾತಸಮಯಪ್ರೋದ್ಭೂತಶೀತಾನಿಲಂ

ಒದವಿದ ತೂಂಕಡೋಸರಿಸೆ ಕಣ್ದೆಱೆದೀಕ್ಷಿಸಿ ನಿಟ್ಟೆಱಂಕೆಯಂ
ಬಿದಿರ್ದು ನಿಮಿರ್ಚಿ ಗೋಣ್ಮುಱಿವೆರಟಿಕ್ಕಿಲನಂ ಕಮನೀಯಚಂಚುವಿಂ
ಕರ್ದುಕಿ ಕುಲಾಯದಿಂದೆ ಪೊಱಮಟ್ಟು ವಿಹಂಗಮಸಂಗಮಂ ಮಹೀ
ಜದ ಬಹುಶಾಖೆಯೊಳ್ ಚಿಲಿಮಿಲಿಧ್ವನಿಗೆಯ್ದುದು ಸುಪ್ರಭಾತದೊಳ್

ಎಱಕೆಗಳೊಳ್ ಪೊದಟ್ದ ಪನಿಪುಲ್ಲ ಪಯಃಕಣಮಂ ಬಿದಿರ್ಚಿ ಕ
ಣ್ದೆಱೆದಿದಿರ್ಗೊಂಬಿನೊಳ್ ತೊಡೆದು ಚಂಚುವನಂಟಿ ನಿಮಿರ್ಚಿ ನೀವಿ ನು
ಣ್ಗಱಿಗಳನೊರ್ವೊದಲ್ ಚಿಲಿಮಿಲಿಧ್ವನಿಗೆಯ್ದು ವಿಹಂಗಮಂಗಳ
ಬ್ಕಿಱುಗುಟುಕಂ ಕೊಳಲ್ಕಿರದೆ ಪಾಱಿದುವೆಣ್ದೆಸೆಗಂ ಪ್ರಭಾತದೊಳ್

ಬೆಳಗಪ್ಪ ಜಾವದ್ದೈಕಿ
ಲ್ಗೊಳೆ ಶೀತಕ್ಕಾಱಿವಳ್ಕಿ ತೊಟ್ಟಿರ್ದ ಧರಾ
ತಳವೆಂಬ ಪೆಣ್ಣ ಪೊಸಕಂ
ಚುಳಿಕೆಯ ಪೊಸಮುತ್ತಿನಂತಿರಾದುವು ಪನಿವುಲ್

ಯೋಗಿಜನಕ್ಕೆ ತತ್ತ್ವಗತಿಸಂಸ್ಥಿತಿಯುಂ ಕಳೆಯೊಳ್ ಕಳಾವಿದ
ರ್ಗಾ ಗುರುವೇಧೆಯುಂ ಕವಿಜನಕ್ಕೆ ಕವಿತ್ವದ ಸಾರಮುಂ ಬಹೂ
ದ್ಯೋಗಿ ಜನಕ್ಕೆ ತದ್ವಿಷಯಸಿದ್ಧಿಗಳುಂ ನೃಪರ್ಗನ್ಯರಾಜರಾ
ಜ್ಯಾಗಮವೃದ್ಧಿಯುಂ ಮನಕೆ ಪೆರ್ಚುವುದೊಪ್ಪುವ ಸುಪ್ರಭಾತದೊಳ್

ಹರಗಿರಿಯಂ ಪರಿದೇಱುವ
ಹರಿಪಾದಕ್ಕಮವು ಸರಸಿ ಪರಪಿದ ನೀಲಂ
ಬೆರಸಿದ ಪೀತಾಂಬರವೆನೆ
ಬಿರಿದಲರ್ದುವು ತುಂಬಿವೆರಸಿ ಪೊಂದಾವರೆಗಳ್

ಜಗಮಂ ಬೆಳಗುವ ಮಗನಂ
ಗಗನಂ ಪಡೆದೊಸಗೆಗೆಂದು ವಾರಿನ್ನೃಪಂ ತೊ
ಟ್ಟಗೆ ಬಿಟ್ಟ ತಮದಸೆಱೆಯೆನ
ಲೊಗೆದುವು ಮುಂ ಸಿಲ್ಕಿದಳಿಗಳಲರ್ದಂಬುಜದಿಂ

ಇನನ ವಧೂಟಿಯರೆಂಬೀ
ಮುನಿಸಿಂದಿರದೆಯ್ದೆ ಮುತ್ತಿ ಗಳಗರ್ಜನೆಗೆ
ಯ್ವನುಪಮ ತಮೋಭಟಾರ್ತಮಿ
ವೆನೆ ಜಿನಗುತ್ತಿರ್ದುವಳಿಗಳಬ್ಜಾಕರದೊಳ್

**ದೇವಕವಿ–ಕುಸುಮಾವಳಿ.**
ಸು. (೧೨೨೫)

## ೫೬. ರಾಜದೂತ

ಸ್ಥಿರನಾದೇಯಸ್ವರೂಪಂ ಪರನೃಪವಸುಧಾಂತಾಕುಳಜ್ಞಂ ಸದೃಷ್ಟಾಂ
ತರವಾಕ್ಯಂ ಸಾಮಭೇದಾದ್ಯತಿಶಯವಿದನಗ್ರಾಮ್ಯವೇಷಂ ಸಭಾಭ್ಯಂ
ತರನಿಶ್ಶಂಕಂ ಪರಾಶೇಂಗಿತವಿದನೆನಿಪಂ ದೂತನೆಂದಿಂತು ಧಾತ್ರೀ
ಶ್ವರಕಾರ್ಯೋದ್ಯೋಗಿಗಳ್ ಬಿತ್ತರಿಪ ಕವಿಗಳಿಂ ಖ್ಯಾತದೂತಾಂಗಮಕ್ಕುಂ

ಒಡೆಯನ ವೀರಮುಂ ಪೊಗೞಲಮ್ಮದೆ ತನ್ನ ಸದುತ್ತರಂಗಳಂ
ಬಿಡದರಿಭೂಪರೊಳ್ ನುಡಿಯಲಮ್ಮದೆ ತತ್ಸಭೆಯಲ್ಲಿ ಭೀತಿಯಿಂ
ನಡುಗುವ ಪೇಡಿಯಂ ಕಳುಹಲಾಗದು ನೆಟ್ಟನೆ ಸಂಧಿಯಲ್ಲಿಗಂ
ತಡೆಯದೆ ಭೂಭುಜಂ ನೆಗೞ್ದ ವಿಗ್ರಹದಲ್ಲಿಗಮಾವ ಕಾಲದೊಳ್

ಚದುರಂ ಭಾವಕನಿಂಗಿತಜ್ಞನಱಿವುಳ್ಳಂ ದೇಶಭಾಷಾನ್ವಿತಂ
ಪದವಾಕ್ಯಾರ್ಥವಿವಕ್ಷಿತಂ ಬಹುಕಳಾಸಂಪನ್ನನಾಸ್ಥಾನಸಂ
ಮದವಾಗ್ವೀತ್ತನೆನಿಪ್ಪನಂ ನೃಪವರಂ ಕೈಕೊಂಡು ಸತ್ಪಾತ್ರನಂ
ಪದಪಿಂ ನೆಟ್ಟನೆ ಸಂಧಿವಿಗ್ರಹಿಯೆನಲ್ ಭಾವಿಪ್ಪುದೆಲ್ಲಾಗಳುಂ

**ಪಾರ್ಶ್ವಪಂಡಿತ–ಪಾರ್ಶ್ವನಾಥ ಪುರಾಣ**
ಸು. (೧೨೨೫)

## ೫೭. ಚಂಡಶಾಸನನ ದುರಂತ

ಪರಮಬ್ರಹ್ಮನ ನಂದನಂ ಭರತಚಕ್ರಾಧೀಶ ದರ್ಪಾಪಹಂ
ಚರಮಾಂಗಂ ಕುಸುಮೇಷು ಬಾಹುಬಲಿದೇವಂ ಶ್ರೀ ಮಹಾಮಂಡಳೇ
ಶ್ವರನಾಳ್ದಿರ್ದುದಾರ ವೀರ ವಿಭವ ಶ್ರೀಪಾದನಂ ಪೌದನಂ
ಪುರಮುಂಟಾ ಪುರಮಾ ಸುರಮ್ಯವಿಷಯಶ್ರೀ ವಕ್ತ್ರಬಿಂಬೋಪಮಂ

ಅನಿತೊಳ್ಪಿಸೆವ ಸುರಮ್ಯಾ
ವನಿಗಂ ಪೌದನಪುರಕ್ಕಮಧಿಪತಿ ವೀರಾ
ರಿನೃಪಾಲ ಶಿರಃಖುರಶಾ
ಣಿ ನಿಷ್ಕೃಷ್ಟಭುಜ ಕೃಪಾಣಕಂ ವಸುಷೇಣಂ

ಊರ್ವಶಿ ರಂಭೆ ಮೇನಕೆ ತಿಲೋತ್ತಮೆಯೆಂಬರ ಹಾವಭಾವಮುಂ
ಪುರ್ವಿನ ಕೊಂಕು ಕಣ್ಮಲರ ಕಾಂತಿ ಕದಂಪಿನ ತೆಳ್ಪು ಸಾಲ್ವುದಾ
ರೊರ್ವರೆ ಗೆಲ್ವುದಕ್ಕೆನಿಪ ರಾಣಿಯು ವಾಸದ ದೇಸೆಯಾಸೆಯು
ಯ್ಯೂರ್ವರೊಳಂ ಸುನಂದೆ ಪಿರಿಯಳ್ ವಸುಷೇಣನ ಚಿತ್ತವೃತ್ತಿಯಿಂ

ಒಂದು ದಿವಸಂ ವಾಹಳೀ ವಿನೋದಾವಸರದೊಳೊರ್ವಂ ಪೂರ್ವ ಪರಿಚಿತ ಪ್ರಸನ್ನಾಕಾರಂ ಸುದರ್ಶನನೆಂಬೊಂ ಬಂದು ಮಹಾರಾಜಂಗೆ ದರ್ಶನೋಪಾಯನಮನಿತ್ತು ಪೊಡವಟ್ಟು ನಿಂದು ದೇವರದೇವನ ಸಹೋದರಂ ಸಹ ಪಾಂಸು ಕ್ರೀಡಾನು ಬಂಧಸಂಗತಬಂಧು ಮಕರಗ್ರಾಹ ಪುರವರಾಧೀಶ್ವರಂ ಚಂಡಶಾಸನದೇವಂ ದೇವರಂ ಪಲದೆವಸಮುಗಲ್ದುದುರ್ನೆನೆದು ನೋಡಲ್ ಬರುತ್ತುಮವಸರಮನಱಿಯಲೆನ್ನನಟ್ಟಿದನೆಂಬುದು ಮತಿಪ್ರೀತಿಯಿಂ ವಿಸ್ತಾರಿತವಿಲೋಚನನಾಗಿ ಬೇಗುಮೀಗಳೆ ಬರವೇೞೆಂದಾತ್ಮನರ್ಮಸಚಿವಂ ಬೆರಸಾತನಂ ಕಟಿಪಿ ಬಳಸಿ ನಿಂದ ಗಂಧ ಸಿಂಧೂರ ಘಟಾ ಪಟಲಮನಿಕ್ಕೆಲಕ್ಕೆದೆಗೆದ ಪಸಾಯತರ ತುಳುಂಗ ಬಳಸುಮಾಸ್ಥಾನೀಕೃತರಾಜಸುತ ಸರ್ವಜನುಮಾಗಿ ನಿಂದಾಗಳ್

ಕ್ಷಿತಿರಂಗಂ ಭಟಕೋಟಿಪಾದ ತುರಗಶ್ರೇಣೀಖುರವ್ರಾತ ಸಾ
ತ್ಕೃತಮಾಶಾವಳಿ ಭೂಷಣಾಂಶು ಮೃಗನಾಭೀಸಾರ ಸೌರಭ್ಯ ಸಾ
ತ್ಕೃತಮಭ್ರಂ ಚಮರೀಜ ಕೇತುಪಟಲ ಶ್ವೇತಾತಪತ್ರೌಘ ಸಾ
ತ್ಕೃತಮೆಂಬಂತಿರೆ ಚಂಡಶಾಸನನೃಪಂ ಬಂದಂ ಮಹೋತ್ಸಾಹದಿಂ

ಅಂತು ಬರಲೊಡಮಿರ್ವರುಂ ವಾಹನಂಗಳನಿೞಿದು ರೋಮಾಂಚ ಸಂಚಯಂ ತೊಟ್ಟಂಗಿಗಳ ತಟ್ಟುರ್ಚಿ ಪೆರ್ಚಿದ ಮುಯ್ಪಿನೆಡೆ ಪೊಟ್ಟ

ನೊಡೆಯೆ ಪರಸ್ಪರಾಲಿಂಗನಂಗೆಯ್ದು ತತ್ಸಮಯ ಸಮುಚಿತ ಭಾಷಣ ಸಂಭಾವನಾನಂತರಂ ವಸುಷೇಣ ಮಹಾರಾಜಂ ತನ್ನ ಪಟ್ಟದ ಮದ ವೇದಂಡಮಂ ಚಂಡಶಾಸನನೇಱಿಸಿ ಬೇಱೊಂದು ಭದ್ರಗಜಮಂ ತಾನೇಱಿ ಮಹಾವಿಭೂತಿವೆರಸೊಡಗೊಂಡು ಬಂದು

ಪುರಲಕ್ಷ್ಮೀ ಲಲನಾಪ್ತಶೋಭೆ ವರನಾರೀ ಮಂಗಳಾಚಾರ ಚಾ
ರುರನಂ ಪೌರಜನಾವಲೋಕನ ವಚಃ ಕೌತೂಹಲಂ ಪೆರ್ಚೆ ಮಂ
ದಿರಮಂ ಪೊಕ್ಕು ಸಮಸ್ತ ವಸ್ತು ಸುಖ ಸನ್ಮಾನಂಗಳಿಂದಂ ಮನಂ
ಬೊರೆವಂ ಭೂಪತಿ ಬಿಟ್ಟು ಪಲ್ಲಟಿಸಿತೆಂಬಂತಾ ಮನೋಮಿತ್ರನಂ

ಸರಸ ಕಾವ್ಯ ವಿನೋದ ಗೋಷ್ಠಿಯಿನೊರ್ಮೆ ನಾಟಕ ನಾಟಿಕಾ
ಪರಿನಟಪ್ರಸ ಭಾವ ಭಂಗಿಯಿನೊರ್ಮೆ ಗೀತದ ವಾದ್ಯದ
ಚ್ಚರಿಯ ನೃತ್ಯದ ಕೇಳ್ಪಿಯಿಂ ಮುದದೊರ್ಮೆ ಜಟ್ಟಿಗರಪ್ಪ ಮ
ಲ್ಲರ ಪೊಣರ್ಕೆಯಿನೊರ್ಮೆ ಪೊತ್ತುಮನೊರ್ಮೆ ಮೇಷವಿಶೇಷದಿಂ

ಒರ್ಮೆ ವಾಹ ವಿಳಾಸ ಕಂದುಕ ಕೇಳಿಯಿಂ ಗಜಯುದ್ಧದಿ
ದೊರ್ಮೆ ವಾರುವದಂಕದಗ್ಗದ ಕಾಳೆಗಂಗಳಿನೊರ್ಮೆ ಮ
ತ್ತೊರ್ಮೆ ಚಿತ್ರವಿಚಿತ್ರ ಕೌತುಕದಿಂದಮಿಂತು ನೆಗಟ್ಚಿದಂ
ಕೂರ್ಮೆಯಿಂ ವಸುಷೇಣಭೂಪತಿ ಚಂಡಶಾಸನ ಭೂಪನೊಳ್

ಅಂತು ನಿರ್ವಿಕಲ್ಪಮುಂ ನಿರಂತರಿತಮುಮಾದ ಸೌಹಾರ್ದದೊಳ ಪ್ಪೇಕಸದನದ ಸಹಪಂಕ್ತಿಭೋಜನದ ಸಹವಿಳಾಸಕ್ರೀಡಿತದ ಸಮಯಂಗ ಳೊಳಗೆ ವಸುಷೇಣನಂಗನೆ ಸುನಂದಾದೇವಿಯ ಏಱುಂಜವ್ವನಕ್ಕಳಂಕಾರ ಮಾಗಿ ಕೈಮಾಡಿ ಮೆಱೆವ ಕಾಮದೇವನ ಕರವಾಳಂತೆ ಕಣ್ಣೊಳ್ ಪೂಳೆದೆರ್ದೆಯೊಳುಳ್ಕಿ ಕೊಳ್ಕುಬೆಳ್ಕುಗೊಳಿಸುವ ವಿಳಾಸದೊಳಂ ಸಮ್ಮೋ ಹನಶಕ್ತಿಯಂತೆ ಭಾವಕರ ಬಗೆಯ ಬಯ್ಕೆಯನಗೆಯೆತ್ತಿ ಸೂಱೆಗೊಳ್ವ ಕಳಕಳಾಪ್ರೌಢಿಯೊಳಂ ದುರಾತ್ಮಕನಪ್ಪ ಚಂಡಶಾಸನನ ಕಣ್ಮಲರ್ ಕವಿದು ಕವ್ವರಿಗೊಂಡು ಮಂಡಳಿಸಿ ಬಳಸಿ ಸೋಲಕ್ಕಾಲಂಬವಂ ಪಡೆವೆರ್ದೆಗಾದಮುದವಱಿಲುಂ ತನುವಿಂಗೆ ತಾಪಮುಮೊಡನೆ ಬಳೆಯೆ ವಳೆಯೆ

ನಗೆಗಣ್ ನಲ್ಲಳ ಕೂಟಮಂ ಪಡೆದುವಿಂಪಂ ಶ್ರೋತ್ರಮೀಂಟಿತ್ತು ಮಾ
ತುಗಳಂ ನಾಸಿಕೆಗಾಯ್ತುವಳ್ ಸುಱಿದ ಸೂಱೆೊಳ್ ಸೌರಭಂ ಸ್ವಾದುನಾ
ಲಗೆಗಾಯ್ತಾಕೆಯ ಹಸ್ತಪಲ್ಲವ ರಸಾಸ್ವಾದ್ಯಂಗಳಿಂ ಸೋಂಕುವಾ
ಸೆಗೆ ಪಕ್ಕಾಗದೆ ನಿಂದ ಪಲ್ಲವಕನಂಗಕ್ಕಾಯ್ತನಂಗಜ್ವರಂ

ಒಡೆಯನ ಕಾಪು ಕಟ್ಟಣಕಮೆಂದೊಡೆ ಬಂಧುಗಳಾಪ್ತರಾಗದೆಂ
ದೊಡೆ ಮನಮಿತ್ತುಮೀಯಳವಳೆಂದೊಡಸಾಧ್ಯಮಿದೆಂದೊಡೊಲ್ಲಳೆಂ
ದೊಡೆ ಮೊಱೆಯಾಗದೆಂದೊಡೆ ಪರಾಂಗನೆಯೆಂದೊಡೆ ಸಾಮ್ಯಮಲ್ಲಮೆಂ
ದೊಡೆ ತಲೆಹೋಗಿಯುಂ ಬಸಿದು ಬೀೞದೆ ಸೈರಿಸರಲ್ತೆ ಕಾಮುಕರ್

ಒರ್ಮೆ ದೀವರ ಬೇಂಟೆಯಂ ನೋಡಲ್ ಬಯಸಿ ಪೊಱಮಟ್ಟು ವಸುಷೇಣಂ

ಪರಿಮಿತ ವಾಜಿ ವಾರಣ ಪದಾತಿ ವರೂಥ ಕದಂಬ ಕಾಮಿನೀ
ಪರಿಚಿತ ರಾಜಪುತ್ರ ನಿಚಯಂ ಧರಣೀಪತಿ ಚಂಡಶಾಸನಂ
ಬೆರಸು ವನಾಂತದೊಳ್ ತೆರೆಯ ತೋಪಿನ ಸೋಹಿನ ನೀರ ಬೇಂಟೆಯು
ವ್ವರೆಗಳನೀಕ್ಷಿಸುತ್ತೆ ಬರೆ ಮುಂತಣ ಚೂತವನಾಂತರಾಳದೊಳ್

ಬಿರಿದೆರ್ದೆ ಬಿಟ್ಟ ಬಾಯ್ ಅಲರ್ವ ನಾಸಿಕೆ ಪತ್ತಿದ ಗೋಣು ಸುತ್ತಿ ಕ
ವ್ವರಿಸುವ ದಿಟ್ಟಿ ಕೆತ್ತುವೊಡಲೆತ್ತಿದ ಕಂಠಮೆಬಿಲ್ವ ಕರ್ಣಮು
ಬ್ಬರಿಸುವ ಮೆಯ್ನವಿರ್ ಪನಿವ ಮುಂಬದನೊಪ್ಪಿರೆ ದೀವದೊಳ್ ಮರ
ಲ್ದಿರಲೆಯ ಭಾವಮಚ್ಚರಿಯನಚ್ಚಿಗೊಡರ್ಚಿದುದಾ ನೃಪೇಂದ್ರನಾ

ಅದಂ ಕಂಡು ಚಂಡಶಾಸನನಂತರ್ಗತದೊಳಿಂತೆಂದಂ

ಹರಣೀಲೋಚನೆ ದೀವಮಾಂ ಹರಿಣನಂ ಪೆರ್ಗಾಡಿದೀ ಬೀಡು ಬಿ
ಣ್ಬರಿಗಳ್ ನೇಣ್ಬರಿ ಶಂಬರಾರಿ ಶಬರಂ ಪುಲ್ಲಂಬು ಕೆಲ್ಲಂಬು ಮದ್
ವಿರಹಾವಸ್ಥಿತಿ ಗೋರಿಗೋರಗೆಯೆನಿಪ್ಪಂತಾದುದೆಂತಾಗಿಯುಂ
ನೆರೆಯಲ್ ತೀರದು ಗೋರಿ ಸಾಯದೆನವೇಡೀ ನೋವೆ ಸಾವಲ್ಲವೇ

ಆ ವಿನೋದವಂ ನೀಡುಂ ನೋಡಿ ಪೊಗೞ್ದು ಪೋಪುದುಮರಸನರಸಿವೆರಸು ಬೋನಮನೀ ನಂದನವನಕ್ಕೆ ಬರವೇೞ್ಕೆಂದು ಸೂೞಾಯ್ತರನರಮನೆಗೆ ಕೞುಪಿ ಕಾಪುಗಾಡಿನೊಳ್ ಸೋಹಿನ ಬೇಂಟೆಯ ಬಿನದದಿನಿರ್ವರ ರಥಮುಂ ಬೇೞ್ಪೆವೇೞಾದಲ್ಲಿ ಚಂಡಶಾಸನಂ ವಸುಷೇಣನರಸಿ ಬರ್ಪ ಬಟ್ಟೆಯತ್ತಲೆ ಸಾರ್ದುಕೊಂಡಿರ್ಪಿನಂ ಪರಿಮಿತಾಂಗರಕ್ಷಕಪರೀತೆಯುಂ ಪುಃ ಧಾವತ್ಕತಿವಯಚೇಟಿಕಾಪುರೋಭಾಗೆಯುಂ ದೋಳಾದಂಡಿಕೋಭಯ ಭಾಗಸಂಭಾಷಿತ ಸಹಚರೀಯುಗಳೆಯುಮಾಗಿ ನಿಜವಲ್ಲಭನಟ್ಟಿದ ಬೞಿಗೆಬರುತ್ತುಮಿರ್ದ ಸುನಂದಾದೇವಿಯುಂ ಕಂಡು

ಕಡೆಗಣ್ಗಳ್ ಪರಿದೆಯ್ದೆ ಮತ್ತೆಮನಮುಂಗೋಪಾಂಗಸಂಗಕ್ಕೆದಾ
ೞಿಡೆ ಕಾಯ್ದುಳ್ಳೆರ್ದೆ ಗೂಡುವಾಯೆ ಪಿರಿದೊಂದೌತ್ಸುಕ್ಯದಿಂ ಕಂಠದೊಳ್
ಮಿಡುಕಣ್ಮುತ್ತಿರೆ ಮೇಲೆವಾಯ್ದು ಭರದಿಂದಂ ನಲ್ಲಳಾಂದೋಳದಿಂ
ಕಡುಕಯ್ಯಂ ತೆಗೆದಿಟ್ಟುಕೊಂಡು ರಥದೊಳ್ ಬಂದಂ ಮನೋವೇಗದಿಂ

ಕರುಳಕತ್ತರಿ ನಂಟರಮಾರಿ ತುತ್ತುಮಿಂಚಿದೊಡೊಡನುಂಡು ಮತ್ತೆ ತೊಡೆ ಮಿಂಚಿದೊಡಾ ಖಳನಂತು ಪಿಡಿದೊಯ್ವಾಗಳುರಗಂ ಪಿಡಿದಂತೆ ಬೆದಱಿ ಪಾವು ಪಿಡಿದಂತಿರೊದಱಿ ಕಡುಜರ ಪತ್ತಿದಂತು ಕಳವಳಿಸಿ ಠಕ್ಕು ಪತ್ತಿದಂತೆ ಮತಿಗೆಟ್ಟು ಸಿಡಿಲ್ ಪೊಡೆದಂತೆ ಹಮ್ಮೈದಂಬೋಗಿ ಸುನಂದೆಯಾಗಿಯುಮುಸು ನಂದೆ ಕಿಱಿದಾನುಂ ಬೇಗದಿಂ ಬೞಿಕ್ಕೆ ಕಾಮುಕಾಂಡ ಖಂಡಿತಹೃದಯಂ ಚಂಡಶಾಸನಂ ವಿಶ್ವಾಸಘಾತಕಂ ಕಾತರತ್ರೆಯಿಂ ತನ್ನಂ ಪಿಡಿದುದನಱಿದು

ಇನನಂ ವಂಚಿಸಿ ಚಂಡಶಾಸನನವಂ ಕಳ್ದೊಯ್ದಪಂ ನಾಥನಂ
ಗನೆಯಿಂದೆನ್ನ ಸುನಂದೆಯಂ ಸುಭಟರಣ್ಮೆಂ ವೀರರಡ್ಡೈಸಿಮೆ
ನ್ನಿನಿಯಂಗೆಯ್ದಿಸಿಮೂರ ನಾಡ ಜನಮಿ ಪೆಣ್ಬುಯ್ಯಲಂ ಹಾ ಸುಷೇ
ಣನೃಪಾ ಹಾ ನೃಪನೀಱ ಎಂದಬಲೆ ಬಾಯ್ವಿಟ್ಟೆೞ್ತು ಹುಯ್ಯಲ್ಚಿದಳ್

ಪರವೆಣ್ಣಾಟಿಸಿ ಕಳ್ದ ಕಾತರನನಾರುಂ ಕಾಣರಾರುಂ ಕನ
ಲ್ವರಿದಿಕ್ಕರ್ ಧರೆ ನುಂಗದೇಂ ನೊಣೆಯಿರೇ ದಿಗ್ದೇವಿಯರ್ ತಿನ್ನವೇ
ಗಿರಿಗಳ್ ಬೆಂದೆನನಾಥೆಯಾದೆನೆನಗಿನ್ನಾರಾಸೆಯಾರ್ ಕಾವರಾರ್
ಶರಣೆಂದಾ ಕಳಕಂಠನಾದೆ ಬಸಿಱಿಂ ಬಾರೇೞ್ವಿನಂ ಮೋದಿದಳ್

ಮುನಿಸುಂಟಾದೊಡೆ ಮುಟ್ಟಿ ಮೂದಲಿಸಿ ಬೞ್ಪಿಂ ನಿನ್ನ ಬಾಳ್ ಆತನಾ
ತನ ಬಾಳ್ ನಿನ್ನ ಕಪಾಲದೊಳ್ ಮುಱಿದು ಮುಂತೆೞ್ತಿರ್ಪು
ದಿನ್ನೊಪ್ಪುವಾ
ಳ್ತನಮುಂ ಗಂಡರ ಪಿಂದೆ ಕಳ್ವುದರಿದೇ ಸ್ತ್ರೀಬಾಲೆಯಂ ಬೂತೆ ಪಾೞ್
ಮನೆಯೊಳ್ ನಾಯ್ ಘೃತಭಾಂಡಮಂ ತೆಗೆವವೊಲ್ ಕಳ್ದೊಯ್ದುದಾಳ್
ಪಾೞಿಯೇ

ತರವೇೞ್ದಿಟ್ಟದ ಬೋನಮಾಗಳೆ ರಸಾಳೋದ್ಯಾನಮಂ ಪೊಕ್ಕುದೇ
ಕರಸಂ ಬಾರನೊ ಚಂಡಶಾಸನನದೆತ್ತಲ್ ಪೋದನೋ ದೇವಿಯುಂ

ಬರುತುಂ ತಳ್ವಿದರಂಗರಕ್ಕರಿದಿರ್ವೋಗಿಂ ನೀವೆನುತ್ತುಂ ಮಹ
ತ್ತರರಿರ್ಪ್ಪರ್ನ್ನೆಗವೆಯ್ದೆ ವಂದನವನೀನಾಥಂ ತದುದ್ಯಾನಮಂ

ಬಂದು ವರೂಥದಿಂದಿೞಿದು ಭೋಜನಶಾಳಿನಿಕಾಯಮಾನಪ್ರತಾನ ಸಂಪುಲ್ಲಮಲ್ಲಿಕಾಮಂಡಪದ ಮುಂದೆ ನಿಂದು

ಬಂದಳೆ ದೇವಿ ಪಂಜ್ಸಿಗೆಡೆಮಾಡಿಸಿದಪ್ಪಳೆ ಚಂಡಶಾಸನಂ
ಬಂದನೆಯೆಂದು ಮಂದಿರಮಹತ್ತರರಂ ಬೆಸಗೊಳ್ವಿನಂ ನೃಪಂ
ಬಂದುದು ಚೇಟಿಕಾಸಹಚರೀಜನಮುಂ ಶ್ಲಥ ಕೇಶಪಾಶಮಾ
ಕ್ರಂದಿತವಕ್ತ್ರಮಾಹತಕೃಶೋದರಮಾಕಳಿತಾಶ್ರುಲೋಚನಂ

ಅಂತು ಶೋಕರಸಮೆ ರೂಪುಗೊಂಡಂತೆ ಬರ್ಪ ನಿಜಾಗ್ರ ಮಹಿಷೀ ಪುರಜನಮಂ ದೂರದೊಳ್ ಕಂಡಿದೇನೆಂದತಿಚಕಿತ ಚಿತ್ತನುಂ ವಿಸ್ಫುರಿತ ವಿಲೋಚನನುಮುದ್‌ಬದ್ಧಭ್ರೂಲತಾಮೂಲನುಮುತ್ತಾನಿತ ಕರಪತಾ ಕನುಮಾಗುತ್ತುಮಿರೆಯಿರೆ

ಹಾ ಲಲಿತಾಂಗಿ ಹಾ ಕುಸುಮಕೋಮಳೆ ಹಾ ಕಳಹಂಸಯಾನೆ ಹಾ
ನೀಲಸರೋಜಲೋಚನೆ ಸುನಂದೆ ನೃಪೇಂದ್ರನ ರಾಜ್ಯಲಕ್ಷ್ಮಿ ಭೂ
ಪಾಲನ ಭಾಗ್ಯಲಕ್ಷ್ಮಿ ವಸುಷೇಣನ ಮಂಗಳಲಕ್ಷ್ಮಿ ರಾಜಚಾಂ
ಡಾಲನ ಬಾಹುರಾಹುಗಿಳನಂ ನಿನಗೆತ್ತಣಿನೆತ್ತ ಬಂದುದೋ

ಎಂದು ಬಾಯಬಿಡುತ್ತುಂ ಬಂದು ಮುನ್ನಡಿಯೊಳ್ ಕೆಡೆದುಂ ಪುಡಿಯೊಳ್ ಪೊರಳ್ವ ವಿಳಾಸಿನೀಸಮೂಹದೊಳಗೆ ರಾರಾಜಿತ ರತ್ನಪಾದು ಕಾಗ್ರಾಹಿಣಿಯಪ್ಪ ಬಾಳಕಿಯದೊರ್ವಳ್ ದೇವರಟ್ಟಿದ ಬೞಿಗೆ ದೇವಿಯರ್ ಬರುತ್ತುಮಿರೆ ಚಂಡಶಾಸನಂ ಕಂಡೆಡೆದು ಪಿಡಿದು ಕೈಸೆಱೆ ವಿಡಿದು ಬಂದಿಕಾರನಂತೆ ಕೊಂಡುಪೋದಂ

ಬಂಡಣದೊಳಟ್ಟಿದು ಪೆಂಡಿರ್
ಭಂಡಾರಂ ಪೋದೊಡದು ವಿಧಾತೃವಶಂ ಬಲ್
ಗಂಡಂಗೆ ಸಂತಸೊಕವಾ
ಪೆಂಡತಿ ಕೋಳ್ಪಟ್ಟು ಮಗುಳೆ ಪುಗುವೆನೆ ಪೊೞಲಂ

ಪ್ರಾಣಪ್ರಿಯಳಿಲ್ಲದೆ ನಿಃ
ಪ್ರಾಣಮದೆಂತುಣ್ಬುದೀಗಳೀ ಒಡಲಹಿತ
ಪ್ರಾಣಾನಿಲನಿಂದೆನ್ನ ಕೃ
ಪಾಣಾಹಿಯನೂಡಿ ಬೞಿಕಮೂನುಂಡಪ್ಪೆಂ

ಎಂದೆತ್ತಿ ನಡೆಯಲುತ್ತ್ರವಳಿಸಿದ ಸಮಯದೊಳ್

ನೆರೆದಾಪ್ತರ್ ಸಚಿವರ್ ಚಮೂಪತಿಗಳಂದಾಳೋಚನಕ್ಕೆಂದು ಬಂ
ದಿರೆ ಕಂಡಿಂಗಿತಮಂ ನೃಪಂ ನುಡಿದನಿನ್ನೇಮಾತೊ ಕಿರ್ಚೆರ್ದೊಡಂ
ಗರನಾದಂ ಗಡ ಮಾರಿ ಹೊಕ್ಕ ಮನೆಯೊಳ್ ಪರ್ವಂ ಗಡಾಳೋಚಮೇಂ
ಬೆರಗೇಂ ಬೆಂಬಲಮೇಂ ಸ್ವರಾದಿಬಲಮೇಂ ನೀಂ ಪೇೞ್ವುದೇಂ ಕೇಳ್ವುದೇಂ

ಎಂದು ಮುಂದನಾರಯ್ಯದೆ ಪಿಂದಂ ಪಾರದೆ ಮುಂದೆ ನಿಂದ ನಿಜ
ಸ್ಯಂದನಮನೇಱಿ ಸುಟ್ಟುರೆ ಮುಸಗಿಟ್ಟುರಿಗೊಂಡನಾ ವ್ಯತಿಕರದೊಳ್

ರಣರಭಸೋತ್ಕಟಂ ಧರೆ ಪೆಡಂ ಮಗುಳ್ದಂತೆ ಚತುಸ್ಸಮುದ್ರಮು
ಲ್ಬಣವಿಕಟೋತ್ಕಟಂ ಮುಸಗಿ ಮೇಲ್ಗವಿದಂತೆ ದಿಶಾಚತುಷ್ಟಯಂ
ಪ್ರಣಿಹಿತಿಹೇತಿ ತಿಂತಿಣಿಸಿದಂತೊಡವಂದುದು ಪಣ್ಣಿದಾನೆ ಪ
ಲ್ಲಣಿಸಿದ ವಾಜಿ ಪೂಡಿದ ರಥಂ ಕವಚಂಬಿಗಿದಾಪ್ತಸೈನಿಕಂ

ಆ ಸಂರಂಭದೊಳ್

ಪರವೆಣ್ಣಂ ತಂದನೋ ತಂದನೊ ಪೆಸರ್ಗಿಡೆ ಪೆರ್ಮಾರಿಯಂ ನಮ್ಮ
ದುರ್ಗಕ್ಕುರಸಂ ಸೇನಾಸಮಗ್ರಂ ನಿಜಗಲಿ ವಸುಷೇಣಂ ವಧೂವಿಹ್ವಲಂ ದ
ಳ್ಳುರಿ ದಾಱಿಟ್ಟಂತಿದಂ ಸುಟ್ಟುರಿಪದಿರಿಸನೇಗೆಯ್ವೆವೆಂತಿರ್ಪೆವೆತ್ತಲ್
ಪರಿವೆಂ ನಾವೆಂದು ಪೌರರ್ ಕುದಿದರದಿರ್ದರಳ್ಕಾಡಿ ತಳ್ಳಂಕಗೊಂಡರ್

ನೊಣೆಯಲ್ ನುಂಗಲಿಳಾತಳಂ ಮುರಿದು ಮೂರಿಟ್ಟಂತೆ ದುರ್ಗಕ್ಕೆ ನಿ
ಚ್ಚಣಿ ಸಾರ್ಚುಂದೊಲೆ ವೀರಸೇತು ನಡೆಸಾರಂ ಬದ್ದರಂ ಗೆಗ್ಗೆಡೆಂ
ಕಣಿ ಗುಮ್ಮಂ ಪಡಿಗೋಂಟೆಯೆಂಬ ಬಹುಕೋಟಾಯಂತ್ರಸಾಮಗ್ರಿ ತಿಂ
ತಿಣಿಗೊಂಡಾಂತಿರೆ ಲಗ್ಗೆಗಾರ್ದು ವಸುಷೇಣಂ ಸಾರ್ದು ಸೂಱೆಸಿದಂ

ರಣಮಂಡಲದೊಳ್ ಪೆಱತೆಗೆ
ದಣಿಯಂ ತೆಗೆನೆಱೆದ ಬಿಲ್ಲವೋಲಿರ್ದ ಭಟಾ
ಗ್ರಣಿ ಪರಿದು ದಂಡೆಗೊಂಡ
ಡ್ಡಣದಿಂದಂ ಚಂಡಶಾಸನಂ ಕೈಕೊಂಡಂ

ಅದನಾಗಳ್ ಕಂಡು ಕಣ್ಣಿಂದುರಿ ಬರೆ ಪೊಗೆ ಪುರ್ವಿಂದಮುರ್ವೇಱೆ ಭೋಂಕಲ್
ಮದಮಾತಂಗಾರಿ ಪೂರ್ವಾಸನದಿನಿೞಿದು ಮೆಯ್ವೆತ್ತ ವಜ್ರಾಂಗಿ ಕಯ್ಯೆ
ತ್ತಿದ ಕೊಂತಂ ದಂಡೆಗೊಂಡಡ್ಡಣಮಿರೆವಸುಷೇಣಂ ಭರಂಗೆಯ್ವುದಂ ಪೋ
ದುದು ಪೊತ್ತಿಂ ಕಾಲಿಡಲ್ ಕತ್ತಲೆ ಕದಡಿದುದೆಂದಾಪ್ತರಡ್ಡೈಸಿ ನಿಂದರ್

ಆಗಳಿರಡುಂ ಪಡೆಗಳಪಹಾರತೂರ್ಯಂ ಮೊೞಗೆ ಪೆಱತೆಗೆಯಲೊಡಂ ವಸುಷೇಣಂ ಬಂದು ನಿಜನಿವೇಶಿತಸ್ಕಂಧಾವಾರಮಂ ಪೊಕ್ಕನಿತ್ತ ಚಂಡಶಾಸನಂ ಸುನಂದೆಯಂ ತಂದು ಸೆಱೆಯಿಟ್ಟ ಮಣಿಮಾಡಕ್ಕೆ ಬಂದು

ಘನನಿಶ್ವಾಸತರಂಗಿತಾಳಕಿಯನಗ್ರಪ್ರಾಂತವಾರ್ವಿಂದುಲೋ
ಚನಪಕ್ಷ್ಮಾವಳಿಯಂ ವಿಯೋಗಪಹನಪ್ಲುಷ್ಟಾಧರಚ್ಛಾಯೆಯಂ

ವಿನತಪ್ರಾಹ್ಣಸುಧಾಂಶುಬಿಂಬಮುಖಿಯಂ ಚೀನೋತ್ತರೀಯಾವಗುಂ
ಠನನಿರ್ಭಿನ್ನಕಪೋಲಪಾಂಡುರುಚಿಯಂ ಸಾರ್ದಂ ತದುರ್ವೀಶ್ವರಂ

ಆಗಳ್

ಬಿದಿಯೆಂಬ ಮದಗಜಂ ನೃಪ
ಸದನ ಸರೋವರದೊಳೞಿದು ಸೆಳೆತಂದು ವನಾಂ
ತದೊಳಿಕ್ಕಿದ ಬಾಳಮೃಣಾ
ಳದವೊಲ್ ಸತಿ ಕೊರಗಿ ಕಣ್ಗೆ ಕರಮೆಸೆದಿರ್ದಳ್

ಅಂತು ಸಾರ್ದು ತನ್ನೊಡವಂದು ಬಾಗಿಲೊಳ್ ನಿಂದ ಪರಿಜನಮುಮಂ ಕೆಲಬಲದೊಳಿರ್ದ ಪಸಾಯಿತರುಮಂ ಪರಿಹರಿಸಿ ಕೃತಕ ವಿನಯೋಪಚಾರಮೆಸೆಯೆ ಚಂಡಶಾಸನಂ ಸುನಂದಾದೇವಿಗಿಂತೆಂದಂ

ನಯದಿಂ ನಿನ್ನೊಡಂಬಡಂ ಪಡೆಯದಿಂದೌತ್ಸುಕ್ಯದಿಂ ತಂದ ಸ
ಲ್ಗೆಯ ನೀಂ ಮನ್ನಿಸು ಕಾಮಿ ಕಣ್ಣಱಿವನಲ್ತಾಂ ಗಂಡುದೊೞ್ತಿನ್ನರಾ
ಣಿಯವಾಸಂ ಪರಿಚಾರಕಾದಿ ನಿನಗೀ ಸಾಮ್ರಾಜ್ಯಲಕ್ಷ್ಮೀಸುಖೋ
ದಯದೊಳ್ ವಲ್ಲಭೆಯಾಗಿ ನೀನಿರು ದಲನ್ನೀಲಾಬ್ಜಲೋಲೇಕ್ಷಣೇ

ಸೆಱೆಸಿಕ್ಕಿಂ ಪಿಡಿತಂದ ದೇಸಿಗಿತಿಯುಂ ಭೋಗೋಪಭೋಗಂಗಳಂ
ಮಱೆದುಂ ಕಾಣದನಾಥೆಯುಂ ನುಡಿವವೊಲ್ ನಿನ್ನೊಂದು ಸಂಪತ್ತಿಯಂ
ಜಱುಚುತ್ತಿರ್ದಪೆ ಪಾಣ್ಬ ನಿನ್ನ ತಲೆಯುಂ ಕಾರಾಗೃಹದ್ವಾರದೊಳ್
ಮೆಱೆವಾಗಳ್ ನುಡಿ ನಾಳೆ ನೀನೆನಗೆ ಮಾಡಲ್ವೇೞ್ಪ ಸತ್ಕಾರಮಂ

ಎಂದು ಬೆಟ್ಟವೆಟ್ಟನೆ ಬಯ್ದು ಬೆಟ್ಟು ಬಿದಿರ್ದು ನುಡಿದ ಸುನಂದೆಯ ನುಡಿಗೆ ಚಂಡಶಾಸನನೇವೈಸಿ ಮುಳಿಯದೆ ಲಜ್ಜೆಯಿಂ ಚಳಿಯದೆ ಮತ್ತಮಿಂತೆಂದಂ

ಕೆಳೆಗೆಟ್ಟಾಂ ಪಗೆಯಾದೆನಾಗೆ ವಸುಷೇಣಂ ಪೋದನಿನ್ನೆನ್ನ ಕ
ಯ್ಯೊಳದಂ ನಂಬಟಿಯಾಸೆಯಿಂ ನವೆಯದಿರ್ ಬೇಡಾಗ್ರಹಂ ಸತ್ತು ಸ
ತ್ಫಳಮಂ ತೋಱುವ ಬಾಟಿಯಾಗದಿರು ಪಾತಿವ್ರತ್ಯದಿಂ ಬತ್ತಿ ಬಾಟ್
ದಳಿರಾಗುತ್ತಿರದಾಳ್ದಿರಾತ್ಮ ಪರ ಸೌಖ್ಯ ಶ್ರೀ ವಿಳಾಸಂಗಳಂ

ಎಂಬುದುಮೀತಂಗೆ ಮಾತಂ ತಪ್ಪಿನಮುತ್ತರಂಗುಡುತ್ತಿರಲೇಕೆಂದಾ ಕೆಯಿಂತೆಂದಳ್

ಮಾವಿನ ಕೊಂಬಿನೊಳ್ ನಲಿದು ನರ್ತಿಪ ಕೋಗಿಲೆ ಪತ್ತಿದಂಟೆನಿಂ
ಬೇವಿನ ಕೊಂಬಿನೊಳ್ ನಲಿವುದೇ ಪ್ರಿಯನಿರ್ದವೊಲಪ್ರಿಯರ್ಗೆ ಸಂ
ಭಾವನೆಗೆಯ್ವರೇ ಸತಿಯರೇಂ ಗಡ ವೀರನ ತೋಳ ಬಾಳುಮಂ
ನಾವಿದ ಬಾಳುಮಂ ಸಮನೆ ಪತ್ತಿಪ ಸಾಣೆಯೊ ಮದ್ಭುಜಪ್ರಜಂ

ವಸುಷೇಣನೃಪನೆ ಕೈವಿಡಿ
ದಸುವಿಂಗೊಡೆಯಂ ಚಿತಾಗ್ನಿಗೊಡೆಯಂ ಒಡಲಿಂ
ತೆಸೆದೀ ಪಾತಿವ್ರತ್ಯದ
ಮಿಸುಗುವ ಜಸವೆಣ್ಣ ತಲೆಗೆ ತರ್ಪನೆ ಪುಲ್ಲಂ

ಎಂಬುದುಮಾ ಕುಟಿಲನಾಕೆಯೊಳ್ ತೆಱಪುಗಾಣದೆ ಮುಳಿದು ಮಾ ಣದೆ ಮತ್ತಮಿಂತೆಂದಂ

ಬಿಡೆನಾಂ ನೀಂ ಸಯೆ ಸಾವೆನಲ್ಲದುಟಿಯೆಂ ನೀನೊಲ್ದಡೇನೊಲ್ಲದಿ
ರ್ದೊಡೇನಾನೆರಡಿಲ್ಲದೊಲ್ದೆನದಱಿಂ ಬೇಜಾರ ಬೇಟಕ್ಕೆ ಬಾಯ್
ಬಿಡಲಾಱೆಂ ಸೆಱೆಯಿಂದಮೆನ್ನ ಮನೆಯೊಳ್ ನೀನಿರ್ದೆಯೆಂಬಾಸೆಯು
ಳ್ಳೊಡೆ ಸಾಲ್ಗುಂ ಬಟಿಕಪ್ಪುದಕ್ಕೆ ರಣದಿಂದಂಭೋಜಪತ್ರೇಕ್ಷಣೇ

ಎಂದು ತನ್ನಳಿಪನಡರೆ ಚಾಳಿಸಿ ನುಡಿದು ಪೋಗುತ್ತುಂ

ಪರಿಚಿತೆ ನೀಂ ತಳೋದರಿಗೆ ಮೆಯ್ವುಱಿಯಿಂ ಮನಮಂ ತೊಡಂಕೆ ನಾಂ
ತುರಿಪದಿನಿರ್ದು ನಿಂದಱಲನಾಱಿಸು ತೋಱಿಸು ಭೀತಿಯಂ ಮನಂ
ಕೊರಗದೆ ಮತ್ತೆ ಸಂತಮಿಡು ಗಂಡನ ಪಂಬಲನೊಯ್ಯನಾಗಿಯೆಂ
ದರುಣಿಕೆಯೆಂಬಳಂ ನಿಱಿಸಿ ಕಾಂತೆಯ ಕಾಪಿನೊಳಾ ನೃಪಾಳಕಂ

ನೇಸಱ್ ಮೂಡಲೊಡಂ ಮುನ್ನೆ ಮುನ್ನೆ ಮೂಡಿರ್ದ ವಿರಹ ಪರಿತಾಪಂ ತೀರದೆಯುಮೇತಱ್ರೊಳಮಾ ತಳೋದರಿಯನೊಡಂಬಡಿಸಲ್ ಬಾರದೆಯುಮಾ ಕಿತವಂ ತನ್ನ ಕೈತವದೊಳ್

ಪತಿಯುರೆ ಪಿಂಗದಾಸೆ ಮನದೊಂದಱಿಯಾಸೆಯಿನೆನ್ನನೊಲ್ಲಳೀ
ಸತಿಯಿವಳಂ ಮರುಳ್ಚಿದಪೆನೆಂದು ಬೆಸಂಗುಡೆ ಚಂಡಶಾಸನಂ
ಪ್ರತಿಬಳಮೆಯ್ದೆ ಕೆಟ್ಟುದಱಿದಂ ವಸಷೇಣನೃಪೇಂದ್ರನೆಂಬ ಸಂ
ಗತಿಯನೊಡರ್ಚಿದಂ ಜನದ ಕಣ್ ಬೆಱಗಪ್ಪಿನಮಿಂದ್ರಜಾಲಿಗಂ

ಆ ವ್ಯತಿಕರಮಂ ಕಂಡು ನಮ್ಮರಸನಿರುಳಿನ ಕವಿಯ ಕಾಳೆಗದೊಳ್ ಮುತ್ತಿದ ಬೀಡಂ ತೊತ್ತಱದುಱಿದು ಪಗೆಯ ಪಂದಲೆ ಕಯ್ಗೆ ವಂದು ದಿನ್ನೇನಿನ್ನೇನೆಂದು ಕೋಟೆಯೊಳಗೆ ಜನಂ ಕೋಟಿತೆಱದಿಂ ನಾಟಕಂ ನಲಿದು ಬೊಬ್ಬಿಱಿಯುತ್ತಿರೆ ಸುನಂದಾದೇವಿಯಿರ್ದ ಸೆಱೆವನೆಗೆ ತಾನೆ ವಂದು

ವಸುಷೇಣನೆ ಪತಿಯೆನಗೆಂ
ದು ಸುನಂದೆ ಸಿಡಿಲ್ವೆ ಮಾಟ್ಟೆ ಸೋವಡಿಕೆಯನೀ
ಬಸಿವ ತಲೆಗೆನುತಮೀಡಾ
ಡಿಸಿದಂ ಮಾಯಾವಿ ಪತಿಯ ಮಾಯದ ಶಿರವಂ

ಅಂತು ತಂದಿಱಿಪಿದ ಶಿರಮುಮಂ ಕಳ್ದು ತಱಿದ ವಲ್ಲಭನ ಮಣಿಮಕುಟ ಕೇಯೂರಮಂಡಳಾದೀಪಸಮಂಡನಮುಮಂ ಪೇರುರದೊಳೋರಂತೆ ಮೆಱೆವ ತೋರಮುತ್ತಿನ ಹಾರಮುಮಂ ಕಾಣಲೊಡಂ

ಹೃದಯದೊಳಿರ್ದ ವಲ್ಲಭನನಾಕ್ಷಣಭೀತಿಯಿನೀಕ್ಷಿಪಂತೆ ಮು
ಚ್ಚಿದುವಲರ್ಗಣ್ಪೊಣರ್ ತಡವಿ ನೋಡುವವೊಲ್ ಕುಚಮಧ್ಯದಲ್ಲಿಗಾ
ದುದು ಕರಪಲ್ಲವಂ ಸರಮನಾಲಿಸುವಂತೆ ಮೊಗಂ ಮಲಂಗಿತಂ
ಗದೊಳಿರ್ದ ಶೂನ್ಯಮಾಗಱಿಸುವಂತಸು ಪೋಯ್ತುಸಿತಾಬ್ಜನೇತ್ರೆಯಾ

ಬಱಿಯಟ್ಟಿ ಬಂದು ಮುನ್ನಂ
ಪುಱುವಗೆಗೊಳಗಾದಳೆಂದು ಸಾವಾಸಿಗಳಂ
ಕಱಿಪದೆ ನಲ್ಲಂ ತಲೆಯಂ
ಬಱಿಯಟ್ಟಿದನೆಂದು ಪೋದುದಸು ಶಶಿಮುಖಿಯಾ

ಇನಿಯನಿರೆ ನೋಡ ಮತ್ತೊ
ರ್ಬನ ಕಣ್ಗಂ ಬಗೆಗವೊಪ್ಪಿದಪ್ಪುದು ಸುಡಲೀ
ತನುವನಿದನೆಂದು ಜೀವಂ
ಮುನಿದಂತಿರೆ ಬಿಟ್ಟು ಪೋಯಿತಸು ಶಶಿಮುಖಿಯಾ

ಆಗಳಾ ವ್ಯತಿಕರಮಂ ಕಂಡತಿಚಕಿತ ಹೃದಯನುಮಾಕುಳಿತ ವಿಳೋಕನುಮಾಗಿ

ಸ್ಮರನೊಳ್ ದಾಯಿಗನಾಗಿ ಬೆಂದ ವಿಧಿಯೊಂದಂ ಮಾಡಿದಂ ಕೂಡುವೆಂ
ಬೆರಗಿಂದೆಂದಿದನಿಂತು ಮಾಡೆ ದುರಣಂ ಮೂಡಿತ್ತು ಹೋ ಬೆಂದೆನಾ
ನುರಿದೆಂ ನಂದಿದೆನೆಂದು ಬಂದು ಭರದಿಂ ತಬ್ಬಿಕ್ಕೈಸೆ ತಳ್ತಾಂತು ತ
ತ್ತರುಣೀಗಾತ್ರದ ಸೋಂಕು ಸಮ್ಮನಿಸೆ ಮೂರ್ಛಾಪನ್ನನಾದಂ ಖಳಂ

ಅವನಂ ಚಾಮರದಡಪದ
ಡವಕೆಯ ಕಿಱ್ವಾಳ ಮೇಳದಂಗನೆಯರ್ ಬೀ
ಸುವ ಬಿಜ್ಜಣಿಗೆಯ ಮಳಯಜ
ನವಜಳಕಣದೆಲರ ಸೋಂಕಿನಿಂ ನಿಲೆ ಪಿಡಿದರ್

ಅಂತು ಮೂರ್ಛೆಯಿಂ ಬೆಚ್ಚನೆ ಸುಯ್ದು ಬೆದೆಬೆದೆ ಬೆಂದು ನೊಂದು ನಿಂದಿಸಿಕೊಂಡು ಮಾಣದೆ

ನೋಡಿ ಕನಲ್ದು ಬಾಯ್ಮುನಿದು ಮೋನದಿನೇಕೆಲೆ ದೇವಿ ನೀಂ ಮನಂ
ನೋಡುವೆ ಸಾವಿನಿಂ ಸರಸವಾಡುವರೇ ಮಱುಮೆಯ್ಯೊಳಾದೊಡಂ
ಕೂಡದೆ ಮಾಣೆನಬ್ಜದಳಲೋಚನೆ ನಿನ್ನೊಡನಿಂದು ಮೆಯ್ಗೆ ಮೆ
ಯ್ಗೂಡುವೆ ಧೂಮಸೌಧಗೃಹದೊಳ್ ಶಿಖಿಪಲ್ಲವರಾಗತಲ್ಪದೊಳ್

ಎಂದು ಬಾಯಟಿದು ಪಟಯಿಸಿ ಬಸವುಟಿದಸುವೊಱೆಯಾಗಿ ಮನ ಮನಜಿದು ಕಳವಳಿಸಿ

ಎನಗಿನ್ನೋಲಗಸಾಲೆಯೇಕಿದು ವಿಮಾನಂ ನಂದೆಯಂ ಲೋಲಲೋ
ಚನೆಯಂ ಕುಳ್ಳಿರಿಸಿಲ್ಲಿ ಕೂಡೆ ಬಟಿಸಲ್ವಂತಃರಸ್ತ್ರೀಯರಾ
ಳ್ತನಮಂ ತೋಱುವ ಲೆಂಕರೊಳ್ ನುಡಿಯವೇಟ್ ವಿದ್ಯಾಜನಂ ಬರ್ಕೆ ಚಂ
ದನಗಂಧಾವಿಧದಿಂದಮೆನ್ನ ವಿರಹ ಜ್ವಾಲಾಗ್ನಿಯಂ ನಂದಿಪೆಂ

ಎಂದು ತನ್ನ ಲಕ್ಷ್ಮೀಭವನವೆನಿಸುವುಪರಿಮಂಡಪವನೆ ಚಿತ್ತಕ್ಕೆ ಮಾಡಿ ಸುನಂದಾದೇವಿಯುಂ ತಾನುಮೇಕಾಸನದೊಳ್ ಕುಳ್ಳಿರ್ದು ರಾಣಿಯ ವಾಸದ ಪೆಂಡವಾಸದ ಭಾಷೆಯ ಲೆಂಕರ ಭಾರತಿಕನಿಕರ ದೋಲಗದ ಕೇಳೀ ವಿಳಾಸಮಂ ಕೆಟಿಗೆ ತಗುಳ್ಚಿದ ಹುತವಹಜ್ವಾಲಾ ಕಲಾಪಮಂ ಮೆಚ್ಚಿದಂತೆ ಮೂರ್ಛೆಕೊಳ್ವಿನಮೊಡನಟಿಯಲ್ ಪರಿ ಚ್ಛೇದಿಸಿದ ಕುಲಸ್ವಾಮಿಯವಸಾನ ಸಮಯಮಾಗೆ

ನಗೆಗಂ ನಾಚದೆ ನಮ್ಮನೊಲ್ಲದೆ ಪರಸ್ತ್ರೀಗೊಲ್ದವಳ್ ಸತ್ತೊಡಾ
ಕೆಗೆ ತಾಂ ಪ್ರಾಣಮನಿತ್ತಪಂ ಗಡರಸಂ ನೋಡಕ್ಕ ಮಾವಿಂಗೆ ಮ
ಲ್ಲಿಗೆಗಳ್ ಕೂರ್ತೊಡೆ ಮಾವು ಕೂರ್ತುದು ವಸಂತಶ್ರೀಗೆನಿಪ್ಪಂತೆ ಲ
ಜ್ಜೆಗೊಡಲ್ ಮುಂಮುಟಿವೋಪುದನ್ನುಟಿವಿದರ್ಕ್ಕೇಗೆಯ್ವೆಮಬ್ಜೇಕ್ಷಣೇ

ಆ ಮಾತಂ ಮಾರ್ಕೊಂಡು ಕುಲವತಿಯುಂ ಶೀಲವತಿಯುಮೆನಿಸಿದ ವಿದಗ್ಧೆಯೊರ್ವಳಿಂತೆಂದಳ್

ಪಱಿಗೇವಯ್ಸುವ ಪಾಪವೆಂಬ ಪೆಱವೆಣ್ಣಾಟಿಪ್ಪುದಾ ಮಾಯದೊಂ
ದಱಿವೆಂಬೋಜೆಯಧೀಶವೃತ್ತಿಯಧಿಪಂಗೇನಾದುದಾದಲ್ಲಿ ಮೆಯ್
ನೆಱಲಂತಪ್ಪುದು ನಮ್ಮ ವಿತ್ತ ನಮಗಿನ್ನಾ ಮಾತದೇಕೆಂದು ಪಿಂ
ದುಱಿವೊಂದಾಸೆಯನೊಲ್ಲದೆಯ್ದೆ ನೆರಪಿತ್ತಂತಃಪುರ ಸ್ತ್ರೀಜನಂ

ಕ್ರಮದಿಂ ಕೈಯೆಡೆಗೊಟ್ಟೆನೀ ಹರಿಣಿಯಂ ಕೊಂಡಾಡಿಸೀ ರಾಜಕೀ
ರಮನೋವೀ ಕಳಹಂಸನಂ ಸಲಹು ನೀನೀ ಸೋಗೆಗಾಗೆಲ್ಲಮಂ
ನಮಗಿನ್ನೆಮ್ಮ ಸಮಾನಮೆಂದು ಕೆಲದಾಳೀಜಾಲಮಂ ಬೇಡಿ ತ
ಳ್ತಿಮೆಯಿಂದಂ ಕರೆಗಣ್ಮೆ ಸೂಸಿ ಕಱಿದರ್ ಕಯ್ಯೊಡ್ಡಿ ಕಣ್ಣೀರ್ಗಳಂ

ಅಂತು ನಿರಂತರಶೋಕರಸಾವೇಗದೊಳ್

ನೆರೆದುದು ಲೆಂಕತಂಡಮೊಡವಂದುದು ರಾಣಿಯವಾಸಮೊಲ್ದಳಂ
ತೆಸಿದನಾ ಧರಾಧಿಪತಿಯೋಲಗಶಾಲೆಗೆ ವಂದುದಾ ತನೂ
ದರಿಯ ವಿಶೇಷ ಭೂಷಿತ ಶರೀರಮನೇಕ ವಿಮಾನ ಯಾನಮು
ಬ್ಬರಿಸಿದುದಾದುದಿಂತು ಕರುಣಾದ್ಭುತರೌದ್ರರಸಾಕರಂ ಪುರಂ

ಅನ್ನೆಗಮಿತ್ತಲ್

ವಸುಷೇಣಂ ಲಗ್ಗೆಮಾಡಲ್ ಮೊಗಸಿ ಪೊಗಿಸಿ ದುರ್ಗಕ್ಕಿಭವ್ರಾತಮಂ ಪ
ಣ್ಣಿಸಿ ವಾಹವ್ಯೂಹಮಂ ಪಲ್ಲಣಿಸಿ ಸುಭಟರಂ ಕಯ್ದುಗೊಳ್ವಂತಿರಾಳೋ
ಚಿಸಿ ರಾಜಾವಾಸದಿಂ ತಾಂ ಪೊಱಮಡುತಮಿದೇಂ ಕೋಟೆಯೊಳ್ ಕಾಮಿನೀ ವೀ
ರಸಮೂಹೇದ್ರೇಕ ಶೋಕಾಕುಳ ಬಹಳರವಂ ತಿಣ್ಣಮಾಯ್ತೆಂದನಾಗಳ್

ಚರನೆಯ್ತಂದೊರ್ವನಾ ವೃತ್ತಕಮನುಸಿರ್ದೊಡುರ್ವೀಶ್ವರಂ
ಪ್ರಾಣನಾಥಾ
ಮರಣೋದಂತಾಭ್ರವಜ್ರಸ್ಫುಟಿತಹೃದಯೋಚ್ಛ್ವಾಸನಿಶ್ವಾಸಮೂರ್ಛಾಂ
ತರಿತಂ ಬಾಷ್ಪಾಂಬುನಿಷ್ಪಂದಿತನಯನಯುಗಂ ಖೇದದಿಂ ಕೀಲಿಸಿರ್ದರ್
ಕರುವಿಟ್ಟರ್ ತಿರ್ದುವಿಟ್ಟರ್ ಬರೆದು ಕರಿಯಮೇಲಿಟ್ಟರೆಂಬಂತಿರಿರ್ದಂ

ಅಂತು ಕಿಱಿದು ಬೇಗಮಿರ್ದಂತೆಂತಾನುಂ ತನ್ನ ತಾನಱಿದು ಬಾಯೞಿದಾಕಾಶವಚನನಿಂತೆಂದಂ

ಆನೞಿದೆನೆಂದು ಪುಸಿದೊಡೆ
ಮಾನಿನಿ ನೀಂ ಕೞಿದೆ ನಿನ್ನ ಸಾವನೆ ಕಂಡಿಂ
ತಾನುೞಿದೆಂ ನಿರ್ಲಜ್ಜರ್
ದೀನರ್ ಕೃಪಣರ್ ಕೃತಘ್ನರಾರೆನ್ನಿಂಪಂ

ಅನಂತರಂ ಪಾರ್ಷ್ಣಿಗ್ರಾಹಕನಾಗಿ ತನ್ನಂ ನೆಮ್ಮಿಸಿಕೊಂಡಿರ್ದ ದಯಿತಸಾಮಂತನೊಳಿತೆಂದಂ

ಇನಿಯಳ್ ಪೋದ ಬೞಿಕ್ಕಮೆನ್ನಿರವು ತಾರಾಮಂಡಲಂ ಪೋದ ಲೋ
ಚನಮಿರ್ಪಂತೆ ಸುಗಂಧ ಪೋದ ಕೞಿವೂವಿರ್ಪಂತೆ ಕೀವಿರ್ದ ಜೀ
ವನಮೆಲ್ಲಂ ನೆಱೆಪೋದ ಹೊಟ್ಟುಗೆಱೆ ತಾನಿರ್ಪಂತೆ ದೈನ್ಯಕ್ಕೆ ಭಾ
ಜನಮಿರ್ದೇನಸು ಪೋದ ಬಾೞ್ವೆಣನಿದರ್ಕಾನಿರ್ದೊಡೇಂ ಬೞ್ದೊಡೇಂ

ಅಂತುಮಲ್ಲದೆಯುಂ

ಇದಱೊಳ್ ವಲ್ಲಭೆ ಕಾದಿ ಕೊಳ್ವ ಧನಮಾ ಪ್ರಾಣೇಶ್ವರೀರತ್ನಮಿ
ಲ್ಲದ ಬಾಳ್ಕೋಟೆ ಗಡೇಕೆ ಕೋಟಲೆಗಳೇೞಿಲ್ ಶತ್ರು ಸಾಯಲ್ ಕಡಂ
ಗಿದಪಂ ತಾಂ ಗಡ ಕೊಲ್ವುದಾರನಕಟೇ ಬೇಳೆಂಬಮಿನ್ನೇಕೆ ಸಾ
ಯದೊಡಂ ತೀರದೆ ಕಾಯಮಂ ತೊಱೆಯಲಿನ್ನುಂ ರಾಜ್ಯದೊಳ್
ಬಾೞ್ವುದೇಂ

ಮುನಿಸಯ್ದುಂ ತೆರದಿಂದಲಪ್ಪುದದಱೊಳ್ ಸ್ತ್ರೀಸಂಭವಂ ತಿಣ್ಣಮಾ
ಮುನಿಸಂ ತಂದನ ಕಂಠಪೀಠತಳದೊೞ್ ತಂದಿಟ್ಟು ರಕ್ತಾಂಬು ಮ
ಜ್ಜನಮಂ ಮಾಡಿಸಿ ಮಸ್ತಕಾಂಬುರುಹದಿಂದಂ ಪೂಜೆಗೆಯ್ದಾಂತೊಡಾ
ತನ ಕೂರ್ವಾೞ್ ಕರವಾಳ್ ದಲುಂತು ಮರವಾಳ್ ಪಾಟೂರ
ವೈಲಾರನಾ

ಎಂದು ಕೊಕ್ಕರಿಸಿ ಮಾಣದೆ

ಏಱಿ ಬರೆಗೊಂಡ ಜೂದುಂ
ಗಾಱನವೊಲ್ ಲಗ್ಗೆಮಾಡಲೊಲ್ಲದೆ ಪಡೆಯುಂ
ಸಾಱಿಸಿ ಮುಂದುಂ ಪಿಂಗುವ
ನೀಱೆಯವೊಲ್ ತೆಗೆಯವೇಟ್ದನಾ ವಸುಷೇಣಂ

**ಜನ್ನ–ಅನಂತನಾಥ ಪುರಾಣ**
ಸು. (೧೨೨೫)

# ೫೮. ಮನಸಿಜನ ಮಾಯೆ

ಆ ಕಥೆ ಮತ್ತೆಂತೆಂದೊಡಿ
ಳಾಕಾಂತೆಗವಂತಿ ವಿಷಯಮಾಸ್ಯದವೊಲ್ ಶೋ
ಭಾಕರಮಾಯ್ತದಱೊಳ್ ನಾ
ಸಾಕುಟ್ಮಳದಂತೆ ಮೆಱೆವುದುಜ್ಜೇನಿ ಪುರಂ

ಆ ಪುರದರಸಂ ನತಭೂ
ಮೀಪಾಲರ ಮಕುಟಮಸ್ತಕದೆ ನಿಜ ತೇಜೋ
ರೂಪಕಮೆ ಪದ್ಮರಾಗದ
ದೀಪದವೊಲ್ ಮೆಱೆವಿನಂ ಯಶೌಘಂ ಮೆಱೆವಂ

ದೊರೆವಡೆದ ಯಶೌಘನ ಭೂ
ವರತಿಳಕನ ಕಣ್ಗಳಂಗರಕ್ಕರ್ ಮನಮಾ
ಭರಣಂ ರಾಜ್ಯಶ್ರೀ ಸಹ
ಚರಿಯೆನೆ ಸಂದತ್ತು ಚಂದ್ರಮತಿಗರಸಿತನಂ

ಅನಿತೆಸೆವ ಚಂದ್ರಮತಿಗಂ
ಜನಪತಿಗಂ ಪುಟ್ಟಿದಂ ಯಶೋಧರನೆಂಬಂ
ಜನಮೋಹನಬಾಣಂ ಕ
ರ್ಬಿನ ಬಿಲ್ಗಂ ನನೆಯ ನಾರಿಗಂ ಪುಟ್ಟಿದವೊಲ್

ನೋಡುವ ಕಣ್ಗಳ ಸಿರಿ ಮಾ
ತಾಡುವ ಬಾಯ್ಗಳ ರಸಾಯನಂ ಸಂತಸದಿಂ
ಕೂಡುವ ತೋಳ್ಗಳ ಪುಣ್ಯಂ
ನಾಡಾಡಿಯೆ ರೂಪು ಕುವರ ವಿದ್ಯಾಧರನಾ

ಅಮೃತಮತಿ ಗಡ ಯಶೋಧರ
ನ ಮನಃಪ್ರಿಯೆ ಆಕೆ ದೀವಮಾಗೆ ಪುಳಿಂದಂ
ಸುಮನೋಬಾಣಂ ತದ್ಭೂ
ರಮಣನನೊಲಿದಂತೆ ಗೋರಿಗೊಳಿಸುತ್ತಿರ್ಕುಂ

ಅವನಿಪನೊರ್ಮೆ ಸಭಾಮಣಿ
ಭವನದಿನಂಬರ ತರಂಗಿಣೀ ಪುಳಿನಮನೇ
ಱುವ ಹಂಸನಂತೆ ಶಯ್ಯಾ
ಧವಳ ಪ್ರಾಸಾದತಳಮನೇಱಿದನರಸಾ

ಅಮೃತಮತಿ ಸಹಿತಮಾ ಚಂ
ದ್ರಮತಿಯ ಸುತನಂತು ಮೆಱೆವ ದವಳಾರದೊಳ
ಭ್ರಮು ವೆರಸಭ್ರಗಜಂ ವಿ
ಭ್ರಮುದಿಂದಂ ಸೆಜ್ಜರಕ್ಕೆ ಬಂದವೊಲೆಸೆಗುಂ

ಹೃದಯಪ್ರಿಯರಂತೊಱಗಿದ
ಪದದೊಳ್ ಗರಟಿಗೆಯು ಜಾವದುಕ್ಕಡದುಲಿ ಮ
ಟ್ಟಿದ ಪೊತ್ತು ಸೂಟ್ಗೆ ಕರುಮಾ
ಡದ ಪಕ್ಕದೊಳಿರ್ದ ಪಟ್ಟದಾನೆಯ ಬದಗಂ

ಬಿನದಕೆ ಪಾಡುತ್ತಿರೆ ನುಣ್
ದನಿ ನಿದ್ರೆಗೆ ಕತಕಬೀಜಮಾಯ್ತೆನೆ ವೃಗಲೋ
ಚನೆ ತಿಳಿದಾಲಿಸಿ ಮುಟ್ಟಿದ
ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್

ಅಂತೆಸೆಯೆ ಪಾಡುತಿರೆ ತ
ದ್ದಂತಿಪನತಿನೂತ್ನಗೀತ ಪಾತನ ವಿಕಲ
ಸ್ವಾಂತೆಗೆ ನೋಡುವ ಕೂಡುವ
ಚಿಂತೆ ಕಡಲ್ವರಿದುದಂದು ಬೆಳಗಪ್ಪಿನೆಗಂ

ಮನದನ್ನಳಪ್ಪ ಕೆಳದಿಗೆ
ಮನಮಂ ಮುಂದಿಟ್ಟು ಬೞಿಕ ಕೞಿಪಿದೊಡವಳಾ
ತನ ರೂಪುಗಂಡು ಕಣ್ಗಂ
ಮನಕ್ಕಮುದ್ಗಾರವೆತ್ತು ಭೋಂಕನೆ ಮಗುೞ್ದಳ್

ಅಮೃತಮತಿಯೆತ್ತ ರೂಪಾ
ಧಮನಷ್ಟಾವಂಕನೆತ್ತ ಚಿತ್ರಮಪಾತ್ರೇ
ರಮತೇ ನಾರೀ ಎಂಬುದು
ಸಮನಿಸಿದುದು ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ

ಎನುತಂ ಬಂದು ವಿಷಣ್ಣಾ
ನನೆಯಂ ಮಾರ್ಗಾವಲಗ್ನನೇತ್ರೆಯನುಚ್ಛ್ವಾ
ಸನಿತಪ್ತಾಧರ ರುಚಿಯಂ
ಮನುಜೇಂದ್ರಾಂಗನೆಯನೆಯ್ದಿ ಕಂಡಿಂತೆಂದಳ್

ಕಂತುವಿನ ಕಯ್ಯ ಕೂರಸಿ
ಯಂತಿರೆ ಗರಗರಿಕೆವಡೆದು ಪೊಳೆವಸಿಯಳೆ ನೀನ್
ಇಂತಪ್ಪ ಕಾಮದೇವಂ
ಗೆಂತೆಂತಾಯ್ದಱಸಿ ಕೂರ್ತೆಯೆಂದಾನಱಿಯೆಂ

ಈ ದೊರೆಯನೆಂದು ತೋಱಲ್
ಮೇದಿನಿಯೊಳಗಾತನಲ್ಲದಿಲ್ಲೆನೆ ಪೇೞ್ ಪೇೞ್
ಕಾದಲನಂತಿರೆ ಚೆಲ್ವನೆ
ದೂದವಿ ನೀನೆನ್ನ ಕೊಂದೆಯೆಂದೊಡೆ ಪೇೞ್ದಳ್

ಪಱಿದಲೆ ಕುೞಿನೊಸಲೞಿಗ
ಣ್ಣೊಱೆವಾಯ್ ಹಪ್ಪಳಿಕೆಮೂಗು ಮುರುಟಿದ ಕಿವಿ ಬಿ
ಬ್ಬಿಱುವಲ್ ಕುಸಿಗೊರಲಿೞಿದೆರ್ದೆ
ಪೊಱಂಟ ಬೆನ್ ಬಾತ ಬಸಿಱಡಂಗಿದ ಜಘನಂ

ಕಱಿದೊವಲ ಪಱಿಯ ಕುಱಿಯಂ
ತೆಱಿದಂದದ ಮೆಯ್ಯನಾತಮಾತನ ಕಯ್ಗಳ್
ಕುಱುಗಣ್ಣು ಕೂನಬೆಲ್ ಕಾಲ್
ಮಱಿಯಿಸುವುದು ಟೊಂಕ ಮುಱಿದ ಕತ್ತ್ರಿಯ ಕಾಲಂ

ಮುದುಗರಡಿಯ ಮುದುದೊವಲಂ
ದದ ಕರಿಯಂ ತಾಳಕಾಯ ಮೋಳಿಗೆಯಂದಂ
ದದ ಮುರುಡನಷ್ಟವಂಕಂ
ಮೊದಲೊಣಗಿದ ಕೂನ ಗೊರಡಿನಂದದ ಕೊಂಕಂ

ಎಂದೊಡೆ ದೂದವಿಗವಳಿಂ
ತೆಂದಳ್ ಗರಗರಿಕೆ ಕೊರಲೊಳೀಕ್ಷಣದೊಳ್ ವಾರ್
ಬಿಂದು ಮಿಡುಕೆರ್ದೆಯೊಳೊದವೆ ಪು
ಳಿಂದನ ಕಣೆಗಟ್ಟೆ ನಿಂದ ವನಹರಿಣಿಯವೊಲ್

ಕರಿದಾದೊಡೆ ಕತ್ತುರಿಯಂ
ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ
ಸ್ಮರಚಾಪಮನಿಳಿಕಯ್ವರೆ
ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್

ಒಲವಾದೊಡೆ ರೂಪಿನ ಕೋ
ಟಲೆಯೇವುದೊ ಕಾರ್ಯಮಾಗೆ ಕಾರಣದಿಂದಂ
ಫಲಮೇನಿಂದೆನಗಾತನೆ
ಕುಲದೈವಂ ಕಾಮದೇವನಿಂದ್ರಂ ಚಂದ್ರಂ

ಎಂದಾಕೆಗೆ ಲಂಚಮನಿ
ತ್ತೆಂದುದನೆಂದೆರವಿಗೊಂಡು ಕಱಿಪುವುದುಮವಳ್
ಸಂದಿಸಿದೊಡಮೃತಮತಿ ರಾ
ತ್ರಿಂದಿವಮಾತನೊಳೆ ಸಲಿಸಿದಳ್ ತೆಱಪುಗಳಂ

ಆ ವಿಕಟಾಂಗನೊಳಂತಾ
ದೇವಿಗೆ ರುಚಿಯಾಗೆ ರತಿಫಲಾಸ್ವಾದನದೊಳ್
ಬೇವಂ ಮೆಚ್ಚಿದ ಕಾಗೆಗೆ
ಮಾವಿಳಿದಪ್ಪಂತೆ ಪತಿಯೊಳಿಳಿದಾಯ್ತು ಮನಂ

ಆ ಗಂಡನನಪ್ಪಿದ ತೋಳ್
ಪೋಗಂಡನನಪ್ಪುವಂತೆಮಾಡಿದ ಬಿದಿಯಂ
ಮೂಗಂ ಕೊಯ್ದಿಟ್ಟಿಗೆಯೊಳ್
ಪೋಗೊರಸದೆ ಕಂಡೆನಾದೊಡೇಂ ಬಿಟ್ಟಪೆನೇ

ಎನೆ ಕೇಳ್ದು ಮಾರಿದತ್ತಾ
ವನಿಪನವಂಗಭಯರುಚಿ ಬಟಿಕ್ಕಿಂತೆಂದಂ
ಮನಸಿಜನ ಮಾಯೆ ವಿಧಿವಿಳ
ಸನದ ನೆರಂಬಡೆಯೆ ಕೊಂದು ಕೂಗದೆ ನರರಂ

ಜನ್ನ-ಯಶೋಧರ ಚರಿತೆ
(ಸು. ೧೨೨೫)

## ೫೯. ಮಾಗಿ

ಸುತ್ತಿ ಮುಗುಳ್ತ ಜಾದಿಯನಲರ್ಚಿಸಿ ಧೂಳಿಯಿನಿಂದುಕಾಂತಿಯಂ
ಮುತ್ತಿ ಪಿಕಪ್ರಣಾದಮನಡಂಗಿಸಿ ನೈದಿಲ ಕಂಪನೈದೆ ಪೊ
ತ್ತೆತ್ತಿ ಸರೋಜದೈಸಿರಿಯನೊಯ್ಯನೆ ಸಣ್ಣಿಸಿ ಪಶ್ಚಿಮಾನಿಲೋ
ದ್ವೃತ್ತಿಯನೊಲ್ದು ತೀಡಿದುದು ಮೂಡಣಗಾಳಿ ಹಿಮಪ್ರವೇಶದೊಳ್

ಅತಿಶೀತಳಕಂದು ಹಿಮ
ಕ್ಷಿತಿಧರಮಂ ಸಾರ್ದು ನಡೆಯಲಳ್ಕಿ ನಡೆದನು
ನ್ನತದಕ್ಷಿಣಾಯನದೊಳಾ
ತತತುಹಿನಾಚಳದೊಳೊಪ್ಪುವಂಬುಜಮಿತ್ರಂ

ಘನತರಶೀತದೇಟಿಗ್ಗಿಗುಱಿ ತನ್ನ ಮನಃಪ್ರಿಯೆಯಾದ ಪದ್ಮಿನೀ
ವನಿತೆ ಬಿಗುರ್ತು ತಾಂ ಕ್ಷಯಮನೈದಿರೆ ಕಂಡು ತದೀಯ ಚಿಂತೆಯಿಂ
ತನು ಪರಿಪಾಂಡುರತ್ವಮನೆ ತಾಳ್ದುದೊ ಮೇಣಿರದೆಂಬವೊಲ್ತುಷಾ
ರನಿಕರಲಿಪ್ತಮಾದ ರವಿಮಂಡಲವೊಪ್ಪುಗುಮಂದು ಮಾಗಿಯೊಳ್

ನೇಸರ ಬಿಂಬಂ ಮಂಜುಱಿ
ಬಾಸಣಿಸಲ್ಮೇಲುದಿನೊಳಡಂಗಿ ವಿಯತ್ತೆಂ
ಬಾಸತಿಯ ರನ್ನದಾಳಿಯ
ಮೈಸಿರಿಯನೆ ಪೋಲ್ತು ಮಾಗಿಯೊಳ್ ಶೋಭಿಸುಗುಂ

ಅವಿವೇಕಿಯಾದ ನೃಪನೊ
ಪ್ಪುವ ಪುಣ್ಯಂ ತೀರ್ದು ದೋಷಮುಂ ಪೊಂಗುವವೋಲ್
ದಿವಸಂ ಭೋಂಕನೆ ತೀರ್ದೋ
ಡುವುದು ನಿಶೀಥಿನಿಯದೈದೆ ತುಹಿನಾಗಮದೊಳ್

ಪೊಸಪನ್ನೀರೊಳ್ ಲತಾಂತಸ್ತಬಕಮನೊಲವಿಂ ತೊಯ್ದು ಭರ್ತಾರನಾದ
ಬ್ಜಸಖಂ ಮೇಣ್ಬೆಟ್ಟಿಗಲ್ತಾದಿವಸವಧುಗೆತೋರ್ಪಲ್ಲಿಕೋಪಾಗ್ನಿಯಂ ಶೋ
ಭಿಸುವಸ್ವಪ್ನೇಂದ್ರದಿಗ್ಭಾಮಿನಿಯುಪಶಮನಂ ಗೆಯ್ಯಲೊಲ್ದಾಂತಳೆಂಬಂ
ತೆಸೆಗುಂ ಮುವ್ವಾಗ್ರಿಯೊಳ್ಮೂಡುವ ಹಿಮರುಚಿಬಿಂಬಂ ತಮಶ್ಶೈಲ
ಶಂಬಂ

ತಂಗೊಳದೊಳಾಡಿ ತೊಯ್ದು ಮ
ನಂಗೊಳಿಪರಸಂಚಿಯಂತೆ ನವಶೀತಳದು
ತ್ತುಂಗತೆಯಂ ಪಸರಿಸುತುಂ
ಕಂಗೆಸೆವುದು ಮಾಗಿಯೊಳ್ಸುಧಾಕರಬಿಂಬಂ

ಮಂಜು ಮುಸುಂಕೆ ಮಗುಳ್ದಿತಿ
ಭಂಜಿಸುವುವು ಮಧುರವಾಕ್ತತಿಗೆ ಕುಜನರ ಹೃ
ತ್ಕಂಜಂಗಳ್ ಕೊಱಗುವವೋಲ್
ಮಂಜುಳಶಿಶಿರಾತಿರೇಕದೊಳ್ಕಮಲಂಗಳ್

ಮುಚ್ಚಿ ಮುಸುಂಕಿದಿಬ್ಬನಿಯ ನುಣ್ಬನಿಗಳ್ಮಿಗೆ ಸಿಲ್ಕಿ ತೋಱುವಾ
ಪಚ್ಚಪಸುರ್ಪಳಂಚುವೆಲೆಯಾಂತು ವಿರಾಜಿಸುಗುಂ ಕುಜೋತ್ಕರಂ
ನಿಚ್ಚಮಲಂಪಿನಿಂಪಿನ ವಸಂತಮನಂದುಱೆ ಪಾರ್ದು ನೊಂದು ತಾಂ
ಬೆಚ್ಚನೆ ಬಾಷ್ಪವಾರಿಯನೆ ತುಂಬಿ ವಿಜೃಂಭಿಸುವಂತೆ ಮಾಗಿಯೊಳ್

ನುತಪುಣ್ಯಫಲಂ ತೀರ್ದಾ
ಕ್ಷಿತಿಪನ ಸಿರಿ ಮೆಲ್ಲಮೆಲ್ಲನೊಳಗಾಗುವವೋಲ್
ವಿತತತಟಾಕೋದರಸಂ
ಚಿತಸಲಿಲಂ ತೀರ್ದುದಮಮ ಶಿಶಿರಾಗಮದೊಳ್

**ಸೋಮರಾಜ–ಉದ್ಭಟಕಾವ್ಯಂ**
ಸು. (೧೨೨೨)

## ೬೦. ಗ್ರೀಷ್ಮ

ಪುತ್ತಿನ ಬಾಯ್ಗಳಿಂ ಪುಗುವ ಚಂಡಮರೀಚಿಮರೀಚಿ ಧಳ್ಳಿನಲ್
ಕುತ್ತಿದ ಕೊಳ್ಳಿಯಂತೆ ಸುಡೆ ನೆತ್ತಿವರಲ್ಗಳರಲ್ಗಳಂದದಿಂ
ಪೊತ್ತಿ ಸಿಡಿಲ್ದು ಪಾಱಿದುವು ವಕ್ತ್ರವಿಷಾನಲವಿಸ್ಫುಲಿಂಗ ಮು
ಣ್ಮುತ್ತಿರೆ ಕೋಪದಿಂ ವಿಷಧರಂಗಳೊಳೆಂಬಿನಮಾನಿದಾಘದೊಳ್

ಕೆಂಡದ ಮಱೆ ಕೊಂಡಪ್ಪುದ
ಜಾಂಡವಿನಿಳೆ ದೂವೆಗಿಚ್ಚನುಗುಳ್ದಪ್ಪುದು ದಿ
ಙ್ಮಂಡಲಮಿಂಮುರಿಗೊಳ್ಳಿಯು
ತಂಡದೆ ಕೇರ್ಗಟ್ಟಿತೆನಿಸಿ ತೋಱಿತ್ತದಱೊಳ್

ತಾಱಿದ ಬಳ್ಳಿ ಮೀಱಿದ ದವಾನಲನಾಱಿದ ಬೆಂಚೆ ತಾಯ್ಮೃಣ
ಲ್ದೋಱಿದ ಸಿಂಧು ಬೇಂದೊಡೆದು ಪಾಱಿದ ಬೆಟ್ಟು ಕರಿಂಕುವೋಗಿ ಕ
ರ್ಪೇಱಿದರಣ್ಯಭೂಮಿ ಬೆಮಱೇಱಿದ ದೇಹಿಸಮೂಹ ಮೂಷ್ಮೆಯಿಂ
ಪೇಱಿದ ಭಾನು ಭಾನುಬಿಸುಪೇಱಿದಿಳಾತಳಮಿಲ್ಲದೆಲ್ಲಿಯುಂ

ನಡುವಗಲ ಪುಗಿಲ ಬಿಸಿಲೊಳ್
ಬಿಡೆ ನಾಲಗೆಗಿಟ್ಟು ತೇಂಕಿ ತನ್ನಯ ನೆೞಲಂ
ಕಡುಗಪ್ಪಲೆಂದು ಪೊರಳ
ಲ್ಕೊಡರಿಸಿ ಮೆಯ್ಯಿಕ್ಕಲಿರ್ದ ವನ್ಯಲುಲಾಯಂ
ನೋಡಿದೆಮೆ ಸೀಗುಮೊಯ್ಕನೆ
ತೀಡಿದ ಬಗೆ ಬೇಗುಮುರಿದೊಡುಗ್ರತೆಯಿಂ ಮಾ
ತಾಡಿದ ಬಾಯ್ ಪೊತ್ತುಗುಮೆನೆ
ನಾಡೆಯುಗುರ್ವಿಸಿದುದನುಗತೋಷ್ಮಂ ಗ್ರೀಷ್ಮಂ

**ಎರಡನೆಯ ಗುಣವರ್ಮ—ಪುಷ್ಪದಂತ ಪುರಾಣ**

(ಸು. ೧೨೩೫)

# ೬೧. ಸಂಧ್ಯಾರಾಗ

ಮಿಸುಗುವ ಕಾಂಚನಾಚಳದ ಕಾಂತಿಕಳಾಪಮನೆಯ್ದೆ ಪೀರ್ದು ತ
ನ್ನೆಸಕದ ಕಾಯ್ಪಿನುಗ್ರತೆಯಿನಾತಪಮಾತಪನೀಯದೀಧಿತಿ
ಪ್ರಸರಮನಿಕ್ಕಿಸಲ್ಕೆಱೆಯದಿಂತು ಮಗುಳ್ಚಿದುದೆಂಬಿನಂ ವಿರಾ
ಜಿಸಿದುದು ಪೊಂಬಿಸಿಲ್ಪದೆಪಿನಿಂದಪರಪ್ರಹರಾರ್ಧಕಾಲದೊಳ್

ಬಂದೊಲವಿಂದಮೆನ್ನೊಳೊಡಗೂಡಿಯುಮಂತಿರದತ್ತ ವಾರುಣೀ
ಸೌಂದರಿಗಾಸೆಗೆಯ್ದನಿನನೆಂದು ಕರಂ ಮನದಲ್ಲಿ ಪೇಸಿ ಮಾ
ಧ್ಯಂದಿನಲಕ್ಷ್ಮಿ ನೂಂಕೆ ಪವಮಾನಪಥಾಂತರದಿಂ ಕೆಲಕ್ಕೆ ಬೀ
ಳ್ವಂದದೆ ಭಾನು ತಾನಿರದೆ ಪೊರ್ದಿದನಿಂತಪರಾಚಳೇಂದ್ರಮಂ

ಪನನಿಧಿಯ ಗುಣ್ಪನೀಕ್ಷಿಪ
ವಿನೋದದಿಂದೆಟ್ಟಿ ನಿಂದ ವರುಣನ ವಿಳಸ
ತ್ಕನಕಮಕುಟಾಗ್ರರತ್ನಮಿ
ದೆನಿಸಿದುದಿನಬಿಂಬಮಸ್ತಗಿರಿಮಸ್ತಕದೊಳ್

ಬಿಸರುಹಮಿತ್ರನೆಂದೆನಿಸಿದೆಮ್ಮಿನನೋವದೆ ರಾಜಬಾಧೆಗೊ
ಪ್ಪಿಸಿ ನೆಱೆ ಸಾರ್ದನೋಲಗಿಪ ಭೃಂಗಭಟಾವಳಿ ಬಿಟ್ಟು ಪೋಯ್ತು ತ
ಟ್ತಿಸೆವ ವಿಕಾಸಲಕ್ಷ್ಮಿ ಪಗೆಯಂ ನೆಱೆ ಪೊರ್ದಿದುದೇವುದೆಂತು ಜೀ
ವಿಸುವುದೆನುತ್ತೆ ಮೂರ್ಛಿಸುವವೋಲ್ಮುಗಿದತ್ತರವಿಂದಸಂಕುಳಂ

ಲಳಿತವಿಳಾಸಮುಗ್ಗಿ ದಿನನಾಥವಿಯೋಗದೊಳಾದವಸ್ಥೆಯ
ಗ್ಗಳಿಸಿರೆ ಕಂಡು ತಾಂ ನಲವಿನಿಂ ನಗುತುಂ ನೆಲೆವೆರ್ಚೆ ರಂಜಿಪು
ತ್ಪಳಿನಿಗೆ ಕೋಪದಿಂ ಪುದಿದು ಪದ್ಮಿನಿ ಪಲ್ಮೊಱೆವಂದಮಾಯ್ತು ಕು
ಟ್ಮಳಿತಸರೋರುಹೋದರಗತೋನ್ಮದಭೃಂಗಝಣತ್ಕೃತಸ್ವನಂ

ಇನನ ವಿಯೋಗಾವಸ್ಥೆಯು
ದೆನಗಂ ನಿನಗಂ ಸಮಾನಮೆನುತುಂ ಮುನಿವ
ಬ್ಜಿನಿಯ ಕೆಲದಲ್ಲಿ ಕೋಕಾಂ
ಗನೆ ಕಣ್ಬನಿಯಂ ಕಟಿಲ್ಚಿ ಖೇದಿಸಿತಾಗಳ್

ವರುಣಂಗಿಕ್ಕುವ ಚಾಮರೀಚಮರಜಾತಾಲೋಲವಾತಾಹತೋ
ತ್ಕರದಿಂದಂಜನಕುಂಜರೇಂದ್ರದ ಕನತ್ಕುಂಭಾಗ್ರಸಿಂಧೂರಬಂ
ಧುರರೇಣುಪ್ರಕರಂಗಳಂ ಪಡೆದು ಪತ್ತಿತ್ತೆಂಬವೋಲಂಬರಾಂ
ತರಮಂ ತಟ್ಟು ವಿರಾಜಿಸಿತ್ತೆಸೆವ ಸಂಧ್ಯಾರಾಗರುಗ್ಮಂಡಳಂ

ಅಂಬರಮದು ಮಿತ್ರವಿಯೋ
ಗಂ ಬೇಗದೊಳಾಗಲಾಗಳುಬ್ಬೆಗದಿಂ ಕಾ
ಷಾಂಬರಮಂ ತಳೆದುದು ತಾ
ನೆಂಬಿನಮಾಸಂಜೆಗೆಂಪಿನಿಂ ರಂಜಿಸುಗುಂ

**ಕಮಲಭವ–ಶಾಂತೀಶ್ವರ ಪುರಾಣ**
(ಸು. ೧೨೩೫)

## ೬೨. ಪುನರ್ಮಿಲನ

ಬಾಂದೊಱೆದಲೆಯುಂ ಪೂಗಣೆಯುಂಗೆ ಸಾಪಮನಿತ್ತುದಂ ಬಸಂತನಿಂ ನೆಲೆವೀಡಿನೊಳಿರ್ದಿಚ್ಚೆಗಾರ್ತಿ ಕೇಳ್ದು ಮುಚ್ಚೆವೋಗಿ ಬಱಿಯಮೆಂತಾನು ಮೆಚ್ಚುತ್ತಿರಲೊಡನೆ

ಪರಿಗಿಡೆ ಕಣ್ಣ ನೀರೊಱೆತುದೆಕ್ಕಸರಂಗಳ ತೋಱಮುತ್ತುಗಳ್
ಪುರಿದವೊಲಾದುದಿಟ್ಟ ಸಿರಿಕಂಡದ ಬೊಟ್ಟು ಕರಂಗಿ ಕಣ್ಗೆ ಕ
ತ್ತುರಿಯವೊಲೊಪ್ಪಿ ತೋಱಿದುದು ಸೂಡಿದ ಬಾಸಿಗಮಾಗಳಂತೆ ದ
ಳ್ಳುರಿ ತಗುಳ್ದಂದದಿಂ ಕಱಿದುದಾಕೆಯ ಮೆಯ್ಬಿಸುಪೇನಳುಂಬಮೋ

ಕುಳಿರ್ವ ಕೊಳಂಗಳೊಳ್ತಳಲ ದಿಂಟೆಗಳೊಳ್ಸಮೆದಿರ್ಪ ಬೆಟ್ಟನೊ
ಳ್ಬೆಳೆದೆಳಮಾವಿನೊಳ್ತಳಿರ ಕಾವಣದೊಳ್ಪರಿತರ್ಪ ಕಾಲ್ಗಳೊಳ್
ಬಳಸಿದ ಬಳ್ಳಿಮಲ್ಲಿಗೆಯ ಮಂಡವದೊಳ್ಸುಱಿದಾಡಿ ಮತ್ತೆಯುಂ
ಕಳೆಯಲಿನಿತ್ತುಮಾಱಳವಳುರ್ಬಿದ ತನ್ನಯ ಮೆಯ್ಯ ಬೆಂಕೆಯುಂ

ಕೆಂದಳಿರ ಪಱಿವ ಪಾಸಿನೊ
ಳಂದಬಡೆದಿಚ್ಚೆಗಾರ್ತಿ ನನೆವಿಲ್ಲಂ ತಾ
ನೆಂದಿಂಗೆ ಬಂದು ಕೂಡುವ
ನೆಂದಿಂತಡಿಗಡಿಗೆ ಗಿಳಿಗಳಂ ಬೆಸಗೊಳ್ವಳ್

ತನಿವಣ್ಣಂ ಲಂಚಮೀವೆಂ ಪುರುಳಿ ನಿನಗೆ ಪೂಗೊಂಚಲಂ ಬೇಗದಿಂದಂ
ನಿನಗೀವೆಂ ತುಂಬಿ ಕೆಂದಾವರೆಯ ಮಿಸುಪ ಮೇಲ್ಮೊಗ್ಗೆಯಂ ಮಾಣದೆಂದುಂ
ನಿನಗೀವೇನಂಚೆ ಕಂಪಂ ನಿನಗೆ ಸಲಿಸುವೆಂ ಕೂಡೆ ತಂಗಾಳಿ ಯೆನ್ನೋ
ಪನನಿಂದಾರಯ್ದು ತಂದೊನ್ನೊಡನಿರಿಸಿದೊಡೆಂದಾಕೆ ಮಾತಾಡುತಿರ್ಪಳ್

ಅನ್ನೆಗಮಿತ್ತಲಾಬಾಂದೊಱೆದಲೆಯನ ಸಾಪಂದಳೆದು ಬಂದು ನೀನೀ ಪೂವಿನಪೊಬಿಲೊಳ್ಳನೆಯುಂಬನೆಂಬರಸಾದೆ ನಿನ್ನ ಸಾಪಮೆನ್ನ ಮಾತನೆಂದು ಕೇಳ್ದೃ, ಅಂಡೇ ತೀರ್ದುದು. ಈಬಾೞೆ ಮೊದಲಾದುದೆಲ್ಲಂ ನಿನ್ನ ಪಾಡಿಯೆಂದೆಚ್ಚರಿಸಿ ಪೇೞ್ದು ತನ್ನ ನೆಲೆಗೆ ಪಾಱಿಪೋಗೆ

ಗಿಳಿಯಂದಾವಮಾತಂ ಕೇ
ಳ್ದೆಳದಳಿರಂ ಗುಡಿಯನೆತ್ತಿಕೊಂಡೊಲವಿಂ ಕ
ಣ್ಗೊಳೆ ಪೋಗಿ ಕಂಪುವೊಬಿಲಂ
ಘಳಿಲನೆ ಪೊಕ್ಕಱಿಪಿದುದು ಬಸಂತಂಗಾಗಳ್

ಅಂತಱಿಪಲೊಡನೆ ಕೋಗಿಲೆ ಕೈವಂದ ಮಾವಂ ಸಾರ್ದಂತೆಯುಂ, ಬಿಸಿಲೊಳ್ಬೇಗುದಿಗೊಂಡವಂ ತಣ್ಗೊಳನಂ ಪೊಕ್ಕಂತೆಯುಂ, ಬಡವಂ ಕಡವರಮಂ ಕಂಡಂತೆಯುಂ, ನಲ್ಲಳ ನುಡಿಯಂ ಕಾದಲಂ ಕೇಳ್ದಂತೆಯುಂ, ನೀಱೆಯ ಕಾಲ್ಪೊಯ್ಲಿನಸುಗೆ ತಳಿರ್ತಂತೆಯುಂ, ಪಿರಿದಪ್ಪ ಸಂತಸಮನೆಯ್ದಿ ಬಸಂತಂ, ತಳಿರ್ವನೆಯೊಳ್ನಲ್ಲನಂ ನೆನೆದು ದೂರಿಸುತಿರ್ಪಿಚ್ಚೆಗಾರ್ತಿಗಾತೆಱನೆಲ್ಲಮಂ ಬಿನ್ನಪಂಗೆಯ್ದು ನಿಸ್ಸಾಳಮಂ ಸಱ್ಕೈಸವೇೞಲೊಡನೆ

ಕಳಸಂ ಕನ್ನಡಿ ಗುಡಿ ಪ
ಜ್ಜಳಿಸುವ ಮಾಂದಳಿರ ತೋರಣಂ ದೆಸೆದೆಸೆಯಂ
ಬಳಸಿರೆ ಬಾಜಿಪ ಪಱೆ ಕ
ಣ್ಗೊಳಿಸಿರೆ ಪೊರಮಟ್ಟರೊಸಗೆಯಿಂ ಪೊಸವೆಂಡಿರ್

ಅಂತು ಪಿರಿದಪ್ಪ ಒಸಗೆಯಿಂದಿಚ್ಚೆಗಾರ್ತಿ ಕಾವನನಿದಿರ್ಗೊಂಬಲ್ಲಿ

ಅಡಿಯಂ ಬಲ್ವಿಡಿದುವು ನು
ಣ್ಪೊಡೆಯಂ ಪಿಡಿಕಿಸಿದುವಡರ್ದು ಕಾವನ ತೋಳಂ
ಬಿಡದಪ್ಪಿದುವಂದಾಕೆಯ
ಕೊಡಕೆವರಂ ನಿಮಿರ್ದು ಪೊಳೆವ ತುಱುಗೆಮೆಗಣ್ಗಳ್

ನಗೆಮೊಗದೊಳ್ತೆಱಂಬೊಳೆದು ನುಣ್ದುಟಿಯೊಳ್ಮೊಗಮಿಕ್ಕಿ ಗಲ್ಲದೊ
ಳ್ಜಗುಟ್ಟಿ ಕೊಡಂಕೆಯೊಳ್ನುಸುಳ್ದು ಪೇರುರದೊಳ್ಸುೞಿದಾಡಿ ತೋಳ್ಗಳೊ
ಳ್ಸೊಗಯಿಸಿ ಸೊರ್ಕಿ ಪೊರ್ಕುೞಿೞೊಳಡಂಗಿ ತೊಳಪ್ಪಡೆಯೊಳ್ಪಡಿಲ್ದು ಕಾ
ಲುಗುರ್ಗಳೊಳ್ಪಿದೆ ಮಾರ್ಪೊಳೆದುವಾಕೆಯ ಡಾಳಮನಾಂತ ದಿಟ್ಟಿಗಳ್

ಬೞಿಕ್ಕೆ ಬಸಂತಂ ಮುಂತಾಗಿ ಬಂದು ಕಾಣ್ಕೆಗೊಟ್ಟು ಕಂಡ ತನ್ನ ಪಡೆಯೆಲ್ಲಮನಳವಱಿದು ಮನ್ನಿಸಿ ನನೆವಿಲ್ಲ ಬಲ್ಲಹಂ ಕೈವಂದ ಮಾವೆಂ ಬಾನೆಯನಿೞ್ತಿಗಾರ್ತಿವೆರಸೇಱಿ ನಡೆತಂದು ಕಂಪಿನ ಪೊೞಲಂ ಪೊಕು ಬೀದಿಗೊಂಡು ಬರ್ಪಾಗಳ್

ನೊಸಲೆಡೆಯಲ್ಲಿ ನೀಳ್ದ ಕುರುಳೋಳಿಗಳುಯ್ಯಲನಾಡೆ ಡಾಳಮಂ
ಪಸರಿಪ ತೋಱಮುತ್ತಿನ ಸರಂ ಕೊರಲೊಳ್ತಲೆಯೊತ್ತೆ ನಾಡೆಯುಂ
ಮಿಸುಗುವ ಕಣ್ಣ ನುಣ್ಪೆಳಗು ಜೊನ್ನದೊಳೋರಗೆಯಾಗೆ ಸೊಂಪು ಸಂ
ದಿಸೆ ಪೊಸರನ್ನದಾರತಿಯನೆತ್ತಿದರಗ್ಗದ ಗಾಡಿಕಾರ್ತಿಯರ್

ಬಿಳಿಯ ನನೆಯ ಕಣೆಗೆ ನಾಡೆ
ಪಗೆವರೊಡಲು ಸುಗಿಯೆ ಕೂಡೆ
ನೆಲನನೊಂದೆ ಕೊಡೆಯಿನಾಳ್ದು
ಮಿಸುಪ ಜಸವು ನಿಮಿರೆ ಕೇಳ್ದು

ಕುಳಿರ್ವ ಪೂಗೊಳಂಗಳಲ್ಲಿ
ತಳಿರ ಕಾವಣಂಗಳಲ್ಲಿ
ಪಳುಕುವೆಸೆದ ಬೆಟ್ಟದಲ್ಲಿ
ಪರಿವ ತೊಱೆಯ ತಡಿಗಳಲ್ಲಿ

ತುಂಬಿವಿಂಡಿನಂತೆ ಪಾಡಿ
ಜಕ್ಕವಕ್ಕಿಯಂತೆ ಕೂಡಿ
ದೆಸೆಯನಿೞ್ತಿಯಿಂದ ನೋಡಿ
ಸೊಗಯಿಪಂಚೆಯಂತಿರಾಡಿ

ಪೊಳೆವ ತಳಿರ ನನೆಯ ವೊನೆಯ
ತುಱುಗಿದಲರ ಬಳಸುವೆಲರ
ಮಿಳಿರ್ವ ಮಿಡಿಯ ಗಿಳಿಯ ನುಡಿಯ
ಪರಿವ ಕಾಲ ಕರ್ವುಗೋೞ

ಚೆಲ್ವನಾಂತು ತೋರ್ಪ ಬನದ
ನಡುವೆ ತನ್ನದೊಂದು ಬಿನದ
ಮಮರೆ ಮಿಱುಪ ಬಟ್ಟೆದೊಡೆಯ
ಸೊಬಗು ರೂಡಿವಡೆದ ನಡೆಯ

ಚೆನ್ನೆಯರ್ಕಳೊಡನೆ ಕೂಡಿ
ಮುಗುಳ ಸರಮನಡರೆ ಸೂಡಿ
ನಲ್ಲರೊಡನೆ ಕೂರ್ಮೆಯಿಂದೆ
ಕಾವನೊಡನೆ ಪೆರ್ಮೆಯಿಂದೆ

ಮಾವಿನಡಿಯೊಳಾಡುತುಂ
ಪಾಡನೆಯ್ದೆ ಕೇಳುತುಂ
ಪೊಟ್ತುನಿಂತು ಕಳೆಯುತುಂ
ತೊಲಗದಿರ್ದರೆಸೆಯುತುಂ

ಇಂತು ಕಾವದೇವನುಂ ಬಸಂತನುಂ ರೂಡಿವೆತ್ತು ಗಾಡಿಯಿಂ-ದೊಪ್ಪಿದರ್.

ಆಂಡಯ್ಯ–ಕಬ್ಬಿಗರ ಕಾವ
(೧೨೩೫)

## ೬೩. ಸಲಿಲಕೇಳಿ

ಅಂತಾ ನವಮಾಲಿಕೆಯೊಳಿಷ್ಟಸುಖಕಾಮಭೋಗಂಗಳನನುಭವಿಸುತ್ತಿರಲೊಂದು ದಿನಮಾ ನವಮಾಲಿಕೆ,

ಆ ನಳಿನಾಸ್ಯೆ ಯೌವನರಸಾಂಬುಧಿರಾಜಮರಾಳಯಾನೆ ಪಾ
ಠೀನಸಮಾನನೇತ್ರೆ ವಿಮಳೋತ್ಪಳಕೇಸರವರ್ಣೆ ಸೈಕತ।
ಸ್ಥಾನನಿತಂಬೆ ಭೃಂಗನಿಭಕುಂತಳೆಯಾಂಸಹಿತಂ ವಯಸ್ಯಸಂ
ತಾನಸಮನ್ವಿತಂ ಸಲಿಲಕೇಳಿಗೆ ಬಂದಳದೊರ್ಮೆ ಲೀಲೆಯಿಂ

ಅವಳೊಡನೆ,

ಜಲರುಹವಕ್ತ್ರೆಯರ್ ಶಫರಲೋಚನೆಯರ್ ನವಕೂರ್ಮಪಾದೆಯರ್
ಪುಳಿನನಿತಂಬೆಯರ್ ಮಿಸುಪ ಶೈವಳಬಾಹುಳತಾವಿಳಾಸೆಯರ್
ಸುಲಲಿತಕಂಬುಕಂಧರೆಯರೊಪ್ಪುವ ವಿದ್ರುಮಸನ್ನಿಭೋಷ್ಠೆಯರ್
ಲಲನೆಯರೊಪ್ಪಿದರ್ ನಲಿದು ಜಂಗಮಜಾಹ್ನವಿಯರ್ ನಿರಂತರಂ

ಸುತ್ತಿದ ವೇಣಿಯೊತ್ತಿದ ಕುರುಳ್ ನವಕಂಚುಕಮುಟ್ಟ ಚಲ್ಲಣಂ
ಕತ್ತುರಿಬೊಟ್ಟು ಪಚ್ಚದೊಳೊಡಂಬಡೆ ರೌಪ್ಯಸುವರ್ಣಶೃಂಗಮುಂ
ಜೊತ್ತಿನೊಳೊತ್ತಿ ಜೀರ್ಕೊಳವೆಯುಂ ಪಿಡಿದೆಯ್ದಿದರಂಬುಕೇಳಿಗಂ
ದುತ್ತಮಕಾಂತೆಯರ್ ವಿನಯವಂತೆಯರಂಗಜತಾಪಶಾಂತೆಯರ್

ಅಂತು ತ್ರ್ಯಂಬಕದೇವರ ಮುಂದಣ ಸರೋವರಕ್ಕೆ ಬಂದು

ಸುೞಿ ಸುೞಿನಾಭಿಯಿಂ ವಳಿ ವಳಿತ್ರಯದಿಂ ಕಮಳಂ ಮುಖಾಬ್ಜದಿಂ
ಪೊಳೆವೆಳಮೀಂಗಳಕ್ಷಿಯುಗದಿಂಪುಳಿನಂ ಜಘನಸ್ಥಳದಿಂದೆ ಶೈವಳಂ
ಲಲಿತಭುಜಂಗಳಿಂದೊಗೆದುವೆಂಬಿನಮಂಬುವಿನೊಳ್ ವಿಳಾಸಿನೀ
ಕುಲಮನುರಾಗದಿಂ ಸಲಿಲಕೇಳಿಯನಂದೆಸಗಿತ್ತು ಲೀಲೆಯಿಂ

ಮದಭೃಂಗಕ್ಕೆಣೆಯಪ್ಪ ನುಣ್ಗುರುಳ ಕರ್ಪಿಂ ಚಾರುಚಂಚತ್ಕಟಾ
ಕ್ಷದ ಬೆಳ್ಪಿಂ ನವಪಲ್ಲವಾಧರದ ಕೆಂಪಿಂ ನಾರಿಯರ್ ವಾರಿಯೊಳ್
ಮೃದುಕಸ್ತೂರಿಯನುಗ್ಘಚಂದನಮನೊಪ್ಪಿಂ ಕುಂಕುಮಶ್ರೇಣಿಯಂ
ಕದಡಿಟ್ಟಂತಿರೆ ಮಾಡಿಯಾಕೊಳನೊಳೊಲ್ದೋಲಾಡಿದರ್ ಲೀಲೆಯಿಂ

ವಿಕಸದರುಣಾಬ್ಜದೊಳ್ ಚಂ
ದ್ರಕಳಾಕೃತಿ ತೋರ್ಪುದಿದು ವಿಚಿತ್ರಮೆನಲ್ ಯಾ
ವಕರಸದಿನೆಸೆವ ಕೆಯ್ಯೊಳ್
ಸುಕರಮೆನಲ್ ಶೃಂಗವಿತತಿಯೇನೊಪ್ಪಿದುದೋ

ಅಂಗಜನೃಪಂಗೆ ಬಾಣನಿ
ಷಂಗಮನೊಲ್ದೀವ ರತಿಯವೋಲ್ ಪದೆಪಿಂದಾ
ಅಂಗನೆಯರ್ತಾಂ ಜಲಯಂ
ತ್ರಂಗಳನುರುಕರದೊಳಾಂತು ಕಣ್ಗೆಸೆದಿರ್ದರ್

ಕಡುಪಿಂ ಬಂದೊರ್ಬಳಾರ್ಪಿಂ ಕುಳಿರ್ವ ಜಲವನಾರ್ದಂಡೆಯಿಂ ಪೊಯ್ಯಲಿನ್ನಾ
ವೆಡೆಗೆಂತೌ ಪೋಪೆಯೊಡ್ಡೊಡ್ಡೆನಗೆ ಮಗುಳ್ದು ನೀಂ ಬೆನ್ನನೆಂದಾಗಳೆಯ್ತಂ
ದೆಡಗಾಲಂ ನೀಡಿ ಮುಂದಿಟ್ಟಡರ್ದು ವರಧನುರ್ಧಾರಿ ನಿಂತಂತೆ ಶೃಂಗಂ
ಬಿಡದಂಗ್ರೈ ಕೆನ್ನೆಗೆಯ್ದಲ್ ನಿಮಿರ್ದು ಕೆಳದಿಯಂ ಪೊಯ್ದು ಪಿಂತಾದಳೊರ್ಬಳ್

ಭವನ ಲಲಾಟಲೋಚನದ ವಹ್ನಿಗೆ ಭಾಜನಮಾದ ಕಾಮದಾ
ಹವನುಳಿ ನಂದಿಸಲ್ ಮಗುಳ್ದು ಪುಟ್ಟಿಸಲಾರ್ತಪರಾದೊಡೇಂ! ಸದಾ
ಶಿವನ ಪರಾಕ್ರಮಕ್ಕೆ ಪಟಿ ಬಂದಪುದೆಂದುಳಿದಂತರಂಗಸಂ
ಭವನವನೆಂದು ನೀರ್ದಳಿವರೊರ್ಬರದೊರ್ಬರೊಳಾವಿದಗ್ಧೆಯರ್

ತರುಣಿಯರಂಬುಕೇಳಿಗೆ ಲಸಜ್ಜಳವಂ ಪುಗುವಾಗಳೊರ್ಬರೊ
ರ್ಬರ ನೆಟಿಲೊಂದನೇಕವಿಧದಿಂ ತೆಱಿಯೊಟ್ಟಿಲೊಳೆಯ್ದೆ ತೋಱಲ
ಚ್ಚರಿಯೆನಲೊಪ್ಪುತಿರ್ದುವಹಿಲೋಕದಿನೇಟಿಗ್ಗಿಯ ನಾಗಕನ್ಯಕಾ
ಪರಿಕರವೊಳ್ಪಿನಿಂ ಸಲಿಲಕೇಳಿಗೆ ಭೋರೆನೆ ಬರ್ಪ ಮಾಟಿಕ್ಕೆಯಿಂ

ಕೆಳದಿಯರೊರ್ಬರೊರ್ಬರ ಮುಖಾಂಬುಜದೊಳ್ ಪೊಸಪೊನ್ನ ಚೆನ್ನಜೀ
ಕೊರ್ಟವಿಯನೊತ್ತಲಾ ಸಲಿಲಧಾರೆಯ ಬೆಂಬಟಿಯೊಳ್ ಸಿತಾಕ್ಷಿ ಕೋ
ಮಳರುಚಿ ನೀಳ್ದಿರಲ್ಕೆ ಜಲಯಂತ್ರದ ನೀರ್ ತವೆ ತೀರ್ದೊಡಂ ದೃಗಂ
ಚಳರುಚಿ ನೀರ್ಗಳೆಂದು ಜಲಯಂತ್ರಮನೊತ್ತಿ ಬಟಿಲ್ವರಾಕೆಯರ್

ಅಂತು ಜಲದೇವತೆಯರೆ ವಿಳಾಸಿನಿಯರಾದಂತೆಯುಂ, ಎಳಮೀಂಗಳೆ ಕೆಳದಿಯರಾದಂತೆಯುಂ, ತೆರೆದುಱುಗಲೆ ತರುಣಿಯರಾದಂತೆಯುಂ, ಮರಾಳಮಂಡಳಿಯೆ ಮಾನಿನಿಯರಾದಂತೆಯುಂ, ಜಲರುಹಪಜ್ಙ್ತಿಯೆ ಲಲನೆಯರಾದಂತೆಯುಂ, ಕುಮುದಕುಲಮೆ ರಮಣಿಯರಾದಂತೆಯುಂ, ಬಿಸಜಲತೆಯೆ ಶಶಿಮುಖಿಯರಾದಂತೆಯುಂ, ಲಾವಣ್ಯ ರಸಮೆ ಭಾವಕಿಯರಾದಂತೆಯುಂ ಜಲಕೇಳಿಯನೆಸಗುವ ಲಲನೆಯರ ನಡುವೆ,

ನೂತನತಾರಕಾತತಿಯುತಂ ಶಶಿಲೇಖೆ ಸುಧಾಬ್ಧಿಯೊಳ್ ಪುನ
ರ್ಜಾತವನಾಂತವೊಲ್ ವಿಶದಮಪ್ಪ ಜಲಪ್ಲವದೊಳ್ ವಿಳಾಸಿನೀ
ವ್ರಾತಯುತಂ ವಿದಗ್ಧೆ ನವಮಾಲಿಕೆ ವಾರಿವಿನೋದದಿಂ ಮನೋ
ಜಾತನ ಬೊಂಬೆಯಂತೆಸೆದಳೇವೊಗಟ್ವಿಂ ಸುಕುಮಾರಲೀಲೆಯಿಂ

**ಚೌಂಡರಸ–ಅಭಿನವ ದಶಕುಮಾರ ಚರಿತೆ**
(೧೩೦೦)

## ೬೪. ಬಸವಣ್ಣನ ಭಕ್ತಿ

ನುಡಿದು ತಪ್ಪದ ಭಾಷೆ ಬಸವನ
ನುಡಿ ಶಿಲಾಶಾಸನವು ತಪ್ಪದ
ನುಡಿಗಳಲ್ಲದೆ ಮಿಕ್ಕಿನಂತೇಂ ಕೆಡುತ ಹುಟ್ಟುತಿಹ
ಕಡಲ ತೆರೆಗಳೆ ಬುದುಬುದಂಗಳೆ
ಜಡಧರಂಗಳೆ ಶಕ್ರಚಾಪವೆ
ಸೊಡರೆ ಬೀದಿಯ ಗಾಳಿಯೋ ಮಿಂಚುಗಳೆ ಚಂದ್ರಮನೆ

ಆವ ಯುಗದೊಳಗಾವ ಕಾಲದೊ
ಳಾವ ಭೂಮಿಯೊಳಾವ ದೇಶದೊ
ಳಾವ ನಾಡೊಳಗಾವ ಪುರದೊಳಗಾವ ಠಾವಿನಲಿ
ದೇವ ದಾನವ ಮಾನವರೊಳಾ
ವಾವ ಭಕ್ತರೊಳೊಳರೆ ಬಸವನ
ಭಾವದಂದದಿ ಜಂಗಮ ಪ್ರಾಣಿಗಳೆನಿಸಿದವರು

ಭಾನುವಿಲ್ಲದ ದಿವಸಮುಂ ಹಿಮ
ಭಾನುವಿಲ್ಲದ ರಾತ್ರಿಯುಂ ಪ
ನ್ನಾನವಿಲ್ಲದ ನಂಟನುಂ ಪ್ರಭುವಿಲ್ಲದಾಸ್ಥಾನ
ದಾನವಿಲ್ಲದ ದಂತಿ ವ್ಯೂಹವಿ
ಧಾನವಿಲ್ಲದ ಮೋಹರಂ ಸು
ಜ್ಞಾನವಿಲ್ಲದ ಯೋಗಿ ಸೂನೃತವಿಲ್ಲದಾಲಾಪ

ದಾನ ಗುಣಮಿಲ್ಲದನ ಸಿರಿಯಭಿ
ಮಾನಮಿಲ್ಲದ ಭಾರ್ಯೆ ಸದ್ಗುರು
ಜ್ಞಾನಮಿಲ್ಲದ ಶಿಷ್ಯನಾ ಪತಿಗಿಲ್ಲದರ್ಥವದು

ಗಾನವಿಲ್ಲದ ನರ್ತನಂ ವಿ
ದ್ಯಾ ನಿಪುಣನಲ್ಲದ ಬುಧಂ ಸಂ
ತಾನವಿಲ್ಲದ ಮನೆ ಜನನಿ ಯಿಲ್ಲದ ತನೂಭವನು

ನಲ್ಲ ನಿಲ್ಲದ ನಲ್ಲಳಂಗನೆ
ಯಿಲ್ಲದಿರ್ಪ ಗೃಹಸ್ಥನುಂ ನೃಪ
ನಿಲ್ಲದವನಿಯುವನಾತ್ಯನಿಲ್ಲದ ಭೂವರಂ ಹಂಸೆ
ಯಿಲ್ಲದಿಪ್ಪ ಕೊಳಂ ಮಧುವ್ರತ
ವಿಲ್ಲದಬ್ಜವನಂ ಶುಕಾವಳಿ
ಯಿಲ್ಲದಾರವೆ ಶಾಸ್ತ್ರಕೋವಿದರಿಲ್ಲದಾಸ್ಥಾನ

ಸದಯವಿಲ್ಲದ ಚಾಗಿ ಸೊಡರಿ
ಲ್ಲದ ನಿವಾಸಂ ಭೂತದಯೆಯಿ
ಲ್ಲದ ಸಮಾಜಂ ಶಾಂತಿಯಿಲ್ಲದ ತಾಪಸನತಪಸು
ಹದುಳವಿಲ್ಲದ ದೇಹವುಂ ಸ
ಮ್ಮುದಿತವಿಲ್ಲದ ರತಿ ಬಸವನಿ
ಲ್ಲದ ಬಹಳ ಭಕ್ತಿ ಪ್ರವರ್ಧನವಹುದೆ ಲೋಕದೊಳು ?

**ಭೀಮಕವಿ–ಬಸವಪುರಾಣ**
(೧೩೬೯)

## ೬೫. ನವ್ಯಕಾವ್ಯ

ತೊಳತೊಳಗೆ ದಿಗಂಬರವಂ
ಬೆಳಗುವ ರುಚಿಯಿರ್ದುಮೇನೊ ಸಕಲಜನಾಂತ
ಸ್ಸ್ಥಳತಮುಮಂ ತಮ್ಮೃದಯದೊ
ಳಳಱಿಸಿದರೆ ರವಿಗಳೆಮಗೆ ಕವಿಗಳೆವಂದ್ಯರ್

ಆದಿಕವಿ ಪಂಪನೆಂದನು
ವಾದಿಸಿ ವಾದಿಸಿ ವಿರೋಧಿ ವಿಪರೀತತೆಯಿಂ
ದೋದೆ ವಿಲೋಮದೆ ಪೆಸರಂ
ಮೇದಿನಿಯೊಳಗವನ ಪೆಸರೆ ಪೆಸರ್ವಡೆದೆಸೆಗುಂ

ಬಿನ್ನಣದ ಕುಸುರಿ ಪಸರಿಸು
ವನ್ನಂ ಗುಣಜಾತಿಬಂಧಮುಳವಡೆ ನೆಗೞ್ದಾ
ಪೊನ್ನಂ ರನ್ನಂ ಕೂಡಿದೊ
ಡೆನ್ನೀ ವಾಗ್ವಧುಗೆ ಭೂಷಣಂ ಪೆಱತುಂಟೇ

ಘಳಿಲೆನೆ ವಿಬುಧರ್ ತುಷ್ಟಿಯ
ನೊಳಕೆಯ್ದು ಮನಃಪ್ರಸಾದಮಂ ಪಡೆವುದಱಿಂ
ಕಳೆಯಂ ಚಂದ್ರಂ ಕವಿತಾ
ಕಳೆಯಂ ಕವಿನಾಗಚಂದ್ರನಾಂತುದೆ ಸಫಲಂ

ಏಮಾತೊ ನವ್ಯಕಾವ್ಯಕ
ಲಾಮುಹಿಯೊಳ್ ಬಿಡದೆ ಬೀದಿವರಿವೊಡೆ ಮೊದಲೊಳ್
ನೇಮಿಯ ನೆಮ್ಮುಗೆಯಿಲ್ಲದೊ
ಡೀಮತ್ತಿನ ಕವಿಮನೋರಥಂ ನಡೆದಪುದೇ

ತನ್ನ ತಱುವಾಯೆ ಕೃತಿವೇ
ಟ್ಟಿನ್ನಂ ನೀನಲ್ಲದಿಲ್ಲವೆಂದಱಿಪುದದಿಂ
ಮನ್ನಿಸಿ ಸಲಹುಗೆ ಸತ್ಕವಿ
ಜನ್ನಂ ಜಾಣೆಸೆಯಲಿತ್ತು ನುಡಿಗಳನೆನ್ನಂ

ಸರ್ವರ ಸಮ್ಮತವೆನಗಿದು
ಗರ್ವದ ಮಾತಲ್ಲ ಶಾಸ್ತ್ರಲೌಕಿಕಕಳಯೊಳ್
ಬೇರ್ವರಿದ ನೇಮಿಜನ್ನಿಮ
ರಿರ್ವರೆ ಕರ್ಣಾಟಕೃತಿಗೆ ಸೀಮಾಪುರುಷರ್

ಚಂದದ ಬಂಧದೊಳ್ನುಡಿಯ ದೇಸಿಯ ಮೆಯ್ಸಿರಿಯೊಳ್ ಪೊದಟ್ದ ಸೈ
ಪೊಂದೆ ಕರಂ ರಸಂಬಡೆದು ರಂಜಿಪ ಸತ್ಕವಿತಾ ವಿಲಾಸದೊಳ್
ಸಂದೊಡೆ ಸಾಲ್ವುದಿಂದಿನವರಂದಿನವರ್ ಕೆಲರೆಂದು ಪಿಕ್ಕುವೀ
ದಂದುಗದಿಂದ ಮೇನೆಮಗ ನಿಂದ್ಯ ಕವೀಂದ್ರರೆ ವಂದ್ಯರಾವಗಂ

ತನಗೆ ಕವಿತ್ವದೊಳ್ನುಡಿಗಳೊಳ್ನುಡಿಯಾದ ರಸಂಗಳಿಂಪುವೆ
ತ್ತನುವಶಮಾದ ಭಾವಮೞ್ ಬಂಧುರಮಾದ ಪೊದಟ್ದ ರೀತಿ ನೆ
ಟ್ಟನೆ ನೆಲೆಯಾದ ದೇಸೆ ಕಡುಮಾಸರಮಾದ ಗುಣಂಗಳೋಳಿಗೊಂ
ಡನುಗುಣಮಾದ ನಂಬುಗೆ ಮನಂಬುಗೆ ಪೇಟ್ದುದು ನವ್ಯಕಾವ್ಯಮಂ

ಚತುರಕವಿಯಾದವಂ ಸ
ತ್ಕೃತಿವೆಟ್ದುದು ತನಗಮಿತರಜನಕಂ ಸುಮನ
ಸ್ಸ್ಥಿತಿ ವಾಸನೆವಡೆದಿರೆ ಸ
ನ್ನುತಮಾಲೆಯನೆತ್ತುವಂತೆ ಮಾಲಾಕಾರಂ

ಕೊರ್ವಿ ಪೊಜಪೊಣ್ಮ್ರೆ ತನಿರಸ
ಮುರ್ವೆ ಕರಂ ಕೊಂಕು ಕಿವಿವರಂ ನವ್ಯಗುಣಂ
ಪರ್ವೆ ತೆಗೆದಿಸುವ ಕಾವನ
ಕರ್ವಿನ ಬಿಲ್ಲಂತೆ ಕಾವ್ಯವೇಂ ಮೋಹಿಸದೇ

ತಿಂಗಳ ಬೆಳತಿಗೆವೆಳಗಿನೊ
ಳಿಂಗತಲೆಸೆವಂತೆ ಬಹುಕಳಾಪರಿಣತರೊ
ಲ್ದಂಗೀಕರಿಸಿದ ಕೃತಿ ಭುವ
ನಂಗಳೊಳೋರಂತೆ ಮೆಱೆವುದೊಂದಚ್ಚರಿಯೆ

ತಲೆಯುಂ ತೂಗಿ ಬೆರಲ್ಗಳಂ ಮಿಡಿದು ಸದ್ವಿದ್ಯರ್ ಸಭಾಮಧ್ಯದೊಳ್
ಪಲಬರ್ ಸತ್ಕವಿಗಿತ್ತ ತಕ್ಕಿನ ಪೆಸರ್ ಸಲ್ವಂತೆ ನೀಚಂಗೆ ವಾ
ಗ್ಬಲದಿಂ ಬಂಟಿನ ನಂಟಿನಗ್ಗಳಿಕೆಯಿಂ ದೆಗ್ಗೆನ್ನ ದುರ್ವೆಟ್ಟು ಗಾ
ವಿಲನೊರ್ವಂ ಕುಡೆ ಕೊಂಡ ತೊಂಡುವೆಸರಿಂದೇಂ ಸಲ್ವುದೇ ನಿಲ್ವುದೇ

ತಲೆದೂಗೆ ಬುಧರ್ ಖಳನಂ
ತಲೆವಾಗಿಸಿ ಸಭೆಯ ನಡುವೆ ನಿಲ್ಲದೆ ಪಾವಂ [ವಿನ] ?
ತಲೆಗಂಡ ಪಂದೆಯಂದದೆ
ತಲೆಬಾಲಂಗೆಟ್ಟು ಜಗುಟ್ಟಿ ಕವಿಯುಂ ಕವಿಯೇ

ತಳ್ತಳವಟ್ಟಿರಲವಯವ
ದೊಳ್ತೊಳಗದ ಕೃತಿಯೊಳಿಟ್ಟಲಂಕಾರವುದೇ
ವಾಟ್ತಿ ನಡೆ ನೋಡೆ ಬಡವರ
ತೊಟ್ತಿನ ಶೃಂಗಾರದಂತಿರೆರವಾಗಿರದೇ

ಕತ್ತುರಿಯನೆರೆಯುಮಣ್ಗೆರ
ಸೋತ್ತರ ಕವಿಕೃತಿಯನಧಮಕೃತಿಗೆಣೆಯೆಂಬಂ
ಗೆತ್ತಣ ಮಾತೊ ವಿದಗ್ಧರ್
ಚಿತ್ತೈಸಿದೊಡಿಳೆಯೊಳುಂಟೆ ಮೂಗುಂ ಕಿವಿಯುಂ

ನವರಸರಸಿಕಂ ಸುಮನ
ಸ್ತವನೀಯಮೆನಿಪ್ಪ ಕಾವ್ಯದತಿಶಯಮಂದು
ಷ್ಕವಿಯಱಿಯನೆಂದು ಜಱೆಯೆಂ,
ಪ್ಲವಗಕ್ಕೇ ವಾೞ್ತೆ ಪಾರಿಜಾತಸ್ತಬಕಂ ?

ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ಡುಂಡುಚಿಯೋ ಬೀದಿವಱೆಯ ಬೀರನ ಕತೆಯೋ ?

ನೆರೆಯಱಿಯದ ಪೊರೆಯಱಿಯದ
ಬಿರುದುಗಳೇಕೆಮಗೆ ಕೃತಿಯನೀಕ್ಷಿಸಿಮಿಗೆ ಮ
ಚ್ಚರಿಸುವ ಕವಿಯೆರ್ದೆ ಬಿಕ್ಕನೆ
ಬಿರಿದಿರ್ದುದೆ ಬಿರುದು ಮಿಕ್ಕ ಬಿರುದುಂ ಬಿರುದೇ

**ಮಧುರಕವಿ—ಧರ್ಮನಾಥಪುರಾಣ**
(೧೩೮೫)

## ೬೬. ವನಲಕ್ಷ್ಮಿ

ಪರಮಹರ್ಷದಿನಿಂತು ಗುರುಕುಲಾಗ್ರಣಿಯಿರು
ತ್ತಿರೆ ಮೆಲ್ಲಮೆಲ್ಲನೆ ಹಿಮಂ ಸರಿಯೆ ಪೊಸವಿಸಿ
ಲ್ಪೊರೆಯೇಱೆ ಮೆಯ್ಯ ಬಿಱುಬುಗಳಡಂಗಿ ಲಸತ್ಪ್ರಸನ್ನತೆಯನ
ಪ್ಪುಗೆಯ್ಯೆ
ಕೊರಗಿದಂಬುಜವನಂ ಸೊಂಪೇಱೆ ಬಲ್ಗಾಳಿ
ಸರಿದು ತಂಬೆಲರ ಕಾಲಾಟವಗ್ಗಳಿಸೆ ನಸು
ಮೊರೆಯುತುಂ ತುಂಬಿ ಸುಳಿದಾಡೆ ಮೆಱೆದುದು ಮಾಗಿಯಪಜಯಂ
ಮಧುವಿನಜಯಂ

ಪಱಿಯೆ ಮುದಮಂ ಮಾಗಿ ಕಱೆಯೆ ಸೊಗಸಂ ಮಾವು
ನೆಱೆಯೆ ಕಳಿಪೆರ್ಚೆ ಸಸಿ ಮೆಱೆಯೆ ಮಾಧವಿ ಪೂತು
ತೊಱಿಯೆ ಲಜ್ಜೆಯನವನಿ ಜಱೆಯೆ ತಪಮಂ ಯಮಿಗಳಱಿಯೆ
ನನೆಗಣೆಯೋಪರಂ
ಮುಱಿಯೆ ವಿರಹಿಯ ಗುಟ್ಟು, ಬೆಱೆಯೆ ಕುಸುಮೇಷು ಕುಕಿ
ಲಿರಿಯೆ ಕೋಗಿಲೆ, ದುಃಖವರೆಯೆಸುಖಿಜನಕೆ ಕ
ಣ್ದೆಱೆದುದು ವಸಂತಮಾಸಂ ಭೋಗಿತತಿಯ ಮುಖವಿಕಾಸಂ
ಸುಖೈಕವಾಸಂ

ಆಸುಗೆ ನೇರಿಲ್ಮಾಮರಂ ಪನಸು ಮೊದಲಾಗಿ
ಮಿಸುಪ ಮರಗಳ್ ಕನರ್ಗೊನರ್ಚೆಗುರ್ ಚಂದಳಿರ್
ಪೊಸವನೆಗಳುಳ್ಳರಲ್ಕಸುಗಾಯ್ಕುರಂ ದೋರೆ ತನಿವಣ್ಗಳಾಂತು
ಮೆಱೆಯೆ
ಒಸೆದವಱ ಸವಿಯನುಱೆ ಸವಿದು ಪಡಿಯರವಕ್ಕಿ
ಯೆಸೆವರಲ್ವಕ್ಕಿಕನ್ನಡವಕ್ಕಿಮೆಲ್ಲುಲಿಯ
ನೆಸಗೆ ಝುಂಕೃತಿಗೆಯ್ಯೆ ಸವಿವಾತನಾಡೆ ಕಣ್ಗೆಸೆದುದು
ವಸಂತಸಮಯಂ

ರಸಭರಿತವಾಗಿ ಸತ್ಕವಿಕಾವ್ಯಬಂಧದಂ
ತೆ ಸಮಸ್ತಫಲಪೂರ್ಣವಾಗಿ ಸುಕೃತಾತ್ಮನಂ
ತೆಸೆವ ಹರಿಸಂಯೋಗಿಯಾಗಿ ಲಕ್ಷ್ಮೀದೇವಿಯಂತೆ
ಗೋಪಿಯರೊಳೊಂದಿ
ಬಿಸಜಾಕ್ಷನಂತೆ ತೆಮರಲ್ಲರ್ಜುನಾಢ್ಯವಾ
ಗಿ ಸುಭದ್ರೆಯಂತೆ ಸಸಿಯೊಡನೊಂದಿ ರೋಹಿಣಿಯು
ಮಸಕದಂತೆ ಸುವರ್ಣಯುತವಾಗಿ ಪರದನಂತೊಪ್ಪುಗುಂ
ಶಾಲಿಯವನಂ

ಫಲಸಂಪದಂ ತಮಗೊದವಿದಲ್ಲಿ ಸಜ್ಜನ
ರ್ತಲೆವಾಗಿರಲ್ವೇಟ್ಕು ಮಿಂತೆಂದು ತೋರ್ಪನುವೊ
ತಲೆವಾಗಿ ನಡೆವವರ್ಗೆ ತಲೆವಾಗುವರ್ಸರ್ವರೆಂದಭಿನಯಿಸುವ
ಬಗೆಯೋ
ಸಲೆ ಪೆತ್ತ ಧರೆಯ ಮೋಹದಿನೆಱಗಿ ನೋಟ್ಪಿರವೊ
ಸುಲಭಗುರುವಂ ಕಂಡು ವಂದಿಪಂದವೊ ಎನ
ಲ್ಕಳವಾಳಿಎಸೆದುವಲ್ಲಲ್ಲಿ ಚೆಲ್ಲಂಗೆಯ್ಯುತುಂ ಕಾವ ವಲ್ಲವಿಯರಿಂ

ಪಾಲ್ದುಂಬಿ ಮೆಱೆವ ಪೊಸಕಮ್ಮಂಗಳವೆದೆನೆಯ
ನೊಲ್ದು ಪಿಡಿದಲ್ಲಿ ಪಾಮರಿ ಚರಿಸುತಾವನಕೆ
ನಾಲ್ದೆಸೆಯನೊಸೆದುಬಂದೆಱಪ ಗಿಳಿವಳಗಮಂ ಕಯ್ಯೆತ್ತಿ ರಯ್ಯವಾಗಿ
ಬಲ್ದನಿವೆರಸು ಸೋವೆ ಯದನೊಂದು ಗಿಳಿಕಂಡೊ
ಜಲ್ದುಬಂದಾಕ್ಕೆಯ್ಯ ತೆನೆಗೆಱಗೆ ಮಾನಸವ
ರಲ್ದುಕಟ್ಕನೆ ಪಿಡಿದು ಕುಟುಕನೀವುತೆ ಬಿನದಿಸುತ್ತೆಸೆದಳತಿಹರ್ಷದಿಂ

ನೆಗಟ್ದ ಪೊಂಬಾಳೆಗಳ ಚಮರದಿಂ ಪೂತು ಕಂ
ಪುಗುವ ವೃಕ್ಷಾವಳಿಯ ಗುಡಿಯಿಂ ಮರಂಗಳಂ
ಬಿಗಿದುಱೆ ತಳಿರ್ತೆಳಲತೆಯ ತೋರಣದಿನೆಸೆವ ಸೋಗೆಗಳ
ಸೀಗುರಿಗಳಿಂ

ಮಿಗೆ ಮೆಱೆವ ತೆಂಗುಗಳ ಸತ್ತಿಗೆಗಳಿಂ ಕೋಗಿ
ಲೆಗಳ ಕಹಳೆಯಿನಖಿಳಪಕ್ಷಿರವವಾದ್ಯದಿಂ
ಸೊಗಸಿ ವನಲಕ್ಷ್ಮಿ ಗುರುವರನನಿದಿರ್ಗೊಂಡಪಳೊ ಎಂಬಂತೆ
ವನಮೆಸೆದುದು

ಮಾಲತೀಮಾಧವೀಯಾನ್ವಿತದೆ ನಾಟಕದ
ಲೀಲೆಯಂ ಯೋಗಿಕುಸುಮಾಂಜಲಿಯಿನಾತರ್ಕ
ಶೀಲತೆಯನಿಂದ್ರಚಂದ್ರಾಂಕದಿಂ ವ್ಯಾಕರಣಮಂ ವಿಲಸಿತಧ್ವನಿಗಳಿಂ
ಲಾಲಿತಾಲಂಕಾರಮಂ ಚಂಪಕೋತ್ಪಲವಿ
ಶಾಲತ್ವದಿಂ ಛಂದಮಂ ಮಹಾಶ್ರೀಹರ್ಷ
ದಾಲಂಬದಿಂ ಕಾವ್ಯಮಂಪ್ರೋಲ್ದು ರಂಜಿಸುವುದಾನಂದನಂ ನಂದನಂ

ಪಗಲಬಲ್ಲಹನ ಕೆಂಗದಿರ್ದೊಂಗಲಿನಿಸು ಪುಗ
ದೆ ಗಭೀರಮಾಗಿ ಕಟ್ಟಿಲಿಸಿದ ತಮಾಲದ ತ
ರುಗಳ ತಣ್ಣೆಳಲೊಳೆಳೆವಾಳೆಯೆಲೆಗಳ ಪಚ್ಚಡಿಸಿ ತಳಿರ ಹರಹಿಯಲ್ಲಿ
ಮಗಮಗಿಪರಲ ಮುಡಿದು ಚಂದನಂಬೊರೆದು ಚೀ
ನಿಗಳ ಪೊದೆದಿನಿದುಂಡು ಸವಿದಂಬುಲಂಗೊಂಡು
ಸೊಗಸುಗಾರ್ತಿಯರೊಡನೆ ಬೇಸಗೆಗಳಿವ ಭೋಗಿಜನವಾ ವನ
ದೊಳೆಸೆದುದು

ನುತಪಲ್ಲವಮೆ ಧೋತ್ರಮುಂ ಬರ್ಹಿರ್ವಾಸಮುಂ
ತತಪಿಕಸ್ವರಮೆ ವೇದಸ್ವರಂ ಮೆಱೆವ ಪಂ
ಡಿತವಕ್ಕಿಯೊಳ್ನುಡಿ ಪುರಾಣಪಠನಂ ಭ್ರಮದ್ಭ್ರಮರೀವಿಲಾಸವಿರುತಿ
ಹಿತವಾದ ಮಂಗಲಾಶೀರ್ವಾದಮಂತ್ರಂ ಪ
ತಿತಮುಪ್ಪಕುಸುಮಕೇಸರವೆ ಮಂತ್ರಾಕ್ಷತದ
ತತಿಯಾಗೆ ಮಧುವಿನ ಪುರೋಹಿತನೊ ಎನೆ ಯೊಂದಶೋಕವೃಕ್ಷಂ
ಮೆಱೆದುದೂ

ಮೊದಲಿಂದ ತುದಿವರಂ ಬೇರೊಂದು ರೀತಿಯಾ
ಗದೆ ಯೊಂದೆ ಚಂದದ ಸಫಲಗುಣವನಾಂತು ನಿಜ
ಹೃದಯದೊಳ್ಪಂ ಬಹಿಷ್ಕರಿಸಿ ಕಾಣಿಸದೆ ಸದ್ವಾಸನೆಯನೇ ಬೀಱುತೆ
ಒದವಿ ಕೊಯ್ದುಂ ಕೊಱೆದುಂ ಹಿಕ್ಕಿ ನೋಡಿದೊಡೆ
ಸದಮಲಾಮೃತವನೇ ಕಾಣಿಸುತೆ ಪಲಸುಗ
ಳ್ವಿದಿತಸಜ್ಜನರಂತೆ ಮೆಱೆದುವು ಮಹಾಫಲಾಂಕರ್ಗದೇಂನ್ನೈಜಮುತ್ತಿ

ಫಳರಸಮೆ ಮದಧಾರೆ ಚಳಿಪ ತಳಿರ್ಗೊಂಚಲು
ಜ್ವಳಕರ್ಣಮುಱೆ ನೀಳ್ದ ಕುಸುಮಮಂಜರಿ ದಂತ
ಮೊಳಪಟ್ಟಿದಕ್ಕೈಱಗುವಳಿಮಾಲೆ ಬಾಕಯ್ಯವಱಿ ಝುಂಕೃತಿಯೆ
ಬೃಂಹಿತಂ
ಗಿಳಿಗಳಿಟ್ಟೈಳವೆ ಪಚ್ಚೆಯ ಪಕ್ಕರಕ್ಕೆ ಕೋ
ಕಿಳರವಂ ಮುಂದುಲಿವ ಡೌಡೆಯಾಗಲ್ಕತನು
ಗೆಳಸಿ ಮಧುಯೋಧನಲಂಕರಿಸಿ ಪಿಡಿದ ಮದಗಜದಂತೆ
ಚೂತಮೆಸೆಗುಂ

ತಳಿರ ತೊಂಗಲ್ ಕೆಂಜೆಡೆಯ ಬಿಂಕಮಂ ಬೀಱೆ
ಪೊಳೆವ ಕೆಂಗಾಯ್ಗೊ ಸಲಕಣ್ಣದೇಸಿಯ ಸೂಸೆ
ಮಿಳಿರ್ವ ತನಿವಣ್ಗೊರಲ ಬಿಸದ ತೇಜವನೋಜೆಗೆಯ್ಯೆ ಕಳಿದು
ಗುವಲವುರ್ಡಿ
ತಳೆದ ಭಸಿತದ ಸೊಗಸನುಗಿಸೆ ತುಂಬಿಗಳ ಸವಿ
ಮೊಳೆವ ಝುಂಕೃತಿ ಕಿವಿದೊಡವುಪಾವುಗಳ ಪಾಡಿ
ನಳವಡಿಕೆ ದುಡುಕೆ ಶಿವಚಿಹ್ನವಾಂತಂತೆ ನೇರಿಲ್ಮರಂ ಚೆಲ್ವಾದುದು

ಕೆಂಪುವಡೆದೆಸಳಿಂ ರಜೋಗುಣಯುತಬ್ರಹ್ಮ
ನಂ ಪೊಳೆವ ಬೆಳ್ಪಮರ್ದ ಕೇಸರದೆ ಸತ್ವಗುಣ
ಸಂಪನ್ನವಿಷ್ಣುವಂ ಕರ್ಪಿಡಿದ ತೊಟ್ಟಿಂ ತಮೋಗುಣಾನ್ವಿತರುದ್ರನಂ

ತಿಿಂ ಪೇಟ್ಟಿದಜಿ೯ನೊಂದೆ ಕುಸುಮದೊಳ್ ತ್ರಿಗುಣಾತ್ಮ
ಕಂ ಪುದಿದ ದೇವತೆಗಳಾಂತವೊಲ್ ಮುತ್ತಗಂ
ಪೆಂಪುವಡೆದುದು ಫಲಪದಂಗಳಟಿ೯ದ ಮುಕ್ತಕಾವಳಿಗಿದೇಂ
ಚೋದ್ಯಮೇ

ಸುರಲೋಕದವ್ಯತಕೀ ನರಲೋಕದಿನಿದುಗ
ಳ್ಸರಿಯಲ್ಲವೆಂದು ರಿಕ್ಕಟಮೆ ಸಿಂದಿಸದೊರ್ಮೆ
ಪರಿಕಿಸುವುದೆಂದವುದುರ್ಗಗಳಸಗಳ ಪಲಗೈಯ್ಯೊಳಾಂತುದ್ದ
ಕೆತ್ತಿಭೂಮಿ
ಸುರಗಿೀವನುವ್ರೊ ಕಿಂಚಿದುಪಕಾರಿಗಧಿಕತರ
ಪುರುಷಾರ್ಥವುಂ ಮಾಡುವರ್ಸುಜನರೆಂದು ತಿಳಿ
ದರರೆ ನೀರೆಜ೯ದಂಗೆ ಪರಮಾವ್ರುತಂಬೊತ್ತ ಪರಿಯೊ ಎನೆ
ತೆಂಗೆಸೆವುವು

ಪ್ರೊಳೆವಲರ ಸಿಂಧೂರತಿಲಕದಿಂ ತತ್ಕುಸುಮ
ಕೆಳಸಿಬಂದೆಱಗಿದಳಿಗಳಕುಂತಳದಿನವಱ
ಕಳರುತಿಯ ಸವಿವಾತಿನಿಂ ತೋರದೋರೆಗಾಯ್ಗಳ ಕುಚಂಗಳಿ
ನೊಪ್ಪುತ
ಕಳಿವಣ್ಬಿರಿಯಬಾಯ್ದೆರೆಯೊಳೊಂದಿದೊಳ್ಪಿತ್ತು
ಗಳ ಮಿಳಿರ್ವ ಕೆಂಬಲ್ಲ ಸೊಗಸಿನಿಂ ದಾಡಿಮಿಾ
ಲಲನೆ ಶುಕನುಮನೊಲಿಸಿಕೊಂಡಳೆನೆ ಸುದತಿಯರದಾರಂ
ವಶೀಕರಿಸರೋ

**ಪದ್ಮಣಾಂಕ–ಪದ್ಮರಾಜಪುರಾಣ**

(೧೩೮೫)

## ೬೭. ವನಲಲನೆ

ಸ್ಮರನ ಮಂತ್ರದ ದೇವತೆಯರೆನೆ
ಪರಿಪರಿಯ ಶೃಂಗಾರದಲಿ ಕರಿ
ತುರಗರಥಗಳ ಮೇಲೆ ಪರಿಮಿತಕಾಮಿನೀನಿಕರ
ಬರಲು ಬೆಳ್ಗೊಡೆ ಚಮರ ಸೀಗುರಿ
ಮೆಱೆಯೆ ಸಡಗರದಿಂದೆ ಜೀವಂ
ಧರನು ಬಂದಾನಂದನವ ಹೊಕ್ಕನು ವಿಲಾಸದಲಿ

ಚಾರುಪದ್ಮಾನನದ ಲಲಿತಚ
ಕೋರನೇತ್ರದ ಚಕ್ರಕುಚದ ಮ
ಯೂರಕಚದ ಮರಾಳಗಮನದ ಪಾಟಲಾಧರದ
ಕೀರವಚನದ ತಳಿರಡಿಯ ರಂ
ಭೋರುಗಳ ತಳೆದೆಸೆವ ಕುಸುಮಶ
ರೀರದಾವನಲಕ್ಷ್ಮಿ ತಾನಿದಿರಾದಳಾನೃಪಗೆ

ಅರಸ ಕೇಳಾಬನವ ಜೀವಂ
ಧರನು ಪುಗೆ ವನಪಾಲಕನು ಭೂ
ವರಗೆ ತೋಱಿದ ವಿಮಳವಲ್ಲಿಯ ಹರ್ಮ್ಯಶಾಲೆಗಳ
ಮೆಱೆವ ಕೃತಕಾದ್ರಿಗಳ ತತ್ಫಲ
ಭರಿತ ಕುಜಸಂಕುಳದ ಘನ ಸಡ
ಗರವ ತೋಱುತ ಮುಂದೆ ನಡೆತರುತಿರ್ದನೊಲವಿನಲಿ

ತಳಿರು ಕೆಂಪಡಸದೆ ಧರಿತ್ರಿಯ
ನಲರ ಬೆಳುಪಿಲ್ಲದಿರೆ ನಭವು
ಚ್ಚಲಿಸದಿರೆ ತರುಶಾಖೆ ಪಣ್ಗಳ ಭರದಿ ಕುಸಿಯದಿರೆ

ಫಲರಸವು ನದಿಯಾಗದಿರೆ ಗಿಳಿ
ಬಳಗ ಚುಂಬಿಸದೆಂದೆನುತ ನೃಪ
ತಿಲಕಗಾವನಪಾಲ ಸಹಕಾರವನು ತೋಱಿಸಿದ

ತಳಿರನಗ್ನಿ ಯನಳಿಗಳಿದ್ದಿಲ
ನಳವಡಿಸಿ ಮಂದಾನಿಲನ ತಿದಿ
ಗೊಳಿಸಿ ಶುಕ ನೆರವಾಗೆ ಮಧುಕಮ್ಮಾಱನು ವನವೆಂಬ
ಕುಲುಮೆಯಿಂದರಲಸ್ತ್ರಗಳ ಮಾ
ಡಲು ಸಿಡಿವ ಕಿಡಿಯೆನೆ ಪರಾಗೋ
ದ್ಗಳಿತಶೋಕೆಯ ತರುವ ನೃಪ ನೋಡೆಂದು ತೋಱಿಸಿದ

ವನಸತಿಯು ಸೆಳ್ಳುಗುರೊ ವಿರಹಿಯು
ಮನವ ಕೊಱೆಯಲು ಚಿತ್ತಭವನಾ
ಳ್ದನುಪಮಿತ ಕರಗಸವೊ ಮಧುಪಾನವನಳಿವ್ರಾತ
ಅನುಭವಿಪ ದೋಣಿಗಳೊ ಹರರಿಪು
ವೆನುತ ಹೊಱಗಿಕ್ಕಿದ ವಸಂತಕ
ನೆನಲು ರಂಜಿಪ ಕೇತಕಿಯನವನೀಶ ನೋಡೆಂದ

ಧಾರಿಣಿಗೆ ಹೊಱೆಯಾಗದಿರಲು
ನಾರನುಟ್ಟು ವನಾಂಬುವೀಂಟಿಯೆ
ಮಾರುತಾರ್ಕಪ್ರಭೆಗಳುಕದೇಕಾಂತದಲಿ ವನವ
ಸಾರಿ ತಪವಾಚರಿಪೆವೆನುತವೆ
ಚಾರು ಕಂಗಳ ಮುಚ್ಚೆ ಮೆಱೆದಿವೆ
ನಾರಿಕೇಳಗಳರಸ ನೋಡಿವು ತಪಸಿಯಂದದಲಿ

ಮಲಿನ ಪುಷ್ಪಲತಾಂಗನೆಗೆ ನೀ
ನೆಳಸುತಿಹೆ ಮಾತಂಗಜಾತಿಗ
ಳೊಳಗೆ ದಾನವ ಕೊಂಬೆ ಮೇಲಾಜಿಡಿಗ ಮಧುಪಾನಿ
ಚಲಹೃದಯ ನೀನೆನ್ನ ಮುಟ್ಟದೆ
ತೊಲಗೆನುತೆ ಕೈಸನ್ನೆಗೆಯ್ವಂ
ತಲುಗುವೆಲೆಗಳೊಳೆಸೆವ ಸಂಪಗೆಯರಸ ನೋಡೆಂದ

ವಿರಹಿಯೆಂಬ ಮದೇಭವನು ಕಾ
ತರಿಸಿ ಮನ್ಮಥನೆಂಬ ಕೇಸರಿ
ಶಿರವ ಮೆಟ್ಟಿ ಮಹೋಗ್ರದಿಂ ಸೀಬಲು ನಖಾಗ್ರದಲಿ
ಸುರಿವ ರುಧಿರದ ಧಾರೆಯೆಂದೆನ
ಲರುಣತೆಯನೊಂದಿಹ ಪಲಾಶವ
ಮರನ ನೀ ನೋಡೆಂದು ಭೂಮಿಪತಿಗೆ ತೋಱಿಸಿದ

ಗಿಳಿಗಳೊಪ್ಪದಿ ಪಾಡಿ ಪಲವು
ದ್ವಳೆಯು ಬೆಡಗಿಂದನಿಲ ಲತೆಗಳ
ನಲೆದು ಬಾಜಿಸಿ ತಾಳರವ ಕೋಗಿಲೆಯೊಳೊಂದಿರಲು
ಅಳಿಬಳಗ ಕಹಳೆಗಳ ಪೂರಿಸೆ
ಲಲಿತವಿಭ್ರಮಗತಿಗಳಲಿ ವನ
ಲಲನೆ ನೃತ್ಯವನಾಡುವಳು ಭೂಪಾಲ ಕೇಳೆಂದ

ಭಾಸ್ಕರಕವಿ–ಜೀವಂಧರ ಚರಿತೆ
(೧೪೨೪)

## ೬೮. ಮಾಯೆಯ ಸೋಲು

ಕಿವಿಗೆ ಕಂಪನು ವೈಗೆ ರೂಪನು
ಸವಿಯನಕ್ಷಿಗೆ ನಾಸಿಕಕೆ ಶ
ಬ್ದವನು ಸಲಿಸುವ ಮರುಳತನದಲಿ ದೇವತಾಮುಖದ
ವಿವರಗಳನೇನುವನು ತಿಳಿಯದೆ
ತವಕ ಮಿಗೆಯನ್ಯೋನ್ಯವಸ್ತು
ಪ್ರವರದಲ ಪೂಜಿಸಲು ನಿಷ್ಫಲವೆಂದಳಾ ವಿಮಳೆ

ವನಿತೆ ನಾನಿನ್ನೊಂದು ಕೇಳುವೆ
ನೆನಗೆ ಮುಚ್ಚದೆ ಹೇಳು ಹುಸಿದೊಡೆ
ನಿನಗೆ ಪಾರ್ವತಿಯಾಣೆ ನಿನ್ನಯ ಕೋಮಲಾಂಗದಲಿ
ಮನಸಿಜನ ಕೈಮುಸಕ ಮಿಗೆ ವೇ
ದನಿಸಿ ನೋಯಿಸುತಿರ್ದುವೆಂದೆಂ
ಬನಿತು ಕುಱುಹಿರಲೇನು ಕಾರಣವೆಂದಳಾ ವಿಮಳೆ

ಆಣೆಗಂಜುವೆನವ್ವ ಕಾಮನ
ಬಾಣದಲಿ ಭಯಪಟ್ಟು ಬಳಿಕಾ
ಪ್ರಾಣಪರಿಯಂತರ ದಶಾವಸ್ಥೆಯಲಿ ನೆಱೆನೊಂದು
ಮಾಣದುತ್ತಮವಾದ್ಯವಿದ್ಯಾ
ಜಾಣನಲ್ಲಮನೆಂಬ ಚೆಲುವನ
ಕಾಣುತವೆ ಕಂಗೆಟ್ಟು ಕರಗಿದೆನೆಂದಳಾ ಮಾಯೆ

ಅಲ್ಲಮನು ತಾನೆಂಬ ಹೆಸರವ
ನಲ್ಲಮಪ್ರಭುವಾಗಲಃಪನು
ಭುಲ್ಲವಣಿಯಲಿ ನಿನ್ನ ಜವ್ವನ ಕೊಬ್ಬಿನಲಿ ಮಱೆದು

ಪಲ್ಲವಿಸಿ ನೀ ಕಾಮಿಸಿರ್ದೊಡೆ
ಖುಲ್ಲತನದಲಿ ವಿಕೃತವೇಷದ
ಲಲ್ಲಮನೆ ತಾ ಬಂದನೈಸಲೆ ಎಂದಳಾ ವಿಮಳೆ

ಎಂದೊಡಾನೇನಱಿಯೆನಕಟಾ
ಮಂದಮತಿಯೇ ಅಲ್ಲಮಪ್ರಭು
ವೆಂದೆನಿಸಿಕೊಂಬುವನು ತಾ ಪ್ರತ್ಯಕ್ಷ ಪರಬೊಮ್ಮ
ಎಂದು ಹೇಳುವರೆಲ್ಲರಿವನೇ
ಸಂದ ಮದ್ದಳೆಯಲ್ಲಮನು ಬಿಡು
ಹೊಂದದೌ ನೀ ಹೇಳುವುದು ಹುಸಿಯೆಂದಳಾ ಮಾಯೆ

ಆಕಟ ಮರುಳೇ ಅಲ್ಲಮಪ್ರಭು
ಸಕಳರಿಗೆ ಸಾಕಾರವಾಗಿಹ
ಸುಕರ ನಿರ್ಮಳ ಮತಿಗೆ ನಿರ್ಗುಣರೂಪನಾಗಿಹನು
ಪ್ರಕಟಿಸುವ ನೀ ನಿನ್ನ ವಿಷಯದ
ವಿಕಳತನವನು ಬಿಟ್ಟು ಸಲೆ ಸಾ
ತ್ವಿಕದ ಬುದ್ಧಿಯಲೀಕ್ಷಿಸೆಂದಳು ಮಾಯೆಗಾ ವಿಮಳೆ

ಆದೊಡದನಾನಱಿಯೆನೌ ಬೇ
ಕಾದೊಡಾ ಮದ್ದಳಿಗನನು ದಿಟ
ಭೇದಿಸಲು ನೀ ಬಲ್ಲೆಯಾದೊಡೆ ತೋಱಿಸುವೆನವನ
ವಾದವೇತಕೆ ನಿನ್ನ ಮನಸಿಗೆ
ವೇದಿಸುವ ದಿಟವಲ್ಲಮನೆಯವ
ನಾದನಾದೊಡೆ ಬಳಿಕ ನೋಡುವೆನೆಂದಳಾ ಮಾಯೆ

ಎನುತ ವಿಮಳೆಯು ಕೂಡಿಕೊಳುತಾ
ವನಿತೆ ನಿತ್ಯಸ್ಥಿತಿಯ ದೇವಾ
ರ್ಚನೆಗೆ ದೇವಾಲಯಕೆ ಹೋದಳು ಸಕಲ ವಿಭವದಲಿ
ಮನವೊಲಿದು ಮಧುಕೇಶ್ವರನ ವಂ
ದನೆಯನೆಲ್ಲವ ಮಾಡಿ ಮಾಯಾಂ
ಗನೆ ವಿರಾಜಿಸಿ ಬಂದು ನಿಂದಳು ನೃತ್ಯರಂಗದಲಿ

ಹೂಡಿ ಹಣ್ಣಿದ ಜಗದ ಜಂತ್ರವ
ನಾಡಿಸುವ ಮಾಯಾಂಗನೆಯು ತಾ
ನಾಡಿಸುವೆನೆಂಬುದನು ಪ್ರತ್ಯಕ್ಷದಲಿ ತೋರ್ಪಂತೆ
ಆಡಿಸುವ ಮದ್ದಳೆಯ ಜೋಕೆಯ
ಜೋಡಿಸುವನಲ್ಲಮನು ಪಾತ್ರವ
ನಾಡುವವಳಾ ಮಾಯೆ ಲೋಕವ ಮರುಳು ಮಾಡುತಲಿ

ನೋಟವತ್ತಲು ಮನದ ಬೆಸುಗೆಯ
ಬೇಟವಿತ್ತಲು ಕಾಯ ಕರಣಗ
ಳಾಟವತ್ತಲುವಂತರಂಗದ ಬಯಕೆಗಳ ಬಗೆಯು
ಕೂಟವಿತ್ತಲು ಕವಲುಗೊಂಡುದು
ನಾಟಿ ಲಿಂಗದೊಳಲ್ಲಮನೊಳದು
ನೋಟಕರಿಗಜಿದಾಯ್ತು ಭಾವಿಸೆ ಬೆಡಗು ಮಾಯೆಯಲಿ

ಲಲಿತ ನಿರ್ಮಲ ಚಂದ್ರಕಾಂತದ
ಶಿಲೆಯ ಹತ್ತಿರೆ ಲತೆಯ ದಾವಾ
ನಳನು ಕೊಳಲಾ ಜ್ವಾಲೆಯಾ ಶಿಲೆಯೊಳಗೆ ತೋರ್ಪಂತೆ

ತಿಳಿಯಲಱಿಯದ ಜನಕೆ ಮಾಯೆಯ
ತಳಿತ ಕಾಮಜ್ವಾಲೆಯಲ್ಲಮ
ನೊಳಗೆ ಪ್ರತಿಬಿಂಬಿಸಿದುದಾತನೆ ಕಾಮಿಯುಂಬಂತೆ

ಶೂಲಿಯೊಳುತಾ ಹೂಣಿಸಿದ ಹೀ
ಹಾಳಿಯನು ಮುಱುಕಳಿಸಿ ಕಾಮನ
ದಾಳಿಯಲಿ ತಾ ಸಿಕ್ಕಿದುದ ನೆಱೆ ನೆನೆವ ವೇದೆಯಲಿ
ತಾಳಮೇಳದ ಗತಿಯು ಗಮಕದ
ಕೀಲಣೆಯ ಕಾಲಾಟ ವಿಘಟಿಸಿ
ಜಾಳಿಯಲಿ ತಬ್ಬಿಬ್ಬುವೋಗುತಲಿರ್ದಳಾ ಮಾಯೆ

ಈತನೇ ದಿಟದಲ್ಲಮನೊ ಮೇ
ಣೀತ ಮದ್ದಳೆಯಲ್ಲಮನೊ ನಾ
ನೀ ತರುಣಿಗೀತನನು ತೋಱಿಸಿ ತಿಳಿಯಬೇಕೆನುತ
ಪ್ರೀತಿಯಿಂದಲಿ ತನ್ನ ಮನದೊಂ
ದಾತುರತೆಯನು ಸ್ಥೈರಿಸುತ ಬಳಿ
ಕೋತು ಮಿಗೆ ತನ್ನೊಳಗೆ ತಾನಿಂತೆಂದಳಾ ಮಾಯೆ

ಸಂದಣಿಸುತಿಟ್ಟಣಿಸಿ ನೆಱೆದಿಹ
ಮಂದಿಯಲಿ ನಾನಿವನನನುಚಿತ
ದಿಂದಲಿವಳಿಗೆ ನುಡಿದು ತೋಱುವುದೆಗ್ಗತನವೆನುತ
ಅಂದು ವಿಮಳೆಗೆ ಜಾತಿ ಜಾಣಿಕೆ
ಯಿಂದಲಭಿನವ ಪಾಡು ನೋಟಗ
ಳಿಂದ ಬಳಿಕಲ್ಲಮನ ತೋಱಿಸುತಿರ್ದಳಾ ಮಾಯೆ

ಆಕೆ ಕಡೆಗಣ್ಣಿನಲಿ ತೋಱಿದ
ಡೀಕೆ ನಡುಗಣ್ಣಿನಲಿ ನೋಡುತ
ವಾ ಕಳಾವಿದನಾಗಿ ಕಾಣಿಸುವಾತನಿಂಗಿತವ
ಲೋಕದೊಳಗಿಂತಪ್ಪ ಮಾನವ
ರಾಕೃತಿಯ ನಾ ಕಾಣೆನೆನುತಾ
ಳೋಕಿಸಿದಳನಿಮಿಷತೆಯಿಂದಾ ವಿಮಳೆಯಲ್ಲಮನ

ತುಡುಕಿ ವಂದಿಸಿ ನೋಡಲಳುಪಿನ
ತೊಡಕು ತೊಳಗಿಸಿ ಬಳಿಕಲೀತನ
ಬೆಡಗು ಬಿನ್ನಾಣವನು ಕಾಣಲಿಬಹುದು ನಾವೆನುತ
ನುಡಿದು ತೋಱದೆ ಕಣ್ಣ ಕಾಂತಿಯ
ಕಡೆಗಳಲಿ ಕಾಣಿಸುತಲಿರ್ದಳು
ಮಡದಿ ಮಾಯೆಗೆಯಲ್ಲಮನ ವರ ಮೂರ್ತಿಯನು ವಿಮಳೆ

ಕಂಗಳಲಿ ಮಾತುಗಳು ತಿಳಿವೊಡೆ
ಕಂಗಳಲಿ ಮಾಟಗಳು ಬಗೆವೊಡೆ
ಕಂಗಳಲಿ ಸನ್ಮೋಹಗಳು ಕಂಗಳಲಿ ನೇಹಗಳು
ಕಂಗಳಲಿ ಸರ್ವಪ್ರಪಂಚುಗ
ಳಂಗನೆಯರಿಗೆ ಸಹಜವೆಂದೆನೆ
ಕಂಗಳಿಂದಾ ವಿಮಳೆ ಸೂಚಿಸಲಱಿದಳಾ ಮಾಯೆ

ಬಳಿಕಲೊಯ್ಯನೆ ಬಱಿಯ ಬೇಟದ
ಬಳಕೆ ಬಳಲಿತು ತನ್ನ ಪೈಜೆಯ
ನೆಳಲು ನೆಲಸಿತು ಹೇವ ಹೆಚ್ಚಿತು ಕಾಂಕ್ಷೆ ಕವಲಾಯ್ತು

ತಿಳಿವು ತಿರುಗಿತು ಲಾಸ್ಯಲೀಲೆಯು
ಚಳತೆ ಚಂಡಿಸಿ ಹಿಂಗಿ ಹೋಯಿತು
ಹೊಳೆದುದಲ್ಲಮನಳಬಳವನಱಿವಾಸೆ ಮಾಯೆಯಲಿ

ನೋಟವೆಸೆದುದು ಮುನ್ನ ಮುಟ್ಟಿದ
ಬೇಟವಲ್ಲದೆ ಬೇಱೆ ಬುದ್ಧಿಯು
ಕೂಟದಿಂದ ಲತಾಂಗ ಲಂಬಿಸಿತಾನತಸ್ಥಿತಿಯು
ನಾಟಿ ನಲಿದುದು ಚಿತ್ತವೀ ನಟ
ನಾಟಕನ ಸಿಕ್ಕಿಸುವ ಬಗೆಯಲಿ
ಮಾಟ ಮಕರಿಸಿ ಕಾಣಲಾದುದು ಮತ್ತೆ ಮಾಯೆಯಲಿ

ಈಕೆಯಂಗವನಱಿದು ನಾವಿ
ನ್ನೀಕೆ ಸದಮಲ ಸಸ್ವರೂಪವ
ಕಾಕರಿಗೆ ಕಾಣಿಸುವುದನುಚಿತವೆನುತ ತನ್ನೊಳಗೆ
ಸಾಕೆನುತ ನಟ್ಟುವಿಗತನವನು
ನೂಕುತಲಿ ಮದ್ದಳೆಯ ತಾನೊಡ
ಹಾಕಿ ನಗುತಲಿ ಹೋದನಲ್ಲಮನಖಿಳ ಜಗವರಿಯೆ

ಆಯಿತೇ ಕಡೆಯಾಟ ಹೂಣಿಕೆ
ಹೋಯಿತೇ ಹುಸಿಯಾಗಿ ಕಾಮನ
ಬಾಯ ಬಾರಿಗೆ ಬಿದ್ದೆನೇ ನಗುವವರಿಗೆಡೆಯಾಗಿ
ಹಾ ಎನುತ ಹಮ್ಮೈಸಿ ಹಲುಬುತ
ಬಾಯ ಬಿಡುತಲಿ ಮಱುಗುತಿರ್ದಳು
ಮಾಯೆ ಮಾಣದೆಯಲ್ಲಮಪ್ರಭುರಾಯನಗಲಿದರೆ

ಬಾಲೆ ಹಂಬಲಿಸಿದೊಡೆ ಫಲವೇ
ನೇಳು ತಡೆದಿರದಲ್ಲಮನ ನೀ
ರೇಳು ಲೋಕದಲಱಸಿ ನೋಡುವೆವೆನುತಲಾ ವಿಮಳೆ
ಹೇಳಿದೊಡೆಯಹುದೆನುತ ಚಿತ್ತವ
ತಾಳಿ ತರಹರಗೊಂಡು ಬಳಿಕಲಿ
ಕಾಲು ನಡೆಯಲಿ ಮಾಯೆ ನಡೆದಳು ಕೆಳದಿಯರು ಸಹಿತ

ನೆರೆದು ನೆಟ್ಟನೆ ಬೆಱಗಾಗಿ ನೋಡಿರೆ
ಧರಣಿಪತಿಯ ಕುಮಾರಿ ಕಾಮಾ
ತುರದಲಲ್ಲಮನೆಂಬ ಮುದ್ದಳಿಗಂಗೆ ಮನಸೋತು
ಮರುಳುಗೊಂಡಕಟವನ ಬೆನ್ನಲಿ
ಹರಿದು ಹೋಗುತಲಿಹಳೆಯೆನುತಲಿ
ಪುರದೊಳಗೆ ನೋಟಕರು ಸಂದಣಿಸಿದರು ಬೀದಿಯಲಿ

ಹೋಗುತಿರ್ದಳು ಹೊಲಬ ಕೇಳುತ
ಬೇಗ ಬೇಗದಲಲ್ಲಮನನಾ
ವಾಗ ಕಾಬೆವೊ ಎಂಬ ಮನದಾತುರದ ತವಕದಲಿ
ಆಗಲಡವಿಯ ಬಿದ್ದು ನೆಱೆ ಭೂ
ಭಾಗದಲಿ ವನಚರಿಯರೆಂಬವೊ
ಲಾಗಿ ಮಾಯಾದೇವಿ ವಿಮಳೆ ಸಮಸ್ತ ಸಖಿನಿವಹ

ಕಲ್ಲು ಕೊಡರುಗಳುರಿವ ಹುಡಿ ಜಡಿ
ಮುಳ್ಳುಗಿಡು ಮಡು ತೆವರು ಮೊಳೆಗಳು
ಹಳ್ಳ ಹಾವಸಿ ಹಾವು ಹುಲಿ ಕಾಡಾನೆ ಕೋಣಗಳು

ಕೊಳ್ಳ ಕುತ್ತುಱು ಹೆಮ್ಮರಂಗಳು
ಪಲ್ಲವಿಸಿ ಜೀರೆಂಬ ಕಾನನ
ವಲ್ಲಿಯುಱಿಸುತ ಬರುತಲಿರ್ದಳು ಮಾಯೆಯಲ್ಲಮನ

ಬಿಸಿಲು ಸುಟ್ಟುರುಗಾಳಿ ದೆಸೆಗಳ
ಮುಸುಗುತಿಹ ಕೆಂದೂಳಿ ಕಾಳ್
ಚ್ಚೆಸೆವ ನಟ್ಟಡವಿಯಲಿ ನಡೆದೈತರುತ ಕಾಲೊಡೆದು
ಬಸವಳಿದು ಬೀಳುತ್ತಲೇಳುತ
ಹಸಿವು ತೃಷೆ ಬಳಲಿಕೆಗಳಲಿ ಧೂ
ಪಿಸುತ ಬಂದಳು ಮಾಯೆ ತಾನಲ್ಲಮನನಱಸುತಲಿ

ಸೂಡುತಲಿ ಬಿಡು ಜಡೆಗಳನು ಕೈ
ಗೂಡುತಲಿ ಕಡವಸ ವಿಭೂತಿಯ
ಗೂಡು ಸಂವರಿಸುತ್ತ ಲಾಕುಳ ಯೋಗವಟ್ಟಿಗೆಯ
ಜೋಡಿಸುತ ಜಪತಪಸಮಾಧಿಯ
ಮಾಡುವವರಾ ಮಾಯೆ ಬರಲೆ
ದ್ದೋಡಿದರು ಹುಲಿಗಂಡ ಹುಲ್ಲೆಗಳಂತೆ ದೆಸೆದೆಸೆಗೆ

ಕರುಣಿಗಳ ಬಲ್ಲಹನು ಬೋಳೆಯ
ರರಸ ಭಜಕರ ಬಂಧುವೆನಿಸುವ
ಪರಮಪಾವನನಲ್ಲಮಪ್ರಭು ತಾನೆ ತನ್ನೊಳಗೆ
ವರ ತಪೋಧನರಂಜಿಕೆಯನಾ
ತರುಣಿಯುರ ಬಳಲಿಕೆಯ ನಾನೇ
ಪರಿಹರಿಸಬೇಕೆನುತಲಾಕ್ಷಣ ಸುಳುಹು ತೋಱಿದನು

ನಿಲಿಸಿ ಭಯ ಬೇಡೆಂದು ತಾಪಸ
ಕುಲಕೆಯಭಯುವ ಕೊಟ್ಟು ಕರುಣದ
ಬಳಕೆಯಲಿ ತಾನವರಿಗೊಬ್ಬ ತಪಸ್ವಿಯಂದದಲಿ
ನಲಿದು ಹರಿತಹ ಮಾಯೆಯನು ಮೂ
ದಲಿಸಿ ಮುರಿದೋಡಿಸುವೆನೆನುತಲಿ
ಸುಳುಹುದೋಱಿದನಾಕೆಗಲ್ಲಮು ಮುನ್ನಿನಂದದಲಿ

ತೃಷೆಗಳಱತುವು ಕಾಣುತಲಿ ಕಡು
ಪಸುಗಳಡಗಿದವಡವಿಯಲಿ ಕಂ
ಪಿಸುತ ಮುಗ್ಗುತ ಕೆಡವುತಲಿ ಮಿಗೆ ಬಂದ ಬಳಲಿಕೆಯು
ಮುಸಕಮಾದುದು ವಿಶ್ರಮಿಸಿದರು
ಶಶಿಮುಖಿಯರೆಯ್ತಂದು ಕಾಣುತ
ಮುಸುಱಿ ಮುತ್ತಿದರಲ್ಲಮನ ಶ್ರೀಪಾದಪಂಕಜವ

ಲೇಸು ಮಾಡಿದೆಯಯ್ಯ ಮಾಯೆಯು
ನೀಸುದಿನ ಮನವೊಲಿಸಿ ಕಡೆಯಲಿ
ಘಾಸಿ ಮಾಡುವದುಚಿತವೇ ನಿನಗೆನುತ ಕೆಳದಿಯರು
ಆ ಸದಾನಂದೈಕಮೂರ್ತಿ ವಿ
ಲಾಸಿಯಲ್ಲಮಲಿಂಗನಿದಿರಿಲಿ
ಸೂಸಿದರು ತಮ್ಮೊಡತಿಯಾಸಱು ಬೇಸಱಿಲ್ಲವನು

ಆರು ಮೊದಲಲಿ ಬಯಸ ಹೇಳಿದ
ರಾರು ಕಾಣುತ ಕರೆಸ ಹೇಳಿದ
ರಾರು ತನ್ನನು ಬಳಿಕುದಾಸಿಸ ಹೇಳಿದವರಾರು

ನಾರಿಯರಿಗಿದು ಸಹಜ ಸಂಚಲ
ಕಾರಣಿಕತನ ತನ್ನ ತಾನೇ
ದೂರಿಸಿದೊಡಾನೇನ ಮಾಡುವೆನೆಂದನಲ್ಲಮನು

ಹೇಳಬಾರದು ನೀನು ಮಾಡಿದ
ಬೇಳುವೆಯ ಬೇಗೆಯನು ಲೋಗರ
ನಾಳವಾಡಿಯೆ ನುಡಿದೆಯಲ್ಲದೆ ನೀನು ಕುಹಕದಲಿ
ಕೀಳಿಲಲಿ ಬಾಯ್ವಿಟ್ಟು ಮಾಯೆಯ
ವೇಳೆಯನು ಕಾಯ್ದಿರ್ದು ಕಡೆಯಲಿ
ಕೀಳು ಮಾಡಿಯೆ ನುಡಿದೆಯೆಂದರು ಸತಿಯರಲ್ಲಮನ

ತಾನೆ ಕಂಗೆಟ್ಟಿರಲು ಕರುಣಿಸಿ
ನಾನು ಸುಳಿದರೆ ನನ್ನನಾರೆಂ
ದೇನುವನು ಭಾವಿಸದೆ ಬೆಬ್ಬನ ಬೆಱತಹೆಂಕರಿಸಿ
ತಾನೆ ತನ್ನ ವಿಕಾರದಿಂದಿರ
ಲೇನು ಮಾಡುವೆ ಬಳಿಕ ಸಾಕೆಂ
ದಾನು ಬಂದೆನು ಬಿಟ್ಟು ತಪ್ಪೇನೆಂದನಲ್ಲಮನು

ಎಂದ ಮಾತನು ಕೇಳಿ ಕಡು ಖತಿ
ಯಿಂದಲಹುದೈ ಧೂರ್ತ ನೀ ಗತಿ
ಯೆಂದು ನಂಬಿದೊಡೊಳ್ಳಿತಾಯಿತು ಬಳಿಕ ಮತ್ತೇನು
ಸಂದ ಸಟೆ ಕುತ್ಸಿತ ಕುಮಂತ್ರದ
ಬಂದಿಕಾಱನು ಚಾಟು ಚಪಳಿಗ
ನೆಂದು ನಾ ಮುಂದಱಿಯೆನೆಂದಳು ಮಾಯೆಯಲ್ಲಮನ

ಕುಟಿಲ ಕುಚ್ಚಿತ ಧೂರ್ತ ದುರ್ಜನ
ವಟಮಟಿಗತನ ಕಪಟ ಕಳವಳ
ಸಟೆ ವಿಕಾರಗಳಲ್ಲಮನವ್ರೋ ತಿಳಿಯೆ ಮಾಯೆಯವ್ರೋ
ದಿಟಕೆ ಬಲ್ಲ ವಿರಿಂಚಿ ಹರಿ ಸುರ
ಕಟಕ ವರಮುನಿ ಸಿದ್ಧ ಸಾಧಕ
ಪಟುಗಳೆಲ್ಲರ ಕೇಳಿ ನೋಡೆನುತಿರ್ದನಲ್ಲಮನು

ಒಳ್ಳಿಯವರ್ಗೆ ನೀನು ಕೋಱಿದ
ರೆಲ್ಲರೆನ್ನಾಧೀನ ಪಕ್ಷದ
ಬಲ್ಲಿದರು ಕೇಳವರುಗಳ ಬಲ್ಲವಿಕೆಗಳ ಕೇಡ
ಎಲ್ಲವನು ಹೇಳುವೆನು ನಿನ್ನಯ
ಸೊಲ್ಲ ಸೋಲಿಸಿ ಸಿಕ್ಕಿಸುವೆನೆನು
ತಲ್ಲಿ ಮಾಯೆ ನಿಜ ಪ್ರತಾಪವನಾಡತೊಡಗಿದಳು

ಹರಿಯಯೆದೆಯನು ಮೆಟ್ಟಿದೆನು ಶಂ
ಕರನರ್ಧಾಂಗದೊಳು ನೆಟ್ಟನೆ
ಹರಿಸುಟಿಗೆಯಾಡಿದೆನು ಬ್ರಹ್ಮನ ಬಾಯ ಮುದ್ರಿಸಿದೆ
ಸುರನರೋರಗರೆಂಬ ಮಱವೆಯ
ಮರುಳ ತಂಡವನೆನ್ನ ತೊತ್ತಿರ
ಶರಣು ಹೊಗಿಸಿದೆನೇನ ಕೇಳುವೆಯೆಂದಳಾ ಮಾಯೆ

ಜಿನುಗು ಮತಿಗಳ ಸಿದ್ಧಸಾಧಕ
ಮುನಿಗಳೆಂಬವದಿರುಗಳನು ನಾ
ಮುನಿದು ಕಚ್ಚುಟ ಕಂತೆ ಬತ್ತಲೆ ಬೋಳು ಜೆಡೆ ಲೋಚು

ಅನಶನವ್ರತ ನಾರು ಬೇರಿಂ
ಬನಿತಱಲಿ ದಂಡಿಸುವೆನಾ ಕಾ
ನನದ ಮರುಳರ ನೇನ ಕೇಳುವೆಯೆಂದಳಾ ಮಾಯೆ

ಆದಿಯಂತವನಱಿಯದೆಲ್ಲರ
ವೇದಿಸಿದೆನೆಂದಕಟ ಗರ್ವಿಸಿ
ಹೋದೆ ನಿನ್ನ ನಿಜಸ್ವಭಾವದ ಮತ್ತತನದಿಂದೆ
ಆದೊಡವರಂತಿರಲಿ ಮಿಕ್ಕಿನ
ವೇದ ಶಾಸ್ತ್ರ ಪುರಾಣವಾಗಮ
ವಾದಿಯಾದವಱಿಂದೆ ಕೇಳೆನುತಿರ್ದನಲ್ಲಮನು

ಬಿಟ್ಟು ಕಳೆ ಬಱುಮಾತ ಶಬ್ದಗ
ಳೊಟ್ಟಲೆಂಬುವು ತನ್ನ ಪಾದದ
ಘಟ್ಟಣೆಯ ಧ್ವನಿಯುವಱಲಾನಿನ್ನೇನ ಕೇಳುವೆನು
ಮುಟ್ಟೆ ತಿಳಿವೊಡೆ ಕೇಳು ನಿನ್ನಯ
ಕಟ್ಟಳೆಯತನವ್ವೆಸೆ ಎನುತಾ
ದಿಟ್ಟೆ ಮಾಯಾದೇವಿ ನುಡಿದಳು ಮತ್ತೆಯಲ್ಲಮನ

ಎಲ್ಲರನು ನೀ ಜಱೆದು ಝಾಡಿಸಿ
ಹೊಳ್ಳುಗಳೆದೊಡೆ ನಿನ್ನ ಲೆನ್ನಲಿ
ಹೊಲ್ಲವೊಳ್ಳಿತನಱಿವ ಮಾತಂತಿರಲಿ ಹೇಳೊಂದ
ಬಲ್ಲೆಯಾದೊಡೆ ನೀನು ನಿನ್ನಯ
ಖುಲ್ಲತನವನು ಬಿಟ್ಟು ನಿರ್ಮಳ
ದಲ್ಲಿ ಮಾತಾಡೆಂದು ನುಡಿದನು ಮಾಯೆಗಲ್ಲಮನು

ಹರಿಹರಬ್ರಹ್ಮಾದಿಗಳನೆ
ಲ್ಲರನು ನಿನ್ನಾಧೀನವೃತ್ತಿಯು
ಳಿರಿಸಿ ಮಿಗೆ ಜೋಡಾಡಿ ಕಾಡುವೆನೆಂದು ನೀ ನುಡಿದೆ
ಮರುಳೆ ನಿನ್ನನದಾರು ನಾನಾ
ಪರಿಯಲಾಡಿಸುವವರು ನೀನಿದ
ಪರಿಕಿಸದೆ ಗರ್ವದಲಿ ನುಡಿವರೆ ಮಾಯೆ ಕೇಳೆಂದ

ಆರನಾರಾಡಿಸುವರೆಂಬುದ
ನಾರು ಬಲ್ಲರು ಸಾಕು ಬಱಿಯ ವಿ
ಚಾರವಂತಿರಲಿನ್ನದೇ ಹಱಿಮಾತನಾಡಿದರೆ
ಸಾರಲಱಿವವೆ ನಮಗೆ ನಮ್ಮ ಮ
ನೋರಥಂಗಳು ನಿನ್ನ ಧೂರ್ತ ವಿ
ಕಾರವೆಲ್ಲವ ಬಿಟ್ಟು ಕೃಪೆ ಮಾಡೆಂದಳಾ ಮಾಯೆ

ಮಾಡಿದನಿತಱ ಕರ್ಮಫಲ ಕೈ
ಗೂಡಿತುಳ್ಳುದು ನಿನಗದೇನನು
ಬೇಡುತಿಹೆ ಬೇಸಱದೆ ಬಱುದೆಗೆ ಬಂದು ಬೆಂಬಿಡದೆ
ಕಾಡಬೇಡಿನ್ನೇಳು ಸಖಿಯರ
ಕೂಡಿಕೊಳುತಲಿ ಮರಳಿ ನಿನ್ನಯ
ಬೀಡ ಸಾರುವದೊಳ್ಳಿತೆಂದನು ಮಾಯೆಗಲ್ಲಮನು

ಭಾಷೆ ಸಲ್ಲದೆ ಹೋಯಿತೆನ್ನಯ
ವಾಸಿ ವರ್ಧಿಸಿ ಹೊತ್ತುತಿದೆ ಕೈ
ಲಾಸದವರಿದ ಕೇಳಿ ನಗುವಂತಾಯಿತೇ ಎನಗೆ

ಈಸು ಧಾವತಿಯಿಂದೆ ನಾ ಕಡು
ಘಾಸಿಯಾದೆನು ಬೆಂದ ಹುಣ್ಣನು
ಕೀಸುವರೆ ಕಂಬಿಯಲಿ ಕೇಳಕಟೆಂದಳಾ ಮಾಯೆ

ಮಿಕ್ಕು ಮಿಗೆ ಸಾಸುವೆಯ ರಾಶಿಯ
ನೊಕ್ಕಿದೆತ್ತಿಗೆ ಮೇದು ಮೆಲುಕಿಱಿ
ವಕ್ಕಱಿಂಟೇ ಮರುಳೆ ನೀನಾ ವಿಧಿಯ ಪರಿಗಳಲಿ
ಹೊಕ್ಕ ಹೋರಟೆಗೊಂಡು ಕಾಮದ
ಲುಕ್ಕಿ ಬಳಿಕಿನ್ನೇನ ಕೃಪೆಯನು
ಲೆಕ್ಕಿಸಲು ಕೈಸಾರಬಲ್ಲುದೆ ಮಾಯ ಕೇಳೆಂದ

ಆವ ಪರಿಯಿಂದಾದೊಡೇನೈ
ದೇವಪೂಜೆಯ ಮಾಡಿದೊಡೆ ಸಂ
ಭಾವಿಸಲು ಬೇಡವೆ ಮದೀಯ ಮನೋರಥಾದಿಗಳ
ಭಾವಿಸಲು ಬರುತಿದೆ ನಿರರ್ಥಕೆ
ದಾವತಿಯೆ ಕಡೆತನಕ ದಿಟಕೆಯು
ದಾವ ಕೊಱತೆಯ ನಾನು ಮಾಡಿದೆನೆಂದಳಾ ಮಾಯೆ

ತರಳೆ ತನ್ನಯ ಹೊನ್ನ ಸಲ್ಲದೆ
ತಿರುಗಿ ಬಂದೊಡೆಯಕ್ಕ ಸಾಲೆಯು
ದುರುಳತನದಲಿ ಬಯ್ಯಬಹುದೇ ನೀನು ಮತಿಗೆಟ್ಟು
ಹರನನರ್ಚಿಸುವಂಗಭೇದಾಂ
ತರವನಱಿಯದೆ ಸಟೆಯ ಭಕ್ತಿಯ
ಭರದಲೇತಕೆ ಫಲವ ಬಯಸುವೆ ಮಾಯೆ ಕೇಳೆಂದ

ನಾನು ನಿನ್ನಲಿ ಸುಖವ ಸುಱಿದು ಸು
ಮಾನದಲಿ ನಿನ್ನಿಂದ ಶಿವತ
ತ್ವಾನುಭಾವದ ನಿಜವನಱಿಯದೆನ್ನಯ ಪ್ರತಿಜ್ಞೆಯನು
ಊನವಿಲ್ಲದೆ ಸಲಿಸಿ ಶಿವನಾ
ಸ್ಥಾನದಲಿ ನಾ ಮೆಱೆವೆನೆಂಬಭಿ
ಮಾನದಲಿ ನಂಬಿರ್ದೆನೆಂದಳು ಮಾಯೆಯಲ್ಲಮನ

ಹಡೆವ ಸೂಳೆಗೆ ಸೊಗಸು ಹುಟ್ಟದೆ
ಗುಡಿಯ ಸುಡುವಂದದಲಿ ನಿಜ ಜಂ
ಜಡದಲಿನ್ನನವಾಗಿ ಭಕ್ತಿಯ ಮಾಡಿ ಸಂಫಲವ
ಪಡೆಯಲಿಲ್ಲದೆ ಬಂದು ನೀ ಬಱು
ನುಡಿಗಳಿಂದಲಿ ನಮ್ಮ ಮೆಲ್ಲನೆ
ತೊಡಕಿಕೊಂಡೊಡೆ ಸಿಕ್ಕನಲ್ಲಮ ಮಾಯೆ ಕೇಳೆಂದ

ನಮ್ಮನೊಲ್ಲದುದಲ್ಲದೀ ಪರಿ
ನಮ್ಮನೆಲ್ಲರ ಮುಂದೆ ಭಂಗಿಸಿ
ಹೆಮ್ಮೆಗೆಡಿಸುವ ಪರಿಯ ನೋಡಾ ಎನುತ ಮನ ಮಱುಗಿ
ಇಮ್ಮೆ ಬೆಂದವಳಿದ್ದಲಂತಿರೆ
ಹಮ್ಮವಿಸಿಯೊಱುಗತಲಿ ವಿಮಳೆಯ
ನೆಮ್ಮಿದಳು ನಿಲಲಾಱದಾಳಾಪಿಸುತಲಾ ಮಾಯೆ

ಬೆಱುಗುವಡೆದಿರೆ ನೆಯ್ದಿಲೆಗೆ ನೇ
ಸಱಿನ ನೆಮ್ಮುಗೆಯಾದ ತೆಱನಲಿ
ಮುಱಿವಡೆದ ಮಾಯಾಂಗನೆಯ ಮುಖಭಂಗವನೆ ಕಂಡು

ಮಱುಗುತಿರ್ದರು ಕೂಡೆ ಕೆಳದಿಯ
ರುಱುಬಿ ಸುಮ್ಮನೆ ಮಾಱು ಮಾತಿಗೆ
ಹಱಿವನೆಣಿಸುತ ವಿಮಳೆ ಬಳಿಕಿಂತೆಂದಳಲ್ಲಮನ

ಶರಣಜನ ರಕ್ಷಾಮಣಿಯೆ ಕಿಂ
ಕರಚಕೋರಸುಧಾಕರನೆ ಭಾ
ಸುರದಯಾಂಭೋನಿಧಿಯೆ ನೀನೀ ಸ್ತ್ರೀಯ ತನುಮನವ
ಒರಿಸಿ ನೋಡಿದೊಡಲ್ಲಿ ಭಾವಿಸೆ
ಹುರುಳು ಬಳಿಕೇನುಂಟು ನಿನ್ನಯ
ಕರುಣವಾಕೆಯ ಹರಣವೆಂದಳು ವಿಮಳೆ ವಿನಯದಲಿ

ಬಾಲೆ ನೀರಿಗೆ ಹೆಪ್ಪನೆಱೆದರೆ
ಹಾಲಿನಂತಿರೆ ಹೆತ್ತು ಭುಂಜಿಸಿ
ಬಾಳಿದವರಾರುಂಟು ಭಾವಿಸಲಾ ಪ್ರಕಾರದಲಿ
ಕಾಳು ಮತಿಗಳಿಗಿನಿತು ಬುದ್ಧಿಯ
ಹೇಳಿದರೆ ಫಲವೇನು ಸಾಕೀ
ಖೂಳೆಗಾನಿನ್ನೇನ ಮಾಡುವೆ ವಿಮಳೆ ಕೇಳೆಂದ

ಕೀಳುಗಬ್ಬುನವೆಣ್ಣ ಕೋಪಿಸಿ
ಕಾಲಲೊದೆದೊಡೆ ಮೇಣು ಕರುಣಿಸಿ
ತೋಳಲಪ್ಪಿದೊಡೇನು ಪರುಷದ ಗಂಡನದಱಂತೆ
ಬಾಲೆಗೆಂತಾದೊಡೆಯು ನಿನ್ನ ಸ
ಮೇಳ ಘಟಿಸಿದ ಬಳಿಕ ಮಾಯೆಯ
ಪಾಲಿಸಲು ಬೇಕೆನುತ ನುಡಿದಳು ವಿಮಳೆಯಲ್ಲಮಗೆ

ವನಿತೆ ನಿನ್ನಯ ಮಾತಹುದು ಕ
ಬ್ಬುನವದಾದೊಡೆ ಪರುಷ ಮುಟ್ಟಲು
ಕನಕವಹುದಲ್ಲದೆ ವೃಥಾ ಹಳೆ ಹಂಚು ಹೊನ್ನಹುದೆ
ಮನಸು ಸಂಚಲವಾದ ಮಾಯಾಂ
ಗನೆಯದೇನನು ಮುಟ್ಟಿ ಮಾಡಿದೊ
ಡಿನಿತು ಸಂಫಲವಾಗಲಱಿಯದು ವಿಮಳೆ ಕೇಳೆಂದ

ದೇವ ತಪ್ಪಿದೊಡೇನು ನೀನು ಕೃ
ಪಾವಲೋಕನದಲಿ ನಿರೀಕ್ಷಿಸಿ
ದೇವಿಯರ ಹೂಣಿಕೆಯ ಸಲಿಸಿದರೇನು ಕುಂದಹುದೆ
ದೇವತನಕೂಣೆಯವೆ ಬಱಿದೆ ವೃ
ಥಾ ವಿಳಾಸದ ಮಾತ ಬೀಱಿದೆ
ಕಾವುದೈ ಕರುಣದಲಿ ಮಾಯೆಯನೆಂದಳಾ ವಿಮಳೆ

ಒಂದು ಬೀಜವ ಬಿತ್ತಿ ಮೇಲ್ಮ
ತ್ತೊಂದು ಫಲವನು ಬಯಸಿ ಬಾತೊಡೆ
ಬಂದುದಹುದೇ ತನಗೆ ದಿಟವೀ ಮಾಯೆ ಮರುಳಾಗಿ
ಮುಂದುಗಾಣದೆ ಮದದ ತಾಮಸ
ದಿಂದೆ ಚಂಚಲಭಕ್ತಿಭರದಲಿ
ಒಂದೊಡುಂಟೇ ಸಂಫಲಂಗಳು ವಿಮಳೆ ಕೇಳೆಂದ

ಆದೊಡೆಲೆ ಘನಮಹಿಮ ನಿನ್ನಯ
ಪಾದಗಳನೆಂತಾದೊಡೆಯು ಸಂ
ಪಾದಿಸಿದ ಬಳಿಕಿನ್ನು ನಿನ್ನಯ ಕರುಣವಿದ್ದಂತೆ

ಕಾದು ರಕ್ಷಿಸು ಮನಸು ಬಂದೋ
ಪಾದಿಯಲಿಯೆಂದೆನುತ ಮಧುರಾ
ಮೋದ ವಚನವ ಸುರಿವುತಿರ್ದಳು ವಿಮಳೆಯಲ್ಲಮಗೆ

ವಿಮಳೆ ವಿಮಳೆಯೆನಿಪ್ಪ ಹೆಸರನು
ಕಮಳಸಂಭವ ನಿನಗೆ ಸಲಿಸಿದ
ನಮಳಮತಿಯವನಹುದು ಚಾಗುರೆ ಎನುತ ಪರಿಣಮಿಸಿ
ಕ್ರಮದಲಿನ್ನಾದೊಡೆಯು ಮಿಗೆ ವಿ
ಶ್ರಮಿಸಬೇಕೆಂದೆನುತ ಬಳಿಕ
ಲ್ಲಮನು ಮಿಗೆ ವಿನಯದಲಿ ಮಾಯಾದೇವಿಗಿಂತೆಂದ

ಕಾಮವೆತ್ತಲು ಪರಮತತ್ವದ
ಸೀಮೆಯೆತ್ತಲು ತಿಮಿರವೆತ್ತಲು
ತಾಮರಸಸಖನೆತ್ತಲರಿಸಿನವೆತ್ತ ಬಿಸಿಲೆತ್ತ
ಭ್ರಾಮಕದ ನುಡಿ ಸಾಕು ನೀನೆ
ತ್ತಾ ಮಹಾಘನವೆತ್ತ ಮರುಳೇ
ಕ್ಷೇಮದಲಿ ನೀ ಬಂದ ಬಟ್ಟೆಯಲಬಲೆ ಹೋಗೆಂದ

ಕನಸು ಮನಸಿನೊಳಾಗಳೆನ್ನಯ
ತನುವಿನಲಿ ನೀ ಸುಳಿದು ಮಚ್ಚಿಸಿ
ಯೆನಿತು ಥಾವತಿಗೊಳಿಸಿ ನಿಷ್ಕರುಣದಲಿ ನೀನೆನ್ನ
ಕನಲಿ ನುಡಿದೊಡೆ ನಾನು ಬಿಡುವೆನೆ
ತನಗೆ ತತ್ತಡೆ ಭಾವಿಸಲು ಸಾ
ವನಿತು ಬಂದೊಡೆ ಬರಲಿ ಬಿಡೆ ನಾನೆಂದಳಾ ಮಾಯೆ

ಕನಸಿನಲಿ ಚೀಳೂಜಿದೊಡೆ ವೇ
ದನಿಸಿತೆಂದಿರದೆದ್ದು ನರಳುವ
ಮನುಜರುಂಟೇ ಮರುಳೆ ನಿನ್ನ ಮನೋವಿಕಾರಗಳು
ನಿನಗೆ ತೋಜಿದೊಡೆಮ್ಮೊಳೇತಕೆ
ಮನಕತವ ನೀ ಮಾಡುತಿಹೆ ನಾ
ವಿನಿತು ಗಸಣೆಯ ಗೊಡವೆಗಾಜಿವು ಮಾಯೆ ಕೇಳೆಂದ

ವಾಸಿ ಹುಟ್ಟಿದ ಬಳಿಕ ನಾನಿ
ನ್ನೇಸುದಿನವಿದ್ದಾದೊಡೆನ್ನಯ
ಭಾಷೆಯನು ನಾನುತ್ತರಿಸಬೇಕಲ್ಲದುಳಿದಂತೆ
ಆಸೆಯಿಲ್ಲದೆ ತಿರುಗಿದೊಡೆ ಹೆಂ
ಗೂಸುತನಕದು ಹಾನಿಯಾ ಕೈ
ಲಾಸಕಾನೆಂತೆಯ್ದುವೆನು ಕೇಳೆಂದಳಾ ಮಾಯೆ

ಕಡಲನೀರುಗಳೆಲ್ಲವಮೃತದ
ಮಡುಗಳಾದರೆಯುಹವು ಸುರಗಿರಿ
ಕುಡಿವಿಡಿದು ಹಬ್ಬಿದೊಡೆ ಹಬ್ಬುವದವನಿಮಂಡಲದ
ಗಿಡುಗಳೆಲ್ಲವು ಕಲ್ಪತರುವಾ
ಮೊಡೆಯುಹವು ತತ್ತದನುಗಾಲಕೆ
ಮಡದಿ ಮಾಯೆಗೆ ಪರಮ ತತ್ವಜ್ಞಾನವಿಲ್ಲೆಂದ

ನುಡಿದು ನುಣ್ಣನೆ ನೀನು ಮೆಲ್ಲನೆ
ಸಡಿಲಿ ಹೋದರೆ ನಾನು ನಿನ್ನನು
ಬಿಡುವೆನೇ ಕೇಳೆನ್ನ ಪೈಜೆಯ ಸಲಿಸಿದನ್ನಬರ

ಒಡಲು ನಿನಗಿಲ್ಲೆಂಬ ಬಿಂಕದ
ಬೆಡಗು ಬೇಡಿನ್ನೇನ ಮಾಡಿಯು
ತುಡುಕಿದಲ್ಲದೆ ಮಾಣೆನೆಂದಂಗೈಸಿದಳು ಮಾಯೆ

ಬಯಲ ಬಂಧಿಸಲೆಂದು ಕೃತನಿ
ಶ್ಚಯವ ಮಾಡಲು ಸಿಕ್ಕಬಲ್ಲುದೆ
ನಿಯತವೆನ್ನನು ಹಿಡಿದುಕೊಂಬೊಡೆ ನೋಡು ನೀನೆನುತ
ಪ್ರಿಯದಲಾಗಳೆ ತನ್ನ ನಿಜ ನಿ
ರ್ಣಯವ ನಿರ್ಮಿಸಿ ನಿಮಿಷದಲಿ ನಿ
ರ್ವಯಲಜಾಲವ ಬೀಸಿ ಹೋದನು ಮಾಯೆಗಲ್ಲಮನು

ಜಾಱಿದನು ಬಳಿಕಾತನೀಕೆಗೆ
ಹೇಱಿದುದು ಕಡು ದುಗುಡ ಸಖಿಯರು
ನೀಱೆಯನು ಸಂತೈಸಿದರು ನಾನಾ ಪ್ರಕಾರದಲಿ
ಗಾಱುದೊಱನ ಮಾಯೆಗೀಯೆಗೆ
ತೋಱಿಸುವನೇ ತನ್ನ ನಿಜವನು
ಮೀಱಿ ಮೀಸಲನಲ್ಲಮಪ್ರಭು ಗುರು ಗುಹೇಶ್ವರನು

**ಚಾಮರಸ–ಪ್ರಭುಲಿಂಗಲೀಲೆ**
(೧೪೩೦)

## ೬೯. ಪಾಂಡುರಾಜನ ದುರಂತ

ಕೇಳು ಜನಮೇಜಯ ಧರಿತ್ರೀ
ಪಾಲ ಶತಶೃಂಗಾದ್ರಿಯಲಿ ಭೂ
ಪಾಲನಿದ್ದನು ತನ್ನ ವೀರಕುಮಾರಕರು ಸಹಿತ
ವ್ಯಾಳಮೃಗಶಾರ್ದೂಲವನಗಜ
ದಾಳಿಭಯವನು ಪರಿಹರಿಸಿ ಮುನಿ
ಜಾಲಕಾಶ್ರಮದೊಳಗೆ ಸುಖಮಯನಾಗಿ ನೃಪನೆಸೆದ

ಸುತವಿನೋದದ ಸಿರಿಗೆ ದಿವಿಜರ
ಪತಿಯ ಸಿರಿ ತೊತ್ತೆಂದು ವಿಮಳ
ವ್ರತತಪೋಲಕ್ಷ್ಮಿಗೆ ವಿಲಾಸಿನಿ ಮುಕ್ತಿವಧುವೆಂದು
ಯತಿಪದಾಂಬುಜನಿತ್ಯಸೇವಾ
ಸತಿಗೆ ದಾಸಿ ಜಗತ್ತ್ರಯಾಧಿ
ಷ್ಠಿತಪದವಿಯೆಂದುಬ್ಬಿದನು ಕಲಿ ಪಾಂಡು ವಿಪಿನದಲಿ

ವರುಷ ಹದಿನಾಱಾಯ್ತು ಧರಣೀ
ಶ್ವರನ ಹಿರಿಯ ಮಗಂಗೆ ಭೀಮಗೆ
ವರುಷ ಹದಿನೈದರ್ಜುನಗೆ ಹದಿನಾಲ್ಕು ಹದಿಮೂಱು
ಕಿಱಿಯರಿಬ್ಬರಿಗನಿಬರಾಮುನಿ
ವರರಿನಧ್ಯಯನಾದಿವಿದ್ಯಾ
ನಿರತರಾದರು ಬಂದುದಂದು ವಸಂತಮಯದಿವಸ

ತೆಗೆದುದಗ್ಗದ ತಂಪು ನದಿಸರ
ಸಿಗಳ ತಡಿಯಲಿ ಹೆಜ್ಜೆಯಾದುವು
ಹಗಲು ಹಂಸೆಯು ನೆಳಲು ಗೊಂಡುದು ಬಯಸಿ ಹಿಮಜಲವ

ಸೊಗಸಿದುವು ನೆಳಲುಗಳು ದೂರಕೆ
ಸೆಗಳಿಕೆಗಳಗ್ಗಳಿಸೆ ತಂಗಾ
ಳಿಗೆ ವಿಹಾರಿಸಿ ಮೆಯ್ಯ ತೆತ್ತುದು ಕೂಡೆ ಜನನಿಕರ

ಯೋಗಿಗೆತ್ತಿದ ಖಡ್ಗಧಾರೆ ವಿ
ಯೋಗಿಗೊಡ್ಡಿಹ ಸಬಳ ಸಕಳ
ರಾಗಿಗಳ ಹೆಡತಲೆಯ ದಡಿ ನೆ ರಿಗಲಗಣಸು
ಆಗಮಿಕರೆದೆಶೂಲ ಗರ್ವಿತ
ರಾಗಿಗಳ ಗಳನಾಳ ವಗ್ಗದ
ಭೋಗಿಗಳ ಕುಲದೈವವೆಸೆದತು ಕುಸುಮಮಯಸಮಯ

ಮೊಱೆವ ತುಂಬಿಯ ಗಾಯಕರ ನಯ
ಸರದ ಕೋಕಿಲಪಾಠಕರ ಬಂ
ಧುರದ ಗಿಳಿಗಳ ಪಂಡಿತರ ಮಾಮರದ ಕರಿಘಟೆಯ
ಅರಳಿದಬುಜದ ಸತ್ತಿಗೆಯ ಮಂ
ಜರಿತಕುಸುಮದ ಚಾಮರದ ಭಾ
ಸುರವಸಂತನೃಪಾಲ ನಡೆದನು ಪಾಂಡುವಿನ ಮೇಲೆ

ಫಲಿತಚೂತಕದಿಂಪುಗಳ ನೆಱೆ
ತಳಿತಶೋಕೆಯ ಕೆಂಪುಗಳ ಪರಿ
ದಳಿತಕಮಲದ ಕಂಪುಗಳ ವನವನದ ತಂಪುಗಳ
ಎಳಲತೆಯ ನುಂಪುಗಳ ನವಪರಿ
ಮಳದ ಪವನನ ಸೊಂಪುಗಳ ವೆ
ಗ್ಗಳಿಕೆ ಝಳಪಿಸೆ ಹೊಯ್ವು ಸೆಳೆದುದು ಜನದ ಕಣ್ಮನವ

ಪಸರಿಸಿತು ಮಧುಮಾಸತಾವರೆ
ಯೆಸಳ ದೋಣಿಯ ಮೇಲೆ ಹಾಯ್ದುವು
ಕುಸುಮಶರನುಬ್ಬರದ ತೊಱೆಯನು ಕೂಡಿ ತುಂಬಿಗಳು
ಒಸರ್ವ ಕರದಂಡದ ಪರಾಗದ
ಕೆಸರಲದ್ದವು ಕೊಂಚೆಗಳು ಹಗ
ಲೆಸೆದ ದಂಪತಿವಕ್ಕಿ ಸಾರಸರಾಜಹಂಸೆಗಳು

ಜಗವ ಹೊರೆದುದು ಬಹಳ ಪರಿಮಳ
ದೊಗುಮಿಗೆಯ ತಂಗಾಳಿ ವನವೀ
ಧಿಗಳ ವಳಯುವ ಹೊರೆದು ಮರಳುವರಿಲ್ಲ ವಿರಹಿಗಳು
ಹೊಗುವ ಕಾಮನ ದಳದ ಚೂಣಿಯ
ಸೊಗಡು ಹೊಯ್ದೊಡೆ ಕೈದುವಿಕ್ಕಿತು
ವಿಗಡಮುನಿಜನಕೇನನೆಂಬೆನು ನೃಪತಿ ಕೇಳೆಂದ

ಆವಸಂತದೊಳೊಮ್ಮೆ ಮಾದ್ರೀ
ದೇವಿ ವನದೊಳಗಾಡುತಿರ್ದಳು
ಹೂವಿನಲಿ ಸರ್ವಾಂಗಶೃಂಗಾರದ ವಿಳಾಸದಲಿ
ಆವಳಿವಳೊರ್ವಶಿಯೊ ರಂಭೆಯೊ
ದೇವವಧುಗಳ ಸುಱೆವೊ ತಾನೆಂ
ನಾವಚಲುವಿಕೆ ಶಿವ ಶಿವಾ ಯೆಂದರಸ ಬೆಱಗಾದ

ತಾಗಿದುದು ಕಾಮನ ಶರನಿಕರ
ಲಾಗುವೇಗಲೆಂತುಟೋ ತೆಗೆ
ಪೂಗಣೆಗಳೈದಲ್ಲಿ ರೋಮಗಳೆಲ್ಲ ಬಾಣಮಯ

ವಾಗೆ ನಟ್ಟವು ಕಣೆಗಳೆಂಬವೊ
ಲಾಗಱಿವನಱಿಪಿದನು ಪ್ರಜ್ಞಾ
ಸಾಗರಂಗಳುಮಧ್ಯಕಟಿಜಾನ್ವಂಘ್ರಿ ಮಿತವಾಯ್ತು

ಮಱೆದು ಹಿಂದೆಲ್ಲವನು ಕುಂತಿಯ
ನಱಿಯಲೀಯದೆ ಮೆಲ್ಲಮೆಲ್ಲನೆ
ತುಱುಗಿದೆಳೆಲತೆವನದಲಾಡುವ ಸತಿಯ ಸಾಱಿದನು
ಸೆಱಗ ಹಿಡಿದರೆ ಬೇಡಬೇಡೆಂ
ದೆಱಗಿದಳು ಚರಣದಲಿ ತರುಣಿಯ
ತುಱುಬ ಹಿಡಿದೆತ್ತಿದನು ಹೆಣಗಿದನೊಡನೆ ಝೋಂಪಿಸಿದ

ಕೊಂದೆಲೈ ಕಡು ಪಾಪಿ ಮಱೆದಾ
ಹಿಂದೆ ಮಾಡಿದ ಮೃತ್ಯುವನು ಮುನಿ
ಯೆಂದ ನುಡಿ ಹೊಳ್ಳಹುದೆ ಸುಡು ದುರ್ವಿಷಯಕೆಳಸಿದೆಲೈ
ಬೆಂದುದೇ ನಿನ್ನಱಿವು ಧೈರ್ಯವ
ನಿಂದು ನೀಗಿದೆ ಯಕಟ ನಿನ್ನಯ
ನಂದನರಿಗಾರುಂಟೆನುತ ಹೆಣಗಿದಳು ಲಲಿತಾಂಗಿ

ಕೊಂಬುವೇ ಬಯಲಱಿತಗಿಱಿತದ
ಡೊಂಬಿಗನಾಗಮನೀತಿಗೀತಿಯ
ಶಂಬರಾರಿಯ ಸಬಳವಲ್ಲಾ ಬೇಗೆ ವೋಹಿದುದು
ತುಂಬಿದೊಡೆ ಮಗುಚಿದೊಡೆ ಮಱುಮೊನೆ
ಗೊಂಬುದೆಂಬವೊಲವನಿಪತಿ ಯೊ
ತ್ತಂಬರದಿ ಹಿಡಿದಬಲೆಯನು ಕೂಡಿದನು ಕಳವಳಿಸಿ

ಆಸುಖದ ಝೋಂಪಿನಲಿ ಮಱೆದವ್ರೊ
ಲೋಸರಿಸಿದುದು ವದನಕಂಗಳು
ಪೈಸರಿಸಿದವು ತೆಕ್ಕೆ ಸಡಲಿತು ದೇಹ ಬಾರಿಸಿತು
ಸೂಸಿದುದು ನಿಟ್ಟುಸುರು ರಾಣೀ
ವಾಸದುರದಲಿ ಕದಪನಿಟ್ಟು ಮ
ಹೀಶನೊಱಗಿದ ಹದನ ಕಂಡಳು ಮಾದ್ರಿ ಭೀತಿಯಲಿ

ಅಕಟ ಪಾಂಡುಮಹೀಶ ವಿಷಕ
ನ್ನಿಕೆಯೆನೆನ್ನನು ಮುಟ್ಟಿದ್ದೆ ಬೇ
ಡಕಟ ಕೆಡಿಸದಿರೆಂದೆನೇ ತಾನಱಿಯನೇ ಹದನ
ಪ್ರಕಟ ಕುರುಕುಲತಿಲಕರನು ಬಾ
ಲಕನಾರಿಗೆ ಕೊಟ್ಟೆ ತನ್ನೊಡ
ನಕಟ ಮುನಿದ್ದೆ ಮಾತನಾಡೆಂದೊದಱಿದಳು ಮಾದ್ರಿ

**ಕುಮಾರವ್ಯಾಸ–ಭಾರತ**
(೧೪೩೦)

# ೭೦. ದ್ರೌಪದೀ ಸ್ವಯಂವರ

## ವೈವಾಹರಚನೆ

ಧರಣಿಪತಿ ನಿಜಸುತೆಯ ರೂಪೋ
ತ್ಕರದ ಸೌಭಾಗ್ಯದ ನಿರಂತರ
ಪರಮಶೋಭಾನುಗುಣದಲಿ ರಚಿಸಿದನು ಪಟ್ಟಣವ

ಭೂಮಿಪತಿ ಕೇಳ್ ನಿಮ್ಮ ಪಿತನ ಪಿ
ತಾಮಹರು ಧೌಮ್ಯಾಶ್ರಮಕೆ ಬಂ
ದಾಮುನೀಂದ್ರನ ಕರೆದುಕೊಂಡರು ಖಚರ ವಚನದಲಿ
ರಾಮಣೀಯಕವಪ್ಪ ಶಕುನ
ಸ್ತೋಮವನು ವಿವರಿಸುತ ಹೊಕ್ಕರು
ಭೂಮಿಲಂಬದ ನೃಪರ ನೆರವಿಯ ದ್ರುಪದಪಟ್ಟಣವ

ಭರದಿನೈತಂದಖಿಳಭೂಮಿಾ
ಶ್ವರರ ಘನಚತುರಂಗಪದಹತ
ಧರಣಿನಿರ್ಗತರೇಣುಪಟಲದ ರಾಗಸಂಗದಲಿ
ಅರುಣಮಯವಾಯ್ತಖಿಳಜಗವೀ
ಸರಸಿಜಾಕ್ಷಿಯ ನೆನೆದು ಸಚರಾ
ಚರದ ಮುಖದಲಿ ರಾಗರಸವುಬ್ಬರಿಸಿದಂದದಲಿ

ತರಣಿಗುಂಟೀ ಸಮಯವನಿಲಗೆ
ತೆರಹುಗೊಡುವವರಾರು ಗಗನೇ
ಚರರ ಗಮನಸ್ತಂಭವೆತ್ತಣ ಮಾತು ಖಗಕುಲಕೆ

ನೆರೆದ ಪಲ್ಲವಸತ್ತಿಗೆಯ ಝು
ಲ್ಲರಿಯ ಸಿಂಧದ ಸೆಳಯ ಘನಸೀ
ಗುರಿಯ ಸಬಳದಸಾಲಚಮರಂಗಳ ವಿಡಾಯಿಯಲಿ

ಕೇರಿಕೇರಿಯ ಬೀದಿಗಳ ಪ
ನ್ನೀರಚಳಯದ ಕಳಸಕನ್ನಡಿ
ಯೋರಣದ ಸೂಸಕದ ಮುತ್ತಿನ ಮಕರತೋರಣದ
ಓರಣದ ಹೊಂಗಳಸದಖಿಳಾ
ಗಾರಪಙ್ಕ್ತಿಯ ಸೋಮವೀಧಿಯ
ಸೂರವೀಧಿಯ ಶೋಭೆಯಲಿ ರಚಿಸಿದರು ಪಟ್ಟಣವ

ತೀವಿದುವು ಹೊಂಗೆಲಸಗತಿಯಲಿ
ಲೋವೆಗಳು ಚೈತನ್ಯಮಯಚಿ
ತ್ರಾವಳಿಯ ಬೆಸುಗೆಗಳಲೆಸೆದುವು ಭವನಭಿತ್ತಿಗಳು
ಹೂವಿನರಳಿನ ಹರಹಿನಲಿ ರ
ತ್ನಾವಳಿಗಳೊಪ್ಪಿದುವಗರುಧೂ
ಮಾವಳಿಯ ಧಾಟಿಯಲಿ ಮಘಮಘಿಸಿದುದು ಮೇಘಚಯ

ಕಾರಣೆಯ ಕುಂಕುಮದ ಸಾದಿನ
ಸಾರಣೆಯ ನೆಲಗಟ್ಟುಗಳ ಕ
ರ್ಪೂರಧೂಳಿಯ ಹೊರೆವುಗಳ ಪನ್ನೀರ ಪಕ್ಕಲೆಯ
ಚಾರುಚಳಯದ ಕೆಸರಿಡುವ ಕ
ಸ್ತೂರಿಗಳ ಪೂರಾಯಪರಿಮಳ
ಭಾರದಲಿ ಬಿಜುಗಾಳಿ ಕುಸಿದುದು ಹೇಟಲೇನೆಂದ

ಕೀಲಿಸಿದ ಪಟ್ಟಿಗಳ ದಿವ್ಯದು
ಕೂಲದಲಿ ಹೊಂಬಾಳೆ ತೆಱಿಗಳ
ಚೂಳಿಕೆಯ ಕನ್ನಡಿಯ ತೋರಣದೆರಡುಪಕ್ಕದಲಿ
ಮೇಲು ಮುತ್ತಿನ ಸೂಸಕದ ನೇ
ಪಾಳಚಮರಿಯಡಾಳಿಗಳ ಸಂ
ಪಾಳಿಯಲಿ ಪರುಠವಿಸಿದರು ವೈವಾಹಮಂಟಪವ

ಝಳವ ಝೋಂಪಿಸಿ ಬೀಸಿದುವು ತಂ
ಜೆಲರ ಬೀಸಣಿಗೆಗಳು ಪರಿಮಳ
ಕಲಿತಮುಕರಂದದಲಿ ಸಾದಿನ ತುಹಿನರೇಣುಗಳ
ಸುಳಿವ ಸುತ್ತಣ ಸಾಲಭಂಜಿಕೆ
ಗಳಲಿ ಸೂತ್ರಿಸಿ ರಚಿಸಿದರು ಮಂ
ಗಳದ ರಿಂಗಣ ಝೂಡಿಸಿತು ವೈವಾಹರಚನೆಯಲಿ

ಬಱಿದ ಸುಧೆಗಳ ಬಾವಿಗಳ ಪ
ಕ್ಕಲೆಯ ಪನ್ನೀರುಗಳ ಹಿಡಿದುವು
ಹೊಳೆವ ಕೈರಾಟಣದ ಕಾಂಚನಮಯದ ದೋಣಿಗಳ
ತಳುಕು ಬಿಗಿದುವು ಕೊಪ್ಪರಿಗೆಗಳ
ವಳಯದಲಿ ನವಯಂತ್ರಗಳ ಪು
ತ್ತಳಿಗಳೇ ನೀಡುವುವು ಬೇಡಿದವರ್ಗೆ ವಸ್ತುಗಳ

ತಾಳಗತಿ ಸನ್ಮೋಹನದ ಮಱಿ
ಗಾಲವೊ ಒದಗಿದ ರಸಾಳಿಯ
ಕಾಲುವೆಯೊ ನವರಸದ ಬಂಧದ ಸಾರಸಂಗತಿಯೊ

ಆಲಿಗಳಿಗಾಯುಷ್ಯಫಲ ಬೇ
ತಾಳಿಗಳ ನರ್ತನವೊ ಸೊಗಸಿನ
ಮೇಳವಣಿಗಳ ಬೇಂಟೆಯಾಯಿತು ದ್ರುಪದಪುರಿಯೊಳಗೆ

ಕವಿಗಮಕಿವಾದಿಗಳು ವಾಗ್ಮಿ
ಪ್ರವರಯಾಜ್ಞಿಕ ಮಾಂತ್ರಿಕರು ವೈ
ಷ್ಣವಮಹೇಶ್ವರಜೈನಭೈರವಬುದ್ಧಲಿಂಗಿಗಳು
ವಿವಿಧವರ್ಣಾಶ್ರಮ ಸುಧರ್ಮ
ವ್ಯವಹರಣನಿಸ್ಮರು ವಿವಾಹೋ
ತ್ಸವವಿಲೋಕನಕೌತುಕಿಗಳೊದಗಿದರಸಂಖ್ಯಾತ

ಚಾರಣರ ಕೈವಾರ ತುಂಬರು
ನಾರದರ ಸಂಗೀತ ರಂಭೆಯ
ಚಾರುನರ್ತನ ಚಿತ್ರರಥನ ಮೃದಂಗವ್ಯದುಶಬುದ
ಆರುಭಟಮಿಗಲಳ್ಳಿರೆಯೆ ಜಂ
ಭಾರಿಯೋಲಗದಲಿ ತದೀಯಮ
ಹಾರಭಸ ತಾನೆಸೆಯೆ ಸಿರಿ ಪ್ರತಿಬಿಂಬವಾಯ್ತೆಂದ

ದೇವಸಭೆ ತಾ ಬ್ರಹ್ಮಸಭೆ ಸುಮ
ಹಾವಿಳಾಸದ ರಾಜಸಭೆಗಳು
ತಾವು ಮೆಱೆದುವು ದ್ರುಪದರಾಜನ ರಾಜಭವನದಲಿ
ಆವಿಳಾಸಕದಾರು ಸರಿ ದೊರೆ
ದೇವದಾನವದನುಜಭುಜಗರೊ
ಳಾವಿಲಾಸವು ಸರಿಗೆ ಬಾರದು ದ್ರೌಪದೀಪಿತನ

ಭಾಗಕೆಣೆಯಾರುಂಟು ಪಾಂಡವ
ರಾಗ ತಾವ್ ಭಿಕ್ಷಾನ್ನಮಾಡುವ
ರಾಗದಲಿ ಪುರವರವ ನೋಡುತ ಮೂಱುಸಭೆಗಳನು
ಬಾಗಿ ಧನುವನು ನೋಡಿ ಧರ್ಮದ
ವೇಗದಲು ಬರುತಿರ್ದರಾಗಳು
ಯೋಗಚರಿತರು ಪಾಂಡುಪುತ್ರರು ದ್ರುಪದಪುರಿಯೊಳಗೆ

## ಸ್ವಯಂವರ ಮಂಟಪ

ಅರಸ ಕೇಳ್ ನಾಂದೀ ಮುಖದ ವಿ
ಸ್ತರಣವಾದುದು ಪೂರ್ವವೇದಿಯ
ವರನಿಗಮನಿರ್ಘೋಷ ಪಸರಿಸಿತಖಿಳದಿಕುತಟವ
ಮಱುದಿವಸ ಮಹಿಳಾಶಿರೋಮಣಿ
ಪರಮಸೌಭಾಗ್ಯದ ಸಮುದ್ರದ
ಸಿರಿಯ ಪರಿಣಯವೆಂದು ಸಾಱಿತು ಪಾಳಯಂಗಳಲಿ

ತಿಗುರ ಗೆಲುವುದು ವಶ್ಯತಿಲಕಾ
ಳಿಗಳನಿಡುವುದು ಮೋಹನದ ಮ
ದ್ದುಗಳ ಮಾಯೆಯ ಬೀಸುವುದು ಸೂಸುವುದು ಸೊಗಸುಗಳ
ಹಗಲು ಕಾಹಿನ ರೂಹುಗಳ ಗಾ
ಹುಗಳ ಮೆಱೆವುದು ಮನ್ಮಥನ ಕಾ
ಳಗದ ಖಾಡಾಖಾಡಿಯೆಂದರು ಹೊಯ್ದು ಡಂಗುರವ

ಕೌರವರು ಯಾದವರು ಸಹಿತೀ
ಧಾರುಣಿಯ ಕ್ಷತ್ರೇಶವಂಶದ
ವೀರಪಾರ್ಥಿವವಿತತಿ ಕುಳ್ಳಿರ್ದುದು ಸುಗಾಢದಲಿ

ಸಾರಿ ಸೋದರಸಚಿವಮಂತ್ರಿಕು
ಮಾರಚಾಮರಹಡಪದೊಳಪರಿ
ವಾರ ಬಳಸಿದುದೊಬ್ಬರೊಬ್ಬರ ಸುತ್ತುವಳಯದಲಿ

ತರಿಸು ಧನುವನು ಯಂತ್ರಮತ್ಸ್ಯನ
ನಿರಿಸು ತಳುವದೆ ತಂಗಿಯ ನಲಂ
ಕರಿಸು ದಂಡಿಗೆಯಿಂದ ತಾ ತೋಱಿಸು ಮಹೀಶ್ವರರ
ವರನ ವರಿಸಲು ಲಗ್ನವಿದೆ ಹ
ತ್ತಿರೆ ಯೆನುತ ಪಾಂಚಾಲಭೂಪತಿ
ಕರೆದು ಧೃಷ್ಟದ್ಯುಮ್ನನನು ಬೆಸಸಿದನು ಬೇಗದಲಿ

## ದ್ರೌಪದಿಯ ಅಲಂಕರಣ

ಅರಸನಾಜ್ಞೆಯ ಮೇಲೆ ಶತಸಾ
ವಿರನಿತಂಬಿನಿಯರು ಕುಮಾರಿಯ
ಹೊರೆಗೆ ಬಂದರು ತಿಗುರಿದರು ಕುಂಕುಮವಲವಯವವ
ಅರಸಿ ಮಜ್ಜನವಮಾಡಿ ನೂತನ
ವರದುಕೂಲವನುಟ್ಟು ಸಖಿಯರ
ತರದ ನೆಲೆಯುಗ್ಗಡಣೆಯಲಿ ಬಂದಳು ನಿಜಾಲಯಕೆ

ಹೊರೆಯ ಸಖಿಯರ ನೋಟ ವ್ಯೈಯಲಿ
ಹರಿದು ಬಟಿಲದು ಚಿತ್ರವೀಕೆಯ
ಧರಿಸಿ ಕುಸಿಯದು ಕಿವಿಗಳಿಗೆ ಮೆಲ್ನುಡಿಯ ಸವಿಸವಿದು
ಅರುಚಿಯಾಗದು ನಾಸಿಕವು ವೈ
ಪರಿಮಳದ ಪೂರದಲಿ ಗಂಧಾಂ
ತರವನಱಿಯದು ರೂಪನೇನೆಂಬೆನು ನಿತಂಬಿನಿಯ

ಪೂಸುವೊಡೆ ಕಸ್ತುರಿಜವಾಜಿಗ
ಳೈಸಲೇ ಪರಿಮಳವು ಸುತ್ತಲು
ಸೂಸಿ ತನುಕಂಪಿನಲಿ ಮಘಮಘಿಸುವಳು ಯೋಜನವ
ಈಸಮಸ್ತ ಮನುಷ್ಯಧರ್ಮದ
ದೋಷಗರ್ಭಿತಧಾತುಗಳ ವಿ
ನ್ಯಾಸವೇ ದ್ರೌಪದಿಯ ಭಾವದ ಭಂಗಿ ಬೇಱಿಂದ

ಎಸೆವಧರರಾಗದಲಿ ಮಿಗೆರಂ
ಜಿಸುವವೋಲ್ ಮಾಣಿಕ್ಯ ಮೆಱೆದುದು
ದಶನ ದೀಧಿತಿಗಳಲಿ ಥಳಥಳಿಸಿದುವು ಮುತ್ತುಗಳು
ಮಿಸುಪ ದೇಹಚ್ಛವಿಗಳಲಿ ಡಾ
ಳಿಸುವ ವೋಲ್ ಭೂಷಣದ ಹೇಮ
ಪ್ರಸರ ಹೊಳದುದು ಹೊಗೞ್ವಿಕವಿಯಾರಬುಜಲೋಚನೆಯ

ಪರಿಮಳದ ಪರಮಾಣುಗಳ ಸಂ
ವರಿಸಿ ಮುಕ್ತಾಫಲದ ಕೆಂದಾವರೆಯ
ಮಱಿದುಂಬಿಗಳ ವರ್ಣಾಂತರವನಳವಡಿಸಿ
ಸರಸವೀಣಾಧ್ವನಿಯ ಹಂಸೆಯ
ಗರುವಗತಿಗಳನಾಯ್ದು ಮನ್ಮಥ
ವರವಿರಿಂಚನು ಸೃಜಿಸಿದನು ಪಾಂಚಾಲನಂದನೆಯ

ಸರಸಲಾವಣ್ಯಾಂಬುಮಯತನು
ಸರಸಿಯಲಿ ಮುೞುಗಿರ್ದ ಯೌವನ
ಕರಿಯ ಕುಂಬಸ್ಥಳವೊ ವಿಪುಳಪಯೋಧರ ದ್ವಯವೊ

ತರಳನಯನವೊ ಶಫರಿಗಳೊ ತಾ
ವರೆಯೊ ಮುಖವೊ ತುಂಬೆಗಳೊ ನಿಱಿ
ಗುರುಳುಗಳೊ ಮಣಿಗಣವೊ ರದನವೊ ಚಿತ್ರವಾಯ್ತೆಂದ

ಏನನೆಂಬೆನು ಮನಸಿಜನ ಮದ
ದಾನೆಯನು ಮನ್ಮಥನ ರತ್ನನಿ
ಧಾನವನು ದರ್ಪಣವನಂಗಜಯಂತ್ರಸೂತ್ರಕದ
ಮಾನಿನಿಯರಧಿದೈವವನು ವಿ
ಜ್ಞಾನಕನ್ಯಾಮಾತೃಭವನ
ಸ್ಥಾನವನು ತ್ರೈಲೋಕ್ಯಮೋಹನವಶ್ಯಮಂತ್ರಕವ

ನಾರಿಯನು ಸಂಸಾರಸುಖಸಾ
ಕಾರಿಯನು ಜನನಯನಕಾರಾ
ಗಾರಿಯನು ಮುನಿಧೈರ್ಯಸರ್ವಸ್ವಾಪಹಾರಿಯನು
ಧೀರರಿಗೆ ಮಾಱಂಕವನು ವರ
ಪಾರಿಕಾಂಕ್ಷಿಯ ಚಿತ್ತಚೌರ್ಯವಿ
ಹಾರಿಯನು ದ್ರೌಪದಿಯನಭಿವರ್ಣಿಸುವೊಡರಿದೆಂದ

ನಳಿನಮುಖಿಯರ ಸಕಲಸೃಷ್ಟಿಗೆ
ಕಳಸವಿದು ಸೌಂದರ್ಯವಸನದ
ವಿಳಸವಿದು ಸಾಭಾಗ್ಯವೈಭವರತ್ನಕೋಶವಿದು
ಲಲನೆಯರ ಸೀಮಂತಮಣಿ ಜಗ
ದೊಳಗೆ ಸೊಬಗಿನ ಕಣಿ ತಪೋಧನ
ಕಲಭರಿಗೆ ಸೃಣಿ ರೂಪು ಮೆಱೆದುದು ದ್ರುಪದನಂದನೆಯ

ಹೊಳೆಹೊಳೆದುದಾಭರಣರತ್ನಾ
ವಳಿಯ ರುಚಿ ಮಣಿರುಚಿಗಳನು ಮು
ಕ್ಕುಳಿಸಿತಂಗಚ್ಛವಿ ತದಂಗಪ್ರಭೆಯನಡೆಹಾಯ್ದು
ಥಳಥಳಿಸಿದುದು ವದನ ಮುಖವುಂ
ಡಲದ ಕಾಂತಿಯನೊದೆದು ಕಂಗಳ
ಬೆಳಗು ವಿಸಟಂಬರಿದುದೇನೆಂಬೆನು ನಿತಂಬಿನಿಯು

ಕಂಗಳಲಿ ಕುಡಿಹೊಳೆಹು ಹುಬ್ಬಿನ
ಹೊಂಗಿನಲಿ ಭಂಜವಣೆ ಭಾವದ
ಭಂಗಿಯಲಿ ಪತಿಕರಣೆ ವಿವಿಧಸಖೀಕದಂಬದಲಿ
ಇಂಗಿತದ ಬಿರಿಮುಗುಳ ಪರಿಮಳ
ವಂಗಹಾರವಿಲಾಸವಿಭ್ರಮ
ಭಂಗಿಗಳು ಬಿಬ್ಬೋಕಲಲಿತಾದಿಗಳು ದ್ರೌಪದಿಯ

ವರವಸಂತನ ಬರವು ಜಾಜಿಯ
ಬಿರಿಮುಗುಳು ಮಱಿದುಂಬಿಗಳ ನಯ
ಸರದ ದನಿ ಕರಿಕಳಭಲೀಲೆ ನವೇಕ್ಷುರಸಧಾರೆ
ಮೆಱೆವವೊಲ್ ಹೊಸಹೊಗರಜವ್ವನ
ಸಿರಿಯ ಜೋಡಣೆ ಜನಮನವನಾ
ವರಿಸಿದುದು ನಿಪ್ಪಸರದಲಿ ಪಾಂಚಾಲನಂದನೆಯ

ಆರತಿಯನೆತ್ತಿದರು ಬಟಿಕು
ಪ್ಪಾರತಿಯ ಹಾಯ್ಕಿದರು ಮುತ್ತಿನ
ತೋರಸೇಸೆಯ ಸೂಸಿ ಹರಸಿ ಸುವಾಸಿನೀನಿಕರ

ಚಾರುಮುಕುರವ ನೋಡಿ ನಿಂದಳು
ಭಾರಣೆಯು ಗರುವಾಯಿಯಲಿ ಜಂ
ಬೀರಫಲವನು ಕೊಂಡಳಂಗನೆ ವಿಪ್ರಮಂತ್ರದಲಿ

ಮುಂದೆ ಪಾಯವಧಾರು ಸಖಿಯರ
ಸಂದಣಿಯು ಸಾಲಿನಲಿ ದಂಡಿಗೆ
ಗಂದುಮುಖಿ ಬಂದಳು ಸಿತಾಬ್ಜಕೆ ಲಕ್ಷ್ಮಿಯಂದದಲಿ
ಹಿಂದು ಮುಂದಿಕ್ಕೆಲದ ನಾರೀ
ವೃಂದ ನೆರೆದುದು ವೀರಪಟಹದ
ದುಂದುಭಿಯ ತಂಬಟದ ರವವಳ್ಳಿಱಿದುದಂಬರವ

ಸಾಲಝಲ್ಲರಿ ಮುಸುಕಿದುವು ಸವು
ಪಾಳಿಯಲಿ ಸೀಗುರಿಗಳಾಡಿದು
ವಾಲಿಯವಗಾಹಿಸದು ನೆಲನೆನಿತನಿತುವಳಯದಲಿ
ಬಾಲೆಯರ ಮುಗುಥೆಯರನತಿಘಾ
ತಾಳೆಯರ ಕಡೆಗಣ್ಣನೋಟದ
ಚಾಳೆಯರ ಚದುರೆಯರನಲ್ಲದೆ ಕಾಣೆ ನಾನೆಂದ

ನಿಱಿದಲೆಯ ಚೊಲ್ಲೆಹದ ತುಂಬಿಯ
ನಿಱಿಗುರುಳ ಬೈತಲೆಯ ಮುತ್ತಿನ
ಹೆಱೆನೊಸಲ ನಿಡುಪುರ್ಬುಗಳ ಥಾಳಿಸುವ ಕದಪುಗಳ
ತುಱುಗೆವೆಯ ತನಿಹೊಳೆವ ಕಂಗಳ
ಮೆಱೆವ ಸುಲಿಪಲ್ಲುಗಳೆಸೆವ ನು
ಣ್ಗೊರಳ ನಳಿತೋಳುಗಳ ನೀಱೆಯರೈದಿತೊಗ್ಗಿನಲಿ

ಕೀಲಕಡಗದ ವಜ್ರಲಹರಿಯ
ಜೋಳೆಯದ ಕಂಕಣದ ರವೆಗಳ
ತೋಳ ಬಂದಿಯ ಕೊರಳ ತ್ರಿಸರದ ಬೆರಳ ಮುದ್ರಿಕೆಯ
ನೀಲರತುನದ ಪದಕಮಾಣಿಕ
ದೋಲೆಗಳ ಮೂಗತಿಯ ಮುತ್ತಿನ
ಮೇಲುಸಿಂಗಾರದ ಸಖೀಜನವೈದಿತೊಗ್ಗಿನಲಿ

ವಿಲಸದೇಕಾವಳಿಯ ಮುತ್ತಿನ
ತಿಲಕ ಸೂಡಗ ಪಾಯವಟ್ಟದ
ಲಲಿತಬಂಧದ ವಜ್ರಬಿಂಬದ ತಾರಕಾವಳಿಯ
ಹೊಳೆವ ಕಾಂಚಿಯ ಕಿಂಕಿಣೀಸಂ
ಕುಳದ ನೇವುರ ವೀರಮುದ್ರಾ
ವಳಿಯ ಚರಣಾಭರಣದಬಲೆಯರೈದಿತೊಗ್ಗಿನಲಿ

ಭ್ರೂಲತೆಯ ಬಿಲ್ಲಿನ ಕಟಾಕ್ಷದ
ಕೋಲಹೊದೆಗಳ ಬಾಸೆಗಳ ಕರ
ವಾಳಗಳ ಕತ್ತುರಿಯ ತಿಲಕದ ಹರಿಗೆಹಲಗೆಗಳ
ತೋಳುಗಳ ಲೌಡಿಗಳ ಸೆಳ್ಳುಗು
ರೋಳಿಗಳ ಸುರಗಿಗಳ ಮನ್ಮಥ
ನಾಳು ನಡೆದುದು ದ್ರೌಪದಿಯ ದಂಡಿಗೆಯ ಬಳಸಿನಲಿ.

ವ್ರತಿಗಳಿಗೆ ಮೊನೆದೋಱುತಣ ಸು
ವ್ರತಿಗಳಿಗೆ ಬೇಱುತ ಸಮಾಧಿ
ಸ್ಥಿತರ ಮೂಗಿನ ಮೇಲಣಾಯುಧಧಾರೆಗಳನೆಳದು

ಶ್ರುತಿವಿಹಿತಸತ್ಕರ್ಮಿಗಳ ದೀ
ಕ್ಷಿತರ ಮತಿಯಲಿ ತಮ್ಮ ಮುದ್ರಾಂ
ಕಿತವ ಮಾಡುತ ಮಾಱಿ ನಡೆದುದು ಯುವತಿಜನಕಟಕ

ಆರು ನಿಲುವರು ಸಂಮುಖಕೆ ಮದ
ನಾರಿಯರ್ಧದ ನಾರಿಯಾ ಹರಿಯು
ಹೇರುರದ ಹೆಂಗೂಸು ಬೊಮ್ಮನು ಮಗಳ ನೆಱಿಗೇಡಿ
ಘೋರವದು ಸುರಪತಿಯ ಕಥೆ ನ್ಯೆ
ಯಾರೆ ಹೊತ್ತನು ಮದನಮುದ್ರಾ
ಧಾರೆಯೆಂಬಂತೊದಱಿದುವು ಮುಂಗುಡಿಯ ಕಹಳಗಳು

ಪಸರಿಸಿತು ತಂಬೆಲರು ಬೀಸಿತು
ಬಿಸಿಲ ಬಿಂಕ ಸರೋಜಸಂತತಿ
ಮುಸುಳಿದುವು ಮದವೇಱಿ ಮೆಱಿದುದು ತಾರಕಾನಿವಹ
ಒಸರಿದುದು ಶಶಿಕಾಂತ ನೈದಿಲ
ಹಸರ ಹರಿದುದು ಚಕ್ರವಾಕದ
ಬೆಸುಗೆ ಸಡಲಿತು ಚಾರುಚಂದ್ರಾನನೆಯ ಬರವಿನಲಿ

ಹೊಳೆವ ಕಂಗಳ ಬೆಳಗಿನಲಿ ಕ
ತ್ತಲಿಸಿದುದು ಕಾಮುಕರ ಮನ ತನು
ವಳಯಕಾಂತಿಯ ತಂಪಿನಲಿ ಬಾಡಿದುವು ಬುದ್ಧಿಗಳು
ಲಲಿತವಿಭ್ರಮದಿಂದಹಂಕೃತಿ
ಶಿಲೆಗಳೊಡೆದುವು ಮೋಹನದ ಹೊನ
ಲೊಳಗೆ ಹೊಳೆದಡಗಿದುದು ಚಿತ್ತ ಮಹಾಮಹೇಶ್ವರರ

ತರುಣಿಯರ ನವನೀಲಮಣಿಗಳ
ಕುರುಳ ಕಬರಿಯ ಭರದ ವರಕ
ಸ್ತುರಿಯ ತಿಲಕದ ಕಾಳಿಕೆಯ ಘನಕಾಂತಿಲಹರಿಗಳ
ಕೊರಳ ಹಾರದ ಕರ್ಣಪೂರದ
ಸರದ ಮೌಕ್ತಿಕರುಚಿಯ ಯಮುನಾ
ಸುರನದಿಯ ಸಂಗಮದೊಳಗೆ ಮುಳುಗಿತು ಜನಸ್ತೋಮ

ಪರಿಮಳಕೆ ಮಿಗೆ ಕವಿವ ತುಂಬಿಗೆ
ಕೆರಳುವರು ಹುಬ್ಬಿನಲಿ ಪದನೇ
ವುರದ ಮೆಲ್ಧನಿಗಳಿಗೆ ಮುತ್ತುವ ರಾಜಹಂಸೆಗಳ
ಹೊರೆಯ ಕೆಳದಿಗೆ ದೂಱುವರು ಕೈ
ಯರೆಗಿಳಿಗೆ ತಮ್ಮಧರಬಿಂಬಕೆ [ವ]?
ಮುಱಿಮುಱಿದು ಮುಖದಿರುಹುವರು ಮುಗ್ಧಾಂಗನಾನಿಕರ

ಧರಣಿಪತಿ ಕೇಳ್ಸಕಲಪೃಥ್ವೀ
ಶ್ವರರ ಬಹಳಾಸ್ಥಾನದಲಿ ಮೋ
ಹರಿಸಿದರು ಮೋಹರದ ಮೋಡಾಮೋಡಿಯಬಲೆಯರು
ಅರಸುಗಳ ನಿಡುನೋಟವಲ್ಲಿಯ
ಗರುವೆಯರ ಕುಡಿನೋಟ ತಮ್ಮೊಳು
ಬೆರಸಿ ಹೊಯ್ದಾಡಿದುವು ಖಾಡಾಖಾಡಿಯುದ್ಧದಲಿ

ಕೆಲಕಡೆಯ ಕೆಳದಿಯರ ಕಂಗಳ
ಹೊಳೆಹು ದುವ್ವಾಳಿಯಲಿ ಸುಮತಿ
ಸ್ಖಲಿತಕೆಂಧೂಳಿಯಲಿ ಮಾಸಿತು ಮನದ ಮಡಿವರ್ಗ

ಒಳಗೆ ಹೊತ್ತುವ ದಗೆಯ ಹೊರಳಿಯ
ತಳಿತ ಬಿಮ್ಮಿನ ಬಗೆಯ ನೃಪಮಂ
ಡಳಿಯ ನೆನಹನದೇನನೆಂಬೆನು ಭೂಪ ಕೇಳೆಂದ

ಚಲುವಿಕೆಯ ಚೈತನ್ಯವೋ ಪರಿ
ಮಳದ ಪುತ್ಥಳಿಯೋ ಲತಾಂಗಿಯ
ಸುಳಿವೊ ಲಾವಣ್ಯಾಂಬುರಸಸಾಕಾರವಿಭ್ರಮವೊ
ಲಲಿತಶೃಂಗಾರಾಬ್ಧಿಮಥನೋ
ಚ್ಚಳಿತಸುಧೆಯೋ ಸಾಧಕರಿಗಿದು
ಫಲಿಸಿದರೆ ಕೃತಪುಣ್ಯರವರೆಂದುದು ಬುಧಸ್ತೋಮ

ಈಕೆಯಿಂದುದಿಸಿರಲು ಮದನಂ
ಗೇಕೆ ದೇಹದ ಬೇಗೆಯಹುದು ಪಿ
ನಾಕಿ ನೆಱೆ ವೈರಾಗ್ಯದಲಿ ಹೊಗುವನೆ ತಪೋವನವ
ಸಾಕು ಗೌತಮಮುನಿಯ ಮುಳಿಸಿನ
ಕಾಕುನುಡಿ ಫಲಿಸುವುದೆ ಯೆನುತಾ
ನಾಕಪತಿ ರಂಭಾದಿಸತಿಯರ ನೋಡುವನೆ ನಗುತ

ತಂದರಾಪಾಂಚಾಲಿಯನು ಹೊ
ನ್ನಂದಣದಲಾಸ್ಥಾನಸೀಮೆಗೆ
ಮುಂದೆ ಸಿಂಹಾಸನದ ಸಾಲ ಮಹಾಮಹೀಶ್ವರರ
ಸಂದಣಿಯಲವರವರನಿವರಿವ
ರೆಂದು ತೋಱಿಸಬೇಕೆನುತ ನೃಪ
ನಂದನನು ಹೊದ್ದಿದನು ಕಮಲಾನನೆಯ ದಂಡಿಗೆಯ

## ನೃಪಾವಲೋಕನ

ಇರಲು ಧೃಷ್ಟದ್ಯುಮ್ನನಾಗಲು
ಹರುಷ ಮಿಗೆ ದ್ರೌಪದಿಗೆ ನುಡಿದನು
ಧರಣಿಪರ ನೀ ನೋಡು ತೋಱುವೆ ವರನೃಪೋತ್ತಮರ
ಪರಿವಿಡಿಯಲಂದಾಗ ಮುಖಜೆಯು
ವರಸ್ವಯಂವರದೊಳಗೆ ಭೂಪರ
ನಱುಹಿಸಿದನಾತತ್ಸಹೋದರಿಗಂದು ವಿನಯದಲಿ

ತಂಗಿ ನೋಡೌ ತಾಯೆ ನಿನ್ನಯ
ಕಂಗಳೊಲಿವೊಡೆ ಚಿತ್ತ ವಾರ್ಧಿತ
ರಂಗದಲಿ ತೂಗುವೊಡೆ ತೋಱುವೆನವನಿಪಾಲಕರ
ಇಂಗಿತದಲವರಂತರಂಗವ
ನಂಗವಟ್ಟದ ಬಳಕೆಯನು ಬಹಿ
ರಂಗದಲಿ ನೀನಱಿಯೆನುತ ನುಡಿದನು ನಿಜಾನುಜೆಗೆ

ಉಕ್ಕಿದಾ ಕಿವಿವೇಟ ಕಂಬೇ
ಟಕ್ಕೆ ತಂದುದು ಕಂಗಳೀಕೆಯ
ಮುಕ್ಕುಳಿಸಿ ಮೈಸೋಂಕಿನಲಿ ಲಟಕಟಸಿದುದು ಹೃದಯ
ಸಿಕ್ಕಿತಟಿಲಿಗೆ ಸೋತು ಸೊಕ್ಕಿನ
ಚುಕ್ಕಿಯೋ ಚಾಲನೆಯೊ ಸೃಷ್ಟಿಗ
ದಕ್ಕಜವೊ ತಾವೆನುತ ಚಿಂತಿಸಿತಾ ನೃಪವ್ರಾತ

ಜಗವನಿಂದ್ರಿಯಕರಣವಿಷಯಾ
ದಿಗಳನೆಲ್ಲವ ನೊತ್ತಿ ಮುಖದಲಿ
ತೆಗೆದು ಶ್ರುತಿಶಿರದಮಲತತ್ತ್ವವನರಸುವಂದದಲಿ

ಬಗೆಯ ಬಯಕೆಯ ಸೊಗಸುಗಳ ದಾ
ಯಿಗನನರಸುತ ಕುಡಿತೆಗಣ್ಣಲಿ
ಮೊಗೆದು ಸೂಸಿದಳಂಬುಜಾನನೆ ಸಕಲನೃಪಕುಲವ

ಕೆಲರು ಮದಿರಾಪಾಂಗದಲಿ ಕಂ
ಗಳ ಮರೀಚಿಯು ಬೆಳಗಿನಲಿ ಕೆಲ
ರೆಳನಗೆಯ ಸೊಂಪಿನಲಿ ಸಖಿಯರ ಮೇಳವಾತಿನಲಿ
ಲಲನೆ ನೋಡಿದಳೆಮ್ಮ ಸೊಗಸಿನ
ಲೊಲಿವ ಸಖಿಯರಿಗೆಂದಳೆಂದೊಳ
ಗೊಳಗೆ ಬೆಱತರು ಬಯಲ ಮದುವೆಯ ಬಾಯಸವಿಗಳಲಿ

ರಾಯನೆಂದನು ಸಕಲಧರಣೀ
ರಾಯರನು ಮನ್ನಿಸದೆ ಮರಳಿದ
ಳಾಯತಾಕ್ಷಿ ಮಹಾಸ್ವಯಂವರದಲಿ ಮಹಾದೇವ
ಜೋಯಿಸರ ಹೋರೆಗಳ ಹೇಟಿಕೆ
ಹೋಯಿತೇ ಹೊಳ್ಳಾಗಿ ಪಾಂಡವ
ರಾಯರನು ತೋಱಿಸನೆ ಗದುಗಿನ ವೀರನಾರಯಣ

ಎಂದು ದ್ರುಪದನು ಪಾಂಡುಪುತ್ರರ
ನಂದು ಕಾಣದೆ ನೃಪರ ನಾನೇ
ನೆಂದು ನೆರಹಿದೆನೆನುತ ಕೃಷ್ಣನ ನೋಡಿ ತಿರುಗಿದನು
ಮಂದರೋದ್ಧರ ವರಯಶೋದಾ
ನಂದಕಂದ ಮುಕುಂದ ಗೋಪೀ
ವೃಂದವಲ್ಲಭ ಪಾಂಡುಪುತ್ರರ ಕರುಣಿಸೈಯೆಂದ

## ಬಾಹುಬಲ ಪರೀಕ್ಷಣ

ಕೇಳು ಜನಮೇಜಯನೃಪತಿ ಪಾಂ
ಚಾಲಿ ಹೊಕ್ಕಳು ಭದ್ರಮಂಟಪ
ಶಾಲೆಯನು ಮರಳಿದುದು ಮನ್ಮಥನೊಡ್ಡು ಸತಿಯೊಡನೆ
ಬಾಲೆಯನು ನಿಜರೂಪದರ್ಪದೊ
ಳಾಳಲಱಿಯಿರೆ ಬಾಹುಬಲದಲಿ
ಸೋಲಿಸುವೊಡನುವಾಗಿ ಯೆಂದರು ಹೊಯ್ದು ಡಂಗುರವ

ಇದೇ ಮಹಾಧನುಬಾಣಪಂಚಕ
ವಿದೆ ನಭೋಗ್ರದ ಯಂತ್ರಹೊಳೆಯು
ತ್ತಿದೆ ವಿಭಾಡಿಸಿ ಮೆಱೆವನಾವನು ಬಾಹುವಿಕ್ರಮವ
ಇದುವೆ ಕಬ್ಬಿನ ಬಿಲು ಶರಾವಳಿ
ಇದು ಕುಸುಮಮಯಯಂತ್ರವಬಲೆಯ
ಹೃದಯವಾತನೆ ರಮಣನಾತನೆ ಕುಸುಮಶರನೆಂದ

ಇದಕೆ ಸೈರಿಸದೇಟಿ ಬೇಗದ
ಲಿದಕೆ ಬಯಸುವರೇಟಿ ಬೇಗದ
ಲಿದಕೆ ಯರ್ಥಿಪರೇಟಿ ಶೀಘ್ರದಲೆಂದು ನೃಪಸುತೆಯು
ವಿದಿತದಲ್ಲೀಧನುವನಾರ್ಸ
ತ್ವದಲಿ ತೆಗೆವರೊ ತಂಗಿಗಾತನೆ
ಮುದದೊಳೀ ತಾ ರಮಣನೆನಿಸುವ ಕುಸುಮಶರನೆಂದ

ಎಂದು ಸಾಱಿಸಿ ಭಾರಿಧನುವನು
ತಂದು ಧರೆಗಿಟುಹಿದರು ಯಂತ್ರವ
ನಂದವಿಟ್ಟರು ಗಗನದಲಿ ಗವಸಣಿಗೆಗಳನುಗಿದು

ಮುಂದೆ ಕೂರಂಬುಗಳ ಥರಥರ
ದಿಂದ ನಿಲಿಸಿ ಸುಗಂಧದಕ್ಷತೆ
ಯಿಂದ ಪೂಜೆಯ ರಚಿಸಿದರು ವೈದಿಕವಿಧಾನದಲಿ

ನೆರವಿಯಲಿ ನಾನಾದಿಗಂತದ
ಧರಣಿಪತಿಗಳಹಮ್ಮಿಕೆಯಲು
ಬ್ಬರಿಸಿ ಹೊಕ್ಕರು ಬೇಱೆಬೇಱೊಬ್ಬಬ್ಬರುರುವಣಿಸಿ
ಹರಗಿರಿಗೆ ಹುಲುರಕ್ಕಸರು ಮ
ತ್ಸರಿಸಿದಂತಾಯ್ತೇನನೆಂಬೆನು
ಧರೆಗೆ ಮಿಡುಕದ ಧನು ವಿಭಾಡಿಸಿ ಹೊಯ್ದುದತಿರಥರ

ಹಾರ ಹರಿದುದು ಕರ್ಣಪೂರದ
ಚಾರುಮಣಿಗಳು ಸಡಲಿದುವು
ವೀರನೂಪರ ನೆಗ್ಗಿದುವು ತಗ್ಗಿದುವು ನೆನೆಹುಗಳು
ನಾರಿಯರ ಕೈಹೊಯ್ಲನಗೆಯಲಿ
ಹಾರ ಜಡಿದುದು ಮುಸುಕುದಲೆಯ ಮ
ಹೀರಮಣರೊಳಸರಿದು ಸಿಂಹಾಸನವ ಸಾರಿದರು

ಕ್ಷಿತಿಪ ಕೇಳೈ ವಿಗಡಚಾಪ
ವ್ಯತಿಕರಕೆ ದುರ್ಯೋಧನಾದಿ
ಕ್ಷಿತಿಪತಿಗಳಂಜಿದುದ ಕಂಡನು ನಗುತ ಬಲರಾಮು
ಕೃತಕಧನುವನು ಮುಱಿದು ದ್ರುಪದನ
ಸುತೆಯ ಮುಂದಲೆವಿಡಿದು ತಹೆನು
ದ್ಢತನಲಾ ಪಾಂಚಾಲನೇನು ತಿಳಿದ ಶರಾಸನವ

ಹಲಧರನ ಮಸ್ತಕವ ಕಂಡನು
ನಳಿನನಾಭನಿದೇನು ಪೀಠವ
ನಿಟ್ಟಿದಿರೆಲ್ಲಿಗೆ ಗಮನವಾವುದು ಕಾರ್ಯಗತಿ ನಿಮಗೆ
ತಿಳುಹಿ ಯೆನೆ ಬೇಱೇನು ಯಂತ್ರವ
ಕಳಚಿ ಬಿಸುಟು ಲತಾಂಗಿಯನು ಹಿಡಿ
ದೆಳೆದು ತಹೆನೆನಲೈಸಲೇ ಕೇಳೆಂದನಸುರಾರಿ

ಏನಹರು ನಿಮಗಿಂದು ಕುಂತೀ
ಮಾನಿನಿಯರತ್ತೆಯರಲೇ ತ
ತ್ಸೂನುಗಳು ಮೈದುನರು ತತ್ಪತ್ನಿಯರು ತಂಗಿಯರು
ಸಾನುರಾಗವೆ ಮತ್ತೆ ಸಂಶಯ
ವೇನಿದಕೆ ತಪ್ಪಲ್ಲ ಕುಂತೀ
ಸೂನುಗಳು ದ್ರೌಪದಿಗೆ ರಮಣರು ನೋಡಿ ನೀವೆಂದ

ಮೂಗಿನಲಿ ಬೆರಳಿಟ್ಟು ಮಕುಟವ
ತೂಗಿದನು ಬಲರಾಮನವನಿಯ
ನೀಗಿ ಹೋದರ ಮಾತು ಪಾಂಡವರೆತ್ತಲಿವಳೆತ್ತ
ಬೇಗುದಿಯಲುರಿಯುರಗಿನೊಳಗೊಂ
ದಾಗಿ ಬೆಂದರು ಲೋಕವಱಿಯೆ ಪ
ರಾಗಮಿಕ ನಿಮಗಂಜುವೆವು ನಾವೆಂದನಾರಾಮ

ಕ್ಷಿತಿಯೊಳವರಿಲ್ಲೆಂದು ದ್ರುಪದನ
ಸುತೆಗೆ ಪತಿ ಪರರೆಂದು ಯಂತ್ರ
ಚ್ಯುತಿಗೆ ಬೇಱುಂಟೆಂದು ತೋಱಿತೆ ನಿಮ್ಮ ಚಿತ್ತದಲಿ

ಕ್ಷಿತಿಗೆ ಪಾಂಡವರುಂಟು ದ್ರುಪದನ
ಸುತೆಗೆ ಪತಿ ಪರರಲ್ಲ ಕುಂತೀ
ಸುತರನೀಗಳ ತೋಱುವೆನು ವಸುದೇವನಾಣೆಂದ

ಇದು ವಿಚಿತ್ರವಲಾ ಗತಾಸುಗ
ಳುದಿಸಿದೊಡೆ ಲೇಸೈಸಲೇ ದ್ರೌ
ಪದಿಯುನವರನುರಾಗಿಸಲಿ ಭೋಗಿಸಲಿ ಭೂತಳವ
ಇದುವೆ ನಿಶ್ಚಯವಾದೊಡವರ
ಭ್ಯುದಯವೆಮ್ಮಭ್ಯುದಯ ವೆನೆಂ
ಬುದು ಮಹಾದೇವೆಂದು ತಲೆದೂಗಿದನು ಬಲರಾಮ

ಈಕೆಯನು ಮೆಚ್ಚಿಸದು ರಾಜಾ
ನೀಕ ಸೌಂದರ್ಯದಲಿ ಚಾಪ
ವ್ಯಾಕರಣಪಾಂಡಿತ್ಯರೆಂಬರ ಕಾಣೆ ನಾನಿನ್ನು
ಈಕೆಗಿನ್ನಾರೊಡೆಯರೋ ಕುಂ
ತೀಕುಮಾರಕರಿಲ್ಲಲಾ ಸುಡ
ಲೇಕೆ ನೆರಹಿದೆ ನಿವರನೆನುತಾ ದ್ರುಪದ ಚಿಂತಿಸಿದ

ತಾತ ಚಿಂತಿಸಬೇಡ ನಿವಿಪ್ರಾ
ತಾತ ಶಂಕರ ಕೊಟ್ಟನಿರುತದ
ಮಾತು ಬಱಿದೊರೆಯಾಗದೆನುತಲೆ ತಂದೆಗಿದಿರಾಗಿ
ಸೋತರೀನೃಪರೆಲ್ಲ ತಂಗಿಗೆ
ಭೂತಳೇಶ್ವರರೊಬ್ಬರೂ ವರ
ಜಾತವಾಗರು ನೋಡಿ ನಮ್ಮಯ ಮುಖಜೆಗಕಟೆಂದ

ಅವನಿಪತಿಗಳು ಹೊಳ್ಳುವಾಱಿದ
ರಿವರೊಳಿಲ್ಲವೆ ದಕ್ಷಿಣೆಯ ಹಾ
ರುವ ಮಹಾಜನವಿದೆ ಸಮುದ್ರಕೆ ಪಡಿ ಸಮುದ್ರವೆನೆ
ಇವರೊಳಗೆ ಮುಂಗಯ್ಯ ಬಲುಹು
ಳ್ಳವರು ನೆಗಹಲಿ ಧನುವನೀಯಂ
ತ್ರವನು ಸಾಧಿಪುದೆಂದು ಧೃಷ್ಟದ್ಯುಮ್ನ ಸಾಱಿಸಿದ

ಕೇಳು ಜನಮೇಜಯಧರಿತ್ರೀ
ಪಾಲ ಪಾಂಚಾಲೆಯ ಮನೋರಥ
ಶಾಲೆಯಲಿ ಸಾಱಿದರಲೈ ಸಭೆಯಲಿ ಮಹೀಸುರರು
ಏಱಿ ಭುಜಬಲವುಳ್ಳವರು ವಿ
ಪ್ರಾಳಿಯಲಿ ಬಿಲುವಿಡಿದು ಯಂತ್ರದ
ಕೋಲುಗಳ ಕೇವಣಿಪುದೆಂದರು ಹೊಯ್ದು ಡಂಗುರವ

ಎಂದು ಸಾಱಿದ ನುಡಿಯು ನಾದ್ವಿಜ
ವೃಂದವಾಲಿಸಿ ನಮಗಿದೇಕರ
ವಂದನಯುನೆಯ ತೊಡಕು ತೆಗೆ ನಾವಾರು ಧನುವಾರು
ಬಂದ ದಕ್ಷಿಣೆ ಮೃಷ್ಟಭೋಜನ
ದಿಂದ ತೃಪ್ತರು ನಾವು ನಮಗಿದ
ಱಿಂದ ಬಹುದಪಕೀರ್ತಿಕರವೆಂದುದು ಬುಧಸ್ತೋಮ

ವಚನಶೂರರು ನಾವು ಪಾರ್ಥಿವ
ನಿಚಯವೇ ಭುಜಶೂರರನಿಬರ
ನಚಲಧನು ಭಂಗಿಸಿತು ನಮಗೀವಿದ್ಯೆ ವೈದಿಕವೆ

ಉಚಿತವಲ್ಲಿದು ನಮ್ಮ ಸಾಹಸ
ರಚನೆಯನು ನೋಡುವೊಡೆ ಪಂಡಿತ
ನಿಚಯವಿದಿರಲಿ ನಿಲಲಿ ತೋರುವೆವಲ್ಲಿ ವಿಸ್ಮಯವ

ಸಾಂಗವೇದಪದಕ್ರಮದಿ ಸ
ರ್ವಾಂಗನಿಚಯದಿ ನಿಖಿಳಪೌರಾ
ಣಂಗಳಲಿ ಮೀಮಾಂಸೆಯಲಿ ಸ್ಮೃತಿತರ್ಕಶಾಸ್ತ್ರದಲಿ
ಭಂಗಿಸುವ ವಿಜಯಿಸುವ ಬಹುವಾ
ದಂಗಳಲಿ ವಾತ್ಸ್ಯಾಯನಾದಿಯು
ಪಾಂಗವಿದ್ಯೆಯಲೆಮ್ಮ ನೋಡೆಂದುದು ಬುಧಸ್ತೋಮ

ಭರತದಲಿ ವೈದ್ಯದಲಿ ಕಾವ್ಯಸು
ವಿರಚಿತಾಲಂಕಾರದಲಿ ಕರಿ
ತುರಗಲಕ್ಷಣದಲಿ ಸಮಾಹಿತಮಂತ್ರಶಾಸ್ತ್ರದಲಿ
ಸರಸಕವಿತಾರಚನೆಯಲಿ ವಿ
ಸ್ತರದುಪನ್ಯಾಸದಲಿ ಭೂಪತಿ
ಕರೆಸಿ ನೋಡಲಿ ನಮ್ಮನೆಂದುದು ಭೂಸುರವ್ರಾತ

ಅಲ್ಲದಿದ್ದೊಡೆ ಶೋಧಿಸಿದ ತನಿ
ಬೆಲ್ಲವಿಕ್ಕಿದ ಹೂರಿಗೆಯ ಮೆದೆ
ಯಲ್ಲಿ ಪರಡಿಯ ಸೇವಿಗೆಯ ಪರಿಪರಿಯ ಪಾಯಸದ
ಪುಲ್ಲಿಗೆಯ ತತ್ಸರಿಯ ಮಂಡಿಗೆ
ಯಲ್ಲಿ ನವಘೃತಸೂಪದಂಶಕ
ದಲ್ಲಿ ನೋಡಲಿ ನಮ್ಮನೆಂದುದು ಭೂಸುರವ್ರಾತ

ಪೂರಿಗೆಯ ಗಾರಿಗೆಯುಲಾಯುಂ
ಣೂರಿಗೆಯ ಲಡ್ಡುಗೆಯ ತುಪ್ಪದ
ತೋರಹಾಲುಂಡೆಗಳ ಯೆಳ್ಳುಂಡಿಗೆಯ ಕೆನೆನೊಸರ
ಚಾರುಶಾಕಾವಳಿಯುಲಾವಿ
ಸ್ತಾರ ಭಕ್ಷ್ಯಾವಳಿಯ ಪಾಕದೊ
ಳೋರೆ ಹುಸಿಯುಂಟೆಂಬ ಯಂತ್ರವ ಕಳಚಬಲುಹುಂಟು

ರಸದ ಹೊಜಲೇಪದಲಿ ಹುದುಗಿದ
ಮಿಸುನಿಯಂತಿರೆ ಜೀವಭಾವ
ಪ್ರಸರದೊಳಗವಲಂಬಿಸಿದ ವರಮಾತ್ಮನಂದದಲಿ
ಎಸೆವ ವಿಪ್ರಾಕಾರದಲಿ ರಂ
ಜಿಸುವ ಭೂಪತಿ ತತ್ಸಭಾಸದ
ವಿಸರಮಧ್ಯದಲಿದ್ದು ಕೇಳಿದನೀಮಹಾಧ್ವನಿಯ

ನೋಡಿದನು ತಮ್ಮನನು ಸನ್ನೆಯ
ಮಾಡಿದೊಡೆ ಕೈಕೊಂಡನವನಿಪ
ಕೂಡಿ ಕುಂತಿಗೆ ಭೀಮಸೇನಂಗೆಱಗಿ ವಿನಯದಲಿ
ಕೂಡೆ ಕುಳ್ಳಿರ್ದಖಿಳವಿಪ್ರರ
ನೋಡಿ ಮೆಲ್ಲನೆ ಘೋತ್ರದರ್ಭೆಯ
ಗೂಡಸಂವರಿಸುತ್ತ ಸಭೆಯಲಿ ನಿಂದನಾಪಾರ್ಥ

ಏನು ಸುದ್ದಿಯುಪಾಧ್ಯರೆದ್ದಿರಿ
ದೇನು ಧನುವಿಂಗಲ್ಲಿಲೇ ತಾ
ನೇನು ಮನದಂಘವಣೆ ಬಯಸಿದಿರೇ ನಿತಂಬಿನಿಯ

ವೈನತೇಯನವಗಡಿಸಿದ ವಿಷ
ವೇನು ಸದರವೊ ಹಾವಡಿಗರಿಗಿ
ದೇನು ನಿಮ್ಮುತ್ಸಾಹವೆಂದುದು ವಿಪ್ರಜನ ನಗುತ

ಮದುವೆ ಬೇಕೇ ಶ್ರೋತ್ರಿಯಸ್ತೋ
ಮದಲಿ ಕನ್ಯಾರ್ಥಿಗಳು ನಾವೆಂ
ಬುದು ನಿಜಾನ್ವಯವಿದ್ಯೆಯಲಿ ಕೊಡುವುದು ಪರೀಕ್ಷೆಗಳ
ಮದುವೆಯಹುದಿದು ಸೌಖ್ಯಪುಣ್ಯಾ
ಪ್ರದವು ಭೂದೇವರಿಗೆ ನೀವು ನೆ
ನೆದುದು ಭಗೀರಥಯತ್ನವೆಂದುದು ವಿಪ್ರಜನ ನಗುತ

ನೀವು ಸ್ವೈರಿಸಿ ನಿಮ್ಮ ಕಾರು
ಣ್ಯಾವಲೋಕನವುಂಟಲೇ ಸ
ಧ್ಭಾವದಲಿ ನೀವ್ ರಚಿಸಿದಾಶೀರ್ವಾದಶಕ್ತಿಯಲಿ
ನಾವು ವಿಜಯರು ಚಾಪಯಂತ್ರವಿ
ದಾವ ಘನವೆಂಬರ್ಜುನನ ಸಂ
ಭಾವನೋಕ್ತಿಗೆ ನಿಲ್ಲದವರೊದಱಿದರು ತಮತಮಗೆ

ಕೆಲರು ಹೋಗದಿರೆಂದು ಜಱಿದರು
ಕೆಲರು ತಾನೇ ಬಲ್ಲನೆಂದರು
ಕೆಲರು ನುಡಿದರು ವಿಪ್ರಸಭೆಗಪಹಾಸ್ಯವಾಯ್ತೆನುತ
ಕೆಲರು ತಪ್ಪೇನೆಂದು ಕಳೆದರು
ಕೆಲರು ಭದ್ರಾಕಾರಗೀತಂ
ಗಳುಕುವುದು ಧನು ಭಾಗ್ಯಮುಖಗೆಂದುದು ಬುಧಸ್ತೋಮ

ತೊಟ್ಟಹೊಸವುಪವೀತ ಧಟ್ಟಿಯ
ಮಟ್ಟಿ ನೊಸಲಲಿ ಕುಶೆಯ ಕರಡಿಗೆ
ಕಟ್ಟಿಯಿರಿಕಿದ ಕಕ್ಷ ಬೆರಳಲಿ ಮುಱಿದ ದರ್ಭೆಗಳ
ಉಟ್ಟಭಾಸುರ ಬಟಲಗಚ್ಚೆಯ
ಲಟ್ಟಹಾಸದ ಜನರ ನಗೆಗಳ
ನಟ್ಟವಿಗನೋಸರಿಸಿ ಸಭೆಯಲಿ ಮೆಲ್ಲನೈತಂದ

ತಿರುಗಿ ಕಂಡರು ಸಕಲಭೂಮಿಾ
ಶ್ವರರು ಗಹಗಹಿಸಿದರಿದೇನರೆ
ಮರಳೊ ಜಡನೊ ವಿಪ್ರವೇಷಚ್ಛನ್ನಸುರಪತಿಯೊ
ಮರುಳುಗಳು ತಾವಕಟ ಮದನನ
ಸರಳ ಮಱುವೊನೆಗಾವನಂತಃ
ಕರಣ ನೆಱೆ ಕಳವಳಿಸದೆಂದರು ನೃಪರು ತಮ ತಮಗೆ

ಧನು ತನಗೆ ನೆಗಹಲ್ಕೆ ಕೃಷ್ಣಾ
ಜಿನವೊ ಸಾಲಿಗ್ರಾಮದೇವರೊ
ವಿನುತತುಲಸಿಯೊ ಕುಶೆಯೊ ದರ್ಭೆಯೊ ಸಮಿಧೆಗಳ ಹೊಱೆಯೊ
ನೆನೆದ ತಿಲವೋ ಮೇಣಿದೌಪಾ
ಸನದ ಕೊಳವಿಯೊ ಬಣಗುವಿಪ್ರನ
ನೆನಹ ನೋಡಿರೆ ಘನವಲಾ ದ್ರೌಪದಿಯ ಸೌಭಾಗ್ಯ

ಲಹರಿ ಮಸಗಿದುದಿತ್ತ ಕಾಂತಾ
ಬಹಳಪಾರಾವಾರಹುಬ್ಬಿನ
ವಿಹತಿಗಳ ತೆರೆ ಮಾಲೆಗಳ ಬೆಳುನೊರೆಯ ಬುದಬುದದ

ಗಹಗಹಿಸಿ ನಗುವಟ್ಟಹಾಸದ
ರಹಣಿಗಳ ರಭಸದ ವಿಡಂಬದ
ವಿಹರಣದ ಚಲದೃಷ್ಟಿಗಳ ಮಱಿಮೀನ ಹೊಳಹುಗಳ

ಇತ್ತ ನೋಡೌ ತಾಯೆ ಹಾರುವ
ರತ್ತ ಗಡ್ಡದುಪಾಧ್ಯರನು ತಾ
ವೆತ್ತುವರು ಗಡ ಧನುವನೆಸೆವರು ಗಡ ತಿಮಿಂಗಿಳನ
ಹೊತ್ತುಗಳೆವರೆ ಲೇಸು ಬಟಿಕಿ
ನ್ನುತ್ತಮುವಲಾ ವಿಪ್ರರೆನೆ ತಲೆ
ಗುತ್ತಿ ನಾಚಿದಳುಂಗುಟಲೌಂಕುತ ಮಹೀತಳವ

ಎಲವೊ ಮಟ್ಟಿಯ ಮದನ ದರ್ಭೆಯ
ತಿಲದ ಮನ್ಮಥ ವಿಮಳಧೋತ್ರದ
ತಳಿರುಗಾಸೆಯ ಕಾಮ ಕೃಷ್ಣಾಜಿನದ ಕಂದರ್ಪ
ನಳಿಮುಖಿಯನು ವರಿಸು ಬಾ ನಿನ
ಗಳವಡುವಳೇ ಯಕ್ಕ ಮರಳಿಯೆ
ತಲೆವಿಡಿವೆವಾವ್ ನೋಡಿಯೆಂದರು ನಗುತ ಚಪಳೆಯರು

ಅದರೊಳಗೆ ಕೆಲರೆಂದರಾಗಳು
ವಿದಿತಹಾಸ್ಯವಿದೇಕೆ ಆರಂ
ಗದಲಿದಾರುವೆ ಬಲ್ಲಿದರೊ ಘನಗುಪ್ತವೇಷಿಗಳು
ಬುಧರೊಳಗೆ ಬಂದಿಹರೊ ವೇಷದೊ
ಳಿದಱಿನುವ ಮುರವೈರಿ ಬಲ್ಲನು
ಇದು ನಿದಾನವೆನಲ್ಕೆ ಯಾದವಪಡೆಯೊಳಗೆ ಹರಿಯು

ಅದೆ ಹಲಾಯುಧ ನೋಡು ವಿಪ್ರೌ
ಘದಲಿ ಪಾರ್ಥನ ಬರವು ಮೇಘದ
ಹೊದಿಕೆಗಳ ಹರಿದಶ್ವನಂತಿರೆ ವಿಪ್ರವೇಷದಲಿ
ವಿದಿತವೇ ವಸುದೇವನಾಣೆಂ
ದುದಕೆ ತಪ್ಪದಲ್ಪೈ ಸಭಾಮ
ಧ್ಯದಲಿ ಬರುತಿರುವಾತನರ್ಜುನನೆಂದನಸುರಾರಿ

ಅವನಿಪತಿ ಕೇಳಿತ್ತ ಲೀಪಾ
ರ್ಥಿವರ ಪರಿಹಾಸವನು ಕಾಂತಾ
ನಿವಹದಲಿ ನಿಬ್ಬರದ ನುಡಿಗಳನಾ ಮಹೀಸುರರ
ವಿವಿಧಕಟುಮಧುರೋಕ್ತಿವಿನ್ಯಾ
ಸವನು ಕೇಳುತ ಮುಗುಳನಗೆಯಲಿ
ನವಮದದ್ವಿಪದಂತೆ ಗರುವಾಯಿಯಲಿ ನಡೆತಂದ

ಬರುತ ಭೀಷ್ಮದ್ರೋಣಕೃಪರಿಂ
ಗೆಱಗಿದನು ಮನದೊಳಗೆ ಯಾದವ
ರರಸಹಂತಿಯ ಹರಿಯನಭಿವಂದಿಸಿದನಕ್ಷಿಯಲಿ
ಸುರಪತಿಗೆ ಗುಹಗಣಪದಿಕ್ಪಾ
ಲರಿಗೆ ರುದ್ರಾದಿತ್ಯವಸುಮು
ಖ್ಯರಿಗೆ ಮಣಿದನು ಬಂದನಗ್ಗದ ಚಾಪವಿದ್ದೆಡೆಗೆ

ಮೊದಲಲಂಬುಜಭವನನಾಮ
ಧ್ಯದಲಿ ಮಧುಸೂದನನ ನಾಬಿಲು
ತುದಿಯಲಾವಹಿಸಿದ್ದನಗ್ಗದ ನೀಲಲೋಹಿತನ

ಇದು ಮಹಾಭೂಮಿಪರ ಬಿಂಕವ
ನೊದೆದ ಧನುವೇ ಪೂತುರೆನುತೆ
ತ್ತಿದನು ಬಾಗೊತ್ತಿದನು ಕೊರಳಲಿ ತೊಡಿಸಿದನು ತಿರುವ

ಹೊಯ್ದು ತಿರುವನು ಸೆಳೆದು ಕಿವಿವರೆ
ಗೊಯ್ದನಿದು ಹದವಿಲ್ಲಲಾ ಬಿಲು
ಹೊಯ್ದುದಕಟಾ ಬಱಿದೆ ಹೆದಱಿತು ಮಾಗಧಾದಿಗಳು
ಮೆಯ್ದೆಗೆದರಿದಱೊಳಗೆ ಹೆಸರಿನ
ಗೆಯ್ದಬೇಕಿಂನ್ನೈಸಲೇಯೆಂ
ದಯ್ದುಬಾಣವ ಕೊಂಡು ಯಂತ್ರದ ಹೊಳಹನೀಕ್ಷಿಸಿದ

ಬಾಗಿ ನೋಡಿದ ತೈಲಕುಂಭವ
ನಾಗ ಹೊಳೆಗುಗ್ಗು ಮತ್ಸ್ಯಲೋಚನ
ಲಾಗಿನನುವನು ಕಂಡು ಹರುಷಿಸಿ ತಿರುವ ತೊಡರಿಸಿದ
ತೂಗಿ ಕಿವಿವರೆಗೊಯ್ದು ಯಂತ್ರವ
ತಾಗಿಸಿದನ[illegible] ಪಾರ್ಥನ
ಲಾಗುವೇಗವನಾರು ಬಲ್ಲರು ಚಾಪತಂತ್ರದಲಿ

ಆಗ ಸೂಸಿದ ಧಾರೆಯಂತ್ರದ
ಜಾಗಕೆಡೆಹಿದರಾಗ ಭೂಪರು
ಜಾಗು ತ್ರಿಪುರದಮಾರಿ ಯೆಂದರು ತಮ್ಮ ಮನದೊಳಗೆ
ಜಾಗು ಧಣಿಧಣಿ ಪೂತು ಕಾರ್ಮುಕ
ಯೋಗಸಿದ್ಧ ಮುರಾರಿ ಕೋದಂ
ಡಾಗಮತ್ರಿಪುರಾರಿ ಯೆಂದುದು ಸಕಲಜನನಿಕರ

ಹಾಯೆನುತ ಬೊಬ್ಬಿಱಿದು ವಿಪ್ರನಿ
ಕಾಯ ಕುಣಿದುದು ಕಮಲಮುಖಿ ನಿ
ರ್ದಾಯದಲಿ ಸೇರಿದಳು ಹಾರುವಗೆನುತ ಹರುಷದಲಿ
ಆಯುವತಿಜನಜಲಧಿ ಮುಸುಕಿತು
ಬಾಯ ಮೌನದ ಬೆರಳಮೂಗಿನ
ರಾಯರಿರ್ದುದು ಹೊತ್ತದುಗುಡದ ಭಂಗಜಲಧಿಯಲಿ

ತೂಗಿ ಶಿರವನು ರಾಮಕೃಷ್ಣರು
ಜಾಗುಯೆಂದರು ಭೀಷ್ಮದ್ರೋಣರು
ಲಾಗು ಮಿಕ್ಕರಿಗುಂಟೆ ಯಂತ್ರದ ಹೊಳಹನೀಕ್ಷಿಸಲು
ಬೇಗದಲಿ ದುರ್ಯೋಧನಾದಿಗ
ಳಾಗ ಹೆದಱಿತು ಕರ್ಣಸೈಂಧವ
ರೀಗಳಿವನಾರೆನುತ ತಮ್ಮೊಳಗಾಗ ಗುಜುಗುಜಿಸೆ

ಮೊೞಗಿದುವು ನಿಸ್ಸಾಳತತಿ ಹೆ
ಕ್ಕಳದ ಹೆಚ್ಚಿಗೆಯಲ್ಲಿ ದಿವಿಜಾ
ವಳಿಯ ದುಂದುಭಿರವದಲುಬ್ಬಿದ ಸಾಧುವಾದಗಳ
ಕಳಕಳದ ಕೊಲ್ಲಣಿಗೆಗಳ ಹೂ
ಮೞೆಯ ಹುರದ ಹೊನಲಿನಲಿ ಜನ
ಮುೞಗಿತದ್ಭುತರಸದಲಳ್ಳಿಱಿದುದು ಜಗತ್ತ್ರಯವ

ಕಿತ್ತಸುರಗಿಯ ಸುಭಟರಂದಱು
ವತ್ತುಸಾವಿರವೀರ ಪಾರ್ಥನ
ಸುತ್ತ ಮುತ್ತಿದರಂಗರಕ್ಷಣೆಗರಸನಾಜ್ಞೆಯಲಿ

ಇತ್ತ ಮಹಿಳಾಜನದ ಮೌಳಿಯ
ಮುತ್ತು ಕುಸುಮಾಯುಧನ ಥಟ್ಟಿನ
ಮತ್ತಗಜವೈತಂದಳಲ್ಲಿಗೆ ದ್ರೌಪದೀದೇವಿ

## ಪಾಂಚಾಲಿಯು ಅರ್ಜುನನಿಗೆ ಮಾಲೆ ಹಾಕಿದುದು

ತೊಲತೊಲಗು ಮನ್ಮಥನ ಹೊಗರಿ
ಟ್ಟಲಗು ಬರುತಿದೆ ಸಾರು ಸಾರೆಂ
ದುಲಿವವೊಲು ಚರರುಲಿದು ಹೊಯ್ವರು ಮುಂದೆ ಕಂಬಿಯಲಿ
ನಳಿನಮುಖಿ ದಂಡಿಗೆಯಲೈತಂ
ದಿಳಿದಳೀತನ ಹೊರೆಯಲಾಗಳ ಕಳ
ಕಳದಲೊಳತೋಟಿ ಮಸಗಿತು ಹರುಷಲಜ್ಜೆಯಲಿ

ಲಲಿತಮದಿರಾಪಾಂಗದಲಿ ಮು
ಕ್ಕುಳಿಸಿ ದಣಿಯವು ಕಂಗಳುಬ್ಬುವ
ಪುಳಕಜಲದಲಿ ಮೂಡಿ ಮುಳುಗದು ಮೈ ನಿತಂಬಿನಿಯ
ತಳಿತಲಜ್ಜೆಯ ಭರಕೆ ಕುಸಿದು
ಚ್ಚಳಿಸಿತಂತಃಕರಣಮಾಂಗಿಕ
ಲುಳಿತಸಾತ್ವಿಕಭಾವವೇಧೈಸಿದುದು ಮಾನಿನಿಯ

ಧರಣಿಪತಿ ಕೇಳ್ ಬಹಳಲಜ್ಜಾ
ಭರದ ಭಯದಲಿ ಬೆಮರಿಡುತ ಕುಚ
ಭರಧಿ ಮೇಲುದ ಜಾಱೆ ಜೋಡಿಸಿ ನಿಮಿರ್ದು ನಡುನಡುಗಿ
ತರುಣಿ ನಿಜತನುಪರಿಮಳದಿ ಮಿಗೆ
ಹೊರೆದ ಹೂವಿನ ದಂಡೆಯನು ನೃಪ
ವರನ ಕೊರಳಲಿ ಹಾಯ್ಕಿದಳು ಜಯಯೆನೆ ಸುರಸ್ತೋಮ

ಕೊರಳ ಹೂವಿನ ದಂಡೆಯಲಿ ನಿಜ
ಕರದ ಭಾರಿಯ ಧನುವಿನಲಿ ವೈ
ಪರಿಮಳದ ಸಿಟ್ಟೆಸಳುಗಂಗಳ ಕೆಲದ ಯುವತಿಯಲಿ
ವರನ ಪರಿ ಹೊಸತಾಯ್ತು ಹೊತ್ತನು
ಹರನ ಹಗೆ ಹಾರುವರಯನು ನ
ಮ್ಮರಸಿ ತಾ ಹಾರುವಿತಿಯೆಂದರು ನಗುತ ಚಪಳೆಯರು

**ಕುಮಾರವ್ಯಾಸ–ಭಾರತ**
(೧೪೩೦)

# ೭೧. ಅಕ್ಷಯಾಂಬರ

ಸಕಲಶಕ್ತಿಸ್ಫುರಿತವಿಮಳಾಂ
ಬಿಕೆಯವೋಲ್ ವರಮಂತ್ರದೇವೀ
ಪ್ರಕರಮಧ್ಯದಿ ಶೋಭಿಸುವ ಸಾವಿತ್ರಿಯಂದದಲಿ
ವಿಕಟರಶ್ಮಿನಿಬದ್ಧರತ್ನ
ಪ್ರಕರಮಧ್ಯದ ಕೌಸ್ತುಭದ ವೋಲ್
ಚಕಿತಬಾಲಮೃಗಾಕ್ಷಿ ಮೆಱೆದಳು ಯುವತಿಮಧ್ಯದೊಳು

ಸುತ್ತಲೆಸೆಯೆ ವಿಲಾಸಿನೀಜನ
ಹತ್ತುಸಾವಿರ ನಡುವೆ ಕಂಡನು
ಮತ್ತಕಾಶಿನಿಯನು ಪತಿವ್ರತೆಯರ ಶಿರೋಮಣಿಯ
ಹತ್ತಿರೈತರಲಂಜಿದನು ತ
ನ್ನುತ್ತಮಾಂಗಕೆ ಕರಯುಗವ ಚಾ
ಚುತ್ತ ಬಿನ್ನಹ ಮಾಡಿದನು ಪಾಂಚಾಲನಂದನೆಗೆ

ತಾಯೆ ಬಿನ್ನಹವಿಂದು ನಿಮ್ಮಯ
ರಾಯ ಸೋತನು ಜೂಜಿನಲಿ ಕುರು
ರಾಯ ಗೆಲಿದನು ಕೋಶವನು ಕರಿತುರಗರಥಸಹಿತ
ನೋಯಲಾಗದು ಹಲವುಮಾತೇ
ನಾಯುಧಿಷ್ಠಿರನೃಪತಿ ಸೋತನು
ತಾಯೆ ಭೀಮಾರ್ಜುನನಕುಲಸಹದೇವನೀವ್ ಸಹಿತ

ಅರಳಿದಂಬುಜವನಕೆ ಮಂಜಿನ
ಸಱಿಯು ಸುರಿವಂದದಲಿ ಸುಗ್ಗಿಯ
ಸಿರಿಯ ಹೊಸಬೆಳ್ದಿಂಗಳನು ಬಲುಮುಗಿಲು ಕವಿವಂತೆ

ಚರಣ ಬಿನ್ನಹಕರಸಿ ಮೊದಲಾ
ಗಿರೆ ಸಮಸ್ತಸಖೀಜನದ ಮುಖ
ಸರಸಿರುಹ ಬಾಡಿದುದು ಮುಸುಕಿತು ಮೌನಮುಯಜಲದ

ದೂತ ಹೇಳ್ಳೈ ತಂದೆ ಜೂಜನ
ಜಾತರಿಪು ಮಾಡಿದನೆ ಸೋತನೆ
ಕೈತವದ ಬಲೆಗಾಜಿರವದಿದು ಶಕುನಿ ಕೌರವರು
ದ್ಯೂತದಲಿ ಮುನ್ನೇನನೊಡ್ಡಿಯೆ
ಸೋತನೆನ್ನನು ಶಿವ ಶಿವಾ ನಿ
ರ್ಧೂತಕಿಲ್ಬಿಷನರಸನೆಂದಳು ದ್ರೌಪದೀದೇವಿ

ಮೊದಲಲರ್ಥವ ಹೆಸರುಗೊಂಡೊ
ಡ್ಡಿದನು ಸೋತನು ಮಗುಳೆ ಮಗುಳೊ
ಡ್ಡಿದನು ಹೇರಾಳದಲಿ ಧನವನು ಕರಿಘಟಾವಳಿಯ
ಕುದುರೆ ರಥ ನಿಮ್ಮಡಿಯ ಮೇಳದ
ಸುದತಿಯರನೊಡ್ಡಿದನು ಸೋತನು
ತುದಿಯಲನುಜರನೊಡ್ಡಿ ಸೋತನು ದೇವಿ ಕೇಳೆಂದ

ಬಳಿಕ ತನ್ನನು ಸೋತನಲ್ಲಿಂ
ಬಳಿಕ ನಿಮ್ಮಡಿಗಳಿಗೆ ಬಂದುದು
ಖಳರು ಶಕುನಿಸುಯೋಧನರು ನೀವಾಗಳೆಂದಿರಲೆ
ಅಳುಕಬೇಡಿನ್ನೇನು ಭೂಪತಿ
ತಿಲಕ ತನ್ನನು ಮುನ್ನ ಸೋತನು
ಬಳಿಕಲೆನ್ನನು ಸೋತನೇ ಹೇಳೆಂದಳಿಂದುಮುಖಿ

ಆಹುದು ತನ್ನನೆ ಮುನ್ನ ಸೋತನು
ಮಹಿಳೆಗೊಡ್ಡಿದೆನೆಂದು ಸಿಮ್ಮನು
ಮಹಿಪ ಸೋತನು ತಾಯೆ ಬಿಜಯಂಗೈಯ್ಯ ಬೇಹುದೆನೆ
ವಿಹಿತವಿದು ಮಾನುಷವೆ ದೈವದ
ಕುಹಕವೈ ಸಲೆ ಮಗನೆ ತಾನೇ
ಬಹೆನು ಸೀ ಹೋಗೊಮ್ಮೆ ಹೇೞೀಮಾತನಾಸಭೆಗೆ

ಮುನ್ನ ತನ್ನನು ಸೋತ ಬೞಿಕಿಸೊ
ಳಿನ್ನ ಸೋತರೆ ಸಲುವುದೇ ಸಂ
ಪನ್ನವಿಮಳಜ್ಞಾನರಱಿದೀಪ್ರಶ್ನೆಗುತ್ತರವ
ಎನ್ನ ಮೆಚ್ಚಿಸಿ ಕೊಡಲಿ ತಾ ಬಹೆ
ನಿನ್ನು ಹೋಗೆನಲವನು ಭಯದಲಿ
ತನ್ನೊಳಗೆ ಬೆದಱುತ್ತ ಬಂದನು ಕೌರವನ ಹೊರೆಗೆ

ಜೀಯ ದೇವಿಯರೆಂದಮಾತಿದು
ರಾಯ ಮುನ್ನವೆ ತನ್ನ ಸೋತಬು
ಜಾಯತಾಕ್ಷಿಯ ಬೞಿಕ ಸೋತೊಡೆ ಧರ್ಮಸೂಕ್ಷ್ಮದಲಿ
ರಾಯಸಭೆಯಲಿ ಹಿರಿಯರಱಿದಿದ
ಱಾಯತವ ಹೇೞಿದರೆ ಬಹೆನೆಂ
ದಾಯುವತಿ ಬಿನ್ನಹವ ಮಾಡಿದಳೆಂದು ಕೈಮುಗಿದ

ತಮ್ಮ ಬಾರೈ ಹೋಗು ನೀ ದಿಟ
ನಮ್ಮವರೆ ಹಿಡಿದೆಳದು ತಾ ನೃಪ
ರೆಮ್ಮ ಕಿಂಕರರೈವರಿವರಿಂದ್ದೇನ ಮಾಡುವರು

ತಮ್ಮ ಕರ್ಮವಿಪಾಕಗತಿ ತಮ
ತಮ್ಮನೇ ಕಾಡುವುದು ಧರ್ಮದೊ
ಳಿಮ್ಮ ಕಾರಣವಲ್ಲ ನೀ ಹೋಗೆಂದು ನೇಮಿಸಿದ

ಗಾಳಿಯಳ್ಳಿಯು ನಿಱಿಯಲಗ್ನಿ
ಜ್ವಾಲೆಯಲಿ ತಡೆಯುವೆ ಕಡುಹಿನ
ಕಾಳಕೂಟದ ನದಿಗೆ ನಂಜಿನ ಹೊನಲು ಬೆಱಸಿತಲೆ
ವಾಳೆಯವೆ ದುಶ್ಯಾಸನನು ಜಗ
ದೂಱಿಗದ ದುಱುದುಂಬಿ ಕುರುಪತಿ
ಮೇಲೆ ನೇಮಿಸಲುಚಿತಗೈವನೆ ಭೂಪ ಕೇಳೆಂದ

ಬಂದನವನಬುಜಾಕ್ಷಿಯಿದಿರಲಿ
ನಿಂದನೆಲೆಗೇ ಗರುವತನವಿದು
ಹಿಂದೆ ಸಲುವುದು ಸಲ್ಲದಿದು ಕುರುರಾಜಭವನದಲಿ
ಇಂದು ಮೆಱೆವರೆ ನಮ್ಮ ತೊತ್ತಿರ
ಮುಂದೆ ಮೆಱೆ ನಡೆ ಮಂಚದಿಂದಿೞಿ
ಯೆಂದು ಜಱೆದನು ಕೌರವಾನುಜನಾಮಹಾಸತಿಯ

ಜನಪನನುಜನು ನೀನೆನಗೆ ಮೈ
ದುನನಲಾ ತಪ್ಪೇನು ಯಮನಂ
ದನನು ಸೋಲಲಿ ತನ್ನ ಪ್ರಶ್ನೆಗೆ ಕೊಡಲಿ ಮಱುಮಾತ
ಅನುಜ ಕೇಳೈ ಪುಷ್ಪವತಿಯಾ
ನೆನಗೆ ರಾಜಸಭಾಪ್ರವೇಶನ
ವನುಚಿತವಲೇ ಹೇಱೆನಲು ಖಳರಾಯ ಖತಿಗೊಂಡ

ಎಲ್ಲಿಯದು ದುಷ್ಪ್ರಶ್ನೆ ಮಱುಮಾ
ತೆಲ್ಲಿಯದು ನೀ ಪುಷ್ಪವತಿಯಾ
ಗಲ್ಲಿ ಫಲವತಿಯಾಗು ನಡೆ ಕುರುರಾಜಭವನದಲಿ
ಖುಲ್ಲರೈವರು ತಮ್ಮ ಸೋತರು
ಬಲ್ಲವಿಕೆಯುಚಿತವನು ಮೌಳಿಯ
ನಲ್ಲಿ ತೋಱಾ ಯೆನುತ ತಪ್ಪಿದನಹಹ ಸಿರಿಮುಡಿಗೆ

ಆಮಹೀಶಕ್ರತುವರದೊಳು
ದ್ದಾಮಮುನಿಜನರಚಿತಮಂತ್ರ
ಸ್ತೋಮಪುಷ್ಕರಪೂತಪುಣ್ಯಜಲಾಭಿಷೇಚನದ
ಶ್ರೀಮುಡಿಗೆ ಕೈಯಿಕ್ಕಿದನು ವರ
ಕಾಮಿನೀನಿಕುರುಂಬ ವಕಟಕ
ಟಾ ಮಹಾಸತಿ ಶಿವ ಶಿವಾ ಯೆಂದಂದೊದಱಿತಲ್ಲಲ್ಲಿ

ಬೆದಱುಗಂಗಳ ಬಿಟ್ಟಮುಂಡೆಯ
ಹುದಿದ ಹಾಹಾರವದ ತೊಡಕಿದ
ಪದಯುಗದ ಮೇಲುದಿನ ಬೀದಿಯ ಧೂಳಿಧೂಸರದ
ವದನಕಮಲದ ಖಳನ ಮಾನಾಂ
ಗದಲಿ ಬಾಗಿದ ತನುಲತೆಯ ವರ
ಸುದತಿ ಬಂದಳು ರಾಜಸಭೆಗೆ ನೃಪಾಲ ಕೇಳೆಂದ

ಅಹಹ ಪಾಂಡವರಾಯಪಟ್ಟದ
ಮಹಿಳೆಗಿದು ವಿಧಿಯೇ ಮಹಾಕ್ರತು
ವಿಹಿತಮಂತ್ರಜಲಾಭಿಷಿಕ್ತಕಚಾಗ್ರೆಗಿದು ವಿಧಿಯೆ

ಮಿಹಿರಬಿಂಬವ ಕಾಣದಾನೃಪ
ಮಹಿಳೆಗಿದು ವಿಧಿಯೇ ವಿಧಾತೃನ
ಕುಹಕವೈ ಸಲೆ ಶಿವ ಶಿವಾ ಯೆಂದರು ಸಭಾಸದರು

ತುಳುಕಿದುವು ಕಂಬನಿಗಳಾಸಭೆ
ಯೊಳಗೆ ದುಶ್ಯಾಸನಸುಯೋಧನ
ಖಳಶಿರೋಮಣಿಶಕುನಿಕರ್ಣಜಯದ್ರಥಾದ್ಯರಿಗೆ
ತಳೆತುದದ್ಭುತಹರ್ಷ ಮುಖವುಂ
ಡಲಕೆ ಸೀರೆಯನಿಕ್ಕಿ ನಯನೋ
ಜ್ಜ್ವಲಿತಜಲಧಾರೆಯಲಿ ನೆನೆದುದು ಸಭೆ ವಿಷಾದದಲಿ

ವ್ಯಾಕುಲವನಿದ ಕಾಂಬ ಕಣ್ಣುಗ
ಳೇಕೆ ರಾಜಕುಮಾರಿಯೀಕೆಯ
ಶೋಕರಸವನು ಕುಡಿವ ಕರ್ಣದ್ವಯವಿದೇಕೆಮಗೆ
ಏಕೆ ವಿಧಿ ನಿರ್ಮಿಸಿದನೋ ನಾ
ವೇಕೆ ಸಪ್ರಾಣರೊ ಶಿವಾ ಯೆಂ
ದಾಕಠೋರರ ಬೈದುದಾಸಭೆಯೊಳು ಬುಧಸ್ತೋಮ

ವನಜಮುಖಿಯಕ್ಕೈಯನು ದುಶ್ಯಾ
ಸನನ ದುರ್ನೀತಿಯನು ದುರ್ಯೋ
ಧನನ ದುಶ್ಚೇಷ್ಟೆಯನು ಕಂಡೀಭೀಮಫಲುಗುಣರು
ಮನದೊಳಗೆ ಕೌರವನ ಕರುಳನು
ತನಿರಕುತದಲಿ ಕುದಿಸಿದರು ನಿಜ
ಜನಿತಕರ್ಮಕ್ರಮವ ನೆನೆವುದನಱಿದನಾಭೂಪ

ಹುಬ್ಬಿನಲಿ ನಿಲಿಸಿದನು ಪವನಜ
ನುಬ್ಬಟೆಯನರ್ಜುನನ ವಿಕೃತಿಯ
ನಿಬ್ಬರಾಳಾಪವನು ಧರ್ಮರಹಸ್ಯನಿಷ್ಠೆಯಲಿ
ಹಬ್ಬಿದುದು ಭೀಷ್ಮಂಗೆ ಶೋಕದ
ಮಬ್ಬು ಗುರುಗೌತಮರು ವಿದುರನ
ಖರ್ಬಖೇದಾಂಬುಧಿಯೊಳದ್ದರು ಭೂಪ ಕೇಳೆಂದ

ಇತ್ತಲಬಲೆಯ ವಿಧಿಯ ಕೇಳತಿ
ಮತ್ತನೈ ಧೃತರಾಷ್ಟ್ರಸುತನಾ
ಮತ್ತಗಜಗಾಮಿನಿಯ ಬಿಡಿಸಿದನವನ ಕೈಯ್ಯಿಂದ
ನೆತ್ತ ಸೋತುದು ನಿನ್ನನೂಡಿ ನೃ
ಪೋತ್ತಮನು ಸಲೆ ಮಾರವಾರಿದ
ನತ್ತೊಡೇನಹುದೆಲೆಗೆ ನಡೆ ತೊತ್ತಿರ ಹಿಂಡ ಹೊಗುಯೆಂದ

ಲಲಿತಬುದ್ಧಿಗಳೀಗ ನೋಡಿರಿ
ಲಲನೆಯನು ಸತಿ ದಿಟ್ಟೆಯನ್ನದಿ
ರೆಲೆ ಸುಯೋಧನ ಕೇಳು ಸಭೆಯಿದು ದೋಷರಹಿತವಲೆ
ಗೆಲುವುದೆಂತುಟೊ ತನ್ನ ಸೋಲಿನ
ಬಳಿಕ ಸೋತರೆ ಧರ್ಮಗತಿಯನು
ತಿಳಿದು ಹೇಟಲಿ ಸತ್ಸಭಾಸದರೆಂದಳಿಂದುಮುಖಿ

ಹಿರಿಯರಿಲ್ಲದ ಸಭೆ ಮನುಷ್ಯರ
ನೆರವಿಯದು ಸಭೆಯಲ್ಲ ಮೂರ್ಖರು
ಹಿರಿಯರಲ್ಲ ಯಥಾರ್ಥಭಾಷಣಭೀತಚೇತನರು

ಹಿರಿಯರಿದೆ ಸಾಮಾಜಿಕರು ಸ
ಚ್ಚರಿತರಿದೆಲಾ ಸ್ತ್ರೀಮತವನು
ತ್ತರಿಸಬಾರದೆ ಧರ್ಮಮಾರ್ಗದೊಳೆಂದಳಿಂದುಮುಖಿ

ಚಪಳ ಫಡ ಹೋಗಿವಳು ಹಲಬರ
ನುಪಚರಿಸಿದುದನಱಿಯಲಾದುದು
ದ್ರುಪದನಂದನೆ ನಡೆ ವಿಳಾಸಿನಿಯರ ನಿವಾಸದಲಿ
ಕೃಪಣನೇ ಕುರುರಾಯ ನಿನಗಿ
ನ್ನಪದೆಸೆಯ ಹೊಲೆ ಹೋಯ್ತು ರಾಯನ
ವಿಪುಳವಿಭವವನನುಭವಿಸು ಹೋಗೆಂದನಾಕರ್ಣ

ಅಹುದಲೇ ಬೞಿಕೇನು ದಾಸ್ಯಕೆ
ವಿಹಿತವಾದುದು ನಿನ್ನ ತನುವಿನ
ಲಹ ಮನೋವ್ಯಥೆಯೇಕೆ ರಾಣೀವಾಸಪದವಿಯಲಿ
ಮಹಿಳೆಯರ ಸಖ್ಯದಲಿ ಸೌಖ್ಯದ
ರಹಣಿಗೊಡಬಡು ವಾರಕದಲತಿ
ಬಹಳಭೂಷಣಭಾರದಲಿ ಮೆಱೆಯೆಂದನಾಶಕುನಿ

ವಾರಕದ ವಿವಿಧಾಭರಣಶೃಂ
ಗಾರವಂತಿರಲೀಕೆ ಯಾಡಿದ
ಸಾರಭಾಷೆಗೆ ನೆನೆಯಿರೈ ನಿರ್ವಾಹಸಂಗತಿಯು
ಓರೆಪೋರೆಯಲಾಡಿ ಧರ್ಮದ
ಧಾರಣೆಯ ದಟ್ಟಿಸುವುದಿದು ಗಂ
ಭೀರರಿಗೆ ಗರುವಾಯಿಯೋ ಸುಡಲೆಂದನಾಭೀಷ್ಮ

ತುಷ್ಟಿಸಲಿ ಧನವಮಾನ ಗರ್ವದ
ಬೆಟ್ಟ ಬಿಱಿಯಲಿ ಜೀವನೊಡಲನು
ಬಿಟ್ಟು ಹೋಗಲಿ ಬಿಡೆನು ಧರ್ಮವನೆಂದು ಯಮಸೂನು
ನೆಟ್ಟನೇ ನಿಶ್ಚೈಸಿದನು ಜಗ
ಜಟ್ಟಿ ಭೀಮಾರ್ಜುನರಿಂದೆಲ್ಲವ
ಬಿಟ್ಟು ಭೂಪನ ಮನವ ಹಿಡಿದಿಹರೆಂದನಾಭೀಷ್ಮ

ಅಱಿಯದಿಹುದೇ ಧರ್ಮ ಸತ್ಯದ
ನೆಳಲು ಪೋಗದೆ ಕೀರ್ತಿವಧುವಿನ
ಸುಳಿವು ನೋಯದೆ ತಳಿರು ಬಾಡದೆ ಧೈರ್ಯ ಸುರಕುಜದ
ಹಱಿವಿಗಳುಕದೆ ವೈರಿವರ್ಗದ
ಕಳಕಳಕೆ ಕೈಗೊಡದೆ ನೃಪನಿ
ರ್ಮಳದೊಳಿರ್ದೊಡೆ ನಿಮಗೆ ಸದರವೆ ಯೆಂದನಾಭೀಷ್ಮ

ಸೋತ ಬಱಿಕಿವಳಿಮ್ಮ ವಶವಿ
ಖ್ಯಾತಿಯಲಿ ನಾವ್ ನಡೆವರಲ್ಲ ವ್ಯ
ಥಾತಿರೇಕವ ನುಡಿವಿರೇ ತಾವಂಜುವುವೆ ನಿಮಗೆ
ಈತಳೋದರಿ ತೊತ್ತಿರಲಿ ಸಂ
ಘಾತವಾಗಲಿ ಸಾಕು ನಿಮ್ಮಯ
ಮಾತೆನುತ ಕುರುರಾಯ ಜಱಿದನು ಭೀಷ್ಮಗುರುಕೃಪರ

ಕೋಪ ಕಿಡಿಯಿಡಲಾಗ ರೌದ್ರಾ
ಟೋಪದಲಿ ರಂಜಿಸುವ ಭೀಮನ
ರೂಪ ಕಂಡನು ನುಡಿದನಾಗಳೆ ಬೆರಳ ಸನ್ನೆಯಲಿ

ಪಾಪರಹಿತನೆ ಸಕಲಧರ್ಮಕ
ಳಾಪ ನೀನಱಿಯದುದೆ ಯಿಾಕುರು
ಭೂಪನು ಭ್ರಮಿತನವ ಸೈರಿಸುಯೆಂದನಾಭೂಪ

ಅಕಟ ಧರ್ಮಜ ಭೀಮಫಲುಗುಣ
ನಕುಲಸಹದೇವಾದ್ಯರಿರ ಬಾ
ಲಿಕೆಯನೊಪ್ಪಿಸಿ ಕೊಟ್ಟಿರೇ ವ್ಯತ್ಯವಿನ ತಾಳಿಗೆಗೆ
ವಿಕಳರಾದಿರೆ ನಿಲ್ಲಿ ನೀವಿಂ
ದಕುಟಿಲರಲಾ ಭೀಷ್ಮಗುರುಬಾ
ಹ್ಲಿಕಕೃಪಾದಿಗಳುತ್ತರವ ಕೊಡಿಯೆಂದಳಿಂದುಮುಖಿ

ಕಂಗಳಿಂದನುಯೋಗ ನಿಜಹ
ಸ್ತಾಂಗುಳಿಯಲುತ್ತರ ಲಸದ್ಭ್ರೂ
ಭಂಗದಲಿ ಸಂದೇಹ ಮುಖವಿಕೃತಿಯಲಿ ದುರ್ನೀತಿ
ಇಂಗಿತದಲಾಂಗಿಕದ ಭಾವದ
ಭಂಗವಿಧಿಯನು ಯೋಗಯುಕ್ತನ
ಯಂಗಳನು ತಿಳಿದುಸುರದಿರ್ದುದು ಸಭೆ ಸುಭೀತಿಯಲಿ

ಹಾರಪದಕಕಿರೀಟಮಣಿಕೇ
ಯೂರಕರ್ಣಾಭರಣವೆಂಬಿವು
ಭಾರವಲ್ಲಾ ತೆಗೆಯ ಹೇೞ್ ದಾಕ್ಷಿಣ್ಯವೇನಿದಕೆ
ನಾರಿಗೀವಸ್ತ್ರಾಭರಣಶೃಂ
ಗಾರವೇಕಿನ್ನಿವನು ತೆಗೆ ಕೈ
ವಾರವಿನ್ನೇಕೆಂದು ದುಶ್ಶಾಸನಗೆ ನೃಪ ನುಡಿದ

ತೆಗೆದು ಬಿಸುಟರು ಹಾರಪದಕಾ
ದಿಗಳನಿವರ್ಕೈವರು ದುಕೂಲವ
ನುಗಿದು ಹಾಯ್ಕಿದರಿದ್ದರಾಗೊಂದೊಂದು ವಸ್ತ್ರದಲಿ
ಹೊಗೆಮೊಗದ ಕಿಱುಗಣ್ಣ ಕೆಮ್ಮೀ
ಸೆಗಳ ಗುಜುರಿನ ಜುಂಜುಕೇಶದ
ವಿಗಡನೆದ್ದನು ಬಂದು ಹಿಡಿದನು ದ್ರೌಪದಿಯ ಸೆಱಗ

ಮುಱುಹಿದರು ಮುಸುಡುಗಳ ಮಿಗೆ ನೀ
ರೊಱೆವ ಕಂಗಳಲಕಟಕಟ ನಿ
ಷ್ಠುರವಿದೇಕನುಚಿತವಿದೇಕಪಕೀರ್ತಿಯೇಕೆನುತ
ಕಱಗಿದರು ಕಂದಿದರು ಮೊಮ್ಮಲ
ಮಱುಗಿದರು ಭೀಷ್ಮಾದಿಗಳು ಝು
ರ್ಝುರಿತರಾದರು ತಡೆಯಲಾರದೆ ಖಳನ ದುಷ್ಕೃತಿಯ

ಅಳುಕಿದನೆ ಸುಡಲವನ ಮೇಲುದ
ಸೆಳೆದೊಡುನ್ನತಕುಚವ ನಳಿತೋ
ಳ್ಗಳಲಿ ಮುಚ್ಚಿದಳಬಲೆ ಬೆಚ್ಚಿದಳವನ ನಿಷ್ಠುರಕೆ
ಕಳವಳಿಸಿದಳು ಬೆರಳಿನಲಿ ದೃಗ್
ಜಲವ ಮಿಡಿಯುತ ನೋಡಿದಳು ನೃಪ
ತಿಲಕನನು ಭೀಮಾರ್ಜುನರ ಮಾದ್ರೀಕುಮಾರಕರ

ಮುಱಿದುದನಿಬರ ಮೋಱೆ ಮಹಿಪನ
ಕೊರಳ ಕೊಂಕಿನಲಿರ್ದರಾಸೋ
ದರರು ಸಾರವನಲ್ಲಿ ಕಾಣದೆ ಭೀಷ್ಮಗುರುಕೃಪರ

ತರಳೆ ನೋಡಿದಳಕಟ ಗಂಗಾ
ವರಕುಮಾರದ್ರೋಣಕೃಪರಿರ
ಸೆಐಗ ಬಿಡಿಸಿರೆ ತಂದೆಗಳಿರೆಂದೊಱಲಿದಳು ತರಳೆ

ಕ್ರೂರನೀದುಶ್ಯಾಸನನು ಗಾಂ
ಧಾರಿ ಬಿಡಿಸೌ ತಾಯೆ ಸೊಸೆಯ
ಲ್ಲಾರು ಹೇಟೌ ತಂಗಿಯಲ್ಲವೆ ಭಾನುಮತಿ ನಿನಗೆ
ಧೀರ ಸೈಂಧವನರಸಿ ರಾಜಕು
ಮಾರಿ ನೀನಾದಿನಿಯಲಾ ಖಳ
ರೌರವದೊಳದ್ದುವುದ ತೆಗಿಸೆಂದೊಱಲಿದಳು ತರಳೆ

ಎಲೆ ವಿಳಾಸಿನಿಯರಿರ ಭೂಪನ
ತಿಳುಹಿರೌ ತಾಯ್ಗಳಿರ ನೀವೆಂ
ದೆಲೆ ಪಸಾಯಿತೆಯರಿರ ಸೋದರಿಯೆಂದು ಕೌರವನ
ತಿಳುಹಿ ತಾ ಶರಣಾಗತರ ತಾ
ನೊಲಿದು ಕಾವುದು ಧರ್ಮಕಕಟಾ
ಕಲುಹೃದಯರ್ಗೆ ನೀವೆನುತ ಹಲುಬಿದಳು ತರಳಾಕ್ಷಿ

ಧಾರುಣೀಪತಿಗಳಿರ ರಾಜಕು
ಮಾರರಿರ ಮಂತ್ರಿಗಳಿರಾ ಪರಿ
ವಾರಕಿದು ಪಂಥವೆ ವಿಚಾರಿಸಿ ನಿರಪರಾಧಿಯನು
ನಾರಿಯೊಬ್ಬಳನಕಟ ಸಭೆಯಲಿ
ಸೀರೆ ಯುಡಿಯುಚರ್ುವರೆ ಕೆಟ್ಟೆನು
ಕಾರುಣಿಕರಿಲ್ಲಾ ಶಿವಾ ಯೆಂದೊಱಲಿದಳು ತರಳೆ

ಪತಿಗಳಿನ್ನನು ಮೂರಿ ಧರ್ಮ್ಮ
ಸ್ಥಿತಿಯ ಕೊಂಡರು ಭೀಷ್ಮಮೊದಲಾ
ದತಿರಥರು ಪರಹಿತವ ಬಿಸುಟಿಹರರ್ಥಭೀತಿಯಲಿ
ಸುತನ ಕಡು ಸಿರಿ ಸೊಗಸಲಾ ಭೂ
ಪತಿಗೆ ಗಾಂಧಾರಿಗೆ ಯನಾಥೆಗೆ
ಗತಿಯ ಕಾಣೆನು ಶಿವ ಶಿವಾ ಯೆಂದೊಱಲಿದಳು ತರಳೆ

ವೈದೆಗೆದುವೀಪ್ರಾಣವಾಯುಗ
ಳೈದು ಬಱಕಿದಕಾರು ಮೊಱುಗುವ
ರೈದೆ ತನುವೊಂದುಱಯಲುಱವುವು ಮಿಕ್ಕಮಹಿಮೆಗಳು
ಬೈದು ಫಲವೇನಿನ್ನು ನಿನ್ನಯ
ವೈದುನರ ಮರುಳಾಟಕೆನ್ನನು
ಕಾಯ್ದುಕೊಳ್ಳೈ ಕೃಷ್ಣಯೆಂದೊಱಲಿದಳು ತರಳಾಕ್ಷಿ

ಸುಲಿವರೂರೊಳಗುಟ್ಟ ಸೀರೆಯ
ನೆಲೆ ಮುರಾಂತಕ ರಕ್ಷಿಸೈ ಶಶಿ
ಕಳೆಗೆ ಸದರನೆ ರಾಹು ರಚಿಸಿದ ತುಟಿಯ ತೋಟಿಯದು
ಸೆಳೆವರಸುವನು ಖಳರು ಸೀರೆಯ
ಸೆಳೆಯಲುಱವೆನೆ ಕೃಷ್ಣ ಕರುಣಾ
ಜಲಧಿಯೇ ಕೈಗಾಯಬೇಕೆಂದೊಱಲಿದಳು ತರಳೆ

ಗತಿವಿಹೀನರಿಗಕಟ ನೀನೇ
ಗತಿಯಲ್ಲೈ ಗೋವಿಂದ ರಿಪುಬಾ
ಧಿತರನಾಥರಿಗಬಲರಿಗೆ ನೀ ಪರಮಬಂಧುವಲ

ಸತಿಪಶುದ್ವಿಜಬಾಧೆಯಲಿ ಜೀ
ವಿತವ ತೊಱೆವರು ಗರುವತನ ಹಿಂ
ಗಿತು ಸುಯೋಧನಸಭೆಯೊಳೆಂದೊಱಲಿದಳು ನಳಿನಾಕ್ಷಿ

ಚರಣಭಜಕರ ಮಾನಹಾನಿಯ
ಹರಿಬವಾರದು ಕೃಷ್ಣನಾಮ
ಸ್ಮರಣೆ ಧನಿಕರಿಗುಂಟೆ ಘಲ್ಲಣೆ ಘೋರಪಾತಕದ
ಪರಮಭಕ್ತಕುಟುಂಬಕನು ನೀ
ಕರುಣಿಯಲ್ಲದೊಡೀ ಕುಟುಂಬವ
ಪೊರೆವರಾರೈ ಕೃಷ್ಣಯೆಂದೊಱಲಿದಳು ತರಳಾಕ್ಷಿ

ನಾಥರಿಲ್ಲದ ಶಿಶುಗಳಿಗೆ ನೀ
ನಾಥನೈ ಗೋವಿಂದ ಕೇಳೈ
ಯೂಥಪತಿಗಳು ಬಿಸುಟ ಕರಿಣಿಗೆ ಕೃಪೆಯ ನೀ ಮಾಡ್ದೈ
ನಾಥರಿಲ್ಲೆನಗಿಂದು ದೀನಾ
ನಾಥಬಾಂಧವನೀ ನಲಾ ವರ
ಮೈಥಿಲೀಪತಿ ಮನ್ನಿಸೆಂದೊಱಲಿದಳು ಮೃಗನಯನೆ

ಮೊಲಬುದಪ್ಪಿದ ಹುಲ್ಲೆ ಬೇಡನ
ಬಲೆಗೆ ಬಿದ್ದಂತಾದೆನೈ ಬಲು
ಹಟುವದಲಿ ತಾಯೆ ಬಿಸುಟ ಶಿಶು ತಾನಾದೆನೈ ಹರಿಯೆ
ಕೊಲುವವೈ ಕಾಗೆಗಳಕಟ ಕೋ
ಗಿಲೆಯ ಮಱಿಯನು ಕೃಷ್ಣ ಕರುಣಾ
ಜಲಧಿಯೇ ಕೈಗಾಯಬೇಕೆಂದೊಱಲಿದಳು ತರಳೆ

ಅಕಟ ಹಂಸೆಯು ಮಱಿಯು ಮೋದುವ
ಬಳಕ ತೆಗಿಸ್ಸೈ ಗಿಡುಗನೌಕುವ
ಶುಕನ ಶೋಕವ ಮಾಣಿಸ್ಸೈ ವಾಣಿಯುವೆ ಭಕ್ತರಲಿ
ಪ್ರಕಟಭೂತಗ್ರಹದ ಬಾಧೆಗೆ
ವಿಕಳೆ ನಿನ್ನಯ ಬಿರುದ ತಡೆದೆನು
ಭಕುತವತ್ಸಲನಹೊಡೆ ಸಲಹೆಂದೊಱಲಿದಳು ತರಳೆ

ಕರುಣಿ ನೀ ಕಾರುಣ್ಯಪಾತ್ರದ
ತರಳ ತಾ ದೀನಾರ್ತದುಃಖೋ
ತ್ತರಣ ನೀ ದೀನಾರ್ತದುಃಖಿತೆಯಾನು ಜಗವಱಿಯೆ
ಪರಮಪಾಲಕ ನೀನಗತ್ಯಂ
ತರದ ವಿಹ್ವಳ ತಾನಲಾ ನಿ
ಷ್ಠುರವಿದೇಕ್ಕೈ ಕೃಷ್ಣ ಯೆಂದೊಱಲಿದಳು ಲಲಿತಾಂಗಿ

ಮಱಿದೆನಭ್ಯುದಯದಲಿ ನೀನೆಂ
ದಱಿವೆನಾಪತ್ತಿನಲಿ ಮದವಲಿ
ಮಱುಕಿಸುವೆನುಬ್ಬಿನಲಿ ಕಳವಳಿಸುವೆನು ಖೋಡಿಯಲಿ
ಅಱಿಯದಜ್ಞರ ಗುಣವ ದೋಷವ
ನಱಿಸುವರೆ ನಿಮ್ಮಡಿಯ ಗುಣವನು
ಮೆಱೆಯಲಾಗದೆ ಕೃಷ್ಣ ಯೆಂದೊಱಲಿದಳು ನಳಿನಾಕ್ಷಿ

ಋಷಿಗಳತಿತಾರ್ಕಿಕರು ಕರ್ಮ
ವ್ಯಸನಿಗಳು ಬಾಹಿರರು ವಿಃಕ್ಕಿನ
ವಿಷಯದೆಳೆಮಾನುಗಳು ಮೂಢಮನುಷ್ಯರೆಂಬವರು

ಒಸೆದು ನಿನ್ನವನೆಂದು ನೆನೆವಗೆ
ಬಸಿದು ಬೀಟುವ ಕೃಪೆಯ ನೀ ತೋ
ಱಿಸೆಯದೇಕೈ ಕೃಷ್ಣ ಯೆನಗೆಂದೊಱಲಿದಳು ತರಳೆ

ಏಕಹಸ್ತದಲಂಬರವ ಹಿಡಿ
ದೇಕಹಸ್ತವ ನೆಗಹಿ ಮೊಱೆಯಿಡೆ
ಲೋಕನಾಥ ಮುಕುಂದ ತಾನದ ಕೇಳದಂತಿರಲು
ಆಕೆ ಮನದೊಳಗಱಿದು ತನಗಿ
ನ್ನೇಕೆ ಮನದಭಿಮಾನವೆನುತಲಿ
ಲೋಕಸುಂದರಿ ಕರವೆರಡ ಮುಗಿದೆತ್ತಿಯೊಱಲಿದಳು

ನಂದಗೋಪಕುಮಾರ ಗೋಪೀ
ವೃಂದವಲ್ಲಭ ದೈತ್ಯಮಥನ ಮು
ಕುಂದ ಮುರಹರ ಭಕ್ತವತ್ಸಲ ಘನಕೃಪಾಜಲಧಿ
ನೊಂದೆನೈ ನುಗ್ಗಾದೆನೈ ಗೋ
ವಿಂದ ಕೃಪೆಮಾಡಕಟೆನುತ ಪೂ
ರ್ಣೇಂದುಮುಖಿ ಹಲುಬಿದಳು ಬಲುತೆರದಿಂದಲಚ್ಯುತನ

ಇತ್ತಲಾದ್ವಾರಿಕೆಯೊಳಗೆ ವರ
ಸತ್ಯಭಾಮಾಭವನದೊಳು ನರ
ವೃತ್ತಿಯಿಂದಿರುತ ಕೇಳಿದ ಸತಿಯ ಹೊಲ್ಲೆಯನು
ಕೆತ್ತದುಮ್ಮಾನದಲಿ ದ್ರೌಪದಿ
ಯುತ್ತಮೆಯಲಾ ದೃಢಪತಿವ್ರತೆ
ಗೆತ್ತಣದು ಪರಿಭವವಿದೆಂದಸುರಾರಿ ಚಿಂತಿಸಿದ

ಕ್ರೂರದುರ್ಯೋಧನನು ದ್ರುಪದ ಕು
ಮಾರಿಪಾಂಚಾಲಿಯನು ಸಭೆಯೊಳು
ಸೀರೆಯನು ಸುಲಿಯಲ್ಕೆ ಕಾಯ್ವೈ ಕೃಷ್ಣಯೆಂದೆನುತ
ನಾರಿಯೊಱಲಿದಳಾಕೆಯುಟ್ಟಿಹ
ಸೀರೆ ಸೆಳೆಯಲು ಬಱಿಕಲಕ್ಷಯ
ಸೀರೆಯಾಗಲಿಯೆಂದ ಗದುಗಿನ ವೀರನಾರಯಣ

ನಿಯತಮತಿ ಚಿತ್ತವಿಸು ಜನಮೇ
ಜಯ ಮಹೀಪತಿ ದೇವತಾಶ
ಕ್ತಿಯಲಿದೇನಾಶ್ಚರ್ಯವೈ ಶಿವಶಿವ ಮಹಾದೇವ
ಜಯ ಜಯೆಂದುದು ನಿಖಿಳಜನ ಝೂ
ಡಿಯಲಿ ಝೋಂಪಿಸಿ ಸೆಳವ ಸೀರೆಗೆ
ಲಯವ ಕಾಣೆನು ಲೀಲೆಯೆಂತುಟೊ ದೇವಕೀಸುತನ

ಉಗಿದು ಹಾಯ್ಕುವ ಖಳನ ನಿಡಿದೋ
ಳುಗಳು ಬಱಲಿದುವಳ್ಳೆಹೊಯ್ದುವು
ಡಗೆಯ ಡಾವರವಾಯ್ತು ಬಹಳ ಸ್ವೇದಜಲ ಜಡಿಯೆ
ತೆಗೆದು ನಿಂದನು ಸೀರೆಯೊಟ್ಟಿಲು
ಗಗನವನು ಗಾಹಿಸಿತು ಗರುವೆಯ
ಬಗೆಗೆ ಬೇಸಱವಿಲ್ಲ ಬೆಱಗಾಯಿತು ಮಹಾಸ್ಥಾನ

ಹಾ ಮಹಾಸತಿ ಶಿವ ಶಿವಾ ಲ
ಜ್ಜಾಮಹೋದಧಿ ಬತ್ತುವುದೆ ನಿ
ರ್ನಾಮರೇ ಕುಂತೀಸುತರುಚಿತರೇ ಪರಾಭವಕೆ

ಶ್ರೀಮುಕುಂದನ ದಿವ್ಯನಾಮ
ಪ್ರೇಮರಸಕಿದು ಸಿದ್ಧಿ ಯೆನಲಾ
ಯ್ತಾಮಹಾಸ್ಥಾನದಲಿ ಬಳೆದುದು ಬೆಱಗು ಬಿಂಕದಲಿ

**ಕುಮಾರವ್ಯಾಸ-ಭಾರತ**
(೧೪೩೦)

## ೭೨. ಉತ್ತರನ ಪೌರುಷ

ವೈರಿಭಟಸಂವರ್ತನೂತನ
ಭೈರವನು ಕಲಿಪಾರ್ಥ ಸಮರೋ
ದಾರಸಾರಥಿಯಾದನೆಂದು ವಿರಾಟನಂದನಗೆ

ಕೇಳು ಜನಮೇಜಯ ಸುಯೋಧನ
ನಾಳು ಮುತ್ತಿತು ತುಱುಗಳನು ಮೇ
ಲಾಳು ಕವಿದುದು ಭೀಷ್ಮ ಕರ್ಣದ್ರೋಣಮೊದಲಾಗಿ
ಕೋಲಸೂಟಿಯ ಸರಿವಱಿಗೆ ಗೋ
ಪಾಲಪಡೆ ಮುಗ್ಗಿದುದು ಗೋವರ
ಸಾಲ ಹೊಯ್ದರು ಕರ್ಣದುಶ್ಶಾಸನಜಯದ್ರಥರು

ಮೇಲುದಟಿಕಿದಿರಾಗಿ ತುಱುವರಿ
ಗಾಳಗದೊಳೊಡೆ ಮುಗ್ಗಿ ಗೋಪರು
ಧೂಳಿಗೋಟೆಯ ಕೊಂಡರಮರರ ರಾಜಧಾನಿಯನು
ಸಾಲೊಡೆದು ಕೆಟ್ಟೋಡಿದರು ಗೋ
ಪಾಲನೊಬ್ಬನ ಹಿಡಿದು ಮೂಗಿನ
ಮೇಲೆ ಸುಣ್ಣವ ಬರೆದು ಬಿಟ್ಟರು ಹಗೆಯ ಪಟ್ಟಣಕೆ

ಗರುವ ಗೋವರು ಹರಿದು ಸಂ
ಗರದಿ ಕೆಡೆದರು ರಾಯಮೋಹರ
ತೆರಳಿಕೆಯ ತುಱುಗಳನು ಹಿಂದಿಕ್ಕಿದರು ಕಾಳಗಕೆ
ಬಿರುದರಾರುಂಟವರ ಕಳುಹೆನೆ
ಕರದ ಬಿಲ್ಲನ ಬಿಸುಟು ಬದುಕಿದ
ಶಿರವ ತಡೆವುತ ಗೋವನೊಬ್ಬನು ಪುರಕೆ ನಡೆತಂದ

ಗಣನೆಯಿಲ್ಲದೆ ನಿನ್ನೆ ಸಮರಾಂ
ಗಣದ ಧಾರಣೆ ನೂಕಿತೆಲವೋ
ರಣದ ವಾರ್ತೆಯದೇನೆನುತ ಜನವೆಲ್ಲ ಗುಜುಗುಜಿಸೆ
ರಣವು ಕಿಱಿದಲ್ಲೆನುತ ಥಗೆ ಸಂ
ದಣಿಸಲವನೈತಂದು ಮೇಳದ
ಗಣಿಕೆಯರ ಮಧ್ಯದಲಿ ಮೆಱೆದಿರೆ ಕಂಡನುತ್ತರನ

ಬೆಡಗುಮುಸುಕಿದ ಭೀತಿಹೆಚ್ಚಿದ
ಥಗೆಯಹೊಯ್ಲ್ವಳ್ಳಿಗಳ ತುದಿನಾ
ಲಗೆಯ ತೊದಲಿನನುಡಿಯ ಬೆರಗಿನ ಬರತತಾಳಿಗೆಯ
ಅಗಿವಹುಯ್ಯಲುಗಾಜನೊಡ್ಡೋ
ಲಗಕೆ ಬಂದನು ನೃಪವಿರಾಟನ
ಮಗನ ಕಾಲಿಂಗೆಱಗಿದನು ದೂಱಿದನು ಕಳಕಳವ

ಏಳು ಮನ್ನೆಯಗಂಡನಾಗು ನೃ
ಪಾಲ ಕೌರವರಾಯ ತುಱುಗಳ
ಕೋಳವಿಡಿದನು ಸೇನೆ ಬಂದುದು ಧರಣಿಯಗಲದಲಿ
ಧಾಳಿ ಬರುತಿದೆ ಕರೆಸಿಕೋ ನಿ
ನ್ನಾಳು ಕುದುರೆಯ ರಾಣಿವಾಸದ
ಗೂಳಿಯುವ ತೆಗಿಸೆಂದು ನುಡಿದನು ಬಿನ್ನಹದ ಹರುವ

ಏನೆಲವೊ ತುದಿಮೂಗಿನಲಿ ಬೆಳು
ಪೇನು ಥಗೆ ಹೊಯ್ದೇಕೆ ಬಂದೆ ಯಿ
ದೇನು ನಿನ್ನಿನ ರಣವನೈಯ್ಯನು ಗೆಲಿದುದೇನಾಯ್ತು

ಏನು ಭಯ ಬೇಡೆನ್ನ ಕಲಹನಿ
ಧಾನವಾರ್ತೆಯದೇನೆನಲು ಕುರು
ಸೇನೆ ಬಂದುದು ತುರುವ ಹಿಡಿದರು ಬಡಗದಿಕ್ಕಿನಲಿ

ರಾಯ ತಾ ನೈತಂದನಾತನ
ನಾಯಕರು ಗುರುತನುಜಗುರುಗಾಂ
ಗೇಯಶಕುನಿಕಳಿಂಗಕರ್ಣಜಯದ್ರಥಾದಿಗಳು
ಜೀಯ ಬಿನ್ನಹ ದೞದ ಘನತೆಗೆ
ತಾಯಿ ಗಡ ವೊಕ್ಕುಡಿತವೋಹರ
ದಾಯತವ ತಾನೆತ್ತ ಬಲ್ಲೆನು ಹೊಕ್ಕು ಹೊಗೞುವೊಡೆ

ಎತ್ತ ದೂವಾಳಿಸುವೊಡಾಲಿಗ
ಳತ್ತಲಾನೆಯ ತಟ್ಟು ಕಾಲಾ
ಳೊತ್ತರದ ರಥವಾಜಿರೂಢಿಯ ರಾಯರಾವುತರು
ಸುತ್ತ ಬಳಸಿಹುದೆತ್ತ ಮನಹರಿ
ವತ್ತ ವೋಹರವಲ್ಲದನ್ಯವ
ಮತ್ತೆ ಕಾಣೆನು ಜೀಯ ಹದನಿದು ವೈರಿವಾಹಿನಿಯ

ಒಳಗೆ ನೀ ಕಾದುವೊಡೆ ದುರ್ಗವ
ಬಲಿಸು ಬವರವ ಹಿಂದುಗಳೆಯದೆ
ಕಲಿತನದ ಮನವುಳ್ಳೊಡೀಗಳೆ ನಡೆಯಬೇಹುದೆನೆ
ಕೆಲಬಲನ ನೋಡಿದನು ಮಿಾಸೆಯ
ನಲುಗಿದನು ತನ್ನಿದಿರವೋಲಗ
ಲಲನೆಯರ ಮೊಗ ನೋಡುತುತ್ತರ ನಗುತನಿಂತೆಂದ

ನೂಕು ಕುನ್ನಿಯನಾಹವದ ಭೀ
ತಾಕುಲನ ತಾನೀಗ ಹೆಂಡಿರ
ಸಾಕಿ ಬದುಕುವ ಲವಲವಿಕೆಯಲಿ ಜಾಱಿ ಬಂದೀಗ
ಕಾಕ ಬಳಸುವನಿವನು ನಾನು
ದ್ರೇಕಿಸಲು ಸಮರದಲಿ ನಿಲುವರೆ
ನಾಕದವರಿಗೆ ನೂಕದೆಂದನು ಸತಿಯರಿದಿರಿನಲಿ

ಎನಿತು ಬಲ ಘನವಾದೊಡೇನದು
ನಿನಗೆ ಗಹನವೆ ಜೀಯ ಜಗದಲಿ
ದಿನಪನಿದಿರಲಿ ದಿಟ್ಟತನವೇ ತಮದ ಗಾವಳಿಗೆ
ಬಿನುಗುರಾಯರ ಬಿಂಕ ಗೋವರ
ಮೊನೆಗೆ ಮೆಱೆದೊಡೆ ಸಾಕು ನಿಂದಿರು
ಜನಪ ತೋಱಿಸು ಕೈಗುಣವ ಕೌರವನ ಥಟ್ಟಿನಲಿ

ಎಂದೊಡುಬ್ಬರಿಸಿದನು ತಾ ಕಲಿ
ಯೆಂದು ಬಗೆದನು ವಿಾಸೆಯನು ಬೆರ
ಳಿಂದ ತಿರುಹುತ ಮುಗುಳುನಗೆಹರುಷದಲಿ ಮೈಮಱೆದ
ಸಂದಣಿಸೆ ರೋಮಾಂಚ ಕೆಲಬಲ
ದಿಂದುಮುಖಿಯರ ನೋಡಿದನು ನಲ
ವಿಂದ ನುಡಿದನು ತನ್ನ ಪೌರುಷತನದ ಪರಿಣತಿಯ

ಅಹುದಹುದು ತಪ್ಪೇನು ಜೂಜಿನ
ಕುಹಕದಲಿ ಪಾಂಡವರ ಸೋಲಿಸಿ
ಮಹಿಯ ಕೊಂಡಂತೆನ್ನ ಕೆಣಕಿದನೇ ಸುಯೋಧನನು

ಸಹಸದಿಂದವೆ ತುಱುವ ಮರಳಿಚಿ
ತಹೆನು ಬೞಿಕಾಕೌರವನ ನಿ
ರ್ವಹಿಸಲೀವೆನೆ ಸೂಱೆಗೊಂಬೆನು ಹಸ್ತಿನಾಪುರವ

ಹಿಡಿದು ರಾಜ್ಯವ ಕೊಂಡು ಹೆಂಗುಸ
ಬಡಿದು ಪಾಂಡವರಾಯರಸು ಹೊಱ
ವಡಿಸಿ ಕೊಬ್ಬಿದ ಭುಜಬಲವನೆನ್ನೊಡನೆ ತೋಱಿದನೆ
ಬಡಯುಧಿಷ್ಠಿರನೆಂದು ಬಗೆದನೆ
ಕಡುಗಿದರೆ ಕೌರವನ ಕೀರ್ತಿಯ
ತೊಡೆವೆನಱಿಯೆನಲಾಯೆನುತ ಸುಕುಮಾರ ಖತಿಗೊಂಡ

ವನಿತೆಯರ ಸಭೆಯಲಿ ಸಗಾಡದ
ದಿನಪ ತೇಜದ ಶೌರ್ಯದರ್ಪವ
ಜಿನುಗಿದನು ತನ್ನಳವನರಿಯದೆ ರಾಜಭವನದಲಿ
ತನತನಗೆ ಕಾಮಿನಿಯರಹುದೆನೆ
ಜನಪನುತ್ತರರಾಯ ಗರ್ಜಿಸಿ
ಕನಲಿದನು ಕೌರವನ ಬೈದೆಡಗಾಲ ತೊಡರುಲಿಯೆ

ಏನ ನೆನೆದನೊ ಬಂದು ಕೆಟ್ಟನು
ಭೂನರೇಂದ್ರರೊಳಿನ್ನ ತೋಳಿನ
ನೂನ ಬಲವನು ಕೇಳಿದಱಿಯನೆ ಪರಬಲಾಂತಕನ
ತಾನು ಬಂದು ವಿಹಾರದಲಿ ಭುವ
ನಾನುರಂಜಕನಾಗಿ ತಿರುಗಿದೊ
ಡೇನು ತನಗಿಲ್ಲೆಂದು ಕಮಲಾನನೆಯರೊಳು ನುಡಿದ

ಜವನ ಮೀಸೆಯು ಮುಱಿದನೋ ಭೈ
ರವನ ದಾಡೆಯುನಲುಗಿದನೊ ವೈ
ಶ್ವಾನರನ ಮೇಲುದ ಸೆಳೆದನೊ ಕೇಸರಿಯ ಕೆಣಕಿದನೊ
ಬವರವನು ತೊಡಗಿದನಲಾ ಕೌ
ರವನಕಟ ಮರುಳಾದನೆಂದಾ
ಯುವತಿಯರ ಮೊಗ ನೋಡುತುತ್ತರ ಬಱಿದೆ ಕೆದಱಿದನು

ಆರೊಡನೆ ಕಾದುವೆನು ಕೆಲಬರು
ಹಾರುವರು ಕೆಲರಂತಕನ ನೆರೆ
ಯೂರವರು ಕೆಲರಧಮಕುಲದಲಿ ಜನಿಸಿಬಂದವರು
ವೀರರೆಂಬವರಿವರು ಮೇಲಿ
ನ್ನಾರ ಹೆಸರುಂಟವರೊಳೆಂದು ಕು
ಮಾರ ನೆಣಗೊಬ್ಬಿನಲಿ ನುಡಿದನು ಹೆಂಗಳಿದಿರಿನಲಿ

ಅಱಿಯೆನೇ ಗಾಂಗೇಯುನನು ತಾ
ನಱಿಯದವನೇ ದ್ರೋಣ ಕುಲದಲಿ
ಕೊಱತೆಯಾಗಿಹ ಕರ್ಣನೆಂಬುವನೆನಗೆ ಸರಿಯುಹನೆ
ಬಱಿಯ ಬಯಲಾಡಂಬರದಿ ತುಱು
ಸೆಱೆಯ ಹಿಡಿದರೆ ತಮ್ಮ ಹೆಂಡಿರ
ಸೆಱೆಯ ತಾರದೆ ಮಾಣೆನೆಂದುತ್ತರನು ಗರ್ಜಿಸಿದ

ಪೊಡವಿಪತಿಗಳು ಬಂದು ತುಱುಗಳ
ಹಿಡಿವರೇ ಲೋಕದಲಿ ಯಧಮರ
ಬಡಮನದ ಮನ್ನೆಯರ ವೈಸಿರಿ ಕೌರವನೊಳಾಯ್ತು

ಕಡೆಗೆ ದುರ್ಯಶ ವುೞಿವುದಲ್ಲದೆ
ಬಿಡುವೆನೇ ಗೋಧನವನೆನ್ನೊಳು
ತುಡುಕಿ ಬದುಕುವನಾವನೆಂದನು ಖಂಡೆಯವ ಜಡಿದು

ಬಲವ ಮುಱಿವೆನು ಹಸ್ತಿನಾಪುರ
ದೊಳಗೆ ಠಾಣಾಂತರವನಿಕ್ಕುವೆ
ತೊಲಗಿಸುವೆ ಕೌರವನ ಸೇನೆಯ ಧೂಳಿಪಟಮಾಡಿ
ಗೆಲವ ತಹೆನೆಂದುತ್ತರನು ಕೋ
ಮಲೆಯರಿದಿರಲಿ ಬಾಯ್ಗೆ ಬಂದುದ
ಗಳಹುತಿರ್ದನು ಬೇಕು ಬೇಡೆಂಬವರ ನಾಕಾಣೆ

ಪರರು ನಿಜಸಾಹಸವ ಹೊಗೞಿದೊ
ಡಿರದೆ ಲಜ್ಜಿಸಬೇಕು ತನ್ನಯ
ಹಿರಿದು ಪೌರುಷತನವ ತಾನಾಡಿದರೆ ಫಲವೇನು
ಇರವಿದನೆ ಗಹಗಹಿಸಿ ಮನದಲಿ
ತರಳೆಯರು ನಗಲಾವಿರಾಟನ
ವರಕುಮಾರಕನಿರದೆ ನುಡಿದನು ಹೆಂಗಳಿದಿರಿನಲಿ

ನುಡಿದು ಫಲವೇನಿನ್ನು ಸಾರಥಿ
ಮಡಿದ ನಿನ್ನಿನ ಬವರದಲಿ ನಾ
ನುಡುಹನಾದೆನು ಶಿವಾ ಶಿವಾ ಯಿಂದೆನ್ನ ಕೈಮನಕೆ
ಗಡಣಿಸುವ ಸಾರಥಿಯನೊಬ್ಬನ
ಪಡೆದೆನಾದರೆ ಕೌರವೇಂದ್ರನ
ಪಡೆಗೆ ಹಬ್ಬವ ಮಾಡುವೆನು ತೋಱುವೆನು ಕೈಗುಣವ

ಸಾರಥಿಯ ಶಿವ ಕೊಟ್ಟನಾದರೆ
ಮಾರಿಗುಬ್ಬಸವಾಗದಂತಕ
ನೂರು ತುಂಬದೆ ಹಬ್ಬವಾಗದೆ ರಣಪಿಶಾಚರಿಗೆ
ದೋರೆಗರುಳಲಿ ಶಾಕಿನಿಯರೊಡ
ಲೇರು ತುಂಬದೆ ಡೊಳ್ಳು ನೂಕದೆ
ಭೂತ [ರಿ?] ಭೇತಾಳರಿಗೆ ಹೋಹುದೆ ಬಱಿದೆ ರಣವೆಂದ

ಪಳಹರನ ಮೇಳವಿಸಿ ಬಿರುದಿನ
ಬಳಿಯ ಚವರಿಯ ಬೀಸಿ ಮಲೆತರ
ತಲೆಯ ಶೂಲದೊಳೊತ್ತಿ ತೇಜಿಗಳ ತಿರುಹಿ
ಕಲಿತನದ ಭಟನೀಗ ನಿಲುವ
ಗ್ಗಳದ ಸೂತನ ತಂದು ಕೊಟ್ಟರೆ
ಗೆಲುವೆನೆಂದನು ರಣವ ಸರಸಿಜವದನೆಯರ ಮುಂದೆ

ಕೇಳುತಿರ್ದನು ಪಾರ್ಥನೀತನ
ಬಾಲಭಾಷೆಗಳೆಲ್ಲವನು ಪಾಂ
ಚಾಲೆಗೆಕ್ಕಟೆ ನುಡಿದನಾವಿನ್ನಿಹುದು ಮತವಲ್ಲ
ಕಾಲ ತುಂಬಿತು ನಮ್ಮ ರಾಜ್ಯದ
ಮೇಲೆ ನಿಲುಕಲು ಬೇಕು ಕೌರವ
ರಾಳು ನಮಗೋಸುಗವೆ ಬಂದುದು ಕಾಂತೆ ಕೇಳೆಂದ

ನರನ ಸಾರಥಿಯೆಂದು ನೀನು
ತ್ತರೆಗೆ ಸೂಚಿಸು ನನ್ನನೀಗಲೆ
ಕರೆಸೆನಲು ಕೈಕೊಂಡುದ್ರೌಪದಿ ಬಂದಳೊಲವಿನಲಿ

ತರುಣಿ ಕೇಳುರ್ಜುನನ ಸಾರಥಿ
ವರಬೃಹನ್ನಳೆ ಖಾಂಡವಾಗ್ನಿಯ
ಹೊರೆದ ಗಡ ತಾನೆಂದು ಸತಿಯುತ್ತರೆಗೆ ಹೇಳಿದಳು

ಕೇಳಿ ಹರುಷಿತೆಯಾದಳುತ್ತರೆ
ಯೋಲಗಕೆ ಬಂದಣ್ಣನಂಘ್ರಿಗೆ
ಲೋಲಲೋಚನೆಯೆಱಗಿ ಕೈಮುಗಿದೆಂದಳೀಹದನ
ಕೇಳಿದೆನು ಸಾರಥಿಯ ನೆಲೆಯನು
ಕಾಳಗಕೆ ನಡೆ ಯಣ್ಣದೇವ ನೃ
ಪಾಲಕರ ಜಯಿಸೆಂದೊಡುತ್ತರ ನಗುತ ಬೆಸಗೊಂಡ

ತಂಗಿ ಹೇಳೌ ತಾಯೆ ನಿನಗೀ
ಸಂಗತಿಯನಾರಱುಹಿದರು ಬಟಿ
ಕಂಘವಣೆಯುಳ್ಳವನೆ ಸಾರಥಿತನದ ಕೈಮೆಯಲಿ
ಮಂಗಳವಲಾ ಬಟಿಕ ರಣದೊಳ
ಭಂಗಹನೆ ನಿನ್ನಾಣೆ ತನ್ನಯ
ತುಂಗವಿಕ್ರಮತನವನುಱುಹಿದೆ ಲೇಸು ಲೇಸೆಂದ

ಎಂದಳೀ ಸೈರಂಧ್ರಿ ಸುರಪನ
ನಂದನವ ಸುಡುವಂದು ಪಾರ್ಥನ
ಮುಂದೆ ಸಾರಥಿಯಾದ ಗಡ ನಾವಱಿಯೆವೀ ಹದನ
ಹಿಂದುಗಳೆಯದೆ ಕರೆಸು ನಮ್ಮ ಬೃ
ಹನ್ನಳೆಯನೆನೆ ನಗುತ ಲೇಸಾ
ಯ್ತೆಂದು ಪರಮೋತ್ಸಾಹದಲಿ ಸೈರಂಧ್ರಿಗಿಂತೆಂದ

ಸಾರಥಿಯ ಕೊಟ್ಟೆನ್ನನುೞುಹಿದೆ
ವಾರಿಜಾನನೆ ಲೇಸ ಮಾಡಿದೆ
ಕೌರವನ ತನಿಗರುಳ ತೆಗೆವೆನು ತಡವ ಮಾಡಿಸದೆ
ನಾರಿ ನೀನೇ ಹೋಗಿ ಪಾರ್ಥನ
ಸಾರಥಿಯು ತಾ ಯೆನಲು ನಮ್ಮನು
ವೀರ ಬಗೆಯನು ನಿಮ್ಮ ತಂಗಿಯು ಕಳುಹಿ ಕರೆಸೆಂದು

ತಾಯೆ ನೀನೇ ಹೋಗಿ ಸೂತನ
ತಾ ಯೆನಲು ಕೈಕೊಂಡು ಕಮಲದ
ಳಾಯತಾಕ್ಷಿ ಮನೋಭವನ ಮಱಿಯಾನೆಯಂದದಲಿ
ರಾಯಕುವರಿ ನವಾಯುಗತಿಗರು
ವಾಯಿಯಲಿ ಬರೆ ವಿಟರ ಕರಣದ
ಲಾಯ ತೊಡಕಿತು ತಗೆದಳಂಗನೆ ಜನರ ಕಣ್ಮನವ

ಬರವ ಕಂಡನು ಪಾರ್ಥನೇನು
ತ್ತರೆ ಕುಮಾರಿ ಕಠೋರಗತಿಯಲಿ
ಬರವು ಭಾರಿಯಕಾರ್ಯವನು ಸೂಚಿಸುತಲಿದೆಯೆನಲು
ಬರವು ಬೇಱಿಲ್ಲೆನ್ನ ಮಾತನು
ಹುರುಳುಗೆಡಿಸದೆ ಸಲಿಸುವೊಡೆ ನಿಮ್ಮ
ಗಱುಹಿದಪೆನೆನೆ ಮೀಱಬಲ್ಲೆನೆ ಮಗಳೆ ಹೇೞೆಂದ

ನೆರೆದು ಬಂದರು ಹಸ್ತಿನಾಪುರ
ದರಸುಗಳು ಹೊಲನೊಳಗೆ ಶತಸಾ
ವಿರದ ತುಱುಗಳ ಹಿಡಿದರೞಿದುದು ಗೋಪಪಡೆ ಕಾದಿ

ಮರಳಿಚುವರೆಮ್ಮಣ್ಣ ದೇವನ
ಧುರಕೆ ಸಾರಥಿಯಿಲ್ಲ ನೀವಾ
ನರನ ಸಾರಥಿಯೆಂದು ಕೇಳಿದೆವೆಂದಳಿಂದುಮುಖಿ

ಇನ್ನು ನೀವೇ ಬಲ್ಲಿರೆ ನಡೆ
ನಿನ್ನ ಮಾತನು ಮೀಜಬಲ್ಲೆನೆ
ಮುನ್ನ ಸಾರಥಿಯಹೆನು ನೋಡುವೆನೆನುತ ವಹಿಲದಲಿ
ಬೆನ್ನೊಳಬಲೆಯನೈದಿ ಬರೆ ಸಂ
ಪನ್ನನೋಲಗಕೈದೆ ನಿಜಹರು
ಷೋನ್ನತಿಯುಲುತ್ತರಕುಮಾರಕ ಕರೆದು ಮನ್ನಿಸಿದ

ಎಲೆ ಬೃಹನ್ನಳೆ ತೆತ್ತುದೆನಗ
ಗ್ಗಳೆಯೆರೊಳು ವಿಗ್ರಹವು ಸಾರಥಿ
ಯಟಿದನೆನ್ನವನೀನು ಸಾರಥಿಯಾಗಿ ಸಮರದಲಿ
ಉಟುಹಬೇಹುದು ನೀ ಸಮರ್ಥನು
ಫಲುಗುಣನ ಸಾರಥಿಯಲೈ ನೀ
ನೊಲಿದು ಮೆಚ್ಚಲು ಕಾದಿ ತೋಱುವೆನಹಿತಸೇನೆಯಲಿ

ಎಲೆ ಕುಮಾರಕ ನಿನ್ನ ತಂಗಿಗೆ
ಕಲಿಸುವಗ್ಗದ ನಾಟ್ಯವಿದ್ಯೆಗ
ಳೊಳಗೆ ಪರಿಣತಿ ತನಗಿದಲ್ಲದೆ ರಾಯಂದಿರಿನಲಿ
ನಿಲಲು ತಾನಂಜುವೆನು ಕೊಳುಗುಳ
ದೊಳಗೆ ಸಾರಥಿತನವ ಬಲ್ಲೆನೆ
ಎಲೆ ಕುಮಾರನೆ ಯೆನಲು ತಾನಿರೆ ಭೀತಿಬೇಡೆಂದ

ಭರತವಿದ್ಯಾವಿಷಯದಲಿ ಸಲೆ
ಪರಿಚಯವು ನಮಗಲ್ಲದೀ ಸಂ
ಗರದ ಸಾರಥಿತನವ ಮಱೆದೆವು ಹಲವುಕಾಲದಲಿ
ಅರಿಭಟರು ಭೀಷ್ಮಾದಿಗಳು ನಿಲ
ಲರಿದು ಸಾರಥಿತನದ ಕೈಮನ
ಬರಡರಿಗೆ ದೊರೆಕೊಂಬುದೇ ರಣಸೂಱೆ ಯಲ್ಲೆಂದ

ಆನಿರಲು ಭೀಷ್ಮಾದಿಗಳು ನಿನ
ಗೇನ ಮಾಡಲು ಬಲ್ಲರಳುಕದೆ
ನೀನು ಸಾರಥಿಯಾಗು ನಿಮಿಷಕೆ ಗೆಲುವೆನವರುಗಳ
ನಾನದಾರೆಂದಱಿಯಲಾ ಗುರು
ಸೂನುಕರ್ಣದ್ರೋಣರೆಂಬವ
ರಾನಱಿಯದವರಲ್ಲ ಸಾರಥಿಯಾಗು ಸಾಕೆಂದ

ವೀರನಹೆ ಬಱಿಕೇನು ರಾಜಕು
ಮಾರನಿಱಿವೊಡೆ ಹರೆಯುವಲ್ಲಾ
ಸಾರಥಿತ್ಯವ ಮಾಡಿ ನೋಡುವೆ ರಥವ ತರಿಸೆಂದು
ವಾರುವದ ಮಂದಿರದೊಳಾಯಿದು
ಚಾರುತುರಗಾವಳಿಯ ಬಿಗಿದನು
ತೇರ ಸಂವರಿಸಿದನು ರಥವೇಱಿದನು ಕಲಿಪಾರ್ಥ

ವೀರಕುವರವಿಭಾಡ ರಾಯಕು
ಮಾರಮಸ್ತಕಶೂಲ ವೈರಿಕು
ಮಾರಕೇಸರಿ ರಾಯರೆದೆದಲ್ಲಣದ ನಿಶ್ಶಂಕ

ಧೀರಕುವರಕುಠಾರ ಮಲ್ಲಕು
ಮಾರಗಿರಿವಜ್ರಾ ಯೆನಲು ತಾ
ನಾರಿಯರ ಬಿರುದಿನನುಡಿಯಕೇಳಿಯಲಿ ಪೊಱವಂಟ

ಮಿಾಸೆಗಳ ತಿರುಹುವನು ಭುಜದ ವಿ
ಲಾಸವನು ನೋಡುವನು ಬಿರುದಿನ
ಭಾಷೆಗಳನಡಿಗಡಿಗೆ ಕೇಳುತೆ ತುಱುವ ಸಱೆಹೊಯ್ದು
ಆಸುಯೋಧನಬಲವ ಕಾಲನ
ಮಿಾಸಲಿಗೆ ಮಾಡುವೆನೆನುತೆ ಪರಿ
ತೋಷಸಂರಂಭದಲಿ ಮಾತಿನ ವೀರ ಬರುತಿರ್ದ

ಮಂಗಳಾರತಿ ಯೆತ್ತಿದರು ನಿಖಿ
ಳಾಂಗನೆಯರುತ್ತರಗೆ ನಿಜಸ
ರ್ವಾಂಗಶೃಂಗಾರದಲಿ ಹೊಳೆಯುತೆ ಬಂದು ರಥವೇಱೆ
ಹೊಂಗೆಲಸದಾ ಕವಚವನು ಪಾ
ರ್ಥಂಗೆ ಕೊಟ್ಟನು ಜೋಡುಸೀಸಕ
ವಂಗದೊಳಗಳವಡಲು ರಾಜಕುಮಾರನನುವಾದ

ನರನು ತಲೆಕೆಳಗಾಗೆ ಕವಚವ
ಸರಿಯುತಿರೆ ಘೊಳ್ಳೆಂದು ಕೈ ಹೊ
ಯ್ದರಸಿಯರು ನಗೆ ನಾಚಿದಂತಿರೆ ಪಾರ್ಥ ತಲೆವಾಗಿ
ತಿರುಗಿ ಮೇಲ್ಮೊಗವಾಗೆ ತೊಡಲು
ತ್ತರೆ ಬೞಿಕ ನಸುನಗಲು ಸಾರಥಿ
ಯಱಿಯ ತಪ್ಪೇನೆನುತಲುತ್ತರ ತಾನೆ ತೊಡಿಸಿದನು

ಕವಚವನು ತೊಡಲಱಿಯದವನಾ
ಹವಕೆ ಸಾರಥಿತನವ ಮಾಡುವ
ಹವಣು ತಾನೆಂತೆನುತ ನಕ್ಕರು ನಿಖಿಳನಾರಿಯರು
ಬವರವನು ನಮ್ಮಣ್ಣ ಗೆಲಿದಪ
ನವರವರ ಪರಿಧಾನವಾಭರ
ಣವನು ಸಾರಥಿ ಕೊಂಡು ಬಾ ಯೆಂದಳು ಸರೋಜಮುಖಿ

ನಸುನಗುತೆ ಕೈಕೊಂಡನರ್ಜುನ
ನೆಸಗಿದನು ರಥವನು ಸಮೀರನ
ಮಿಸುಕಲೀಯದೆ ಮಿಕ್ಕು ನಡೆದುವು ರಥವ ವಾಜಿಗಳು
ಹೊಸಪರಿಯ ಸಾರಥಿಯಲಾ ನಮ
ಗಸದಳವು ಸಂಗಾತ ಬರಲೆಂ
ದುಸಿರದುಱಿದುದು ಹಿಂದೆ ಪುರದಲಿ ಚಾತುರಂಗಬಲ

ಪುರದ ರಣಮಂಡಲದ ಬಾಗಿಲ
ನುರವಣಿಸಿ ಹೊಱಕೋಟೆಗಳ ಪರಿ
ಪರಿಯ ಬಾಗಿಲ ಕಳಿದು ಹರಿದುದು ತೇರು ವಹಿಲದಲಿ
ತೆರೆಯ ಮೇಲಣ ತೆಪ್ಪದಂತಿರೆ
ಧರಣಿಯೊಲೆದುದು ಗಾಲಿಗಳ ಡಾ
ವರದ ಭಾರಿಗೆ ಕೊಱಿದುದಿಳೆ ವರರಥದ ಬಿಱುವರಿಗೆ

ಎಲೆ ಬೃಹನ್ನಳೆ ಬವರದೊಳಗೆ
ನ್ನಳವಱಿದು ರಥವೆಸಗಬೇಕೆಂ
ದುಲಿಯೆ ಕೇಳುತೆ ಪಾರ್ಥನತಿವೇಗದಲಿ ನಡೆತರಲು

ಬಳಸಿ ತೋಱುವೆ ನಿನ್ನ ಮೆಚ್ಚನು
ಕಲಿಸುವೆನು ನೋಡೆನುತೆ ವಾಘೆಯ
ನಿಳುಹಿ ತೇಜಿಯನಡಹಿ ವಹಿಲದೊಳಾಕಿದನು ರಥವ

ಗತಿಗೆ ಕುಣಿದುವು ನಾಸಿಕದ ಹುಂ
ಕೃತಿಯ ಪವನನ ಹಳಿವಲುಳಿಯಲಿ
ಗತಿಯ ಸಂಚಿತಪಂಚಧಾರಾಪ್ರೌಢವಾಜಿಗಳು
ವಿತತರಥಪದದಳಿತವಸುಧೋ
ತ್ಪತಿತಧೂಳೀಪಟಳಪರಿಚುಂ
ಬಿತದಿಶಾಮುಖನೈದಿದನು ಕುರುರಾಯ ಮೋಹರವ

ಜಡಿವಖಡ್ಗದ ಕಿಡಿಯ ಸೇನೆಯ
ತೊಡರುಗಳ ಕೇಸುರಿಯ ಬಲದು
ಗ್ಗಡದರಭಸದ ರೌದ್ರರವಘಟಘಟಿತನಿಸ್ವಸನದ
ಇಡಿದಧೂಳಿಯ ಧೂಮರಾಶಿಯ
ಪಡೆ ವಿರಾಟನ ಸುತನ ಕಂಗಳಿ
ಗೊಡನೊಡನೆ ದಾವಾಗ್ನಿಯಂತಿರೆ ತೋಱಿತಿದಿರಿನಲಿ

ಪ್ರಳಯಮೇಘದ ಮಾಲೆಯೋ ಕರಿ
ಕುಲವೊ ಸಿಡಿಲಿನ ಗರುಡಿಯೋ ಕಳ
ಕಳವೊ ಕಲ್ಪಾನಳನ ಧೂಮಾವಳಿಯೊ ಕೈದುಗಳೊ
ನೆಲನ ದಡ್ಡಿಯ ಬೆಟ್ಟದಡವಿಯೊ
ತಳಿತತೆಕ್ಕೆಯವೋ ಜಗಂಗಳ
ನಳಿವಜಲಧಿಯೊ ಸೇನೆಯೋ ನಾನಱಿಯೆನಿದನೆಂದ

ಕಾಳಕೂಟದ ತೊರೆಯೊ ಮಾರಿಯ
ಗೂಳಿಯುವೊ ಮೃತ್ಯುವಿನ ಗಂಟಲ
ತಾಳಿಗೆಯೋ ಭೈರವನ ಥಟ್ಟೊ ಜವನ ಜಂಗುಳಿಯೊ
ಕಾಲರುದ್ರನ ನೊಸಲ ವಹ್ನಿ
ಜ್ವಾಲೆಯೋ ಕೌರವನ ಸೇನಾ
ಜಾಲವೊ ಶಿವ ಶಿವಾ ಯೆನುತ ಹೆದರಿದನು ಸುಕುಮಾರ

ಹಸಿದ ಮಾರಿಯ ಕಟಕದಲಿ ಕುರಿ
ನುಸುಳಿ ಬದಕುವುದೆ ಬೃಹನ್ನಳೆ
ಯೆಸಗದಿರು ತೇಜಿಗಳ ತಡೆ ಚಮ್ಮಟಿಗೆಯನು ಬಿಸುಡು
ಮಿಸುಕಬಹುದೇ ಪ್ರಳಯಕಾಲನ
ಮುಸುಕನುಗಿವವರಾರು ಕೌರವ
ನಸಮಬಲನೈ ರಥವ ಮರಳಿಚು ಪುರಕೆ ಬೇಗೆಂದ

ಎಲೆ ಕುಮಾರಕ ಮೊದಲಚುಂಬನ
ದೊಳಗೆ ಹಲು ಹೋದಂತೆ ಕಾಳಗ
ದೊಳಗೆ ಬೆರಸದ ಮುನ್ನ ಹಿಡಿದೈ ಸಮರಭೀತಿಯನು
ಅಳುಕಲಾಗದು ನಿಮ್ಮ ತಂದೆಯ
ಕುಲಕೆ ಕುಂದನು ತಾರದಿರು ಮನ
ಗೆಲವಿನಲಿ ಕಾದೆನುತೆ ರಥವನು ಹರಿಸಿದನು ಪಾರ್ಥ

ಸಾರೆಬರಬರಲವನ ತನು ಮಿಗೆ
ಬಾರಿಸಿತು ಮೈಮುರಿದು ರೋಮವಿ
ಕಾರದಲಿ ಕಾಹೇರಿತವಯವ ನಡುಗಿತಡಿಗಡಿಗೆ

ಭೂರಿಭಯತಾಪದಲಿ ತಾಳಿಗೆ
ನೀರುದೆಗೆದುದು ತುಟಿಯೊಣಗೆ ಸುಕು
ಮಾರ ಕಣ್ಣೆವೆ ಸೀಯೆ ಕರದಲಿ ಮುಚ್ಚಿದನು ಮುಖವ

ಏಕೆ ಸಾರಥಿ ರಥವ ಮುಂದಕೆ
ನೂಕಿ ಗಂಟಲ ಕೊಯ್ವೆ ಸುಡುಸುಡು
ಕಾಕಲಾ ಕಣ್ದೊಡೆಯುತಿದೆ ಕಾಣಾ ಮಹಾಬಲವ
ನಾಕನಿಳಯರಿಗರಿದು ನಿನಗೆ ವಿ
ವೇಕವೆಳ್ಳನಿತಿಲ್ಲಲಾ ತೆಗೆ
ಸಾಕು ವಾಘೆಯ ಮರಳಿಸೆಳೆ ತೇಜಿಗಳ ತಿರುಹೆಂದ

ನುಡಿಯ ಕೇಳದೆ ಮುಂದೆ ನಾಲ್ಕೆಂ
ಟಡಿಯ ನರ್ಜುನ ರಥವ ನಡಿಸಲು
ಹಿಡಿದಬಿಲ್ಲಂಬುಗಳು ಬಿದ್ದವು ಕೈಯ ನರತೆಗೆದು
ಹಿಡಿ ಹಯುವನಿಱಿಗಾಱ ಸಾರಥಿ
ನುಡಿವವರು ನಾವು ಹಗೆಗಳೆ ನಿ
ನ್ನೊಡೆಯರಲ್ಲಾ ಸ್ವಾಮಿದ್ರೋಹಿತೆ ಲೇಸು ಲೇಸೆಂದ

ಎಂದೊಡರ್ಜುನ ನಗುತೆ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೈ ಸಾರಥಿ ಯೆನುತೆ ಸಂವರಿಸಿ ಮುಂಜೆಱಗ
ನಿಂದು ಮೆಲ್ಲನೆ ರಥದ ಮೊದಲಿಗೆ
ಬಂದು ಧುಂಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮುಂಡೆಯಲಿ

ನೋಡಿದನು ಕಲಿಪಾರ್ಥನೀ ಕೇ
ಡಾಡಿ ಕೆದಱಿದ ಕೇಶದಲಿ ಕೆ
ಟ್ಟೋಡುತಿರಲೆಲೆ ಪಾಪಿ ಹಾಯ್ದನು ಹಿಡಿಯ ಬೇಕೆನುತೆ
ಕೂಡೆಸೂಟಿಯೊಳಟ್ಟಲಿಳೆಯ
ಲ್ಲಾಡಿತಹಿಪತಿ ಕುಸಿದ ನತ್ತಲು
ನೋಡಿ ಕೌರವಸೇನೆ ಕೆಡೆದುದು ನಗೆಯ ಕಡಲೊಳಗೆ

ಎಲೆಲೆ ಕಾದಲು ಬಂದ ವೀರನ
ಬಲುಹ ನೋಡಾ ಶಿವ ಶಿವಾ ಬೆಂ
ಬಳಿಯಲಟ್ಟುವ ವೀರನಾರೋ ದಿಟ್ಟನವನಹನು
ತಿಳಿಯಲರಿದಿವನಾವನೋ ವೆ
ಗ್ಗಳೆಯನಹ ನಾಕಾರದಲಿ ನೆಱೆ
ಫಲುಗುಣನ ಹೋಲುವನೆನುತೆ ಗಜಬಜಿಸಿತರಿಸೇನೆ

ಇತ್ತಲರ್ಜುನನುತ್ತರನ ಬೆಂ
ಬತ್ತಿದನು ನಿಲು ಹೋದೆಯಾದರೆ
ಕಿತ್ತು ಬಿಸುಡುವೆ ನಿನ್ನ ಶಿರವನು ನಿಲ್ಲು ನಿಲ್ಲೆನಲು
ಮಿತ್ತುವೋ ಸಾರಥಿಯೊ ಪಾಪಿಯ
ನೆತ್ತಣಿಂದವೆ ಮಾಡಿಕೊಂಡೆನೆ
ನುತ್ತೆ ಮರಳಿಯೆ ನೋಡಿ ನಿಲ್ಲದೆ ಮತ್ತೆ ಸೈವರಿದ

ಇಟ್ಟಣಿಸಿ ನರ ನೂಱುಹೆಜ್ಜೆಯೊ
ಳಟ್ಟಿ ಹಿಡಿದನಿದೇನ ಮಾಡಿದೆ
ಹುಟ್ಟಿದೆಯೊ ಹಾದರಕೆ ಬಾಹುಜಬೀಜವೋ ಮೇಣು

ದಿಟ್ಟತನ ಮಿಗೆ ಹೆಂಗಳಿದಿರಲಿ
ಹೊಟ್ಟುಗುಟ್ಟಿದೆ ಹಗೆಗಳಿದಿರಲಿ
ಬಿಟ್ಟುಕೊಂಡೆ ದುರಾತ್ಮ ಮುಱಿದೆ ವಿರಾಟನನ್ವಯವ

ಹಲುಗಿರಿದು ಬಾಯೊಳಗೆ ಬೆರಲ್ಗಳ
ನಿಳುಹಿ ತಲೆವಾಗಿದನು ಸಾರಥಿ
ಕಳುಹಿ ಕಳೆಯೈ ನಿನ್ನ ಬಸಿರಲಿ ಮರಳಿ ಬಂದವನು
ಕೊಳಗುಳದೊಳೀಯೊಡ್ಡ ಮುಱಿವ
ಗ್ಗಳಿಕೆಯುಂಟೇ ಲೋಗರಿಂದವೆ
ಕೊಲಿಸದಿರು ನೀಂ ಕುತ್ತಿ ಕೆಡಹು ಕಠಾರಿಯಿದೆಯೆಂದ

ಮನದೊಳೊಡಲೊಡೆವಂತೆ ನಗುತ
ರ್ಜುನನು ಗಜಱಿದನೆಲವೊ ಸಭೆಯಲಿ
ವನಜಮುಖಿಯರ ಮುಂದೆ ಸೊರಹಿದೆ ಬಾಯ್ಗೆಬಂದಂತು
ಅನುವರದೊಳೇನಾಯ್ತು ರಿಪುವಾ
ಹಿನಿಯನಿಱಿಯದೆ ನಾದನರಿಯವೊ
ಲೆನಗೆ ನೀ ಹಲುಗಿರಿಯೆ ಬಿಡುವೆನೆ ಕಾದು ನಡೆಯೆಂದ

ಹೇವ ಬೇಡಾ ? ವೀರರೀಪರಿ
ಜೀವಗಳ್ಳರ ಪಥವ ಹಿಡಿವರೆ
ಸಾವಿಗಂಜುವೆವೇ ನಪುಂಸಕರೆಮ್ಮ ನೋಡೆನಲು
ನೀವು ವೀರರು ನೆಱೆ ನಪುಂಸಕ
ರಾವು ಸಾವವರಲ್ಲ ಲೋಕದ
ಜೀವಗಳ್ಳರಿಗಾವು ಗುರುಗಳು ಬಿಟ್ಟು ಕಳುಹೆಂದ

ಹಱುಕನೇ ನೀನೆಲವೊ ರಾಯರೊ
ಳುಱುವದೊರೆ ನಿಮ್ಮಯ್ಯ ನಿನಗಿಂ
ದಿಱಿವ ಮೆಱೆವವಸರವಲಾ ಜವ್ವನದ ಧುರಭರವ
ಸರಿಗಳೆಯದಪಕೀರ್ತಿ ರವಿಶಶಿ
ಮುಱಿದು ಬೀಳ್ವನ್ನಬರ ವೆಲೆನರ
ಗುಱಿಯೆ ನಡೆ ಕಾಳಗಕೆನುತೆ ಹಿಡಿದೆಳೆದನುತ್ತರನ

ಕೊಳುಗುಳದೊಳೋಡಿದೊಡೆ ಹಜ್ಜೆಗೆ
ಫಲ ಮಹಾಪಾತಕವು ಮುಂದ
ಣ್ಗೊಲಿದು ಹಜ್ಜೆಯನಿಡಲು ಹಜ್ಜೆಗೆಯಶ್ವಮೇಧಫಲ
ಅಳಿದನಾದೊಡೆ ದೇವಲೋಕದ
ಲಲನೆಯರು ತೊತ್ತಿರು ಸುರೇಂದ್ರನು
ನೆಲನನುಪ್ಪಡಿಸುವನು ವೀರಸ್ವರ್ಗವಹುದೆಂದ

ಧುರದೊಳೋಡಿದಪಾತಕವ ಭೂ
ಸುರರು ಕಳೆದಪರಶ್ವಮೇಧವ
ಧರಣಿಯಲಿ ಪ್ರತ್ಯಕ್ಷವಾಗಿಯೆ ಮಾಡಲಹುದೆನಲು
ಸುರರ ಸತಿಯರನೊಲ್ಲೆವೆಮಗೆ
ಮ್ಮರಮನೆಯ ನಾರಿಯರೆ ಸಾಕೆ
ಮ್ಮರಸುತನವೆಮಗಿಂದ್ರಪದ ಸೀ ಬಿಟ್ಟು ಕಳುಹೆಂದ

ಆಳೊಳೊಡ್ಡುಳ್ಳವನು ತೋರಿಯ
ತೋಳುಗಳ ಹೊತ್ತವನು ಮನೆಯಲಿ
ಸೂಳೆಯರ ಮುಂದುಲಿದು ಬಾಷ್ಕಳಗೆಡೆದು ಬಂದೀಗ

ಕೋಲನಿಕ್ಕದೆ ಗಾಯವಡೆಯದೆ
ಕಾಲುವೇಗವ ತೋಱಿದೊಡೆ ನಿಂ
ನೋಲಗದೊಳಿಂತಕಟ ನಾಚದೆ ಕುಳಿತಿಹೆಯೊ ಎಂದ

ಕಿತ್ತು ಕೊಂಡಾನಾಚಿಕೆಗೆ ನೆಱೆ
ಕುತ್ತಿಕೊಳಬೇಕೆಂಬ ಗಾದೆಯು
ನಿತ್ತ ಹೊದ್ದಿಸಬೇಡ ನಾವಂಜುವೆವು ಕಾಳಗಕೆ
ತೆತ್ತಿಗನು ನೀ ನಹಿತನಂತಿರೆ
ಮಿತ್ತುವಹರೇ ನಿನಗೆ ಜೇಡಿದು
ದಿತ್ತು ಸಲಹುವೆನೆನ್ನ ಕೊಲಿಸದೆ ಬಿಟ್ಟು ಕಳುಹೆಂದ

ವಳಿತವನು ವಾರುವವ ಮುಕ್ತಾ
ವಳಿಯಲಂಕಾರವನು ಗಜವನು
ಲಲನೆಯರ ನಾನೀಸಿ ಕೊಡುವೆನು ರಾಜಭವನದಲಿ
ಎಲೆ ಬೃಹನ್ನಳೆಯೆಮ್ಮ ಬೊಪ್ಪನು
ಸಲಹಿದೊಡೆ ಕೈಯೊಡನೆ ತೋಱಿದೆ
ಕಲುಮನವಲಾ ನಿನ್ನದೆಂದರೆ ಪಾರ್ಥನಿಂತೆಂದ

ಒಡಲು ಕಿಡುವುದು ನಾಳೆ ನಾಡಿದು
ಪೊಡವಿಯುಳ್ಳನ್ನಬರ ಲೋಕದೊ
ಳಡಗದಿಹುವಪಕೀರ್ತಿಗಳೆಂಬುವಿದು ನಿರುತ
ಸುಡಲಿ ಜೀವನದಾಸೆಯನು ಕಿಡು
ವೊಡಲ ಭುಕ್ತಿಯು ಭೋಗಕೋಸುಗ
ಕಿಡಿಸಬೇಡಿಹಪರದ ಗತಿಗಳನೆಂದನಾಪಾರ್ಥ

ಪೊಡವಿಪತಿಗಳ ಬಸಿಱು ಬಂದೀ
ಯೊಡಲ ಕಕ್ಕುಲತೆಯಲಿ ಕಾಳಗ
ದೆಡೆಗೆ ಬಾರದರಿಲ್ಲ ಭೂತಭವದ್ಭವಿಷ್ಯದಲಿ
ನುಡಿಯಲಹುದೇ ಬಂಜೆ ನುಡಿಯನು
ಸುಡುಸುಡೆಲವೋ ರಾಜಬಾಹಿರ
ನಡೆ ವರೂಥದ ಹೊರೆಗೆ ಕಾದಲು ಬೇಡ ಬಾಯೆಂದ

ಕಾದುವೆನು ಮಾಜಿ಼ಡ್ಡಿನಲಿ ನೀ
ಚೋದಿಸೆನ್ನಯ ರಥವನಕಟಾ
ವಾದವನು ನೆರೆ ಮಾಣು ಸಾರಥಿಯಾಗು ಸಾಕೆನಲು
ಆದಿಯಲಿ ನೀನಾವರಾಯ಼ರ
ಕಾದಿ ಗೆಲಿದ್ದೈ ಹುಲುಬೃಹನ್ನಳೆ
ಯಾದ ನಿನಗೀಕದನ ನಾಟ್ಯದ ವಿದ್ಯೆಯಲ್ಲೆಂದ

ಎನ್ನಯೊಂದಿಗರಾಜಪುತ್ರರಿ
ಗಿನ್ನು ಮೊಗಸಲು ಬಾರದಿದೆ ನೀ
ನೆನ್ನ ಸಾರಥಿ ಮಾಡಿಕೊಂಡೀ ಬಲವ ಗೆಲುವೆಯಲಾ
ಅನ್ನಿಯರ ಮನಗಾಂಬರಲ್ಲದೆ
ತನ್ನ ತಾ ಮನಗಾಂಬರೇ ಈ
ಗನ್ನಗತಕವ ನಾನು ಬಲ್ಲೆನು ಬಿಟ್ಟು ಕಳುಹೆಂದ

ಎಲವೊ ಸಾರಥಿಯಾಗು ಬಾ ಬಿಡೆ
ಗಳಹಿದರೆ ಕಟವಾಯ ಕೊಯ್ವೆನು
ಗೆಲುವೆನೀಪ್ರತಿಭಟನಿಕಾಯುವ ನಿನ್ನ ಸಾಕ್ಷಿಯಲಿ

ಬಟಿಕ ನೀ ನಗು ನಡೆಯೆನುತೆ ಪರ
ಬಲಭಯಂಕರನುತ್ತರನ ಹೆಡ
ತಲೆಯು ಹಗರಿನೊಳೌಕಿ ತಂದನು ರಥವನೇರಿಸಿದ

ನಡೆಗೊಳಿಸಿದನು ರಥವ ಮುಂದಕೆ
ನಡಿಸಲುತ್ತರ ನುಡಿದ ಸಾರಥಿ
ಕೆಡಿಸದಿರು ವಂಶವನು ರಾಯನ ಹಿಂದೆ ಹೆಸರಿಲ್ಲ
ಬಿಡು ಮಹಾಹವವೆನಗೆ ನೂಕದು
ತೊಡೆಯದಿರು ನೊಸಲಕ್ಕರವ ನೀ
ನೊಡೆಯ ಕಿಂಕರರಾಗಿಹೆವು ನಾವಿಂದು ಮೊದಲಾಗಿ

ಖೇಡತನ ಬೇಡೆಲವೊ ರಣದೊಳ
ಗೋಡಿಸುವೆ ನಹಿತರನು ಹರಣವ
ಹೂಡಿಸುವೆ ನಂತಕನ ನಗರಿಗೆ ಥಟ್ಟನೊಡೆಹಾಯ್ದು
ಕೋಡದಿರು ಕೊಂಕದಿರು ಧೈರ್ಯವ
ಮಾಡಿ ಸಾರಥಿಯಾಗೆನುತೆ ಕಲಿ
ಮಾಡಿಕೊಂಡುಯ್ದನು ಸಮೀಪದ ಶಮಿಯ ಹೊರೆಗಾಗಿ

**ಕುಮಾರವ್ಯಾಸ–ಭಾರತ**
(೧೪೩೦)

# ೭೩. ವೀರ ದ್ರೌಪದಿ

ಸಮರದನುಸಂಧಾನದಲಿ ಸಂ
ಭ್ರಮಿಸೆ ಶೌರಿ ಸಮೀರಸುತನನು
ಸಮತೆಯಲಿ ಸೇರಿಸಿದನಂದು ಸಮಗ್ರಸೂಕ್ತಿಯಲಿ

ಕೇಳು ಜನಮೇಜಯಧರಿತ್ರೀ
ಪಾಲ ಧರ್ಮಜನಹಿತಮಂತ್ರಿಯು
ಬೀಳುಕೊಟ್ಟನು ಬಂದನಸುರಾರಾತಿಯೋಲಗಕೆ
ಮೇಲಣನುವಿನ್ನೇನು ಲಕ್ಷ್ಮೀ
ಲೋಲ ಕರುಣಿಸು ಕೌರವಕ್ಷಿತಿ
ಪಾಲನಲಿ ನಮಗೇನು ಘಟಿಸುವುದೆಂದು ನೃಪ ನುಡಿದ

ಕ್ಷಮೆಗೆ ಸೇರುವರಲ್ಲ ಮೂರ್ಖರು
ಕುಮತಿಗಳು ಮುಂದಜಿಯರವರ
ಕ್ರಮದಿ ನೆಗಳಿದಡಳಿವುದಸ್ವಯದಮಳಕೀರ್ತಿಗಳು
ಎಮಗೆ ಹದನಿನ್ನೇನು ಸಂಧಿಯೊ
ಸಮರವೋ ಚಿತ್ತೈಸಿ ಬೆಸಸೈ
ಕಮಲಲೋಚನ ಎಂದು ಬಿನ್ನೈಸಿದನು ಯಮಸೂನು

ಏನು ನಿನ್ನಭಿಮತವು ವರಸಂ
ಧಾನವೋ ಸಂಗ್ರಾಮವೋ ನಯ
ವೇನು ಮನದೊಳವರಿಯೊಳಿರಿಸದೆ ಹೇಳು ನಿಶ್ಚಯವ
ನೀನೊಲಿದ ಹದನಾವುದದನೊಲಿ
ದಾನು ಘಟಿಸುವೆನೆಂದು ಕುಂತೀ
ಸೂನುವನು ಬೆಸಗೊಂಡನಸುರಾರಾತಿ ನಸುನಗುತ

ಅಳಿವುವೊಡಲುಗಳವನಿಸಾಗರ
ವಳಿಯಲುಳಿವುದು ಕೀರ್ತಿ ಸೋದರ
ರೊಳಗೊಳಗೆ ಕದಡಾಗಿ ಕಾದಿದರೆಂಬ ದುರ್ಯಶದ
ಹಳಿವು ಹೊಱುವುದು ದೇವ ಸುಡಲೀ
ನೆಲನನಾ ಕೌರವನ ಕೈಯಲಿ
ಕೆಲವು ನಗರಂಗಳನು ಕೊಡಿಸಿಯೆ ಸಂತವಿಡಿಯೆಂದ

ನೀವು ಬಿಜಯಂಗೈದು ಸಂಧಿಯ
ನಾವಪರಿಯಲಿ ಘಟಿಸಿ ಕುರುಭೂ
ಪಾಳಿಯಲೆಮ್ಮಿರವು ಸಂಭವಿಸುವವೊಲೆಸಗುವುದು
ಲಾವಕರ ನುಡಿಗಳಲಿ ಕೆಡುವುದು
ಕೋವಿದರ ಮತವವರಮೇಲೆವು
ಗಾವ ಮನಮುನಿಸಿಲ್ಲ ಸಂಧಿಯ ರಚಿಸಿ ಸಾಕೆಂದ

ಎನೆ ಮುರಾಂತಕನಳುಕಿ ಯಮನಂ
ದನನ ಮತಿಸಂಧಾನದಲಿ ಸಂ
ಜನಿಸಿತಾದಡೆ ಕಾಣೆನವನಿಯ ಹೊಱಗ ಹಱವುಗಳ
ಮನದೊಳನುಸಂಧಾನವಂತಕ
ತನಯನಲಿ ತೊದಲಾಯ್ತು ತೋಟಿಯ
ನೆನಹು ತಾನೆಂತೆನುತ ಚಿಂತಿಸುತಿರ್ದನಸುರಾರಿ

ಎಲೆ ಕೃತಾಂತಜ ವೈರಿಭೂಭುಜ
ಕುಲಕೃತಾಂತ ಸರಾಗನಹೆ ನಿ
ರ್ಮಲಿನಧರ್ಮದಲಾ ಸುಯೋಧನನಧಿಕಕಲ್ಮಷನು

ನೆಲನ ಕೊಡಲಱಿಯನು ವೃಥಾ ಕ
ಕ್ಕಲಿತೆಯಲ್ಲದೆ ಕಾಣೆನಿದಱಲಿ
ಫಲವನೆಂದಸುರಾರಿ ನುಡಿದನು ಧರ್ಮನಂದನಗೆ

ಅರಸನಭಿಮತವಿಂದು ಸಂಧಿಗೆ
ತೆರಳಿತೆಲೆ ಪರಮಾನಸುತ ನಿ
ನ್ನಱಿತವಾವುದು ಮನವ ವಂಚಿಸಬೇಡ ಹೇಳೆನಲು
ಧರಣಿಪತಿ ತಪ್ಪುವನೆ ಕರ್ಕಶ
ತರದ ಕದನದಲೇನುಫಲ ಸೋ
ದರರ ವಧೆಗೊಡಬಡುವನಲ್ಲಸುರಾರಿ ಕೇಳೆಂದ

ಹಗೆಯಲೆಮ್ಮವರುಗಳಲೆದೆಗಿ
ಚ್ಚುಗಳ ಖುಲ್ಲಕುಠಾರರಪನಂ
ಬುಗೆಯ ಬಳಸಿದರದು ಪುರಾಕೃತಕರ್ಮದವಶೇಷ
ಬಗೆಯೆನವಮಾನವನು ಕೌರವ
ರಗಡುಮಾಡಿದರೆಂಬ ಚಿತ್ತದ
ದುಗುಡವೆಮಗಿನ್ನಿಲ್ಲ ಸಂಧಿಯ ರಚಿಸಿ ಸಾಕೆಂದ

ಎಲೆ ಮಹಾದೇವಾಯ್ತು ಹಾಲಾ
ಹಲ ಸುಧಾರಸವುಕ್ಕಿ ದುರಿಯು
ಗ್ಗಳವು ಸೀತಳವಾಯ್ತು ಸಿಡಿಲಾಟೋಪ ನಯವಾಯ್ತು
ಕೊಳುಗುಳಕೆ ಪವಮಾನನಂದನ
ನಳುಕಿದನು ಮಝು ಮಾಯೆ ಕುಂತೀ
ಲಲನೆ ಹೆತ್ತಳು ಸುತರನೆಂದನು ಶೌರಿ ನಸುನಗುತ

ಈತನಭಿಮತವಿದು ಜಗದ್ವಿ
ಖ್ಯಾತಸಾಹಸ ಪಾರ್ಥ ಹೇಳೈ
ನೂತನಾಳಾಪವನು ಕೇಳ್ವೆವು ಶ್ರುತಿರಸಾಯನವ
ಭೀತಿ ಬೇಡಿನ್ನೆನಲು ಬೇಱಿನ
ಗೀತಱಭಿಮತವೇನ ಬೆಸಸಿದ
ಡಾತುಕೊಂಬೆನು ಶಿರದೊಳೆಂದನು ಪಾರ್ಥ ಕೈಮುಗಿದು

ನಕುಲ ಹೇಳೈ ಹದನ ನಿನ್ನಯ
ಯುಕುತಿ ಸಾಮವೊ ಮೇಣು ಸಮರವೊ
ಸುಕರಮಂತ್ರವನಱಿವೆ ನೀನೆಮಗಂಜಬೇಡೆನಲು
ಯುಕುತಿಯಿದಕಿನ್ನೇನುಭಯರಾ
ಜಕವ ಸಂತೈಸುವುದು ಬೇಱಿನ
ಗುಕುತಿಯೆಲ್ಲಿಯದೆಂದನಾ ಮಾದ್ರೇಯ ವಿನಯದಲಿ

ಆವುದಭಿಮತವೇನು ಹದ ಸಹ
ದೇವ ನೀ ಹೇಳೆನಲು ಕೇಳಲೆ
ದೇವ ಸೇರದು ಸಂಧಿ ಸಂಗರವೆನಗೆ ಸಮ್ಮತವು
ಆವ ವಿಧದಲಿ ಸಮರವನೆ ಸಂ
ಭಾವಿಸುವುದೆನೆ ನಗುತ ವರರಾ
ಜೀವನಾಭನು ಕಳುಹಿದನು ದ್ರೌಪದಿಗೆ ಚರರುಗಳ

ದೇವಿ ಚಿತ್ತೈಸುವುದು ವರವಸು
ದೇವನಂದನನಟ್ಟಿದನು ಸಂ
ಭಾವಿಸುವುದರಿರಾಯರಲಿ ಸಂಧಾನಸೌರಂಭ

ನೀವು ಬಿಜಯಂಗೈದು ಚಿತ್ತದೊ
ಳಾವ ಹದನಾಹದನನಾ ರಾ
ಜೀವನಾಭಂಗಱುಹಿಯೆಂದರು ಚರರು ಕೈಮುಗಿದು

ಏನುಹದನೇನೇನು ವರಸಂ
ಧಾನವೇ ಕೌರವರೊಳಗೆ ಸು
ವ್ಯಾನವೇ ಪತಿಗಳಿಗೆ ಪಾಪಿಗಳಿಱಿದರೋ ಸತಿಯು
ದಾನವಾಂತಕನೆಸಗುವನೆ ತ
ಪ್ಪೇನು ತಪ್ಪೇನೆನುತ ನಸುಮುಸು
ಳ್ದಾನನಾಂಬುಜದಬಲೆ ಬಂದಳು ಕೃಷ್ಣನೋಲಗಕೆ

ಭ್ರೂಲತೆಯು ಸುರಚಾಪದುರುಕೇ
ಶಾಳಿಗಳ ಕಾರ್ಮುಗಿಲಪಾಂಗದ
ಸಾಲ ಕುಡಿಮಿಂಚುಗಳ ನೂಪುರರವದ ಮೊಳಗುಗಳ
ಆ ಲತಾಂಗಿಯು ಗಮನವೇ ಮಳೆ
ಗಾಲವಂತಿರೆ ಧಾರ್ತರಾಷ್ಟ್ರಕು
ಲಾಳಿ ನಿಲುವುದೆ ಪವನಜನ ಸಂಪ್ರತಿಯು ಸೇರುವೆಗೆ

ಕವಿದ ಚಿತ್ರಾವಳಿಯು ದಡ್ಡಿಯು
ವಿವಿಧಭಟರುಗ್ಗಡಣೆಯಲಿ ವರ
ಯುವತಿ ಬಂದಳು ಸಖಿಯರೊಯ್ಯಾರದಲಿ ನೃಪಸಭೆಗೆ
ನವಬಲಾಹಕದೊಳಗೆ ಮಿಂಚಿನ
ಗವಿಸಹಿತ ಮಱಿಮೇಘವಾವಿ
ರ್ಭವಿಸಿತೆನೆ ದಂಡಿಗೆಯನಿಳಿದಳು ಹೊಕ್ಕಳೋಲಗವ

ಎಲೆ ಸಮೀರಕುಮಾರ ಸಂಪ್ರತಿ
ಗೆಳಸಿದ್ದೈ ಕಲಿತನವ ಸೀರಲಿ
ಕಲಕಿದ್ದೈ ಕೈವಾರವಾದುದೆ ಕೌರವೇಂದ್ರನಲಿ
ಕಲಿಸಿದ್ದೈ ಕೃಷ್ಣಂಗೆ ನೀತಿಯ
ಬಳಸಿದ್ದೈ ಬಹುಮತವ ನರಕದೊ
ಳಿಳುಹಿದ್ದೈ ಶಶಿಕುಲವನೆಂದನಿಲಜನ ನೋಡಿದಳು

ಬೇಡಲಟ್ಟುವನೇ ಮಹೀಪತಿ
ನಾಡೊಳೈದೂರುಗಳನವರಲಿ
ಮಾಡುವಾತನು ಕೃಷ್ಣನೇ ಸಂಧಾನವನು ನಿಮಗೆ
ಕೇಡುಗರು ಕೌರವ ನೃಪಾಲರ
ಕೂಡಿ ಬದುಕುವ ಭೀಮಸೇನನೆ
ರೂಢಿಸಿತಲಾ ನಿಮ್ಮ ಸಿರಿ ಸೋದರರ ಸೇರುವೆಗೆ

ಯತಿಗಳಾದಿರಿ ನೀವು ರೋಷ
ಚ್ಯುತರಲೇ ಒಳಿಕೇನು ಧರ್ಮ
ಜ್ಞತೆಯ ನೆಲೆಗಳನಱಿದ ಮನವೆಱಗುವುದೆ ರೌರವಕೆ
ಕ್ಷಿತಿಯ ಪಾಲಿಸುವುದು ವಿರೋಧಿ
ವ್ಯತಿಕರವ ಬಿಡಿಸುವುದು ಕುಂತೀ
ಸುತರು ಕೌರವರೊಡನೆ ಸುಖದಲಿ ರಾಜ್ಯಮಾಡುವುದು

ಭೀಮ ಬಲವದರಾತಿಸೇನಾ
ಭೀಮ ಕುರುಕುಲಕುಸುಮಮಾರ್ಗಣ
ಭೀಮ ಮಱೆದ್ದೈ ಮಾನಿನಿಯ ಘನಮಾನಹಾನಿಗಳ

ರಾಮುನಬಲೆಗೆ ಕುದಿದ ಬಲುಸಂ
ಗ್ರಾಮುವನು ನೀ ಕೇಳಿದಱಿಯಾ
ಪ್ರೇಮದಲಿ ನೋಡೆನ್ನನೆಂದಳು ದ್ರೌಪದೀದೇವಿ

ಧರೆಗೆ ಕಟ್ಟಭಿಮಾನ ಹೆಂಡಿರ
ಹರಿಬವಾ ಹರಿಬದಲಿ ಕೆಡುಹುವ
ರರಿಯನವಗಡಿಸಿದರೆ ಸಾವರು ಪಂಥವುಳ್ಳವರು
ಸುರನರೋರಗರೊಳಗೆ ನಿಮ್ಮೈ
ವರಿಗೆ ಸರಿಯಿಲ್ಲೈವರಬಲೆಯು
ಹರಿಬದಲಿ ಹಂಗಾದಿರೆಂಬಪದೆಸೆಯ ನೋಡುವರೆ

ಸೋಲಗೆಲವೇ ಕೌರವರ ವಂ
ಶಾಳಿಯಲಿ ಸೋದರರು ನೀವ್ ಪಾಂ
ಚಾಲರಾವೇ ಹೊಱಗು ನಿಮ್ಮೊಳು ಸಲುಗೆಯೇಕೆಮಗೆ
ಮೇಳವೇ ಸಿರಿ ಗಳಿಸಲರಿದು ಜ
ನಾಳಿ ಹೆಂಡಿರಪೂರ್ವವೇ ಕ್ಷಿತಿ
ಪಾಲಕರು ನೀವಾಗಲೆಮಗದು ಪರಮಪರಿಣಾಮ

ಮುಂದಲೆಯ ಹಿಡಿದೆಳೆದು ಸಭೆಯಲಿ
ತಂದು ಸೀರೆಯ ಸೆಳೆದರವದಿರ
ಮುಂದೆ ಮೌನದೊಳಿದ್ದರಲ್ಲದೆ ಪತಿಗಳುಸುರಿದರೆ
ಅಂದು ನೀ ಹಿಂದಿಕ್ಕಿಕೊಂಡುದ
ನಿಂದು ಮಱೆದ್ದೆ ಸಂಧಿಗೋಸುಗ
ಮುಂದುವರಿವರೆ ಕೃಷ್ಣ ಎಂದಳು ದ್ರೌಪದೀದೇವಿ

ತನಯರೈವರು ವೀರಸಹದೇ
ವನು ಘಟೋತ್ಕಚನೀ ಸುಭದ್ರಾ
ತನಯನೆನ್ನಯ ತಂದೆ ಮೂಱಕ್ಷೋಹಿಣಿ ಸೇನೆ
ಇನಿಬರೇ ಕಾದುವರು ದುಶ್ಶಾ
ಸನನ ಕರುಳನು ತೆಗೆದು ಕುರುಕುಲ
ವನವ ಸುಡುವರು ನಿಮ್ಮ ಹಂಗೇಕೆಂದಳಿಂದುಮುಖಿ

ವರಸತಿಯ ಬಿಸುಸುಯ್ಲ ಗಾಳಿಯೊ
ಳುರಿ ಚಡಾಳಿಸಿ ರೋಷಮುಯುದು
ಬ್ಬರದೊಳಾಡೊತ್ತಿದನು ಹಿಡಿದನು ಖತಿಯನಹಿತರಲಿ
ತರುಣಿ ಸೈರಿಸು ಸೈರಿಸಿನ್ನೀ
ಸುರಿವ ಕಂಬನಿಗಳಿಗೆ ಶತಸಾ
ವಿರಮಡಿಯ ಕಂಬನಿಯ ಸುರಿಸುವೆ ಹಗೆಯ ಹೆಂಡಿರಲಿ

ಉರಿಯೊಗುವ ಮಿಾಸೆಯನು ಬೆರಳಲಿ
ಮುರಿದು ನೆಗಹಿದ ವಾಮಕರದೊಳು
ತರುಣಿಯನು ಸಂತೈಸಿ ಕಿಡಿಕಿಡಿಯಾಗಿ ಖಾತಿಯಲಿ
ನರಕಮರ್ದನ ಕೇಳು ಕೌರವ
ನರಿಗಳಿದಿರೇ ಕೀಳುವೆನು ಕುಲ
ಗಿರಿಗಳನು ತೊಡೆವೆನು ಕೃತಾಂತನ ಬಾಳದಕ್ಕರವ

ಯಮಸುತನ ಹರುವೆಂತುಟೆಂದಾ
ಕ್ರಮಕೆ ಮೊಗದಿರುಹಿದೆನು ದಿಟವೀ
ಕಮಲವದನೆಯ ಹರಿಬವೆನ್ನದು ಪತಿಗಳನಿಬರಲಿ

ಎನುಗೆ ಸಂಪ್ರತಿಯಿಲ್ಲ ಮನ ಘನ
ಸಮರವೇ ಸರ್ವಾರ್ಥ ಕೋಪ
ಪ್ರಮುಕೆ ರಿಪುರುಧಿರಾಂಬುಪಾನವೆ ವಿಪುಳಫಲವೆಂದ

ಕೆಡಹಿ ರಿಪುಗಳ ಕರುಳದಂಡೆಯ
ಮುಡಿಸುವೆನು ಮಾನಿನಿಗೆ ರಕುತವ
ಕುಡಿಯಲೆರೆವೆನು ಶಾಕಿನಿಯರಿಗೆ ಶತ್ರುಹೋದರರ
ನಡದು ಸಂಧಿಯು ಮಾಡು ಮುರರಿಪು
ಕೊಡಿಸು ನಾಲ್ವರುಗಳನಿವರಿಗೆ
ತಡೆಯುವೆರಡೂರುಗಳ ಕೊಂಬೆನು ಕೌರವೇಂದ್ರನಲಿ

ದೇವ ಸಂಧಿಯನೊಲಿದು ಮಾಡುವು
ದಾವು ಮುಖದಿರುಹಿದವರೀ ಸಹ
ದೇವನೀಯಭಿಮನ್ಯುವೀ ದ್ರೌಪದಿ ಘಟೋತ್ಕಚರ
ಭಾವನೆಮ್ಮಯ ಭಾವನರ್ಜುನ
ದೇವ ಧರ್ಮಜನಕುಲರೆಂದುದ
ನಾವು ಮಿಸುಕುವರಲ್ಲ ಚಿತ್ತೈಸೆಂದನಾ ಭೀಮ

ಕೆಲರು ಸಂಪ್ರತಿಗೊಲಿವರಿದರೊಳು
ಕೆಲರು ವಿಗ್ರಹಕೆಳಸುವರು ನಿ
ಮ್ಮೊಳಗೆ ನಿಶ್ಚಯವಿಲ್ಲದಿರೆ ನೃಪಕಾರ್ಯವೆಂತಹುದು
ತಿಳಿದು ಹೇಳವನೀಶ ಪರಮಂ
ಡಲಕೆ ಪಯಣವ ಮಾಡುವೆವು ನಾ
ವಳುಕಿದವರಲ್ಲೆನಲು ಕೃಷ್ಣಂಗರಸನಿಂತೆಂದ

ವಿದಿತವ್ಯೆದೂರುಗಳ ಕೊಟ್ಟರೆ
ಹದುಳವಿಡುವುದು ಮ-ನಿದರಾದಡೆ
ಕದನವನೆ ಜೋಡಿಸುವುದುಚಿತಾನುಚಿತದನುವಱಿದು
ಹದನ ನೀನೇ ಬಲ್ಲೆ ಸಾಕಿ
ನ್ನಿದು ನಿಧಾನವು ಬಗೆಯಲೆಮ್ಮ
ಭ್ಯುದಯ ನಿನ್ನಾಧೀನವೆಂದನು ಧರ್ಮನಂದನನು

ಪಯಣವನು ನಿಶ್ಚೈಸಿ ದನುಜಾ
ರಿಯನು ಬೀಳ್ಕೊಂಡವನಿಪತಿ ಪಾ
ಳಯದೊಳಗೆ ಸಾಱಿಸಿದದಗ್ಗದ ಮಂಡಲೀಕರಿಗೆ
ನಯವಿದನು ಮಱುದಿವಸ ಮಂಗಳ
ಮಯಮುಹೂರ್ತದ ಜೋಯಿಸರ ಜೋ
ಕೆಯಲಿ ನಿರ್ಗಮನಿರತನಾದನು ಕೃಷ್ಣನೊಲವಿನಲಿ

ಕಲಿತಸನ್ನಾಹದಲಿ ಸಾತ್ಯಕಿ
ಸುಳಿಸಿದನು ಹೊಂದೇರನಭ್ರಕೆ
ತಳಿತವಮಲಚ್ಛತ್ರ ಚಾಮರ ಸಿತಪತಾಕೆಗಳು
ಅಳುಕೆ ನೆಲನಕ್ಷೋಣಿಬಲವಿ
ಟ್ಟಳಿಸಿ ನೆರೆದುದು ರಥಕೆ ದಾನವ
ಕುಲವಿಶಾಪಟ ಕೃಷ್ಣ ಬಿಜಯಂಗೈದನೊಲವಿನಲಿ

ಕಳುಹುತ್ತೆತಂದಖಿಳಪಾಂಡವ
ಬಲಕೆ ನೇಮವ ಕೊಟ್ಟು ಧರ್ಮಜ
ಫಲಗುಣರ ನಿಲಿಸಿದನು ಸಹದೇವನನು ನಕುಲನನು

ಕಳುಹಿದನು ನೀ ಮರಳೆನಲು ಬೆಂ
ಬಳಿಯಲನಿಲಜನೈದಿ ಹಗೆಯಲಿ
ಕಲಹವನು ಮಸೆಯೆಂದು ನಂಬುಗೆಗೊಂಡು ಮರಳಿದನು

ದೇವಿಯರು ನೀವ್ ಮರಳಿಯೆನೆ ರಾ
ಜೀವನಾಭನ ಹೊರೆಗೆ ದ್ರೌಪದಿ
ದೇವಿ ಬಂದಳು ಹಣೆಯ ಚಾಚಿದಳಂಘ್ರಿಕಮಲದಲಿ
ಸ್ಥಾವರಕೆ ಜಂಗಮಕೆ ನೀನೇ
ಜೀವಚೇಷ್ಟಕನವದಿರಂತ
ರ್ಭಾವವನು ನೀ ಬಲಿಯಲಾಗದು ಸಂಧಿಕಾರ್ಯದಲಿ

ಖಳರು ತಮ್ಮುನ್ನತಿಯ ಕೀಲನು
ಕಳಚಿ ಕಳೆದರು ಮರಳಿ ಹೂಡುವ
ಡಳುಕಿದರು ನನ್ನವರು ಪತಿಗಳೆ ಪರಮವೈರಿಗಳು
ಹಳಿವ ನೀನೇ ಬಲ್ಲೆಯೆನ್ನಯ
ವುಳಿವ ನೀನೇ ಬಲ್ಲೆ ಹಿರಿದಾ
ಗಳಲಿದೆನು ಸಲಹೆಂದು ಹೊರಳಿದಳಬಲೆ ಚರಣದಲಿ

ಏಳು ತಾಯೆ ಸರೋಜಮುಖಿ ವಿಪಿ
ನಾಲಯದೊಳತಿನವೆದೆ ನಿನ್ನವ
ರಾಳಿಗೊಂಡಂದವನು ಬಲ್ಲೆನು ನಿನ್ನ ಹಂಬದಲಿ
ಕಾಳಗವನೇ ಬಲಿದು ಬಹೆನಿವ
ರೇಳಿಲವ ಮಾಡಿದರೆ ರಿಪುಗಳ
ಸೀಳಿ ಕರುಳನು ಮುಡಿಸದಿಹೆನೇ ನಿನ್ನ ಕಬರಿಯಲಿ

ದೇವಕಿಯ ಮೇಲಾಣೆ ವರವಸು
ದೇವನಂಘ್ರಿಗಳಾಣೆ ಮನ್ಮಥ
ದೇವನಾಣೆ ನಿದಾನವನು ಕೇಳಬಲೆ ನಿನ್ನಾಣೆ
ನಾವು ಸಂಧಿಯನೆವದಲವದಿರ
ಭಾವವನು ಕಲಿಮಾಡಿ ಕೋಪವ
ತೀವಿ ಸಂಧಿಯ ಮುಱಿದು ಬಹೆವಿದ ನಂಬು ನೀನೆಂದ

**ಕುಮಾರವ್ಯಾಸ–ಭಾರತ**
(೧೪೩೦)

## ೭೪. ವಿದುರನ ಭಕ್ತಿಕೇಳಿ

ತವತವಗೆ ಗಾಂಗೇಯ ಗುರುಕೃಪ
ರವಿಸುತಾದಿಗಳಸುರರಿಪು ನಿಜ
ಭವನಕೈತಹನೆಂದು ಸವೆದರು ಸಾರವಸ್ತುಗಳ
ಅವನಿಪನ ಬೀಳ್ಕೊಟ್ಟು ಕೌರವ
ಭವನವನು ಹೊಱವಂಟು ವರಭಾ
ಗವತಮಸ್ತಕರತುನವಿದುರನ ಮನೆಗೆ ನಡೆತಂದ

ತೊಲಗಿದವು ಜನಮನದ ಬಲುಗ
ತ್ತಲೆಗಳಿದಿರಲಿ ಕಂಡ ಜೀವರ
ಹಲವು ಜನ್ಮಾಂತರದ ದುರಿತಾಂಭೋಧಿ ಬತ್ತಿದವು
ಬಳಿಯ ಮುನಿಗಳುಸಹಿತ ಕರುಣಾ
ಜಲಧಿ ವಹಿಲದಿ ಕೌರವೇಂದ್ರನ
ಹೊಳಲೊಳಗೆ ನಿಜಶರಣನರಮನೆಗಾಗಿ ಬರುತಿರ್ದ

ಕರಣ ನಿರ್ಮಳವಾಯ್ತು ಮನವು
ಬ್ಬರಿಸಿತತಿಪರಿತೋಷದೇಳಿಗೆ
ಪರಮಸುಖದಲಿ ತನುವ ಮುಸುಕಿತು ನಯನಜಲವುಗಲು
ಎರಡುದೋಱದ ಗಾಢಭಕ್ತಿಯ
ಭರದ ಲವಲವಿಕೆಯಲಿ ನಿಜಮಂ
ದಿರವ ಹೊಱವಡುವುತ್ತ ಕಂಡನು ವಿದುರನಚ್ಯುತನ

ಸಿರಿಮೊಗದ ಕಿಱುಬೆಮರ ತೇಜಿಯ
ಖುರಪುಟದ ಕೆಂಧೂಳಿ ಸೋಂಕಿದ
ಸಿರಿಮುಡಿಯ ಕೊನೆಮೀಸೆಯಲಿ ಕೆಂಪಡರ್ದ ರೇಣುಗಳ

ಖರಮರೀಚಿಯ ಝಳಕೆ ಬಾಡಿದ
ತರುಣತುಳಸಿಯ ದಂಡೆಯೊಪ್ಪುವ
ಗರುವದೇವನ ಬರವ ಕಂಡನು ಬಾಗಿಲಲಿ ವಿದುರ

ತನುವ ಮಱೆದನು ಪುಳಕಜಲದಲಿ
ನನೆದು ನಾರಾಯಣನ ಪದದರು
ಶನದ ಹರ್ಷಾರಣ್ಯದಲಿ ಮನಹೊಲಬುದಪ್ಪಿದನು
ನೆನೆವ ಸನಕಾದಿಗಳಿಗಿನ್ನುಂ
ಮನಗೊಡದ ಮಹಿಮಾತಿರೇಕನು
ಮನೆಗೆ ಬಹ ಕರುಣಾಳುತನ ಹೊಸತೆನುತ ಹಿಗ್ಗಿದನು

ವೇದದಱೆಕೆಗಳಱೆಸುವುಪನಿಷ
ದಾದಿ ದಿವ್ಯಸ್ತುತಿಯ ಗಡಣೆಗೆ
ಹೋದ ಹೊಲಬಳವಡದ ಮುನಿಗಳ ಮನಕೆ ಮೈಗೊಡದಾ
ಕಾದಿ ಕಡುಗುವ ತಾರ್ಕಿಕರು ಬೆಂ
ಡಾದರಲ್ಲದೆ ನಿಜವನಱೆಯದ
ನಾದಿಸಿದ್ಧನ ಬರವು ಕೌತುಕವೆನುತ ನಡೆತಂದ

ತೊಳಲುವುಪನಿಷದಱೆಕೆಯಿವು ಶ್ರುತಿ
ಗಳ ಸರಾಗದ ಬಳಕೆಯಿವು ಮುನಿ
ಗಳ ಸಮಾಧಿಗಳಾದಿಯಿವು ಯೋಗಿಗಳ ಬಳಕೆಯಿವು
ಎಲೆಲೆ ಭಕ್ತರ ಭಾಗ್ಯಶಾಲಿಯ
ಬೆಳೆಗಳಿವಲಾ ಎನುತ ಹರಿಪದ
ನಳಿನಯುಗಳದೊಳೊಡಲನೀಡಾಡಿದನು ಭಕ್ತಿಯಲಿ

ನೋಡಿದನು ಮನದಣಿಯೆ ಮಿಗೆ ಕೊಂ
ಡಾಡಿದನು ಬೀದಿಯಲಿ ಹರಿದೆಡೆ
ಯಾಡಿದನು ಭ್ರಮೆಯಾಯ್ತು ವಿದುರಂಗೆಂಬ ಗಾವಳಿಯ
ಕೂಡಿ ಕುಣಿದನು ಮನೆಯ ಮುಱಿದೀ
ಡಾಡಿದನು ಮೈಮಱೆದು ಹರುಷದ
ಗಾಡಿಕೆಯುಲಪ್ರತಿಮನೆಸೆದನು ಭಕ್ತಿಕೇಳಿಯಲಿ

ಹಸಿದು ನಾವೈತಂದಡೀಪರಿ
ಮಸಗಿ ಕುಣಿದಾಡಿದರೆ ಮೇಣೀ
ವಸತಿಯನು ನೀ ಮುಱಿದು ಬಿಸುಟರೆ ನಮಗೆ ತಣಿವಹುದೆ
ವಸುಮತೀ ವಲ್ಲಭನವರು ಪ್ರಾ
ರ್ಥಿಸಿದರೊಲ್ಲದೆ ಬಂದೆವೈ ನಾ
ಚಿಸದಿರೈ ಬಾ ವಿದುರ ಎನುತೊಳಹೊಕ್ಕನಸುರಾರಿ

ನೆಱೆಯೆ ಕೃತ್ಯಾಕೃತ್ಯಭಾವವ
ಮಱೆದು ಕಳೆದನು ಮನ ಮುರಾರಿಯ
ನಿಱುಕಿ ಬಿಗಿದುದು ಕಂಗಳೊಡವೆಚ್ಚವು ಪದಾಬ್ಜದಲಿ
ಅಱಿವು ಮಯಣಾಮಯದ ಭಕ್ತಿಯ
ಲೆಱಗಿಸಿದ ಪುತ್ತಳಿಯೆನಲು ಕಡು
ವೆಱಗ ಕೇಣಿಯ ಕೊಂಡು ಮೋನದೊಳಿರ್ದನಾ ವಿದುರ

ಒಲವರವು ಕೌತುಕವು ಪಾಲ್ಗಡ
ಲೊಳಗೆ ಮಲಗಿಹ ವಿಷ್ಣು ವಿದುರನ
ನಿಳಯದೊಳಗೊಕ್ಕಡಿತೆಹಾಲಲಿ ಹಸಿವ ನೂಕಿದನು

ಹೊಲಬುಗೆಡಿಸಿದನಖಿಳನಿಗಮಂ
ಗಳನು ತನ್ನಱಿಕೆಯಲಿ ಭಜಕಂ
ಗೊಲಿದು ತಾನ್ನೈತಹುದು ಕರುಣದ ಘನತೆಯೆನೆ ಲೋಕ

ಹರಿಯ ಪದಕಮಲಾಭಿಷೇಕದ
ವರಪಯೋಬಿಂದುಗಳು ಕೌರವ
ನರಮನೆಯನೊಳಕೊಂಬವೊಲು ಕಡಲಾಗಿ ಹರಿತರಲು
ಅರರೆ ಮುರಹರನೊಡನೆ ಹಾಲಿನ
ಶರಧಿ ಮೇರೆಯ ಮಱಿದುದಿಳೆಗ
ಚ್ಚರಿಯೆನುತ ಭೀಷ್ಮಾದಿಗಳು ಹೊಗಳಿವರು ಹರುಷದಲಿ

ಮುರಿದು ನೋಡಿದರಖಿಳರಾಯರು
ಶಿರವ ಬಾಗಲು ಲಾಳ ಮಾಳವ
ತುರುಕ ಕೊಂಕಣ ಗೌಳ ಗುಜ್ಜರ ವಂಗ ಹಮ್ಮಿರ
ವರಕಳಿಂಗಾದಿಗಳು ಬೆಸಸೆನು
ತಿರಲು ಕೋಮಲಿಕೆಯರು ಸಿತಚಾ
ಮರವ ಬೀಸಲು ಮಹಿಪ ಮೆಱೆದನು ಸಿಂಹಪೀಠದಲಿ

ಆವ ರೀತಿಯದಾವ ವಿಸ್ತರ
ವಾವ ದೇಶದ ಸಿರಿಯ ಸಡಗರ
ವಾವ ಪರಿಯ ವಿಲಾಸವಾವ ವಿಡಾಯಿ ತಾನೆನಲು
ಹಾವು ಹಳವಿಗೆಯಾದ ರಾಯನು
ರಾವಣಾರಿಯ ಕಾಣಿಕೆಗೆ ಬಲು
ಠವಿಯನು ತೋಱಿದನು ಸಾಱುವ ಭಟ್ಟರೋಳಿಯಲಿ

ಬರಲಿ ಕರೆ ಕೈತವದ ಶಿಕ್ಷಾ
ಗುರುವನೆಂದವನೀಶ ದೂತರ
ಹರಿಯುಬಿಟ್ಟನು ಹರಿಯು ನಿಳಯಕೆ ಹರಿಯ ಬೇಗದಲಿ
ಚರರು ಹರಿತಂದಸುರರಿಪುವಿನ
ಚರಣದಲಿ ಮೆಯ್ಯಿಕ್ಕಿ ನೊಸಲಲಿ
ಕರಪುಟಾಂಜಲಿ ಮೆಱೆಯುತಿರೆ ಬಿನ್ನಹವ ಮಾಡಿದರು

ದೇವ ದೇವರ ಸಮಯವೆನೆ ರಾ
ಜೀವನಾಭನು ಮುಗುಳುನಗೆಯಲಿ
ಭಾವನವರಟ್ಟಿದರೆ ಹರಹರ ಬಹೆವು ನಾವೆನುತ
ರಾವಣನ ಪರಿ ನೆಲಸಿತಿವನಲಿ
ಸಾವಿಗಂಜುವನಲ್ಲ ಖಳ ಮಾ
ಯಾವಿದನು ನಮ್ಮುಕುತಿ ಕೊಳ್ಳದು ವಿದುರ ಕೇಳೆಂದ

ಎನುತ ಮಂಚವನಿಳಿದು ವರಕಾಂ
ಚನವರೂಥಕೆ ಕೈಗೊಡುವ ಯದು
ಜನಪರುಗ್ಗಡಣೆಯಲಿ ಬಿಜಯಂಗೈದನಸುರಾರಿ
ಮುನಿನಿಕರ ಸಂದಣಿಸಿತಭ್ರದೊ
ಳನಿಮಿಷಾವಳಿ ನೆರೆದುದಿಭಪುರಿ
ಜನವೊಡನೆ ನಡೆತರಲು ಹರಿ ಬರುತಿರ್ದನೋಲಗಕೆ

ಕಲಿಮಲದಿ ಹೊಲೆಗಲಸಿದಿಭಪುರಿ
ಯೊಳಗೆ ನಿರ್ಮಳವಾಯ್ತು ಕೃಷ್ಣನ
ಸುಲಭದರ್ಶನದಿಂದ ಬೆಂದವು ಜನದ ಭವಬೀಜ

ಲಲನೆಯರು ತಂತಮ್ಮ ನಯನಂ
ಗಳಿಗೆ ದೇವನ ತಂದು ಸಮ್ಮದ
ಪುಳಕಿತಾಂಗಿಯರಾದರೆಲೆ ಜನಮೇಜಯಕ್ಷಿತಿಪ

ಕಂಜಸಂಭವಪಿತನು ಬಂದನು
ನಂಜಿನಲಿ ಪವಡಿಸುವ ಬಂದನು
ಕುಂಜರನ ಮೊಱೆಗೇಳಿ ಸಲಹಿದ ದೇವ ತಾ ಬಂದ
ಅಂಜಿದಸುರನ ಕಾಯ್ವ ಬಂದನು
ಭಂಜನೆಗೆ ಬಲುದೈವ ಬಂದನು
ಅಂಜನೆಯಸುತನಾಳ್ದ ಬಂದನು ನೃಪತಿಯೋಲಗಕೆ

ದೇವ ಬಂದನು ತನ್ನ ನೆನೆವರ
ಕಾವ ಬಂದನು ದೈತ್ಯಕುಲವನ
ದಾವ ಬಂದನು ಭಾಗವತಜನಲೋಲುಪನು ಬಂದ
ಭಾವಿಸುವೊಡಘಹಾರಿ ಬಂದನು
ವೋವಿ ಭಜಿಸಲು ತನ್ನ ಬೀಱುವ
ದೇವ ಗದುಗಿನ ವೀರ ನರಯಣ ಬಂದನೋಲಗಕೆ

ಅರಸ ಬಂದನು ಭಾಗವತಜನ
ಪರುಸ ಬಂದನು ಭಕ್ತವತ್ಸಲ
ಕರುಣಿ ಬಂದನು ತನ್ನ ನೊದೆದರೆ ಪದವನಂಕಿಸಿದ
ಪರಮಪುರುಷೋತ್ತಮನು ಬಂದನು
ದುರಿತ ದುರ್ಗವಿಭಾಡ ಬಂದನು
ಸುರರ ಸಲಹುವ ದೇವ ಬಂದನು ನೃಪತಿಯೋಲಗಕೆ

ಕ್ಷೀರವಾರಿಧಿಶಯನ ಬಂದನು
ವಾರಿಜೋದರ ಕೃಷ್ಣ ಬಂದನು
ಧಾರಿಣಿಯ ಹೊಱೆಗಳೆಯಲೋಸುಗ ಮನುಜವೇಷದಲಿ
ಭೂರಿದೈತ್ಯರನೊರಸಿ ಕೌರವ
ವಾರಿಧಿಯ ಮುಕ್ಕುಳಿಸಲೆಂದೇ
ಭೋಂನ್ಯೆತರುತಿರ್ದನಂಧನೃಪಾಲನೋಲಗಕೆ

ಬರಲು ಮುರಹರಗಿದಿರುವಂದುದು
ಸುರನದೀಜದ್ರೋಣಗೌತಮ
ಗುರುಸುತಾದಿ ಸಮಸ್ತಭೂಪಚಮೂಪಸಂದೋಹ
ಚರಣದಲಿ ಚಾಚಿದರು ಭೂಮೀ
ಶ್ವರರು ಮಕುಟವನಂತತಾರಾ
ಪರಿವೃತೇಂದುವಿನಂತೆ ಮೆಱೆದುದು ಹರಿಯ ಪದನಖವು

ಅರಿದಲ್ಲೆ ಮುರವೈರಿ ಸನಕಾ
ದ್ಯರ ಸಮಾಧಿಗೆ ಸುಳಿಯದಂಘ್ರಿಯ
ದರುಶನದ ಫಲಭೋಗ ಸಾರಿತು ನಮ್ಮ ಪುಣ್ಯವಲೆ
ಸುರನರೋರಗರೊಳು ಕೃತಾರ್ಥರು
ನಿರುತ ನಾವಲ್ಲದಡೆ ನಿಮ್ಮಯ
ಸರಸಿಜಾಂಘ್ರಿಯ ಸೇವೆ ದೊರಕುವುದಾವಮುನಿಗಳಿಗೆ

ಎಂದು ಗಂಗಾನಂದನನು ನಲ
ವಿಂದ ಕೈಗೊಡೆ ಸುರಗಿರಿಯ ತುದಿ
ಯಿಂದ ಮುರಿಮಿಂಚುಗಳ ಮುಗಿಲಿಳಿವಂತೆ ಭೂತಳಕೆ

ಅಂದು ನೀರಾಚಲನಿಕಾಯದ
ಸುಂದರಾಂಗದ ಕೌಸ್ತುಭಪ್ರಭೆ
ಯಿಂದ ಕಾಂಚನರಥವನಿಳಿದನು ದಾನವಧ್ವಂಸಿ

ಸಮರಸರ್ವಜ್ಞರುಗಳಂಘ್ರಿಗೆ
ನಮಿಸಿದರು ಬಹಳೋಲಗದ ಸಂ
ಭ್ರಮದ ಸಿರಿ ತಲೆವಾಗುತಿರ್ದುದು ನೊಸಲಕೈಗಳಲಿ
ಕಮಲಗಣ್ಣಿನ ದೇವನೇ ಸಾ
ಕೆಮಗೆ ಮಾಡುವುದೇನೆನುತ ಕಡು
ಕುಮತಿ ಕೌರವನಿಳಿಯದಿರ್ದನು ಸಿಂಹವಿಷ್ಟರವ

ಸೆಣಸು ಸೇರದ ದೇವನಿದಿರಲಿ
ಮಣಿಯದಾತನ ಕಾಣುತವೆ ಧಾ
ರಿಣಿಯನೊತ್ತಿದನುಂಗುಟದ ತುದಿಯಿಂದ ನಸುನಗುತ
ಮಣಿಖಚಿತ ಕಾಂಚನದ ಪೀಠದ
ಗೊಣಸು ಮುರಿದುದು ನಭದಿ ಸುರಸಂ
ದಣಿಗಳಾ ಎನೆ ಕೆಡೆದುಬಿದ್ದನು ಹರಿಯಚರಣದಲಿ

ಧರಣಿಪತಿ ಸಿಂಹಾಸನದ ಮೇ
ಲಿರದೆ ಬಹರೇ ನಾವು ಬಂದೇ
ಹರಸುವೆವು ತಪ್ಪಾವುದೆನುತೆತ್ತಿದನು ಮಸ್ತಕವ
ಸುರನದೀಸುತ ಕೈಗೊಡಲು ಕೇ
ಸರಿಯ ಪೀಠಕೆ ದೇವ ಬಂದನು
ಕುರುಕ ಲಾಗ್ರಣಿಗಳ ಸುಸನ್ಮಾನವನು ಕೈಕೊಳುತ

ಹರಿಯ ಹರಿವಿಷ್ಟರದ ಬಲದಲಿ
ಧರಣಿಪತಿ ಕುಳ್ಳಿರ್ದನಾತನ
ಹಿರಿಯಮಗನೆಡವಂಕದಲಿ ಕರ್ಣಾದಿಗಳು ಸಹಿತ
ಹರಿಯ ನೇಮವ ಕೊಂಡು ಸನ್ಮುನಿ
ವರರು ಕುಳ್ಳಿರ್ದರು ನದೀಸುತ
ತರಿಸಿದನು ಪಡಿಗವನು ಹೊಂಗಲಸದ ಸುವಾರಿಗಳ

ಚರಣಯುಗಳವ ತೊಳೆದು ತೀರ್ಥವ
ಶಿರದೊಳಾಂತು ಮಹಾನುಭಾವನ
ದರುಶನದಿ ಮಮಜನ್ಮ ಸಫಲವೆನುತ್ತ ಕೈಮುಗಿದು
ಪರಶುರಾಮಾದಿಗಳ ಮಿಗೆ ಸ
ತ್ಕರಿಸಿ ಗಂಧಾಕ್ಷತೆಗಳಿಂದುಪ
ಚರಿಸಿ ಹೊಂಬಟ್ಟಲಲಿ ವೀಳೆಯವಿತ್ತನನಿಬರಿಗೆ

ಕುಶಲವೇ ಕುರುರಾಯ ಬಾರೈ
ಮುಸುಡದುಗುಡವಿದೇನು ಬಾ ಎಂ
ದಸುರರಿಪು ಕೌರವನ ಕರೆದನು ತನ್ನ ಸಮ್ಮುಖಕೆ
ಉಸಿರಲಮ್ಮನು ಭಾವತನದೊಂ
ದೆಸವ ಸಲುಗೆಗೆ ನೇಮವಾದರೆ
ಬಿಸಜಲೋಚನ ಬಿನ್ನಹವನವಧರಿಸಬೇಕೆಂದ

ನೀವು ಬಿಜಯಂಗೈವಿರೆಂದು ಮ
ಹಾವಿಲಾಸದೊಳಳವಡಿಸಿ ನಾ
ನಾವಿಧದ ಷಡುರಸವ ತರುಣಿಯರಿಂದ ಸವೆಸಿದೆನು

ದೇವ ನಮ್ಮರವನೆಗೆ ಬಾರದೆ
ನೀವು ವಿದುರನ ಮನೆಯಲುಂಡಿರಿ
ಗೋವಳಿಗತನ ನಿಮ್ಮ ವೈಸಿರಿ ತಪ್ಪದಾಯ್ತೆಂದ

ಈ ಕೃಪನನೀ ದ್ರೋಣನೀ ಗಂ
ಗಾಕುಮಾರನ ಮನೆಯ ಹೊಗದವಿ
ವೇಕಿ ತೊತ್ತಿನಮಗನ ಮನೆಯಲಿ ಹಸಿವ ನೂಕಿದಿರಿ
ಸಾಕಿದಾತನು ನಂದಗೋಪನು
ಕಾಕಬಳಸಲು ಸಲ್ಲದೇ ನಿವು
ಗೇಕೆ ರಾಯರ ಠೀವಿಯೆಂದನು ಕೌರವರರಾಯ

ಕುರುಪತಿಯ ಬಿಱುನುಡಿಯ ಕೇಳಿದು
ಕರಣದಲಿ ಕೋಪಾಗ್ನಿಯುಕ್ಕಲು
ಕೆರಳಿ ನಿರ್ಭೀತಿಯಲಿ ನುಡಿದನು ವಿದುರನರಸಂಗೆ
ದುರುಳ ನೀ ನಿಂದಿಸಿದ ನುಡಿಗು
ತ್ತರವನೀಯಲದೇಕೆ ನಿಮ್ಮಯ
ವರಜನನಿಗಾದಿಯಲಿ ಗಂಡನದಾರು ಹೇಳೆಂದ

ತಾನಲೇ ತೊತ್ತಿನ ಮಗನು ಕೇಳ್
ನೀನಲೆ ಅಜಪುತ್ರ ನಮ್ಮನು
ದಾನವಾಂತಕ ಬಲ್ಲನಿಬ್ಬರ ಹೆಚ್ಚುಕುಂದುಗಳ
ನೀನು ನಿನ್ನಯ ಕೊಂಕುಕೊಱತೆಯ
ಹಾನಿವೃದ್ಧಿಯನಱಿಯದನಿಬರ
ನೇನುಕಾರಣ ಜಱಿವೆ ಕುರುಪತಿಯೆಂದನಾ ವಿದುರ

ಕಡುಮುಳಿದು ಕಲಭೀಮ ನಿನ್ನಯ
ತೊಡೆಗಳನು ಮುಱಿವಾ ಸಮಯದಲಿ
ಬಿಡದೆ ನಿನ್ನನು ಕಾಯಬೇಕೆಂದುಳುಹಿದೆನು ಧನುವ
ಕೆಡೆನುಡಿಸಿಕೊಂಡಿನ್ನು ಕಾವೆನೆ
ಪೊಡವಿಪತಿ ಕೇಳೆನುತ ವಿದುರನು
ಹಿಡಿದ ಬಿಲ್ಲನು ಮುಱಿದನಾ ಕುರುಸೇನೆ ಕಳವಳಿಸೆ

ಧನು ಮುಱಿಯೆ ಗಾಂಧಾರಿಗತಲೋ
ಚನರು ಮಮ್ಮಲಮಱುಗಿದರು ಭೂ
ಪನ ದುಗುಡ ಮಿಗಿಲಾಯ್ತು ಭೀಷ್ಮದ್ರೋಣರಳಲಿದರು
ಮನದ ಹರುಷದೊಳಂದು ಮಧುಸೂ
ದನನು ವಿದುರನ ತಿಳುಹಿ ಕೇಳೆಲೆ
ಜನಪ ಕೌರವರಾಯ ನಮ್ಮಯ ಶೀಲ ಬೇಱೆಂದ

ಪ್ರಿಯದಲುಂಬುದು ಮೇಣು ವಿಪದಾ
ಶ್ರಯದಲುಂಬುದು ಮಾನವಂಗಿದು
ನಿಯತವಂತಲ್ಲಿದುವೆ ಕೇಳ್ಳೈ ಕೌರವರರಾಯ
ಪ್ರಿಯನು ನೀನೆಮಗಲ್ಲ ವಿಪದಾ
ಶ್ರಯವು ತಾ ಮುನ್ನಿಲ್ಲ ನಿನ್ನಾ
ಲಯದೊಳೆಂತೆಮಗೂಟ ಸಂಭವಿಸುವುದು ಹೇಳೆಂದ

ಹಗೆಯನುಣಿಸುವುದಾಗದೈ ವೈ
ರಿಗಳ ನಿಳಯದೊಳನ್ನಪಾನಾ
ದಿಗಳ ಕೊಳಲಾಗದು ನಿದಾನಿಸೆ ರಾಜನೀತಿಯಿದು

ಬಗೆಯೆ ನೀ ಪಾಂಡವರಿಗಹಿತನು
ವಿಗಡಪಾಂಡವರೆನ್ನ ಜೀವನ
ಹಗೆಯ ನಂಬುವೆನೆಂತು ಹೇಳೈ ಕೌರವರರಾಯ

ಸೇರುವನು ಸಕಳಂಕಚಂದ್ರನು
ವಾರಿಧಿಗೆ ನೀನಖಿಳಗೋಪೀ
ಜಾರ ಜಾರೆಯ ಮಕ್ಕಳಿಗೆ ನೀ ಜೀವ ತಪ್ಪೇನು
ಆರು ತಮ್ಮಂದದ ಮಹಾತ್ಮರ
ಸೇರುವರಲ್ಲೈ ಪಾಂಡುಪುತ್ರರ
ಕೂರುಮೆಗೆ ನಾನಂಜೆ ನೀ ಬಂದನುವ ಹೇಳೆಂದ

ಕುಲದವನ ಹೃದಯಾಂಧಕಾರವ
ಕಳಚಲೆಂದು ಹಿಮಾಂಶು ಹರಹಿದ
ನೆಳೆಯಬೆಳದಿಂಗಳೆನೆನಲು ಸುರರಿಪುಕುಲಾಂತಕನು
ತೊಳಪ ದಶನಮಯೂಖತತಿ ಹೊಳೆ
ಹೊಳೆಯೆ ನುಡಿದನು ತತ್ಸಭಾಮುಂ
ಡಲಮಹಾಂಬುಧಿ ನುಡಿದೆರೆಯ ತನಿಗಡಣವಡಗಿರಲು

ಅವಧಿ ಸವೆದುದು ಪಾಂಡವರು ನಿ
ನ್ನವರು ವನವಾಸಪ್ರಯಾಸದ
ಲವರು ನವೆದರು ಕೂಡಿಕೊಂಡಿಹುದಧಿಕಗುಣ ನಿನಗೆ
ಅವನಿಯರ್ಧವನೀವುದೀಯ
ಧ್ರುವದ ಬಾಳಿಕೆಯೊಳಗೆ ಪುರುಷಾ
ರ್ಥವನು ಸಂಚಿಸೆ ಕಲಿಯಬೇಹುದು ನೃಪತಿ ಕೇಳೆಂದ

ಅರಸುತನ ತನಗಧಿಕವಾಗುತ
ಬರಬರಲು ಕಣ್ಣಾಲಿಗಳು ತರ
ಹರಿಸಿ ಕಾಣವು ವರ್ತಮಾನದ ನೃಪರ ಬಳಕೆಯಿದು
ಸಿರಿಯಮದವೆಂಬಧಿಕತಾಮಸ
ದೊರಕಿದಕ್ಷಿಗೆ ನೀತಿಕಾಜಿರ
ಪರಮವಚನಾಂಜನದಿ ಪ್ರಜ್ವಲಿಸುವುದು ನಯವೆಂದ

ಕೋಶ ಬಲತಳತಂತ್ರ ಹೆಚ್ಚಿದ
ದೇಶ ದುರ್ಗವಮಾತ್ಯ ಮಿತ್ರವು
ಹೇಶಜನವೆಂಬಿದುವೆ ಕೇಳ್ ಸಪ್ತಾಂಗಸನ್ನಾಹ
ಈಸು ಬಲುಹುಂಟಲ್ಲಿ ಮಿತ್ರವು
ಹೇಶರೆಂಬುದು ಕೊಜಿತೆ ಪಾಂಡವ
ರಾ ಸಹಾಯವು ಬರಲು ಬಳಿಕಿದಿರಿಲ್ಲ ನಿನಗೆಂದ

ಹೇಳಿದೀ ಸಪ್ತಾಂಗದೊಳಗೊಂ
ದೇಳಿ ದಿಟವಾಗಿರ್ದ ನೃಪತಿಯ
ಬಾಳಿಕೆಗೆ ಸಂದೇಹವಱಿಯಾ ರಾಜನೀತಿಗಳ
ಹೇಳಲಮ್ಮುವರಿಲ್ಲ ಹಿತವರು
ಹೇಳಿದರೆ ಕೈಕೊಳ್ಳಿ ಕುರುಕುಲ
ಮೌಳಿ ನಯದಲಿ ನಡೆಯಕಟಯೆಂದಸುರರಿಪು ನುಡಿದ

ಸಾಮವೆಂಬುದು ರಾಜನೀತಿಗೆ
ತಾ ಮನೋಹರರೂಪು ಬದುಕುವ
ಭೂಮಿಪಾಲರ ವಿನುತವಿಭವಕೆ ಮೂಲಬೀಜವಿದು

ಸಾಮತಪ್ಪಿದ ಬಳಿಕ ನೀತಿವಿ
ರಾಮವಾಗದೆ ಬಿಡದು ದಂಡದ
ಸೀಮೆಯೆಂಬುದುಪಾಯದಲಿ ಸಾಮಾನ್ಯತರವೆಂದ

ಮಾಡಿದಪಕಾರಂಗಳನು ಮಱೆ
ದಾಡರವರತಿಮೋಹದಲಿ ನೀ
ಗೂಡಿ ಬದುಕುವ ನುಡಿಯ ನುಡಿವರು ನಮ್ಮ ಮನವಱಿಯೆ
ಕಾಡಿನೊಳಗಾಡಿದರು ದುಃಖವ
ತೋಡಿದರು ನೀನವರಿಗುಚಿತವ
ಮಾಡಿ ನಾಡನು ಕೊಡುವುದೆಂದನು ದಾನವಧ್ವಂಸಿ

ವಿದುರನುತ್ಸವ ಕೃಪನ ಸನ್ಮದ
ನದಿಯಮಗನೊಲವಂಧನೃಪನ
ಭ್ಯುದಯ ಕೇಳೆಂದಸುರರಿಪು ನಯನುಡಿಯ ಗಡಣಿಸಲು
ಮದದ ವ್ಯೆಗಾಡಿಕೆಯ ಮನಲೇ
ಪದ ಮಹಾಖಳ ನಷ್ಟ ಮೊಗವಿಡೆ
ಬೆದಱಿಯಿದ್ದಂತಿರ್ದುದಾಯಾಸ್ಥಾನಜನವೆಲ್ಲ

ಬೆರಳ ಮೀಸೆಯಲಿಡುತ ಕಿಱುನಗೆ
ವೆರಸಿ ಕರ್ಣಾದಿಗಳ ವದನವ
ತಿರುಗಿನೋಡುತ ಹರಿಯ ನುಡಿಗಳ ಕಿವುಡುಗೇಳುತ್ತ
ಮರುಳುತನದಾಳಾಪವೇತಕೆ
ಮುರಮಥನ ಪಾಂಡವರ ಕಥನವ
ನೊರೆಯದಿರು ಕರ್ಣಕ್ಕೆ ಬಾಧೆಯಿದೆಂದನಾ ಭೂಪ

ವಾವ ಮೊದಲು ಸಹಾಯ ಮಧ್ಯದೊ
ಳಾ ವಿರಾಟನ ಸಖ್ಯ ಕಡೆಯಲಿ
ನೀವು ಮಮಜೀವಾಹಿ ಎಂಬರಿ ನಿಮ್ಮ ಪಾಂಡವರ
ನಾವು ಕಡೆಯಲಿ ಹೊಱಗು ನಮಗಿ
ನ್ನಾವ ಭೂಪರ ಸಖ್ಯವಿದ್ದುದು
ದೇವ ನಾಚಿಸಬೇಡ ಸಂಧಿಯ ಮಾತ ಮಱಿಯೆಂದ

ಅವರು ನಮ್ಮೊಳು ಸರಸವಾಡುವ
ಹವಣಿದಲ್ಲದೆ ರಾಜಕಾರ್ಯವ
ನಿವಗೆ ಯೋಚಿಸಿ ಕಳುಹಿದಂದವೆ ಮೆಚ್ಚಿ ನಾನಿದನು
ಬವರ ಬೇಕೇ ಬೇಡಿಕೊಂಬುದು
ಅವನಿಗಿವನಿಯ ಮಾತ ನೀವಾ
ಡುವರೆ ಪಾಂಡವರೇಕೆ ನಾವೇಕೆಂದು ಖಳ ನುಡಿದ

ಮಾಡು ಸಂಧಿಯ ನಮ್ಮ ವಚನಕೆ
ಕೋಡದಿರು ಸವಿವಾತುಗಳ ನಿನ
ಗಾಡುವವರಿಗೆ ಚಿತ್ತಗೊಡದಿರು ಹಿಸುಣ ಹೊಗಿಸದಿರು
ನಾಡ ನಾಲಗೆಗೆಳಯರೆಂದುನ
ಮಾಡದಿರು ಪಾಂಡವನೃಪಾಲರ
ಕೂಡೆ ಬಾಳಿಕೆ ಪಥ್ಯ ಕೇಳೆಂದಸುರರಿಪು ನುಡಿದ

ಅವರಿಗಿಂದ್ರಪ್ರಸ್ಥದಲಿ ರಾ
ಜ್ಯವನು ಕುಳಸಹಿತಿತ್ತು ನೀ ಪಾಂ
ಡವಪ್ರತಿಷ್ಠಾಚಾರ್ಯನೆಂಬೀ ಬಿರುದ ಧರಿಸಿದಡೆ

ಅವನಿಯಲಿ ನಿನ್ನೊಡನೆ ತಲೆದೋ
ಱುವ ನೃಪಾಲಕರಿಲ್ಲ ನುಡಿಗಳು
ಕಿವಿಗೆ ಕರ್ಕಶವೀಗಳಾದರೆ ತುದಿಗೆ ಲೇಸೆಂದ

ನೀತಿಗಾಲಯ ನಿಮ್ಮ ಸಿರಿವಿ
ಖ್ಯಾತಿಗಿದು ನೆಲೆ ಸಕಲಸೌಖ್ಯ
ವ್ರಾತಕಿದು ಸದ್ಬೀಜವೆನಿಸಿತು ಕೌರವಾನ್ವಯವು
ಭೂತಳದ ಲೋಲುಪತೆಯಲಿ ಕುಲ
ಘಾತಕರು ತಾವೆಂಬಕೀರ್ತಿಗೆ
ಯೋತು ನೀ ನೆಲೆಯಾಗದಿರು ಕೇಳೆಂದನಸುರಾರಿ

ಧರೆಯ ನೃಪರಿಗೆ ಹಸ್ತಿನಾಪುರ
ದರಮನೆಯ ಬಾಗಿಲಲಿ ಸಮಯವು
ದೊರಕಲಂತದು ಪುಣ್ಯವೆಂಬೀ ಸಾರ್ವಭೌಮತೆಯ
ಸಿರಿಗೆ ಪಾಂಡವರನ್ಯರಾದರೆ
ಮೆಱೆಯಬಲ್ಲುದೆ ನಿನ್ನ ಸಿರಿ ಕಾ
ತರಿಗತನವನು ಮಾಣು ಕೇಳೆಂದಸುರರಿಪು ನುಡಿದ

ಯಮಜ ನಿನಗೊಳ್ಳಿದನು ಪಾರ್ಥನ
ಮಮತೆ ನಿನ್ನಲಿ ಹಿರಿದು ಭೀಮನ
ತಮದ ನುಡಿ ಹಿಂಗಿದುದು ನಕುಲನು ನಿನ್ನೊಳೆರಡಱಿಯ
ತಮತಮಗೆ ತಮ್ಮೈವರುಱೆ ನಿ
ನ್ನಮಲವಚನವ ಹಾರುತಿಹರು
ಭ್ರಮಿತನವ ಮಾಡದಿರು ನೀ ಸೋದರರ ಸಲಹೆಂದ

ಧರ್ಮಜನ ಕಡುಮೋಹವೆಂಬುದು
ನಿಮ್ಮ ಚರಣದೊಳಿರಲಿ ಭೀಮನ
ಬಿಮ್ಮು ತಮ್ಮೊಳಗಿರಲಿ ಫಲುಗುಣನೊಲುಮೆಯಂತಿರಲಿ
ಎಮ್ಮ ಭೂಮಿಯೊಳರೆಯ ಬೇಡುವ
ರೆಮ್ಮ ಬಂಧುಗಳಲ್ಲ ಸಂಧಿಗೆ
ತಮ್ಮನೊಡಬಡನೆಂದು ದುಶ್ಶಾಸನನ ನೋಡಿದನು

ಬಂಧುಕೃತ್ಯದ ಮಾತು ಸೂರ್ಯಂ
ಗಂಧಕಾರವು ಸೇರುವುದೆ ನಿ
ರ್ಬಂಧದಲಿ ನಿವೇಕೆ ನುಡಿವಿರಿ ರಾಜಕಾರಿಯವ
ಸಂಧಿಯಾಗದು ಪಾಂಡವರ ಸಂ
ಬಂಧ ನಮಗೇಕೆಂದು ಕರುಣಾ
ಸಿಂಧುವಿನ ಮೊಗನೋಡಿ ದುಶ್ಶಾಸನನು ಗರ್ಜಿಸಿದ

ಈ ಹರಿಯ ನುಡಿಗೇಳು ದೈವದ
ಮೋಹ ತಪ್ಪಿದ ಬಳಿಕ ಸುಭಟರ
ಸಾಹಸಕೆ ಹುರುಳಿಲ್ಲ ನಂಬದಿರೆಮ್ಮ ಬಲುಹುಗಳ
ಆ ಹಿತವನೀಡಾಡದಿರು ವೈ
ದೇಹಿಯನು ಸೆಱೆಗೆಯ್ದ ಸ್ವಾಮಿ
ದ್ರೋಹಿಯನು ಹೋಲದಿರು ಕೌರವ ಎಂದನಾ ಭೀಷ್ಮ

ನೆಲನ ಬೇಡುವ ಪಾಂಡವರ ಬುಜ
ಬಲದೊಳಗೆ ಕುಂದಿಲ್ಲ ನೀತಿಯ
ತಿಳುಹಲೈತಂದಸುರರಿಪು ಸಾಮಾನ್ಯ ಬಲನಲ್ಲ

ಇಳೆಯೊಳರ್ಧವನೊಪ್ಪುಗೊಡು ಯದು
ಕುಲಲಲಾಮನ ನೇಮವನು ನೀ
ಸಲಿಸು ಕೆಡಿಸದಿರೀ ವಿಲಾಸವನೆಂದನಾ ದ್ರೋಣ

ಹಲವು ಹೊಲ್ಲೆಹಗಳನು ಪಾಂಡವ
ರೊಳಗೆ ನೆನೆದೆನು ಮುಚ್ಚುಮಱೆಯೇ
ಕಿಳೆಯ ಲೋಭದಲವರ ಕೆಡಿಸುವ ಬಗೆಯ ನೆಗಳಿದೆನು
ನೆಲನ ಕೊಂಡೆನು ಜೂಜುಗಾಱರ
ವಿಲಗದಲಿ ಪಾಂಡವರ್ಗೆ ಪುನರಪಿ
ಹಳುವವೇ ಶರಣಲ್ಲದುಂಟೇ ಕೃಷ್ಣ ಹೇಳೆಂದ

ತಾಗುವಪಕೀರಿತಿಗೆ ಹೇಸುವ
ರಾಗಿ ಸತ್ಯವನುಳುಹಿ ಹಳುವವ
ಭೋಗಿಸಿದರದು ಕುಲಕೆ ಕುಂದೇ ಪಾಂಡುತನಯರಿಗೆ
ನೀಗಿದರು ವನವಾಸವನು ಸರಿ
ಭಾಗದವನಿಯ ಕೊಂಬ ಛಲವನು
ಹೋಗಬಿಡುವನೆ ಭೀಮನೆಂದನು ನಗುತ ಮುರವೈರಿ

ಕೊಡು ಕುಶಸ್ಥಳವನು ವೃಕಸ್ಥಳ
ವೊಡವಿವಾಸಂತಿಯನು ಕುಳವನು
ಕೊಡಿಸಿಕಳೆ ಸಿರಿಕರಣದವರಲಿ ವಾರಣಾವತವ
ಕೊಡು ನಿನಗೆ ಮನಬಹುದನೊಂದನು
ನಡಸಿಕೊಡುವೆನು ಪಾಂಡವರನವ
ಗಡೆಯತನ ನಿಂದಿರಲಿ ನೃಪ ಕೇಳೆಂದನಸುರಾರಿ

ಬೇಡಿದೊಂದೊಂದೂರು ನಮ್ಮಯ
ನಾಡ ತಲೆವಂಡೆಗಳು ರಾಜ್ಯದ
ರೂಢಿಯೈದೂರುಗಳ ಬಳವಿಗೆ ಹಸ್ತಿನಾನಗರ
ಬೇಡಲಱಿವನು ಮಾನ ನಿನಗುಂ
ಟಾಡಲೇತಕೆ ನೆಲನನೀರಡಿ
ಮಾಡಿಕೊಂಡ ಮಹಾತ್ಮ ನಿನಗಾನಂಜಿದಪೆನೆಂದ

ಕರೆದು ಮೂಱಡಿನೆಲನ ಧಾರೆಯ
ನೆರೆದ ಬಲಿ ತಳಕಿಳಿವನೆನ್ನೀ
ಧರೆಯುಳೈದೂರುಗಳನಿತ್ತೆನಗಾವ ಹದನಹುದೊ
ಪರಮ ಪುರುಷನು ನೀನು ನಿನಗಾಂ
ಶರಣುವೊಕ್ಕೆನು ಬಂದ ಪಥದಲಿ
ಮರಳಿ ಬಿಜಯಂಗೈವುದೆಂದನು ಕೌರವರರಾಯ

ಸಲಲಿ ನೀ ಪಾಂಡವರೊಳಿತ್ತಿದ
ಛಲದ ಬಳವಿಗೆಯಕಟ ನಿನ್ನೀ
ಬಳಗ ಬದುಕಲಿ ಮತ್ತೆ ಸವೆಯಲಿ ಪಾಂಡುನಂದನರು
ಜಲಧಿಮೇರೆಯ ಮಹಿಯೊಳೊಂದೇ
ಸ್ಥಳವ ನೈವರಿಂಗೀವುದೆನೆ ಕಳ
ವಳಿಗನವಗಡಿಸಿದನು ಜಱೆದನು ಜಗದ ಪಾಲಕನ

ನೆಲದೊಳರ್ಧವನೀವುದಿಲ್ಲಾ
ಸ್ಥಳವನೈದನು ಮುನ್ನ ಕೊಡೆನೆ
ನ್ನಿಳೆಯ ಭಾಗವನೀಯೆನಿನ್ನಿದಕೇಕೆ ಕೈವಾರ

ನೆಲನ ಕಡೆಯಲಿ ಮುಳ್ಳುಮೊನೆಯು
ಚ್ಚಳಿಪ ಧರಣಿಯನಿತ್ತೆನಾದಡೆ
ಬಳಿಕ ನೀ ನಗು ಹೋಗು ಕದನವ ಕೊಂಡುಬಾಯೆಂದ

ದನವ ಕಾವುದು ಶಿರಿತೇ ಬನ
ಬನವ ತೊಳಲ್ಪುದು ಕಡೆಯನೈದಿತೆ
ಮುನಿಗಳನು ಬೋಳೆಗಳನೆಱಗಿಸಿಕೊಂಬುದನು ಬಿಸುಟು
ವನನಿಧಿಯನೆಡೆಗೊಂಡು ನಡುಹಾ
ವಿನಲಿ ಹಕ್ಕೆಯ ನುಡುಗಿ ನವ್ರೊಳು
ಮನಕತವ ನೀತಿದ್ದಲೋಸುಗ ಬಂದೆ ದಿಟವೆಂದ

ತಾತ ಹೆದಱದಿರೀ ಮುಕುಂದನ
ಕೈತವಕೆ ಬೆಚ್ಚದಿರು ಸಂಧಿಯ
ಮಾತು ತಾಸಿದು ಹೃದಯವೇ ಬೆಸಗೊಳ್ಳು ಮುರಹರನ
ಈತನಂತರ್ಯಾಮಿ ಜೀವ
ವ್ರಾತದಲಿ ಜನಜನಿತವೀ ಜಗ
ವೀತನಾಜ್ಞೆಯೊಳೊಲವುದೆಂದನು ಕೌರವರರಾಯ

ಎನ್ನ ಹೃದಯದೊಳಿರ್ದು ಮುಱಿವನು
ಗನ್ನದಲಿ ಸಂಧಿಯನು ರಿಪುಗಳ
ನಿನ್ನ ತನ್ನವರಿವರೊಳಿರ್ದಾ ಹದನನಾಡಿಸುವ
ಭಿನ್ನನಂತಿರೆ ತೋಱಿ ಭಿನ್ನಾ
ಭಿನ್ನವೆನಿಸಿಯೆ ಮೆಱೆವ ತಿಳಿಯಲ
ಭಿನ್ನನೀ ಮುರವೈರಿ ನಾವಿನ್ನಂಜಲೇಕೆಂದ

ಹಳಚುವವು ಹಾಹೆಗಳು ಸೂತ್ರವ
ನಲುಗಿದರೆ ತತ್ಪುಣ್ಯ ಪಾಪಾ
ವಳಿಗಳಾ ಹಾಹೆಗಳಿಗುಂಟೇ ಸೂತ್ರಧರನಿರಲು
ಕೊಲುವನನ್ಯರನನ್ಯರಿಂದವೆ
ಕೊಲಿಸುವನು ಕಮಲಾಕ್ಷನಲ್ಲದೆ
ಯುಳಿದ ಜೀವವ್ರಾತಕೀ ಸ್ವಾತಂತ್ರ್ಯವಿಲ್ಲೆಂದ

ನಾವು ಸಂಧಿಯನೊಲಿವೆವೆಮ್ಮಯ
ಭಾವದಲಿ ಹುಳುಕಿಲ್ಲ ಸಂಪ್ರತಿ
ದೇವನಭಿಮತವಲ್ಲ ಬಲ್ಲೆನು ಮುರಹರನ ಮನವ
ನೀವು ಮೇಗರೆಯಱಿತದವರೀ
ರಾವಣಾರಿಯ ಬಗೆಯನಱಿಯಿರಿ
ಸಾವೆನೀತನ ಕೈಯಬಾಯಲಿ ಭೀತಿ ಬೇಡೆಂದ

ಇಳಿದನವನಿಗೆ ಧಾರುಣಿಯ ಹೊಱೆ
ಗಳೆಯಲೋಸುಗವಿಲ್ಲ ನವೆಮ್ಮೊಳ
ಗೊಳಗೆ ವೈರವ ಬಿತ್ತಿ ಬಱಿಕೈವನು ಮಹಾಬಲವ
ಛಲಕೆ ಮಣಿಯದೆ ರಾವಣಾದಿಗ
ಳಳಿದರಿದಲಾ ಕೀರ್ತಿ ಕಾಯುವಿ
ದಳಿವುದಗ್ಗದ ಕೀರ್ತಿಯುಳಿವುದು ಅಂಜಲೇಕೆಂದ

ಮಣಿದು ಬದುಕುವನಲ್ಲ ಹಗೆಯಲಿ
ಸೆಣಸಿ ಬಿಡುವವನಲ್ಲ ದಿಟ ಧಾ
ರುಣಿಯ ಸಿರಿಗೆಳಸುವವನಲ್ಲಳುಕಿಲ್ಲ ಕಾಯದಲಿ

ರಣಮಹೋತ್ಸವವೆನ್ನ ಮತ ಕೈ
ದಣಿಯೆ ಹೊಯ್ದಾಡುವೆನು ಕೃಷ್ಣನ
ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲೆಂದ

ಮನದೊಳಗೆ ನಗುತಸುರರಿಪು ಮು
ನ್ನಿನ ಮನುಷ್ಯಾಕಾರವನು ಮಗು
ಳನುಕರಿಸಿ ಧೃತರಾಷ್ಟ್ರಭೀಷ್ಮರಿಗೆಂದನೀ ಹದನ
ಜನಪಕೌರವ ಪಾಂಡುನಂದನ
ರೆನಗೆ ಸರಿಯಿದಾ ಚಿಂತೆಯೆಮಗೇ
ಕೆನುತ ರಾಜಾಲಯವನಸುರಧ್ವಂಸಿ ಹೊರವಂಟ

**ಕುಮಾರವ್ಯಾಸ–ಭಾರತ**
(೧೪೩೦)

## ೭೫. ದಾತಾರನ ಕೈವಾರ

ಇನತನೂಜನ ಕೂಡೆ ಮೈದುನ
ತನಯ ಸರಸವನೆಸಗಿ ರಥದೊಳು
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ
ಎನಗೆ ನಿಮ್ಮಡಿಗಳಲಿ ಸಮಸೇ
ವನೆಯೆ ಜೀಯ ಮುರಾರಿಯಂಜುವೆ
ನೆನಲು ತೊಡೆಸೋಂಕಿನಲಿ ಸಾರಿದು ಶೌರಿಯಿಂತೆಂದ

ಭೇದವಿಲ್ಲೆಲೆ ಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿಸುವುದನ್ವಯದ ಮೊದಲೆರಡಿಲ್ಲ ನಿನ್ನಾಣೆ
ಮೇದಿನೀಪತಿ ನೀನು ಚಿತ್ತದೊ
ಳಾದುದಿಲ್ಲಜುವೆನುತ ದಾನವ
ಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭಯವ

ದಾನವಾಂತಕ ಬೆಸಸು ವಂಶವಿ
ಹೀನನನು ನಿಮ್ಮಡಿಗಳೊಡನೆ ಸ
ಮಾನಿಸುವರೇ ಸಾಕೆನುತ ತಲೆವಾಗಿ ಕೈಮುಗಿಯೆ
ಮಾನನಿಧಿ ನನ್ನಾಣೆ ಬಾರೈ
ನೀನು ನಮ್ಮೆಲ್ಲರ ಹವಣೆ ವರ
ಭಾನುವಂಶಲಲಾಮ ನೀ ರಾಮಂಗೆ ಸರಿಯೆಂದ

ಕಳೆದು ಕೊಂಡನು ವೀಳೆಯವನಂ
ಜುಳಿಯಲಾತಂಗಿತ್ತು ಕರ್ಣನ
ಕೆಲಕೆ ಬರಸೆಳೆದವನ ಕರದೊಳು ಕರತಳವಸಿಕ್ಕಿ

ಎಲೆ ದಿವಾಕರತನಯ ನಿನ್ನಯ
ಕುಲವನರಿಯೆಯಲಾ ಸುಯೋಧನ
ನಲಿ ವೃಥಾ ಸೇವಕತನದಲಿಹುದುಚಿತವಲ್ಲೆಂದ

ಲಲನೆ ತಾ ಪಡೆದೈದು ಮಂತ್ರಂ
ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂಜಿನೆಯಾತ ಕಲಿಭೀಮ
ಫಲಗುಣನು ನಾಲ್ಕನೆಯಲೈದನೆ
ಯಲಿ ನಕುಲಸಹದೇವರಾದರು
ಬಳಿಕ ಮಾದ್ರಿಯೊಳೊಂದುಮಂತ್ರದೊಳಿಬ್ಬರುದಿಸಿದರು

ಅದರಿಂ ನೀ ಪಾಂಡವರೊಳೈವರ
ಮೊದಲಿಗನು ನೀನಿರಲು ಧರಣಿಯ
ಕವನವಿತ್ತಂಡಕ್ಕೆ ಕಾಮಿತವಲ್ಲ ಭಾವಿಸಲು
ಇದು ನಿದಾನವು ಕರ್ಣ ನಿನ್ನ
ಭ್ಯುದಯವನೆ ಬಯಸುವೆನು ನಿನ್ನಯ
ಪದಕೆ ಕೆಡಹುವೆನೈವರನು ನಡೆಯನ್ನಸಂಗಾತ

ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಕೌರವ
ಜನಪ ಪಾಂಡವಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರರೆರಡುಸಂತತಿ
ಯೆನಿಸಲೊಲ್ಲದೆ ನೀನು ದುರ್ಯೋ
ಧನನ ಬಾಯ್ದಂಬುಲಕೆ ಕೈಯಾನುವರೆ ಹೇಳೆಂದ

ಎಡದ ಮೈಯಲಿ ಕೌರವೇಂದ್ರನ
ಗಡಣ ಬಲದಲಿ ಪಾಂಡುಪುತ್ರರ
ಗಡಣವಿದಿರಲಿ ಮಾದ್ರಮಾಗಧಯಾದವಾದಿಗಳು
ನಡುವೆ ನೀನೋಲಗದೊಳೊಪ್ಪುವ
ಕಡುವಿಲಾಸವ ಬಿಸುಟು ಕುರುಪತಿ
ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ

ಶೌರಿಯದಲಿದಿರಿಲ್ಲ ಕುಲದಲಿ
ಸೂರಿಯನಸುತನೊಡನೆ ಹುಟ್ಟಿದ
ವೀರರಗ್ಗದ ಪಾಂಡುತನಯರು ನಿನ್ನ ವೈಭವಕೆ
ಆರು ಸರಿಯೈ ಕರ್ಣ ನಡೆ ನಡೆ
ಧಾರುಣೀಪತಿಯಾಗಿ ನೀನಿರೆ
ವೈರವಿತ್ತಂಡಕ್ಕೆ ಬಳಿಕಿಲ್ಲೆಂದನಸುರಾರಿ

ಕೊರಳ ಸೆರೆ ಹಿಗ್ಗಿದುವು ದೃಗುಜಲ
ವುರವಣಿಸಿ ಕಡುನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯು ಹಗೆ ಹೊಗೆದೋಱದುರುಹದೆ
ಬಱದೆ ಹೋಹುದೆ ತನ್ನ ವಂಶವ
ನಱುಹಿ ಕೊಂದನು ಹಲವುಮಾತೇನೆಂದು ಚಿಂತಿಸಿದ

ಕಾದಿ ಕೊಲುವಡೆ ಪಾಂಡುಸುತರು ಸ
ಹೋದರರು ಕೊಲಲಿಲ್ಲ ಕೊಲ್ಲದೆ
ಕಾದೆನಾದಡೆ ಕೌರವಂಗವನಿಯಲಿ ಹೊಗಲಿಲ್ಲ

ಭೇದದಲಿ ಹೊಕ್ಕಿಱಿದನೋ ಮಧು
ಸೂದನನು ತಾನಕಟಿನುತ ಚಿಂ
ತೋದಧಿಯಲದ್ದಂತೆ ಪೌನದೊಳಿರ್ದನಾ ಕರ್ಣ

ಏನು ಹೇಳೈ ಕರ್ಣ ಚಿತ್ತ
ಗ್ಲಾನಿಯಾವುದು ನಿನಗೆ ಕುಂತೀ
ಸೂನುಗಳ ಬೆಸಗೈಸಿಕೊಂಬುದು ಸೇರದೇ ನಿನಗೆ
ಹಾನಿಯಿಲ್ಲೆನ್ನಾಣೆ ನುಡಿದು
ಮ್ಮಾನವೇತಕೆ ಮರುಳುತನ ಬೇ
ಡಾನು ನಿನ್ನಪಡೆಸಯ ಬಯಸುವನಲ್ಲ ಕೇಳೆಂದ

ಮರುಳುಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರುಸುಯೋಧನರೆನಗೆ ಬೆಸಗೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆಗಳ
ಶಿರವನರಿದೊಪ್ಪಿಸುವೆನೆಂಬೀ
ಭರದಲಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

ಒಡನೆಹುಟ್ಟಿದರೆಂಬ ಕಥನವ
ನೆಡೆಗೊಡದೆ ಬಣ್ಣಿಸಿದೆ ಪಾಂಡವ
ರಡಗುಬಾಣಕೆ ಬಲಿಯೆನಿಪ್ಪೀ ಛಲವ ಮಾಣಿಸಿದೆ
ನುಡಿದು ಫಲವೇನಿನ್ನು ಕೌರವ
ರೊಡೆಯನಾದಂತಹೆನು ಬಾರೆನು
ಪೊಡವಿಯಲಿ ನೀ ಹರಹಿಕೊಳು ನಿನ್ನವರ ನಿಲಿಸೆಂದ

ಹಲವು ಮಾತೇನಖಿಳಜನವೆ
ನ್ನಳಿವ ಸೊಗಸದು ಕೌರವೇಶ್ವರ
ನೊಲವು ತಪ್ಪಿಸಿ ಭುವನದೊಳಗೆನಗಾಪ್ತಜನವಿಲ್ಲ
ಸಲಹಿದನು ಮನ್ನಣೆಯಲೆನಗ
ಗ್ಗಳಿಕೆಯಲ್ಲದೆ ಹೀನವೃತ್ತಿಯ
ಬಳಸಿ ನಡಸನು ಕೌರವೇಂದ್ರನನೆಂತು ಮಱೆದಪೆನು

ನೋಡಿ ದಣಿಯನು ನಿಚ್ಚಲುಚಿತವ
ಮಾಡಿ ದಣಿಯನು ಬಿರುದ ಹೊಗಳಿಸಿ
ಹಾಡಿ ದಣಿಯನು ಮಾನನಿಧಿಯನದೆಂತು ಮಱೆದಪೆನು
ಕಾಡಲಾಗದು ಕೃಷ್ಣ ಖಾತಿಯ
ಮಾಡಲಾಗದು ಬಂದೆನಾದಡೆ
ರೂಢಿ ಮೆಚ್ಚದು ಕೌರವನ ಹಗೆಹಂಬ ತನಗೆಂದ

ವೀರಕೌರವರಾಯನೇ ದಾ
ತಾರನಾತನ ಹಗೆಯೆ ಹಗೆ ಕೈ
ವಾರವೇ ಕೈವಾರವಾದಂತಹೆನು ಕುರುನೃಪತಿ
ಶೌರಿ ಕೇಳೈ ನಾಳೆ ಸಮರದ
ಸಾರದಲಿ ತೋಱುವೆನು ನಿಜಭುಜ
ಶೌರಿಯದ ಸಂಪನ್ನತನವನು ಪಾಂಡುತನಯರಲಿ

ಅರುಣಜಲರಾಜ್ಯದಲಿ ಬಂಬಲು
ಗರುಳ ಚರುವಿನಲೆಲುವಿನೊಟ್ಟಿಲ
ಬೆರಳ ಸಮಿಧೆಯಲಡಗಿನಖಿಳಾಹುತಿಯ ರಚನೆಯಲಿ

ನರಕಪಾಲದ ಪಾತ್ರೆಗಳ ತಿಲ
ದೊರಳೆಗಳ ಕೇಶೌಘದರ್ಭಾಂ
ಕುರದಲಾಹವಯಜ್ಞದೀಕ್ಷಿತನಹೆನು ಕೇಳೆಂದ

ಮಾರಿಗೌತಣವಾಯ್ತು ನಾಳಿನ
ಭಾರತವು ಬಹು ಜೀವ ಹರೆಯಲು
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ

ಎನಲು ಕರ್ಣನ ದೃಢವ ಕಂಡನು
ಮನದೊಳುತ್ಸಾಹಿಸಿದನಾದಡೆ
ತನಯರೈವರ ಹದನು ನಿನ್ನದು ಬಲುಹ ಮಾಡಿದಡೆ
ಮನಕೆ ಖತಿಯಹುದಱಹದದಿರ್ದಡೆ
ಯೆನಗೆ ಗುಣವಲ್ಲೆಂಬ ಕಾರಣ
ವಿನಿತನಾನಱುಹಿದೆನು ನೀ ಸುಖಿಯಾಗು ಹೋಗೆಂದ

ಬಂದರೊಳ್ಳಿತು ಬಾರದಿದ್ದಡೆ
ಕಂದ ಕೇಳ್ಮೆ ಮಧುರವಚನದಿ
ಮಂದಮತಿಯನು ತಿಳುಹಿ ತಮ್ಮಂದಿರಿಗೆ ರಾಜ್ಯವನು
ಇಂದು ಕೊಡಿಸುವುದುಚಿತ ಸಂಪ್ರತಿ
ಗಿಂದು ಸೇರಿಸು ನಿನ್ನ ಮಾತನು
ಹಿಂದುಗಳೆಯನು ಕೌರವೇಶ್ವರನೆಂದನಸುರಾರಿ

ಮಸೆದುದಿತ್ತಂಡಕ್ಕೆ ಮತ್ಸರ
ವಸಮಸಂಗರವೀಗ ನೀತಿಯು
ನುಸುರಿದಡೆ ಮನಗಾಣನೇ ಕೌರವಮಹೀಶ್ವರನು
ವಿಷಮನದ ಕಟ್ಬಾಳು ಮಂತ್ರವ
ನೆಸಗಲಾಗದು ತನ್ನ ವೀರಕೆ
ಮಸುಳಹುದು ಮುರವೈರಿ ಸಂಧಿಯನಱಿಯೆ ನಾನೆಂದ

ಕಳುಹಬೇಹುದು ದೇವ ದಿನಪತಿ
ಯಿಳಿದನಪರಾಂಬುಧಿಗೆ ಸಂಪ್ರತಿ
ಯಳಿದಹೊತ್ತಿಂದೀಗ ನೆಟ್ಟನೆ ನೀವು ಪಾಂಡವರು
ಹುಲುಸರವಿ ಹಾವಹುದು ಹುತ್ತಿನ
ಬಳಿಯಲಿರಲಜ್ಞರಿಗೆ ಹಿಸುಣರ
ಬಳಕೆ ಹೊಗುವುದು ಕಳುಹಬೇಕೆಂದೆಱಗಿದನು ಪದಕೆ

ಬೀಳುಕೊಂಡನು ಮನೆಗೆ ಬಂದು ವಿ
ಶಾಲಮತಿ ಚಿಂತಿಸಿದನಾ ಸಿರಿ
ಲೋಲ ಮಾಡಿದ ಮಂತ್ರ ಮನದಲಿ ನಟ್ಟು ಬೇರ್ವರಿಯೆ
ಕಾಳುಮಾಡಿದನಕಟ ಕೌರವ
ಬಾಳಲಱಿಯದೆ ಕೆಟ್ಟನೀ ಗೋ
ಪಾಲ ಬಱಿದೇ ಬಿಡನು ಜೀವವ ಕೊಳ್ಳದಿರನೆಂದ

**ಕುಮಾರವ್ಯಾಸ–ಭಾರತ**
(೧೪೩೦)

## ೭೬. ಸುರನದೀನಂದನನ ಹರಕೆ

ಏಳನೆಯ ದಿವಸದ ಮಹಾರಥ
ರೂಳಿಗವು ಹಿರಿದಾಯ್ತು ಕುರುಭೂ
ಪಾಲಕನ ತಮ್ಮಂದಿರಳಿದುದು ದಿವಸವೆಂಟಱಲಿ
ಕೋಲ ಮೊನೆಯಲಿ ಕೃಷ್ಣರಾಯನ
ನೋಲಗಿಸಿ ಮೆಚ್ಚಿಸಿದನಾ ಕ
ಟ್ಟಾಳು ಭೀಷ್ಮನ ದಿವಸವೊಂಬತ್ತಾಯ್ತು ಸಮರದಲಿ

ಇರುಳು ಕೃಷ್ಣನ ಹೊರಗೆ ಬಂದನು
ಧರಣಿಪತಿ ದುಗುಡದಲಿ ನಿಜಸೋ
ದರರು ಸಹಿತ ಮುರಾರಿಯಂಘ್ರಿಗೆ ನಮಿಸಿ ಕೈಮುಗಿದು
ಸುರನದೀಸುತನಖಿಲ ಸೇನೆಯ
ನೊರಸಿದನು ನಮ್ಮಲ್ಲಿ ಖಾತಿಯ
ಧರಿಸಿದನು ಜಯವಧುವ ವರಿಸಿದ ದೇವ ಕೇಳೆಂದ

ನೆಱೆವಣೆಗೆಗುಂದಿತ್ತು ಬಲ ಕೈ
ಮಱೆದರದಟರು ಬಿರುದ ಭಟರಿಗೆ
ಬೆಱಗು ಬಲಿದುದು ಹೂಣೆಗರ ಹೋರಟೆಗಳಳುಕಿದವು
ನೆಱೆ ಸುಗಿದ ಹುಲಿಯಂತೆ ಬರಿಕೈ
ಮುಱಿದ ಮದಗಜದಂತೆ ಚಿತ್ರದ
ಉಱುವ ಕೇಸರಿಯಂತೆ ಮೆಱೆದಿದೆ ನಮ್ಮ ಬಲವೆಂದ

ಹಾಱಿದವು ಹೆಸರುಗಳು ಭಂಗದ
ಸೂಱೆಗಳ ಕಟ್ಟಿದರು ಮಿಗೆ ತಲೆ
ಮಾಱುಗಳು ಮರಳಿದರು ರಣಹೇಡಿಗಳ ಬಗೆಯಂತೆ

ದೂಱಲಱಿಯೆನು ಸುಭಟರಿಗೆ ಮನ
ಬೇಱೆ ನುಡಿ ಬೇಱಾಯ್ತು ಸಮರದೊ
ಳೇಱತಿಂಗುಱಿದಿಂದು ದಣಿದುದು ನಮ್ಮ ಬಲವೆಂದ

ಹರಿದುದಿಂದಿನ ದಿನಕೆ ಶತಸಾ
ವಿರ ಮಹೀಶರು ಯಮನ ನಗರಿಗೆ
ಸರಿದುದುಳಿದರ ದಿಟ್ಟತನ ಗಾಂಗೇಯನುಪಟಳಕೆ
ಅರಿಪಯೋನಿಧಿಬಡಬನನು ಗೆಲ
ಲರಿದು ಜೀಯ ಮುಕುಂದ ನೀಸೇ
ಕರುಣಿಸೈ ವನವಾಸವೋ ನಮಗೇನು ಗತಿಯೆಂದ

ಮುಗುಳುನಗೆ ನಸುವೊಳೆಯೆ ಭೀಮಾ
ದಿಗಳಿಗೆಂದನು ಕೃಷ್ಣನರಸಗೆ
ಸೊಗಸು ಬನದಲಿ ಬಱಿಯ ಮನಪೀ ಕದನಕೇಳಿಯಲಿ
ಎಗಡತನವಂತಿರಲಿ ಭೀಷ್ಮನ
ಬೆಗಡುಗೊಳಿಸಲು ಹರನ ಹವಣಿ
ಲ್ಲಗಣಿತನ ಸಾಮದಲಿ ಮಱಿಯಲುಬೇಕು ನಾವೆಂದ

ದಂಡನೆಯ ತಱುಬಿದರೆ ಗುಣದಲಿ
ಖಂಡಿಸುವುದಿದಿರಾದ ತರುಗಳು
ದಿಂಡುಗೆಡೆವವು ತೊಱೆಗೆ ಮಣಿದರೆ ಗೇಕು ಬದುಕುವುದು
ಚಂಡಬಲನೀ ಭೀಷ್ಮ ಮುಳಿದರೆ
ಖಂಡಪ ಶುವ ಗಣಿಸನೆನೆ ಖರ
ದಂಡನಾಭನ ಮತಕೆ ನೃಪತಿ ಹಸಾದವೆನುತಿರ್ದ

ಇರುಳು ಗುಪಿತದಲವನಿಪತಿ ಸೋ
ದರರು ಮುರರಿಪು ಸಹಿತ ಬಂದನು
ಸುರನದೀನಂದನನ ಮಂದಿರಕಾಗಿ ವಹಿಲದಲಿ
ಕರೆದು ಪಡಿಹಾಱರಿಗೆ ಬಂದುದ
ನಱುಹಲವದಿರು ಹೊಕ್ಕು ಸಮಯವ
ನಱಿದು ಭೀಷ್ಮಂಗೀ ಹದನ ಬಿನ್ನಹವ ಮಾಡಿದರು

ಬಂದನೇ ಧರ್ಮಜನು ಮುರರಿಪು
ತಂದನೇ ಕೌರವರನಕಟಾ
ಕೊಂದನೇ ಶಿವಶಿವಯೆನುತ ಮೌನದಲಿ ಮುಳುಗಿರ್ದ
ಮಂದಿಯನು ಹೊಱಗಿರಿಸಿ ಬರಹೇ
ಳೆಂದರಾಗಲೆ ಕೃಷ್ಣ ಕೊಂತೀ
ನಂದನರು ಬರಲಿದಿರುವಂದನು ಭೀಷ್ಮ ವಿನಯದಲಿ

ಅಱಿಸಿ ಹೊಗಲಾಮ್ನಾಯನಿಕರಕೆ
ತೆಱಹುಗುಡದ ಪರಸ್ವರೂಪನು
ಕುಱುಹುಗೊಂಡರೆ ಮುಂದಿವಾಳವೆ ದೇವ ನೀನೊಲಿದು
ಅಱಿಸಿಕೊಂಡೈತರಲು ತಾನೈ
ಸಱಿವನಾಗಲಿ ನಿನ್ನ ಭೃತ್ಯನ
ಹೊರೆವ ಪರಿಯಿದು ಕೃಷ್ಣ ಜಯಜಯಯೆನುತ ನಿಡುಗೆಡೆದ

ನಗುತ ಹರಿ ಗಂಗಾಕುಮಾರನ
ನೆಗಹಿದನು ಬಳಿಕಿವರು ರತುನಾ
ಳಿಗಳ ಕಾಣಿಕೆಯಿತ್ತು ಮೈಯಿಕ್ಕಿದರು ಭಕುತಿಯಲಿ

ತೆಗೆದು ಬಿಗಿಯಪ್ಪಿದನು ಯಮಜಾ
ದಿಗಳ ಮನ್ನಿಸಿ ವೀಳೆಯವನಿ
ತ್ತೊಗುಮಿಗೆಯ ಹರುಷದಲಿ ಹೊಂಪುಳಿಯೋದನಾ ಭೀಷ್ಮ

ಅರಿಯ ಬೀಡಿದು ರಾಯನನುಜರು
ದುರುಳರುಚಿತಾನುಚಿತಗೇಡಿಗ
ಳಿರುಳು ದೊರೆಗಳು ನೀವನಾಲೋಚಿತದಲೈತಹರೆ
ಹರಿಯು ಬಲುಹುಂಟಾದಡೆಯು ಧಿ
ಕ್ಕರಿಸಬಾರದು ರಾಜಮಂತ್ರವ
ನರಸ ಸಾಕಿನ್ನೇನು ಬಂದುದು ಹೇಳು ನೀನೆಂದ

ಅಱಿಯೆನುಚಿತವನೆಮ್ಮ ಭಾರದ
ಹೊಱಿಗೆ ನಿಮ್ಮದು ಕೃಷ್ಣನದು ನಾ
ವಱಿದರೆಯು ಮೇಣ್ ಮಱೆದರೆಯು ರಕ್ಷಕರು ನೀವೆಮಗೆ
ಅಱಿಯನೇನುವನೆಂದು ಸಲಹಲು
ಮಱೆವಳೇ ಬಾಲಕನ ತಾಯ್ ನೀ
ನುಱುವ ವಜ್ರದ ಜೋಡು ನಮಗಿರೆ ಭೀತಿಯೇಕೆಂದ

ಎಮಗೆ ಜಯವೆಂತಹುದು ರಾಜ್ಯ
ಭ್ರಮೆಯ ರಾಜಸಬುದ್ಧಿಗಳು ವಿ
ಕ್ರಮವಿಹೀನರು ನಾವು ನೀವ್ ತ್ರೈಲೋಕ್ಯವಿಜಯಿಗಳು
ಸಮರ ಸೋತುದು ನಮ್ಮ ಸುಭಟರು
ಯಮನ ಸೇವಕರಾಯ್ತು ಕೃಪೆಯಿಂ
ದೆಮಗೆ ನಿಮ್ಮಭಿಮತವ ಬೆಸಸುವುದೆಂದನಾ ಭೂಪ

ತೀದುದೆಮ್ಮಯ ಸೇನೆ ನಸುಸೊ
ಪ್ಪಾದುದಿಲ್ಲರಿಸೇನೆ ನಿಮ್ಮನು
ಕಾದಿ ಗೆಲುವರೆ ಮೊಲೆಯನೂಡಿದ ತಾಯಿ ಜಾಹ್ನವಿಯೆ
ಕಾದಿದೆವು ಕಟ್ಟಿದೆವು ಗೆಲಿದೆವು
ಮೇದಿನಿಯ ನಾವಿನ್ನು ಮುನ್ನಿನ
ತೀದ ವನವಾಸಕ್ಕೆ ನೇಮವ ಕೊಟ್ಟು ಕಳುಹೆಂದ

ಮನ್ನಿಸುವಡೀಯುಭಯರಾಯರು
ನಿನ್ನ ಮೊಮ್ಮಂದಿರುಗಳದಱೊಳು
ನಿನ್ನ ಕುಣಿಕೆಯೊಳಿಹುದು ಕುಂತೀಸುತರ ಜೀವನವು
ನಿನ್ನನೇ ನಂಬಿಹರು ನೀನೇ
ಮುನ್ನ ಶಿಶುತನದಲ್ಲಿ ಸಲಹಿದೆ
ಮನ್ನಣೆಯ ನೀ ಬಲ್ಲೆಯೆಂದನು ದಾನವಧ್ವಂಸಿ

ಎನಲು ಮೊಮ್ಮಂದಿರುಗಳಳಲಿನ
ಘನತೆಯ ಕಿವಿಗೊಟ್ಟು ಕೇಳಿದು
ನನೆದುದಂತಃಕರಣ ಕಂಬನಿದುಂಬಿದನು ಭೀಷ್ಮ
ಎನಗೆ ಕಾಲ ಸಮೀಪ ಮಗನೇ
ನಿನಗೆ ಭಯ ಬೇಡನ್ನು ಕುರುಪತಿ
ದನುಜವೈರಿಗೆ ತಪ್ಪಿದಾಗಳೆ ನಿಮಗೆ ಜಯವೆಂದ

ಕೊಂದೆನಗಣಿತ ರಾಯರನು ತಾ
ಮಂದಿಯನು ನಿನಗಾನು ಮುನಿಯೆನು
ಬಂದು ಪಾರ್ಥನ ರಥವ ತಡೆದರೆ ನೀವು ಧೃತಿಗೆಡದೆ

ಇಂದಿನುದಯದಲಾ ಶಿಖಂಡಿಯ
ತಂದು ನಿಲಿಸಿದಡೆನ್ನ ತನುವನು
ಹಿಂದುಗಳೆಯದೆ ನಿಮಗೆ ತೆಱುವೆನು ಮಗನೆ ಕೇಳೆಂದ

ಗಂಡುತನ ತಾನೆರವು ನಿಮ್ಮ ಶಿ
ಖಂಡಿಯನು ಮುಂದಿರಿಸಲಾತನ
ಕಂಡು ನಾವ್ ಕಾಳಗವ ಮಾಡೆವು ಕೈದುಗಳ ಬಿಸುಟು
ಚಂಡಿತನವನು ಮಾದು ಮಿಗೆ ಕೈ
ಕೊಂಡು ಫಲಗುಣನೆಸಲಿ ತನುವನು
ದಿಂಡುಗೆಡಹಲಿ ಬಳಿಕ ಗೆಲುವಿರಿ ಕೌರವೇಶ್ವರನ

ಎನಲು ಶಿವಶಿವಶಿವಮಹಾದೇ
ವೆನುತ ಕಿವಿಗಳ ಮುಚ್ಚಿದನು ಕಂ
ಬನಿಯನುಗುರಲಿ ಮಿಡಿದು ನೊಂದನು ಪಾರ್ಥ ಹೃದಯದಲಿ
ಎನಗೆ ಗೆಲುವಾಯ್ತುದು ಕೃತಾರ್ಥರು
ಜನದೊಳೆನ್ನವೊಲಾರು ಬಳಿಕೇ
ನೆನಗೆ ನಿಮ್ಮವೊಲಾರು ಹಗೆಗಳು ಜಗದೊಳುಂಟೆಂದ

ಕಳಿದ ನಡವಿಯೊಳಯ್ಯನಲ್ಲಿಂ
ಬಳಿಕ ಭೀಷ್ಮನ ತೋಳ ತೊಟ್ಟಿಲಿ
ನೊಳಗೆ ಬೆಳೆದೆವು ಸಲಹಿದನು ಧೂಳಾಟ ಮೊದಲಾಗಿ
ಬಲಿಯಲೆಱಕೆಗಳೆಮಗೆ ಭಾಗಿಸಿ
ನೆಲನ ಕೊಟ್ಟನು ಭೀಷ್ಮನೀತನ
ಕೊಲೆಗೆ ಬಯಸುವ ಮನವದೆಂತುಟೊ ಕೃಷ್ಣ ಹೇಳೆಂದ

ಈತನನು ನಾವ್ ಕೊಲಲು ಭುವನ
ಖ್ಯಾತರಹೆವ್ಯೆ ಸುಡಲಿ ಬಯಸುವ
ಭೂತಳವನೀ ಬೊಡ್ಡಿಗೋಸುಗ ಸುಟ್ಟು ಸುಕೃತವನು
ಘಾತಕರು ಪಾತಕರು ತೆಗೆ ತೆಗೆ
ಏತಜಿವದಿರು ಪಾಂಡುತನಯರ
ಮಾತನಾಡದಿರೆಂಬ ಕೀರ್ತಿಗೆ ನೋತುದಿಲ್ಲೆಂದ

ನಿಲ್ಲು ಫಲುಗುಣ ಕೇಳು ಹೊಲ್ಲೆಹ
ವಲ್ಲ ಸಕಲಕ್ಷತ್ರಧರ್ಮವ
ಬಲ್ಲೆ ನೀನೆಮಗೆಹಿತನೇ ನೃಪನೀತಿಬಾಹಿರನೆ
ಎಲ್ಲಿಯಪಕೀರ್ತಿಗಳು ಕೀರ್ತಿಗ
ಳೆಲ್ಲ ವಿಧಿಯುವು ನಿನ್ನ ಕಾರಣ
ವಲ್ಲ ನೀ ಕೊಲಲ್ಯೆಸಜಿವನ್ಯೆ ಪಾರ್ಥ ಹೇಳೆಂದ

ಯಂತ್ರಿ ಮಿಡಿದರೆ ಕಾಡಿ ಬೀಳ್ವವು
ಯಂತ್ರಮಯ ಹಾಹೆಗಳು ವಧೆಯಾ
ಯಂತ್ರಿಗೋ ಹಾಹೆಗಳಿಗೋ ಹೇಳಾರ ನೆಮ್ಮುವದು
ಯಂತ್ರಿ ಕೃಷ್ಣನು ನಾವು ನೀವೀ
ತಂತ್ರವಖಿಲಚರಾಚರಂಗಳು
ಯಂತ್ರರೂಪುಗಳೆಲ್ಲ ಕಾರಣವಿಲ್ಲ ನಿನಗೆಂದ

ಒಂದು ಮುಖದಲಿ ಜಗವ ಹೂಡುವ
ನೊಂದು ಮುಖದಲಿ ಜಗವ ಸಲಹುವ
ನೊಂದುಮುಖದಲಿ ಬೇಳುವನು ನಯನಾಗ್ನಿಯಲಿ ಜಗವ

ಕೊಂದು ಹಗೆಯಲ್ಲೀತ ಸಲಹಿದ
ನೆಂದು ಮೋಹಿತನಲ್ಲ ಪರಮಾ
ನಂದಮಯ ಹರಿಯಿದಕೆ ಕಾರಣವಿಲ್ಲ ನಿನಗೆಂದ

ಕಾವುದೀತನ ಕರುಣ ಮುನಿದರೆ
ಸಾವನೀತನ ಕಯ್ಯಬಾಯಲಿ
ನೀವು ತಾವ್ ನೆಱೆ ಮತ್ತೆ ಕೆಲಬರು ಮುನಿದಡಂಜುವೆನೆ
ನಾವು ಬೆಸಸಿದ ಮಾಡಿ ಸಾಕಿ
ನ್ನಾವಭಯ ನಿಮಗಿಲ್ಲ ಚಿತ್ತದ
ಭಾವಶುದ್ಧಿಯಲೆಮ್ಮ ನಂಬಿರಿ ಹೋಗಿ ನೀವೆಂದ

ಹರುಷ ಬಲಿದುದು ಮನದ ಸಂಶಯ
ಹರಿದುದಾಹವ ವಿಜಯವಾರ್ತೆಯ
ಹರಸಿನಲಿ ಹೊರೆಯೇಱಿ ಹೋಂಪುಳಿಯೋದರಡಿಗಡಿಗೆ
ಸುರನದೀನಂದನನ ಹರಹಿನ
ಹರಕೆಗಳ ಕೈಕೊಂಡು ಬೀಳ್ಕೊಂ
ಡರಸ ಮುರರಿಪು ಸಹಿತ ಬಂದನು ತನ್ನ ಪಾಳಯಕೆ

ಕುಮಾರವ್ಯಾಸ–ಭಾರತ
(೧೪೩೦)

## ೭೭. ವೀರ ಅಭಿಮನ್ಯು

ಬಿಗಿದ ಗಂಡುಡಿಗೆಯಲಿ ಹೊನ್ನಾ
ಯುಗದ ಹೊಳೆವ ಕಠಾರಿಯನು ಮೊನೆ
ಮುಗುಚಿ ಸಾಧು ಜವಾಜಿಕತ್ತುರಿಗಂಧಲೇಪದಲಿ
ಮುಗಮುಗಿಪ ಹೊಂದೊಡರ ಹಾರಾ
ದಿಗಳಲೊಪ್ಪಂಬಡೆದು ನಸು ನಗೆ
ಮೊಗದ ಸೊಂಪಿನಲಾಹವಕ್ಕನುವಾದನಭಿಮನ್ಯು

ಉಲಿವ ಘಂಟೆಯ ಕುಣಿವ ತುರಗಾ
ವಳಿಯು ಗಗನದೊಳಗಿವ ಬಿರುದಿನ
ಪಳಹರದ ತೆತ್ತಿಸಿದ ಕನಕದ ಚೌಕ ಸತ್ತಿಗೆಯ
ಘುಳುಘುಳಿಪ ಚೀತ್ಕಾರ ಕೋಳಾ
ಹಳದ ಸೂತನ ರೇಖೆಯಲಿ ಭಟ
ಕುಲಲಲಾಮನ ತೇರು ಬಂದುದು ತೀವಿದಸ್ತ್ರದಲಿ

ತುರಗತತಿಗಭಿನಮಿಸಿ ರಥವನು
ತಿರುಗಿ ಬಲವೆಂದೆಱಗಿ ಚಾಪಕೆ
ಕರವ ನೊಸಲಲಿ ಚಾಚಿ ಭಾರಿಯ ಭುಜವನೊದಱಿಸುತ
ಅರಸಗಭಿವಂದಿಸುತ ಭೀಮನ
ಹರಕೆಗಳ ಕೈಕೊಳುತ ನಕುಳಾ
ದ್ಯರಿಗೆ ಪೊಡವಟ್ಟಡರಿದನು ನವ ರತುನಮಯ ರಥವ

ಸೂಳವಿಸಿದವು ಲಗ್ಗೆಯಲಿ ನ
ಸ್ಸಾಳತತಿ ಸಿಡಿಲೆಱಗಿತೆನಲು
ಬ್ಬಾಳು ಮಿಗೆ ಕೈನೆಗಹಿ ಕೈವಾರಿಸುವ ಗಮಕಿಗಳು

ಸಾಲಹೆಗ್ಗಹಳೆಗಳು ರಿಪುಭೂ
ಪಾಲಕರ ಬೈಬೈದು ಗಜಱಿದ
ವಾಳುತನದಾಳಾಪ ಬೀಱಿತು ಬೆಱಗನಹಿತರಿಗೆ

ಒಡನೆ ಕಳುಹುತ ಬಂದನಾ ನೆಲ
ದೊಡೆಯನನುಜರುಸಹಿತ ನಯನದಿ
ಬಿಡುವನಿಯ ಸಾಲಿನಲಿ ನನೆದರು ಬಂದು ಕಿಱಿದೆಡೆಯ
ನಡೆ ವಿಜಯನಾಗೆಂದು ತನುವನು
ತಡವಿದರು ಕಡುಮೋಹವೆಡೆಯಲಿ
ಘುಡುಘುಡಿಸೆ ಶಿಶು ಬೀಳುಕೊಂಡನು ಪಿತೃಚತುಷ್ಟಯುವ

ಎಲೆ ಕ-ವಾರಕ ಹರಕುಮಾರಂ
ಗಳವಿಯಲಿ ನಿಲಲರಿದು ಕೊರಳಿನ
ಬಲುಹನಱಿಯದೆ ಗಿರಿಯ ಹೊಱಲಂಘೈಸುವರೆ ಭಟರು
ಬಲುಗಡಿಯನೀ ಕರ್ಣನೀ ಕೃಪ
ನಲಘುಭುಜಬಲ ದ್ರೋಣನೀ ವೆ
ಗ್ಗಳೆಯ ಜಯದ್ರಥನೆಂದು ಸಾರಥಿ ತೂಗಿದನು ಶಿರವ

ಮರುಳುಸಾರಥಿ ನಮ್ಮ ನಾವ್ ಪತಿ
ಕರಿಸಿಕೊಳಲಾಗದು ಕಣಾ ನೀ
ನಱಿಯೆ ನಮ್ಮಂತರವ ನಾವಿನ್ನಾಡಿ ಫಲವೇನು
ಗುರುತನುಜನೇ ಕೃಪನೆ ದ್ರೋಣನೆ
ತರಣಿತನಯನೆ ಸೈಂಧವನೆ ಹುಲು
ನರರು ಗಣ್ಯವೆ ಕೇಳು ಭಾಷೆಯನೆಂದನಭಿಮನ್ಯು

ಬವರವಾದರೆ ಹರನ ವದನಕೆ
ಬೆವರ ತಹೆನವಗಡಿಸಿದರೆ ಪಾ
ಸವನ ಸದೆವೆನು ಹೊಕ್ಕಡಹುದೆನಿಸುವೆನು ಭಾರ್ಗವನ
ಜವನ ಜವಗೆಡಿಸುವೆನು ಸಾಕಿ
ನ್ನಿವರವರಲೇನರ್ಜುನನು ಮಾ
ಧವನು ಮುನಿದಡೆ ಗೆಲುವೆನಂಜದೆ ರಥವ ಹರಿಸೆಂದ

ಬಾಲನೆನ್ನದಿರೆನುತ ರಿಪುಭಟ
ಭಾಳಲೋಚನನೆನಿಸುವರ್ಜುನ
ಬಾಳುಗೆನುತುದ್ದಂಡಕೋದಂಡವನು ಜೇವೊಡೆಯೆ
ಮೇಲು ಜಗವಲ್ಲಾಡಿದವು ಕೊರ
ಳೋಳಿ ಕೆದಱಿತು ಕುಸಿದನಹಿ ಪಾ
ತಾಳಗೂಳೆಯ ತೆಗೆಯಲಳ್ಳಿಱಿಯಿತ್ತು ಬಿಲುರಭಸ

ಸುರನದಿಗೆ ಶಿವನಾಯ್ತು ಮಕರಾ
ಕರಕೆ ಕಳಶಜನಾಯ್ತು ತರಣಿಗೆ
ಅರಿ ವಿಧುಂತುದನಾಯ್ತು ರಥಪದತಳಿತ ಧೂಳಿಯಲಿ
ಅರರೆ ಸತ್ವರಜಸ್ತಮಂಗಳೊ
ಳೆರಡುಗುಣವಡಗಿತು ರಜೋಗುಣ
ದುರುಳಿಯಾದುದು ಲೋಕವೆನೆ ಘಾಡಿಸಿತು ಪದಧೂಳಿ

ಆರ ರಥವಿದು ಸೈನ್ಯಪಾರಾ
ವಾರಕಿದನಂಘೈಸುವನು ರಿಪು
ರಾರಿಯೋ ಮೇಣಾ ತ್ರಿವಿಕ್ರಮನೋ ಸುರೇಶ್ವರನೊ

ವೀರನಹನೋ ಪೂತು ರಣದ ತೊ
ಠಾರನಿವನಾರೆನುತ ತಱುಬಿಯೆ
ತೋರಹತ್ತರು ತಾಗಿದರು ಸೌಬಲಜಯದ್ರಥರು

ಘಡ ಜಯದ್ರಥ ಹೋಗು ಹೋಗಳ
ವಡಿಕೆಯಲ್ಲಿದು ಸಾರು ಸೌಬಲ
ಮಿಡುಕಿದಡೆ ಮರುಳಹಿರಿ ಲೇಸಲ್ಲೆಮ್ಮೊಳತಿಮಥನ
ತುಡುಕಿದರೆ ಕೈ ಬೇವುದೀ ಬಲು
ಗಡಿಯತನ ಬಯಲಹುದೆನುತ ತಡೆ
ಗಡಿದು ಬಿಸುಟನು ಭಟರ ಹಯರಥಧನುವ ಸಾರಥಿಯ

ರಥ ಮುಱಿದು ಮನನೊಂದು ಸುಮಹಾ
ರಥರು ಹಿಮ್ಮೆಟ್ಟಿದರು ಬಳಿಕತಿ
ರಥಭಯಂಕರನೊಡೆದು ಹೊಕ್ಕನು ವೈರಿಮೋಹರವ
ಮಥನದಲಿ ಮುಱಿಯೊಡೆದ ಶೈಲ
ವ್ಯಥಿತ ಸಾಗರದಂತೆ ಬಿರಿದವು
ರಥನಿಕರ ಕಾಲಾಳು ಕುದುರೆಗಳೊಂದು ನಿಮಿಷದಲಿ

ಹರಿಯ ಚಕ್ರ ವರೂಥಚಕ್ರದೊ
ಘುರವಣಿಪ ತೇಜಿಗಳ ಕಡುಹಿನ
ಖುರದ ಹೊಯ್ಲಲಿ ವಿಲಯಪವನನ ಗಱಿಯ ಗಾಳಿಯಲಿ
ಹರನ ನಯನಜ್ವಾಲೆ ಪಾರ್ಥಿಯ
ಸರಳ ಕಿಡಿಯಲಿ ಪಲ್ಲಟಿಸೆ ಸಂ
ಗರದೊಳಗೆ ಸೈವರಿದು ಸದೆದನು ಸಕಲಸೈನಿಕರ

ಮಿಕ್ಕು ನೂಕುವ ಕುದುರೆಕಾಜಿರು
ತೆಕ್ಕೆಗೆಡೆದರು ಸಂದಣಿಸಿ ಕೈ
ಯಿಕ್ಕಿ ದಾನೆಯನೇನನೆಂಬೆನು ಕಾಣೆನಳವಿಯಲಿ
ಹೊಕ್ಕು ಹರಿಸುವ ರಥ ಪದಾತಿಯ
ನೊಕ್ಕಲಿಕ್ಕಿದನಮಮ ಮಗುವಿನ
ಮಕ್ಕಳಾಟಿಕೆ ಮಾರಿಯಾಯಿತು ವೈರಿರಾಯರಿಗೆ

ಕದಳಿಯೊಳು ಮದದಾನೆ ಹೊಕ್ಕಂ
ದದಲಿ ಹೆಚ್ಚಿದ ಚಾತುರಂಗದ
ಮೆದೆಯನೊಟ್ಟಿದು ಹೂಣೆ ಹೊಕ್ಕನು ಥಟ್ಟನೊಡೆತುಳಿದು
ಇದಿರೊಳೆಚ್ಚನು ಕೆಲಬಲದೊಳಿಹ
ಕದನಗಲಿಗಳ ಸೀಳಿದನು ಕಾ
ದಿದನು ಕಾಲನ ಲೀಲೆಯಾದುದು ವಿಷಮಸಮರಂಗ

ಜೋಡೊಡೆದು ಥಟ್ಟುಗಿದು ಬೆನ್ನಲಿ
ಮೂಡಲದಟರ ಸೀಳಿದನು ಖುರ
ಜೋಡು ಹುಡಿಹುಡಿಯಾಗೆ ತೇಜಿಯ ಥಟ್ಟ ಖಂಡಿಸಿದ
ನೋಡಲಮ್ಮುವರಿಲ್ಲ ಮಿಗೆ ಕೈ
ಮಾಡಲಮ್ಮುವರಿಲ್ಲ ಬಲವ
ಲ್ಲಾಡಿತೊಬ್ಬನೆ ಹಸುಳೆ ಹೊಕ್ಕನು ವೈರಿಮೋಹರವ

ಎಡದಲೌಕುವ ರಾವುತರ ವಂ
ಗಡವನೆಚ್ಚನು ಸಮ್ಮುಖದೊಳವ
ಗಡಿಸುವಿಭಕೋಟಿಗಳ ಕೊಂದನು ಸರಳಸಾರದಲಿ

ಕಡುಗಿ ಬಲದಲಿ ಕವಿವ ರಥಿಕರ
ಕೆಡಹಿದನು ಕಾಲಾಳು ತೇರಿನ
ಗಡಣ ಹುಡಿಹುಡಿಯಾಯ್ತೆನಲು ಸವರಿದನು ಪರಬಲವ

ಉರವಣಿಸಿದರು ಮತ್ತೆ ಭಟರ
ಬ್ಬರವ ಖತಿಯಲಿ ನಿಖಿಳ ಮನ್ನಂ
ತರದ ಕಡೆಯಲಿ ನೆಲನನದ್ದುವ ಕಡಲ ಕಡುಹಿನಲಿ
ಸರಳು ಕಡಿದವು ಸಕುತಿ ಸೆಲ್ಲಹ
ಪರಶು ಕವಿದವು ಖಡ್ಗ ತೋಮರ
ಸುರಗಿ ಹೊಳೆದವು ಕೈದು ಹೇರಿದವಖಿಳ ದೆಸೆಗಳಲಿ

ತೊಲಗಿರೈ ಕಾಲಾಳು ಮೇಲಾ
ಳಳವಿಗೊಡಲಿ ಮಹಾರಥರು ಮುಂ
ಕೊಳಲಿ ಜೋದರು ದಿಟ್ಟರಾದರೆ ಕವಿಸಿ ಕರಿಘಟೆಯ
ಕೆಲದ ದೊರೆಗಳು ಬರಲಿ ಮಾಱಿದ
ತಲೆಯ ಭಂಡವ ಹೊತ್ತಿರದೆ ಕೈ
ಕೊಳಲಿ ಕರ್ಣಾದಿಗಳೆನುತ ಹೊಕ್ಕೆಚ್ಚನಭಿಮನ್ಯು

ಕಾಱಗಲಿಸಿದನಮಮ ರಾಜಕು
ಮಾರ ಕಂಠೀರವನು ರಿಪುಪರಿ
ವಾರವನು ನಡೆಗೊಳಿಸಿದನು ಯಮರಾಜನಾಲಯಕೆ
ಮಾರಿ ಮೊಗವಡದೆಱೆದಳೋ ಕೈ
ವಾರವೋ ತರುವಲಿಗಿದೆತ್ತಣ
ವೀರವೋ ಶಿವ ಎನುತ ಬೆಱಗಾಯಿತ್ತು ಸುರಕಟಕ

ಕೊಡೆನೆಗೆದವಟ್ಟಿಗಳು ರಕುತದ
ಕಡಲೊಳರೆಜೀವದ ಭಟರು ಬಾ
ಯ್ವಿಡುತ ತೇಕಾಡಿದರು ಮುಂಡದ ಹಿಂಡು ಮುಳುಗಾಡೆ
ಅಡಸಿ ನೆಗೆವಾನೆಗಳ ತಲೆಗಳ
ಗಡಣ ಮೆಱೆದವು ಮಿಕ್ಕ ತೇಜಿಯ
ಕಡಿಕುಗಳು ಕುಣಿದಾಡಿದವು ಕಿಗ್ಗಡಲ ರಕುತದಲಿ

ಕರಿಘಟೆಯ ಕಲಕಿದನು ಹಯಮೋ
ಹರವ ಜರುಹಿದನೌಕಿ ಹರಿತಹ
ವರರಥವ ಹುಡಿಮಾಡಿದನು ಕೆಡಹಿದನು ಕಾಲಾಳ
ಹುರಿಯೊಡೆದು ಪ್ಯೆದೆಗೆದು ಸಲೆ ಕೈ
ಮಱೆದು ಕೈದುವ ಹಾಯ್ಕಿ ಪಡೆ ಮೊಗ
ದಿರುಹಲೆಚ್ಚನು ಕೊಚ್ಚಿದನು ಕೌರವಚತುರ್ಬಲವ

ತಳಿತ ಹೊಗರಿನ ಬಾಯಿಧಾರೆಯ
ಹೊಳಹುಗಳ ಹೊಸ ಮಸೆಯ ತಳಪದ
ಬೆಳಗುಗಳ ಬಲಿದಿಂಗಲೀಕ ಸುವರ್ಣರೇಖೆಗಳ
ಲುಳಿಯ ಹಂಗನ ಗಱಿಯ ಬಿಗುಹಿನ
ಹಿಳುಕುಗಳ ಹೊಗರಂಬು ಕವಿದವು
ತುಳುಕಿದವು ತೂಱಿದವು ಕೆದಱಿದವಹಿತಬಲದಸುವ

ಅಳವಿಗೆಡೆ ಧುಮ್ಮಿಕ್ಕಿ ರಥದವ
ರಿಳಿಯ ಬಿದ್ದರು ಭಯದಿ ತೇಜಿಯ
ನಿಳಿದು ರಾವ್ತರು ಕರವ ಮುಗಿದರು ಕೊರಳ ಸಲಹೆನುತ

ಗುಳವ ಸಡಿಲಿಸಿ ಹಾಯ್ಕಿ ಜೋಧಾ
ವಳಿಗಳಿಳಿದುದು ಕೈಯ ಕೈದುವ
ನಿಳುಹಿ ಬಾಯುಲಿ ಬೆರಳನಿಟ್ಟುದು ವೈರಿಪಾಯದಳ

ಜರಿದುದಬ್ಜವ್ಯೂಹ ನೂಕಿದ
ಕರಿ ತುರಗ ಕಾಲಾಳು ತೇರಿನ
ಮುರಳುದಲೆ ತಾನಿಲ್ಲ ನೆಱೆ ನುಗ್ಗಾಯ್ತು ಕುರುಸೇನೆ
ದೊರೆಗಳಹ ದ್ರೋಣಾದಿಗಳು ಕೈ
ಮಱೆದು ಕಳೆದರು ಪಾರ್ಥತನಯನ
ಸರಿಯೊರೆಗೆ ಭಟನಾವನೆಂದನು ಕೌರವರ ರಾಯ

ತಂದೆ ಹಡೆಯನೆ ಮಗನನಹುದೋ
ಕಂದ ಕಲ್ಪಸಹಸ್ರ ನೋಂತಳೊ
ಇಂದುಧರನನು ನಿನ್ನ ತಾಯಿ ಸುಭದ್ರೆಯಲ್ಲದಡೆ
ಇಂದಿನೀ ಬಲವೀ ಸಮರಜಯ
ದಂದವೀ ಸೌರಂಭವೀ ಸರ
ಳಂದವೀ ತೆರಳಿಕೆಯದಾವಂಗೆಂದನವನೀಶ

ಹುರುಡ ಮಱೆದೆನು ಮಗನೆ ಸಾಲದೆ
ಭರತಕುಲದಲಿ ನಿನ್ನ ಬೆಳವಿಗೆ
ಯೆರಡುಕವಲನ್ವಯಕೆ ಕೊಡದೇ ಸುಗತಿಸಂಪದವ
ಕರುಳು ಬೀಳವೆ ತನ್ನ ಬಸುಱಿಂ
ದುರಳಿದವದಿರಲೇನುಫಲ ಮ
ತ್ಸರವೆ ಪಾರ್ಥ ಕೃತನಾರ್ಥನೆಂದನು ಕೌರವರ ರಾಯ

ಎನುತ ಬಿಲುದುಡುಕಿದನು ಸೇನಾ
ವನಧಿಗಭಯವನಿತ್ತು ಮರಳುವ
ಜನಪರನು ಜಱೆದೆಡಬಲದ ಮನ್ನೆಯರ ಮೂದಲಿಸಿ
ಮೊನೆಗಣೆಯ ತೂಗುತ್ತ ನರನಂ
ದನನ ರಥವನು ತಱುಬಿ ನಿನ್ನಯ
ತನಯನಡ್ಡೈಸಿದನು ಕೌರವರಾಯ ಖಾತಿಯಲಿ

ಮಗುವು ನೀ ಕೆಡಬೇಡ ಹೋಗೆನು
ತಗಣಿಶಾಸ್ತ್ರವ ಸುರಿವುತೈತರೆ
ನಗುತ ನಿಂದಭಿಮನ್ಯು ನುಡಿದನು ಕೌರವೇಶ್ವರನ
ಮಗುವು ತಾನಹೆ ತನ್ನ ಬಾಣಕೆ
ಮಗುವುತನ ಬೇಱಿಲ್ಲ ನೋಡೆಂ
ದಗಲದಲಿ ಕೂರಂಬ ಸುರಿದನು ಪಾರ್ಥನಂದನನು

ಎಸಲು ಕಣೆ ಮುಕ್ಕುಱುಕಿದವು ಹೊಸ
ಮಸೆಯ ಧಾರೆಯ ತೋರ ಕಿಡಿಯಲಿ
ಮುಸುಕಿತರಸನ ತೇರು ತಳಿತವು ಮೆಯ್ಯೊಳಂಬುಗಳು
ಬಸಿವ ರಕುತದ ಜರಿವ ಜೋಡಿನ
ನಸಿದ ಗರ್ವದ ನೆಗ್ಗಿದಾಳ್ತನ
ದೆಸಕದೊಣಗಿಲ ಬಾಯ ಭೂಪನ ಕಂಡನಾದ್ರೋಣ

ರಾಯ ಸಿಲುಕಿದನಕಟಕಟ ರಾ
ಧೇಯ ನಡೆ ಕೃಪ ಹೋಗು ಮಗನೆ ನಿ
ಜಾಯುಧವ ಹಿಡಿ ಶಲ್ಯ ತಡೆಯದಿರೇಳು ಕೃತವರ್ಮ

ರಾಯವನುಜರು ಕೈದುಗೊಳಿ ರಣ
ದಾಯ ತಪ್ಪಿತು ನೃಪತಿ ಮಾರಿಯ
ಬಾಯ ತುತ್ತಾವನು ಶಿವಾ ಎಂದೊಱಲಿದನು ದ್ರೋಣ

ಮಾತು ಹಿಂಚಿತು ಮುಂಚಿ ಸುಭಟ
ವ್ರಾತ ಹೊಕ್ಕುದು ಸಿಕ್ಕಿದರಸನ
ಭೀತಿಯನು ಬಿಡಿಸಿದರು ಬೀಱಿದರಂಬುಗಳ ಮಳೆಯ
ಸೋತೆವಾವ್ ನೀ ಗೆಲಿದೆ ಕರೆ ನಿ
ಮ್ಮಾತಗಳನೀ ಭ್ರೂಣಹತ್ಯಾ
ಪಾತಕಕ್ಕಂಜುವೆನೆನುತ ಕೈಕೊಂಡನಾ ದ್ರೋಣ

ರಾಯನನು ತೊಲಗಿಸಿದರಾಕ
ರ್ಣಾಯತಾಸ್ತ್ರರು ರಾಹುವಿನ ಕಟ
ವಾಯ ಚಂದ್ರನ ಸೆಳೆವವೋಲರಿದಾಯ್ತು ಸುಭಟರಿಗೆ
ಸಾಯಕವ ಸರಿಗೊಳಿಸಿದರು ವ
ಜ್ರಾಯುಧನಮೊಮ್ಮನ ರಥದ ನಿ
ರ್ದಾಯದಲಿ ಮುತ್ತಿದರು ಕುರುಸೇನಾಮಹಾರಥರು

ಹಸುಳೆತನದಲಿ ಹರನ ಮಗನಾ
ವಿಷಮದೈತ್ಯನ ಸೀಳಿ ಬಿಸುಡನೆ
ಶಿಶುವಲಾ ಪ್ರದ್ಯುಮ್ನ ಮುಱಿಯನೆ ಶಂಬರಾಸುರನ
ಶಿಶುವೆ ನೋಡಭಿಮನ್ಯು ಸುಭಟ
ಪ್ರಸರದಿನಿಬರನೊಂದು ಘಾಯದೊ
ಳುಸಿರ ತೆಗೆಬಗೆ ಮಾಡಿದನು ಧೃತರಾಷ್ಟ್ರ ಕೇಳೆಂದ

ಗುರುಸುತನನೊಟ್ಟೈಸಿ ಶಲ್ಯನ
ಭರವಸವ ನಿಲಿಸಿದನು ಕೃಪನು
ಬ್ಬರದ ಗರ್ವವ ಮುಱಿದು ಕೃತವರ್ಮಕನ ನೋಯಿಸಿದ
ಅರಸನನುಜರ ಸದೆದು ಬಾಹ್ಲಿಕ
ದುರಳ ಸೌಬಲ ಸೋಮದತ್ತರ
ಹುರುಳುಗೆಡಿಸಿದನೊಬ್ಬ ಶಿಶು ಗೆಲಿದನು ಮಹಾರಥರ

ಮುಳುಗಿದಂಬಿನ ಮಱುಮೊನೆಯ ವೈ
ಗಳ ಮಹಾರಥರಾಜಿ ಕದನದ
ನೆಲನ ಬಿಡೆ ಖತಿಗೊಂಡು ಮುಱಿದೋಡುವರ ಮೂದಲಿಸಿ
ಬಿಲುದುಡುಕಿ ಸಾರಥಿಗೆ ಸೂಚಿಸಿ
ಮಲೆತ ನೊಡ್ಡೈ ಮುಗುವು ಫಡ ಫಡ
ತೊಲಗು ತೊಲಗೆಂದೆನುತ ರಿಪುವನು ತಱುಬಿದನು ಕರ್ಣ

ಬೆದಱು ಭೂಕಂಪದಲಿ ಕುಲಗಿರಿ
ಯದಿರುವಂತಿರೆ ಚರಿಸಿ ಕಾಯವ
ಬಿದಿರಿ ಮುರಳುವ ಕಂಗಳಲಿ ಕಲಿಕರ್ಣ ವೈಮಱಿಯೆ
ಕೆದಱಿತೀ ಬಲವಕಟ ಕರ್ಣನ
ಸದೆದನೋ ಸಾಹಸಿಕ ಶಿಶು ಕಾ
ದಿದೆವು ನಾವಿನ್ನೆನುತಲಿರೆ ಕಲಿಶಲ್ಯನಿದಿರಾದ

ಬಾಲಕನೆ ಹಿಮ್ಮೆಟ್ಟು ಹಿಮ್ಮೆ
ಟ್ಟಾಳುತನವೆಮ್ಮೊಡನೆಯೋ ಮರು
ಳೇಳಿಗೆಯಲುಬ್ಬೆದ್ದು ಕರ್ಣನ ಸದೆದ ಗರ್ವದಲಿ

ಮೇಲನಱಿಯಾ ಶಲ್ಯನೊಡನೆಯು
ಕಾಳೆಗವೆ ನಿಮ್ಮಯ್ಯನಿಂದಿನ
ಲೂಳಿಗವ ತಹುದೆನುತ ಸುರಿದನು ಸರಳ ಸರಿವಳೆಯ

ಬಾಲತನವೇನೂಣಯವೆ ಕ
ಟ್ಟಾಳುತನವಾಭರಣವವನೀ
ಪಾಲಸುತರಿಗೆ ವಿದ್ಯವೇ ವಿಪ್ರರಿಗಲಂಕಾರ
ಆಳಿನಂಗವನೆತ್ತ ಬಲ್ಲೆ ಶ
ರಾಳಿಯಲಿ ನಿನ್ನಂಘವಣೆಯ ಭ
ಡಾಳತನವನು ಮುದ್ರಿಸುವೆನೆನುತೆಚ್ಚನಭಿಮನ್ಯು

ತಲೆ ತಿರುಗಿ ತುಟಿಯೊಣಗಿ ಕಂಗಳ
ಬಳೆ ಮರಳಿ ಬಸವಳಿಯೆ ಸಾರಥಿ
ತೊಲಗಿಸಿದನಾ ರಥವನೊಡಹುಟ್ಟಿದನ ವೇದನೆಯು
ನಿಲುಕಿ ಕಂಡನು ಶಲ್ಯನನುಜನು
ಹಿಳುಕು ಹಿಳುಕಿನ ಮೇಲೆ ಸಂಧಿಸಿ
ಮುಳಿದೆಸುತ ತಾಗಿದನು ಖತಿಯಲಿ ಪಾರ್ಥನಂದನ [ನ]

ದೊರೆ ಮಡಿಯೆ ಮಾದ್ರಾ (ನುಜನ) ಬಲ
ತಿರುಗಿತಭಿಮನ್ಯುವಿನ ಹೊಯ್ಲಲಿ
ಹುರುಳುಗೆಟ್ಟುದು ಹೆಸರ ನಾಯಕವಾಡಿ ದುಗುಡದಲಿ
ತರಹರವ ನಾ ಕಾಣೆನೀ ಮೋ
ಹರಕೆ ಗತಿಯೇನೆನುತ ಭರದಲಿ
ಕರೆದು ತೋಱಿದನಾ ಕೃಪಾಚಾರ್ಯಂಗೆ ಕಲಿ ದ್ರೋಣ

ಮುಗುವೆ ನೋಡಭಿಮನ್ಯು ನವುಗಿದು
ಹೊಗುವಡಳವೇ ಕಾಲರುದ್ರನ
ತಗಹು ಬಿಟ್ಟಂತಿದೆ ಕುಮಾರನ ಕೋಪದಾಟೋಪ
ಮೊಗಸಲರಿದು ಭುಜಪ್ರತಾಪದ
ಹೊಗರು ಹೊಸಪರಿಯೆನುತ ರಿಪುಗಳ
ಹೊಗಳುತಿರೆ ಕೇಳಿದನು ಕೌರವ ರಾಯನೀ ನುಡಿಯ

ಕೇಳುತಿರ್ದೈ ಕರ್ಣ ಸಲೆ ನ
ವ್ವಾಳ ಬೆದಱಿಸಿ ನುಡಿದು ರಿಪುಭಟ
ನಾಳನೇಱಿಸಿ ನುಡಿವ ಬಾಹಿರರೇನು ಹೇಳುವೆನು
ಖೂಳರೆಂಬೆವೆ ಗುರುಗಳಿಂದು ವಿ
ಶಾಲಮತಿಗಳು ತಮ್ಮ ಭಾಗ್ಯದ
ಮೇಲೆ ದೈವವನೆಂದು ಫಲವೇನೆನುತ ಬಿಸುಸುಯ್ದ

ವೀರರಂಗವನೆತ್ತ ಬಲ್ಲರು
ಹಾರುವರು ಬೆಳದಿಂಗಳಿನ ಬಿಱು
ಸಾರ ಸುಡುವುದು ಕೈದು ಹಿಡಿದರೆ ಕಲಿಗಳೇ ದ್ವಿಜರು
ವೈರಿಭಟನಿವ ಮಗುವಲಾ ಮನ
ವಾರೆ ಕಾದಲು ಲಕ್ಷ್ಯವಿಲ್ಲೀ
ಯೂರುಗರ ಬೈದೇನು ಫಲವೆಂದರಸ ಹೊಱವಂಟ

ಎನಲು ದುಶ್ಶಾಸನನು ರಾಯನ
ಕನಲಿದನು ಖತಿಯೇಕೆ ಜೀಯಿಂ
ದೆನೆಗೆ ಬೆಸಸಾ ಸಾಕು ಭಂಡರ ಬೈದು ಫಲವೇನು

ದಿನಪ ದೀವಿಗೆಯಾಗಲುಳಿದೀ
ಬಿನುಗು ಬೆಳಗಿನ ಹಂಗು ಬೇಹುದೆ
ದನುಜ ದಿವಿಜರ ದಳಕೆ ತನ್ನನು ಬಿಟ್ಟು ನೋಡೆಂದ

ತಳಿತುದೆಡಬಲವಂಕದಲಿ ಹೆ
ಬ್ಬಲ ಛಡಾಳಿಸಿ ಮೊರೆವ ಭೇರಿಯ
ಘುಳುಘುಳುಧ್ವನಿ ಕೂಡೆ ಜಡಿದುದು ಕಮಲಜಾಂಡಘಟ
ಹಳವಿಗೆಯ ಸೀಗುರಿಯ ಚಮರಾ
ವಳಿಯ ವಿಮಳಛತ್ರಪಙ್ತಿಯ
ವಳಯದಲಿ ನಭ ಮುಳುಗೆ ಮುತ್ತಿತು ಸೇನೆ ರಿಪುಭಟನ

ತಿರುಹು ತೇಜಿಯನಿತ್ತಲಿವದಿರ
ಸೊರಸಿ ದುಶ್ಶಾಸನನ ಬೆನ್ನಲಿ
ಕರುಳು ತೆಗೆವೆನು ನೋಡು ಸಾರಥಿ ಬೆಚ್ಚಬೇಡೆನುತ
ಅರಗಿನರಸನ ಬಾಗಿಲಲಿ ದ
ಳ್ಳುರಿಗೆ ತಡವೇ ಹೊಕ್ಕು ನಿಮಿಷದೊ
ಳೊರಸಿದನು ಚತುರಂಗಬಲವನು ಕೌರವಾನುಜನ

ಎಲವೊ ಕೌರವ ಕೊಬ್ಬಿ ನರಿ ಹೆ
ಬ್ಬುಲಿಯ ಕೂಸನು ಬೇಡುವಂದದಿ
ಅಳವನಱಿಯದೆ ಅಧಮರಥಿಕರ ಕೂಡೆ ತೊಡಕುವರೆ
ಮಲೆತು ನೀನೆನ್ನೊಡನೆ ರಣದಲಿ
ಹಳಚಿ ನೀ ತಲೆವೆರಸಿ ಮರಳಿದ
ಡಿಳುಹುವೆನು ಕೈದುವನು ಶರಸನ್ಯಾಸ ನನಗೆಂದ

ಸಾಕು ತರುವಲಿತನದ ಮಾತುಗ
ಳೇಕೆ ಗರುವರ ಮುಂದೆ ವಿರೋ
ದ್ರೇಕದಲಿ ಮೈಮಱೆದು ರಣದಲಿ ಹೊಯ್ದು ಹೊಟ್ಟೆಗರ
ಆ ಕೀರಿಟಿವೃಕೋದರರು ಮೈ
ಸೋಕಿದರೆ ಸಂತೋಷ ನೀನವಿ
ವೇಕಿ ಬಾಲಕನೇನ ಮಾಡುವೆನೆಂದನವ ನಗುತ

ಕೊಳಚೆನೀರೊಳಗಾಳುತೇಳುತ
ಜಲಧಿ ಕಾಲ್ವೊಳೆಯೆಂಬ ಭಂಡರ
ಮುಳಿದು ಮಾಡುವುದೇನು ಮೊದಲಲಿ ನಮ್ಮ ನೀ ಗೆಲಿದು
ಬಳಿಕ ಭೀಮಾರ್ಜುನರ ಬಯಸುವು
ಮಲೆ ಮರುಳೆ ನಿನ್ನೊಡಲ ಸೀಳಿಯೆ
ತಿಳಿರಕುತದಲಿ ತಾಯ ತುಱುಬನು ನಾದಿಸುವೆನೆಂದ

ಕಾತರಿಸದಿರು ಬಾಲಬಾಷೆಗ
ಳೀತಕಿವು ನೀ ಕಲಿತ ಬಿಲುವಿ
ದ್ಯಾತಿಶಯವುಂಟಾದಡೆಮ್ಮೊಳು ತೋಱು ಕೈಗುಣವ
ಭೀತ ಭಟರನು ಹೊಳ್ಳುಗಳೆದ ಮ
ದಾತಿರೇಕದ ಠಾವಿದಲ್ಲೆಂ
ದೀತನೆಚ್ಚನು ನೂಱುಬಾಣದಲಿಂದ್ರ ಸುತಸುತನ

ಆವನ ನೂಱಂಬುಗಳ ಕಡಿದವ
ನವಯವವ ಕೀಲಿಸಿದಡಾಕ್ಷಣ
ವವನಿಯಲಿ ಬಲುಗರುಳು ಬಿದ್ದವು ಭಟನ ಕಿಬ್ಬರಿಯ

ಅವಗಡಿಸಿ ಖಾತಿಯಲಿ ಖಳ ಶರ
ನಿವಹವನು ತುಡುಕಿದನು ಕೊಡಹಿದ
ವವ[ನು] ನಿಮಿಷದೊಳರ್ಜುನಾತ್ಮಕನಗಣಿತಾಸ್ತ್ರಗಳು

ತಾಯ ತುಱುಬಿಗೆ [ಹಾ]ಯ್ದ ಪಾತಕಿ
ನಾಯ ಕೊಂಡಾಡುವರೆ ಕೊಬ್ಬಿದ
ಕಾಯವನು ಕದುಕಿಱಿದು ನೆತ್ತರ ನೊರೆಯ ಬಾಸಣಿಸಿ
ತಾಯ ಕರಸುವೆನೆನುತ ಕಮಳದ
ಳಾಯತಾಂಬಕನಳಿಯನನುಪಮ
ಸಾಯಕವ ಹೂಡಿದನು ನೋಡಿದನೊಂದು ಚಿತ್ತದಲಿ

ಇವನ ಕೊಂದರೆ ತಂದೆ ಮಿಗೆ ಮೆ
ಚ್ಚುವನೊ ಮುನಿವನೊ ತನ್ನ ನುಡಿ ಸಂ
ಭವಿಸದೆಂಬನೊ ಭೀಮಸೇನನ ಭಾಷೆಗಂಜುವೆನು
ಇವನ ತಾನೇ ಕೊಲಲಿ ನಮಗಿ
ನ್ನಿವನ ತೊಡಕೇ ಬೇಡ ಕದನದೊ
ಳಿವನ ಭಂಗಿಸಿ ಬಿಡುವೆನೆಂದನು ತನ್ನ ಮನದೊಳಗೆ

ಕಾಯ್ದುಕೊಳ್ಳೈ ಕೌರವಾನುಜ
ಹೊಯ್ದು ಹೋಗಲುಃ ಬಹುದೆ ಹರನಡ
ಹಾಯ್ದಡೆಯು ಗೆಲುವೆನು ಕಣಾ ನಿಲ್ಲೆನುತ ತೆಗೆದೆಸಲು
ಬಾಯ್ದೆಗೆದು ಕೇಸುರಿಯ ಕಾಱುತ
ಕೈದುವೆದೆಯಲಿ ಕೊಂಡು ಬೆನ್ನಲಿ
ಹಾಯ್ದುಡವನೋರ್ಗುಡಿಸಿದನು ಕುರುಸೇನೆ ಕಳವಳಿಸೆ

ಆಹಹ ಕೈತಪ್ಪಾಯ್ತು ರಾಯನ
ಸಹಭವನು ನೊಂದನು ಶಿವಾ ಎನು
ತಹಿತಸುಭಟರು ಸರಿಯೆ ಸಾರಥಿ ತಿರುಹಿದನು ರಥವ
ಬಹಳ ಬಲ ನುಗ್ಗಾಯ್ತು ಶಿಶುವಿನ
ಸಹಸ ಕುಂದದೆನುತ್ತ ಖತಿಯುಲಿ
ಮಿಹಿರಸುತನಡಹಾಯ್ದು ತಡೆದನು ಮತ್ತೆ ಬಾಲಕನ

ಸಾರು ಸಾರಭಿಮನ್ಯು ಫಡ ಇ
ನ್ನಾರ ಬಸುಱನು ಹೊಗುವೆ ನಿನ್ನವ
ರಾರ ಸಂತತಿ ಮಾಡಿಕೊಳಲಿ ಭವತ್ಪರೋಕ್ಷದಲಿ
ಭೂರಿಬಲವನು ಸದೆವ ಗರ್ವವಿ
ದಾರ ಕೂಡೆ ಧನುರ್ಧರಾಗ್ರಣಿ
ವೀರಕರ್ಣ ಕಣಾ ಎನುತ ತೆಗೆದೆಚ್ಚನತಿರಥನ

ಬಲ್ಲೆನುಂಟುಂಟಖಿಳ ವೀರರೊ
ಳಿಲ್ಲ ಸರಿದೊರೆ ನಿನಗೆ ಬಾಯುಲಿ
ಬಲ್ಲಿದನು ನೀನಹೆ ಭಟಾಂಗದ ಮಾತದಂತಿರಲಿ
ಒಳ್ಳೆ ಗಡ ಪಾವುಡದ ವಾಸುಗಿ
ಯಲ್ಲಿಗಟ್ಟಿತು ಗಡ ಮಹಾಹವ
ಮಲ್ಲ ಮಡಮುಱಿಯದಿರೆನುತ ಹೊಕ್ಕೆಚ್ಚನಭಿಮನ್ಯು

ಇರುಳು ರಾಯನ ಮನೆಗೆ ಕಪ್ಪವ
ತೆಱುವುದೋ ಹಗಲೆಲವೊ ಕೆಲಬರ
ನಿಱಿದ ದರ್ಪವದಾರೊಡನೆ ಫಡ ಮರಳು ಮರಳೆನುತ

ಕಿಱುಮೊನೆಯ ಮುಗುಳಂಬುಗಳ ಸೈ
ಗಱೆದನಭಿಮನ್ಯುವಿನ ಮೆಯ್ಯಲಿ
ತುಱುಗಿದವು ಮಱಿದುಂಬಿ ಕೆಂದಾವರೆಗೆ ಕವಿವಂತೆ

ಸುರಪನಂಕುಶವೌಕಿದರೆ ಮೆ
ಯ್ಮಱಿಯದೈರಾವತಕೆ ಕಬ್ಬಿನ
ಲಱಿದರಂಜಿಕೆಯುಂಟೆ ನಿನ್ನಯ ಕಣೆಗಳೌಕಿದರೆ
ತೆರಳುವನೆ ಅಭಿಮನ್ಯುವೆನುತ
ಬ್ಬರಿಸಿ ಕರ್ಣನ ಕಾಯವನು ಹುಗಿ
ಲಿಱಿದನೆಂಟಂಬಿನಲಿ ತೋದುದು ತೇರು ರಕ್ತದಲಿ

ಕೈದು ಮುಱಿಯಲು ಮುಂದೆ ನೂಕದೆ
ಹಾಯ್ದನಾ ರವಿಸೂನು ಬಳಿಕಡ
ಹಾಯ್ದು ತಡೆದನು ಬವರವನು ಕರ್ಣಾತ್ಮಜನು ಕಡುಗಿ
ಐದು ಬಾಣದಲವನ ಕೊರಳನು
ಕೊಯ್ದನರ್ಜುನಸೂನುವಾತನ
ನೊಯ್ದರಂತಕದೂತರದ್ಭುತವಾಯ್ತು ಸಂಗ್ರಾಮ

ಘಾಯವಡೆದನು ಶಲ್ಯ ರವಿಸುತ
ನಾಯುಧವ ಬಿಟ್ಟೋಡಿದನು ಕುರು
ರಾಯನನುಜನು ಬದಕುವರೆ ಮೆಯ್ಯೆಲ್ಲ ಬಾದಣವು
ಸಾಯದುಳಿದವರಿಲ್ಲ ಮಿಕ್ಕಿನ
ನಾಯಕರೊಳಕಟೆನಲು ಕುರುಬಲ
ಬಾಯ ಬಿಡೆ ಶಲ್ಯನ ಕುಮಾರಕ ಹೊಕ್ಕನಾಹವವ

ಆ ಕುಮಾರನ ಸೇನೆ ಗಡಣಿಸಿ
ನೂಕಿತುರವಣಿಸಿದುದು ತುರಗಾ
ನೀಕವಿಭತತಿ ತೂಳಿದವು ತುಡುಕಿದವು ರಥನಿಕರ
ತೋಕಿದವು ಕೈದುಗಳ ಮಳೆ ರಣ
ದಾಕೆವಾಳರ ಸನ್ನೆಯಲಿ ಸಮ
ರಾಕುಳರು ಕೆಣಕಿದರು ರಿಪುಕಲ್ಪಾಂತಭೈರವನ

ಭಟ ಭಡಾಳಿಸಿದನು ಘೃತಾಹುತಿ
ಘಟಿಸಿದಗ್ನಿಯವೋಲು ರಣ ಚೌ
ಪಟ ಚತುರ್ಬಲದೊಳಗೆ ಹೊಕ್ಕನು ಸಿಂಹನಾದದಲಿ
ನಿಟಿಲನೇತ್ರನ ಕೋಪಶಿಖಿ ಲಟ
ಕಟಿಸುವಂತಿರೆ ಹೆಚ್ಚಿದತಿಬಲ
ದಟವಿಯನು ಸವಱಿದುದು ಪಾರ್ಥಕುಮಾರಶರಜಾಲ

ಧರೆ ಬಿರಿಯೆ ಬೊಬ್ಬೆಯಲಿ ಬಲದ
ಬ್ಬರಣೆ ದೆಖ್ಖಾದೆಖ್ಖೆಯಾಗಲು
ಧರಣಿಪತಿ ಮಱುಗಿದನು ಮಗನೇನಾದನೋ ಎನುತ
ಕರೆದು ಭೀಮನ ನಕುಳನನು ಸಂ
ಗರಕೆ ಧೃಷ್ಟದ್ಯುಮ್ನದ್ರುಪದರ
ಪರುಠವಿಸಿ ಕಳುಹಿದನು ಸೌಭದ್ರಂಗೆ ಪಡಿಬಲವ

ಗದೆಯ ತಿರುಹುತ ಸಿಂಹನಾದದ
ಲೊದಱಿ ಮಗನಾವೆಡೆಯೆನುತ ನೂ
ಕಿದನು ರಥವನು ತನ್ನ ಸೇನೆಗೆ ಸೀಗುರಿಯ ಬೀಸಿ

ಆದಟನೈತರೆ ಹೋಗಲೀಯದೆ
ಮೊದಲ ಬಾಗಿಲ ಕಟ್ಟಿಕೊಂಡ
ಗ್ಗದ ಜಯದ್ರಥ ಭೀಮನೊಳು ಬಲುಗಾಳೆಗವ ಹಿಡಿದ

ತೆಱಹುಗೊಡು ಫಡ ಫಡ ಜಯದ್ರಥ
ಹೆಱತೆಗೆದು ಸಾರೆನುತ ಹೂಣಿಗ
ನುಱುಬಿದರೆ ಮಾಱಾಂತು ಭೀಮನ ಕಡುಹ ನಿಲಿಸಿದನು
ಮಱೆದು ಕಳೆಯಭಿಮನ್ಯುವನು ವೈ
ಮಱೆಯದೆನ್ನಲಿ ಕಾದು ಮಾತಿನ
ಬಿಱುಬಿನಲಿ ಫಲವಿಲ್ಲೆನುತ ಕೆಂಗೋಲ ತೊಡಚಿದನು

ಬವರದಲಿ ಕಲಿಪಾರ್ಥನಲ್ಲದೆ
ಪವನತನಯಾದಿಗಳ ಗೆಲುವರೆ
ಶಿವನ ಕೃಪೆಯೆನಗುಂಟು ಮುನ್ನೆನುತಾ ಜಯದ್ರಥನು
ಕವಲುಗೋಲಲಿ ಭೀಮನನು ಪರಿ
ಭವಿಸಿದನು ಸಹದೇವನಕುಳರ
ತಿವಿದು ಧೃಷ್ಟದ್ಯುಮ್ನ ಮೊದಲಾದಗಣಿತರ ಗೆಲಿದ

ತಱೆದನಾನೆಯ ಥಟ್ಟುಗಳ ಮು
ಕ್ಕುಱುಕಿದನು ಕಾಂಭೋಜ ತೇಜಿಯ
ನುಱುಬಿ ಹೊಯ್ದನು ಸೂನಿಗೆಯ ತೇರುಗಳ ತಿಂತಿಣಿಯ
ಮುಱಿದನೊಗ್ಗಿನ ಪಾಯ್ದಳವನ
ಳ್ಳಿಱಿವ ಹೆಣ ಕುಣಿದಾಡೆ ಭಟ ಬೇ
ಸಱದೆ ಕೊಂದನು ವೈರಿಸೇನೆಯನರಸ ಕೇಳೆಂದ

ಒರಸಿದನು ಹದಿನೆಂಟುಸಾವಿರ
ಕರಿಘಟೆಯನೈವತ್ತು ಸಾವಿರ
ತುರಗವನು ಮೂವತ್ತುಸಾವಿರ ವರಮಹಾರಥರ
ಧುರದಿ ಲಕ್ಷಪದಾತಿಯನು ಸಂ
ಹರಿಸಿ ಶಲ್ಯಕುಮಾರಕನ ಕ
ತ್ತರಿಸಿದನು ಗೋನಾಳಿಯನು ದಿವ್ಯಾಸ್ತ್ರಧಾರೆಯಲಿ

ಮಡಿದನಕಟಾ ತಮ್ಮ ಸಖನೆಂ
ದಡಸಿದಳಲಿನೊಳಿದ್ದ ಕೋಪದ
ಕಡುರ್ಝಳದ ಕಾಲಾಗ್ನಿ ರುದ್ರನ ಕಣ್ಣ ಹೋಲುವೆಯ
ಸಿಡಿದ ಮೀಸೆಯ ಬಿಗಿದ ಹುಬ್ಬಿನ
ಜಡಿವ ರೋಮಾಂಚನದ ಖಾತಿಯ
ಕಡುಹುಕಾಱರು ಮಸಗಿದರು ದುರ್ಯೋಧನಾತ್ಮಕರು

ತಳಿತ ಸತ್ತಿಗೆಗಳ ವಿಡಾಯಿಯ
ಲೊಲೆವ ಚಮರಿಯ ವಜ್ರ ಮಕುಟದ
ಹೊಳಹುಗಳ ಹೊಗೆ ಮಿಾಸೆಗೆದಱಿನ ಬಿರುದಿನುಬ್ಬಟೆಯ
ಕೆಲಬಲದ ವೇಲಾಯತರ ವೆ
ಗ್ಗಳದ ರಾವ್ತರ ಗಡಣ ನಾಲಗೆ
ದಳೆದುದೆನೆ ಹೊಳೆಹೊಳೆವಡಾಯುಧಭಟರು ನೂಕಿದರು

ದಿಟ್ಟರೋ ಲಕ್ಷಣನವರು ಜಗ
ಜಟ್ಟಿಗಳಲಾ ರಾಜಕುಲದಲಿ
ಹುಟ್ಟಿದರೆ ಕೆಲರೀಸು ಚಪಳತೆಯಾರಿಗುಂಟೆನುತ

ಕಟ್ಟಿದನು ಕಣೆಗಳಲಿ ಸುತ್ತಲು
ತಟ್ಟಿವಲೆಗಳ ಸೋಹಿನಲಿ ಬೆ
ನ್ನಟ್ಟಿ ಪಾರ್ಥಕುಮಾರ ಸದೆದನು ವೈರಿಮೃಗಕುಲವ

ಸರಳವೊನೆಯಲಿ ವೈರಿಸುಭಟರ
ಕರುಳ ತೆಗೆದನು ರಣದೊಳಾಡುವ
ಮರುಳಬಳಗವ ತಣಿಸಿದನು ಕಡಲಾದುದರುಣಜಲ
ತರಳನಜಿಯಟ್ಟಿದನು ಧುರದಲಿ
ದುರುಳ ದುರಿಯೋಧನನ ಮಕ್ಕಳ
ಮರಳಲೀಯದೆ ಭಟರ ಕೇಣಿಯ ಕೊಂಡನಭಿಮನ್ಯು

ಉರಗನಿಕ್ಕಡಿಗಾಜಿ ಹುಲ್ಲಿನ
ಸರವಿಗಂಜುವುದುಂಟೆ ಕರ್ಣಾ
ದ್ಯರನು ಕಡ್ಡಿಗೆ ಬಗೆಯನೀ ಹೂಹೆಗಳ ಗಣಿಸುವನೆ
ಎರಡು ಶರದಲಿ ಲಕ್ಷಣನ ಸಂ
ಹರಿಸಿದನು ಹದಿನೈದು ಬಾಣದ
ಲರಿದನುಳಿದ ಕುಮಾರಕರನಭಿಮನ್ಯು ನಿಮಿಷದಲಿ

ತಳಿತ ಚೂತದ ಸಸಿಗಳವನಿಗೆ
ಮಲಗುವಂತಿರೆ ರಾಜಪುತ್ರರು
ಹೊಳೆವ ಪದಕದ ಕೊರಳ ತಲೆಗಿಂಬಾದ ತೋಳುಗಳ
ಬಳಿರಕುತದಲಿ ನನೆದ ಸೀರೆಯ
ತಳಿತ ಖಂಡದ ಬಿಗಿದ ಹುಬ್ಬಿನ
ದಳಿತ ದಂಷ್ಟ್ರಾನನದಲೆಸೆದರು ಸಾಲ ಶಯನದಲಿ

ಇಕ್ಕಿದಿರಲಾ ರಾಜಪುತ್ರರ
ನಕ್ಕಟಕಟಾ ಸ್ವಾಮಿದ್ರೋಹರು
ಹೊಕ್ಕ ಮನೆ ಹಾಳಹುದಲಾ ದ್ರೋಣಾದಿನಾಯಕರು
ಹಕ್ಕಲಾದುದು ನಮ್ಮ ಬಲ ಶಿಶು
ಸಿಕ್ಕನಿನ್ನೂ ಪಾಂಡವರ ಪು
ಣ್ಯಕ್ಕೆ ಸರಿಯಿಲ್ಲೆನುತ ಕೌರವರಾಯ ಗರ್ಜಿಸಿದ

ಕುಲವ ನೋಡಿದಡಿಲ್ಲ ತನ್ನಯ
ಬಲುಹ ನೋಡಿದಡಿಲ್ಲ ಕದನದೊ
ಳುಳಿವ ನೋಡಿದರಿಲ್ಲಲಾ ಪತಿಯೆಂಬ ಪಾತಕಿಯ
ಇಳೆಯೊಳೋಲೆಯಕಾಱರೆಂಬರ
ತಲೆಗೆ ತಂದನು ತೃಣವನೆಂದ
ಗ್ಗಳೆಯರನು ಮೂದಲಿಸಿ ಬಯ್ದನು ಸುಯ್ದು ಕುರುರಾಯ

ಮೇರೆದಪ್ಪಿತು ಕೌರವನ ಪರಿ
ವಾರದಲಿ ಬೇಹವರು ಮಕುಟದ
ಬಾರಿಯಾಳುಗಳಾಂತುಕೊಂಡರು ಪಾರ್ಥನಂದನನ
ಸೂರಿಯುನಸುತ ಶಲ್ಯ ಗೌತಮ
ಕೌರವಾನುಜನುಭಯಕಟಕಾ
ಚಾರ್ಯನಶ್ವತ್ಥಾಮನಿವರೊಗ್ಗಾಯ್ತು ಷಡುರಥರು

ಅಳವಿಗೊಟ್ಟುದು ಮತ್ತೆ ಕೌರವ
ಬಲಪಯೋನಿಧಿವೈರಿ ಬಡಬನ
ಬಿಲು ಸರಳು ಬಿಱುಗಿಡಿಯಲೌಕಿತು ಚಾತುರಂಗದಲಿ

ಎಲೆಲೆ ಬೆಂಗಾಹಿನಲಿ ನೂಕುವ
ಬಲ ಸಮರ್ಥರ ಜೋಕೆಯಲಿ ಕುರು
ಬಲಕೆ ಕದನಾಳಾಪವಾಯ್ತೆನುತೆಚ್ಚನಭಿಮನ್ಯು

ಎಸಲು ತಲೆವರಿಗೆಯಲಿ ಕವಿದುದು
ದೆಸೆಯ ಹಳುವಿಂಗೌಕುವತಿರಥ
ರುಸುರುಮಾಱಿಗಳೇಱಿ ಹೊಯ್ದರು ರಾಯ ರಾವುತರು
ನುಸುಳಿದರು ನಾಚಿಕೆಯಲಾತನ
ವಿಶಿಖಜಲದಲಿ ತೊಳೆದರತಿರಥ
ರಸಮಸಂಗರವಾಯ್ತು ಮತ್ತಭಿಮನ್ಯುವಿದಿರಿನಲಿ

ಹಳಚಿ ಮುಱಿದುದು ವೀರಕರ್ಣನ
ಬಲ ಕೃಪಾಚಾರಿಯರ ಸೇನೆಗೆ
ತಲೆಯ ಋಣಸಂಬಂಧ ಸವೆದುದು ಕಾತರಿಸಿ ಕವಿವ
ಬಲದ ಬಿರುದರಿಗಮರನಾರಿಯ
ರೊಳಗೆ ಸೇರುವೆಯಾಯ್ತು ಶಲ್ಯನ
ಬಲದಡಗು ಸವಿಯಾಯ್ತು ಜಂಬುಕಕಾಕಸಂತತಿಗೆ

ಕೆಡೆದ ರಥ ಸಲೆ ಕಾಂಚನಾದ್ರಿಯ
ನಡಸಿದವು ನಾಚಿಕೆಯನಭ್ರದೊ
ಳಿಡಿಯೆ ತಲೆ ಬೀಱಿದವು ಭಂಗವನನುಪಮಾಂಬರಕೆ
ಕಡಲುವರಿವರುಣಾಂಬುಜಲಧಿಗೆ
ಬಿಡಿಸಿದವು ಬಿಂಕವನು ಶಿವ ಶಿವ
ನುಡಿವ ಕವಿಯಾರಿನ್ನು ಪಾರ್ಥಕುಮಾರನಾಹವವ

ಶಿಶುತನದ ಸಾಮರ್ಥ್ಯ ಸಾಕಿ
ನ್ನೆಸದಿರೆಲವೋ ಮರಳು ಮರಳೆಂ
ದಸಮಬಲರೈದಿದರು ಷಡುರಥರೊಂದುಮುಖವಾಗಿ
ಎಸುಗೆ ನಿಮಗೆಂದಾಯ್ತು ನಿದ್ರೆಯ
ಮುಸುಕಿನಲಿ ಗೋಗ್ರಹಣದಲಿ ಜೀ
ವಿಸಿದ ಜಾಣರು ನೀವೆನುತ್ತಿದಿರಾದನಭಿಮನ್ಯು

ತರಳತನದಲಿ ನುಡಿಯದಿರು ಸಂ
ಗರಕೆ ಕರೆ ನಿಮ್ಮಯ್ಯನನು ಹೊಸ
ಸರಳು ನಾಚುವವಲ್ಲ ಶಿಶುವಧೆಯೆಂಬುದಪವಾದ
ಮರಳುವುದು ಲೇಸೆನುತ ಷಡುರಥ
ರುರವಣಿಸಿದರು ಬಿಗಿದ ಬಿಲ್ಲಿನ
ಗರುಡಿಕಾಱನ ಕೂಡ ನೂಕಿತು ರವಿಸುತಾದಿಗಳು

ಪಾರ್ಥಪರಿಯಂತೇಕೆ ಸಮರ
ವ್ಯರ್ಥಜೀವರು ನೀವು ಕೌರವ
ನರ್ಥವನು ಸಲೆ ತಿಂಬುದಲ್ಲದೆ ಸಮರ ನಿಮಗೇಕೆ
ಸ್ವಾರ್ಥಲೋಲುಪ್ತಿಯಲಿ ನಿಲುವ ಸ
ಮರ್ಥರಾದರೆ ಬಾಣದಾರಾ
ತೀರ್ಥದೊಳಗೋಲಾಡಿಸುವೆನೆಂದೆಚ್ಚನಭಿಮನ್ಯು

ಮನದ ಕೆಚ್ಚುಳ್ಳದಟನಹೆ ಮಾ
ತಿನ ಸಘಾಡಿಕೆ ಲೇಸು ಪಾರ್ಥನ
ತನಯನಲ್ಲಾ ಪೂತು ಪಾಯಿಕು ಎನುತ ಷಡುರಥರು

ತನತನಗೆ ಕೆಂಗೋಲಿನಲಿ ಮು
ಮ್ಮೊನೆಯ ಬೋಳೆಯ ಸರಳಿನಲಿ ಸಾ
ಧನಸಮಗ್ರರು ಶಿಶುವನೆಚ್ಚರು ದೆಸೆದೆಸೆಗೆ ಕವಿದು

ಕೋಡಿದನೆ ಕೊಂಕಿದನೆ ನಾಯಕ
ವಾಡಿಗಳು ಹಲರೆಂದು ಬೆಂಗೊ
ಟ್ಟೋಡಿದನೆ ಕೈಗಾಯದೆಚ್ಚನು ನಚ್ಚಿದಂಬಿನಲಿ
ತೋಡು ಬೀಡಿನ ಹವಣನಾತನ
ಮಾಡಿದಾತನೆ ಬಲ್ಲನೆನೆಕೈ
ಮಾಡಿ ಸುರಿದನು ಸರಳಮಳೆಯ ಮಹಾರಥರ ಮೇಲೆ

ಪೂತು ಮಝು ಬಿಲ್ಲಾಳುತನವಿದು
ಭೂತನಾಥಂಗಿಲ್ಲ ಸುಭಟ
ವ್ರಾತವೀಕ್ಷಿಸಲರಿದೆನುತ ಕಣ್ಗೆದಱಿದನು ದ್ರೋಣ
ಏತಕಿದು ಹಿಮ್ಮೆಟ್ಟು ದಿಟ ನೀ
ಸೋತಡೆಯು ಜಯವಿಲ್ಲೆಮಗೆ ನೃಗ
ಪೋತನನು ಹರಿಹೊಯ್ವುದುಚಿತವೆ ಮಗನೆ ಕೇಳೆಂದ

ವಿನಯವೇಕಿದು ನಿಮ್ಮ ಭುಜಬಲ
ದನುವ ಬಲ್ಲೆನು ನಿಮ್ಮ ಕೈಮೈ
ತನದ ಹವಣನು ಕಾ[ಬೆ]ನೆನ್ನೊಳು ಸೆಣಸಿಜಯಿಸಿದರೆ
ಧನುವ ಹಿಡಿಯೆನು ಸಾಕು ಡೊಂಬನ
ಬಿನುಗುನುಡಿಯಂತಿರಲಿ ಬಲ್ಲಡೆ
ಮೊನೆಗಣೆಯಲೇ ಮಾತನಾಡೆಂದೆಚ್ಚನಭಿಮನ್ಯು

ಎಡದೊಳೌಕುವ ಕೃಪನನೆಚ್ಚನು
ತಡೆಯಲಶ್ವತ್ಥಾಮನನು ರಥ
ಕೆಡೆಯಲೆಚ್ಚನು ತೊಡಚಿ ಕೈಯಲಿ ಕೌರವಾನುಜನ
ಮಿಡುಕಲೆಚ್ಚನು ಹಿಂದುಮುಂದವ
ಗಡಿಸಿದಾ ಮಾದ್ರೇಯ ರವಿಸತ
ರೊಡಲೊಳಂಬನು ಹೂಳಿದನು ಸೀಳಿದನು ಸಮರಥರ

ಅಡಸಿ ಹೊಕ್ಕರೆ ಕೃಪನ ರಥವನು
ಕಡಿದು ಬಿಸುಟನು ಗುರುಸುತನನಡಿ
ಮಿಡುಕಲೀಯದೆ ಬಿಗಿದು ಕರ್ಣನ ಧನುವ ಖಂಡಿಸಿದ
ಕೊಡಹಿದನು ಕೌರವನ ರಥವನು
ತುಡುಕಲೀಯದೆ ದ್ರೋಣನನು ಜವ
ಗೆಡಿಸಿದನು ಜೋಡಿಸಿದ ಷಡುರಥರೊಗ್ಗನೊಡೆಹೊಯ್ದು

ವಡಬಗೌತಣವಿಕ್ಕುವರೆ ಕಡ
ಲೊಡೆಯುಗಹುದು ಸಮರ್ಥನಲ್ಲಾ
ಬಿಡುಗಣೆಯ ಬೀಱುವರೆ ಕಟಕಾಚಾರ್ಯನೆಂದೆನುತ
ಕಡುಮೊನೆಯ ಕೂರಂಬುಗಳ ಮಿಗೆ
ಗಡಣಿಸಿದನೊಗ್ಗೊಡೆದ ಷಡುರಥ
ರೊಡಲೊಳಂಬನು ಹೂಳಿದನು ಕಾಱಿದರು ಶೋಣಿತವ

ವಿರಥನಾದನು ಕರ್ಣನಂಬಿಗೆ
ತಿರುಹಿ ಬಿಲ್ಲನು ತೊಟ್ಟನಾ ಗುರು
ಗುರುತನೂಜನು ತನ್ನ ಸೂತನ ಶಿರವ ಹಱಿಯೆಚ್ಚ

ಸುರಗಿಯನು ಬಿಸುಟೋಱೆಯ ತಿರುಹಿದ
ನರಸನನುಜನು ಕೃಪನು ಶಲ್ಯನು
ಕೊರಳಲಸುಗಳ ಹಿಡಿದು ಹಂಗಿಗರಾದರೊಡೆಯಂಗೆ

ಗನ್ನದಲಿ ಗುರು ಜಾಱಿದನು ಕೃಪ
ಮುನ್ನವೇ ಹಿಂಗಿದನು ಕರ್ಣನ
ನಿನ್ನ ಕಂಡವರಾರು ಮೂರ್ಛೆಗೆ ಮೂಱುಬಾರಿಯದು
ಬೆನ್ನ ತೆತ್ತರು ಬಿರುದರಾತಗೆ
ಕೆನ್ನೆಯೆಡೆಗುಗಿದಂಬುಸಹಿತವೆ
ನಿನ್ನ ಮಗನರನೆಲೆಗೆ ಸರಿದನು ಭೂಪ ಕೇಳೆಂದ

ಕೊಂಡು ಬರುತಿದೆ ಭಟರು ಮನ್ನೆಯ
ಗಂಡನಾಗೈ ಜೀಯ ಎನೆ ಖತಿ
ಗೊಂಡು ಕುರುಪತಿ ನೋಡಿದನು ಮೂಗಿನಲಿ ಬೆರಳಿಟ್ಟು
ಭಂಡರೆಂಬೆವೆ ಜಗದ ಗುರುಗಳು
ಗಂಡುಗಲಿಗಳು ವೈರಿಭಟರಿಗೆ
ಹೆಂಡಿರಾಗಲು ಹೋಗಿರೈ ದಿಟ ಹೋಗಿ ನೀವೆಂದ

ಕಾಲ ವಹಿಲವ ಕಲಿಸಲೋಸುಗ
ಕೋಲಗುರು ಜಾಱಿದನು ಶಲ್ಯನ
ಮೇಲುಮುಸುಕನುವಾಯ್ತು ಬಿರುದೇನಾಯ್ತು ಗುರುಸುತನ
ಆಳುವಾಸಿಯ ಕಡುಹು ಕರ್ಣನ
ಬೀಳುಕೊಂಡ ದು ಪೂತುಮಝುರೇ
ಬಾಲ ಎಂದವನೀಶ ಮೂದಲಿಸಿದನು ತನ್ನವರ

ಇದಿರೊಳೀಶನ ಭಾಳನಯನದ
ಕದಹು ತೆಗೆದಿದೆ ಹಿಂದೆ ಮರಳುವ
ಡಿದೆ ಕೃತಾಂತನ ಕೊಂತವರಸನ ಮೂದಲೆಯ ವಚನ
ಅದಟು ಕೊಳ್ಳದು ರಾಜಸೇವೆಯ
ಪದವಿ ಪಾತಕಫಲವೆನುತ ನೂ
ಕಿದರು ರಥವನು ಹಳಿವು ದರ್ಪದ ಹೇವ ಮಾಂಗಳು

ಹಱಿದು ಬಿದ್ದವು ಜೋಡು ಮೆಯ್ಯಲಿ
ಮುಱಿದವಗಣಿತಬಾಣದೇಱಿನೊ
ಳೊಱೆದ ರಕುತದ ಧಾರೆ ನಾದಿತು ರಥದ ಹಲಗೆಗಳ
ಅಱಿವು ಮಱೆದಪಕೀರ್ತಿ ನಾರಿಯು
ಸೆಱಿಗ ಹಿಡಿದರು ಹೇಳಲೇನದ
ನಱಿಯೆನೇಕಾಂತದಲಿ ಕರ್ಣನ ಕರೆದನಾ ದ್ರೋಣ

ಇದಿರೊಳಾನುವುದರಿದು ಹಸುಳೆಯ
ಕದನ ಹಂಗಿಗರಾದೆವಾಳ್ದನ
ವದನಕಮಲಕೆ ನಮ್ಮ ಪೌರುಷವಿಂದು ಹಿಮವಾಯ್ತು
ಇದಿರೊಳಾನಿಹೆ ಶಲ್ಯನೆಡವಂ
ಕದಲಿ ಬಲದಲಿ ಕೃಪನಪರಭಾ
ಗದಲಿ ನೀ ಬಂದೆಸು ಕುಮಾರನ ಕರದ ಕಾರ್ಮುಕವ

ಚಾಪವೀಶನ ಕೈಯಲಿರಲಿ
ನ್ನಾ ಪಿನಾಕಿಗೆ ಗೆಲವು ಘಟಿಸದು
ವೈಪರೀತ್ಯಕೆ ಬೆದಱಲಾಗದು ಸ್ವಾಮಿಕಾರ್ಯವಿದು

ರೂಪುದೋಱದೆ ಬಂದು ಸುಭಟನ
ಚಾಪವನು ಖಂಡಿಸುವುದಿದು ಕುರು
ಭೂಪನುಳಿವೆಂದಿನಸುತನನೊಡಬಡಿಸಿದನು ದ್ರೋಣ

ಹಿಂದಣಿಗೆ ತಿರುಗಿದನು ಭಾಸ್ಕರ
ನಂದನನು ಬಲವಂಕದಲಿ ಗುರು
ನಂದನನು ಕೃಪಶಲ್ಯವಾಮದೊಳಿದಿರಲಾ ದ್ರೋಣ
ನಿಂದು ಕದನವ ಕೆಣಕಿದರು ರಿಪು
ಬಂದಿಕಾಱನೊಳೇಱ ಸೂಱಗೆ
ಬಂದು ಬಸಿವುತ ಹೋದರನಿಬರು ಬೈದು ರವಿಸುತನ

ದಳವು ದಳವುಳವಾಯ್ತು ಕೇಸರ
ದೊಳಗೆ ವಿಸಟಂಬರಿದು ಕರ್ಣಿಕೆ
ಯೊಳಗೆ ಱಂಗಣಗುಣಿದು ಸಂಗರಜಯದ ಮಡುವಿನಲಿ
ಸಲೆ ಸೊಗಸಿ ತನಿ ಸೊಕ್ಕಿ ದೆಸೆ ಪಟ
ದುಳಿದು ಸೌಭದ್ರೇಯ ಭೃಂಗನ
ಬಿಲುದನಿಯ ಭರವಂಜಿಸಿತು ಜಯಯುವತಿ ವಿರಹಿಗಳ

ಆರಯಿದು ಮಗನೆನಿಸುವೀ ಮಮ
ಕಾರವೆಮ್ಮೊಳು ಮೊಳೆತಡಾ ದಾ
ತಾರನುಳಿವೆನ್ನಿಂದ ತಪ್ಪುವುದೆನುತ ಮನದೊಳಗೆ
ಕೂರಲಗನಾ ಕರ್ಣ ಬರಿಸೆಳೆ
ದಾರಿ ಹಿಂದಣಿನೆಚ್ಚು ಪಾರ್ಥಕು
ಮಾರಕನ ಚಾಪವನು ಮುಕ್ಕಡಿಯಾಗಿ ಖಂಡಿಸಿದ

ಉಱುವ ಜಯವಧುವೊಕ್ಕತನದಲಿ
ಮುಱಿದ ಕಡ್ಡಿಯಿದೆನಲು ಕರದಿಂ
ಮುಱಿದು ಬಿದ್ದುದು ಚಾಪವಿಂದ್ರಕುಮಾರನಂದನನ
ಬೆಱಗಡರಿ ಮುಖದಿರುಹಿ ಹಿಂದಣಿ
ನಿಱಿದ ಕರ್ಣನ ನೋಡಿ ಮುಖದಲಿ
ಕಿಱುನಗೆಯ ಕೇವಣಿಸಿ ನುಡಿದನು ಬೆರಳನೊಲೆದೊಲೆದು

ಆವ ಶರಸಂಧಾನ ಲಾಘವ
ದಾವ ಪರಿ ಮಝು ಪೂತು ಪಾಯಿಕು
ದೇವ ಬಿಲ್ಲಾಳೆಂತು ಕಡಿದೈ ಕರ್ಣ ನೀ ಧನುವ
ಈ ವಿವೇಕವಿದಾರ ಪೇರುವೆ
ಯಾವಗಹುದಿದು ಹಿಂದೆ ಬಂದೆಸು
ವೀ ವಿಗಡತನ ನಿನಗೆ ಮೆಱೆವುದು ಕರ್ಣ ಕೇಳೆಂದ

ಎನಲು ಲಜ್ಜಿತನಾಗಿ ತಿರುಗಿದ
ನನುವರದಲೀ ಕರ್ಣನಾತನ
ಧನು ಮುಱಿಯೆ ಕೈಕೊಂಡರೀ ದ್ರೋಣಾದಿನಾಯಕರು
ಕನಕರಥವನು ದ್ರೋಣನಾ ಗುರು
ತನುಜ ಸಾರಥಿಯನು ಕೃಪಾಚಾ
ರ್ಯನು ತುರಗವನು ಶಲ್ಯ ಕಡಿದನು ಭಟನ ಠೆಕ್ಕೆಯವ

ತುಡುಕುವರೆ ಧನುವಿಲ್ಲ ಮುಂದಡಿ
ಯಿಡಲು ಸಾರಥಿಯಿಲ್ಲ ರಥ ಕಡಿ
ವಡೆದುದಿನ್ನೆಂತೊದಗುವನೊ ಸುಕುಮಾರ ತಾನೆನುತ

ಪಡೆ ಬಿಡದೆ ಬೊಬ್ಬಿಱಿಯೆ ಬೆದಱಿದೆ
ಕಡುಗಿ ಖಡ್ಗವ ಕೊಂಡು ರಿಪುಗಳ
ಕಡಿದು ಹೆರಹುತ ಬೀದಿವರಿದನು ಕಣನ ಮಧ್ಯದಲಿ

ಈತನಿರೆ ಕಲ್ಪಾಂತರುದ್ರನ
ಮಾತು ಜಗಕೇಕೆನಲು ವೈರಿ
ವ್ರಾತವನು ಮುಂಕೊಂಡು ಹೊಯ್ದನುಹೊಳೆವ ಖಡುಗದಲಿ
ಸೋತನೇ ಶಿಶು ಷಡುರಥರ ಕರೆ
ಈತನಾರ್ಭೆ ಹೇಳಿ ಭಯವಿ
ನ್ನೇತಕೆಂದವನೀಶ ಮೂದಲಿಸಿದನು ತನ್ನವರ

ಗೆಲಿದರಭಿಮನ್ಯುವನು ತನ್ನವ
ರೆಲವೊ ತಾ ವೀಳೆಯವನೆನುತವೆ
ಮೆಲುನಗೆಯಲತಿರಥರ ಜಱಿದನು ಕೌರವರ ರಾಯ
ಬಳಿಕ ಎಡಬಲವಂಕದಲಿ ಮುಂ
ಡಳಿಸಿ ಮೋಹರಿಸಿತ್ತು ರಿಪುಬಲ
ಜಲಧಿ ವಡಬನೊಳಾಂತು ತಾಗಿದರಂದು ಷಡುರಥರು

ತುಡುಕಿದವು ತೇಜಿಗಳು ವಾಘೆಯ
ಗಡಣದಲಿ ತೂಳಿದವು ದಂತಿಗ
ಳೆಡಬಲದ ಬವರಿಯಲಿ ಮುತ್ತಿತು ಮತ್ತೆ ರಿಪುನಿಕರ
ಕಡುಮುನದ ಕಾಲಾಳು ಕಱಿದುದು
ಖಡುಗಧಾರೆಯನೀತನಳವಿಯ
ಕೆಡಿಸಿ ಮೇಲಿಕ್ಕಿದರು ಭೂಪನ ಮೊನೆಯ ನಾಯಕರು

ವಿಷದ ಹುಟ್ಟಿಯೊಳೆಱಗಿ ನೊಣ ಜೀ
ವಿಸುವುದೇ ಶಿವ ಶಿವ ಕುಮಾರನ
ಮುಸುಡಮುಂದಕೆ ಬದ್ದು ಬದುಕುವುದುಂಟೆ ಭಟನಿಕರ
ಕುಸುರಿದಱಿದನು ಕರಿಘಟೆಯುನಿ
ಪ್ಪಸರದಲಿ ಕಾಲಾಳುಕುದುರೆಗ
ಳಸುವ ಸೂಱೆಯು ಬಿಟ್ಟನಂತಕದೂತಸಂತತಿಗೆ

ಕರುಳ ಹೂಗೊಂಚಲಿನ ಮೂಳೆಯ
ಬಿರಿಮುಗಳ ನವಖಂಡದಿಂಡೆಯ
ಕರತಳದ ತಳಿರೆಲೆಯ ಕಡಿದೋಳುಗಳ ಕೊಂಬುಗಳ
ಬೆರಳ ಕಳಿಕೆಯ ತಲೆಯ ಫಲ ಬಂ
ಧುರದ ಘೂಕಧ್ವಾಂಕ್ಷ ನವಮಧು
ಕರದ ರಣವನವೆಸೆದುದೀತನ ಖಡ್ಗಚೈತ್ರದಲಿ

ವೈರಿವೀರಪ್ರತತಿಗಮರಿ
ನಾರಿಯರಿಗೆ ವಿವಾಹವನು ವಿ
ಸ್ತಾರಿಸುವ ಸಮಯದೊಳಗಾಂತ ಸಿತಾಕ್ಷತಾವಳಿಯ
ತಾರಕಿಗಳೆಸೆದಭ್ರವೆನೆ ರಿಪು
ವಾರಣದ ಮಸ್ತಕದ ಮುತ್ತುಗ
ಳೋರಣಿಸಲೊಪ್ಪಿದುದು ಖಡ್ಗ ಸುರೇಂದ್ರಸುತಸುತನ

ಅಟ್ಟಿ ಹೊಯ್ದನು ದಂತಿಗಳ ಹುಡಿ
ಗುಟ್ಟಿದನು ವಾಜಿಗಳ ತೇರಿನ
ಥಟ್ಟುಗಳ ಸೀಳಿದನು ಮಿಗೆ ಕಾಲಾಳನಸಿಯಱಿದ

ಕೆಟ್ಟು ಬಿಟ್ಟೋಡಿದುದು ಭಟನಱಿ
ಯಟ್ಟಿದನು ರಣದೊಳಗೆ ರಾಯಘ
ರಟ್ಟ ಪಾರ್ಥನತನಯ ಕೊಂದನು ಖಡ್ಗ[ಮನ]ದಣಿಯೆ

ಸೀಳಿದನು ಸೌಬಲನೊಳಿಪ್ಪ
ತ್ತೇಳನಾ ಮಾದ್ರೇಶರೊಳು ಹದಿ
ನೇಳನಗ್ಗದ ರವಿಸುತನ ಮಂತ್ರಿಗಳೊಳೈವರನು
ಮೇಲೆ ಕೇರಳರೊಳಗೆ ಹತ್ತು ನೃ
ಪಾಲರನು ಕೌಸಲ ಯವನ ನೇ
ಪಾಳ ಬರ್ಬರರೊಳಗೆ ಕೊಂದನು ಹತ್ತು ಸಾವಿರವ

ತುಡುಕಲಮ್ಮುವರಿಲ್ಲ ಬಲದಲಿ
ಮಿಡುಕಲಮ್ಮುವರಿಲ್ಲ ರಕುತದ
ಕಡಲೊಳಗೆ ಬೆಂಡೆದ್ದು ನೆಗೆದುದು ಕೋಟಿ ಪಾಯದಳ
ಸಿಡಿಲು ಜಂಗಮವಾಯ್ತೊ ಪ್ರಳಯದ
ಮೃಡನು ಬಾಲಕನಾದನೋ ಕೊಲೆ
ಗಡಿಕನಹುದೋ ಕಂದ ಎಂದನು ಕೌರವರ ರಾಯ

ಧನು ಮುಱಿದ ಬಳಿಕಿಮ್ಮಡಿಸಿತೀ
ತನ ಪರಾಕ್ರಮವೆನುತ ಸೇನಾ
ವನಧಿ ಜಱಿದುದು ಭಟರು ಹರಿದರು ಬಿಟ್ಟ ಮಂಡೆಯಲಿ
ಜನಪತಿಯು ಕಟ್ಟಳವಿಯಲಿ ರವಿ
ತನುಜನಡ್ಡೈಸಿದನು ಫಡ ಹೋ
ಗೆನುತ ನಾರಾಚದಲಿ ಮುಸುಕಿದನರ್ಜುನಾತ್ಮಜನ

ಎಳೆಯ ರವಿರಶ್ಮಿಗಳು ರಕ್ತೋ
ತ್ಪಲದೊಳಗೆ ಹೊಳೆವಂತೆ ಹೊನ್ನರೆ
ಬಳಿದ ಹಿಳುಕನೆ ಕಾಣಲಾದುದು ಭಟನ ಕಾಯದಲಿ
ಒಲೆದು ಕೇಸರಿ ಹೊಯ್ವವೋಲ
ವ್ವಳಿಸಿ ಕರ್ಣನ ಹಯರಥವನ
ಪ್ಪಳಿಸಿ ಮುರಳುವ ಲಾಗಿನಲಿ ಖಂಡೆಯುವ ಖಂಡಿಸಿದ

ಕರದ ಕರವಾಳುಡಿಯೆ ಬಿಡೆ ಹ
ಲ್ಮೊರೆದು ಭರದಲಿ ಗದೆಯ ಕೊಂಡ
ಬ್ಬರಿಸಿ ಕೋಪದಲಗಿದು ಹರಿಗೆಯ ಹಿಡಿದು ಮುಂದಣಿಗೆ
ಅರರೆ ಸಮ್ಮುಖವಾಗೆನುತ ಸಂ
ಗರದೊಳುರವಣಿಸಿದನು ಕರ್ಣನ
ತೆರಳಿಚಿದನೈನೂಱು ಹಜ್ಜೆಯಲಿಂದ್ರಸುತಸೂನು

ಗದೆಯ ಹೊಯ್ಲಲಿ ನೊಂದು ಕೋಪದೊ
ಳದಿರೆನುತ ಸೈಗೆಡೆದ ರೋಮದ
ಹೊದಱುಗಳ ಬಿಡುಗಣ್ಣ ಕೆಂಪಿನ ಕುಣಿವ ಮೀಸೆಗಳ
ಕುದಿದ ಹೃದಯದ ಕಾದ ದೇಹದ
ಕದನಗಲಿ ರವಸೂನು ಮೇಲಿ
ಕ್ಕಿದನು ಫಡ ಹೋಗದಿರು ಹೋಗದಿರೆನುತ ತೆಗೆದೆಚ್ಚ

ಶರಮುಯವು ಸರ್ವಾಂಗವಿನ್ನೀ
ಸರಳು ನೆಡಲಿಂಬಿಲ್ಲ ವೈಗಳೊ
ಳಱಿಯನದನಭಿಮನ್ಯು ಕರ್ಣನ ಮೇಲುವಾಯಿದನು

ತರಹರಿಸಿ ಕೆಲಸಿಡಿದು ರಿಪುಭಟ
ಸುರವನುದರವನೆಡಬಲನ ಕಿ
ಬ್ಬರಿಯನೆಚ್ಚನು ಕರ್ಣ ನೂಱೈವತ್ತು ಬಾಣದಲಿ

ಸರಳು ನೆಡಲುಬ್ಬೆದ್ದು ಬೊಬ್ಬಿಱಿ
ದುರವಣಿಸಿ ಬರೆ ದಿವ್ಯಶರದಲಿ
ಕರವೆರಡ ಹರಿಯೆಚ್ಚಡಾಗಳೆ ಕೆಡದವವನಿಯಲಿ
ಇರದೆ ಗಹಗಹಿಸಿದನು ಕೇಳಲೆ
ಮರುಳೆ ಸೂತಜ ಕೈಮುಱಿಯೆ ಸಂ
ಗರದ ಸಿರಿ ಹಿಂಗುವಳೆ ತನ್ನನೆನುತ್ತ ಗರ್ಜಿಸಿದ

ಸುರಿವ ರಕುತದ ಸರಿಯ ಸೆಱಿಗಿನೊ
ಳೊರಸಿ ರಥದಚ್ಚುಗಳನೊದೆದನು
ತಿರುಹಿ ಗಾಲಿಯ ತೆಗೆದು ಮುಂಗೈಗೊಂಡು ನಡೆ ನಡೆದು
ಅರಿಬಲವನಿಡೆ ಮುಗ್ಗಿ ಕೆಡೆದುದು
ತುರಗವಜಿಗಿಜಿಯಾದುದಿಭತತಿ
ಯುರುಳಿದವು ಹೊರಳಿದವು ಹೊಣಿಗರಟ್ಟೆ ಸಮರದಲಿ

ಹರಿಯ ಚಕ್ರದ ಸತ್ವವೀತನ
ಧುರದೊಳಾಯ್ತೆನೆ ರಥದ ಚಕ್ರದೊ
ಳರಿಬಲವನಿಡೆ ಮುಗ್ಗಿ ಕೆಡೆದುದು ಬಹಳ ತಳತಂತ್ರ
ಬಿರುದರಾನುವರಿಲ್ಲ ಷಡುರಥ
ರುರುವಣಿಯು ಹಿಂದಾಯ್ತು ರಾಯರ
ಗುರುವ ಕಂಡವರಿಲ್ಲೆನುತ ಕುರುರಾಯ ಚಿಂತಿಸಿದ

ಕರಹತಿಗೆ ಧಡಧಡಿಸಿ ತಿಱ್ರನೆ
ತಿರುಗಿ ಬೀಳುತ ಧೈರ್ಯದಲಿ ಹೊಡ
ಕರಿಸಿ ಹೊಱಬಿನೊಳಿದ್ದು ಹೊಯ್ದನು ಪಾರ್ಥನಂದನನ
ಅರಿಕೃಪಾಣದ ಘಾಯವನು ತರ
ಹರಿಸಲಱಿಯದೆ ಬೀಳುತಹಿತನ
ನೆಱಗಿದನು ಬಳಿಕವನಿಗೊಱಗಿದರಾ ಕುಮಾರಕರು

ಕಾಳುಕಿಚ್ಚಿದ್ದಡವಿಯನು ಕುಡಿ
ನಾಲಗೆಯೊಳಳವಡಿಸಿ ದಳ್ಳುರಿ
ಜ್ವಾಲೆ ತಗ್ಗಿದವೋಲು ಗಗನದ ಮುಗಿಲ ಮೋಹರವ
ಧಾಳಿಯಲಿಯಱೆಯಟ್ಟಿ ಸುಂಟುರು
ಗಾಳಿಯುರವಣೆ ನಿಂದವೊಲು ಸುರ
ಪಾಲತನಯನತನಯನಸ್ತಮಿಸಿದನು ರಣದೊಳಗೆ

ತೋಳ ತಲೆಗಿಂಬಿನಲಿ ಕೈದುಗ
ಳೋಳಿಗಳ ಹಾಸಿನಲಿ ತನ್ನಯ
ಕಾಲ ದೆಸೆಯಲಿ ಕೆಡೆದ ಕೌರವಸುತರು ನೂರ್ವರಲಿ
ಬಾಲಕನು ಬಳಲಿದನು ಸಮರದ
ಲೀಲೆಯಲಿ ಕುಣಿಕುಣಿದು ಬಸವಳಿ
ದಾಳುಗಳ ದೇವನು ಮಹಾಹವದೊಳಗೆ ಪವಡಿಸಿದ

ಬಿಗಿದ ಹುಬ್ಬಿನ ಬಿಟ್ಟ ಕಂಗಳ
ಹೊಗರು ಮೋರೆಯ ಹಿಣಿಲ ಮುಂಡೆಯ
ಜಿಗಿಯ ರಕುತದ ಜೋಱನೊಡಲಿನ ತುಱುಗಿದಂಬುಗಳ

ಹೆಗಲ ಕೊಯ್ಲಿನ ತಗ್ಗಿನಲಿ ಸೈ
ನೆಗೆದ ರೋಮದ ವಿಕ್ರಮಾಗ್ನಿಯ
ತಗಹು ಬಿಡದಭಿಮನ್ಯು ಮೆಱೆದನು ಶಸ್ತ್ರಶಯನದಲಿ

ಸಾವ ಹರಯವೆ ಎನುತ ಗಗನದ
ದೇವತತಿ ಮಱುಗಿತ್ತು ಶಕ್ರನ
ಸಾವಿರಾಲಿಯೊಳೊಱತೆ ಮಸಗಿತು ಪೌತ್ರಶೋಕದಲಿ
ತಾವು ಷಡುರಥರೊಬ್ಬ ಹಸುಳೆಯ
ಹೇವವಿಲ್ಲದೆ ಕೊಂದರೋ ಸುಡ
ಲಾವ ವೀರರು ಕೌರವಾದಿಗಳೆಂದುದಮರಗಣ

ಹಲವು ಗಜಗಳು ಸಿಂಹಶಿಶುವನು
ಗೆಲಿದ ಪರಿಯಂತಾಯ್ತು ಹಾವಿನ
ಬಳಗ ಗರುಡನ ಮಱಿಯ ಮುಱಿದವೊಲಾಯಿತಕಟೆನುತ
ಅಳಲಿದುದು ಸುರಕಟಕವವನಿಯೊ
ಳಿಳಿದರಪ್ಸರಗಣಿಕೆಯರು ಕೋ
ಮಳನ ತಂದರು ವಾಸವನ ಸಿಂಹಾಸನದ ಹೊರೆಗೆ

ಧುರದ ಪ್ರಳಯಕೃತಾಂತನನು ಪರಿ
ಹರಿಸಿದೆವು ಮೃತ್ಯುವಿನ ಪಾಶದ
ಕೊರಳ ಬಳಚಿದೆವೆನುತ ಕೌರವಬಲದ ನಾಯಕರು
ಶಿರವ ತಡಹುತ ತಮ್ಮ ಶಿಬಿರಕೆ
ತಿರುಗಿದರು ಬಾಲಕನನೀಕ್ಷಿಸ
ಲರಿದು ತನಗೆಂಬಂತೆ ರವಿ ಜಾಱಿದನು ಪಶ್ಚಿಮಕೆ

**ಕುಮಾರವ್ಯಾಸ-ಭಾರತ**
(೧೪೩೦)

# ೭೮. ಕಾವ್ಯವಿಹಾರ

## ಶತಕತ್ರಯ

ನೋಡದಮುನ್ನ ದರ್ಪಣವ ದರ್ಪಣಭಾವಮುದುಂಟು ವಿಭ್ರಮಂ
ಗೂಡಿ ವಿರಾಜಿಸುತ್ತಭಿಮುಖಾಸ್ಪದಮಾದ ನಿಜಸ್ವರೂಪಂ
ನೋಡಿದನಂತರಂ ಮರಳಿ ದರ್ಪಣಭಾವಮುದುಂಟೆ ತತ್ವಮಂ
ನೋಡದಮುನ್ನ ಮಾಯೆ ಬೞಿಕೆಲ್ಲಿಯು ಮಾಯೆ ಬಿಡಾ ಶಿವಾಧವಾ

ಮೊದಲಿಲ್ಲೆಂದೆಲೆ ಕರ್ಮಮಂ ಬಱಿದೆ ಮತ್ತುಂಟೆಂದು ಮತ್ತಂತದ
ಕ್ಕಿದುಪಾಯಂ ಪರಿಹಾರಮೆಂದು ಬಱಿದೊಂದಂ ಮಾಡಿ ಮತ್ತಾಗಳಂ
ತದು ಹೋಯಿತ್ತು ವಿಮುಕ್ತರೆಂದು ಬಱಿದೇ ತಮ್ಮಲ್ಲಿ ತಾವೇ ವಿಮೋ
ಹದ ಸಂಕಲ್ಪದ ಕರ್ಮಿಗಳ್ ಗೞಹುವರ್ ನೋಡಾ ಶಿವಾವಲ್ಲಭಾ

ಪರೆಯೋ ಮಾನಸಭಕ್ತಿ ಚಾಕ್ಷುಷಪದಂ ಪಶ್ಯಂತಿಯೋ ವಾಚಿಕ
ಸ್ಫುರಣಂ ಮಧ್ಯಮೆಯೋ ಗುರೂಕ್ತಿಮತದಿಂ ಸತ್ಕಾಯಿಕಂ ಭಕ್ತಿ ವೈ
ಖರಿಯೋ ನೋೞ್ಪೊಡದಿಂತು ನಾಲ್ಕುತೆಱನಾಗಿರ್ಕುಂ ಮನಶ್ಚಕ್ಷುರು
ತ್ತರವಾಕ್ಕಾಯಚತುರ್ವಿಧಪ್ರಣಿಧಿಯೊಳ್ ತಾನೇ ಶಿವಾವಲ್ಲಭಾ

ಅಱಿದಪೆನೆಂಬವಂಗಱಿಯಬಾರದು ನಿನ್ನ ನಿಜಪ್ರಯತ್ನದಿಂ
ದಱಿದಪೆನೆನ್ನದಂಗಱಿಯಬರ್ಪುದು ನೀಂ ಕೃಪೆಮಾಡೆ ಚೋದ್ಯಮೇ
ನಱಸುವವಂಗೆ ಸಿಲ್ಕದು ನಿಧಾನಮಯತ್ನಪರಂಗೆ ಭಾಗ್ಯದಿಂ
ದಱಸದೆ ಸಿಲ್ಕುವಂತೆ ಪರಮಪ್ರಭುವೇ ಮಹದೈಪುರೀಶ್ವರಾ

ಕ್ಷೀರಸಮುದ್ರಸನ್ನಿಧಿಯೊಳಿರ್ದು ಪಿಪಾಸಿತನಾಗಿ ಭೂಮಿಯಂ
ಹಾರೆಯನಾಂತಗುೞ್ವವನೊಲಾಯ್ತು ಸಮಸ್ತಸುಖೈಕಸಿದ್ಧಿವಿ

ಸ್ತ್ರಾರಕನಪ್ಪ ನಿನ್ನನುಪದಾವಿಸದನ್ಯಮನುಷ್ಯಮಾತ್ರಮಂ
ಹಾರುವ ಬುದ್ಧಿಯೆನ್ನ ಪರಮಪ್ರಭುವೇ ಮಹದೈಪುರೀಶ್ವರಾ

ತನ್ನ ಸತೀಸುತಾನುಚರಬಂಧುಜನಂಗಳುಮಿನ್ನು ಮತ್ತೆ ಮಿ
ಕ್ಕನ್ಯರುಮಾತ್ಮದೇಹಕರಣಾದಿಗಳುಂ ಸಲೆ ತಾನುಮೆಲ್ಲರುಂ
ನಿನ್ನವರೆಂದು ನಿನ್ನೊಡವೆಯೆಂದು ನಿಜೇಶ್ವರಪೂಜೆಗೆಯ್ವವಂ
ಧನ್ಯನದೀಗ ಪೂಜೆ ಪರಮಪ್ರಭುವೇ ಮಹದೈಪುರೀಶ್ವರಾ

ಮಗ್ಗೆಯ ಮಾಯಿದೇವ
(೧೪೩೦)

## ಪ್ರಬೋಧ

ಹಸಿಯದೆ ಹುಸಿಯದೆ ಕುಸಿಯದೆ ನೆಸೆಯದೆ । ಹಸಗೆಡದಖಿಳರೊಳಗೆ ಕಾರುಣ್ಯಂ
ಮಸುಳಿಸದುದ್ರೇಕಿಸದೆ ವೃಥಾ ದೈನ್ಯದಿ ವಿಷಯಂಗಳೊಳು ||
ಪಸರಿಸಿ ಹರಿದಾಡದೆ ಲೌಕಿಕರಿಂ । ವಸನಾಗಿರದೆ ಮನಸ್ಸಂಸಾರದ ।
ಬೆಸುಗೆಯಱಿದು ಸುಱಿಯುತ್ತಿಹನಿಳೆಯೊಳಗೆಂದನು ದೇಶಿಕನು ||

ನೊಂದು ತಾಪತ್ರಯಗಳಿಂದವೆ । ಮುಂದುಗೆಟ್ಟಿಹ ಜಗವ ಕಾಣುತ ।
ಹಂದೆಯಂ ಹಾವಡರಿದಂತವಿವೇಕದಿಂ ತನ್ನ ||
ಬೆಂದ ತುಂದನಿಮಿತ್ತ ಪೆರಱಿಂ। ಕೊಂದು ಕೂಗಿ ನಿರರ್ಥ ನಿರಯದೊ।
ಳೊಂದಬೇಡೆಂದ್ಯೆದೆ ಪೇಱಿದ ದೇಶಿಕೋತ್ತಮನು ||

ವಿಷಯತಳಿರಿಂ ತಳಿತು ಕೊರ್ವಿದ । ದಶವಿಧೇಂದ್ರಿಯಶಾಖೆಗಳನೆ ।
ಣ್ದೆಸೆಯೊಳಿಟ್ಟುದ್ದಾನವಾಗಿ ಶರೀರಭೂರುಹವು ||
ವ್ಯಸನಪುಷ್ಪದಿ ಕರ್ಮಫಲದಿಂ । ದೆಸೆದಿರಲು ತತ್ಫಲವನುಲ್ಲಾ ।
ಲಸದಿ ಮಾನಸವಕ್ಕಿ ವಿಸಟಂಬರಿದು ತಿನುತಿಹುದು ||

ಪಱಿಯದಿಹುದೆ ಧರ್ಮ ತನುವ । ಕೆಳೆಯದಿಹುದೆ ಸಿದ್ಧಿ ಚಿತ್ತ ।
ವಲುಗದಿಹುದೆ ಮುಕ್ತಿ ಮಱಿದು ನುಡಿದ ವಕ್ಕಣೆ ||
ಹೊಳೆಯದಿಹುದೆ ಸತ್ಯ ರೋಷ । ದಳೆಯದಿಹುದೆ ಶಾಂತಿ ಕಪಟ
ವೊಳೆಯದಿಹುದೆ ಸೌಖ್ಯವಿದನು ತಿಳಿಯಲವ ಕೃತಾರ್ಥನು ||

ಹಿಸುಣತೆಗೆ ಹಿಗ್ಗಿ ಮಿಗೆ । ಕಿಸುಕುಳದೊಳೊಗ್ಗಿ ಸಂ ।
ತಸವಟ್ಟು ಕಳವುಹಾದರಹಿಂಸೆಗೆ ॥
ಬೆಸಗೆಯ್ದು ನಿಂದೆತಾ । ಮಸಕುಟಿಲಕುಹಕದೊಳ ।
ಗೆಸೆದು ಮನವಿನಿಸಱೊಳ್ ಬೆಸೆದಿರ್ಪುದು ॥

ಗುರುಬಸವ
(೧೪೩೦)

## ಇಂಚರ

ತಿಂಗಳ ಬಿಂಬಮಂ ಹಿಡಿದು ಹಿಂಡೆ ಪಳಚ್ಚನೆ ಸೋರ್ವ ಸೋನೆಯಂ
ತಿಂಗಡಲಿಂ ಪೊದಟ್ಟಿ ಮರ್ದನೆತ್ತಿದೊಡೊಯ್ಯನೆ ಸೋರ್ವ ಸೋನೆಯಂ
ತಂಗಜನಿಕ್ಷುಕಾರ್ಮುಕವನೇಱಿಸೆ ಜುಮ್ಮನೆ ಸೋರ್ವ ಸೋನೆಯಂ
ತೇಂ ಗಡ ಸೀಯನುಣ್ಮಿದುದೊ ಗೇಯದ ಮೆಲ್ಲುಲಿ ಜಾಣಗಾಣನ

ಮದನನ ಕರ್ವುವಿಲ್ಗೆ ತಿರುವಾದೆಳದುಂಬಿಯ ಝುಂಕೃತಸ್ವನಂ
ಮದನನ ಬೀರಮಂ ಬೆಳಪ ಮೋಹನಬಾಣದ ಭೀಂಕೃತಾರವಂ
ಮದನನ ಮುಂದೆ ಬರ್ಪ ರತಿದೇವಿಯ ನೂಪುರಶಿಂಜಿತಂ ದಿಟ
ಕ್ಕಿದು ಪೆಱತಲ್ಲೆನಿಪ್ಪ ತೆಱದಿಂ ಪೊಱಪೊಣ್ಮಿತು ವಾಸದಿಂಚರಂ

## ನೀತಿ

ಒಡಲ ಪೊಡರ್ಪು ತುಟ್ಟಿಸಿದಮುನ್ನ ನಿಜೇಂದ್ರಿಯವರ್ಗ ದೇಟಿಗ್ಗಿಯೊ
ಗ್ಗುಡಿಸದಮುನ್ನ ಮುಪ್ಪು ಮುಱಿದೊತ್ತದಮುನ್ನ ಲಲಾಟದಕ್ಕರಂ
ತೊಡೆಯದಮುನ್ನ ನಿಮ್ಮ ಪದಮಂ ನೆಱೆ ಪೂಜಿಸವೇಟ್ಕುವೈದೆ ನೀ
ರಡಸೆ ಬಱಿಕ್ಕೆ ಬಾವಿಯನಗಟ್ಟುಪರೇ ಗುರುಮೂರ್ತಿಶಂಕರಾ

ಬಯ್ದೊಡೆ ಮೇಳವಾಡಿದನೆನುತ್ತಪರಾಧಮನಿಟ್ಟು ಸಾವಪೋಲ್
ಪೊಯ್ದೊಡೆ ಬುದ್ಧಿವೇಟ್ಟನೆನುತರ್ಥಮನೊಯ್ದೊಡೆ ತಾನೆ ಕೊಟ್ಟುತಾ
ನೊಯ್ದನೆನುತ್ತೆ ನೂಂಕಿದೊಡೆ ಬಾಗಿಲೊಳಿರ್ಪನೆನುತ್ತುಮಾಳ್ದನಿ
ತ್ತುಯ್ದುಪಣಕ್ಕೆ ಮಾಱಿ ತನುವಂ ಪೊರೆದೇಂ ಗುರುಮೂರ್ತಿಶಂಕರಾ

ತುಡುಗುಣಿಯಂತೆ ಬೆಂದ ಮನಮೆಲ್ಲೆಡೆಗೆಯ್ದುವುದೆಯ್ದದೊರ್ಮೆ ನಿಂ
ದೊಡೆ ಭವದಿಂ ಭಯಂ ಬಿಡದು ಬಿಟ್ಟೊಡೆ ಬಲ್ಲರ ಗೊಟ್ಟಿಗೊಲ್ಲದೊ

ಲ್ದೊಡೆ ಚಪಲತ್ವಮಂ ಬಿಡದು ಬಿಟ್ಟೊಡೆ ಭಕ್ತಿಯೊಳಿರ್ಪೆನೆನ್ನದೆಂ
ದೊಡೆ ನೆಲೆಗೊಳ್ಳದಿನ್ನಿದಕೆ ಪೇೞ್ ಗತಿಯಂ ಗುರುಮೂರ್ತಿಶಂಕರಾ

ಮುನಿವವನಾದೊಡಂ ಪರರ್ಗೆನೋವನೊಡರ್ಚದೆ ರಂಭೆಯಾದೊಡಂ
ವನಿತೆಗೆ ಮೆಚ್ಚಿ ಸಿಲ್ಕದೆ ದರಿದ್ರತೆಯಾದೊಡಮರ್ಥಿಗೇನುಮಿ
ಲ್ಲೆನಿಸದೆ ಹಾನಿಯಾದೊಡಮುಸತ್ಯವ ಪೇೞದೆ ಬಾೞ್ವ ಮರ್ತ್ಯನೇ
ಮುನಿವರನಾತನಾಚರಣೆಯುಗ್ರತಪಂ ಗುರುಮೂರ್ತಿಶಂಕರಾ

ಚಂದ್ರಕವಿ
ಸು. (೧೪೩೦)

## ಸದ್ಧರ್ಮ ದುರ್ಗ

ಧರ್ಮವನೊಲ್ಲದೆ ಭೋಗಕ್ಕೆ ಹರಿವಾತ|ಕರ್ಮವಶದೊಳ ಮೃತವನು|
ನಿರ್ಮಲಸೌಖ್ಯಕಾರಣವೆಂದಱಿಯದೆ | ದುರ್ಮತಿ ಕಾಲ್ಗೊಳಿವಂತೆ ||
ಬಾಲಕನೆಂದು ಕೃಪೆಯ ಮಾಡಿ ಬಿಡನವ|ಮೇಲೆನಿಸುವ ಹಿರಿಯರನು
ಪಾಲಿಸಬೇಕೆಂಬವನಲ್ಲ ಮನದಲ್ಲಿ | ಕಾಲನೆಂಬವ ಪಾತಕನು ||

ಜೀವನು ಪೋಗೆ ತತ್ಕ್ಷಣದಲ್ಲಿ ಹೆಣನೆಂದು|ಓವದೆ ಸುಡುವರುಬೇಗ|
ಈವಿದ ಗುಣವಿಲ್ಲದಿರೆ ನಡೆವೆಣನೆಂಬ | ರೀವಿಧ ನೋಡಿರೆ ದೇಹ ||

ಸುರಲೋಕಂಗಳ ಪೊಕ್ಕೊಡಂತಿರದೆ ತಾಂ ಪಾತಾಳಮಂ ಪೊಕ್ಕೊಡಂ|
ಗಿರಿದುರ್ಗಂಗಳ ಪೊಕ್ಕೊಡಂ ಶರಧಿಯಂಪಾಯ್ದಲ್ಲಿ ಪೊಕ್ಕಿರ್ದೊಡಂ ||
ಭರದಿಂ ಪರ್ವತದಗ್ರದಲ್ಲಿ ಗುಹೆಯಂ ಪೊಕ್ಕಿರ್ದೊಡಿಂತೆಲ್ಲಿಯುಂ |
ಶರಣಿಲ್ಲಂ ಪೆಱತಾವ ಠಾವು ನಿನಗಂ ಸದ್ಧರ್ಮದುರ್ಗಂ ವಿನಾ ||

**ವಿಜಯಣ್ಣ**
(೧೪೪೮)

## ಪರವೆಯ ಸೌಂದರ್ಯ

ಎಳವಿದಿರ ಕೋಮಲತ್ವವನಾಂತು ನಳನಳಿಪ
ನಳಿತೋಳು ರಂಜಿಸಿತು ನುಣ್ಮೊಲೆಗಳಿಡಿಕಿಱಿದು
ಬಳೆದು ಸೆಳೆನಡುವಿಂಗೆ ಬಿಣ್ಪಾಯ್ತು ತನು ಕನಕಚಂಪಕದ ಪುಷ್ಪದಂತೆ
ಪೊಳೆದು ನಱುಗಂಪ ಬೀಱಿದುದಿಂದ್ರನೀಲಮಣಿ
ಯೊಳಗಣ ತಿರುಳ್ಗೆ ತೊಣೆಯಾದುವಾ ಕುರುಳ್ಗಳು
ಜ್ವಳಿಸಿದುವು ಕದಪು ಕಣ್ಗೊನೆ ಧವಳಕಾಂತಿಯಂ ಪಡೆದುದಂದಾ
ಪರವೆಗೆ

ತಳಿರಮೇಲಂಗಜನ ಬತ್ತಳಿಕೆಯದಱಮೇ
ಲೆಳವಾೞಿಗಂಬವದಱಗ್ರದೊಳು ಗಿರಿಯ ತ
ಪ್ಪಲು ತಪ್ಪಲಗ್ರದೊಳು ಲತೆ ಲತೆಯಮೇಲೆ ಪೊಂಗೊಡಮದಱ
ಕೆಲಬಲದೊಳು
ಲಲಿತಚಂಪಕಮಾಲೆಯದಱಗ್ರದೊಳು ಶಂಖ
ಬೞಿಕವಱಮೇಲೆ ರನ್ನದ ಮುಕುರವದಱಮೇ
ಲಳಿಕುಳ ಮಯೂರವಿರ್ದಪುವೆನಲು ಪರವೆಯಾಕಾರ ಕಣ್ಗೆಸೆ
ದಿರ್ದುದು

ಬೆರಸಿ ಕಟ್ಬಾಸೆಯೊಡನೆಯ್ದಿ ದಾನಾರ್ಥಿಯಾ
ಗೆಱಗಿದ ಸದಾಳಿಗಳ ತೆವರಿ ನಿಸ್ಸಾರತೆಯ
ಧರಿಸಿ ಪುಷ್ಪತಲತೆಯೊಳೊಂದಿ ನಲವಿಂ ಪಲ್ಲವಗ್ರಾಹಿಯಾಗಿ ಮೆಱೆವ
ಕರಿಗಿರಿಗಳಳಿಗಿಳಿಗಳೆಂತು ಸರಿಯೆನಿಪುವೀ
ಪರವೆನಾಚಿಯ ಮಂದಗತಿಗೆ ವಿಸ್ತೀರ್ಣಪೀ
ವರಪಯೋಧರಕೆ ನುಣ್ಗುರುಳಿಂಗೆ ಮಧುರೋಕ್ತಿಗಳಿಗೆಂಬ
ವೋಲೆಸೆದಳು

**ಬೊಮ್ಮರಸ.** ಸು. (೧೪೫೦)

## ಸಾಹಿತ್ಯಜ್ಞರ ಅಪೂರ್ವತೆ

ಕಲ್ಲು ಕರಗುವುದುಗ್ರಫಣಿ ಸೋಲ್ವುದೊಣಮರಂ
ಪಲ್ಲವಿಪುದೆರಲೆ ಸಿಲುಕುವುದು ಪಶು ಮೋಹಿಪುದು
ನಿಲ್ಲದಱುವೆಳವಸುಳೆ ಸಂತಸಮನೆಯ್ದುವುದು ಮುಗಿಲೊಸರ್ದು ಮುಱಿಗಱಿವುದು
ಸಲ್ಲಲಿತಸಂಗೀತರಸಕೆ ಸಾಹಿತ್ಯಮುಂ
ಬಲ್ಲನೊರ್ವನಪೂರ್ವವೀಧರಿತ್ರೀವಳಯ
ದಲ್ಲಿ ರಸಭಾವಾರ್ಥಚಿತ್ರವಱಿವುದು ಸುಲಭವಲ್ಲ ಸಕಲರ್ಗ್ಗದಾಗಿ

**ಚತುರ್ಮುಖ ಬೊಮ್ಮರಸ**
(೧೫೦೦)

## ೭೯. ಶ್ರೀ ರಾಮನ ವನವಾಸಪ್ರತಿಜ್ಞೆ

ಮಗನೆ ಬಂದೈ ಇನಕುಲಾಂಬರ
ಗಗನಮಣಿ ಬಂದೈ ಮನೋರಥ
ಸುಗುಣ ಬಂದೈ ಸೂನೃತವ್ರತ ಬಂದೆಯೈಯೆನುತ
ಉಗುವ ನಯನೋದಕದಲರೆದಿ
ಟ್ಟಿಗಳ ನೋಟದಲಪ್ಪಿ ಸತ್ಯದ
ತಗಹಿನವನೀನಾಥನಾ ರಘುನಾಥಗಿಂತೆಂದ

ಕಂದ ಕೇಳೆನ್ನಣುಗ ಕೇಳಾ
ನೊಂದ ನೆನೆದರೆ ದೈವ ತಾ ಬೇ
ರೊಂದ ನೆನೆದುದು ದೈವಗತಿಗೀ ಕೈಕೆಯನು ಸಾರಿ
ಎಂದು ಮೇಲುತ್ತರಕೆ ನಾಲಗೆ
ಬಂದು ಬಂದೊಳಸರಿದು ಮೆಲ್ಲನೆ
ನಿಂದು ಬಳಕೀ ಮಾತನೆಂದನು ಕಲಿಸುಮಂತ್ರಂಗೆ

ಈಸುದಿನ ಪರಿಯಂತ ವಿಭವದ
ವಾಸ ಸೊಬಗಿನ ಸಜ್ಜೆ ಸುಖದ ಸು-
ದೇಶ ಸುಮ್ಮಾನದ ಸುಧಾಂಬುಧಿ ಸಿರಿಯ ನೆಲೆವೀಡು
ಲೇಸಿನಾಗರ ಶುಭದ ಬಹುಳಿತ
ಕೋಶ ಸಂತಸದಿರ್ಕೆ ಸೊಂಪಿನ
ವಾಸವಾಗಿರ್ದುದು ನಿವಾಸವಿದೆಂದನಾ ಭೂಪ

ಅಶುಭದಾಡುಂಬೊಲನು ಕುಹಕದ
ವಿಸರ ಚಿಂತೆಯ ಸಂತೆ ದುಃಖದ
ವಸತಿ ದುಗುಡದ ಬೀಡು ದುಮ್ಮಾನದ ಜನಿಸ್ಥಾನ

ಅಸುಖದಾರವೆ ಭೇದ ಪುದಿದಾ
ಯಸದ ಜಾಳಿಗೆ ಜವನ ಮನೆ ರ–
ಕ್ಕಸಿಯ ಮಠವಾಯ್ತಿಂದು ಭವನವಿದೆಂದನಾ ಭೂಪ

ಹೇಳಿ ಫಲವೇನೆಲೆ ಸುಮಂತ್ರಕ
ಮೇಲನರಿಯದೆ ಕೊಟ್ಟೆನೀ ಘಾ
ತಾಳಿಗಸುರಾಮರರ ಸಂಗ್ರಾಮದಲಿ ವರವೆರಡ
ಬಾಳ ಚಾಚಿದಳಿವಳೆನಗೆ ಗೋ
ನಾಳಿಗೊಡ್ಡಿದೆಯಿಂದು ಬಂದೀ
ನಾಲಗೆಗೆ ನರಸೊಕ್ಕನಿಕ್ಕಿದಳಿವಳು ತನಗೆಂದ

ಬಟ್ಟೆಗುತ್ತರವಿದ್ಯವಱಿಯದೆ
ಕೊಟ್ಟರುಂಟೆಲೆ ಮಂತ್ರಿ ಕೇಳ್ ಮನ
ಮುಟ್ಟಿ ನುಡಿಯಲಿ ಭಾವಿಸದೆ ಸದ್ಧರ್ಮಮಾರ್ಗದಲಿ
ಕೊಟ್ಟ ವರವೆರಡುಂಟು ಬೇಡಲು
ಕೊಟ್ಟರವರಿಂದೀಗ ಹೊದಕುಳಿ
ಗುಟ್ಟುತಿಹರಿದನರಿಯೆ ನೀ ಕೇಳೆಂದಳಾ ಕೈಕೆ

ಬಂದುದೆನಗಪಕೀರ್ತಿ ರಾಜ್ಯವ
ನೊಂದುವರದಲಿ ಬೇಡಿದೆನು ನಿಜ
ನಂದನಂಗೊಂದರಲಿ ರಾಮಂಗಡವಿಯೊಡೆತನವ
ಇಂದುಮುಖಿಯರ ಸಾಕ್ಷಿಯಲಿ ಮೊದ
ಲೊಂದಿಸಿದರೆನಗೀವರವ ನೀಂ
ಬಂದ ಬಳಿಕನುಮಾನವಾಗಿದೆ ನಿಮ್ಮ ರಾಯಂಗೆ

ಮನುಕುಲದ ರಾಯರಲಿ ಹುಸಿ ಸಂ
ಜನಿಸದೆಂದೊಳಗರಿಯದೆನ್ನಯ
ತನುಜಗಧಿರಾಜತ್ವವನು ಬೇಡಿದೆನು ನಿಮ್ಮವರ
ಇನಿತುಸತ್ಯಕೆ ಮರಳದಲೆಯಿಪ
ರೆನಗೆ ದೊಡ್ಡಿತೆ ಸಾಕು ರಘುನಂ
ದನಗೆ ಪಟ್ಟವ ಕಟ್ಟಿ ನೀಂ ನೆರೆದೆಂದಳಾ ಕೈಕೆ

ದೊಡ್ಡಿತೇಕ್ಷತ್ರಿಯರಿಗೀ ಕಡು
ಖಡ್ಡತನವಿರಬೇಕು ರಾಮನಿ
ಗೊಡ್ಡಿದೀ ಕವಲೊಂದ ತಪ್ಪಿಸೆ ನೆನೆದ ಮತಿ ಲೇಸು
ಒಡ್ಡಿದುದಿದಪಕೀರ್ತಿವಧು ಸಲೆ
ದೊಡ್ಡಿದರು ರಘುಸಗರರವರೊಳ
ಗಡ್ಡನಗೆ ಹೊಗದಂತೆ ಮಾಡುವುದುಚಿತ ನಿಮಗಿಂದು

ಸುತವಿಯೋಗದಲಳಿಯದಿರನೀ
ಕ್ಷಿತಿಪ ನೀವಿಂದುಗ್ರಪಾತಿ
ವ್ರತೆಯರೊಳಗಗ್ಗಳರು ನಿಮ್ಮನು ನೆಮ್ಮುಗಪಕೀರ್ತಿ
ಕ್ಷಿತಿಯ ಕುಜನರ ಜಿಹ್ವೆ ಕಡುಕೂ
ರಿತಿದನರ್ಥದಿನಪನಿಪಾಲ
ಚ್ಯುತಿಗೆ ಮನವನು ಮಾಡುವುದು ನಿಮಗುಚಿತವಲ್ಲೆಂದ

ಇರಲಿ ನಿಮ್ಮ ಕುಮಾರನೀ ಧರೆ
ಯರಸುತನದಲಿ ರಾಘವೇಶ್ವರ
ನಿರಲಿ ಭೂಸುರನಾಗಿ ರಾಜರ್ಷಿತ್ವದಲಿ ಬಳಿಕ

ಇರಲಿ ರಘುಪತಿ ನಿಮಗೆ ಮೆರೆವುದು
ಧರೆಯ ಸಿರಿ ಮನ್ವಾದಿರಾಯರ
ತರುಣಿಯರು ನಗದಂತೆ ಮಾಡುವುದುಚಿತ ನಿಮಗೆಂದ

ಬೇಡಿದೀ ವರದಿಂದ ನೃಪತಿಯ
ಕೂಡಿಕೊಂಡು ವನಪ್ರವಾಸವ
ಮಾಡುವೆನು ಮರೆಯೇನು ಮನದನುತಾಪವಿನ್ನೇಕೆ
ಖೋಡಿ ನಿಮಗಾಗದವೊಲೀ ನೃಪ
ನಾಡಿ ಹುಸಿ ಹೊಗದಂತೆ ಕೀರ್ತಿಯ
ಜೋಡಿಸುವೊಡಿದು ಸಮಯವೆಂದು ಸುಮಂತ್ರ ಕೈಮುಗಿದ

ಬಿಡು ಸುಮಂತ್ರ ಕುಮಂತ್ರಕೃತ್ಯವ
ನಡೆಸಬೇಡೆಮ್ಮೊಡೆನೆ ರಘುಗಳ
ಮಡದಿಯರು ನಗಲೆಮ್ಮನೆಮ್ಮಲಿಯಾದ ದುಷ್ಕೀರ್ತಿ
ಒಡರಿಸಲಿ ಪುನರುಕ್ತಿ ನಮ್ಮಯ
ನುಡಿಗೆ ಹೊಗದಾಂಬಲ್ಲೇ ಜಂ
ಜಡೆಯತನವನು ಕೆಲಕೆ ಸಾರೆಂದಳು ಸುಮಂತ್ರಕನ

ಇದು ಯಥಾರ್ಥ ಸುಮಂತ್ರ ನೀನಾ
ಡಿದ ಸುಭಾಷಿತವೆಂದು ನಂಬಿಹು
ದದಕೆ ಹೊಲೆ ಹೊಗದಂತೆ ನಡೆಸುವೆವೆಂದು ಮುನಿ ನುಡಿಯೆ
ಗದಿಸಬೇಡಿನ್ನಾತನಾಡಿದ
ತುದಿಯ ಕೊಸರನು ನಿಮ್ಮರಾಯನ
ವದನದಲಿ ನುಡಿ ಹುಟ್ಟಲೆಂದಳು ಕೈಕೆ ಮುನಿಪತಿಗೆ

ಐಸಲೇ ನೀ ಬೇಡಿದುದು ತಾ
ನೇಸುದೊಡ್ಡಿತು ತಂದೆಯಾಡಿದ
ಭಾಷೆಗಿದೆಕೋ ಭಾಷೆಯೆನುತಾ ಜನನಿಗಾ ರಾಮ
ಲೇಸುಮಾಡಿದಿರನ್ನೃತವೆಮ್ಮವ
ನೀಶನಲಿ ಹೊಗದಂತೆ ಘಟದಲಿ
ಕಾಸದಿರಿ ಕಲ್ಮಷವ ಗಡ ! ಅನ್ವಯದ ಭೂಷಣವ

ಭರತನಾಳಲಿ ರಾಜ್ಯವನು ನೀಂ
ನರಪತಿಯ ಚರಣಾರವಿಂದದ
ಪರಮಸೇವಾನಿರತರಾಗಿರಿ ನಿಮ್ಮನುಜ್ಞೆಯಲಿ
ಚರಿಸುವೆನು ವನವಾಸವನು ಗೋ
ಚರಿಸುವೆನು ನೀಂ ನುಡಿದ ವರುಷದ
ಪರಿಗಣನಪರಿಯಂತವೆಂದನು ಕೈಕೆಗಾ ರಾಮ

ಆ ಸತಿಯನುಪಚರಿಸಿ ಪಿತನಾ
ಯಾಸವನು ಶ್ರುತಿಧರ್ಮಶಾಸ್ತ್ರವಿ
ಳಾಸವಚನಾಲಾಪದಿಂದನುತಾಪವನು ಬಿಡಿಸಿ
ಆ ಸಕಲ ಲೋಕೈಕ ಲೀಲಾ
ವಾಸ ತೊರವೆಯ ರಾಯನಾ ವನ
ವಾಸವನು ಕೈಕೊಂಡನಮರೇಂದ್ರಾದಿಗಳು ನಲಿಯೆ

**ಕುಮಾರ ವಾಲ್ಮೀಕಿ–ತೊರವೆಯ ರಾಮಾಯಣ**

ಸು. (೧೫೦೦)

# ೮೦. ಪ್ರಾಣಲಿಂಗಿ ಬಸವಣ್ಣ

ಶ್ರೀಮದಖಿಳಾಗಮಾರ್ಣವ ಮಥನಗೈದು ನಿ
ಸ್ಸೀಮ ನಂದೀಶ ಪ್ರಮಥರ್ಗಮಲವಚನರಚ
ನಾಮಹಾವಸ್ತುವಿಸ್ತೀರ್ಣಮಂ ಸ್ಥಲವಿಟ್ಟನಾ ಮಂತ್ರರಹಸ್ಯಾದಿಯ
ಭೂಮಿಯ ಶಿವಾರ್ಚಕರ್ಗೊರೆದ ಬಸವೇಶ್ವರನ
ನಾಮಾಮೃತಾಕೃತಿಯ ವಿಶ್ವೇಶನಮಲಪದ
ತಾಮರಸಷಟ್ಚರಣ ಷಟ್ಪದಿಗಳಿಂ ಸಿಂಗಿರಾಜಾಂಕನೆನಲದೆಂತೊ

ಪ್ರಾಣಲಿಂಗಿಸ್ಥಲದ ಶಬ್ದ ನಿರ್ವಚನಪ್ರ
ಮಾಣಮಂ ಚಿತ್ತೈಸಿ ಪರಮಾರ್ಥದರ್ಶನಿ
ರ್ವಾಣ ವಾಣೀಶರಾತ್ಮಾದ್ಯಷ್ಟತನುತತ್ತ್ವ ಪ್ರಾಣಾಶ್ರಮಸ್ಥವಾಗಿ
ಪ್ರಾಣಲಿಂಗಿತವಖಿಲಪ್ರಾಣಪವನಂಗಾತ್ಮ
ನಾಣತಿಯ ವ್ಯವಹರಣೆಯಾಗಿಪ್ಪುದಾಗ್ಯದಱ
ಕೇಣವಾಯು ಪ್ರಾಣಿಪದವಲ್ಲದದು ಲಿಂಗಸಂಗಪ್ರಾಣಾಂಗವಲ್ಲ

ಎಂಬಕಾರಣ ಲಿಂಗದಂಗ ಜಂಗಮಮುಖವ
ನಿಂಬುಗೊಂಡಿಹುದಾಗಿ ಲಿಂಗಜಂಗಮಪ್ರಾಣ
ಸಂಬಂಧಶಿವಶಕ್ತಿ ಶಿವನಂತೆ ಬೇರು ಬೇಱಿಲ್ಲ ದೇಹದ ಭಾವದ
ಕೊಂಬ ಕೊಡುವಂಗವಂದಬುಜನಾಳದ ಸೂತ್ರ
ದಂಬುವಿನ ತೆಱ ಲಿಂಗಜಂಗಮದ ಪ್ರಾಣತ್ವ
ಸಂಭವಿತ ಬಸವಗಿದು ಬಸವನಿರ್ಮಿತ ತತ್ತ್ವದರ್ಶದೇಳ್ಗೆಯೊಳಭವನು

ನೋಡಲ್ಕೈತಂದಂತಿರೊರ್ವ ಶರಣನು ಕಳಾ
ರೂಢ ತಾಂ ಬಂದು ಬಾಗಿಲೊಳು ನಿಂದೊಳಗೇನ
ಮಾಡುವನು ಬಸವಣ್ಣನೆನೆ ದ್ವಾರಪಾಲಕರ್ಮೇಲಱಿಯದುತ್ತರವನು

ನೀಡಿದರನವಸರವವೇಳೆ ನಿದ್ರೋಪದ್ರ
ವಾದಡುಪ್ಪವಡವಾಗಲ್ಬನ್ನಿಮೆನಲಾಹ
ಪಾಡಿಲ್ಲ ಜಂಗಮಪ್ರಾಣಿಯಂ ನುತಿಸುಲೇಸೆನುತ ನಸುನಗುತ ಪೋಗೆ

ಮುಂದೆ ಮುಂದಡ್ಡಬಿದ್ದೊಂದು ಚಿದ್ರೂಪಕಳೆ
ವಂದಿಸುತ ಶರಣಾರ್ತಿಯೆನುತಲಶರೀರಾನು
ಬಂಧದಿಂದವರ ಪದವಿಡಿದು ಬಸವನ ಪ್ರಾಣವವರನೊಡಗೊಂಡು ಪೋಗೆ
ಎಂದಿನಂತುಪ್ಪವಡವಹ ವೇಳೆಯವಸರಕೆ
ಬಂದು ಪರಿಚಾರಕರ್ಕಸ್ನೈಗೆಯ್ಯೆ ಶ್ಲಾ
ಘ್ಯೆಂದಂದುವಿಲ್ಲದಿರೆ ನಿಜರಾಣಿಯಂ ನಿದ್ರೆದಿಳುಪೆಂದು ಕಳುವೆ ಹೋಗಿ

ಚರಣವಿಡಿದಳ್ವಾಡೆ ನಿರ್ಜೀವ ಕಳೆದೋಱೆ
ಕರಣವಂ ಕೈದುಡುಕಿ ತಡವುತಂ ತದ್ದೇಹ
ಸ್ವರಪರಮಪ್ರಾಣಪ್ರವರ್ತನಮನಾರೈವುತಂ ಮುಗಂದೆಗೆದು ನೋಡೆ
ಹರಣಹಾರಿತ ಕಂಡು ಹರಹರ ನಮಃ ಶಿವಾ
ಯುರುತರ ಪರಮಪದವೆ ಕಂಡನೇ ಯೆನುತ ಶ್ರೀ
ವರಮುಕ್ತಿಕಾಂತೆಯುತ್ಸವಕೆ ನಿಚ್ಚಣಿಕೆಗೊಟ್ಟಂತೆ ಕಟ್ಟಿದಳು ಗುಡಿಯ

ವರಕೆ ಪರವಾಗಲಿಹ ಪರಿಚರಿಯುಗೈವಂತೆ
ಪರಮಪ್ರತಿಷ್ಠಿತಾರಾಧ್ಯದೇವತೆ ಭಕ್ತಿ
ಸಿರಿಯು ಸಿಂಗರಗಳೆಸಗುತ್ತಿರಲು ವಿಸ್ಮಯಂಗೊಳುತಖಿಳ ಶರಣಜನರು
ಹರಿತರುತಿರಲ್ಕೆನ್ನಬಸವೇಶ ಬಂದು ಗುರು
ಚರಣವಂ ಕಂಡೆಱಗಿ ಕಾರಣವಿದೇಂದಾಗ
ದಿರದೆನುತ ಹೊಲಬಿಗಂ ಹೊಲಬಱಿಯಲೊಳವಿಚಾರಂಗೊಳುತ
ಬಾಗಿಲವರ

ಬರಿಸಿ ಬೆಸಗೊಂಡನೊಡೆಯರ್ಪವಡಿಸಿದ ಬಳಿಕ
ಲುರವಣಿಸಿ ಹೊಕ್ಕರಾಪ್ಪೊಜಮಟ್ಟರಾರು ಹೊಸ
ಬರದಾರು ಬಂದರೆನಲಾವುದೊಂದಿಲ್ಲ ಒಬ್ಬಯ್ಯ ಬಂದೊಡೆಯರಿಪ್ಪ
ಪರಿಗೇಳೆ ಪವಡಿಸೈದರೆಯೆನಲ್ಕಣಕದಿಂ
ಚರಲಿಂಗಪ್ರಾಣಿಯಹುದಹುದೆನುತ ಹೋದರೆನೆ
ನಿರುತವಿದು ನಿಯತಪದವೆನುತವ್ಯತಸಂಜೀವಿನಿಯನರಸುವೋಲಯ್ಯನ

ಅಜಿಸುತಿರಲಿದಿರಾಗ ಬರುತಿರ್ದ ತನಗೆ ಬಿಡ
ದೆಜಿಗುತಿಹ ಶರಣಸಂಬಂಧ ಸೋಂಕಿನ ಸೋಹೆ
ನಿಜುಗೆಯ ನಿಜವನಿಧಾನಿಸಬಂದವರ್ಮದಂತಜುಹಿ ಬಿನ್ನಹ ಮಾಡಲು
ಬೆಜಗಿನಲಗಿಂದಜೀವನೆಚ್ಚಂತೆ ಬೆಚ್ಚಿ ಹರ
ವಜೀಯದುತ್ತರವೆಸಗಿತಪರಾಧವೆಂದಯ್ಯ
ಮಜುಗುತ್ತೆ ಬಸವ ಬಸವಾ ಯೆನುತ ಬರುತಿರಲು ಶರಣು ಶರಣೆನು
ತಿರ್ದನ್ನು

ಜೀವಪರಮಾತ್ಮರಾತ್ಮತ್ರಯಂತ್ರದ ಸೂತ್ರ
ಭಾವಿತಸುಷುಪ್ತಿ ಪ್ರತ್ಯಕ್ಷವಾದಂತೆ ಯಾ
ದೇವತಾಂಶಿಕಪ್ರಾಣಿ ಬರೆ ವೃಷಭಚರಲಿಂಗನಾಗಾ ಯುತಪ್ರಾಣನು
ಆವ ಸಂಧಾನಚಂಚಚ್ಚಮತ್ಕೃತಿ ಸೋಂಕ
ದಾವ ಮಹಲತೆಯ ತಲ್ಲಣಜಂಗಮಪ್ರಾಣಿ
ಸಾವಧಾನಿತ ಬಸವಲಿಂಗಮಂಗಳಮೂರ್ತಿಕೀರ್ತಿ ಕಣ್ದೆಜೆದೊಲಾಯ್ತು

ಆದರಿಸಿ ಮತ್ತೊಂದು ಮಹಿಮಾಂತರಂಗಪ್ರ
ಭೇದಮಂ ಶಂಭುವಿಗೆ ಸಾಂಬಲೋಕದೊಳುಂಟೆ
ನಾದಿಯಂತಃಪುರವದಕ್ಕೆ ನಿತ್ಯಾದಾಯಮುಖಕೆ ನಿತ್ಯರು ಸಲುತಿರೆ

ಆದುದಿಲ್ಲಾದಾಯುವೆಂಬಭವಗೊಂದಿನಾ
ಪ್ಪಾದಿಗಣವರರು ಬಿನ್ನೈಸೆ ಕಲ್ಯಾಣದೊ
ಳ್ಶ್ರೀವಗೇತಯ್ಯನೆಂಬಯ್ಯನೈದನೆ ತಂದು ಸಲಿಸಿ ನಿತ್ಯತ್ವಕೆನಲು

ಶ್ರೀ ಸದಾಶಿವ ನಿರೂಪಣನಿರೂಪಿತ ಬ್ರಹ್ಮ
ಕೋಶವಾಗಲು ತೆಗೆದು ಹಂಸಹಂಸಾರೂಢ
ದೀಶತ್ವದೀಶಪದ ಪದಕೆ ಪರ್ಬಿತ್ತೈಕ್ಯಕೇತನ ಪ್ರಭಾತ್ಮಜ್ಯೋತಿ
ಪಾಶ ಪಱಿಯಿತನಱಿದು ಭಕ್ತಿ ವೈಭವದ ವಿ
ಶ್ವಾಸಕಾಯುವ ಕಾಶ್ಯಪಿಯಭರ್ಗಗಾರ ಪ್ರ
ವೇಶಪ್ರತಿಷ್ಠಿತಾಗಮವಿಧಾನಕ್ಕೆ ನಿಜಪುರಗಣೇಶ್ವರರು ನೆರೆದು

ಪೃಥ್ವಿಯ ಮಹನ್ಮಹಾಗಣಸಭಾಪರ್ವಸಂ
ಪತ್ತಿನೊಳು ವೀರ ಬಲಮೇರು ದೂಷಕಮದೋ
ನ್ಮತ್ತಗಜಸಿಂಹ ಮಡಿವಳದೇವ ಸಿಂಹಾಸನಕ್ಕೇಕೆ ಬಾರನೆಂದು
ಉತ್ತ್ರಯ್ಯಸಿರೆ ಕಳುಹಿ ಕರೆಸಲಾರಾರ್ಬಂದ
ರೆತ್ತಣವಿಚಾರವೆನೆ ಕೇಳಿದೇವನು ದೇವ
ರತ್ತನಡೆದೊಡೆಬಸವರಾಜ ಮೊದಲಾದಗಣಮುಖ ಮೂರ್ತಿಗೊಂಡು
ದೆನಲು

ಇನ್ನು ನುಡಿಯದಿರಾವು ಕೇಳೆವಾ ಮಾತ ಬಸ
ವಣ್ಣನೆಂಬವ ಶಿವದ್ರೋಹ್ಯವನ ಮನ ಮುಖದ
ಕಣ್ಣ ನಜಲಿಂಗತಲ್ಪಕನಿರಲ್ಬಾರೆವೆನಲಾತ ಬಂದಂದುದನ್ನೆ
ಬಿನ್ನಪಂ ಮಾಡೆ ಸಭೆ ವಿಸ್ಮಯಂಗೊಳಲಾತ
ಚೆನ್ನಬಸವನ ಮೊಗಂ ನೋಡೆ ವರ್ಮಸ್ಥಲದ
ಸನ್ನೆಯ ನಿರೀಕ್ಷಿಸಲ್ಮನದ ಮೈಲಿಗೆಗಳೆವ ಮಡಿವಳಗೆ ಶರಣೆನುತಲಿ

ಎನ್ನಯ್ಯನುನ್ನತವಚನದಲಗು ಮಱಹೆಂಬ
ಕನ್ನಗಳ್ಳನನಿಱಿದುದಾಹ ಯೆನುತಲ್ಲಿಯೆ
ಸನ್ನಿಹಿತ ಕಾರಣಾತ್ಮನ ಕೈಯ ಪ್ರಾಣಗೊಟ್ಟಟ್ಟಿಯಾ ಮುಕ್ತನೊಳಗೆ
ಭಿನ್ನವಿಲ್ಲದೆ ಬೆರೆಸು ಯೆನುತೆ ಕಣ್ಮುಚ್ಚೆ ಬಸ
ವಣ್ಣನ ಹರಣ ಹಱಿದು ಕೂಡಿತವರೊಳಗಿತ್ತ
ಉನ್ನತನಿಕಾಯನಿಪ್ರಾಣಿತಪವನಪಂಜರಂ ವರ್ಮ ಧರ್ಮವಾಗೆ

ಪರೀಕ್ಷಾನಿರೀಕ್ಷಣದ ಭ್ರಾಂತಳಿದು ಸರ್ವಗಣ
ಚರಲಿಂಗ ಚಂಚಲಿತರಾಗಿ ಭಕ್ತಿಯ ಭಾಗ್ಯ
ಸಿರಿಯ ಸೂಱೆಯ ಕಳೆದ ವರ್ಮ ಕರ್ಮವ ಕಳುಹಿ ಮಡಿವಳನೆ ದಾಸೋಹದ
ಕರುಹ ಕರಗಿಸಿದ ಕಲ್ಯಾಣಕೈಲಾಸವೆಂ
ಬುರುತರದ ಗರುಡಿಯಂ ಸುಟ್ಟನಿನ್ನಾತಂಗೆ
ಬರುವ ಪರಿಣಾಮವೇ ಯೆನುತಲಾಕ್ಷೇಪಮುಖದೊಳು ಚರರ ಕಳುಪೆಹೋಗಿ

ಕರ್ಮವಾಕ್ಯಾಸ್ತ್ರವಂ ಕೊಟ್ಟರಿದನೊಯ್ದು ಶಿವ
ಧರ್ಮಸಭೆಗಾಂ ತೋಱೆ ಬಸವೇಶ ಕೇಳುತ್ತ
ಲೆಮ್ಮಯ್ಯ ಮಡಿವಾಳ ಶರಣು ಶರಣೆನುತ ಸಂದನು ಶಿವಪದಕ್ಕೆಂದಡೆ
ದಿಮ್ಮನೆದ್ದನು ಬಾಪು ಬಾಪು ಜಂಗಮಪ್ರಾಣಿ
ಪೆರ್ಮೆಯಿಂ ಪೆರ್ಚೆಳಸನೊಪ್ಪಿಸಿದನೇ ಯೆನುತ
ಬಿಮ್ಮನೆ ಬಿಗುಹ ಬಿಟ್ಟು ಬೀದಿವಱಿವುತ್ತುಗ್ರಗಣನಾಥನೈತಂದನು

ಬಂದು ಗಣಮುಖಕೆಱಗಲವರು ನಿಷ್ಠುರಗೂಡಿ
ಬಂದ ವಾಕ್ಯಗಳೆತ್ತಿ ಲಿಂಗತಲ್ಪಕ ಬಸವ
ನೆಂದನುಡಿ ಸಿದ್ಧಿಸಿತುನೋಡೆಂದು ತೋಱಲಾತನ ಪಾದವಿಡಿದುಕೊಂಡು

ಹಿಂದುಳಿಯದೆಂತು ಬೇಗೈದಿದೆಮ್ಮಯ್ಯಾದಿ
ನಂದಿಕೇಶ್ವರಜಂಗಮಪ್ರಾಣಿ ಜೀವಿಪ್ರ
ಬಂಧಿತದಯಾಪರನೆನುತ್ತಲುತ್ತರಸಾಧಕತ್ವ ತತ್ವಾಂತರಮುಖ

ಎದ್ದು ಸದ್ಯೋಜಾತ ವಾಮತತ್ಪುರುಷೇಶ
ನದ್ವೈತವ ಮುಖವಘೋರದೊಳಡಗಿದಾ ವೀರ
ಭದ್ರಾಪರಾವತಾರನುದಾರಧೀರ ಮಡಿವಳ ಮಾಚಿದೇವಯ್ಯನ
ಸಿದ್ಧಸಾನ್ನಿಧ್ಯಕಂಕಣಗೆಟ್ಟಿ ವೀರರವಿ
ಶುದ್ಧ್ಯಲಗುಗೊಂಡು ಮಂಗಳಮನೋರಥದ ಪ್ರ
ಬದ್ಧರಂಬೊಯ್ಸುತಭವಾಲಯಾಗ್ರದಿ ವೀರಘಂಟೆ ಜಯಘಂಟೆ ಹೊಯ್ದು

**ಸಿಂಗಿರಾಜ–ಸಿಂಗಿರಾಜಪುರಾಣ**
(೧೫೦೦)

## ೪೧. ಸುಬೋಧ ಸಾರ

### ನೀನೆ ಅಕಳಂಕ ಗುರು

ಸಕಲಕೆಲ್ಲಕೆ ನೀನೆ
ಅಕಳಂಕ ಗುರುವೆಂದು
ನಿಖಿಳ ಶಾಸ್ತ್ರವು ಪೇಳುತಿರಲರಿದೆನು

ಎರಗಂಬಳಿಯು ಸಿದ್ಧ
ವರಲಿಂಗ ನಾಮದಿಂ
ಹರನೆ! ನೀನೆನಗೆ ದೀಕ್ಷೆಯ ಮಾಡಿದೆ
ವರ ಷಡಕ್ಷರಿಯು ದೇ
ವರ ನಾಮದಿಂದೆನಗೆ
ಅರುಹಿದಿರಿ ಶಿವಶಾಸ್ತ್ರದನುಭವವನು

ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ

ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ
ಆರು ಅರಿಯರು ನೀನು
ಬೇರಾದ ಪರಿಗಳನು
ಮಾರಾರಿ ಶಿವ ಷಡಕ್ಷರಿ ಲಿಂಗವೆ

## ಎನ್ನ ಕರೆಯು ಬನ್ನಿ

ಹೆಮ್ಮಗಳು ನಾ ನಿಮ್ಮ
ನೆಮ್ಮಿಕೊಂಡಿರುವೆನ್ನೈ
ಗಮ್ಮನೇ ಎನ್ನವನು ಕರೆಯ ಬನ್ನಿ

ಸುವ್ವಿ ಚೆನ್ನಣ್ಣನಿಗೆ
ಸುವ್ವಿ ಮಡಿವಾಳನಿಗೆ
ಸುವ್ವಿ ನಮ್ಮಪ್ಪ ಬಸವಯ್ಯನಡಿಗೆ
ಸುವ್ವಿ ಅಜಗಣ್ಣನಿಗೆ
ಸುವ್ವಿ ಸತ್ಯಣ್ಣನಿಗೆ
ಸುವ್ವಿ ನಮ್ಮಯ್ಯ ಪ್ರಭುರಾಯನಡಿಗೆ

ಸುವ್ವಿ ಹರಳಯ್ಯನಿಗೆ
ಸುವ್ವಿ ಧೂಳಯ್ಯನಿಗೆ
ಸುವ್ವಿ ನಮ್ಮಯ್ಯ ಶ್ವಪಚಯ್ಯನಡಿಗೆ
ಸುವ್ವಿ ಭೀಮಯ್ಯನಿಗೆ
ಸುವ್ವಿ ಕಕ್ಕಯ್ಯನಿಗೆ
ಸುವ್ವಿ ನಮ್ಮಯ್ಯ ಚೆನ್ನಯ್ಯನಡಿಗೆ

ನಮ್ಮವರ ಪಾಡುವೆನು
ನಮ್ಮವರ ಪೊಗಳುವೆನು
ನಮ್ಮವರನಾವಗಂ ಹರಸುತಿಹೆನು
ನಮ್ಮವರು ಬರುವುದನು
ಉಮ್ಮಳಿಸಿ ನೋಡುವೆನು
ಹಮ್ಮಿಸುವೆ ಮನದೊಳಗೆ ಬಾರದಿರಲು

ಕುಟ್ಟುತ್ತ ಬೀಸುತ್ತ
ನೆಟ್ಟನೇ ನಮ್ಮ ಒಡ
ಹುಟ್ಟಿದ ಪುರಾತನರ ಹಾಡುತಿಹೆನು
ಕಷ್ಟಘಸ ಮರ್ತ್ಯದ
ಬಟ್ಟೆಯನು ಒಲ್ಲೆ ಕೃಪೆ
ಹುಟ್ಟದೇ ! ನಮ್ಮವರು ಕರೆಯಿರಯ್ಯ

ನೀರ ಹೊಳೆಯಲಿ ನಿಂದು
ದಾರಿಯನು ನೋಡುವೆನು
ಬಾರದಿರೆ ಮನದೊಳಗೆ ಕರಗಿ ಕೊರಗಿ
ಆರೈದು ಮತ್ತೊಮ್ಮೆ
ದೂರದೃಷ್ಟಿಯನಿತ್ತು
ಸಾರಿ ನೋಡುವೆ ನಿಲುಕಿ ಅಳಲಿ ಬಳಲಿ

ಬಂದವರ ಬರುವವರ
ನಿಂದವರ ನೆರೆದವರ
ಕುಂದದಲೆ ಕೇಳುವೆನು ನಮ್ಮವರನು
ಹಿಂದಾದ ದುಃಖದಲಿ
ನೊಂದೆನ್ನೆ ನಮ್ಮವರು
ಎಂದಿಗೇ ಎನ್ನವನು ಕರೆಯಬಹರೋ

ಪದುಳವೇ ನಮ್ಮವರ
ಪದಪದ್ಮ ಎನ್ನುವೆನು
ಪದಪಿಂದ ಕರೆದೊಯ್ಯಲೊಲ್ಲರೇಕೆ

ಉದಯಾಸ್ತಮಾನದಲಿ
ಕುದಿದು ಕೋಟಲೆಗೊಂಬೆ
ಹೃದಯ ತಾ ಕರಗದೇ ನಮ್ಮವರಿಗೆ

ಅಳಲುವೆನು ಮನದೊಳಗೆ
ಬಳಲುವೆನು ಬಾರದಿರೆ
ಕಳೆಯೇರುವೆನು ಒಮ್ಮೆ ನೆನೆದು ನೆನೆದು
ಮಲಹರಣ ಶರಣರಾ
ಬಲವ ನೋಡುವೆನೊಮ್ಮೆ
ಸಲೆಯೆನ್ನ ಕನಸಿಂಗೆ ಬಾರರೆನುತ

ಹಿಂದುಳಿಯಿತಮವಾಸ್ಯೆ
ಮುಂದೆ ಹುಣ್ಣಿಮೆ ಬಂತು
ಎಂದಿಗೇ ಎನ್ನನ್ನು ಕರೆಯಬಹರೋ
ನೊಂದು ಸುಯ್ಗರೆಯುವೆನು
ಬೆಂದು ಬೆಂಡಾಗುವೆನು
ಚಂದವೇ ತಮಗೆನ್ನ ನೋಡದಿಹುದು

ತರಗಲೆಯು ಗಿರುಕೆನಲು
ಹೊರಗೆ ನಾನಾಲಿಸುವೆ
ಬರವಿಲ್ಲದಿರೆ ಮನದಿ ಸುಯ್ಗರಿವೆನು
ಪರರ ಶಿಶುವೆಂದೆನುತ
ಶರಣರೂ ಎನ್ನವರು
ಮರೆದರೋ ಎಂದೆನುತ ಹೆದರುತಿಹೆನು

ಶರಣರೊಳು ಸುಖ ದುಃಖ
ದಿರವ ಹೇಳುವೆ ನಾನು
ಪರರೆನ್ನ ಚಿಂತೆಯನ್ನರಿಯರಾಗಿ
ಅರಸು ಷಡಕ್ಷರಿಯ
ವರನೆನ್ನ ಕಾಡದಿರೆ
ಶರಣಂಗೆ ಪೇಳಿ ನಾ ಕೇಳ್ವೆನಯ್ಯಾ

## ಎನಗೆ ಭೋಗ ಭಾಗ್ಯ ಬೇಡ

ಎನಗೆ ಭೋಗ ಭಾಗ್ಯ ಬೇಡ
ಎನಗೆ ಜಪವು ತಪವು ಬೇಡ
ಎನಗೆ ನಿಮ್ಮ ತೊತ್ತು ಸೇವೆ ನಿತ್ಯವಾಗಲೈ

ಎನ್ನ ಕಂದಿಸುತ್ತ ಬಹಳ
ಎನ್ನ ಬಾಧಿಸುತ್ತ ಬಿಡದೆ
ಎನ್ನನೊಂದು ನೆವಗಳಿಂದ ಕಾಡಿದವರಿಗೆ
ಎನ್ನ ಕೊಂದಡವರಿಗೆಲ್ಲ
ಎನ್ನ ಪೂಜೆ ಫಲಗಳೆಲ್ಲ
ಉನ್ನತದೊಳಗವರಿಗಾಗಿ ಸುಖದಿ ಬಾಳಲಿ

ಹಿಂದೆಯೆನ್ನ ಬೈದವರಿಗೆ
ಮುಂದೆಯೆನ್ನ ಬೈದವರಿಗೆ
ಕುಂದುದೆಲ್ಲ ಜನರ ನಡುವೆ ಬೈದಡವರಿಗೆ
ಇಂದುಧರನ ಕರುಣದಿಂದೆ
ಅಂದಣವನು ಏರುವಂತೆ
ಕುಂದದೊಲಿದು ಅವರಿಗೆಲ್ಲ ಭೋಗವಾಗಲಿ

ಹಿಂಗದೆನ್ನ ನಿಂದಿಸಿದ ಜ-
ನಂಗಳೆಲ್ಲ ಸುಖದೊಳಿರುವ
ಹಾಂಗೆ ಶಿವನು ಅವರಿಗೆಲ್ಲ ಭಾಗ್ಯವೀಯಲಿ
ಮಂಗಳಾತ್ಮ ಷಡಕ್ಷರಿಯ
ಲಿಂಗ ನಿನ್ನ ತೊತ್ತುಸೇವೆ
ಸಾಂಗವಾಗಿಯೆನಗೆ ಬಿಡದೆ ನಿತ್ಯವಾಗಲಿ

## ಕಾಡಲೇಕೆ ನರರುಗಳನು

ಕಾಡಲೇಕೆ ನರರುಗಳನು
ಬೇಡಿ ಬಳಲಲೇಕೆ ಮನವೆ
ರೂಢಿಗೀಶನೆಮಗೆ ದೈವವಾಗೆ ಇರುತಿರೆ

ಮೃಡನ ಪೂಜೆ ಮಾಡುವುದಕೆ
ಮಡುವಿನಗ್ಗವಣಿಗಳುಂಟು
ಅಡವಿಯಲ್ಲಿ ಕಾಡಪತ್ರಿ ಪುಷ್ಪವುಂಟಲ್ಲೆ
ಒಡಲಿಗನ್ನ ದುಡಿದರುಂಟು
ಗುಡಿಗಳುಂಟು ಶಯನಕೆನಗೆ
ಒಡೆಯರುಗಳು ಬಿಸುಟದರುವೆ ಶೀತಕುಂಟಲ್ಲೆ

ಬುದ್ಧಿಯನ್ನು ಹೇಳುವುದಕೆ
ಆದ್ಯರುಗಳ ವಚನವುಂಟು
ಉದ್ಧರಿಸುವಡೆಮಗೆ ಶಿವನ ಮಂತ್ರವುಂಟಲ್ಲೆ
ಅರ್ಧನಾರಿಯೆಂಬ ದೈವ
ಇದ್ದ ಬಳಿಕ ಕರದೊಳೆಮಗೆ
ಹೊದ್ದಲೇಕೆ ನರರ ಆಶೆ ಮಾಡೆನಕ್ಕಟ

ಮಿಗಿಲು ಮನೆಗಳೇತಕೆನಗೆ
ಅಗಲಲೇಕನುಭಾವಿಗಳನು
ಜಗದೊಳೆಮಗೆ ಹಲವು ಕೋಟಲೆಗಳು ಏತಕ್ಕೆ
ಸೊಗಸು ಷಡಕ್ಷರಿಯ ಲಿಂಗ
ಅಗಲದೆಮ್ಮ ಕರದೊಳಿರಲು
ಬೆಗಡು ಕೊಳ್ಳಲೇಕೆ ಮನವೆ ನರರ ಮಾಳ್ಕೆಯಿಂ

**ಮುಪ್ಪಿನ ಷಡಕ್ಷರಿ–ಸುಬೋಧಸಾರ**
ಸು. (೧೫೦೦)

## ೮೨. ಜಾಣ ಕೋಗಿಲೆ

### ರಾಗ – ತೋಡಿ

ಕೋಗಿಲೆ ಚೆಲ್ವ ಕೋಗಿಲೆ
ಮುದ್ದು ಕೋಗಿಲೆ ಜಾಣ ಕೋಗಿಲೆ ||ಪ||

ಹಿಂದೆ ತಪದೊಳೀಶನೊಂದಿರುತಿರಲೆಚ್ಚು
ಬೆಂದ ಕಾಮನ ಬಿಟ್ಟು ಕೋಗಿಲೆ
ಬಂದು ಬೇಗದೊಳು ಬಾಲೇಂದುಧರನ ಕೂಡಿ
ಕುಂದದೆ ನೀ ಬಾಳು ಕೋಗಿಲೆ ||

ಮುನಿಗಳ ನೀತಿಯನು ಕೆಡಿಸುವ ಬಹುದುಷ್ಟ
ಮನಸಿಜನನು ಮೀರಿ ಕೋಗಿಲೆ
ಘನಪದವನು ತನ್ನ ನೆನೆವರಿಗೊಲಿದೀವ
ಧನದ ಮಿತ್ರನ ಸಾರು ಕೋಗಿಲೆ ||

ನಲ್ಲರನಗಲಿದ ಮೆಲ್ಲೆರ್ದೆಯರ ಕೊಲ್ವ
ಫುಲ್ಲಶರನ ಪಿಂಗಿ ಕೋಗಿಲೆ
ಎಲ್ಲವರಿಗೆ ಯೆರಕವಿಲ್ಲದೊಲವನೀವ
ಬಲ್ಲಭವನೊಳಗಿರು ಕೋಗಿಲೆ ||

ಮಂಗಳ ರವದೊಳನಂಗನ ಬಣ್ಣಿಸಲು
ಭಂಗವಲ್ಲವೆ ನೋಡು ಕೋಗಿಲೆ
ಕಂಗೊಳಿಸುವ ಸರ್ವ–ಮಂಗಳೆಯರಸನ
ಪಿಂಗದೆ ನೀ ಪಾಡು ಕೋಗಿಲೆ ||

ದುರುಳ ಕಂತುವಿನೊಡನಿರೆ ಲೋಕದೊಳು ನಿನ್ನ
ಪರಪುಟ್ಟನೆಂಬರು ಕೋಗಿಲೆ
ಧರೆಗೆ ಜನಕನಾದ ಗುರುಶಂಭುಲಿಂಗನ
ಚರಣ ಪಲ್ಲವ ಪಿಡಿ ಕೋಗಿಲೆ ||

**ನಿಜಗುಣ ಶಿವಯೋಗಿ.**

ಸು. (೧೫೦೦)

## ೮೩. ಬೇಡುವೆನಭವ

**ರಾಗ – ಗೌರಿ**

ಬೇಡುವೆನಭವ ನಿನ್ನನು ಭವಭವದೊಳು
ಮಾಡೆನಗೊಲಿದು ಸುಗುಣ ಸಂತತಿಯನಿಂತು ||ಪ||

ಎಡರಡಸಿದ ವೇಳೆಯೊಳು ಧೈರ್ಯವನು ಸಿರಿ
ನಡೆದು ಜೀವಿಸುವೆಡೆಯೊಳು ವಿನಯುವನು
ಕಡು ಜವ್ವನದೊಳು ವಿಕೃತಿದೋರದಿಹುದನು
ಪಿಡಿದ ನೇಮುವನೆಡೆವಿಡದತಿ ಛಲವನು ||

ಅಸುವಳಿಯಲಿ ದೇಹಿಯೆನ್ನದಧಟನು
ಪುಸಿಯನೆಲ್ಲಿಯು ನುಡಿಯದ ಸತ್ಯವಾದವನು
ಮುಸುಳದಿಹ ಪುಣ್ಯಮಯ ಕೀರ್ತಿಯನು ಶಾಂತ
ರೊಸೆದಹುದೆಂದು ಬಣ್ಣಿಸುವ ವರ್ತನವನು ||

ವಿತರಣದೊಡನೆ ಭೋಗಿಸುವರ್ಥದೊದವನು
ಹಿತವಚನವೆ ತೊಡವೆನಿಪ ದಾನವನು

ಶೃತಿ ಬೋಧನೆಯೊಳು ಪರತಿಯಿಲ್ಲದರಿವನು
ನುತಿವೆತ್ತು ಕೈಸಾರುತಿಹ ಮನೋರಥವನು ||

ಕೋಪವಂಟದ ತಪವನು ಪರವಧುವಿನ
ರೂಪು ಕಂಡೆಳಸದ ಕರಣ ವಿಜಯವನು
ತಾಪವಡರಿ ಕೆಡದ ಸಾರ ಸುಖವನು
ಕಾಪಟ್ಯವಿಲ್ಲದಾಶ್ರಮಧರ್ಮ ರತಿಯನು ||

ಧರೆಯೊಳತ್ಯಧಿಕವೆನಿಪ ಶಾಂತಿ ಮತವನು
ಕರುಣ ವಿದ್ಯೆಗಳುಳ್ಳ ಗುರುಬೋಧನೆಯನು
ಪರತರ ಮುಕ್ತಿದೋರುವ ಶಾಸ್ತ್ರವನು ಕಂತು
ಹರ ಶಂಭುಲಿಂಗ ನಿಮ್ಮಡಿಯ ಭಕ್ತಿಯನು ||

**ನಿಜಗುಣ ಶಿವಯೋಗಿ.**
ಸು. (೧೫೦೦)

# ೮೪. ಬೇಂಟೆ

ಇದು ಪರ್ಬಿರ್ದ ತಮಂಧವೃಂದಮಿದು ಕಾಳಿಂದೀಪ್ರವಾ ಹಾಂಬುವಿಂ
ತಿದು ಕಾರ್ಗಾಲದ ನೀರದೌಘಮಿದು ನೀಲಕ್ಷ್ಮಾಧರಾಕಾರಮಿಂ
ತಿದು ಹಾಲಾಹಲಜಾಲದೇೞ್ಗೆಯಿದು ತಾನೆಂಬಂತೆ ಮೆಯ್ಗರ್ಪಿನೊ
ಪ್ಪದಿ ನಂದೆೞ್ತಿರುತಿರ್ದುದುಗ್ರಶಬರಾನೀಕಂ ಘನಾಟೋಪದಿಂ

ಪುಲಿ ಬಿರಿತೋಡೆ ಋಕ್ಷವವನೀಜವನೇಱಿ ರುರುವ್ರಜಂ ಭಯಾ
ಕುಲತೆಯನೆಯ್ದೆ ಮೇಪುದೊಱಿದೇಣಿಗಳೊರ್ಗ್ಗೋಡೆದೆಯ್ದೆ ಚಲ್ಲಲಿ
ಕ್ಕಲವಿರದುರ್ಬುಗುಂದೆ ವರಸೈರಿಭವಾಲಿಸೆ ಮತ್ತದಂತಿ ಪೆ
ರ್ಗಲಿಸುತಿರಲ್ಕೆ ಬೇಂಟೆವಱಿಯಬ್ಬರಮುಣ್ಮಿತು ತದ್ವನಾಂತದೊಳ್

ಕರಡಿಗಳಿತ್ತಲೆಯ್ಯಮಿಗಮಿತ್ತ ವರಾಹ ಸಮೂಹಮಿತ್ತ ಬೆ
ಳ್ಕಿರಳೆಗಳಿತ್ತ ಪೆರ್ಬುಲಿಗಳಿತ್ತ ಲುಲಾಯನಿಕಾಯಮಿತ್ತ ಪೆ
ರ್ಮರಗಳವಿತ್ತ ದಂತಿಚಯಮಿತ್ತ ಮೃಗೇಂದ್ರ ಸಮೂಹಮಿತ್ತ ಭೀ
ಕರಶರಭಾಳಿಯಿತ್ತಲೆನಿಪಬ್ಬರ ಮುಬ್ಬರಮಾಯ್ತರಣ್ಯದೊಳ್

ಕೆದಱಿದ ಸಲ್ಲಕೀಕಿಸಲಯಂಗಳ ಕಂಪಿದೆಪ್ರೋದ-ವೀಕ್ಷಣಂ
ಮದಕರಿ ಸೃಕ್ವದಿಂ ನವತೃಣಂ ನುಸುಳ್ದುರ್ವಿಗೆ ಸೂಸಿತೇಗಳೋ
ಡಿಮವಿರದೇಣಿಗಳ್ ಕೊಣಸುಗಳ್ ದೆಸೆಗೆಟ್ಟವೆ ದಂಷ್ಟ್ರಪಾದಪಂ
ಕದ ಕುಱುಪಿಲ್ಲಿದೆಂಬ ಪಿರಿದಬ್ಬರ ಮುಬ್ಬರಮಾಯ್ತರಣ್ಯದೊಳ್

ಇಡು ಕಲ್ಲಿಂ ಮಲೆತಿರ್ಪ ಪೆರ್ಗರಡಿಯಂ ಬೆಂಬತ್ತಿ ಪೆಬ್ಬಂದಿಯಂ
ಬಿಡು ನಾಯಂ ಮೊಲವಟ್ಟು ಪರ್ಮೊಲನನೆದ್ದಿಪ್ರೋಯ್ತು

ಶಾರ್ದೂಲವಿ

ಕರ್ಡಿಯಾಗಲ್ಕಿಸು ಮಿಕ್ಕು ತಿವಿದಿಕ್ಕಾಂತಿರ್ಪ ಪೆರ್ಗೋಣನಂ
ಪಿಡಿ ಸಾರಂಗಮನೆಂಬ ಲುಬ್ಧಕರವಂ ಪರ್ಬಿತ್ತು ಕಾಂತಾರದೊಳ್

ನಡೆ ಜಡಿಸನ್ನೆದೋಱು ಮರನೇಱಿ ನಿರೀಕ್ಷಿಸು ಸಾರ್ದುರ್ವರ್ಕೆ ಕೊ
ಲ್ದುಡು ಬಿಡವಟ್ಟು ಮುಟ್ಟು ಕೆಡೆ ಮೆಟ್ಟಿತು ಕಕ್ಕುರಿಮಿಕ್ಕುಪೊಕ್ಕು
ಪೊಯ್
ಕಡಿ ತಿವಿ ಕೊಲ್ಲು ಸೀಳ್ ತೊವಲನೆತ್ತು ಕರುಳ್ಗಳ ನುರ್ಚು ನೆತ್ತರಂ
ಕುಡಿದಿಡಿಕೆಂಬ ಬೇಡವಡೆಯಬ್ಬರವಾತಿಡಿದತ್ತು ಸುತ್ತಲುಂ

ಪರಿಯಂ ಕಟ್ಟುವ ತೋಹಿಂ
ಗಿರದೆಯ್ದುವ ಬೇಗೆಯಿಡುವ ಬೆಳ್ಳಾರಮನಾ
ಸುರದಿಂ ಬೀಸುವ ಬಲೆಯಂ
ಪರಪುವ ಶಬರಾಳಿ ಕಂಡುದೊಂದೆಕ್ಕಲನಂ

ಎಳವೆಱೆಯಂದಮಂ ಜಱಿವ ದಾಡೆಗಳಿಂಗಳದಂತೆ ಕಣ್ಗಳು
ಜ್ವಳಿಸುವ ಲೋಹಸೂಚಿಗಳವೋಲ್ ತನುರೋಮ
ಮಿಱುಂಕಿದಿಕ್ಕೆಳಂ
ಗಳನುಱೆ ಪೋಲ್ವ ನೀಳ್ದ ಕೊಳಗೊಪ್ಪೆ ಮಹೋನ್ನತ ಕಂಠನೆತ್ತಿ ಪ
ವ್ವಳಿಸುತಲುರ್ಕಿಸೊರ್ಕಿ ಬರುತಿರ್ದುದು ಭೀಕರನೊಂದು ಸೂಕರಂ

ಜನಿತೋನ್ಮತ್ತಪ್ರಚಾರಂ ನೆಗೞೆ ಘುರುಘುರುಧ್ವಾನಮಾ
ಶೈಲದೊಳ್ ಘೀ
ಳಿನೆ ಕೋಪೋದ್ರೇಕದಿಂದಂ ವನಚರಬಲಮಂ ಕುರ್ಕರಾನೀಕಮಂತ
ದ್ವನದೊಳ್ ಬೆಂಕೊಂಡು ಕೊಂದತ್ತತುಳಬಳಸಮೂಹಂ
ಮಹಾರೌದ್ರಗೇಹಂ
ಘನದೇಹಂ ವ್ಯಾಧದಾಹಂ ಪ್ರಬಳಸಮರಸನ್ನಾಹನಂತಾವರಾಹಂ

ನಡೆವಾಗಳ್ ಧಾತ್ರಿತರ್ಗಲ್' ಕಡುಮುಳಿದದಟಿಂ ಕೋಡಿಡಲ್
ಬೆಟ್ಟು ಪಿಟ್ಟಾ
ಗೊಡೆಯಲ್ ಪಿಂಮೆಟ್ಟೆ ಕಾಯ್ಪಿಂಪಣೆಯಿಡೆ ನವಭೂಜಾಳಿಗಳ್
ನುರ್ಗುನುರ್ಗಾ
ಗುಡಿಯಲ್ ಬಾಯ್ವಿಟ್ಟೊಡಂ ಪೆರ್ಮೃಡು ಬಱಿದೆನಿಸಲ್ ಸೂರ್ಕಿ
ಸಲ್ಲೀಲೆಯಿಂ
ಕೊಂಕಿಡುತುಂ ಕಾಡೆರ್ಮೆವಿಂಡೊಳ್ ಮೆಱೆದುದು ಕಡುಪಿಂ
ಸ್ಥೂಲಕಾಯಂ ಲುಲಾಯಂ

ಅತಿಕೋಪಂಮಿಕ್ಕುಕೋಡಂ ಜಡಿದು ಬಿಡದೆಕಿಗ್ಗಣ್ಣಿನಿಂ ನೋಡಿ
ಕಾಯ್ಪಿಂ
ಕ್ಷಿತಿಗಾಸ್ಯಂತಗ್ಗೆ ಬಾಲಂ ಮಿಗೆ ನೆಗೆದೊಗೆಯಲ್ಕುರ್ಬಿಧೀಂಕಿಟ್ಟು
ಬೆಂಕೊಂ
ಡತುಳವ್ಯಾಧಾಳಿಯಂ ತಳ್ತಿಱಿದುದು ಬಹಳತ್ರಾಣನದ್ರಿಪ್ರಮಾಣಂ
ಜಿತಧಾನುಷ್ಕೋಗ್ರಬಾಣಂ ಘನತರಮಹಿಷೀಪ್ರಾಣ
ನಾಕಾಡಕೋಣಂ

ಕ್ಷಿತಿಯಂ ವಾಲಾಗ್ರದಿಂದಂ ಪೊಡೆಯುತೆಮಿಗೆ ಪುರ್ಬಿಕ್ಕುತುಂ
ವಿಸ್ಫುಲಿಂಗ
ದ್ಯುತಿಯಂ ಪೋಲ್ವಕ್ಷಿಯಿಂದಂ ದೆಸೆಗಳನೊಲವಿಂ ನೋಡುತುಂ
ಶ್ಮಶ್ರುವಂ ಕೆ
ತ್ತುತೆ ಬಾಯೊಳ್ ಜಿಹ್ವೆಯಂ ಚಾಲಿಸುತೆ ಸಮುಪದಂಗೊಂಡು
ಕುಳ್ಳಿರ್ದು
ದತ್ಯುನ್ನತಧೀರಂ ಭೀತಿದೂರಂ ಬಲಯುತವರಶಾರ್ದೂಲನಾ
ಭೀಲಶೀಲಂ

ಪಳಹದ ಬೇಂಟೆ ಸಂದ ಪಟವೇಂಟೆಗಳುನ್ನತಚಿತ್ರವೇಂಟೆ ಯ
ಗ್ಗಳಿಕೆಯ ಗೋರಿಪೇಂಟೆ ತಡೆವೇಂಟೆ ನೆಗಟ್ಕೆಯ ತೋಹುವೇಂಟೆಸಂ
ಗಳಿಸಿದ ನೀರವೇಂಟೆ ಘನಸೋಹಿನವೇಂಟೆಯೆನಿಪ್ಪನಾವುಮಂ
ತಳೆದೆಸೆವೆಂಟುಬೇಂಟೆಗಳ ನಾಡಿದನಟ್ತಿಯೊಳಂದು ಕಣ್ಣಪಂ

**ಸುರಂಗ ಕವಿ-ತ್ರಿಷಷ್ಟಿ ಪುರಾತನರ ಚರಿತ್ರೆ**

ಸು. (೧೫೦೦)

## ೮೫. ಬಿರುದುಗಳು

ಪೊಸಕಾಲದ ನವಿಲಾಟಂ
ಸಿಸುಗಳ ಮುದ್ದಾಟ ಹರಿಣಹರಿಣಿಯ ನೋಟಂ
ರಸಕವಿಗಳ ಕರ್ಣಾಟಂ
ಶಶಿಮುಖಿಯೊಡಗೂಟದಂತೆ ಕನ್ನಡಜಾಣಾ

ಎಡಱದೆ ತಡೆಯುದೆ ತಲೆಯುಂ
ಕೊಡಹದೆ ಕಡುವಹಿಲಜಾಡ್ಯವೆನಿಸದೆ ರಸಮುಂ
ಕೆಡಿಸದೆ ಸರ್ವರ ಚಿತ್ತ
ಕ್ಕೊಡಬಡಲೋದುವನೆ ಗಮಕಿ ಕನ್ನಡಜಾಣಾ

ಧರ್ಮಕೆ ಕರ್ಮಕ್ಕತಿಥಿಗೆ
ಪೆರ್ಮೆಯ ಪಿತೃಗಳ್ಗೆ ದೇವಕಾರ್ಯಕ್ಕೆಂದುಂ
ನಿರ್ಮಳಸಂತತಿಗಳ್ಗಂ
ಕೂರ್ಮೆಯ ಕುಲವಧುವೆ ಮುಖ್ಯಮೆಲೆಗುಣರತ್ನಾ

ಎಲ್ಲಿ ಸುಶೀಲಂ ಸದ್ಗುಣ
ಮೆಲ್ಲಿ ದಯಾಧರ್ಮಮೆಸೆವ ಸತ್ಯಂ ನೆಲೆಗೊಂ
ಡಲ್ಲಿಯೆ ಆಯುಂ ಸಿರಿಯುಂ
ಸಲ್ಲೀಲೆಯೊಳಿರ್ಪುವಲ್ತೆ ಚೂಡಾರತ್ನಾ

ಶರಣೆನೆ ಕಾವುದು ಬೇಡಿದೊ
ಡಿರದೀವುದು ತೊಡರೆ ಸೆಡೆಯದಿರುವುದು ಪುಸಿಯೊಳ್
ಬೆರೆಯದೆ ನಡೆವುದು ನಡೆಯದೊ
ಡರಸಂ ಕಡಬರಸನಲ್ತೆ ಚೂಡಾರತ್ನಾ

ಪೂತೊಳ್ಳಿತು ಕಾತೊಳ್ಳಿತು
ಬೀತೊಳ್ಳಿತು ಕಲ್ಪವೃಕ್ಷಮೆಲವದಮರಸಂ
ಪೂತೇವುದೊ ಕಾತೇವುದೊ
ಬೀತೇವುದೊ ಧಾತ್ರಿಯಲ್ಲಿ ಚೂಡಾರತ್ನಾ

ನಡೆವೆಡೆಯೊಳ್ ನುಡಿವೆಡೆಯೊಳ್
ಕುಡುವೆಡೆಯೊಳ್ ತನಗೆ ನಿಂದೆ ಪೊರ್ದದತೆಱದಿಂ
ನಡೆವುದು ನುಡಿವುದು ಕುಡುವುದು
ಪಡೆವುದು ಸತ್ಕೀರ್ತಿಯಂ ವಿದಗ್ಧಲಲಾಮಾ

ಪಱಿವಾವುದು ಕುಲಭಂಗಂ
ತಿಳಿವಾವುದು ಸಮತೆ ಬಂಧವಾವುದು ಮೋಹಂ
ಕಳವಾವುದನೃತವೆಡರಿಂ
ದುಱಿವಾವುದು ಧೃತಿ ವಿವೇಕಚೂಡಾರತ್ನಾ

ಹಿಂದೆ ಗಱಿಸಿದುದು ಪೋದುದು
ಮುಂದಕ್ಕಿನ್ನೇವೆನೆಂದು ಚಿಂತಿಸಲೇಕೈ
ಅಂದಂದು ಸೇದುಬಾವಿಗೆ
ತಂದುದಕವನೆಱೆದರುಂಟೆ ಸುಗುಣಕರಂಡಾ

**ವಿವಿಧ ಕವಿಗಳು.** (ಸು. ೧೫೦೮)

# ೮೬. ಭೀಮಾರಣ್ಯ

ಎರಲೆಯ ಬೀಡೆಕ್ಕಲನ ಕೊಟಾರಂ
ಕರಡಿಯ ಹಟ್ಟಿ ಕಡವೆಯೂರ್ ಚಮರಿಯ
ಹುರಮೆಂಟಡಿಯ ಹೊಟಿಲ್ ಕಾಟಿಯ ಕೊಟ್ಟಂ ಖಟ್ಗಿಯ ಪಳ್ಳಿ
ಅರಸುಮಿಗದ ಪಟ್ಟಣಮಾನೆಯ ಮಟ
ಮೊರಲುಣಿಗಳ ನೆಲೆವನೆಯೆನಲತಿಬಂ
ಧುರವಾದುದು ಭೀಮಾರಣ್ಯಮಗಣ್ಯಮೃಗಾಳಿಶರಣ್ಯಂ

ಸುಜ್ಜಿಲರಳಿಸಾಗಡೆಯುದಿಸಂಪಗೆ
ಬೆಜ್ಜಲುಬೆಳೆವಬಿದಿರ್ದೇವರಿಟಣ
ಸಜ್ಜರಸಕರಂಜಿಗೆಯರನೇಱಿಲಳಲೆಮುಟ್ಟುಗಮುಟ್ಟಿ
ಕಜ್ಜುರಕಕ್ಕೆ*ಡವಮೊಳಗುನವಿ
ಲ್ಪಜ್ಜೆಗರಿಕೆಸಸಿನೇಸಱವೆಳಗಿಗೆ
ನೆಜ್ಜಗೊಡದೆ ಬೆಳೆದಿರಲಾಬಿಂಜಂ ಭೀಕರತರವಾಯ್ತು

ಮಱೆವೊಕ್ಕ ಮಹಾತಮಮುಂ ಕೊಟ್ಟೊಡೆ
ಕೊಱತೆಯೆನುತಮುದನಲೆಯುಟ್ಟುವ ಪಗ
ಲೆಱೆಯನ ಪಲಗದಿರ್ಗಳ ಕೊರಲಂ ಪಿಡಿದೋವದೆ ತಾಂ ತಗುಳ್ವ
ತೆಱನೆನೆ ತಾರಾಪಥಮಂಡಲಮುಂ
ನೆಱೆ ಪಂದರಿಸಿ ಬೆಳೆದ ನವತರುಗಳ
ತುಱುಗಿದ ತೂಱಲ್ಗೊಂಬಿನ ಕೆಲವು ಕವಲ್ಗೊಂಬೊಪ್ಪಿದುವು

ಬೇರಿಂ ಮುನ್ನವೆ ಪಾನಂಮಾಡಿದ
ನೀರಂ ತಮ್ಮೊಡಲೊಳ್ ತೀವಿದ ಹಸಿ
ತೀರದೆ ಬಾಕುಳಿತನದಿಂ ಬಾನ ಪೊಱೆಯ ಬಂಧುರಮಪ್ಪ

ವಾರಿಯನೋವದೆ ತಮ್ಮಯ ಕೊನೆಯಿಂ
ಪೂರಿಸಿಯುಣಬೇಕೆನುತ ಪರಿವವೊಲ್
ತಾರಾಪಥಮಂ ತವೆ ಚುಂಬಿಸಿದುವು ತದ್ವನತರುವಿತತಿ

ಎನ್ನಂ ದಹಿಸಿ ದಳಿಸುವ ದವಾಗ್ನಿಗೆ
ಯುನ್ನತಿಕೆಯ ಸತ್ತ್ವಮನಿರದೊದವಿಪ
ಭಿನ್ನತೆಯಿಲ್ಲದ ನಂಟತನಮನದಱೊಳ್ ಮಾಡುವ ಗಾಳಿ
ಎನ್ನೊಳಿ ಪುಗೆ ಕೇಡೆನಗಿರದಪ್ಪುದು
ನನ್ನಿಯೆನುತ ಬಗೆದಂತದನಿನಿಸುಂ
ತನ್ನೊಳು ಪುಗಲೀಯದೆ ತದ್ವಿಪಿನಂ ಕಿಕ್ಕಿಱಿಗೊಂಡಿಹುದು

ಕರಡಿ ಕಡವೆ ಕಾಡೆಮ್ಮೆ ಸೊಣಗ ಮೊಲ
ಮರೆ ಮೂಗುರಿ ಕೂರಂಗಿಯುಳಿಲು ಬೆ
ಕ್ಕೆರಲೆ ಕೋಱವ ಮುಸುಸಾರಗ ಸೀರುಡುವೆಕ್ಕಲಕಪಿ ಪಂದಿ
ನರಿ ಹುಲಿಯುಡು ತರುವಂಗಿ ಚಮರಿ ಮಿಗ
ವೆರಲುಣಿಯಾನೆಯರಸುಮಿಗವೆಂಟಡಿ
ಯೆರಡುತಲೆಯಪಕ್ಕಿ ಯಿನೊಪ್ಪಿದುದಾದಾರುಣಮಪ್ಪಡವಿ

ನವಶಾಖೆಯ ಕವಲೆಸೆವ ಠವಣೆಕೋಲ್
ತವೆ ಸೊಗೆಯಿಪ ಪಲ್ಲವನಿಕುರುಂಬಂ
ಕವಳಿಗೆಗೆದರ್ದಲಸತ್ಪುಸ್ತಕಮೋದುವ ಮಱಿಗಿಳಿಯಳಿಯ
ನಿವಹಂ ವಟುಸಂತತಿಯಾಗಲ್ಕೊಂ
ದವನಿಜದುಪರಿಮದೊಳಗೆ ಕುಳಿತ ಮುಸು
ವಿವಿಧನಿಗಮವೋದಿಪ ಗಡ್ಡದ ದೀಕ್ಷಿತನೆಂಬಂತಾಯ್ತು

ಎರೆಯಂ ನುಂಗುವ ಫಣಿಯಾಫಣಿಯಂ
ಭರಿಕ್ಕೆಯಿಂದ ಪಿಡಿವ ಮದಕರಿಯಾ
ಕರಿಯಂ ಕೊಲ್ವ ಮೃಗೇಂದ್ರಂ ಮತ್ತಾ ಮೃಗಪತಿಯಂಸೀಳ್ವಿ
ಶರಭಂ ಶರಭನನೆತ್ತುವ ಭೀಕರ
ವರಭೇರುಂಡಖಗಂ ತದ್ವಿಪಿನದೊ
ಳಿರೆ ಕಂಡಚ್ಚರಿವಟ್ಟಂ ವಿಕ್ರಮಕೌರವಭೂಪಾಲಂ

ಭರದಿಂ ಬಿಸುನೆತ್ತರು ಸುರಿವಾನನ
ಪುರಿಯನುಗುಳ್ವೊಲೆ ಮೂಗೆನಲಳ್ಳಿಯ
ನಿರದೆ ಕರಂ ಹುಯ್ಯುತ ಕುಕ್ಕುಱಿಸಿದ ಶಲಗಂ ತಿದಿಯೆನಲು
ಉರವಣೆಯಿಂ ಮೊದಲೆಚ್ಚು ಕೆಡಪಿಯೊಡ
ವಱಿದಾ ಬಾಲವಿಡಿದು ಬಾಗಿದ ವನ
ಚರನೊಪ್ಪಿದನದನೊರ್ಕೆಯಿಂದೊತ್ತುವ ಕಮ್ಮಱನಂತೆ

ಮುಂದೊಂದೆಡೆಯೊಳ್ ಮಂದೈಸಿ ಕರಂ
ನಿಂದು ತಮುತ್ತಿರ್ವರುಮಂ ನೋಟ್ಪಿ ಪು
ಳಿಂದಿಯರಂ ನೋಡುತ ನೃಪನಿರುಳ್ವೆಣ್ಗಳೊ ಪೊಸಕತ್ತುರಿಯಾ
ಸುಂದರಿಯರೊ ನೀಲದ ನೀಱೆಯರೋ
ಇಂದೀವರಕುಸುಮದ ಕೋಮಲೆಯರೊ
ಚಂದದ ಹರಿಚಂದನದಬಲೆಯರೊ ಎನುತ ಕೊಂಡಾಡಿದನು

ತಳಿರಡಿಗಳ ತಳತಳಿಪಲರ್ಗಣ್ಗಳ
ಪೊಳೆವೆಳದುಂಬಿಗುರುಳ್ಗಳ ಸೊಗಯಿಪ
ಸೆಳೆನಡುವಿನ ಸುರಭಿಶ್ವಾಸದ ಸುರಚಿಶಾಖೋಪಮದ

ನಳಿತೋಳ್ಗಳ ನವಕಜ್ಜಲವರ್ಣದ
ಲಳಿತಾಂಗವ ಕಾಟ್ಬೇಡಿತಿಯರು ಕ
ಣ್ಗೊಳಿಸಿದರಾಸಲ್ಲಲಿತತಮಾಲವನದ ಲಕ್ಷ್ಮಿಯತೆಱದಿ

ಕಾಡ ಕುಸುಮಮಂಜರಿಯಂ ಕಚದೊಳ್
ಸೂಡಿ ಮಿಗದ ಗೋರೋಚನದಣ್ಪಂ
ತೀಡಿ ತನುವಿನೊಳು ಬಿದಿರ ಬಸಿರ ಗಜಕುಂಭದ ಸೂಕರನ
ದಾಡೆಯ ಮಣಿಹಾರಮನುರುಕುಚದೊಳ್
ಜೋಡಿಸಿಯುಷುಗೆದಳಿರ ದುಪ್ಪಟಿಯಂ
ಪಾಡಱಿದುಟ್ಟು ಪುಳಿಂದಪುರಂಧ್ರಿಯರೊಪ್ಪವಡೆದರಲ್ಲಿ

**ಮಂಗರಸ—ಜಯನೃಪಕಾವ್ಯಂ.**
(೧೫೦೮)

# ೮೭. ಸುಮನಸ ಮಹಾವನ ವಿಲಾಸ

ಅರಗಿಳಿ ಬಾಳಾಂಕಿಗಳೋದುವ ಮಟ
ವರಲಂಬುಗಳಂ ಮಾಡುವ ಕಮ್ಮಟ
ಮರವಿಂದಾಸ್ತ್ರದ ಮೊನೆಗಿಕ್ಕುವ ಬಾಸಟದ ಬೆಳೆಯುಕೂಟ
ವಿರಹಿವಿತಾನದ ಚಿತ್ತಕೆ ಸಂಕಟ
ಮುರುಯೋಗಿಗಳ ವಿರಕ್ತಿಗೆ ಪಲ್ಲಟ
ದಿರವು ಸುರಭಿವಾಯುವ ಕಾಲಾಟವುಮೆನಿಸಿದುದಾತೋಟ

ಬಾೞೆ ಬಕುಳ ಬಾವನ್ನ ಬೆಳೆವ ಸಿರಿ
ದಾಳಿ ಪಲಸು ಪಡ್ಡಳಿಯರನೇೞಿಲ್
ನೇಳಲ್ ನೆಲ್ಲಿಯುಸುಗೆಯೊಳನೀರಿಂಮಾವಿಂದಿರ ಹೊನ್ನೆ
ಈಳೆಯಡಕೆ ಕಜ್ಜುರ ಮಾದಲ ಕಿ
ತ್ತೀಳೆಯಗಿಲ್ ನಾರಗ ಸಂಪಗೆ ರಸ
ದಾಳಿ ಸಿರಿಸ ದಾಳಿಂಬದ ಸಾಲ್ಗಳ್ ಸಲೆ ಸೊಗಸಿದುವಲ್ಲಿ

ಪೂಗಮನೇೞಿದ ನಾಗಲತಿಕೆ ಪು
ನ್ನಾಗಮನಡರಿದ ಮಾಲತಿ ಮಾವಂ
ರಾಗದಿನೇೞಿದ ಮಲ್ಲಿಗೆಯುಸುಗೆಯನಮರಿದ ವಾಸಂತಿ
ಬಾಗೆಯನೊತ್ತಿ ಹಿಡಿದ ಕುಂದಂ ಕೃ
ಷ್ಣಾಗರುವಿಡಿದುಡುವಳ್ಳಿಗಳಿಂದಾ
ಪೂಗಣೆಯನ ಜಯದಾಲಯಮೆನೆ ವನವತಿ ಪಾವನವಾಯ್ತು

ಪೂ ತುಱುಗಿದ ಪುನ್ನಾಗಂ ತಳಿರಿಂ
ಜೋತೊಱಗಿದ ತರುಣಾಶೋಕಂ ಲತೆ
ಯೋತೊಡರಿದ ಮಂದಾರಂ ಪಾವು ಪರಾಗಮನಿರದುಣ್ಬ

ಕೇತಕಮುವ್ಯೃತಫಲಂ ತೀವಿದ ನವ
ಚೂತಂ ಮಗಮಗಿಸುವ ಚಂದನಭೂ
ಜಾತಮಿರಲ್ಕೊಪ್ಪಿತು ವನವಂಗಭವನ ನಲ್ಮೆಯ ಭವನಂ

ಎಳದಳಿರ್ದೊಂಗಲುಂಳಿಯ ಮಱಿಯೊಳ್ ನಿಂ
ದಳಿತತಿಯೆಂಬ ಬಿಯದರಲ್ಲಿಗೆ ಕ
ಣ್ಗೊಳಿಪಾನೆಗಳ ವಿಸುಪ ಮಿಗಗಳ ರಂಜಿಸುವೊಳ್ವಿಕಸ್ಸುಗಳ
ವಿಳಸನ್ಮದದೊಳೊಗೆದ ನೂತನಪರಿ
ಮಳಜಾತಿಯನಾಸುಗ್ಗಿಯನಂದನ
ದೊಳಗೊಯ್ಯನೆ ಸೋವಿದನೆಲರೆಂಬ ವನೇಚರನತಿಮುದದಿ

ಈ ವನದಿವ್ಯಾವಿನ ತಣ್ಣೆಲೆಂ
ಬಾವೋಲಗಶಾಲೆಯೊಳರಲಂಬಂ
ವ ಊವಳಸಿದ ಗಿಳಿಯುಳಿ ಬಾಳಾಂಕಿಯ ಮಂತಣದೊಳಗಹನೆ
ಈವೇಳೆಗೆಯವಸರವಿಲ್ಲಾತಗೆ
ನೀವಿದಱಿಂದೆ ಪುಗಲ್ ಪುಗಲೆಂದಿರ
ದೋವದುಲಿವ ಪಡಿಯಱಿವಕ್ಕಿಯ ನುಡಿಗೇಳಿ ನಡೆದನರಸಂ

**ಮಂಗರಸ–ಜಯನೃಪಕಾವ್ಯಂ**
(೧೫೦೮)

## ೮೮. ಶರತ್ಕಾಲ

ಅಲ್ಲಲ್ಲಿ ಗಿಣ್ಣೆಕ್ಕುವಲ್ಲಲ್ಲಿ ಕುಱುಹನಿಡು
ವಲ್ಲಲ್ಲಿ ಕದಿರುಗಡೆವಲ್ಲಲ್ಲಿ ಪೊದುಂಬು
ವಲ್ಲಲ್ಲಿ ಪಾಲ್ದೀವುವಲ್ಲಲ್ಲಿ ಕಾಯಾಗುವಲ್ಲಲ್ಲಿ ಪಣ್ಣಾಗುವ
ಅಲ್ಲಲ್ಲಿಯಕ್ಕಿಮುಱಿವಲ್ಲಲ್ಲಿ ಕೆಂಪಾಗು
ವಲ್ಲಲ್ಲಿ ಕುಯ್ಯಲಾಗುವ ಪಲವು ಪೆಸರ್ವಡೆದ
ನೆಲ್ಲ ಗದ್ದೆಗಳತಿಮುದಂಬಡಿಸಿದುವು ತಮ್ಮನೋವಿದ ಕುಟುಂಬಿಗಳ್ಗೆ

ನಳನಳಿಸಿ ಬೆಳೆದ ನವಗಂಧಶಾಲಿಯ ವನಕೆ
ತಳಿಗಳಂ ಹೆಣೆವ ಕಪ್ಪಂ ತೋಡುವೆಸಕದ
ಟ್ಟಳೆಯನಿಕ್ಕುವ ಬೆಚ್ಚುಗಳನಿರದೆ ನೆಡುವ ಗುಡಿಲಂ ಹೊದಿಸಿ ಹಸಮಾಡುವ
ಕಳನ ಕೆತ್ತುವ ಮೋಟೆಯುಂನೆಡುವ ಕುಡಗೋಲ
ನುಱಿಯದೇ ಮಸೆಯಿಸುವ ಗೊಂದಣಂ ಗುಡಿಯುರುಗ
ಳೊಳಗೊಪ್ಪುವಡೆದುದಾಬಂದು ಬಂಧುರತೆಯಂ ನೆಱೆ ಪಡೆದ ಕಾರ್ತಿಕದೊಳು

ಮಂಗರಸ—ಸಂಯುಕ್ತ್ವ ಕೌಮುದಿ.
(೧೫೦೮)

# ೮೯. ಚೋಳದೇಶ

ಮಣಿ ಸರ್ಪ ನಕ್ಷತ್ರ ಧೇನು ಗಿರಿ ತರು ಸರ್ವ
ಗುಣ ಮಂತ್ರತತಿಯೊಳೆಸೆದಿರ್ಪ ಚಿಂತಾರತ್ನ
ಫಣಿಪ ಚಂದ್ರಮ ಕಾಮದುಘ ಮೇರು ಸುರವೃಕ್ಷ ದಾನ ಪಂಚಾಕ್ಷರಿಗಳ
ಗಣವೆಂತು ಘನವಧಿಕಮುಖ್ಯಾಗ್ರತಮಮುಖಾ
ಗ್ರಣಿ ಮಹತು ಶ್ರೇಷ್ಠಂಗಳಪ್ಪಂತೆ ಭರತಧಾ
ರಿಣಿಯ ನಾನಾದೇಶಕಿದು ಭಾಗ್ಯನಿಧಿಯೆನಿಸಿ ಚೋಳದೇಶಂ ಮೆಱೆದುದು

ಸೂರಿಜನಹರ್ಷವಿಸ್ತಾರಿ ಸುಖಸಂಕಥಾ
ಕಾರಿ ಬಱನೆರ್ದಗಂ ಕಠಾರಿ ಬೆಳಸಿರಿಯ ಭರ
ಭಾರಿ ಕುಶ್ರಮಸಂಘವೈರಿ ಜಲಚರಸದಾಧಾರಿ ಕಾಲಾರಿಶಿವನ
ನಾರಿ ಗಂಗಾಂಬಾವತಾರಿ ದುರ್ದೋಷಸಂ
ಹಾರಿಯೆಂದೊದಱುವತಿ ಭೇರಿಯಾರ್ಭಟೆ ವೀಚಿ
ಧಾರಿ ಬಹುಮಾರ್ಗಪ್ರಚಾರಿಯಾನಾಡ ಕಾವೇರಿ ಭೋರ್ಗರೆದೆಸೆದುದು

ಮೂಡೆಗಟ್ಟಂ ಕಟ್ಟಿ ಹುಡುಕುನೀರೊಳ್ ಮೆಟ್ಟಿ
ಕಾಡುತಿಹ ಪಾಮರರ ಕೈವಿಡಿತೆಗೊಳಗಾಗಿ
ನಾಡೆ ಪಂಕವ ಪುಗುತ್ತೆರ್ದೆಯೊಡೆದು ಪುಲ್ಗರ್ಚಿ ಕಂಟಕಂಬಡೆದೆವಿನ್ನು
ರೂಢಿಸಿದ ಕಾವೇರಿಯಿರ್ಕೆಲನೊಳಿರ್ದು ಶಶಿ
ಚೂಡಂಗೆ ಸಲ್ವ ಪೇರೊಲ್ಮೆಯಂ ಪಿಡಿದವರ
ಕೂಡೆ ಬಾಯ್ವಿಡಿಸದಿರೆವೆಂಬ ಕಟಿವೆಯ ಮಡಿಯ ಸಾಲುಗಳು ಸಲೆ
ಮೆಱೆದುವು

ನಡೆ ಮಂದವಾಯ್ತು ನಡುಗಡಸಿತ್ತು ಬಡತನಂ
ನುಡಿ ಮೆಲ್ಲನಾಯ್ತು ಕಟಿವೆಯು ಮಡಿಗಳಂ ಕಾವ
ಮಡದಿಯರ್ಗೆನುತೆ ಮುತ್ತಿದುವು ತಲೆಯಂ ತುಂಬಿ ಕೋಕಂಗಳೆರ್ದೆಯಡರ್ದುವು
ಅಡಿಗೆ ತೊಡಕಾದುವಂಚೆಗಳಿದೇ ಕಾಲವೆನು
ತೊಡನೆ ಗಿಳಿವಿಂಡು ಗರ್ದೆಯ ಸೂಱೆಗೊಳೆ ಕಿತ್ತು
ಪಿಡಿದು ಕರಕಂಜದಿಂದರಲ್ಬ ನೆಯ್ದಿಲ್ಪೂವನಿಡುವರಾಶಶಿಮುಖಿಯರು

ಕಲ್ಲೆರ್ದೆಯ ಕರಗದಂಗನೆಯರೆಮ್ಮಂ ಬಗೆವ
ರಲ್ಲೆಂದು ಪಥಿಕರ ಮೊಗಂ ಕಂದಿ ಬಾಯ್ ಬತ್ತಿ
ಮೆಲ್ಲನಾಗಲ್ ನಡೆಗಳುಸಿರ ಬಿಡುತಿರಲೆಣಿಸುತಾಸತಿಯರವರ ಕರೆದು
ಇಲ್ಲಿಗೈತರ್ಪನ್ನೆಬರ ನಿಮ್ಮ ಕುಱಿತು ಕೈ
ಯಲ್ಲಿ ಜೀವನವ ಪಿಡಿದಿರ್ದೆವೆನಲಳ್ಕುತವ
ರೆಲ್ಲ ಬಾಯ್ದಿಡಲಮೃತವೆರೆದಚ್ಚರಿಯರೆಸಿಸಿ ಮೆಱೆದರಱವಟಿಗೆಗಳೊಳು

ಅರೆವ ಚಂದನಕೆ ನಱುಸುಯ್ಗಂಪಿಗೆಱಪಳಿಗ
ಳುರವಣೆಗೆ ಸತಿ ರನ್ನದೊಡದೋಳನೆತ್ತುತಿರೆ
ಸುರಚಾಪವೆನಿಸಿತಲ್ತೆತ್ತಿದ ಕರವ ಬಳಸಿ ಪಿಂಛಾತಪತ್ರಗಳನು
ಸ್ಮರಗೆ ಪಿಡಿದಂತಾಯ್ತುದಲ್ತು ನೀಲದೊಳು ಶಂ
ಬರವೈರಿ ಸಂಗ್ರಹಣಮಂ ಮಾಡಿ ಪಿಡಿಸಿದನೊ
ಗರುಡಿಯೊಳು ತರುಣಿಯನದಲ್ತು ಕಾಮನ ಕರಾಗ್ರದ ಚಕ್ರವೆನಿಸಿತರರೆ!

**ಗುಬ್ಬಿ ಮಲ್ಲಣಾರ್ಯ–ಭಾವಚಿಂತಾರತ್ನಂ**
(ಸು. ೧೫೧೩)

# ೯೦. ಕಾಲಲೀಲೆ

ಹರನೆಂದು ದುಗ್ಧವಾರಿಧಿ ವಿಚಾರಿಸದೆ ಶಂ
ಕರನೆಂದು ತನ್ನ ತಿಂಗಳ ಶಿಶುವ ಕೊಡಲದಂ
ಹರಿವ ನೀರ್ ಮೊಱೆವ ಹಾವುರಿವ ಕಿಚ್ಚಿನ ಹೊಱೆಯೊಳಿರಿಸಲದು
ಸನ್ನಿವಟ್ಟು
ಶರಿರವೆಲ್ಲಂ ಕಂದಿ ಕುಂದಿತಭವಾ ನಿನ್ನ
ನೆರೆಯಲಿರ್ದೆನ್ನ ಮೆಯ್ಯುರೆಯಾಯಿತೆಂದೆಂಬ
ಗಿರಿಸುತೆಯ ಮಾತಿಂಗೆ ಮೆಚ್ಚಿ ನಲಿದಪ್ಪಿದೀಶ್ವರನೆಮ್ಮ ರಕ್ಷಿಸೊಲವಿಂ

ವಿವರಗೆಟ್ಟಿಂದುಮಿತ್ರನ ಮೇಲೆ ಜಗಲು ಸಂ
ಗವನೆಸಗಿ ದೋಷದೊಡನೊಂದಿದುಱಿಂದಾಳ್ದ
ಭುವನನಿಧಿಯಲ್ಲಿ ವಿಷಮಂ ಕುಡಿದು ಬಂದು ಕಣ್ಣೀರನೆಡೆವಿಡದೆ
ಕಱೆದು
ತವಕದಿಂ ಘನಘೋಷದಿಂದಟಿಲು ಪದ್ಮಿನೀ
ಯುವತಿಯರು ಮುಖಮುಗಿದು ಮಧುಕರಧ್ವನಿಗಳಿಂ
ತವೆ ಪಲುಂಬುವೊಲೆಸೆದ,ದಿದುವೆ ವರ್ಷಾಕಾಲವಾಹಾಹ !
ಬರದ ಶೂಲಾ

ಕಾಲರಜಕಂ ಮಲಿನದಿವಸಾಂಬರವನಾವಿ
ಶಾಲ ಸಾತಿಯ ಮಡುವಿನೊಳೊಗೆದು ದಕ್ಷಂಗೀಯ
ಲಾಲೋಕಿಸುತ್ತೈದೆ ಬೆಳೆಗಳಂ ಸಲಹಿದಳಿಯಂಗೆ ಧವಲಾಂಬರವನು
ಮೂಲವೈರಂ ಪೋಗೆ ದೀವಳಿಗೆಯೊಳು ಕಡೆದು
ಮೇಲವಂ ಪೊದಿಸಿ ಪರಸುತ್ತ್ರಕ್ಷತೆಯನಿಟ್ಟ
ವೋಲೊಪ್ಪಿದಂ ಶರನ್ಮೇಘದೊಳ್ ಚಂದ್ರಮಂ ತಾರಕಾನೀಕದಿಂದ

ಧಾವಲ್ಯದಂಬರವನುಟ್ಟು ಮುತ್ತಂ ತೊಟ್ಟು
ತೀವಿ ಮುಡಿಯಲ್ಲಿ ಮಲ್ಲಿಗೆಗಳಂ ಶಾರದಾ
ದೇವಿಯಂ ಪೋಲ್ವಿಂದುಮುಖಿಯರಧರಾಮೃತಂಗಳ ಚಕೋರಂಗಳಂತೆ
ಸೇವಿಸಿ ಸುಖಂಬಡೆವ ಕುವರರಂ ನೋಡಿ ಶರ
ಣಾವಳಿಯ ಭಕ್ತಿಯಿಂ ಶೋಷಿಸುತ ಪಾಪಪಂ
ಕಾವಳಿಯನಿಂತು ಸುಖದೊಳಿರೆ ಮಹಿಪಾಲನೈತಂದುದಾಹಿಮದ ಕಾಲಂ

ಗಂಗೆಯಂ ಪಣೆಯೊಡ್ಡಿ ಮುಂಡಾಡಿಯಾಲಿಕರ
ದಿಂ ಗಿರಿಜೆಯಂ ತಡವಿ ಜಲಜಭವವಾರಿಶಯ
ನಂ ಗೋತ್ರಭಿನ್ಮೇಘವಾಹನಾದಿಗಳ ಬರ್ಹಿರ್ಮುಖರ ಮಾಡಿ ಮಹಿಯ
ಪೊಂಗಿ ತಲೆಕೆಳಗುಮಾಡಿದ ಹಿಮವ ಮಝಭಾಪು !
ಪಿಂಗಿಸಿದನಭವನಂತಾರಾಹು ಹಿಮಕರನ
ನುಂಗಲಹಿಗಳು ರಸಾತಳಕೆಬೀದರೆಂದೊಡಾಹಿಮರಾಜನೇಂ ವೀರನೋ

ಅಂಜನದ ಸಿರಿಯಂತೆ ವರ್ಷದಾಗಸಪಾಂಗಿ
ನಿಂ ಜಲಧಿಶಯನ ವಿಷ್ಣುವಿನಂತೆ ವನಿತೆಯರ
ಮಂಜುಳಪಯೋಧರಂಗಳ ಸಾರ್ವ ಬಗೆಯಲ್ತು ಸೌಂದರಂಗಿಷ್ಟವಿತ್ತು
ರಂಜಿಸುವ ಶಿವಲಿಂಗದರ್ಶನಸ್ಪರ್ಶನಸ
ಮಂಜಸದ ಧೂಪದೀಪಾದಿಕಂ ನೈವೇದ್ಯ
ದಿಂ ಜಂಗಮನವನರ್ಚಿಸುತ್ತಿರಸನಿರೆ ಬಂದುದಂತಲ್ಲಿ ಶಶಿರಕಾಲಂ

**ಗುಬ್ಬಿ ಮಲ್ಲಣಾರ್ಯ–ಭಾವಚಿಂತಾರತ್ನಂ**
(ಸು. ೧೫೧೩)

## ೯೧. ಪ್ರಹ್ಲಾದ

ಹುಟ್ಟುತವೆ ಪರತತ್ತ್ವವೇ ಒಡ
ಲಿಟ್ಟು ಜನಿಸಿತೊ ! ಬೊಮ್ಮವಿದ್ಯೆಯು
ಸೃಷ್ಟಿಗಧಿದೇವತೆಯೊ! ನಿಜಸಾಮ್ರಾಜ್ಯವೈಭವಕೆ
ಪಟ್ಟಭದ್ರನೊ! ಪರಮಮುಖಕಳ
ವಟ್ಟ ಸಿದ್ಧನೊ! ಭಾಗವತಜನ
ಪಟ್ಟಕಲ್ಪದ್ರುಮದಸಂಪದವೆನಲು ರಂಜಿಸಿದ

ನುಡಿಸುತಲೆ ನಾಲಗೆಗೆ ಬಂದುದು
ತಡೆಯದಚ್ಯುತನಾಮಕೀರ್ತನ
ವೊಡನೊಡನೆ ಪರಮೇಷ್ಠಿವಂದ್ಯ ಮುಕುಂದ ಹರಿಯೆಂದು
ನಡೆವುತಲೆ ತದ್ಧ್ಯಾನ ದಾಸ್ಯದ
ನಡೆ ನಿಜಾಂಗವದಾಯ್ತು ಶಿವಶಿವ
ಪೊಡವಿಪಾವನಚರಿತನೆಸೆದನುದಗ್ರತೇಜದಲಿ

ಸರ್ವಭೂತಸುಹೃತ್ತಮನು ಜಿತ
ಗರ್ವನಕ್ರೋಧನಸುಪಾಸಿತ
ಸರ್ವಸಜ್ಜನಚರಣನಾರಂಜಿತಗುಣಾಭರಣ
ಉರ್ವಿಪಾವನಪುಣ್ಯಚರಿತನು
ಸರ್ವಜನಸಂಸ್ತುತ್ಯನಘಕುಲ
ದುರ್ವಿಗಾಹ್ಯವಿಕಾರನೆಸೆದನುದಗ್ರತೇಜದಲಿ

ಹಿರಿಯರೊಳು ಗುರುಬುದ್ಧಿ ಸಚರಾ
ಚರದೊಳಗೆ ಹರಿಬುದ್ಧಿ ಮೇಣೊ
ಪ್ಪಿರೆ ನಿಜಾತ್ಮಕಬುದ್ಧಿ ತನಗೆ ಸಮಾನಜೀವರಲಿ

ದುರಿತದುಸ್ತರದುಃಖಶೋಕಾ
ತುರರೊಳಗೆ ಸುತಬುದ್ಧಿ ವಿಶ್ವಂ
ಭರನ ವರ್ಗದೊಳತಿಶಯಪ್ರಿಯಬುದ್ಧಿಯೆನಲೆಸೆದ

ಒಡನೆ ಕರೆದರೆ ಮಕ್ಕಳಾಟ
ಕ್ಕಡಿಯಿಡದೆ ಜಿಹ್ವೇಂದ್ರಿಯದ ರಸ
ದೆಡೆಯ ಚಾಪಲ್ಯದಲಿ ಸಿಲುಕದೆ ಸರ್ವವಿಷಯದಲಿ
ಸೆಡೆದು ಮನದಾಸಕ್ತಿಯನು ಬೆಂ
ಬಿಡದೆ ತಾನೀಮುರಹರನ ಮೆ
ಲ್ಲಡಿಗಳನು ಮನಮೆಚ್ಚಿ ಬಿಗಿಯಪ್ಪಿರ್ದನೊಲವಿನಲಿ

ಅಹಹ! ಹಸುಳೆಯದೇಕೆ ಜಡನಾ
ಗಿಹುದು ಸಹಜವೊ ಮೇಣು ಬಾಲ
ಗ್ರಹಗ್ರಹೀತನೊ! ಯೆಂದು ಕಂಡವರೆಲ್ಲ ಬೆರಗಾಗೆ
ಗಹಗಹಿಸಿ ನಗುತಾ ಮುಕುಂದನ
ಮಹಿಮೆಯನೆ ಮನದೊಳಗೆ ಭಾವಿಸಿ
ಮಹಿಮನಳುವನು ಕಣ್ಗೆ ಗೋಚರವಾಗನೇಕೆಂದು

ಆಡುವನು ಮನಬಂದ ಪರಿಯಲಿ
ಪಾಡುವನು ಪಾವನಗುಣವನೀ
ಡಾಡಿ ಲಜ್ಜೆಯನೆದ್ದು ಕುಣಿಕುಣಿದಳುವನೊಮ್ಮೊಮ್ಮೆ
ನೋಡುವನು ದೆಸೆದೆಸೆಯನಾಮುರ
ಗೇಡಿಯನೆ ಹಂಬಲಿಸಿ ಬೆಂಬಳ
ಬಾಡುವನು ಬಳುಕುವನು ಬಸವಳಿವನು ತದಿಚ್ಛೆಯಲಿ

ತಂದೆಯನು ಬಿಗಿದಪ್ಪಿದರ್ಭಕ
ನಂದದಲಿ ಬಿಡದಾಮುಕುಂದನ
ವಂದ್ಯಚರಣಂಗಳನೆ ಮನದಲಿ ತೆಗೆದು ಬಿಗಿಯಪ್ಪಿ
ಹಿಂದುಮುಂದಿಂದೆಂಬ ಭೇದವ
ನೊಂದುವನು ಮೇಣರಿಯದಚಲಾ
ನಂದಮಯರಸಜಲಧಿಯಲಿಮುಳುಗಿಪ್ಪನನವರತ

ಯೋಗನಿಧಿಯಂ ಹೋಲುತಾನುಣು
ವಾಗ ಕಜ್ಜಾಯಂಗಳನು ಮೆಲು
ವಾಗ ಮೆಲ್ಲನೆ ಹೆಜ್ಜೆಯನು ಮೇದಿನಿಯಲಿಡುವಾಗ
ರಾಗದಲಿ ನಿದ್ರೆಯನು ನೆರೆ ಮಾ
ಳ್ಪಾಗ ಸರ್ವೇಂದ್ರಿಯವಿಷಯಸಂ
ಭೋಗದನುಸಂಧಾನ ತನಗಿಲ್ಲರಸಕೇಳೆಂದ

**ಚಾಟುವಿಠ್ಠಲನಾಥ-ಭಾಗವತ**
(೧೫೩೦)

## ೯೨. ಇದನಾದರು ಕೊಡದಿದ್ದರೆ

**ರಾಗ — ಕೇದಾರಗೌಳ ಅಟತಾಳ**

ಇದನಾದರು ಕೊಡದಿದ್ದರೆ, ನಿನ್ನ
ಪದಕಮಲವ ನಂಬಿ ಭಜಿಸುವುದೆಂತೊ

ಗ್ರಾಸವಾಸಗಳಿಗೆ ಇಲ್ಲವೆಂದು ನಿನ್ನ
ಬೇಸತ್ತು ಬೇಡ ಬಂದುದಿಲ್ಲ–
ವಾಸುದೇವನೆ ನಿನ್ನ ದಾಸರ ದಾಸರ
ದಾಸರ ದಾಸ್ಯವ ಕೊಡು ಸಾಕೆಂದರೆ

ಒಡವೆಗಳಿಲ್ಲ ವಡ್ಯಾಣಗಳಿಲ್ಲೆಂದು
ಬಡವನೆಂದು ಬೇಡ ಬಂದುದಿಲ್ಲ
ಒಡೆಯ ನಿನ್ನಡಿಗಳಿಗೆರಗುವುದಕೆ ಮನ
ವಿಡುತಿಹುದೊಂದನು ಕೊಡು ಸಾಕೆಂದರೆ

ಸತಿಸುತರುಗಳಿಂದ ಸಹಿತವಾಗಿ ನಾನು
ಹಿತದಿರಬೇಕೆಂದು ಬಂದುದಿಲ್ಲ
ಇತರ ವಿಷಯಕ್ಕೆರಗುವ ಮನಸಿಗೆ ನಿನ್ನ
ಸತತ ಕಥಾಮೃತ ಕರುಣಿಸು ಎಂದರೆ

ಸಾಲವಾಯಿತು ಇನ್ನು ಸಂಬಳವೆನಗೆ
ಸಾಲದೆಂದು ಬೇಡ ಬಂದುದಿಲ್ಲ
ನಾಲಿಗೆಯುಲಿ ನಿನ್ನ ನಾಮಾಮೃತವನ್ನು
ಕಾಲಕಾಲದಿ ಪಾಲಿಸಬೇಕಂದರೆ

ಆಗಬೇಕು ರಾಜ್ಯಭೋಗಗಳೆನುತಲಿ
ರಾಗದಿಂದ ಬೇಡ ಬಂದುದಿಲ್ಲ
ನಾಗಶಯನ ರಂಗ ವಿಠ್ಠಲ ನಾ ನಿನ್ನ
ಬಾಗಿಲು ಕಾಯುವ ಭಾಗ್ಯ ಸಾಕೆಂದರೆ

**ಶ್ರೀಪಾದರಾಯರು** (ಸು. ೧೫೦೦)

## ೯೩. ಉಗಾಭೋಗ

ನೀರಿಲ್ಲದ ಭಾವಿ ಊರಿಲ್ಲದ ಮಠವು
ನೆಳಲಿಲ್ಲದ ಮರ ಫಲವಿಲ್ಲದ ಲತೆ

ಧನವಿಲ್ಲದ ದಾತ ದಯವಿಲ್ಲದ ನಾಥ
ಮನಸಿಲ್ಲದ ಶಕುತಿ ಭಯವಿಲ್ಲದ ಭಕುತಿ
ನರಹರಿ ಮುಕುಂದ ಶ್ರೀ ಕೃಷ್ಣ ಎನ್ನದ
ನರರಿದ್ದು ಫಲವೇನು ಇಲ್ಲದಿದ್ದರೆ ಏನು

**ವ್ಯಾಸರಾಯರು** (ಸು. ೧೫೨೫)

## ೯೪. ವೃಂದಾವನ

**ರಾಗ — ಶಂಕರಾಭರಣ ಆದಿತಾಳ**

ವೃಂದಾವನದಿ ನೋಡುವ ಬಾರೆ ಗೋ
ವಿಂದನಾಡುವ ಸಂದಣಿ ಸಾಲದೆ ಸಖಿ

ಮುನಿಗಳು ತರು ಪಕ್ಷಿ ಮೃಗಂಗಳಾಗಿರೆ
ಸನಕಾದಿಗಳು ಗೋವುಗಳಾಗಿರೆ
ಅನಿಮಿಷರೆಲ್ಲರು ಗೋಪಾಲರಾಗಿರೆ
ದನುಜಾಂತಕನು ಮನುಜನಂತಾಗಿರೆ

ತಳಿರು ತೋರಣದಿಂ ತಂಪಿನ ನೆಳಲಿಂ
ಮಳೆಯಾಗಿ ಸುರಿವಾ ಮಕರಂದ ಜಲದಿಂ

ಫಲ ಪುಂಜಗಳಿಂ ಶುಕಚಾಟುಗಳಿಂ
ನಳಿನನಾಭನನುಪಚರಿಪ ವೃಕ್ಷಗಳುಳ್ಳ

ತಳಿತ ತರುಗಳಲ್ಲಿ ತಂತಮ್ಮ ಜಾತಿಯ
ಉಲುಹನುಳಿದು ಕಣ್ಣುಮುಚ್ಚಿ ತೆರೆಯುತ್ತ
ನಳಿನನಾಭನ ವೇಣುಗೀತೆಯ ರಸದಲ್ಲಿ
ಮುಳುಗಿ ಮುನಿಗಳಂತಿಪ್ಪ ಪಕ್ಷಿಗಳುಳ್ಳ

ಚಿತ್ತಜನಯ್ಯನ ವೇಣುನಾದವ
ಎತ್ತಿದ ಕಿವಿಯಿಂದ ಸವಿಯುತಲಿ
ಮತ್ತಾದ ಸುಖಜಲ ಕಡಲಾಗಿ ಹರಿಯಲು
ಚಿತ್ತಾರದಂತಿಪ್ಪ ತುರುವಿಂಡುಗಳುಳ್ಳ

ರಂಗನ ಪದ ನಖ ತಿಂಗಳ ಬೆಳಕಿಗೆ
ತುಂಗ ಚಂದ್ರಕಾಂತ ಶಿಲೆ ಒಸರಿ
ಹಿಂಗದೆ ಹರಿದು ಕಾಳಿಂದಿಯ ಕೂಡಲು
ಗಂಗೆ ಯಮುನೆಯರ ಸಂಗಮದಂತಿಪ್ಪ

ಸಿರಿಯರಸನ ನಗೆಮೊಗವೆಂಬ ಚಂದ್ರನು
ವರಕೌಸ್ತುಭವೆಂಬ ಬಾಲರವಿಯು
ಎರಡನು ಕಂಡು ಚಕೋರ ಚಕ್ರವಾಕ
ಇರುಳು ಹಗಲು ಎಂದು ಹೋರುತಲಿರುತಿಪ್ಪ

ಹರಿಯ ಕೊಳಲ ಸ್ವರದತಿ ಮೋಹನಕೆ
ತರುವೊಗ್ಗೆಗಳಿಂ ಪುಳುಕಿತವಾಗೆ
ಗಿರಿಯು ಝರಿಯೊನೆವದಿಂ ಕರಗಲು
ತೊರೆಯು ಸುಳಿಯ ನೆವದಿಂದ ತಾ ನಿಲ್ಲುವ

ಅಳಿಗಳು ಗಾನದಿಂದುಲಿದುಲಿದಾಡುತ್ತ
ಹಲವು ವರ್ಣದ ವನದೇವತೆಗಳಿಲ್ಲ
ಚಲುವ ಕುಂಡಲ ತಾಳಮೇಳದ ರಭಸಕ್ಕೆ
ನಲಿನಲಿದಾಡುವ ನವಿಲು ಹಿಂಡುಗಳುಳ್ಳ

ನಳನಳಿಸುವ ವನಮಾಲೆ ಇಂದ್ರಚಾಪ
ಪೊಳೆವ ಪೊಂಬಟ್ಟೆ ಮಿಂಚು ವೇಣುಗಾನ
ಎಳೆಯ ಗರ್ಜನೆ ಶ್ಯಾಮಮೇಘ ಕೃಷ್ಣ
ಮಳೆಯ ಮೇಘವೆಂದು ಚಾತಕ ನಲಿಯುತ

**ವ್ಯಾಸರಾಯರು** – ಸು. (೧೫೨೫)

## ೯೫. ಮಾನವಜನ್ಮ

ರಾಗ- ರೇಗುಪ್ತಿ ಅಟತಾಳ

ಮಾನವಜನ್ಮ ದೊಡ್ಡದು ಇದ
ಹಾನಿ ಮಾಡಲುಬೇಡಿ ಹುಚ್ಚಪ್ಪಗಳಿರಾ ॥ ಪ ॥

ಕಣ್ಣು ಕೈ ಕಾಲ್ಕಿವಿ ನಾಲಗೆ ಇರಲಿಕ್ಕೆ
ಮಣ್ಣು ಮುಕ್ಕಿ ಹುಚ್ಚರಾಗುವರೆ
ಹೆಣ್ಣು ಮಣ್ಣಿಗಾಗಿ ಹರಿಯ ನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ

ಕಾಲನ ದೂತರು ಕಾಲ್ಪಿಡಿದೆಳೆವಾಗ
ತಾಳು ತಾಳೆಂದರೆ ತಾಳುವರೆ
ಧಾಳಿ ಬಾರದ ಮುನ್ನ ಧರ್ಮವ ಗಳಿಸಿರೊ
ಹಾಳು ಸಂಸಾರಸುಳಿಗೆ ಸಿಕ್ಕಲು ಬೇಡಿ

ಏನು ಕಾರಣ ಯದುಪತಿಯನು ಮರೆತಿರಿ
ಧನ ಧಾನ್ಯ ಪುತ್ರರು ಕಾಯುವರೆ
ಇನ್ನಾದರು ಏಕೋ ಭಾವದಿ ಭಜಿಸಿರೊ
ಚೆನ್ನ ಶ್ರೀಪುರಂದರವಿಟ್ಠಲರಾಯನ

**ಪುರಂದರದಾಸ** (ಸು. ೧೫೪೦)

# ೯೬. ಮನವ ಶೋಧಿಸಬೇಕು

ರಾಗ ನಾದನಾಮಕ್ರಿಯೆ ಛಾಪುತಾಳ

ಮನವ ಶೋಧಿಸಬೇಕೋ ನಿಚ್ಚ ದಿನ
ದಿನ ಮಾಡುವ ಪಾಪ ಪುಣ್ಯದ ವೆಚ್ಚ ॥ ಪ ॥

ಧರ್ಮ ಅಧರ್ಮ ವಿಂಗಡಿಸಿ ಅ
ಧರ್ಮದ ನರಗಳ ಬೇರ ಕತ್ತರಿಸಿ
ನಿರ್ಮಲಾಚಾರದಿ ಚರಿಸಿ ಪರ
ಬೊಮ್ಮಮೂರುತಿ ಪಾದಕಮಲವ ಭಜಿಸಿ

ತನುವ ಖಂಡಿಸಿ ಒಮ್ಮೆ ಮಾಣೋ ನಿನ್ನ
ಮನವ ದಂಡಿಸಿ ಪರಮಾತ್ಮನ್ನ ಕಾಣೋ
ಕೊನೆಗೆ ನಿನ್ನೊಳಗೆ ನೀ ಜಾಣೋ ಮುಕ್ತಿ
ನಿನಗೆ ದೂರಿಲ್ಲವು ಒಂದೇ ಗೇಣೋ

ಆತನವರಿಗೆ ಕೇಡಿಲ್ಲ ಆವ
ಪಾತಕ ಪತಿತಸಂಗವ ಮಾಡ್ವನಲ್ಲ
ನೀತಿವಂತರು ಕೇಳಿರೆಲ್ಲ ನಮ
ಗಾತನೆ ಗತಿಯಾವ ಪುರಂದರವಿಠಲ

**ಪುರಂದರದಾಸ** (ಸು. ೧೫೪೦)

## ೯೭. ಮೂರ್ಖರು

ರಾಗ ಕೇದಾರಗೌಳ ಝಂಪೆತಾಳ

ಮೂರ್ಖರಾದರು ಜನರು ಲೋಕದೊಳಗೆ ॥ ಪ ॥
ಏಕ ದೇವನ ಬಿಟ್ಟು ಕಾಕು ದೈವವ ಭಜಿಸಿ ॥ ಅ ॥

ಒಂಟಿಯಲಿ ಹೆಂಡತಿಯ ಬಿಡುವಾತನೇ ಮೂರ್ಖ
ಗಂಟನೊಬ್ಬರ ಕೈಯಲಿಡುವಾತ ಮೂರ್ಖ
ನೆಂಟರಿಗೆ ಸಾಲವನು ಕೊಡುವಾತ ಮೂರ್ಖ
ಕಂಟಕನಾಗಿರುವ ಕಡು ಮೂರ್ಖನಯ್ಯ

ಪಡೆದ ಮಕ್ಕಳ ಮಾರಿ ಒಡಲ ಪೊರೆವವ ಮೂರ್ಖ
ಮಡದಿ ಹುಟ್ಟಿದ ಮನೆಯಲಿರುವವ ಮೂರ್ಖ
ಬಡತನವು ಬಂದಾಗ ಬೈದುಕೊಂಬವ ಮೂರ್ಖ
ದೃಢಭಕ್ತಿಯಿಲ್ಲದವ ಕಡು ಮೂರ್ಖನಯ್ಯ

ಮುಪ್ಪಿನಲಿ ಮದುವೆಯನು ಮಾಡಿಕೊಂಬವ ಮೂರ್ಖ
ಸರ್ಪನಲಿ ಸರಸವಾಡುವನೆ ಮೂರ್ಖ
ಇಪ್ಪತ್ತುವೊಂದು ಕುಲ ಉದ್ಧರಿಸದವ ಮೂರ್ಖ
ಅಪ್ಪ ರಂಗಯ್ಯನ ಭಜಿಸದವ ಮೂರ್ಖ

ರಾಮನಾಮವ ಭಜಿಸಿ ನೆನೆಯದವ ಮೂರ್ಖ
ಹೇಮವನು ಗಳಿಸಿ ಉಣದವನು ಮೂರ್ಖ
ಕಾಮದಲಿ ಹಿರಿಯಳನು ಕೂಡಿಕೊಂಡವ ಮೂರ್ಖ
ಭೂಮಿದಾನವ ತೆಗೆದ ಭೂಪತಿಯು ಮೂರ್ಖ

ಕಾಶಿಯಲಿ ದೇಹವನು ತೊಳೆಯದಿದ್ದವ ಮೂರ್ಖ
ಭೂಸುರರಿಗನ್ನವನು ಕೊಡದವನು ಮೂರ್ಖ
ಶೇಷಗಿರಿ ಕೃಷ್ಣನ್ನ ಭಜಿಸದಿದ್ದವ ಮೂರ್ಖ
ದಾಸನಾಗದ ಮನುಜ ಕಡು ಮೂರ್ಖನಯ್ಯ

ಸತ್ತ ಕರುವಿನ ತಾಯ ಹಾಲ ಕರೆವವ ಮೂರ್ಖ
ಒತ್ತೆಯಿಲ್ಲದೆ ಸಾಲ ಕೊಡುವವನು ಮೂರ್ಖ
ಹತ್ತೆಂಟು ಬಗೆಯಲ್ಲಿ ಹಂಬಲಿಸುವವ ಮೂರ್ಖ
ಹೆತ್ತ ತಾಯಿಯ ಬೈವ ಕಡು ಮೂರ್ಖನಯ್ಯ

ಸ್ವಾಮಿನಾಮವ ಬಿಡದೆ ಭಜಿಸದಿದ್ದವ ಮೂರ್ಖ
ಸ್ವಾಮಿ ಗುರುಹಿರಿಯರಿಗೆ ಎರಗದವ ಮೂರ್ಖ
ನೇಮದಲಿ ಹರಿಕಥೆಯ ಕೇಳದವ ತಾ ಮೂರ್ಖ
ತಾಮಸರ ಕೂಡಿಕೊಂಬವನೆ ಕಡು ಮೂರ್ಖ

ಉಂಡ ಮನೆಗೆರಡನ್ನು ಬಗೆಯುವಾತನೆ ಮೂರ್ಖ
ಕೊಂಡೆ ಮಾತನು ಕೇಳಿ ಕುಣಿವವನು ಮೂರ್ಖ
ಪುಂಡರೀಕಾಕ್ಷ ಶ್ರೀ ಪುರಂದರವಿಟ್ಠಲನ
ಕೊಂಡಾಡಿ ಭಜಿಸದವ ಕಡು ಮೂರ್ಖನಯ್ಯ

**ಪುರಂದರದಾಸ** (ಸು. ೧೫೪೦)

## ೯೮. ರಂಗಕೊಳಲನೂದಲು

ರಾಗ ಆರಭಿ ತಾಳ

ರಂಗ ಕೊಳಲನೂದಲಾಗಿ
ಮಂಗಳಮಯವಾಯ್ತು ಧರೆ ಜ
ಗಂಗಳು ಚೈತನ್ಯ ಮರೆದು
ಅಂಗ ಪರವಶವಾದುವು

ತೀಡಿದ ಮಾರುತ ಮಂದಗತಿಗೈಯೆ
ಬಾಡಿದ ಬರಲು ಫಲಗೊಂಚಲು ಬಿಡೆ
ಪಾಡಲೊಲ್ಲವಳಿ ಕುಲಗಳು
ಬಾಡಿದ ಮಾಮರ ಚಿಗುರೊಡೆಯೆ

ಹೇಡಿಗೊಂಡವು ಜಾಣ್ವಕ್ಕಿಗಿಳಿ, ಮಾ
ತಾಡದೆ ಕಳೆಗುಂದಿದವು ಕೋಗಿಲೆ
ಓಡಾಟ ವೈರವ ಬಿಟ್ಟು ಖಗಮೃಗ
ಗಾಢ ನಿದ್ರಾವಶವಾದುವು

ತಳದುದಕ ಉಕ್ಕೇರಿ ಬಂದವು
ತುಳುಕಿ ಚೆಲ್ಲಾಡಿ ಬಂದಳು ಯಮುನೆ
ಮೇಲೆ ಮೇಲೋಡಿ ಮೇಘಾಳಿ ಧಾರಿಟ್ಟುವು
ಕಲ್ಲು ಕರಗಿ ನೀರಾದುವು

ನಳಿನ ಚಂಪಕ ನಾಗ ಪುನ್ನಾಗ ಪಾ
ಟಲ ಸೇವಂತಿಗೆ ಕುಂದ ಬಕುಳವು

ಮಾಲತಿ ಜಾಜಿ ಪರಿಮಳಗೂಡಿತು
ನೀಲಾಂಗನಂಘ್ರಿಗೆರಗಿದವು

ಮುದ್ದು ಮೋಹನನ ಮಂಜುಳ ಸಂಗೀತ
ಸದ್ದನಾಲೈಸಿ ಗೋಪಾಂಗನೆಯರೆಲ್ಲ
ಬುದ್ಧಿ ಸೂರಾಡಿ ಆನಂದವಾರಿಧಿಯಲ್ಲಿ
ಬಿದ್ದು ಪರವಶರಾದರು

ಸಿದ್ಧ ಮುನಿಜನರಿದ್ದ ಸಮಾಧಿಯೊ
ಳೆದ್ದು ಕುಣಿದರು ಎದುರೆದುರಾಗಿ
ಗದ್ದುಗೆಯರಸ ನೋಲೈಸಿಕೊಂಡರು
ಗೆದ್ದರು ಭವಸಮುದ್ರವ

ಕೆಚ್ಚಲು ಬಿಗಿದು ತೊರೆಯಲು ಮೊಲೆಯು
ವತ್ಸಗಳೊಡಲಾಸೆಯ ತೊರೆದೆಳೆಹುಲ್ಲ
ಕಚ್ಚಿರಲಲ್ಲಿ ನಿಂಮವು ಗೋವುಗಳು
ಪುಚ್ಛವನೆಗಹಿನೀಂಟಿಸಿ

ಅಚ್ಯುತನಾಕೃತಿ ನೋಡಲು ಸುರರಿಗೆ
ಆಶ್ಚರ್ಯವಾಯಿತು ನಾವು ಕಂಡೆವೆಂದು
ಮೆಚ್ಚಿ ಮುಕುಂದನ ಲೀಲಾವಿನೋದಕೆ
ಹೆಚ್ಚಿನ ಕುಸುಮವ ಸುರಿದರು

ಶ್ರೀ ಮನೋಹರ ಗೋಪಾಲ ಮೂರುತಿ
ಆ ಮಧುಕುಂಜವನದಿ ತ್ರಿಭಂಗಿಲಿ

ಹೇಮಾಂಬರವುಟ್ಟು ಗೀರ್ಗಂಧ ಕಸ್ತೂರಿ
ನಾಮ ಮಕುಟದ ಬೆಳಕಿನಲಿ

ಧಾಮವನಮಾಲೆ ಬರ್ಹಿಭೂಷಿತ
ಸ್ವಾಮಿ ಪುರಂದರ ವಿಠಲ ರಾಯನು
ನಾಮಕ್ರಿಯ ಮೇಘ ರಂಜಿನಿ ಪಾಡೆ
ಸಾಮವೇದ ನಮೋ ನಮೋ ಎನ್ನೆ

**ಪುರಂದರದಾಸ** (ಸು. ೧೫೪೦)

## ೯೯. ಎಲ್ಲವೂ ನಿನ್ನದು

**ರಾಗ ಕೇದಾರಗೌಳ ಅಟತಾಳ**

ತನು ನಿನ್ನದು ಜೀವನ ನಿನ್ನದು, ಸ್ವಾಮಿ
ಅನುದಿನದಲಿ ಬಾಹ ಸುಖದುಃಖ ನಿನ್ನವಯ್ಯಾ ||ಪ||

ಸವಿನುಡಿ ವೇದಪುರಾಣ ಶಾಸ್ತ್ರಗಳೆಲ್ಲ
ಕಿವಿಗೊಟ್ಟು ಕೇಳುವ ಸ್ಥಿತಿ ನಿನ್ನದು
ನವ ಯೌವನ ಮೋಹನಾಂಗಿಯ ರೂಪವ
ಎವೆಯಿಕ್ಕದೆ ನೋಡುವ ನೋಟ ನಿನ್ನದಯ್ಯಾ

ಒಡಗೂಡಿ ಗಂಧಕಸ್ತೂರಿ ಪರಿಮಳವೆಲ್ಲ
ಬಿಡದೆ ಲೇಪಿಸಿಕೊಂಬುದು ನಿನ್ನದು
ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ
ಕಡು ರುಚಿಗೊಳ್ಳುವ ಸವಿ ನಿನ್ನದಯ್ಯ

ಮಾಯಾಪಾಶದ ಬಲೆಯೊಳು ಸಿಕ್ಕಿ ತೊಳಲುವ
ಕಾಯ ಪಂಚೇಂದ್ರಿಯು ಗತಿ ನಿನ್ನದು
ಕಾಯಜಪಿತ ಕಾಗಿನೆಲೆಯಾದಿ ಕೇಶವ
ರಾಯ ನೀನಲ್ಲದೆ ನರರು ಸ್ವತಂತ್ರರೇ

**ಕನಕದಾಸ.** (ಸು. ೧೫೫೦)

## ೧೦೦. ಅವರ್ಣನೀಯ

ಕಾಂಭೋದಿ ರಾಗ ಝಂಪೆತಾಳ

ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ ||ಪ||
ನೀ ದೇಹದೊಳಗೊ ನಿನ್ನೊಳು ದೇಹವೊ ||ಅ. ಪ.||

ಬಯಲೊಳಗೆ ಆಲಯವೊ ಆಲಯದೊಳಗೆ ಬಯಲೊ
ಬಯಲು ಆಲಯವೆರಡು ನಯನದೊಳಗೊ
ನಯನ ಬುದ್ಧಿಯ ಒಳಗೊ ಬುದ್ಧಿ ನಯನದ ಒಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೇ

ಸವಿಯು ಸಕ್ಕರೆಯೊಳಗೊ ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ
ಜಿಹ್ವೆ ಬುದ್ಧಿಯ ಒಳಗೊ ಬುದ್ಧಿ ಜಿಹ್ವೆಯ ಒಳಗೊ
ಜಿಹ್ವೆ ಬುದ್ಧಿಗಳೆರಡು ನಿನ್ನೊಳಗೊ ಹರಿಯೇ

ಕುಸುಮದೊಳು ಗಂಧವೊ ಗಂಧದೊಳು ಕುಸುಮವೊ
ಕುಸುಮ ಗಂಧಗಳೆರಡು ಘ್ರಾಣದೊಳಗೊ
ಅಸಮಭವ ಕಾಗಿನೆಲೆಯಾದಿ ಕೇಶವ ನಿನ್ನ
ಉಸುರಲೆನ್ನೊಶವೆ ಸರ್ವವು ನಿನ್ನೊಳ್ಹರಿಯೆ

**ಕನಕದಾಸ.** (ಸು. ೧೫೫೦)

## ೧೦೧. ನಳನ ವಿಕಾರರೂಪ

ಕೇಳು ಕುಂತೀತನಯ ನಿಷಧನೃ
ಪಾಲನಿತ್ತಲು ಮಱೆದು ಮಲಗಿದ
ಬಾಲೆಯನು ಬಿಟ್ಟಡವಿಯಲಿ ಪೊಱಮಟ್ಟನಾಶ್ರಯವ
ಕಾಲವಾತನ ಕೀಳುಮಾಡಿತು
ಶೂಲಪಾಣಿಯೆ ಬಲ್ಲ ನಳಭೂ
ಪಾಲಕನ ವಿಧಿಯೇನನೆಂಬೆನು ಬಂದನಡವಿಯಲಿ

ವನಿತೆ ಮಲಗಿಹಳೋ ಅಧೈರ್ಯದಿ
ನೆನೆವಳೋ ದೈವವನು ಮನದಲಿ
ಕನಸ ಕಂಡೇಳುವಳೊ ಕಾಣದೆ ಹಲವ ಹಂಬಲಿಸಿ
ಕನಲಿ ವಿಧಿಯನು ಬಯ್ವಳೋ ಕಂ
ಬನಿಯ ಸುರಿವಳೊ ಶೋಕದಲಿ ನಿಜ
ತನುವ ಬಿಡುವಳೊ ಕಾಂತೆಯೆಂತಿಹಳೆನುತ ಬಿಸುಸುಯ್ದು

ಸುತರ ಪರರೆಡೆಗಿತ್ತು ನಂಬಿದ
ಸತಿಯ ತಂದಡವಿಯಲಿ ಮಲಗಿಸಿ
ಮತಿವಿಕಳನಾದೆನು ಪುರಾಕೃತಕರ್ಮಫಲವೈಸೆ
ಕ್ಷಿತಿಯೊಳಾರುಂಟೆನ್ನವೊಲು ನಿಜ
ಸತಿಗೆ ತಪ್ಪಿದ ಬಾಹಿರರು ಎಂ
ದತಿಶಯದ ಶೋಕದಲಿ ನಡೆದನು ಶಿವ ಶಿವಾಯೆನುತ

ಲೋಕದೊಳಗಗ್ಗಳೆಯ ಮಹಿಪರ
ನೇಕರವರೊಳಗಾರನೊಲ್ಲದೆ
ನೂಕಿ ತನ್ನನೆ ಒಲಿದು ಕೈಕೊಂಡಳು ಸರೋಜಮುಖಿ

ಆಕೆಯಗಲಿದ ಪಾತಕನು ತಾ
ನೇಕೆ ಧರೆಯೊಳು ಶಿವಶಿವಾಯೆಂ
ದಾಕಮಲಲೋಚನೆಗೆ ಮಱುಗಿದನರಸ ಕೇಳೆಂದ

ಈಪರಿಯೊಳತಿಶೋಕದಿಂದ ಪ್ರ
ಲಾಪಿಸುತಲಾನೃಪತಿ ಹೆಚ್ಚಿದ
ತಾಪದಲಿ ಕಡುನೊಂದು ಬಳಲಿದ ತನ್ನ ಮನದೊಳಗೆ
ಶ್ರೀಪತಿಯ ನೆನೆಯುತ್ತ ಹೃದಯದ
ತಾಪದೊಳು ಬರುತಿರಲು ಮುಂದೆ ಸ
ಮೀಪದೊಳು ಹುತವಹನ ಮಹಿಮೆಯ ಕಂಡನವನೀಶ

ಬಿದಿರಮೆಳೆ ಧಗಧಗಿಸೆ ಘನಹೆ
ಬ್ಬಿದಿರು ಛಟಛಟಯೆನಲುವುರಿಯೊಳು
ಕದಳಿಗಳು ಸಿಮಿಸಿಮಿಸೆ ತರುಗಳನುರುಹಿ ಮೆಳೆಗಳೊಳು
ಗದಗದಿಸೆ ಗುಹೆಗಳಲಿ ಮೃಗತತಿ
ಬೆದಱ ಹಾಯ್ದುವು ಪಕ್ಷಿಸಂಕುಲ
ಮುದುರಿದುವು ಗರಿಸಹಿತ ಬೆಂದಾ ವನದ ಮಧ್ಯದಲಿ

ತೆಗೆದು ಹಾಯ್ದುವು ಸಿಂಹಶಾರ್ದೂ
ಲಗಳು ಕರಿಗಳ ಹಿಂಡು ನಾನಾ
ಮೃಗಗಳಗಣಿತ ಬೆಂದು ಬಿದ್ದುವು ನಿಮಿಷಮಾತ್ರದಲಿ
ಚಿಗಿದು ಹಾಯ್ದುಱೆ ಗಂಡಭೇರುಂ
ಡಗಳು ಮೊದಲಾದಖಿಳಮೃಗಪ
ಕ್ಷಿಗಳು ಕೆಡೆದುವು ಕಿಚ್ಚಿನೊಳಗವನೀಶ ಕೇಳೆಂದ

ಪ್ರಳಯದಿನದಲಿ ಸುಳಿವ ಬಡಬಾ
ನಲನ ಪರಿಯಿಂ ವನವ ಸುಡುತಲಿ
ಸುಳಿಸುಳಿಯುತಾಹಾರಗೊಳುತಿರಲಲ್ಲಿ ದನಿಯಾಯ್ತು
ಸಿಲುಕಿದೆನು ಪಾವಕನೊಳೆನ್ನನು
ವೊಲಿದು ಹಾ ನೃಪಕುಲಶಿರೋಮಣಿ
ಕಳೆದು ಬಿಡಿಸೈ ಸುಕೃತ ನಿನಗಹುದೆಂದುದಾ ನಿನದ

ಆಗಲಾ ದನಿಗೇಳಿ ನೃಪತಿ ಸ
ರಾಗದಿಂದಲೆ ಬಂದು ಹೊಕ್ಕನು
ಕೂಗಿದವರಾರೆನುತ ಬರುತಿರೆ ಕಂಡನುರಗಪತಿ
ಹೋಗುತಿದೆಯೆನ್ನಸುವು ಸಲಹು ಷ
ಡಾಗಮಜ್ಞ ನೃಪಾಲ ಎನಲಾ
ಭೋಗಿಯನು ಕಂಡರಸ ನೀನಾರೆಂದು ಬೆಸಗೊಂಡ

ಉರಗಪತಿ ಕರ್ಕೋಟಕನು ನಾ
ನರಸ ಕೇಳೈ ಬನದೊಳಿರುತಿರೆ
ಪರಮಋಷಿ ಬಂದೆನ್ನ ತಾಗಿದನಂದು ಖಾತಿಯಲಿ
ಕರೆದು ಕೊಟ್ಟನು ಶಾಪವನು ಸಂ
ಚರಿಸದಂತಿರೆಯೆನಗೆಯಿದು ಪರಿ
ಹರವದೆಂದಿಗೆ ಮುನಿಪ ಕರುಣಿಪುದೆಂದೊಡಿಂತೆಂದ

ಇರಲಿರಲು ಕಾಲಾಂತರಕೆ ಭೂ
ವರನು ನಳನೃಪನಿಲ್ಲಿಗೆಯ್ದುವ
ಧರಣಿಪನ ಕರಕಮಲ ಸೋಂಕಲು ಶಾಪವಿದು ಬಳಿಕ

ಪರಿಹರಿಪುದೆನೆ ಮುನಿಯು ವಚನದಿ
ಬರವ ಹಾರೈಸಿದೆನು ಬಂದೈ
ಕರುಣದಿಂದಗ್ನಿಯನು ಪರಿಹರಿಸೆಂದನುರಗಪತಿ

ಕರುಣದಲಿ ನೃಪ ಭೀತಿಗೊಳ್ಳದೆ
ಯುರಗಪತಿಯನು ತೆಗೆಯುತನಲವ
ನುರಿಯ ತಪ್ಪಿಸಿ ತಂದು ಸರಸಿಯ ತಡಿಯೊಳುಪಚರಿಸೆ
ಕರವಿಡಿದು ಧರಣಿಪನ ಕಚ್ಚಿದೊ
ಡುರವಣಿಸಿ ವಿಷವೇಱೆ ನೃಪತಿಯ
ಪರಮತೇಜದ ದೇಹ ಕೆಟ್ಟಿತು ವಿಕೃತರೂಪಾಗಿ

ಅಡ್ಡಮೋರೆಯ ಗಂಟುಮೂಗಿನ
ಜಡ್ಡುದೇಹದ ಗುಜ್ಜುಗೊರಲಿನ
ದೊಡ್ಡ ಕೈಕಾಲುಗಳ ಮುದುರಿದ ರೋಮಮೀಸೆಗಳ
ದೊಡ್ಡ ಹೊಟ್ಟೆಯ ಗೂನುಬೆನ್ನಿನ
ಗಿಡ್ಡರೂಪಿನ ಹಱಕುಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ

ಮಾರನಾಕಾರದ ನೃಪಾಲಕ
ಕ್ರೂರರೂಪಾದನು ಪುರಾಕೃತ
ಮೀಱಲಾರಳವೆಂದು ನುಡಿದನು ತನ್ನ ಮನದೊಳಗೆ
ತೋರಮಾಣಿಕವೆಂದು ಪಿಡಿದರೆ
ಭೂರಿಕೆಂಡವಿದಾಯ್ತು ಹರಹರ
ಕ್ರೂರಜಂತುಗಳೊಡನೆ ಸಖತನ ಫಲಿಸಿತೆನಗೆಂದ

ಮುನ್ನ ಮಾಡಿದ ಕರ್ಮಫಲವಿದು
ಬೆನ್ನ ಬಿಡುವುದೆಯುರಗಪತಿ ಕೇ
ಳಿನ್ನು ನೋಯಲದೇಕೆ ತಾನೇ ಪಾಪಿಯಾದೆನಲಾ
ಪನ್ನಗಾಂಧ್ವಜನ ಕೃಪೆ ತನ
ಗಿನ್ನು ತಪ್ಪಿದ ಬಳಿಕ ಲೋಕದೊ
ಳಿನ್ನು ಸೈರಿಸಲಾರವಶವೆಂದೆನುತ ಮಱುಗಿದನು

ಏಕೆ ನೃಪತಿ ವೃಥಾ ಮನೋವ್ಯಥೆ
ಕಾಕು ಬಳಲಲು ಬೇಡ ನೀನವಿ
ವೇಕಿಯೇ ಸಾಕಿನ್ನು ನಿನಗುಪಕಾರವಂಜದಿರು
ಲೋಕ ನಿನ್ನನು ಕಾಣದಂತಿರ
ಬೇಕೆನುತಲೇಱಿಸಿದೆ ಗರಳವ
ನೇಕವುಪಕಾರಂಗಳಹವಿದಱಿಂದ ನಿನಗೆಂದ

ಜನಪ ಕೇಳ್ಳೈ ಧರೆಗೆ ಋತುಪ
ರ್ಣನು ಮಹಾರಾಜೇಂದ್ರ ಗುಣನಿಧಿ
ಯಿನಕುಲಾಂಬುಧಿಚಂದ್ರನಾತನ ಪುರವಯೋಧ್ಯೆಯದು
ನಿನಗೆ ಬಹುದಕ್ಷದ ಹೃದಯವಾ
ತನಲಿ ನೀನವಗಶ್ವಹೃದಯವ
ನನುಗೊಳಿಸು ಸಾಕಿನ್ನು ಚಿಂತಿಸಬೇಡ ಹೋಗೆಂದ

ಪೊಡವಿಪನನೋಲೈಸು ತುರಗವ
ಪಿಡಿದು ಬಾಹುಕನೆಂಬ ನಾಮದಿ
ನಡಸು ರಥವನು ಹೀನವೃತ್ತಿಯುದಲ್ಲ ನಿನಗಿನ್ನು

ಬಿಡದು ಮುನ್ನಿನ ರೂಪು ಬೇಕಾ
ದೊಡೆ ನೆನೆಹುದಾಪಕ್ಷಿಗಳ ಹ
ಚ್ಚಡವನೀವುವು ಧರಿಸಲಡಗುವುದೀ ಕುರೂಪಿತನ

ಪರಮಸತ್ಯವ್ರತನೆ ಕೇಳ್ ಪು
ಷ್ಕರನ ಗೆಲಿದುನ್ನತದ ರಾಜ್ಯದ
ಸಿರಿಸಹಿತ ಸಾಮ್ರಾಜ್ಯವಾಳುವೆ ನಿನ್ನ ಸತಿಸಹಿತ
ವರವನಿತ್ತೆನು ನಿನಗೆಯೆಂದುಪ
ಚರಿಸಿ ಕರ್ಕೋಟಕನು ನಳನೃಪ
ಗಱುಹುತಾಕ್ಷಣ ಮಾಯವಾದನು ರಾಯ ಕೇಳೆಂದ

**ಕನಕದಾಸ –ನಳಚರಿತ್ರೆ**
(ಸು. ೧೫೫೦)

## ೧೦೨. ತಾಳ್ಮೆಯೆ ತಪ

ತಾಳುವಿಕೆಗಿಂತ ತಪವು ಇಲ್ಲ
ಕೇಳಬಲ್ಲವರಿಗೆ ಹೇಳುವೆನು ಸೊಲ್ಲ

ದುಷ್ಟ ಮನುಜರು ಪೇಳ್ವ ನಿಷ್ಠುರದ ನುಡಿತಾಳು
ಕಷ್ಟ ಬಂದರೆ ತಾಳು ಕಂಗೆಡದೆ ತಾಳು
ನೆಟ್ಟ ಸಸಿ ಫಲ ಬರುವತನಕ ಶಾಂತಿಯು ತಾಳು
ಕಟ್ಟು ಬುತ್ತಿಯ ಮುಂದೆ ಉಣಲುಂಟು ತಾಳು

ಹಳಿದು ಹಂಗಿಸುವಂಥ ಹಗೆಯ ಮಾತನು ತಾಳು
ಸುಳಿನುಡಿ ಕುಹಕ ಕುಮಂತ್ರವನು ತಾಳು
ಅಳುಕದಲೆ ಬಿರಿಸು ಬಿಂಕದ ನುಡಿಯ ನೀ ತಾಳು
ಹಲಧರಾನುಜನನ್ನು ಹೃದಯದಲಿ ತಾಳು

ನಕ್ಕು ನುಡಿವರ ಮುಂದೆ ಮುಕ್ಕರಿಸದೆ ತಾಳು
ಅಕ್ಕಸವ ಮಾಡುವರ ಅಕ್ಕರದಿ ತಾಳು
ಉಕ್ಕೊ ಹಾಲಿಗೆ ನೀರನಿಕ್ಕುವಂದದಿ ತಾಳು
ಪಕ್ಷೀಶ ಹಯವದನ ಶರಣೆಂದು ಬಾಳು

**ವಾದಿರಾಜ** (೧೫೭೦)

## ೧೦೩. ದಾರಿಗಾಣದು

ಭೈರವಿ ರಾಗ ತ್ರಿಪುಟತಾಳ

ಇಂದು ಎನಗೆ ಗೋವಿಂದ ನಿನ್ನ ಪಾದಾರ-
ವಿಂದವ ತೋರೊ ಮುಕುಂದ-ಇಂದಿರೆರಮಣ ॥ ಪ ॥

ಸುಂದರವದನನೆ ನಂದಗೋಪನ ಕಂದ
ಮಂದರೋದ್ಧರ ಆನಂದ ಇಂದಿರೆರಮಣ ॥ ಅ. ಪ. ॥

ನೊಂದೆನಯ್ಯ ಭವಬಂಧನದೊಳು ಸಿಲುಕಿ
ಮುಂದಾರಿಗಾಣದೆ ಕುಂದಿದೆ ಜಗದೊಳು
ಕಂದನೆಂತೆಂದೆನ್ನ ಕುಂದುಗಳೆಣಿಸದೆ
ತಂದೆ ಕಾಯೋ ಕೃಷ್ಣಕಂದರ್ಪ ಜನಕನೆ

ಮೂಢತನದಿ ಬಲು ಹೇ ( ಖೋ )ಡಿ ಜೀವ ನಾನಾಗಿ
ದೃಢಭಕುತಿಯನು ಮಾಡಲಿಲ್ಲವೊ ಹರಿಯೆ
ನೋಡಲಿಲ್ಲವೊ ನಿನ್ನ ಪಾಡಲಿಲ್ಲವೊ ಮಹಿಮೆ
ಗಾಡಿಕಾರ ಕೃಷ್ಣ ಬೇಡಿಕೊಂಬೆನೊ ನಿನ್ನ

ಧಾರುಣಿಯೊಳು ಭೂಭಾರ ಜೀವ ನಾನಾಗಿ
ದಾರಿ ತಪ್ಪಿ ನಡೆದೆ ಸೇರಿದೆ ಕುಜನರ
ಆರು ಕಾಯುವರಿಲ್ಲ ಸೇರಿದೆ ನಿನಗಯ್ಯ
ಧೀರ ವೇಣು ಗೋಪಾಲ ಪಾರುಗಾಣಿಸೊ ಭವ

ರಾಘವೇಂದ್ರಸ್ವಾಮಿ
(೧೫೭೦)

## ೯೯. ಎಲ್ಲವೂ ನಿನ್ನದು

ರಾಗ ಕೇದಾರಗೌಳ ಅಟತಾಳ

ತನು ನಿನ್ನದು ಜೀವನ ನಿನ್ನದು, ಸ್ವಾಮಿ
ಅನುದಿನದಲಿ ಬಾಹ ಸುಖದುಃಖ ನಿನ್ನವಯ್ಯಾ ||ಪ||

ಸವಿನುಡಿ ವೇದಪುರಾಣ ಶಾಸ್ತ್ರಗಳೆಲ್ಲ
ಕಿವಿಗೊಟ್ಟು ಕೇಳುವ ಸ್ಥಿತಿ ನಿನ್ನದು
ನವ ಯೌವನ ಮೋಹನಾಂಗಿಯ ರೂಪವ
ಎವೆಯಿಕ್ಕದೆ ನೋಡುವ ನೋಟ ನಿನ್ನದಯ್ಯಾ

ಒಡಗೂಡಿ ಗಂಧಕಸ್ತೂರಿ ಪರಿಮಳವೆಲ್ಲ
ಬಿಡದೆ ಲೇಪಿಸಿಕೊಂಬುದು ನಿನ್ನದು
ಷಡುರಸದನ್ನಕ್ಕೆ ನಲಿದಾಡುವ ಜಿಹ್ವೆ
ಕಡು ರುಚಿಗೊಳ್ಳುವ ಸವಿ ನಿನ್ನದಯ್ಯ

ಮಾಯಾಪಾಶದ ಬಲೆಯೊಳು ಸಿಕ್ಕಿ ತೊಳಲುವ
ಕಾಯ ಪಂಚೇಂದ್ರಿಯ ಗತಿ ನಿನ್ನದು
ಕಾಯಜಪಿತ ಕಾಗಿನೆಲೆಯಾದಿ ಕೇಶವ
ರಾಯ ನೀನಲ್ಲದೆ ನರರು ಸ್ವತಂತ್ರರೇ

**ಕನಕದಾಸ.** (ಸು. ೧೫೫೦)

ಕೆಸರಿಂದ ಕೆಸರ ತೊಳೆದಂತೆ ಕರ್ಮದ ಪಥವು
ಅಸುನಾಥ ಹರಿಯೆ ಪೊರೆಯೊ ಸ್ವಾಮಿ
ಆಧಿವ್ಯಾಧಿಗಳು ಉನ್ಮಾದ ವಿಭ್ರಮನಾನಾ
ಬಾಧೆಗೌಷಧನು ನೀನೆ

ಹೇ ದೇವ ನಿನ್ನ ಕರಕಲಶ ಸುಧೆಯನು ಎರೆದು
ಸಾಧುಗಳ ಸಂತೈಸುವಿ
ಮೋದ ಬಡಿಸುವಿ ನಿನ್ನ ಸಾಧಿಸುವರಿಗೆ ಶು-
ಭೋದಯಂಗಳನು ಮಾಡಿ

ಆದರಿಸಿ ಇವಗೆ ತವಪಾದ ಧ್ಯಾನವನಿತ್ತು
ಸಾಧುಗಳೊಳಗಿಟ್ಟು ಮೋದಕೊಡು ಸರ್ವದಾ
ಅನ್ಯರನು ಭಜಿಸದಲೆ ನಿನ್ನನೆ ತುತಿಸುತ್ತ
ನಿನ್ನ ಚಿಹ್ನಗಳ ಧರಿಸಿ

ನಿನ್ನವರವನೆನಿಸಿ ನಿನ್ನ ನಾಮೋಚ್ಚರಿಸಿ
ನಿನ್ನಿಂದ ಉಪಜೀವಿಸಿ
ಅನ್ನ ಆರೋಗ್ಯಕ್ಕೆ ಅಲ್ಪ ಜೀವಿಗಳಿಗೆ
ಇನ್ನು ಅಲ್ಪರಿಯಬೇಕೆ

ನಿನ್ನ ಸಂಕಲ್ಪ ಭಕ್ತರನು ಪೋಷಿಪೆನೆಂಬ
ಘನ್ನ ಬಿರುದಿನ್ನು ಉಳುಹೋ ಸಲಹೊ
ನಿನ್ನವರಲಿ ಇವಗೆ ಇನ್ನು ರತಿಯನು ಕಂಡು
ನಿನ್ನವನೆಂದು ಅರಿದು

ನಿನ್ನ ನಾ ಪ್ರಾರ್ಥಿಸಿದೆ ಅನ್ಯರಿಗೆ ಆಲ್ಪರಿಯೆ
ಎನ್ನ ಪಾಲಿಸುವ ಧೊರೆಯೇ
ಎನ್ನ ಮಾತಲ್ಲವಿದು ಎನ್ನ ಹಿರಿಯರ ಮಾತು
ಮನ್ನಿಸಬೇಕೊ ಕರುಣಿ

ಅನ್ನಂತ ಗುಣಪೂರ್ಣ ಗೋಪಾಲ ವಿಠಲನೆ
ಇನ್ನಿದನು ಲಾಲಿಸಯ್ಯಾ ಜೀಯಾ

ಗೋಪಾಲದಾಸ
(ಸು. ೧೭೨೫)

## ೧೦೫. ಚಂಚಲ ಮನಸ್ಸು

**ಕೇದಾರಗೌಳ ರಾಗ ಝಂಪೆತಾಳ**

ಮನಸು ನಿಲಿಸುವುದು ಬಹಳ ಕಷ್ಟ ||ಪ||
ಗುಣಿಸುವದು ನಿಮ್ಮೊಳಗೆ ನೀವು ನೆರೆ ಬಲ್ಲವರು ||ಅ. ಪ.||

ಮುರಿದೋಡಿ ಬರುವ ರಣರಂಗ ನಿಲಿಸಲುಬಹುದು
ಹರಿವ ನದಿಗಳನು ತಿರುಗಿಸಲುಬಹುದು ||
ಕರಿಸೊಕ್ಕಿ ಬರುತಿರಲು ತಡೆದು ನಿಲಿಸಲು ಬಹುದು
ದುರುಳಮನ ನಿಲಿಸುವದು ಸುರರಿಗಳವಲ್ಲ

ಭೈರವನ ದಾಡಿಯನು ಬಡಿದು ನಿಲಿಸಲುಬಹುದು
ಮಾರುತನ ತರುಬಿ ನಿಲ್ಲಿಸಲುಬಹುದು ||
ಮಾರಿಗಳ ಮುಂಜೆರಗು ತುಡುಕಿ ನಿಲ್ಲಿಸಬಹುದು
ಹಾರಿಹಾರುವ ಮನಸು ನಿಲಿಸಲೆನ್ನಳವಲ್ಲ

ಶರಧಿಗಳ ಭೋರ್ಗರೆವ ಧ್ವನಿಯ ನಿಲಿಸಲುಬಹುದು
ಸುರಿವ ಬಿರುಮಳೆಯನ್ನು ನಿಲಿಸಬಹುದು ||
ಹರಿದೋಡುವ ಮನಸು ನಿಲಿಸಲೆನ್ನಳವಲ್ಲ
ಸಿರಿಯರಸ ವಿಜಯವಿಠಲ ತಾನೆ ಬಲ್ಲ

**ವಿಜಯದಾಸ.** (೧೭೨೫)

## ೧೦೬. ಶ್ರೀ ಚರಣ

### ಸುಳಾದಿ

**ಝಂಪೆತಾಳ**

ಚರಣವ ನಂಬಿದೆನೊ ನಂಬಿದವರ ಪ್ರಾಣ
ಕರುಣವ ಮಾಡಯ್ಯ ಕಲ್ಮಷ ಬಿಡಿಸಯ್ಯ
ಹರಣ ನಿನ್ನದು ಸ್ವಾಮಿ ಹಗಲಿರುಳು ಎನ್ನ
ಕರಣ ಶುದ್ಧನ ಮಾಡು ಕಮಲನಾಭಾ
ಮರಣ ಕಾಲಕೆ ಈ ಜಿಂಹ್ವಾಗ್ರದಲಿ ನಿನ್ನ
ಸ್ಮರಣೆಯೊಂದೊದಗಲಿ ಈ ಭಾಗವೆ ಸಾಕು
ಚರಣವ ನಂಬಿದೆನೊ ತರಣಿ ಯುದ್ಭವಿಸಲು ತಿ
ಮಿರ ನಿಲ್ಲುವದೇನೊ ? ಹರಿಣಾಂಕನುದಿಸೆ ತಾಪ ವಿರಬಲ್ಲದೆ ?
ತರುಣಾವಸ್ಥನಾರಿ ಪತಿಯುಬಯಸುವದು
ಧರಣಿಯೊಳಗೆ ಅಪಹಾಸವಹುದೇ ?
ಕರುಣಾಕರ ಸರ್ವಾಭರಣ ಭೂಷಿತ ಭವ
ತರಣ ತ್ರಾಹಿತ್ರಾಹಿ ತೇಜೊಮಯನೆ
ವರುಣನಾಮಕ ನಮ್ಮ ವಿಜಯ ವಿಠ್ಠಲ ನಿನ್ನಾ
(ಸ್ಮರಣೆ) ಮಾಡುವ ಚಿತ್ತ ನಿರ್ಮಲಿನ ಮಾಡು

**ಮಟ್ಟ ತಾಳ**

ಈ ಚರಣವ ಭಜಿಸಿ ಚತುರ ಮುಖಾದಿಗಳು
ಪ್ರಾಚೀನ ಕರ್ಮಕಳಕೊಂಡು ಭವದಾ
ಲೋಚನೆಯನು ಗೆದ್ದು ಸುಖಿಸುವರು ನೋಡು
ವಾಚ ಮಾತುರವಲ್ಲ ವೇದ ವೇದಾಂತದಲಿ

ಸೂಚನೆಯನು ಕೇಳಿ ಮೊರೆಹೊಕ್ಕೆನಯ್ಯ
ಕೀಚಕಾರಿ ಪ್ರೀಯ ವಿಜಯ ವಿಠ್ಠಲ ನಿನ್ನ
ಶ್ರೀ ಚರಣವ ತೋರಿಸಿ ಪ್ರಕೃತಿಯ ಬಿಡಿಸುವದು

ತ್ರಿವಿಡಿ ತಾಳ

ಅಪ್ರಾಕೃತ ಚರಣ ಆತ್ಮ ಕಾಮಚರಣ
ಸ್ವ ಪ್ರಕಾಶ ಚರಣ ಸ್ವರತ ಚರಣ
ಸುಪ್ರಸನ್ನ ಚರಣ ಸದ್ಗುಣಗಣ ಚರಣ
ಕ್ಷಿಪ್ರವರದ ಚರಣ ಕ್ಷೇಮ ಚರಣ
ಸುಪ್ರಸಿದ್ದ ಚರಣ ಸುಜನವಂದಿತ ಚರಣ
ಅಪ್ರ ಬುದ್ಧರ ಉದ್ಧರಿಸುವ ಚರಣ
ಸುಪ್ರಸಾದ ಚರಣ ಸುಮನೋಹರ ಚರಣ
ಅಪ್ರತೀಕಚರಣ ಅವತೀರ್ಣ ಚರಣ
ಅಪ್ರತಿಹತ ಚರಣ ಅಮಲ ಕೋಮಲ ಚರಣ
ಸುಪ್ರೀತ ಚರಣ ಸ್ವತಂತ್ರ ಚರಣ
ವಿಪ್ರಕುಲಾಗ್ರಣಿ ವಿಜಯ ವಿಠ್ಠಲ ನಾ
ನಾ ಪ್ರಕಾರದಲಿ ಎನ್ನಕಾವ ಚರಣ

ಅಟ್ಟ ತಾಳ

ಆ ಹನುಮನ ನೋಡು ಅಂಬರೀಷನ ನೋಡು
ಪ್ರಾಹಲ್ಲಾದನ ನೋಡು ಪುಂಡರೀಕನ ನೋಡು
ಅಹಲ್ಯದೇವಿಯ ನೋಡು ಶುಕನ ನೋಡು ಶ್ವೇತ
ವಾಹನನ ನೋಡು ಧ್ರುವರಾಯನ ನೋಡು

ಮಹಿಪತಿ ಬಲಿ ನೋಡು ಗಂಗಾಸುತನ ನೋಡು
ಶ್ರೀಹರಿ ನಿನ್ನಯ ಶ್ರೀಚರಣ ವಾರಿ
ರೂಹ ನೆರೆನಂಬಿ ಭವ ಹಾರಿದರಯ್ಯ
ಆಹೋ ರಾತ್ರಿ ಎನಗಿದೆ ಗತಿಯೆಂದು ನಂಬಿದೆ
ಸ್ನೇಹ ಭಾವವಿತ್ತು ಭಕ್ತರೊಳಿಡು ನಿತ್ಯ
ಬಹುಲೀಲ ವಿಜಯ ವಿಠ್ಠಲರೇಯ ಇಂದು ಸ
ನ್ನಿ ಹಿತನಾಗಿ ನಿನ್ನ ಚರಣವ ತೋರಿಸು

ಆದಿ ತಾಳ

ವ್ಯಾಪ್ತ ಚರಣ ದೀಪ್ತ ಚರಣ
ಆಪ್ತ ಚರಣ ಗುಪ್ತ ಚರಣ
ಪ್ರಾಪ್ತ ಚರಣ ನಿರ್ಲಿಪ್ತ ಚರಣ
ತೃಪ್ತ ಚರಣ ಕ್ಲುಪ್ತ ಚರಣ
ಶಪ್ತ ಚರಣ ಗೋಪ್ತ ಚರಣ
ಸುಪ್ತರಹಿತ ಚರಣ ಚರಣ ಈ ಚರಣ
ಜಪ್ತರ ಮನದಲ್ಲಿಪ್ಪ ಚರಣ
ಸಪ್ತಸಪ್ತ ಲೋಕೇಶ ವಿಜಯ ವಿಠ್ಠಲರೇಯ ಸಂ
ತಪ್ತ ಕಾಂಚನ ವರ್ಣ ಚರಣ

ಜತ್ತೆ

ಅನಿಮಿತ್ಯ ಬಂಧು ನಿನ್ನ ಚರಣವೆ ಗತಿ ಎನಗೆ
ಕೊನೆಗೆ ಧ್ಯಾನವ ಕೊಡೊ ವಿಜಯ ವಿಠ್ಠಲ ಮೂರ್ತಿ

**ವಿಜಯದಾಸ**

(ಸು. ೧೭೫೫)

# ೧೦೭. ದುರಾಚಾರ ನಿವಾರಣೆ

**ಪದ ರಾಗ ವರಾಳಿ ಧ್ರುವತಾಳ**

ಸುತ್ತಿದೆ ಬಿಡದೆ ಈ ಮರ್ತ್ಯ ಲೋಕದಲ್ಲಿ
ಸುತ್ತು ತಿರುಗಿದಂತೆ ನಿಲವಿಲ್ಲದೆ
ಇತ್ತಂಡದಿಂದ ಉತ್ಪನ್ನವಾದ ಸಂಖ್ಯಾತ
ಪತ್ತರ ಬರೆದು ಸುರಳಿಹರಹೆ
ಪೃಥ್ವಿಗೆ ಹತ್ತುನೂರು ಮಡಿಯಾಗೋದು
ಸತ್ತುಪುಟ್ಟುವ ಮಿತಿ ತಿಳಿಯದಯ್ಯ
ಎತ್ತಲು ಪೊಂದದಲೆ ವ್ಯರ್ಥವಾಯಿತು ಜನುಮ
ಸುತ್ತ ಕವಿದ ಪಾಪ ಮೊತ್ತದಿಂದಲ್ಲಿ ಉ
ನ್ಮತ್ತನಾಗಿ ಮಹಗರ್ವದಲ್ಲಿ ಉತ್ತಮನಾಗದೆ
ಮತ್ತಾರಿಗಂಜದೆ ಎತ್ತುವ ಜನನದ ಭೀತಿ ಮರೆದೆ
ಚಿತ್ರ ಮಿತ್ರನಾಮಾ ವಿಜಯ ವಿಠ್ಠಲರೇಯ
ಚಿತ್ತದಲೊಮ್ಮೆ ನಿನ್ನತ್ತ ಬಾರದೆ ಪೋದೆ

**ಮಟ್ಟ ತಾಳ**

ಊಳಿಗತನಯಾಕೋ ನಿನ್ನನೆ ನೆನಸದ
ಆಳಿಗೆ ಹಲವಂಗ ವೈಯ್ಯಾರವು ಏಕೋ
ವೇಳಿವೇಳಿಗೆ ಎನ್ನ ಅನ್ನದ ಚಿಂತೆಯಲ್ಲಿ
ಮಾಳಿಗೆ ಮನೆಗಳು ಹಾಕೈಸಿಕೊಳುತ
ಕಾಲವನು ಕಳೆದೆ ನಿನ್ನ ದಾಸನು ಎಂದು
ಆಳಿಗೆ ಗೆಲಿದಂಥ ಬಿರುದು ಹಾಕಿದ ಓಲು
ತಾಳ ದಂಡಿಗೆ ಪಿಡಿದೆ ವಿಜಯ ವಿಠ್ಠಲ ಸಾಕ್ಷಿ
ಊಳಿಗ ತನವೆಂಬ ಆಳಿಂಗವು ಬರುದೆ

### ರೂಪಕ ತಾಳ

ಕೋಳಿಗೆ ಏತಕ್ಕೆ ಹೊನ್ನದ ಪಂಜರವು
ಸೂಳೆಗೆ ಏತಕ್ಕೆ ಗರತಿಯ ಸಂಗ
ಬೋಳೆಗೆ ಏತಕ್ಕೆ ಜಾಳಿಗಿ ದಂಡೆ
ಮಾಳಿಗೆ ಏತಕ್ಕೆ ದಾನವಿಲ್ಲದಿರೆ
ನೀಲಿಗೆ ಏತಕ್ಕೆ ಪನ್ನೀರ ತೊಳೆವುದು
ಜಾಲಿಗೆ ಏತಕ್ಕೆ ಯಾತಾ ಎತ್ತುವುದು
ನಾಳೆಗೆಂಬದು ಚಿಂತೆ ಬಿಡದು ಎನಗೆ ನಿನ್ನ
ಊರಿಗೆ ಯಾಕೊ ಉರುಗ ತಲ್ಪ
ಕೇಳಯ್ಯ ಬಿನ್ನಹ ವರುಣ ನಾಮಕ ಸಿರಿ
ಲೋಲ ವಿಜಯ ವಿಠಲ ವಿಶ್ವತೋ ಮುಖನೆ
ಕಾಲಿಗೆ ಎರಗುವೆ ಲಾಲಿಸು ಮಾತ

### ಝಂಪಿ ತಾಳ

ಹೂಜಿ ಹೊರಗೆ ಬೆಳಗಿ ವೈಲಿಗೆ ಕಳೆದಂತೆ
ತೇಜಸ್ಸು ಮಾಳ್ಪೇನೊ ಎನ್ನಂಗಕ್ಕೆ
ನ್ಯಾಜಿಯಂತೆ ನಾನು ಮುದ್ರೆ ಧರಿಸಿಕೊಂಡು
ಭೋಜನಕೆ ಬರ ಹೇಳೆ ತೀವ್ರದಲ್ಲಿ
ಭಾಜನದಲ್ಲಿಗೆ ಪೋಗಿ ಕುಳಿತುಕೊಂಡು ಊರ
ರಾಜಕಾರಣ ವಾರ್ತೆಯನು ಪೇಳುವೆ
ಭೂಜಡವಾಗಿ ಸಂಚರಿಸುವೆ ನಾನಕ
ವ್ಯಾಜದಲಿ ಮನ ಎರಗುತಲಿ
ಭೋಜನನಾಮಸಿರಿ ವಿಜಯ ವಿಠ್ಠಲ ನಿನ್ನ ಸ-
ರೋಜ ಚರಣವನ್ನು ನೆನೆಯದಲೆ

### ತ್ರಿವಿಡಿ ತಾಳ

ಹಂದಿಗೆ ಗೊಜ್ಜಲು ಸವಿಯಾಗಿಯಿದ್ದಂತೆ
ಇಂದಿಗೆ ಎನಗಿದು ರುಚಿಯಾಗಿದೆ
ಎಂದಿಗೆ ಅಹಮ್ಮತ್ತು ಸುಡುವೋದೊ ಬೇವೋದೊ
ಎಂದಿಗೆ ಸಾಧುಗಳ ಕೂಡುವೆನೊ
ಅಂದಿಗೆ ನಿನ್ನವ ನೆನಿಪೆ ಉತ್ತಮವಾದ
ಮಂದಿಯೊಳಗಾಡುವೆ ನಲ್ಲವೇನಯ್ಯಾ
ಅಂದಿನ ತನಕ ಗೋವಿಂದ ವಿಜಯ ವಿಠಲ
ಹಿಂದುಗಳಿವುದು ಒಂದೊಂದು ದುರಾಚಾರ

### ಅಟ್ಟ ತಾಳ

ನಾನು ನಾನು ನಾನು ಎಂದು ಈ ನಿರಂತರದಲ್ಲಿ ಬಾಳಿ
ಏನು ಕಾಣದಲೆ ಪೋಗಿ ತ್ರಾಣಗೆಟ್ಟು ತಿರುಗಿದೆನೊ
ನಾನು ನಾನೆಂದದರಿಂದ ಹೀನವೆ ಪ್ರಾಪ್ತಿ ನರಕ
ದೀನ ಬಂಧು ಯಿತ್ತ ಮುನ್ನ ಮಾನದ ಭಿಮಾನವಿತ್ತು
ನೀನು ನೀನು ನನ್ನದೆಂದು ನಿನ್ನ ದಾಸನೆಂದು ವಾಚಾ
ಮಾನಸ ಕಾಯದಲಿಂದ ಪೇಳುತ್ತಿರಲಿ ಫಲಿತದಲ್ಲಿ
ಪ್ರಾಣ ಜೀವನಾಮ ವಿಜಯ ವಿಠ್ಠಲ ವಿಶೇಷ ಮಹಿಮ
ಮಾಣಿಸುವದು ಬಂದ ಭವರೋಗ ಬಂಧನಗಳ

### ಆದಿ ತಾಳ

ಕರ್ಮ ಜ್ಞಾನಿಗರಸೆಂದು ಮರ್ಮವನ್ನು ಉಸರಿದೆನು
ಪೆರ್ಮೆಯಿಂದ ನೋಡು ಪರಮ ಧಾರ್ಮಿಕನೆ
ದಯವಂತನೆ ದುರ್ಮತಿಯಿಂದರ್ಚಿಸುವ
ಕರ್ಮ ಕಠೋರವ ಬಿಡಿಸಿ ನಿರ್ಮಳದಿಂದಲ್ಲಿ ನಿನ್ನ

ವರ್ಮವನ್ನು ತೊಡಿಸುವದು ಶರ್ಮನಾಮ ವಿಜಯ ವಿಠಲ
ಚರ್ಮದೇಹ ಪೋಗುವಂತೆ ನಿರ್ವಾ(ರ್ಮಾ)ಣವ ಮಾಡಿ
ನೋಡೊ ನೋಡೊ, ನೋಡೊ, ನೋಡೊ, ನೋಡೊ

ಜತ್ತೆ

ಪಾತಕಿ ಅಜಾಮಿಳನ ಸದ್ಗತಿಗೆ ಕರೆಸಿದ
ಪೂತಾತ್ಮ ನಾಮ ಎನ್ನ ಕಾಯೊ ವಿಜಯ ವಿಠಲ

**ವಿಜಯದಾಸ**

(ಸು. ೧೭೫೫)

## ೧೦೮. ಕೋಲು ಹಾಡು

ರಾಗ ನಾದನಾಮಕ್ರಿಯ ಆದಿತಾಳ

ಆಕಾಶಕಭಿಮಾನಿ ಶ್ರೀಕಂಠವರಪುತ್ರ
ಏಕದಂತನೆ ವಿಘ್ನೇಶ ಕೋಲೆ
ಏಕದಂತನೆ ವಿಘ್ನೇಶ ನಿನ್ನಪದ
ಏಕಚಿತ್ತದಲಿ ಬಲಗೊಂಬೆ ಕೋಲೆ

ನೆನೆಯಕ್ಕಿ ನೆನೆಗಡಲೆ ಗೊನೆಯ ಬಾಳೆಯಹಣ್ಣು
ಘನವಾದ ಚಿಗುಳಿ ತಂಬಿಟ್ಟು ಕೋಲೆ
ಘನವಾದ ಚಿಗುಳಿ ತಂಬಿಟ್ಟು ತಂದೇವೆ
ಗಣಪತಿ ಮತಿಯ ಕರುಣಿಸು ಕೋಲೆ

ಜಗದುತ್ಪತ್ತಿ ಸ್ಥಿತಿ ಲಯಕೆ ಕಾರಣನಾದ
ಜಗದೀಶ ಜಾಹ್ನವಿ ಜನಕನೆ ಕೋಲೆ
ಜಗದೀಶ ಜಾಹ್ನವಿ ಜನಕನಾರಾಯಣ
ನಗಧರನ ಮುನ್ನ ಬಲಗೊಂಬೆ ಕೋಲೆ

ಮಚ್ಛ ಕೂರುಮ ವರಹ ನರಸಿಂಹ ವಾಮನ
ಸ್ವಚ್ಛ ಭೃಗುರಾಮ ರಘುರಾಮ ಕೋಲೆ
ಸ್ವಚ್ಛ ಭೃಗುರಾಮ ರಘುರಾಮ ಬೌದ್ಧ ಕೃಷ್ಣ
ಅಚ್ಛಕಲ್ಕಿಯ ಬಲಗೊಂಬೆ ಕೋಲೆ

ಪರಮಭಕ್ತರ ಪಾಪ ಪರಿಹಾರವನೆ ಮಾಡಿ
ಪರಮ ಪದವಿಯ ಪಾಲಿಪ ಕೋಲೆ
ಪರಮ ಪದವಿಯ ಪಾಲಿಪ ನಮ್ಮ ಶ್ರೀ
ಹರಿಯ ಮೊದಲೆ ಬಲಗೊಂಬೆ ಕೋಲೆ

ಶ್ರೀಮಾಯಾ ಜಯಾಕೃತಿ ಶಾಂತಿ ಇಂದಿರಾದೇವಿ
ಕಾಮನ ಜನನಿ ಜಯಂತಿ ಕೋಲೆ
ಕಾಮನ ಜನನಿ ಜಯಂತಿ ಜಾನಕಿ ಸತ್ಯ
ಭಾಮಾ ರುಗ್ಮಿಣಿಯು ಬಲಗೊಂಬೆ ಕೋಲೆ

ವಾಣಿ ಅಜನ ಮುದ್ದುರಾಣಿ ಪಲ್ಲವಪಾಣಿ
ಜಾಣೆ ಕೊಡೆಮಗೆ ಮತಿಗಳ ಕೋಲೆ
ಜಾಣೆ ಕೊಡೆಮಗೆ ಮತಿಗಳ ನಿನ್ನಪಾದ
ರೇಣುವಿನ ಮುನ್ನ ಬಲಗೊಂಬೆ ಕೋಲೆ

ಭಾರತಿ ದೇವಿ ನಿನ್ನ ವಾರಿಜ ಚರಣವ
ಬಾರಿಬಾರಿಗೆ ಭಜಿಸುವೆ ಕೋಲೆ
ಬಾರಿಬಾರಿಗೆ ಭಜಿಸುವೆ ಎಮಗೆ ಶ್ರೀ
ನಾರಾಯಣನಲ್ಲಿ ರತಿಕೊಡು ಕೋಲೆ

ಶ್ರೀಮಧ್ವಮುನಿ ಪದ್ಮನಾಭ ನರಹರಿತೀರ್ಥ
ಶ್ರೀಮಾಧವಾರ್ಯ ಅಕ್ಷೋಭ್ಯ ಕೋಲೆ
ಶ್ರೀಮಾಧವಾರ್ಯ ಅಕ್ಷೋಭ್ಯ ಜಯತೀರ್ಥ
ಸ್ವಾಮಿಗಳ ಮೊದಲೆ ಬಲಗೊಂಬೆ ಕೋಲೆ

ನ್ಯಾಯಾಮೃತ ತರ್ಕತಾಂಡವ ಚಂದ್ರಿಕಾ
ನ್ಯಾಯಗ್ರಂಥಗಳ ರಚಿಸಿದ ಕೋಲೆ
ನ್ಯಾಯಗ್ರಂಥಗಳ ರಚಿಸಿದ ನಮ್ಮ ವ್ಯಾಸ
ರಾಯರ ಮುನ್ನ ಬಲಗೊಂಬೆ ಕೋಲೆ

ತುಂಗಭದ್ರಾತೀರ ಮಂತ್ರಾಲಯದಲ್ಲಿ
ಮಂಗಳಮಹಿಮರೆನಿಪರೆ ಕೋಲೆ

ಮಂಗಳಮಹಿಮರೆನಿಪ ರಾಘವೇಂದ್ರ
ರಂಘ್ರಿಕಮಲವ ಬಲಗೊಂಬೆ ಕೋಲೆ

ಪರಮಗುರುಗಳಾದ ಪುರಂದರರಾಯರ
ಪರಮಕೃಪಾಪಾತ್ರ ವಿಜಯರಾಮ ಕೋಲೆ
ಪರಮಕೃಪಾಪಾತ್ರ ವಿಜಯರಾಯರ ಪಾದ
ಪರಮಭಕ್ತಿಯಲಿ ಸ್ಮರಿಸುವೆ ಕೋಲೆ

ಈಚಲ ಬನದೊಳು ಗೋಕ್ಷೀರ ಕುಡಿದಂತೆ
ನೀಚರ ಸಂಗ ಸುಜನರು ಕೋಲೆ
ನೀಚರ ಸಂಗ ಸುಜನರು ಮಾಡಲು
ಈಚೆ ನೋಡುವರಿಗೆ ಅನುಮಾನ ಕೋಲೆ

ಸೂರಿ ಜನರ ಸಂಗ ಸುಧೆಯ ಪ್ರಾಶನೆಯಂತೆ
ಹೋರಣೆ ಗುಣವುಳ್ಳ ಅಭಮರ ಕೋಲೆ
ಹೋರಣ ಗುಣವುಳ್ಳ ಅಧಮರ ಸಹವಾಸ
ನಿರುಳ್ಳಿ ತಿಂದ ತೆರನಂತೆ ಕೋಲೆ

ಒಳ್ಳೆ ಮನುಜರ ಸಂಗ ಮಲ್ಲಿಗೆ ಮುಡಿದಂತೆ
ಖುಲ್ಲ ಕುಮತಿಯ ಸಹವಾಸ ಕೋಲೆ
ಖುಲ್ಲ ಕುಮತಿಯು ಸಹವಾಸ ಮಾಡಲು
ಮುಲ್ಲಂಗಿ ತಿಂದು ತೇಗಿದಂತೆ ಕೋಲೆ

ಭಾವಜ್ಞರ ಸಂಗ ಶ್ಯಾವಿಗೆ ಉಂಡಂತೆ
ಭಾವವನರಿಯದ ಬಲುಹೀನ ಕೋಲೆ
ಭಾವವನರಿಯದ ಬಲುಹೀನರ ಸಂಗ
ಬೇವಿನ ಹಾಲ ಕುಡಿದಂತೆ ಕೋಲೆ

ಬಾಳುವರ ಸಂಗ ಹಾಲೋಗರುಂಡಂತೆ
ಬಾಳುವೆಗೆಟ್ಟ ಅಧಮರ ಕೋಲೆ
ಬಾಳುವೆಗೆಟ್ಟ ಅಧಮರ ಸಹವಾಸ
ಹೇಳಬಾರದ್ದು ತಿಂದಂತೆ ಕೋಲೆ

ಕಸವೆಲ್ಲ ಪರಿಮಳ ಕೆಸರೆಲ್ಲ ಶ್ರೀಗಂಧ
ಬಿಸರುಹನೇತ್ರನ ಅರಮನೆ ಕೋಲೆ
ಬಿಸರುಹನೇತ್ರನ ಅರಮನೆಯೊಳಗೆಲ್ಲ
ಕುಸುಮದ ಮಳೆಯುಗರೆವುದು ಕೋಲೆ

ಜಯಗಳಾಗಲಿ ಅಪಜಯಗಳು ಪೋಗಲಿ
ಜಯದೇವಿ ರಮಣ ನೊಲಿಯಲಿ ಕೋಲೆ
ಜಯದೇವಿ ರಮಣನೊಲಿಯಲಿ ನಮ್ಮ ವಿ
ಜಯ ದಾಸಾರ್ಯರು ಸಲಹಲಿ ಕೋಲೆ

ಮಂಗಳಾಗಲಿ ಅಮಂಗಳ ಪೋಗಲಿ
ರಂಗನ ಒಲುಮೆ ದೊರೆಯಲಿ ಕೋಲೆ
ರಂಗನ ಒಲುಮೆ ದೊರೆಯಲಿ ನಮ್ಮ ದುರಿ
ತಂಗಳು ನಿಲ್ಲದೆ ಓಡಲಿ ಕೋಲೆ

ಶುಭಗಳಾಗಲಿ ಅಶುಭಗಳು ಓಡಲಿ
ಇಭವರದ ನೊಲುಮೆ ದೊರೆಯಲಿ ಕೋಲೆ
ಇಭವರದ ನೊಲುಮೆ ದೊರೆಯಲಿ ನಮ್ಮ ವಿಜಯ
ಪ್ರಭುಗಳ ಕೀರ್ತಿ ಮೆರೆಯಲಿ ಕೋಲೆ

ಶ್ರೀಕೃಷ್ಣ ಅರ್ಜುನ ಸುಭದ್ರೆ ರುಗ್ಮಿಣಿ
ಸಾಕಾರವಾಗಿ ಸರಸವ ಕೋಲೆ

ಸಾಕಾರವಾಗಿ ಸರಸವಾಡಿದ ಕಥೆ
ಸಾಕಲಿ ನಮ್ಮ ಸರ್ವದಾ ಕೋಲೆ

ಪನ್ನಂಗಶಯನ ಸುಪರ್ಣಗಿರೀಶ ಸು
ಪರ್ಣವಾಹನ್ನ ಸುಖಪೂರ್ಣ ಕೋಲೆ
ಸು–ಪರ್ಣವಾಹನ್ನ ಸುಖಪೂರ್ಣನಾದ ಮೋ
ಹನ್ನ ವಿಠ್ಠಲ ಕರುಣಿಸು ಕೋಲೆ

**ಮೋಹನದಾಸ** (ಸು. ೧೭೫೦)

## ೧೦೯. ವಿರಾಟ ಪೂಜೆ

**ಕಾಂಬೋದಿ ರಾಗ ಝಂಪೆತಾಳ**

ಅರಿತವರಿಗತಿ ಸುಲಭ ಹರಿಯ ಪೂಜೆ
ಅರಿಯದವ ನಿರ್ಭಾಗ್ಯತರ ಲೋಕದೊಳಗೆ

ಹೈಮಾಂಡ ಮಂಟಪವು ಭೂಮಂಡಲವೆ ಪೀಠ
ಸೋಮಸೂರ್ಯರೇ ದೀಪ, ಭೂರುಹಗಳು
ಚಾಮರಗಳತಿವಿಮಲ ವ್ಯೋಮಮಂಡಲ ಛತ್ರ,
ಯಾಮಾಷ್ಟಕಗಳಷ್ಟ ದಳ ಪದ್ಮವು, ಎಂದು

ಮಳೆಯೆ ಮಜ್ಜನವು ದ್ವಿಗಲಯಂಗಳೇ ವಸನ
ಮಲಯಜಾನಿಲವೆ ಶ್ರೀ ಗಂಧಧೂಪ
ಇಳೆಯೊಳಗೆ ಬೆಳೆದ ಧಾನ್ಯಗಳೆಲ್ಲ ನೈವೇದ್ಯ,
ಥಳಥಳಿಪ ಮಿಂಚು ಕರ್ಪುರದಾರತಿಯೆಂದು

ನಕ್ಷತ್ರಮಂಡಲವೆ ಲಕ್ಷದೀಪಾವಳಿಯು
ದಕ್ಷಿಣೋತ್ತರ ಅಯನಗಳೆರಡು ಬನಗಳು
ವೃಕ್ಷವಲ್ಲಿಜ ಸುಫಲಪುಷ್ಪಗಳೊಳಗೆ
ಲಕ್ಷ್ಮೀವಕ್ಷವ್ಯಾಪಕನಾಗಿ ತಾನೆ ಭೋಗಿಪನೆಂಬ

ಗುಡುಗು ಸಪ್ತಸಮುದ್ರ ಸಿಡಿಲ ಘೋಷವೇ ವಾದ್ಯ
ಪೊಡವಿಪರಿಗೀವ ಕಪ್ಪವೆ ಕಾಣಿಕೆ
ಉಡುಪಭಾಸ್ಕರರ ಮಂಡಲಗಳಾದರ್ಶಗಳು
ನಡೆಯುವ ನಡೆಗಳೇ ಬಿಡದೆ ನರ್ತನವೆಂದು

ಯುಗಚತುಷ್ಟಯವೆ ಪರಿಯಂಕ ಪಾದಗಳಬ್ದ
ಬಿಗಿವ ಪಟ್ಟಿಗಳೆರಡು ಕಂದಾಯ ಕಶಿಪು

ಗಗನ ಮೇಲ್ಗಟ್ಟು ಸಂಕ್ರಮಣಗಳೆ ಬಡವುಗಳು
ಭಗವಂತಗುಪಬರ್ಹಣಗಳು ಷಡ್ಯತುಗಳೆಂದೂ
ನಾಗವಲ್ಲಿಗಳೆ ದಿವಸಗಳು ಕರಣವೇ ಕ್ರಮುಕ
ಯೋಗಗಳೆ ಚೂರ್ಣ ರಾತ್ರಿಯೆ ಕಾಂಶುಕ
ಭೋಗವತಿ ಜಲವೆ ಗಂಡೂಷಣೋದಕ
ಶುದ್ಧಸಾಗರವೆ ಪಾದೋದಕವು ವಿರಾಡ್ರೂಪಗೆ
ಶಾತಕುಂಭೋದರಾಂಡಾಂತಸ್ಥರೂಪ ಸಂ–
ಪ್ರೀತಿಯಿಂದಲಿ ಭಜಿಸಿ ಮೋದಿಪರನಾ
ವೀತಶೋಕರ ಮಾಡಿ ಸಂತೈಸುತಿಹ ಜಗ–
ನ್ನಾಥವಿಠ್ಠಲ ಒಲಿದು ಸರ್ವಕಾಲದಲೀ

**ಜಗನ್ನಾಥ ದಾಸರು** (೧೭೭೫)

## ೧೧೦. ಕರುಣಾಮಯತೆ

ಮಳೆಯ ನೀರೋಣಿಯಲಿ ಹರಿಯಲು
ಬಳಸರೂರೊಳಗಿದ್ದ ಜನರಾ
ಜಲವು ಹೆದ್ದೊರೆಗೂಡೆ ಮಜ್ಜನ ಪಾನ ಗೈದಪರು
ಕಲುಷ ವಚನಗಳಾದರಿವು ಬಾಂ
ಬೊಳೆಯ ಪೆತ್ತನ ಪಾದ ಮಹಿಮಾ
ಜಲಧಿ ಪೊಕ್ಕುದರಿಂದೆ ಮಾಣ್ದಪರೇ ಮಹೀಸುರರು

ಮನವಚನಕತಿದೂರ ನೆನೆವರ
ನನುಸರಿಸಿ ತಿರುಗುವನು ಜಾಹ್ನವಿ
ಜನಕ ಜನರೊಳಗಿದ್ದು ಜನಿಸುವ ಜಗದುದರ ತಾನು
ಘನಮಹಿಮ ಗಾಂಗೇಯನುತ ಗಾ
ಯನವ ಕೇಳುತ ಗಗನಚರ ವಾ
ಹನ ದಿವೌಕಸರೊಡನೆ ತಿರುಗುವ ಮನೆ ಮನೆಗಳಲ್ಲಿ

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳುವ ಕುಳಿತು ಪಾಡಲು
ನಿಲುವ ನಿಂತರೆ ನಲಿವ ನಲಿದರೆ ಒಲಿವೆ ನಿಮಗೆಂಬ
ಸುಲಭನೋ ಹರಿ ತನ್ನವರನರ
ಘಳಿಗೆ ಬಿಟ್ಟಗಲನು ರಮಾಧವ
ನೊಲಿಸಲರಿಯದೆ ಪಾಮರರು ಬಳಲುವರು ಭವದೊಳಗೆ

ಮನದೊಳಗೆ ತಾನಿಪ್ಪ ಮನವೆಂ
ದೆನಿಸಿಕೊಂಬನು ಮನದ ವೃತ್ತಿಗ
ಳನುಸರಿಸಿ ಭೋಗಗಳ ನೀವನು ತ್ರಿವಿಧ ಚೇತನಕೆ

ಮನವನಿತ್ತರೆ ತನ್ನ ನೀವನು
ತನುವದಂಡಿಸಿ ದಿನದಿನದಿ ಸಾ
ಧನವ ಮಾಳ್ಪರಿಗಿತ್ತಪನು ಸ್ವರ್ಗಾದಿ ಭೋಗಗಳ

ಒಬ್ಬನಲಿ ನಿಂತಾಡುವನು ಮ
ತ್ತೊಬ್ಬನಲಿ ನೋಡುವನು ಬೇಡುವ
ನೊಬ್ಬನಲಿ ನೀಡುವನು ಮಾತಾಡುವನು ಬೆರಗಾಗಿ
ಅಬ್ಬರದ ಹೆದ್ದೈವನಿವ ಮ
ತ್ತೊಬ್ಬರನು ಲೆಕ್ಕಿಸನು ಲೋಕದೊ
ಳೊಬ್ಬನೇ ತಾ ಬಾಧ್ಯ ಬಾಧಕನಾಹ ನಿರ್ಭೀತ

ಶರಣಜನಮಂದಾರ ಶಾಶ್ವತ
ಕರುಣಿ ಕಮಲಾಕಾಂತ ಕಾಮದ
ಪರಮ ಪಾವನತರ ಸುಮಂಗಳಚರಿತ ಪಾರ್ಥಸಖ
ನಿರುಪಮಾನಂದಾತ್ಮನಿರ್ಗತ
ದುರಿತ ದೇವವರೇಣ್ಯನೆಂದಾ
ದರದಿ ಕರೆಯಲು ಬಂದೊದಗುವನು ತನ್ನವರ ಬಳಿಗೆ

ಜನನಿಯನು ಕಾಣದಿಹ ಬಾಲಕ
ನೆನೆನೆನೆದು ಹಲುಬುತಿರೆ ಕತ್ತಲೆ
ಮನೆಯೊಳಡಗಿದ್ದವನ ನೋಡುತ ನಗುತ ಹರುಷದಲಿ
ತನಯನಂ ಬಿಗಿದಪ್ಪಿ ರಂಬಿಸಿ
ಕನಲಿಕೆಯ ಕಳೆವಂತೆ ಮಧುಸೂ
ದನನು ತನ್ನವರಿದ್ದೆಡೆಗೆ ಬಂದೊದಗಿ ಸಲಹುವನು

ಧನವ ಸಂರಕ್ಷಿಸುವ ಫಣಿ ತಾ
ನುಣದೆ ಮತ್ತೊಬ್ಬರಿಗೆ ಕೊಡದನು
ದಿನದಿ ನೋಡುತ ಸುಖಿಸುವಂದದಿ ಲಕುಮಿವಲ್ಲಭನು
ಪ್ರಣತರನ ಕಾಯ್ದಿಹನು ನಿಷ್ಕಾ
ಮನದಿ ನಿತ್ಯಾನಂದಮಯ ದು
ರ್ಜನರ ಸೇವೆಯನೊಲ್ಲ ನಪ್ರತಿಮಲ್ಲ ಜಗಕೆಲ್ಲ

ಬಾಲಕನ ಕಲಭಾಷೆ ಜನನಿಯು
ಕೇಳಿ ಸುಖಪಡುವಂತೆ ಲಕುಮಿ
ಲೋಲ ಭಕ್ತರು ಮಾಡುತಿಹ ಸಂಸ್ತುತಿಗೆ ಹಿಗ್ಗುವನು
ತಾಳ ತನ್ನವರಲ್ಲಿ ಮಾಡಿದ
ಹೇಳನವ ಹೆದ್ದೈವ ವಿದುರನ
ಆಯಲದಿ ಪಾಲುಂಡು ಕುರುಪನ ಮಾನವನೆ ಕೊಂಡ

ಜನಪ ಮೆಚ್ಚಿದರೀವ ಧನವಾ
ಹನ ವಿಭೂಷಣ ವಸನ ಭೂಮಿಯು
ತನುಮನಗಳಿತ್ತಾದರಿಪರುಂಟೇನೊ ಲೋಕದೊಳು
ಅನವರತ ನೆನೆವವರನಂತಾ
ಸನವೆ ಮೊದಲಾದಾಲಯದಲಿ
ಟ್ಟಣುಗನಂದದಲವರ ವಶನಾಗುವನು ಮಹಮಹಿಮ

ಮನದೊಳಗೆ ಸುಂದರ ಪದಾರ್ಥವ
ನೆನೆದು ಕೊಡೆ ಕೈಕೊಂಡು ಬಲು ನೂ
ತನ ಸುಶೋಭಿತ ಗಂಧ ಸುರಸೋಪೇತ ಫಲರಾಶಿ

ದ್ಯುನದಿನಿವಹಗಳಂತೆ ಕೊಟ್ಟವ
ರನು ಸದಾ ಸಂತೈಸುವನು ಸ
ದ್ಗುಣವ ಕದ್ದವರಘವ ಕದಿವನು ಅನಘನೆಂದೆನಿಸಿ

ಚೇತನಾಚೇತನ ವಿಲಕ್ಷಣ
ನೂತನ ಪದಾರ್ಥಗಳೊಳಗೆ ಬಲು
ನೂತನನತಿ ಸುಂದರಕೆ ಸುಂದರ ರಸಕೆ ರಸರೂಪ
ಜಾತರೂಪೋದರ ಭವಾದ್ಯರೊ
ಳಾತತಪ್ರತಿಮಪ್ರಭಾವ ಧ
ರಾತದೊಳಿಪ್ಪೊಡನೆ ಯಾಡುತಲಿಪ್ಪ ನಮ್ಮಪ್ಪ

ತಂದೆತಾಯ್ಗಳು ತಮ್ಮ ಶಿಶುವಿಗೆ
ಬಂದ ಭಯಗಳ ಪರಿಹರಿಸಿ ನಿಜ
ಮಂದಿರದಿ ಬೇಡಿದುದ ನಿತ್ತಾದರಿಸು ವಂದದಲಿ
ಹಿಂದೆ ಮುಂದೆಡಬಲದಿ ಒಳಹೊರ
ಗಿಂದಿರೇಶನು ತನ್ನವರ ನೆಂ
ದೆಂದು ಸಲಹುವನಾಗಸದ ವೋಲೆತ್ತ ನೋಡಿದರು

ಒಡಲ ನೆಳಲಂದದಲಿ ಹರಿ ನ
ಮ್ಮೊಡನೆ ತಿರುಗುವ ಒಂದರಕ್ಷಣ
ಬಿಡದೆ ಬೆಂಬಲವಾಗಿ ಭಕ್ತಾಧೀನನೆಂದೆನಿಸಿ
ತಡೆವ ದುರಿತೌಘಗಳ ಕಾಮದ
ಕೊಡುವಸಕಲೇಷ್ಟಗಳ ಸಂತತ
ನಡೆವ ನಮ್ಮಂದದಲಿ ನವಸುವಿಶೇಷ ಸನ್ಮಹಿಮ

ಬಿಟ್ಟವರ ಭವಪಾಶದಿಂದಲಿ
ಕಟ್ಟುವನು ಬಹು ಕಠಿಣನಿವ ಶಿ
ಷ್ಟೇಷ್ಟನೆಂದರಿತನವರತ ಸದ್ಭಕ್ತಿ ಪಾಶದಲಿ
ಕಟ್ಟುವರ ಭವಕಟ್ಟು ಬಿಡಿಸುವ
ಸಿಟ್ಟನವ ನಿವನಲ್ಲ ಕಾಮದ
ಕೊಟ್ಟು ಕಾವನು ಸಕಲ ಸೌಖ್ಯವ ನಿಹಪರಂಗಳಲಿ
ಕಣ್ಣಿಗೆವೆಯಂದದಲಿ ಕೈ ಮೈ
ತಿಣ್ಣಿಗೊದಗುವ ತೆರದಿ ಪಲ್ಗಳು
ಪಣ್ಣು ಫಲಗಳನಗಿದು ಜಿಹ್ವೆಗೆ ರಸವ ನೀವಂತೆ
ಪುಣ್ಯ ಫಲವೀವಂದದಲಿ ನುಡಿ
ವೆಣ್ಣಿನಾಣ್ಮಾಂಡದೊಳು ಲಕ್ಷ್ಮಣ
ನಣ್ಣನೊದಗುವ ಭಕ್ತರವಸರ ಕಮಠಗಣ ಸಹಿತ
ಖೇದ ಮೋದ ಜಯಾಪಜಯ ಮೊದ
ಲಾದ ದೋಷಗಳಿಲ್ಲ ಚಿನ್ಮಯ
ಸಾದರದಿ ತನ್ನಂಘ್ರಿ ಕಮಲವ ನಂಬಿ ನುತಿಸುವರ
ಕಾದುಕೊಂಡಿಹ ಪರಮ ಕರುಣ ಮ
ಹೋದಧಿಯು ತನ್ನವರು ಮಾಡ್ದಪ
ರಾಧಗಳ ನೋಡದಲೆ ಸಲಹುವ ಸರ್ವ ಕಾಮದನು

**ಜಗನ್ನಾಥ ದಾಸರು** (೧೭೭೫)

## ೧೧೧. ವ್ಯಾಪ್ತಿ

ಪುರುಷ ರೂಪತ್ರಯ ಪುರಾತನ
ಪುರುಷ ಪುರುಷೋತ್ತಮ ಕ್ಷರಾಕ್ಷರ
ಪುರುಷ ಪೂಜಿತಪಾದ ಪೂರ್ಣಾನಂದ ಜ್ಞಾನಮಯ
ಪುರುಷಸೂಕ್ತ ಸುಮೇಯ ತತ್ತ
ತ್ಪುರುಷ ಹೃತ್ಪುಷ್ಕರನಿಲಯ ಮಹ
ಪುರುಷಜಾಂಡಾಂತರದಿ ಬಹಿರದಿ ವ್ಯಾಪ್ತ ನಿರ್ಲಿಪ್ತ

ಸ್ತ್ರೀ ನಪುಂಸಕ ಪುರುಷ ಭೂ ಸಲಿ
ಲಾನಲಾನಿಲ ಗಗನ ಮನ ಶಶಿ
ಭಾನು ಕಾಲ ಗುಣ ಪ್ರಕೃತಿಯೊಳಗೊಂದು ತಾನಲ್ಲ
ಏನು ಇವನ ಮಹಾಮಹಿಮೆ ಕಡೆ
ಗಾಣರಜಭವ ಶಕ್ರಮುಖರು ನಿ
ದಾನಿಸಲು ಮಾನವರಿಗಳವಡುವುದೆ ವಿಚಾರಿಸಲು

ಗಂಧ ರಸ ರೂಪ ಸ್ಪರ್ಶ ಶ
ಬ್ದೊಂದು ತಾನಲ್ಲದರದರ ಪೆಸ
ರಿಂದೆ ಕರೆಸುತ ಜೀವರಿಗೆ ತರ್ಪಕನು ತಾನಾಗಿ
ಪೊಂದಿಕೊಂಡಿಹ ಪರಮ ಕರುಣಾ
ಸಿಂಧು ಶಾಶ್ವತ ಮನವೆ ಮೊದಲಾ
ದಿಂದ್ರಿಯಗಳೊಳಗಿದ್ದು ಭೋಗಿಸುತಿಹನು ವಿಷಯಗಳ

ಶ್ರವಣ ನಯನ ಘ್ರಾಣ ತ್ವಗ್ರಸ
ನಿವುಗಳಲಿ ವಾಕ್ಪಾಣಿ ಪಾದಾ
ದ್ಯವಯವಗಳಲಿ ತದ್ಗುಣಗಳಲಿ ತತ್ಪತಿಗಳೊಳಗೆ

ಪ್ರವಿತತನು ತಾನಾಗಿ ಕೃತಿಪತಿ
ವಿವಿಧ ಕರ್ಮವ ಮಾಡಿ ಮಾಡಿಸಿ
ಭವಕೆ ಕಾರಣನಾಗಿ ತಿರುಗಿಸುತಿಹನು ತಿಳಿಸದಲೆ

ಗುಣಿ ಗುಣಗಳೊಳಗಿದ್ದು ಗುಣಿ ಗುಣ
ನೆನಿಸುವನು ಗುಣ ಬದ್ಧನಾಗದೆ
ಗುಣಜ ಪುಣ್ಯಾಪುಣ್ಯ ಫಲ ಬ್ರಹ್ಮಾದಿ ಚೇತನಕೆ
ಉಣಿಸುತವರೊಳಗಿದ್ದು ವೃಜಿನಾ
ರ್ದನ ಚಿದಾನಂದೈಕದೇಹನು
ಕೊನೆಗೆ ಸಚರಾಚರ ಜಗದ್ಭುಕುಯೆನಿಪ ನವ್ಯಯನು

ವಿದ್ಯತಾನೆಂದೆನಿಸಿಕೊಂಬನಿ
ರುದ್ಧದೇವನು ಸರ್ವ ಜೀವರ
ಬುದ್ಧಿಯೊಳು ನೆಲೆಸಿದ್ದು ಕೃತಿಪತಿ ಬುದ್ಧಿಯೆನಿಸುವನು
ಸಿದ್ಧಯೆನಿಸುವ ಸಂಕರುಷಣ ಪ್ರ
ಸಿದ್ಧನಾಮಕ ವಾಸುದೇವನ
ವದ್ಯರೂಪ ಚತುಷ್ಟಯಗಳರಿತವನೆ ಕೋವಿದನು

ಜನಕ ತನ್ನಾತ್ಮಜಗೆ ವರ ಭೂ
ಷಣ ದುಕೂಲವ ತೊಡಿಸಿ ತಾ ವಂ
ದನೆಯ ಕೈಕೊಳುತವನ ಹರಸುತ ಹರುಷಬಡುವಂತೆ
ವನರುಹೇಕ್ಷಣ ಪೂಜ್ಯಪೂಜಕ
ನೆನಿಸಿ ಪೂಜಾಸಾಧನ ಪದಾ
ರ್ಥನು ತನಗೆ ತಾನಾಗಿ ಫಲಗಳನೀವ ಭಜಕರಿಗೆ

ತಂದೆ ಬಹು ಸಂಭ್ರಮದಿ ತನ್ನಯ
ಬಂಧುಬಳಗವ ನೆರಹಿ ಮದುವೆಯ
ನಂದನಗೆ ತಾಮಾಡಿ ಮನೆಯೊಳಗಿಡುವ ತೆರನಂತೆ
ಇಂದಿರಾಧವ ತನ್ನ ಇಚ್ಛೆಗ
ಳಿಂದೆ ಗುಣಗಳ ಚೇತನಕೆ ಸಂ
ಬಂಧಗೈಸಿ ಸುಖಾಸುಖಾತ್ಮಕ ಸಂಸೃತಿಯಲಿಡುವ

ತೃಣಕೃತಾಲಯದೊಳಗೆ ಪೊಗೆ ಸಂ
ದಣಿಸಿ ಪ್ರತಿ ಛಿದ್ರದಲಿ ಪೊರಮ
ಟ್ಟನಳನಿರವನು ತೋರಿ ತೋರದಲಿಪ್ಪ ತೆರನಂತೆ
ವನಜಜಾಂಡದೊಳಖಿಳ ಜೀವರ
ತನುವಿನೊಳ ಹೊರಗಿದ್ದು ಕಾಣಿಸ
ದನಿಮಿಷೇಶನು ಸಕಲ ಕರ್ಮವ ಮಾಳ್ಪನವರಂತೆ

ಪಾದಪಗಳಡಿಗೆರೆಯೆ ಸಲಿಲವು
ತೋದು ಕೊಂಬೆಗಳುಬ್ಬಿ ಪುಷ್ಪ
ಸ್ವಾದು ಫಲವೀವಂದದಲಿ ಸರ್ವೇಶ್ವರನು ಜನರಾ
ರಾಧನೆಯ ಕೈಕೊಂಡು ಬ್ರಹ್ಮ ಭ
ವಾದಿಗಳ ನಾಮದಲಿ ಫಲ ವಿ
ತ್ತಾದರಿಸುವನು ತನ್ನ ಮಹಿಮೆಯ ತೋರಗೊಡ ಜಗಕೆ

ಶ್ರುತಿ ತತಿಗಳಿಗೆ ಗೋಚರಿಸದ
ಪ್ರತಿಮಜಾನಂದಾತ್ಮ ನಚ್ಯುತ
ವಿತತ ವಿಶ್ವಾಧಾರ ವಿದ್ಯಾಧೀಶ ವಿಧಿಜನಕ

ಪ್ರತಿದಿವಸ ಚೇತನರೊಳಗೆ ಪ್ರಾ
ಕೃತ ಪುರುಷನಂದದಲಿ ಸಂಚರಿ
ಸುತ ನಿಯಮ್ಯ ನಿಯಾಮಕನು ತಾನಾಗಿ ಸಂತೈಪ

ಮನ ವಿಷಯದೊಳಗಿರಿಸಿ ವಿಷಯವ
ಮನದೊಳಗೆ ನೆಲೆಗೊಳಿಸಿ ಬಲು ನೂ
ತನವು ಸುಸಮೀಚೀನ ವಿದುಪಾದೇಯ ವೆಂದರುಪಿ
ಕನಸಿಲಾದರು ತನ್ನ ಪಾದವ
ನೆನೆವನೀಯದೆ ಸರ್ವರೊಳಗಿ
ದ್ದನುಭವಿಸುವನು ಸ್ಥೂಲ ವಿಷಯವ ವಿಶ್ವನೆಂದೆನಿಸಿ

ತೋದುಕನು ತಾನಾಗಿ ಮನ ವೊದ
ಲಾದ ಕರಣದೊಳಿದ್ದು ವಿಷಯವ
ನೈದುವನು ನಿಜಪೂರ್ಣ ಸುಖಮಯ ಗ್ರಾಹ್ಯ ಗ್ರಾಹಕನು
ವೇದವೇದ್ಯನು ತಿಳಿಯದವನೋ
ಪಾದಿ ಭುಂಜಿಸುತೆಲ್ಲರೊಳಗಾ
ಹ್ಲಾದ ಬಡುವನು ಭಕ್ತವತ್ಸಲ ಭಾಗ್ಯ ಸಂಪನ್ನ

ನಿತ್ಯ ನಿಗಮಾತೀತ ನಿರ್ಗುಣ
ಭೃತ್ಯವತ್ಸಲ ಭಯ ವಿನಾಶನ
ಸತ್ಯಕಾಮ ಶರಣ್ಯ ಶ್ಯಾಮಲ ಕೋಮಲಾಂಗ ಸುಖಿ
ಮತ್ತನಂದದಿ ಮರ್ತ್ಯರೊಳಹೊರ
ಗೆತ್ತನೋಡಲು ಸುತ್ತಲಿಪ್ಪನು
ಅತ್ಯಧಿಕ ಸಂತೃಪ್ತ ತ್ರಿಜಗದ್ವ್ಯಾಪ ಪರವಾಪ್ತ

ಅಣು ಮಹತ್ತಿನಲಿಪ್ಪ ಘನ ಪರ
ಮಣುವಿನೊಳಗಡಗಿಸುವ ಸೂಕ್ಷ್ಮವ
ಮುಣುಗಿಸುವ ತೇಲಿಸುವ ಸ್ಥೂಲಗಳವನ ಮಾಯವಿದು
ದನುಜ ರಕ್ಕಸರೆಲ್ಲರಿವನೊಳು
ಮುನಿದು ಮಾಡುವುದೇನುಲೂಖಲ
ಒನಕೆಗಳು ಧಾನ್ಯಗಳ ಹಣಿವಂದದಲಿ ಸಂಹರಿಪ

ಎಲ್ಲಿ ಕೇಳಿದರಲ್ಲಿ ನೋಡಿದ
ರಲ್ಲಿ ಬೇಡಿದರಲ್ಲಿ ನೀಡಿದ
ರಲ್ಲಿ ಓಡಿದರಲ್ಲಿ ಆಡಿದರಲ್ಲಿ ಇರುತಿಹನು
ಬಲ್ಲಿದರಿಗತಿ ಬಲ್ಲಿದನು ಸರಿ
ಯಿಲ್ಲ ಇವಗಾವಲ್ಲಿ ನೋಡಲು
ಖುಲ್ಲ ಮಾನವರೊಲ್ಲ ನಪ್ರತಿಮಲ್ಲ ಜಗಕೆಲ್ಲ

ವಾರಿದನು ಮಳೆಗರೆಯೆ ಬೆಳೆದಿಹ
ಭೂರುಹಂಗಳ ಚಿತ್ರ ಫಲ ರಸ
ಬೇರೆ ಬೇರಿಪ್ಪಂತೆ ಬಹುವಿಧ ಜೀವರೊಳಗಿದ್ದು
ಮಾರರಮಣ ನವರವರ ಯೋಗ್ಯತೆ
ಮೀರದಲೆ ಗುಣಕರ್ಮಗಳನನು
ಸಾರ ನಡೆಸುವ ದೇವನಿಗೆ ವೈಷಮ್ಯವೆಲ್ಲಿಹುದೊ

ವಾರಿಜಾಪ್ತನ ಕಿರಣ ಮಣಿಗಳ
ಸೇರಿ ತತ್ತದ್ವರ್ಣಗಳನು ವಿ
ಕಾರಗೈಸದೆ ನೋಳ್ಪರಿಗೆ ಥಳಥಳಿಸುವಂದದಲಿ

ಮಾರಮಣ ಲೋಕತ್ರಯದೊಳಿಹ
ಮೂರು ವಿಧ ಜೀವರೊಳಗಿದ್ದು ವಿ
ಹಾರ ಮಾಡುವನವರ ಯೋಗ್ಯತೆ ಕರ್ಮವನುಸರಿಸಿ

ಜಲವನಪಹರಿಸುವ ಗಳಿಗೆ ಬ
ಟ್ಟಲನುಳಿದು ಜೈಗಂಟೆ ಕೈ ಪಿಡಿ
ದೆಳೆದು ಹೊಡೆವಂದದಲಿ ಸಂತತ ಕರ್ತ ತಾನಾಗಿ
ಹಲಧರಾನುಜ ಪುಣ್ಯ ಪಾಪದ
ಫಲಗಳನು ದೇವಾಸುರರ ಗಣ
ದೊಳು ವಿಭಾಗವ ಮಾಡಿ ಉಣಿಸುತ ಸಾಕ್ಷಿಯಾಗಿಪ್ಪ

ಪೊಂದಿಕೊಂಡಿಹ ಸರ್ವರೊಳು ಸಂ
ಬಂಧವಾಗದೆ ಸಕಲ ಕರ್ಮವ
ನಂದದಲಿ ತಾಮಾಡಿ ಮಾಡಿಸಿ ತತ್ಫಲಗಳುಣದೆ
ಕುಂದದಲೆ ಅಣು ಮಹತೆನಿಪ ಘಟ
ಮಂದಿರದಿ ಸರ್ವತ್ರ ತುಂಬಿಹ
ಬಾಂದಳದ ತೆರನಂತೆ ಇರುತಿಪ್ಪನು ರಮಾರಮಣ

ಕಾದಕಬ್ಬಿಣ ಹಿಡಿದು ಬಡಿಯಲು
ವೇದನವು ಲೋಹಗಳಿಗಲ್ಲದ
ಲಾದುದೇನೈಯನಳಗಾ ವ್ಯಥೆಯೇನಮಾಡಿದರು
ಆದಿದೇವನು ಸರ್ವ ಜೀವರ
ಕಾದುಕೊಂಡಿಹನೊಳಹೊರಗೆ ದುಃ
ಖಾದಿಗಳು ಸಂಬಂಧವಾಗುವವೇನೋ ಚಿನ್ಮಯಗೆ

ಮಳಲ ಮನೆಗಳ ಮಾಡಿ ಮಕ್ಕಳು
ಕೆಲವು ಕಾಲದಲಾಡಿ ಮೋದದಿ
ತುಳಿದು ಕೆಡಿಸುವ ತೆರದಿ ಲಕುಮೀರಮಣ ಲೋಕಗಳ
ಹಲವು ಬಗೆಯಲಿ ನಿರ್ಮಿಸುವ ನಿ
ಶ್ಚಲನು ತಾನಾಗಿದು ಸಲಹುವ
ನೆಲರುಣಿಯವೋಲ್ ನುಂಗುವಗೆ ಎಲ್ಲಿಯದೊ ಸುಖದುಃಖ

ಒಂದುಗುಣದೊಳನಂತ ಗುಣಗಳು
ಒಂದು ರೂಪದೊಳಿಹವು ಲೋಕಗ
ಳೊಂದು ರೂಪದಿ ಧರಿಸಿ ತದ್ಗ ಪದಾರ್ಥದೊಳ ಹೊರಗೆ
ಬಾಂದಳದವೋಲಿದ್ದು ಬಹು ಪೆಸ
ರಿಂದ ಕರೆಸುತ ಪೂರ್ಣ ಜ್ಞಾನಾ
ನಂದಮಯ ಪರಿಪರಿ ವಿಹಾರವ ಮಾಡಿ ಮಾಡಿಸುವ

ಎಲ್ಲರೊಳು ತಾನಿಪ್ಪ ತನ್ನೊಳ
ಗೆಲ್ಲರನು ಧರಿಸಿಹನು ಅಪ್ರತಿ
ಮಲ್ಲ ಮನ್ಮಥಜನಕ ಜಗದಾದ್ಯಂತ ಮಧ್ಯಗಳ
ಬಲ್ಲ ಬಹುಗುಣ ಭರಿತ ದಾನವ
ದಲ್ಲಣ ಜಗನ್ನಾಥ ವಿಠ್ಠಲ
ಸೊಲ್ಲನಾಲಿಸಿ ಕಂಭದಿಂದಲಿ ಬಂದ ಭಕ್ತನಿಗೆ

**ಜಗನ್ನಾಥದಾಸರು**
(ಸು. ೧೭೨೮)

## ೧೧೨. ಹೇಸಬಾರದೆ ಮನುಜ

ರಾಗ ಕಾಂಬೋದಿ

ಇನ್ನಾದರೀ ಭವಗ ಹೇಸಬಾರದೆ ಮನುಜಾ
ನಿನ್ನ ಮನಸಿನ ಬಲುಹನೇನೆಂಬೆನಹಹ

ಏಳು ಜನ್ಮದ ಯೋನಿಗಳೊಳೆಲ್ಲ ಪೊರಮಟ್ಟು
ಏಳಬ್ಧಿಯನಿತು ಮೊಲೆವಾಲನುಂಡು
ಏಳು ದ್ವೀಪವನೆಲ್ಲ ನಿನ್ನ ಸುಡುಗಾಡೆನಿಸಿ
ಏಳು ಕುಲಗಿರಿಗಳನಿತಸ್ಥಿಗಳ ಕೆಡಹಿ

ಧರೆಯ ದುರಿತಂಗಳೆಲ್ಲವನು ಕಡೆಗಂಡು ಯಮ–
ಪುರದ ಬಾಗಿಲನೆಲ್ಲ ತೆರೆಸಿ ಹಾಯ್ಕಿ
ಮೊರೆವಂತಕನಿಗೆ ಮೂರ್ಛೆಯನಿತ್ತು ದೂರುಗಳ–
ನೊರೆಯುತಿಹ ಚಿತ್ರಗುಪ್ತರನು ಬೇಸರಿಸಿ

ಕೊರೆವಿರಿವ ಯಮದೂತರಶನನಿದ್ರೆಯ ಕಿತ್ತು
ಕರವಾಳಕೋಟಿಗಳ ಮೊಂಡಗೊಳಿಸಿ
ನರಕವಿವು ಸಾಲವಿನ್ನೆರಡನಿತು ಬೇಕೆನಿಸಿ
ಗುರುಸಿದ್ಧನಡಿಯ ಮರೆದಿನಿತು ಶ್ರಮಬಟ್ಟು

**ಸರ್ಪಭೂಷಣ ಶಿವಯೋಗಿಗಳು.**
(ಸು. ೧೭೦೦)

# ೧೧೩. ದೇವರ ದೇವ

ರಾಗ ಸಾಳಂಗ

ಮರವೆಯಂಶವನೆಲ್ಲ ತೊಡೆದು ಬಿಟ್ಟಿರುವನೆ ದೇವರ ದೇವ
ಪರಮಾರ್ಥದರಿವಿನಾಚರಣೆಯ ಮೆರೆವನೆ ದೇವರ ದೇವ

ಪರನಿಂದೆಗಳನಾಡದಾಲಿಸದಿರುವನೆ ದೇವರ ದೇವ
ಪರಸತಿಯು ಮಾತೆಯೆಂದು ಭಾವಿಸುವನೆ ದೇವರ ದೇವ
ಪರದಾರನಾದರು ತನ್ನಂತೆ ನೋಳ್ಪನೆ ದೇವರ ದೇವ
ಪರರ ಗುಣವ ಪರ್ವತದಂತೆ ಬೆಳೆಸನೆ ದೇವರ ದೇವ

ಇತರರರ್ಥಕೆ ನೇತ್ರಕರಮನವಿಡದನೆ ದೇವರ ದೇವ
ಹಿತವನೆ ಸರ್ವಪ್ರಾಣಿಗಳಿಗೆ ಬಯಸನೆ ದೇವರ ದೇವ
ಸ್ತುತಿ ನಿಂದೆಗಳಿಗೆ ಹಿಗ್ಗದೆ ತಗ್ಗದಿರುವನೆ ದೇವರ ದೇವ
ಶ್ರುತಿಯೊಳಘದ ವಾರ್ತೆಗೇಳಲಳಕುವನೆ ದೇವರ ದೇವ

ಸಿರಿಯಿಂದೆ ತರುವಿನಂತನ್ಯರ ತಣಿಸನೆ ದೇವರ ದೇವ
ಸಿರಿದಾರಿದ್ರ್ಯಗಳನು ಸಮವಾಗಿ ಕಾಣ್ಬನೆ ದೇವರ ದೇವ
ಮರಣಾಂತವಾಗಲನೃತವಾಡದಿರುವನೆ ದೇವರ ದೇವ
ಮರೆಹೊಕ್ಕವರ ತನುವಿತ್ತಾದೊಡುಳಿಸನೆ ದೇವರ ದೇವ

ತನುಮನೋವಚನಗಳೊಂದಾಗಿ ನಡೆವನೆ ದೇವರ ದೇವ
ಕನಕವ ಕಲ್ಮಣ್ಣಿಗೆಣೆಯಾಗಿ ಕಾಣ್ಬನೆ ದೇವರ ದೇವ
ತನಗಪಕರಿಸಿದರ್ಗುಪಕಾರವೆಣಿಸನೆ ದೇವರ ದೇವ
ಧನದಂತೆ ಗುರುದೇವತೆಯೊಳಾಸ್ಥೆಯುಳ್ಳನೆ ದೇವರ ದೇವ

ಬರಿಯ ಸಂಸಾರರಂಜನೆಗೆ ಮೋಹಿಸಿದನೆ ದೇವರ ದೇವ
ಮೆರವೆನುಭವಶಾಸ್ತ್ರ ಸುಖಗೋಷ್ಠಿಗೊಲಿವನೆ ದೇವರ ದೇವ
ಪರಮಾತ್ಮನುಳಿಮೆಯ ತಾನೆಂದು ತಿಳಿವನೆ ದೇವರ ದೇವ
ಗುರುಸಿದ್ಧನಿಂದೆ ಸುಸ್ಥಿರಮುಕ್ತಿವಡೆವನೆ ದೇವರ ದೇವ

**ಸರ್ಪಭೂಷಣ ಶಿವಯೋಗಿಗಳು.**
(ಸು. ೧೭೦೦)

## ೧೧೪. ಶರೀರವೆಂಬ ಹೊಲ

ರಾಗ ಸುರಟಿ

ಶರೀರವೆಂದೆಂಬುವ ಹೊಲನ ಹಸನ ಮಾಡಿ
ಪರತತ್ತ್ವ ಬೆಳೆಯನೆ ಬೆಳೆದುಣ್ಣಿರೋ

ಶಮೆದಮೆಯೆಂದೆಂಬುವೆರಡೆತ್ತುಗಳ ಹೂಡಿ-
ವಿಮಲಮಾನಸವ ನೇಗಿಲನೆ ಮಾಡಿ
ಮಮಕಾರವೆಂದೆಂಬ ಕರಿಕೆಯ ಕಳೆದಿಟ್ಟು
ಸಮತೆಯೆಂದೆಂಬ ಗೊಬ್ಬರವ ಚೆಲ್ಲಿ

ಗುರುವರನುಪದೇಶವೆಂಬ ಬೀಜವ ಬಿತ್ತಿ
ಮೆರೆವ ಸಂಸ್ಕಾರವೃಷ್ಟಿಯ ಬಲದಿ
ಅರಿವೆಂಬ ಪೈರನೆ ಬೆಳೆಸುತೆ ಮುಸುಗಿರ್ದ
ದುರಿತದುರ್ಗುಣವೆಂಬ ಕಳೆಯ ಕಿತ್ತು

ಸ್ಥಿರಮುಕ್ತಿಯೆಂದೆಂಬ ಧಾನ್ಯವ ಬೆಳೆದುಂಡು
ಪರಮಾನಂದದೊಳು ದಣ್ಣನೆ ದಣಿದು
ಗುರುಸಿದ್ಧನಡಿಗಳಿಗೆರಗುತ್ತೆ ಭವವೆಂಬ
ಬರವನು ತಮ್ಮ ಸೀಮೆಗೆ ಕಳುಹಿ

**ಸರ್ಪಭೂಷಣ ಶಿವಯೋಗಿಗಳು.**
(ಸು. ೧೭೦೦)

# ೧೧೫. ಜ್ಯೋತಿ ಬೆಳಗುತಿದೆ

ರಾಗ— ನಾದರಾಮಕ್ರಿಯೆ

ತಾನೆ ಬೆಳಗುತಿದೆ ಸ್ವಯಂ ಜ್ಯೋತಿ ತಾನೆ ಬೆಳಗುತಿದೆ
ಮಾನಸ ವಾಚಕ ಕಾಯಕದೊಳು ತನ್ನ

ತನ್ನ ವಾಮಕರಪೀಠ ಪಾತ್ರೆಯೊಳು ನಿರ್-
ಭಿನ್ನಭಕ್ತಿಯ ರಸತೈಲತೀವಿ
ಸನ್ನುತ ನಡೆನುಡಿ ಭಕ್ತಿವಿಡಿದು ಸುಪ್ರ
ಸನ್ನ ಪ್ರಕಾಶ ಸತ್‌ಕ್ರಿಯಾ ಜ್ಯೋತಿ

ಪರತತ್ತ್ವ ಹೃದಯ ಪಣಿತೆಯೊಳು ಷಣ್ಮಂತ್ರ-
ದರುವೆಂಬಸುರಸ ತೈಲವ ಹೀರುತ
ವರದೃಢ ಚಿತ್ತಬತ್ತಿಯ ಕೊನೆಯೊಳು ಲಿಂಗ
ಕಿರಣದೊಬ್ಬಳಿಯ ಸುಜ್ಞಾನ ಜ್ಯೋತಿ

ಚಾರು ಸದ್‌ಭಾವ ಪಣಿತೆಯೊಳು ತತ್ತ್ವವಿ
ಚಾರ ಸುಸಾರ ಘೃತವನೀಂಟುತ
ಮೀರಿದಾಚರಣೆ ಬತ್ತಿಯ ಕೊನೆಯೊಳು ಚೆನ್ನ-
ವೀರ ಮದ್‌ಗುರು ಮಹಾಜ್ಞಾನ ಜ್ಯೋತಿ

**ಮೈಲಾರದ ಬಸವಲಿಂಗ**
(ಸು. ೧೮೦೦)

## ೧೧೬. ಊರಿಗೆ ಸೇರೋ

ಹೊತ್ತಿರಲಿಕೆ ಊರಿಗೆ ಸೇರೋ ದಾರಿ
ಕತ್ತಲೆಯೊಳಗರುಪುವರಾರೊ

ಬೀಜದ ನೆಲ್ಲು ಕುಟ್ಟಿಯು ಹೊಟ್ಟು ಚಲ್ಲು
ತೋಜೆಯಿಂ ಶುದ್ಧಭಾಂಡದೊಳಟ್ಟು
ಮಾಜದೆ ಜಂಗಮೇಶನಿಗೆ ಕೊಟ್ಟು ಘನ
ತೇಜ ಪ್ರಸಾದವನುಂಡುಟ್ಟು

ಅಖಿಳ ಪಂಚಾಂಗವಾಲಿಸೆ ಕೇಡು ಶಿವ
ಲಿಖಿತ ಪ್ರಮಾಣ ಸತ್ಯದಿ ನೋಡು
ಸಖ ಬಂಧುಜನರ ಹಿಂದಕೆ ಮಾಡೊ ಪದ್ಮ
ಸಖನಿರುತಲೆ ಮನೆಯೊಳಗಾಡೊ

ಮೂರು ಬೆಟ್ಟಗಳ ಯುಕ್ತಿಲಿ ದಾಟೊ ಅಲ್ಲಿ
ದಾರಿ ತಪ್ಪಿದರೆ ಪುಲಿಯ ಕಾಟೊ
ಆರು ಮಂದಿ ಕಳ್ಳರಿರುವ ಮಾಟೊ ಮಹಾ
ಧೀರತ್ವದಿಂದಲಾಚೆಗೆ ದಾಟೊ

ಜನರಿಗ್ಹೇಳುವೆನೆಂಬುದವದ್ಯಾಕೊ ಸಾಧು
ಜನರಿಗೊಬ್ಬರಿಗುಸುರೆಲೆ ಸಾಕೊ
ಅನುಮಾನವೆಲ್ಲವ ಕಡೆ ನೂಕೊ ಮುಂದ
ಕನುಪದ ಬಳಸಿ ನಡೆಯಬೇಕೊ

ಎಡಬಲದಲಿ ವಿವರಿಸಿ ನೋಡೊ ನಟ್ಟ
ನಡುದಾರಿ ಹಿಡಿದು ಮುಂದಕೆಯೋಡೊ
ಅಡವಿಹಣ್ಣುಗಳ ಬಯಕೆ ಬೇಡೊ ಗಡ
ಗಡ ಪೋಗಿ ಘನಮಠೇಶನ ಕೂಡೊ

**ಘನಮಠದಾರ್ಯರು** (ಸು. ೧೮೩೦)

## ೧೧೭. ಚಿತ್ಸೂರ್ಯ

### ರಾಗ ದ್ವಿಜಾವಂತಿ

ಅವರವರ ಭಕ್ತಿಗೆ ಅವರವರ ಭಾವಕ್ಕೆ
ಅವರವರ ತೆರನಾಗಿ ಇರುತಿಹನು ಶಿವಯೋಗಿ

ಇರದೊಂದು ಕನ್ನಡಿಯ ನೂರಾರು ಜನ ಪಿಡಿಯೆ
ಸರಳಾಗಿ ಅವರವರ ರೂಪು ಕಾಣುವಂತೆ
ಹರಿಯ ಭಕ್ತರಿಗೆ ಹರಿ ಹರನ ಭಕ್ತರಿಗೆ ಹರ
ನರರೇನು ಭಾವಿಸುವರದರಂತೆ ತೋರುವನು

ಮತಭೇದದವರು ದುರ್ಮತಿಯಿಂದ ಯತಿವರಗೆ
ಸ್ತುತಿ ನಿಂದೆ ಮಾಡಿದರೆ ಅವರಿಗೆ ತಿರುಗುವುವು
ಯತಿವರನು ತಾ ತನ್ನಪಥದಲ್ಲಿ ಯಿರುವನು
ಕ್ಷಿತಿಯ ಜನರ ಪಾಪ ಪುಣ್ಯ ಫಲಪರೀಕ್ಷೆ

ಕುಲಛಲವ ಹಿಡಿದಿರುವ ಕಲಕುಮನದವರಲ್ಲಿ
ತಿಳಿವಳಿಕೆ ಶಿವಚಂದ್ರಮ ಕಾಣುವ ಪರಿಯೆಂತು
ಕುಲಛಲವನತಿಗಳೆದ ತಿಳಿಯ ಮನದವರಲ್ಲಿ
ಸಲೆ ಮಹಂತಲಿಂಗ ಚಿತ್ಸೂರ್ಯ ಕಾಣುವನು

**ಮಹಂತ ಶಿವಯೋಗಿಗಳು.**

(೧೮೩೩–೫೯)

## ೧೧೮. ಪರಬ್ರಹ್ಮದ ಶಿಶು

**ರಾಗ ಕಲ್ಯಾಣಿ**

ಲಾಲಿ ಲಾಲಿಯು ಪರಬ್ರಹ್ಮದ ಶಿಶುವೆ
ಮಾಲೆಯ ಧರಿಸುವೆ ಮಲ್ಲಿಗೆ ಹೂವಿನ

ಅಷ್ಟದಳದ ಕಮಲ ತೊಟ್ಟಿಲೊಳಗೆ ಮಲಗಿ
ಶ್ರೇಷ್ಠ ಸದ್ಗುಣ ಹಸ್ತ-ಪದಗಳನಾಡುತ
ನೆಟ್ಟನೆ ನಿಟಿಲ ಭ್ರೂಮಧ್ಯದ ಜ್ಯೋತಿಯ
ದೃಷ್ಟಿಸಿ ನೋಡುತ ಕುಲು ಕುಲು ನಗುತಿಹ

ಪ್ರಣವ ಘೋಷದ ನಾಗಸ್ವರ ವೇಣಿ ವಾಸುಕಿ
ಝುಣಝುಣಂ ಘಲ್ಗಿಜ್ಜೆ ತಾಳ ಮೃದಂಗ ಭೇರಿ
ಢಣಢಣೆಂಬುವ ಘಂಟೆ ಜಾಗುಟೆ ನಾದವ
ಬಣ್ಣಿಸಲಿವ ಶಿವ ಸುಖಮಯ ಕಂದನ

ಫಲಪದಗಳ ಮೀರಿ ಶಿವಪದವೆಂಬುವ
ಹೊಳೆವ ಮೇಲುಪ್ಪರಿಗೆ ಮೇಲೆ ಕುಳಿತು ಮಾಯಾ
ಕಲಿಯುಗ ನರ್ತಕಿಯಾಟವ ನೋಡುತ
ನಲಿವ ಪರಶಿವ ಮಹಂತಲಿಂಗ ಶ್ರೀ ಬಾಲಕ

**ಮಹಂತ ಶಿವಯೋಗಿಗಳು.**

(೧೮೨೩–೫೯)

## ೧೧೯. ಭರತಚಕ್ರೇಶ್ವರ

ಭರತಭೂತಳಕೆ ಸಿಂಗಾರವಾದಯೋಧ್ಯಾ
ಪುರದೊಳು ಮೂಲೋಕ ಪೊಗಳೆ
ಭರತಚಕ್ರೇಶ್ವರ ಸುಖಬಾಳುತಿರ್ದನಾ
ಸಿರಿಯನಿನ್ನೇನ ಬಣ್ಣಿಪೆನು

ಹೊಲ್ಲದನ್ಯಪರಿಗಿಲ್ಲದ ಗುಣಗಳನಿಟ್ಟು
ಸೊಲ್ಲಿಪ ಕೃತಿಮಾರ್ಗವಲ್ಲ
ಉಳ್ಳಸದ್ಗುಣಗಳ ಕಡೆಗಂಡು ಬಣ್ಣಿಸ
ಬಲ್ಲವನಾವನಾ ನೃಪನಾ

ಆ ವಿಭುವೊಂದಿನದುದಯದೊಳೆದ್ದು
ದೇವತಾರ್ಚನೆಯನು ಮಾಡಿ
ಚಾವಡಿಗೈದಿ ತಾನೋಲಗವಾದೊಂದು
ಶ್ರೀವಿಲಾಸವನೇನನೆಂಬೆ

ನವರತ್ನ ಹೇಮನಿರ್ಮಿತವೆನಿಪಾಸ್ಥಾನ
ಭವನದೊಳಾ ರಾಜರತ್ನ
ಛವಿವಡೆದೆಸೆದನು ರತ್ನಪುಷ್ಪಕದೊಳು
ದಿವಿಜೇಂದ್ರನೊಪ್ಪುವಂದದೊಳು

ಸಿಂಗರಿಸಿದ ಝಲ್ಲಿಪಟ್ಟೆಪೂಮಾಲೆ ಬೆ
ಡಂಗಾದ ಮಂಟಪದಲ್ಲಿ
ಶೃಂಗಾರವನದೊಳು ಮೆರೆವ ವಸಂತರಾ
ಜಂಗೆಣೆಯಾದನಾ ಸೊಬಗಾ

ತನುಕಾಂತಿ ತುಂಬಿದ ಸಭೆಯೆಂಬ ಕೊಳದಲ್ಲಿ
ಕನಕಸಿಂಹಾಸನವೆಂಬ
ಕನಕಾಂಬುಜದ ಮೇಲಾ ರಾಜ(ಹಂಸ)ನಿ
ದ್ದನು ರಾಜಹಂಸನೆಂಬಂತೆ

ಆವ ಬಿಂಕವೊ ಎಡಗಾಲ ಗದ್ದುಗೆಯ ಮೇ
ಲೋವಿ ಮಡಿದು ಮತ್ತೆ ಕೆಳಗೆ
ಹಾವುಗೆಯೊಳು ಪೆಂಡೆಯದ ಬಲಗಾಲೂರಿ
ಠೀವಿಯೊಳೆಸೆದನಾ ರಾಯಾ

ಬಲಗೈಯೊಳಾಂತ ಹೊನ್ನೊರೆಯು ಕಠಾರಿಯು
ಕೆಲಕೂರಿ ಮತ್ತೆಡಗೈಯಾ
ಮಲಗಿನ ಮೇಲೂರಿ ಬೀರಸಿರಿಯನಾಳ್ದ
ಕಲಿಗಳದೇವನೊಪ್ಪಿದನು

ನರುಸುಯ್ಯ ಗಾಳಿಗೆ ತೇಲ್ವ ದುಕೂಲದ
ಸೆರಗುಸೇರುವೆ ದೊರೆಹೊದೆದು
ತೆರಪಿನೆದೆಯ ಹೊನ್ನ ಜನ್ನಿವಾರದ ರೇಖೆ
ಮೆರೆಯೆ ರಾಜೇಂದ್ರ ಮೆರೆದನು

ಮಿರುಪ ಕಿರೀಟವುಂಟದನಂದು ಧರಿಸಿತಿ
ಲ್ಲುರೆ ಮನದೊಂದು ಲೀಲೆಯೊಳು
ತುರುಬು ಚುಂಗೆಸೆಯೆ ಚಿಮ್ಮುರಿಸುತ್ತಿ ಸೊಬಗನೆ
ಕರೆವುತ್ತಿದ್ದನು ನೋಡುವರಿಗೆ

ಹೊಂಬಣ್ಣ ಮೈಗೆ ಮೋಹಿಸುವ ಕಾಗಿನಧಟ್ಟಿ
ತುಂಬಿದ ಕಸ್ತೂರಿತಿಲಕ

ಮುಂಬಾಯ ಕರ್ಪೂರವೀಳೆಯದಿಂದ ಕ
ಕಣ್ಗೆಂಬಾದನಾ ಗಾಡಿಕಾರ

ನೋಡುವಿ ಠೀವಿ ಹತ್ತೆಂಟಕೊಮ್ಮೊಮ್ಮೆ ವಾ
ತಾಡುವ ನುಡಿಯ ವಿಡಾಯಾ
ಪಾಡರಿದೋಲಗಗೊಟ್ಟಾಚೆ ಶಿರವನ
ಲ್ಲಾಡಿಸುತಿಹನು ನೋಳ್ಪವರಾ

ಜೋಕೆವಿಡಿದು ನೀಡುವೆಳೆಯ ಘಳಿಗೆಯ ಪ
ರಾಕಿನೊಳಗೆ ಕೈಕೊಳುತ
ಏಕೆ ನುಡಿಯನೋ ಇನ್ನೊಮ್ಮೆಯೆಂಬಂತೊಂದು
ತೂಕದೊಳೆಸೆದನಾ ರಾಯಾ

ಮಿಗೆ ತೋರಮುತ್ತಿನ ತೊಡಿಗೆಯೊಡನೆ ಧಗ
ಧಗಿಸುವ ಲಾವಣ್ಯದಿಂದ
ಹಗಲು ನಕ್ಷತ್ರವೆರಸಿ ಪೂರ್ಣಚಂದ್ರಮ
ಸೊಗಸಿದಂತೆಸೆದನು ಚಿತ್ರಾ

ಚಿತ್ರಿಸಬಾರದವನರೂಪು ಕರುವಿಟ್ಟು
ಸೂತ್ರಿಸಿಯೆರೆಯಲಶಕ್ಯ
ನೇತ್ರಕೆ ಮನಕೆ ಗೋಚರವಲ್ಲದದು ವಾಕು
ಮಾತ್ರಕೆ ಗೋಚರವೈಸೆ

ಹೆಂಗಳ ರೂಪು ಗಂಡರಿಗೆ ಗಂಡರ ರೂಪು
ಹೆಂಗಳ ಸೋಲಿಪುದೆಂಬ
ಪಾಂಗಲ್ಲವವನ ಚೆಲ್ವಿಕೆ ಗಂಡು ಪೆಣ್ಗಳ
ಕಂಗಳ ಸೆರೆವಿಡಿದಿಹುದು

ನಿಟ್ಟಿಸಿದರೆ ಮುತ್ತುಮುದುಕಿಗಾದರು ಜುಂಮು
ಧಟ್ಟಿಸುತಿಹುದು ರೂಪವನ
ಬಟ್ಟಜವ್ವನೆಯರಂತಿಂತಾದರೆಂದು ಬಾ
ಯಿಟ್ಟೆನ್ನು ನುಡಿಯಲದೇಕೆ

ಅಂಗವಂಗಕೆ ತಕ್ಕ ಲಾವಣ್ಯ ಲಾವಣ್ಯ
ದಿಂಗಿತ ಪ್ರಾಯ ಪ್ರಾಯದೊಳು
ಸಂಗಡಿಸಿದ ಸಿರಿಗಂಭೀರ ವಿಕ್ರಮ
ಶೃಂಗಾರಶೋಭೆಯೊಳೆಸೆದಾ

ಈ ರೂಪು ರೇಖೆ ಮತ್ತೀ ಗಾಡಿ ನೋಡಿ ಇಂ
ತೀ ರಾಯಗಲ್ಲದನ್ಯರಿಗೆ
ಬಾರದು ಬಂದರೊಬ್ಬರಿಗೆ ನೆರೆಯದೆಂದು
ತೋರುತಿಹರು ತಮತಮಗೆ

ತರತರವಿಡಿದು ಧಾಳಿಸುತಿಹ ದೀರ್ಘ ಚಾ
ಮರಗಳ ಸಾಲೊಳೆಸೆದನು
ಹರಿವ ಬೆಳ್ಮುಗಿಲೊಳು ತೋರಿ ಮರಸುವ ಚಂ
ದಿರನೋ ಭಾಸ್ಕರನೋಯೆಂಬಂತೆ

**ರತ್ನಾಕರವರ್ಣಿ–ಭರತೇಶವೈಭವ**

(೧೫೫೭)

## ೧೨೦. ಸುಲೋಚನೆಯ ಸ್ವಯಂವರ

ನಡೆದಳು ಪೂಮಾಲೆವಿಡಿದಾಕೆ ಚೆಲ್ವರ
ನೆಡಬಲದಲ್ಲಿ ನಿಟ್ಟಿಸುತ
ಒಡನೆ ಮಹೇಂದ್ರಿಕೆಯೆಂಬ ಕಟ್ಟಿಗೆಕಾತಿ
ನುಡಿದು ಕಾಣಿಸಿದಳೇನೆಂಬೆ

ನೋಡೀತ ನೇಪಾಳರಾಜನೆಂದಳು ಪಾಟಿ
ಮಾಡದೆಯ್ದಿದಳಾಕೆ ಮುಂದೆ
ಬಾಡಿತಾತನ ಮೋರೆ, ಲಾಗುತಪ್ಪಿದ ಹೊಸ
ಕೋಡಗದಂತಿದ್ದನವನು

ಹಮ್ಮೀರಪತಿ ಈತ ನೋಡೆನೆ ನಿಟ್ಟಿಸಿ
ಸುಮ್ಮನೆಯ್ದಿದಳು ಮುಂಗಡೆಗೆ
ಉಮ್ಮುವ ಕಂಬನಿ ಮಿಗೆ ಮರುಗಿದನವ
ತಮ್ಮಯ್ಯನೊಡನೆ ಹೋದಂತೆ

ಚೀನದೇಶದ ರಾಯನಿವನೆನಲೀಕ್ಷಿಸಿ
ಮೀನಾಕ್ಷಿಮುಂದಕೆಯ್ದಿದಳು
ಛೀ ನನ್ನ ಬದುಕೇನು ಸುಡುಸುಡೆಂದವ ನಾಣ್ಚಿ
ಮೌನದಿ ಕುಸಿದನು ತಲೆಯಾ

ಲಾಟದೇಶದ ರಾಯನಿವನೆನಲೀಕ್ಷಿಸಿ
ಪಾಟಿ ಮಾಡದೆ ಹೋದಳವಳು
ಕೂಟಕೆ ಬಂದು ನೂಕಿಸಿಕೊಂಡರಂತೆದೆ
ಗೋಟಲೆಗೊಳುತಿದ್ದನವನು

ಗೌಡದೇಶದ ರಾಯನಿವನೆನೆ ಹಳ್ಳಿಯ
ಗೌಡನೆಂದೆಣಿಸಿ ಸಾಗಿದಳು
ಓಡುಗಚ್ಚಿದನವ ಸೆರೆತು ನೋಡಿದ ತನ್ನ
ಗೌಡಿಯೊ ಬೆದರಿ ಬಹಾಗ

ಬಂಗಾಳದರಸೀತ ನೋಡೆಂದರೀಕ್ಷಿಸಿ
ಮುಂಗಡೆಗೆಯ್ದಿದಳೊಡನೆ
ಸಿಂಗಾರ ಮುರುಕ ವಿಡಾಯ ಹಾರಿತು ಹೊಸ
ಬಿಂಗಿಯಂತಿರ್ದನಾ ನೃಪತಿ

ಅಂಗದೇಶಾಧೀಶನೀತ ಕಾಶ್ಮೀರ ಕ
ಳಿಂಗನು ಕಾಂಭೋಜನಿವನು
ಸಿಂಗಳದರಸೀತನೆನೆ ನೋಡಿ ನಗುತ ಮ
ತಂಗಜಗವ.ನೆ ಸಾಗಿದಳು

ಇವರು ಮ್ಲೇಚ್ಛೋರ್ವೀಪಾಲರು ನೋಡು ದೇವಿ ಮ
ತ್ತಿವರು ವಿದ್ಯಾಧರ ನೃಪರು
ರವಿಕುಲ ಶಶಿಕುಲವಿಂತಂತುಟೆನೆ ಕೇಳ್ದು
ಯುವತಿ ಸಾಗಿದಳೋರೆ ಮೊಗದಿ

ಗುಣಚಂದ್ರ ರಾಜನು ಶುಭಚಂದ್ರ ರಾಜನು
ರಣಚಂದ್ರ ಸುರಚಂದ್ರನೆಂದು
ಗಣನೆಯೊಳಷ್ಟ ಚಂದ್ರರ ತೋರಿದರೆ ನೋಡಿ
ತೃಣಕೆಣೆಗಂಡು ಸಾಗಿದಳು

ಪರಿವರಿಯರಲನೆಲ್ಲವ ಬಿಟ್ಟು ತುಂಬಿ ತಾ
ವರೆಯೊಂದ ಕಂಡು ನಿಲ್ವಂತೆ

ದೊರೆಗಳೆಲ್ಲರ ತೊರೆದೊಬ್ಬನೊತ್ತಲಿ ನಿಂದ
ಳರರೆ ನೋಡವನ ಸೈಪೆಂತೊ
ದೂರಿಸಿ ತನ್ನ ನೋಡಿದರ ಚಿತ್ತಕೆ ಬಾಯಿ
ನೀರ ಬರಿಸಿ ನೂಂಕಿ ಹೋಗಿ
ನಾರಿ ತಾನೊಬ್ಬನ ಸೋತು ನೋಡಿದಳೆಂದ
ರಾ ರಾಯನೇನು ಚೆನ್ನಿಗನೊ

ಒಡತಿಯ ಸೋಲವನರಿತು ಮಹೇಂದ್ರಿಕೆ
ಗುಡಿಗಟ್ಟಿ ಹೊಂಜೆಳೆಯೆತ್ತಿ
ಬೆಡಗಾಯ್ತು ದೇವಿ ಕೇಳೀತನ ನೆಲೆಯ ಕ
ನ್ನಡಿಪೆನೆಂದಿಂತೆಂದಳಾಗ

ಅಪ್ರತಿಹನೀತ ಹಸ್ತಿನ–ಪುರದ ಸೋ
ಮಪ್ರಭರಾಜನಾತ್ಮಜನು
ಸುಪ್ರಸಿದ್ಧನು ಕುರುವಂಶ ಭೂಷಣನು ಕ
ಲಾ ಪ್ರವೀಣನು ಗುಣೋತ್ತಮನು

ಭರತಚಕ್ರೇಶನ ಸೇನಾಗ್ರಗಣ್ಯನು
ಪರಬಲ ಕಾಲಭೈರವನು
ಅರಿಗಳನಟ್ಟಿ ವೀರಾಗ್ರಣಿಯೆಂದೆಂಬ
ಬಿರುದನಾಂತವನಿವನೀಗ

ಮೇಘಮುಖರ ಕಾಲಮುಖರನೋಡಿಸಿದ ಮ
ಹಾ ಘನವಿಕ್ರಾಂತನಿವನು
ಮೇಘೇಶ್ವರನೀತ ಮಾಲೆಯ ಸೂಡೆಂದು
ಶ್ಲಾಘಿಸಿ ನಿಂದಳಾ ನೀರೆ

ಬಗಸೆಗಣ್ಣೆಳಗಿನ ಮಾಲೆವೆರಸಿ ನಸು
ನಗೆವೆಳಗಿನ ಮಾಲೆಗೂಡಿ
ತೆಗೆದು ಪೂಮಾಲೆಯನಿಟ್ಟಳಾತನಿಗೆ ಹೆ
ಣ್ಣುಗಳುಬ್ಬಿ ಜಯಜಯವೆನಲು

**ರತ್ನಾಕರವರ್ಣಿ–ಭರತೇಶವೈಭವ**

(೧೫೫೭)

## ೧೨೧. ಜಲ-ಕನ್ನಿಕಾ ನಾಟ್ಯ

ದಳದುಳನಾಗಲೆ ಕೂಡೆಂಟುಮುಂದಿ ಕೋ
ಮಲೆಯರು ರಾಯನ ಮುಂದೆ
ಜಲಕನ್ನಿಕಾನಾಟ್ಯಕೆಂದು ನಿಂದರು ಮಝು
ಚಲುವನದೇನ ಬಣ್ಣಿಪೆನು

ಅರ್ಧಚಂದ್ರಾಕಾರದುಪಸಮುದ್ರಂಬೋಲು
ಸ್ಪರ್ಧನಿ ನಿಂದುದೊಯೆನಿಸಿ
ಅರ್ಧಚಂದ್ರಾಕೃತಿಯಾಗಿ ಎಣ್ಬರು ಪಟ್ಟ
ವರ್ಧನನಿದಿರೊಳೊಪ್ಪಿದರು

ಆಕಾಶ ಪೆರೆಯಾದ ಮೇಲೆ ನೀರಿಂಪಾಗ
ದೇಕೆ ತಾನುಪ್ಪಾದುದೆಂದು
ಆ ಕಡಲನು ತೊಲಗಿಸಿ ಪೆರೆಯೊಲು ನಿಂದ
ನಾಕಗಂಗೆಯೊಲಿರ್ದರಾಗ

ಲಾವಣ್ಯ ಜಲ, ತೋಳು ತೆರೆ, ನಾಭಿ ಸುಳಿ, ಚಂಚ
ಲಾವಲೋಕನವೆಳೆಮೀನು
ಆ ವನಿತೆಯರಿದ್ದರಿವರು ಭಾವಿಸೆ ಜಲ
ದೇವಿಯರೆನೆ ತಕ್ಕರೆನಿಸಿ

ಅರೆವೆರೆಯಾಕಾರ ತಪ್ಪದೆ`ನಡೆದರು
ನರಪತಿಗಿದಿರಾಗಿ ನಲಿದು
ತಿರುಗಿದರಾಗಲೆ ಡೊಂಕನಲಿದು ಗಂಗೆ
ಹರಿವಂತೆ ನೇರದೊಳಿತ್ತು

ರಂಗದೊಳೆಲ್ಲರು ಮೊತ್ತವಾಗಿರೆ ನಿಂದು
ಹೆಂಗಳು ಮತ್ತೆಂಟುದೆಸೆಗೆ
ದಾಂಗುಡಿಯಿಟ್ಟು ಸಾಲ್ವಿಡಿದಾಗ ಶೃಂಗಾರ
ಗಂಗೆ ಪರಿವವೊಲಾಡಿದರು

ತೆರೆಯನಟ್ಟುವ ತೆರೆಯಂತೊಬ್ಬರೊಬ್ಬರ
ಬೆರಸಿ ಬೆನ್ನಟ್ಟೆ ಹರಿವರು
ಮುರಿದೆಂಟು ಮಂದಿಯು ಸುಳಿಯಂತೆ ಭುಗಭುಗ
ನಿರದೆ ಸುತ್ತುವರೇನನೆಂಬೆ

ಡೊಂಕಾಗಿ ಹರಿವರೊಮ್ಮೊಮ್ಮೆಯು ನೇರದೊ
ಳಾಂಕೆಗೊಂಡೊಮ್ಮೆ ಹರಿವರು
ಭೋಂಕನುಚ್ಚಳಿಸುವ ಸುಳಿಹೊಳೆಯೊಯೆಂದು
ಬಿಂಕವ ತೋರ್ಪರಾಟದೊಳು

ಮಿರುಮಿರನಾದ ಮೈಹೊಳಹಿಂದ ತೆರೆಗಟ್ಟಿ
ನಿರಿದೇಳ್ವ ಹೊಂಗಾಸೆಯಿಂದ
ಕುರುಕುರಮೆಟ್ಟೆ ರಂಗದೊಳು ತಂಪಿನ ಬಯ
ಲ್ದೊರೆ ಹೊಳೆವಂತೆ ಹೊಳೆವರು

ಲುಳಿತ ಕಿಂಕಿಣಿನಾದ ಕಂಕಣಧ್ವನಿ ಕೈಯ
ಬಳೆಗಳುಲುಹು ಕಳಬಳಿಸೆ
ಗಳಗಳ ಗುಳುಗುಳು ನಲಿವುತೆ ಹರಿವ ತಣ್
ಬೊಳೆಯಂತೆ ಹರಿದರೇನೆಂಬೆ

ನೆಲ ನನೆಯದ ಗಂಗೆ ಕಣ್ಣು ಮಿಾನಿನ ಗಂಗೆ
ಹಲವು ಬಣ್ಣದ ರಸಗಂಗೆ

ಮೊಲೆ ಮುಡಿವೆತ್ತ ಗಂಗೆಗಳಿಲ್ಲಿ ಬಂಮುವೆಂ
ದೊಲೆದೊಲೆದರಸ ನೋಡಿದನು

ಅರಸನ ಲಾವಣ್ಯ ಜಲಧಿಯೊಳಾ ಸತಿ
ಯರ ದಿಟ್ಟಿ ಮೀಂಗಳಾಡುವುವು
ತರುಣಿಯರಂಗ ಕಾಂತಿಯ ಹೊಳೆಗಳೊಳು ಭೂ
ವರನ ಕಣ್ಮಚ್ಚವಾಡುವುವು

ಭರತೇಶನಿದಿರಾಗಿ ನಡೆವರು ಶೃಂಗಾರ
ಶರಧಿ ಮೇಲ್ಗವಿದುದೆಂದೆನಿಸಿ
ದೊರೆಯ ಗಂಭೀರವ ಕಂಡಬ್ಧಿ ನಾಣ್ಚಿ ಹಿಂ
ತಿರುಗುವಂತಿತ್ತ ಜಾರುವರು

ತಾವರೆಯಂದದ ಹಸ್ತಪಾದಗಳಿಂದ
ತಾವರೆ ಮೊಗ ಮೊಲೆಯಿಂದ
ತಾವರೆಗೊಳನೆದ್ದು ನರ್ತಿಸುವಂದದೊ
ಳಾ ವಧುಗಳು ನಟಿಸಿದರು

ನೆಯ್ದಿಲಂದದ ಕಂಪು ನೆಯ್ದಿಲುವಣ್ಣ ಕ
ನ್ನೆಯ್ದಿಲುಗಣ್ಣ ವೆಣ್ಣುಗಳು
ನೆಯ್ದಿಲುಗೊಳನೆದ್ದು ಕುಣಿವಂತೆ ಕೆಲಬರು
ಮೆಯ್ದೋರಿ ನೃತ್ಯವಾಡಿದರು

ತಕದಿಕ ಕಿಣಿತೋಂಗ ತದಿಕಟದಿಮಿದಿಮಿ
ದಿಕು ದಿಕು ದಿಮಿಕೆಂಬ ಧ್ವನಿಗೆ
ಚಕ ಚಕನತ್ತಿತ್ತ ಹಸ್ತಪಾದಗಳ ಸೂ
ಚಕದೋರಿದರು ಸೊಬಗಾಗಿ

ಕಾಂಚನ ರತ್ನದಾಭರಣದ ಕಿರಣ ಪ
ಳಂಚೆ ನಿಜಾಂಗಕಾಂತಿಯೊಳು
ಮಿಂಚಿನ ಲತೆಯಂತೆ ಮಿಣಿಮಿಣಿಸುತ ಕಂಚು
ಮಿಂಚಾಗಿ ಹೊಳೆವರತ್ತಿತ್ತ

ಮೊಗರಸದಿಂದ ಕಣ್ಬೆಳಗಿನ ಹೊಳೆಯಿಂದ
ನಗೆಯದೊಂದಮೃತಧಾರೆಯೊಳು
ಮೊಗೆಮೊಗೆದಭಿಷೇಕ ಮಾಡಿದರೊಲ್ದು ರಾ
ಯಗೆ ಜಲದೇವಿಯರಂತೆ

ಬಳಿಕಿಷ್ಟು ಮೈ ಬೆವರಿದುದಾಗ ನೋಳ್ಪಾಗ
ಜಲದಿಂದ ಪೊರಮಟ್ಟು ಬಂದ
ಜಲಕನ್ನೆಯರೆ ತಪ್ಪರಿವರೆಂಬ ತೆರದೊಳು
ಜಲಜಗಂಧಿನಿಯರೊಪ್ಪಿದರು

ನಯ ನುಂಪು ಮಿಂಗೆ ಜಲಕನ್ನಿಕಾನಾಟ್ಯಾತಿ
ಶಯವನಾ ಷಟ್ಖಂಡಪತಿಯು
ನಯನದಿದಿರೊಳಾಡುತಿದ್ದು ಸತಿಯರಾಗ
ಬಯಲಾದರಮರಿಯರಂತೆ

**ರತ್ನಾಕರವರ್ಣಿ–ಭರತೇಶವೈಭವ**
(೧೫೫೭)

## ೧೨೨. ಆತ್ಮ-ಕರ್ಮ-ಮುಕ್ತಿ

ಮುಕ್ತರಾದವರೆಲ್ಲ ಮುನ್ನ ಸಂಸಾರ ಸಂ
ಯುಕ್ತರಾಗಿರ್ದು ಕರ್ಮಗಳ
ಯುಕ್ತಿಯರಿದು ಶಕ್ತಿಗೆಡಿಸಿ ದೇಹವ ಬಿಟ್ಟು
ಮುಕ್ತಿಗೈದಿದರೆಲೆ ಭವ್ಯಾ

ಸುಖಕುಬ್ಬಿ ದುಃಖಕೆ ಮರುಗಿದರೊಡನೆ ಮುಂ
ದಖಿಳ ಕರ್ಮಗಳು ಕಟ್ಟುವುವು
ಸುಖದುಃಖಕತ್ತಿತ್ತಲಾಗದೆ ಧ್ಯಾನಾಭಿ
ಮುಖದೊಳಿದ್ದರೆ ಬಂಧವಿಲ್ಲ

ಕರ್ಮವ ಸುಡುವ ಸಾಮರ್ಥ್ಯವುಂಟಾತ್ಮಗೆ
ಕರ್ಮದೊಳಡಗಿರುತಿಹನು
ಕರ್ಮವರಿದು ತಾನು ತನ್ನ ನೋಡಿದರೆಂಟು
ಕರ್ಮವ ಸುಟ್ಟುರುಹುವನು

ಧ್ಯಾನದಿಂದಲ್ಲದೆ ಕರ್ಮ ನಿರ್ಜರಿಸದಾ
ಧ್ಯಾನ ತಾನೆಂತಃಟೆಂದೆನಲು
ನಾನಾ ಚಿಂತೆಯಳಿದು ಮನವಾತ್ಮಸಂ
ಧಾನದೊಳಿರಲದೆ ಧ್ಯಾನ

ಈ ಕಾಲವಾ ಕಾಲವೆನಬೇಡ ನಿಶ್ಚಯ
ದೇಕ ಧರ್ಮವ ಮಾಡಿದವರು
ಲೌಕಾಂತಿಕ ದಕ್ಷಿಣೇಂದ್ರರೆನಿಸಿ ಪುನ
ರೇಕ ಜನ್ಮಕೆ ಮುಕ್ತರಹರು

ನೋಡಿ ನೋಡದ ನುಡಿದಾಡಿ ನುಡಿಯದೆಡೆ
ಯಾಡಿ ನಡೆಯದ ಮಹಾತ್ಮಾ
ಕೂಡೆ ಕೂಡೆನಗೆ ಚಿತ್ಕಳೆಯ ಬೆಳಕನುಂಟು
ಮಾಡು ನಿರಂಜನ ಸಿದ್ಧಾ

ನಿಂದಲ್ಲಿ ನಡೆದಲ್ಲಿ ಕುಳಿತಲ್ಲಿ ಸರ್ವತ್ರ
ಕುಂದದೆ ಕುಶಲ ಲೀಲೆಯೊಳು
ಸಂಧಿಸುವಭವ ನನ್ನೆದೆಯೊಳಗಿರು ಚಿದಾ
ನಂದ ಚಿದಂಬರ ಪುರುಷಾ

ತಿಳಿವೆಳಗಿನ ತೀರ್ಥರೂಪವೆ ತಿಂಗಳ
ಬೆಳಗಿನೊಳಾದ ಪುತ್ತಳಿಯೆ
ತಳುವಾಡದೆನಗೆ ಸನ್ಮತಿದೋರು ಸುಜ್ಞಾನ
ನಿಳಯ ನಿರಂಜನ ಸಿದ್ಧಾ

ಹಿಂದು ಮುಂದೆಡಬಲ ಹೊರಗೊಳಗಡಿ ಕಡೆ
ಯೆಂದೆನ್ನದಮೃತ ಸ್ವರೂಪಾ
ಎಂದೆಂದು ಎನ್ನ ಚಿತ್ತದೊಳಿರು ಸಚ್ಚಿದಾ
ನಂದ ಚಿದಂಬರ ಪುರುಷಾ

ಉಸುರೆಂಬ ಕರಗಸದಿಂದ ದೇಹಾತ್ಮರ
ಬೆಸುಗೆಯಂ ಬಿಡಿಸಿ ನೋಡಿದರೆ
ಮಸುಳದೆ ತೋರ್ಪ ಮಹಾತ್ಮ ನೀನೆನಗೊಳ್ಪ
ನೆಸಗು ನಿರಂಜನ ಸಿದ್ಧಾ

ತೆರೆಯ ಮೇಲ್ ತೆರೆಗಳ ತೋರುವಿಂಗಡಲಂತೆ
ಸಿರಿಯ ಮೇಲ್ ಸಿರಿಯ ಸೂಚಿಸುವ

ಚರಿತಾರ್ಥ ನನ್ನಂತರಂಗದೊಳಿರು ಮನೋ
ಹರನೆ ಚಿದಂಬರ ಪುರುಷಾ

ಕಾಣದರ್ಥವ ಕಾಣಿಸುವ ಪರಂಜ್ಯೋತಿ ನೀ
ವಾಣದೆ ನನ್ನೆದೆಯೆಂಬ
ಕೋಣೆಯೊಳಿರು ಹೋದೆಯಾದರೆ ನಿನಗೆ ನಿ
ನ್ನಾಣೆ ಚಿದಂಬರ ಪುರುಷಾ

ರತ್ನಾಕರವರ್ಣಿ
(೧೫೫೭)

# ೧೨೩. ರಾಜನೀತಿ

ರಾಜನೀತಿಯನೊಲ್ದು ಕಲ್ಯಾಣಪಟ್ಟಣದ
ರಾಜನೆನಿಸುವ ಬಿಜ್ಜಳಂಗಾಗಲಾ ಬಸವ
ರಾಜನಳಿಯಂ ಚೆನ್ನಬಸವರಾಜಂ ಪೇಳ್ದನಧಿಕಕರವಿನಯದಿಂದೆ

ತರಣಿಮಂಡಲವನಭ್ರಂ ಸುದರ್ಶಣವನಂ
ದಿರದೆ ಕಾಳಿಕೆ ನಿರ್ಮಳೋದಕವನಾ ಪಾಂಸೆ
ಪರಮಾತ್ಮನಂ ಜೀವಭಾವಮಿವು ಮುಸುಕಿಕೊಂಡಿರ್ಪಂತೆ ಜಗದೊಳುಳ್ಳ
ಅರಸುಗಳ ವೇಷ್ಟಿಸಿರ್ಪುದು ಕ್ಷಾತ್ರತಾಮಸಂ
ನಿರುತವದ ಪರಿಹರಿಸುವೊಡೆ ರಾಜನೀತಿ ಬೇ
ಕೊರವೆನಾಲಿಪುದೆಂದು ಚೆನ್ನಬಸವೇಶ್ವರಂ ಬಿಜ್ಜಳಗಿಂತೆಂದನು

ಪರಕಿಪೊಡೆ ಸಂತತಂ ವಕ್ರಚರಿತಂ ನುಡಿವೊ
ಡೆರಡುನಾಲಗೆ ಧನವನೇ ಕಾಯ್ದುಕೊಂಡಿರ್ಪ
ಪರಮಲೋಭಂ ಭೋಗದೊಡನೆ ಕೂಡಿದ ಬಾಳ್ವೆ ಪರರಸುವನುಗಿವ ಕೋಪಂ
ಉರಗಂಗಮುರಸಿಂಗಮನ್ಯೋನ್ಯವಾದೊಡಂ
ನಿರುತದಿಂ ಕಣ್ಣೆ ಕಿವಿ ಕಿವಿಯೆ ಕಣ್ಣೆಂದೆಂಬ
ಪರಿಯಾಯಭೇದಮಿದು ನಾಡಾಡಿಗಿದು ನೀತಿಯನುಚಿತಂ ಕೇಳೆಂದನು

ಕೊಂಡೆಯರ ನುಡಿಗಳೇ ಕರ್ಣಕ್ಕೆ ಭೂಷಣಂ
ಕೊಂಡೆಯ ರ ಮಾರ್ಗವೆರ್ದೆದಾವರೆಗೆ ಭಾಸ್ಕರಂ
ಕೊಂಡೆಯರೆ ತನಗೆ ಕಡುಹಿತವರೆಂದೆರಡಿಲ್ಲದೇ ನಂಬುವವನೀಶನ

ಮಂಡಲಕೆ ಕೇಡಪ್ಪುದಾ ನೃಪನ ಸಿರಿ ನಭೋ
ಮಂಡಲದ ಕುಸುಮದೊಲ್ ಬಯಲಪ್ಪುದದರಿನಿಂ
ಮಂಡಲೇಶ್ವರರಾವಗಂ ಕೊಂಡೆಯಂಗೇಳ್ವುದನುಚಿತಂ ಕೇಳೆಂದನು

ಕುಳಿರ್ವ ಮಂಜಿನ ಪನಿಗಳಿಂ ಕಮಲಸಂಕುಲಂ
ಜಲಬಿಂದುವಿಂದೆ ಮಧು ಲೋಭದಿಂ ಗುಣಗಣಂ
ಗಳಹತನದಿಂದೆ ಗೌರವಮನಾಚಾರಪ್ರವರ್ತನದೆ ಕುಲದ ಪೆಂಪು
ಪುಳಿಯಿಂದೆ ಪಾಲ್ ಬಹುಕೋಪದೆ ತಪಃಫಲಮು
ಮಲೆದು ಬೀಸುವ ಗಾಳಿಯಿಂ ಮೇಘದೊಡ್ಡವಣೆ
ಸಲೆ ಕಿಡುವವೊಲ್ ಕಿಡುವುದರಸಾಳ್ವಧರೆ ಪಿಸುಣರಿಂ ನೃಪತಿ
ಕೇಳೆಂದನು

ಖಳರ ಮಾಯಾವಿಗಳ ದುರ್ವಿನೀತರ ಮದಾ
ಕುಳರ ದುರ್ಜನರ ಡಂಭರ ನೀತಿಮಾರ್ಗವಿ
ಹಲ್ವರ ನಿಷ್ಠುರವಚನಕೋವಿದರ ದುರ್ಬೋಧಕರ ದುರಾಚಾರಪರರ
ಕುಲವಿಹೀನರ ಕುಮಂತ್ರಾನ್ವಿತರ ಶ್ರುತಿಪಥವ
ನುಳಿದು ನುಡಿವರ ಕಂಡೊಡೆನಿರಾಕರಿಸುವುದು
ನೆಲನನಾಳ್ವರಸುಮಕ್ಕಳ ನೀತಿ ಬಿಜ್ಜಳನೃಪಾಲ ನೀಂ ಕೇಳೆಂದನು

ಪರರ್ಗೆ ತಾಂ ಮಾಡಿದುಪಕಾರಂಗಳಂ ತನಗೆ
ಪರರಿಂದಲೊದಗಿದಪಕಾರಂಗಳಂ ನಾಡೆ
ಪರರ ಕೂಡಾಡಿ ಕಿಡಿಸುವುದುತ್ತಮರಮತಕೆ ಸಲ್ಲದು
ಮಹೀತಳದೊಳು
ಪರರ್ಗೆ ತಾಂ ಮಾಡಿದಪಕಾರಂಗಳಂ ತನಗೆ
ಪರರಿಂದಲೊದಗಿದುಪಕಾರಂಗಳಂ ನಾಡೆ
ಪರರ ಕೂಡಾಡಿ ತೋರುವುದುತ್ತಮರ ಮತಕೆ ಸಲ್ವದೈ ಕೇಳೆಂದನು

ಧರ್ಮಮಂ ಬಿಡದೆ ಮಾಳ್ಪುದು ತನ್ನ ರಾಜ್ಯದೊಳ್
ಧರ್ಮಿಷ್ಠರುಳ್ಳೊಡವರಂ ಪಾಲಿಪುದು ವಿಮಲ
ಧರ್ಮಕ್ಕೆಡರ್ ಬಂದೊಡಾಲಸ್ಯಮಂ ಮಾಡದೊಡನೊಡನೆ
ಪರಿಹರಿಪುದು
ಧರ್ಮಹೀನರನುದಾಸಿಪುದು ನಿರುಪಮಜಾತಿ
ಧರ್ಮಂಗಳಂ ತಪ್ಪದಂತೆ ನಡೆಸುವುದು ನೃಪ
ಧರ್ಮದ ರಹಸ್ಯಮಿದು ತಪ್ಪದವನೀಪಾಲತಿಲಕ ನೀಂ ಕೇಳೆಂದನು

ಧನದಾಸೆಗಾಗಿ ದೇಶದ ಪ್ರಜೆಯ ನೋಯಿಸದೆ
ಧನಮುಳ್ಳವರ ಬದುಕುಗಳ ಕಂಡು ಕರುಬಿಸದೆ
ಧನವನೊದವಿಸುವುದೊಕ್ಕಲಿಗೈದುಪಾಲರಸಗೊಂದುಪಾಲೀ
ಕ್ರಮದೊಳು
ಧನವಧಿಕವಹುದೀ ಪರಿಯೊಳಾರ್ಜಿಸಿದೊಡೆ ತದ್
ಧನವನೊಲವಿಂ ಸುಪಾತ್ರದೆ ವೆಚ್ಚಿಸಲ್ ಪುಣ್ಯ
ಧನಪಾಲನಪ್ಪನಾ ನೃಪತಿ ಪರಲೋಕದೊಳಗರಸ ನೀಂ ಕೇಳೆಂದನು

ಎನಿತೆನಿತು ಸನ್ಮಾರ್ಗದೊಳ್ ಬಿಡದೆ ನಡೆದೊಡೆಯು
ಮೆನಿತೆನಿತು ಸತ್ಕೀರ್ತಿವಡೆದೊಡೆಯುಮವನಿಯೊಳ
ಗೆನಿತೆನಿತು ಸದ್ಧರ್ಮಸಂಜನಿತವಸ್ತುವಂ ಪಿಡಿದೊಡೆಯುಮೆರ್ದೆ
ನೆಲದೊಳು
ಎನಿತೆನಿತು ಬಲ್ಲವಿಕೆ ಮೊಳೆತೊಡಂ ಬಾಹುಬಲ
ಮೆನಿತೆನಿತು ತನಗೆ ಪಿರಿದಾಗಿರ್ದೊಡಂ ಶತ್ರು
ಜನವ ಸಾಧಿಸುವಲ್ಲಿ ಕರುಣಮಂ ಮಾಳ್ಪುದನುಚಿತವರಸ
ಕೇಳೆಂದನು

ಸಾಮವೇ ವೇದಂಗಳೊಳಗಧಿಕವಾದಂತೆ
ಸಾಮವೇ ಮಿಗಿಲಾಯ್ತುಪಾಯಂಗಳಲ್ಲಿ ತತ್
ಸಾಮವೇ ಭೂಭುಜರ ಬಾಳ್ಕೆಗನುಸರಿ ಮಿಕ್ಕಿನ ಮೂರುಪಾಯಂಗಳು

ಸಾಮಾನ್ಯಮುವರೊಳಗೆ ದಂಡಮೊಂದೆಂಬುದದು
ಸಾಮಾನ್ಯದೊಳಗೆ ಸಾಮಾನ್ಯವಿದನರಿಯದರು
ಸಾಮಾನ್ಯರೆನಿಪರವನೀಪತಿಗಳೊಳ್ ನೃಪಲಲಾಮ ನೀಂ ಕೇಳೆಂದನು

ಅರಿನೃಪರ ಸಂಧಾನಸಮಯಂಗಳಲ್ಲಿ ಕರಿ
ತುರಗಂಗಳೇರಾಟದಲ್ಲಿ ಸಂಗರದಲ್ಲಿ
ತರುಣಿಯರ ಕೇಳಮೇಳಂಗಳೆಡೆಯಲ್ಲಿ ಮಜ್ಜನದಲ್ಲಿ ಮಲಗುವಲ್ಲಿ
ಪರಿಪರಿಯ ಪರಿಕರದ ಭೋಜ್ಯಭೋಜನದಲ್ಲಿ
ವರವಿವಾಹಾದ್ಯನೇಕೋತ್ಸವಗಳಲ್ಲಿ ಭೂ
ವರನಿಕರಕೆಚ್ಚರಿಕೆ ಪಿರಿದಾಗಬೇಕು ಬಿಜ್ಜಳನೃಪತಿ ಕೇಳೆಂದನು

ವ್ಯಸನಸಪ್ತಕದ ನೆತ್ತಿಗಳನಿರದೊಡೆಬಡಿದು
ಪುಸಿಯನವನೀತಳದೊಳಡಿಯೂರದಂತೆ ತೊಲ
ಗಿಸಿ ಜಾತಿಸಂಕರಂಗಳ ಮೂಗನರಿದು ಬೆಳುಗವತೆಯಂ ಸುಟ್ಟು ತೂರಿ
ಪೆಸರನಡಗಿಸಿ ಕಳವುಪಾದರಂಗಳ ಹಿಂಸೆ
ಯುಸುವ ತೊಲಗಿಸಿ ಧರಾತಳವನಾಜ್ಞೆಯೊಳೆ ಪಾ
ಲಿಸುವ ರಾಜಂಗಿಹಪರಂಗಳೊಳಗನುಮಾನವಿಲ್ಲರಸ ಕೇಳೆಂದನು

ಹಿರಿಯರೊಳ್ ದೇವರೊಳ್ ಗುರುಗಳೊಳ್ ಘನಭಯಂ
ಪರಮಪುಣ್ಯಕ್ಷೇತ್ರತೀರ್ಥಂಗಳೊಳ್ ಭಕ್ತಿ
ಶರಣಾಗತರೊಳಗವಗುಣಗಳಂ ನೋಡದೀಡೇರಿಸುವ ದೃಢಮೊಪ್ಪುವ
ಪರಿಜನಂಗಳೊಳಮಳದಯೆ ಸಾರಸಜ್ಜನರ
ನೆರವಿಯೊಳಗಾದರಣೆ ಹಿತವರೊಳ್ ವಿಶ್ವಾಸ
ಮಿರಬೇಕು ನೀತಿಕೋವಿದನೆನಿಸುವರಸಂಗೆ ನೃಪತಿ ನೀಂ ಕೇಳೆಂದನು

ಆವಾಗಲುಂ ಸಚ್ಚರಿತ್ರವೊಂದೇ ಮಾತು
ತಾವರಿದು ಮಾಳ್ಪ ಬೀಯ್ಯಂ ಸಕಲಪರಿಜನವ
ನೋವಿ ಕಾಲೋಚಿತವನರಿದು ಭೋಗಿಪ ಭೋಗಮುಪರಾಧಕುಳ್ಳ ಕೋಪಂ
ಲಾವಕರ ನುಡಿಗೇಳದದ ಕೇಳ್ದೊಡಂ ಬಲ್ಲ
ಕೋವಿದರ ಮುಖದೆ ನಿರ್ಧರಿಸಿ ಮಾಳ್ಪುದು ಸನ್ಮ
ಹೀವಲ್ಲಭರ ಮಾರ್ಗವಿದ ಪಿಡಿವುದುತ್ತಮೋತ್ತಮವರಸ ಕೇಳೆಂದನು

ಮಳೆಯಿಂದೆ ಸಕಲಸಸ್ಯಾದಿಗಳ್ ಕುಸುಮುಪರಿ
ಮಳದಿಂದೆ ತುಂಬಿಗಳ್ ಜ್ಞಾನದಿಂ ತಪಮಿಂದು
ಕಳೆಯಿಂ ಚಕೋರಿಗಳ್ ಧರ್ಮದಿಂದರಸಾಳ್ವಭೂಮಂಡಲಂ ಭಾವಿಸೆ
ಕೆಳೆಯರಿಂ ಬೇಟಂ ಸುಪುತ್ರರಿಂದಿಹಪರಂ
ಗಳ ಸುಖಂ ಪೆರ್ಚುವಂದದೆ ಪೆರ್ಚುವುದು ಮಂತ್ರಿ
ತಿಲಕನಿಂದೈಶ್ವರ್ಯಮುವಸಿಪಂಗಿದು ರಾಜನೀತಿ ನೀಂ ಕೇಳೆಂದನು

ಪರೆದುದಾಕ್ಷಣ ಮನದ ಸಂದೇಹಮೆಂದೆಂಬ
ಪರಮತಿಮಿರಂ ವಿವೇಕಮೆನಿಪ್ಪ ಪೊಂಬಿಸಿಲ್
ನಿರುತದಿಂ ಪಸರಿಸಿತು ವದನವೆಂದೆಂಬ ನೀರೇಜಮಿರದಲರ್ದುದೊಡನೆ
ವರಬಸವರಾಜನ ಮನಂ ತನ್ನ ಮನವೆಂಬ
ಗುರುಚಕ್ರವಾಕಮೆರಡೊಂದಾದುವಂದು ಭೂ
ವರನ ಸುಜ್ಞಾನಸೂರ್ಯೋದಯಂ ತಲೆದೋರಲೇನೆಂಬೆನಚ್ಚರಿಯನು

**ವಿರೂಪಾಕ್ಷ ಪಂಡಿತ–ಚೆನ್ನಬಸವಪುರಾಣ**

(೧೫೮೪)

## ೧೨೪. ನೀತಿ

ಒಂದುವಂ ಬಯಸದಿರು ಬಂದುದತಿಗಳೆಯದಿರು
ಕುಂದುನಿಂದ್ಯಕ್ಕಳುಕು ಸಂದು ಸುಖ ದುಃಖ ಬರೆ
ಕಂದರ್ಪಹರನಾಜ್ಞೆಯೆಂದು ನಿಶ್ಚೈಸೆಡರು ಬಂದೊಡೆದೆಗುಂದದಿಹುದು
ಎಂದೆಂದು ಶಿವನಡಿಯ ನೋಡಿ ಜಾನಿಸು ಭಿಕ್ಷ
ವೆಂದೊಡಿಲ್ಲೆನ್ನದಿರು ಮುಂದೆ ವಂದಿಸಿ ಬಳಿಕ
ಹಿಂದೆ ಬಿಟ್ಟಾಡದಿರು ತಂದೆ ಗುರುದೈವಗಳ ಕಂದಿಸದಿರೆಂದನಾರ್ಯಂ

ಬೇಡದಿರು ನರರ ಕೊಂಡಾಡದಿರು ಹಿಂಸೆಯಂ
ಮಾಡದಿರು ಪಾಪಕೆಡೆಯಾಡದಿರು ಕುಚಿತರೊಡ
ನಾಡದಿರು ಕಾಮದೊಳು ನೋಡದಿರು ಪರಸತಿಯ ಕೂಡದಿರು ಕನಸಿನಲ್ಲಿ
ಕೇಡೆಣಿಸದಿರು ಪೆಜಿರಿಗಾಡದಿರು ನಿಷ್ಠುರವ
ಪೀಡಿಸದಿರನ್ಯರಂ ರೂಢಿಸದಿರಪಜಯದಿ
ಕೂಡಿಸದಿರನ್ಯಾಯದೊಡವೆಯಂ ಸದ್ಗತಿಯು ನಿನಗೆಂದನಾಚಾರ್ಯನು

ಬಿಡು ಪುಸಿಯ ಕಳವು ಪಾರದ್ವಾರವೆಂಬಿವಂ
ಕೊಡು ಯಥಾಶಕ್ತಿಯಿಂ ಸತ್ಪಾತ್ರಗಳನಱಿತು
ನಡೆ ಸದಾಚಾರಯುತರೊಪ್ಪುವಂದದೊಳು ಗುರುಹಿರಿಯರೊಳು ಹದಿರು ಬೇಡ
ಹಿಡಿ ವ್ರತಾಚಾರದೊಳು ಭಿನ್ನದೋಱದೆ ಸುಜನ
ರೊಡನಾಡು ಭೂತದಯವಿರಲಿ ವಿಶ್ವಾಸದಿಂ
ತೊಡು ಭಸಿತರುದ್ರಾಕ್ಷೆಗಳನಿದೇ ಮೋಕ್ಷಪದವೆಂದನಾದೇಶಿಕೇಂದ್ರ

**ಸಿದ್ಧನಂಜೇಶ–ಗುರುರಾಜ ಚರಿತ್ರೆ**

(ಸು. ೧೬೫೦)

# ೧೨೫. ಪಾಶುಪತಾಸ್ತ್ರಪ್ರದಾನ

ಹರಹರ ದೇವದೇವನಿವನಲ್ತೆ ಶಿವಂ ಭುವನೈಕವಲ್ಲಭಂ
ಗುರು ಸಕಲಾಮರರ್ಗೆ ಶಬರಾಕೃತಿಯಿಂ ಮದನುಗ್ರಹಾರ್ಥಮೀ
ಪರಿ ನಡೆತಂದನಲ್ತೆ ತಪದುಬ್ಬೆಗದುದ್ಭ್ರಮೆ ನೆತ್ತಿವತ್ತೆ ಸೈ
ತಿರದೆ ಮರುಳ್ತನಂದಳೆದಿದಿರ್ಚಿದೆನೆನ್ನವೊಲಜ್ಞನಾವನೋ
ಎಂದು ಬಗೆದಾಗಳ್

ಪಡಿದೆರೆದಂತೆ ಪಾರಿತೆದೆ ಶೌಪ್ಪನೆ ಜುಮ್ಮನೆ ಮೈನವಿರ್ಪೊದ
ಳ್ದಿಡಿಕಿರಿದತ್ತು ಘರ್ಮಜಲಮುಣ್ಮಿದುದಂಗದೊಳಾಗ್ರಹಗ್ರಹಂ
ಕಡೆದೊಲಗಿತ್ತು ಕೌತುಕರಸಂ ಬಗೆಯುರ್ವಿದುದುತ್ಸವಂ ಮಡ
ಲ್ತಡರ್ದುದು ಭೀತಿ ಬೇರ್ವರಿದುದೇಳ್ಗೆಯನಾಳ್ದುದು ರಾಗಸಂಪದಂ

ಬೀತುದು ಬಿಂಕಮೋಡಿದುದು ಮೂಢತೆ ಮೂಡಿದುದಶ್ರುಕಣ್ಗಳೊ
ಳ್ಕಾತುದು ಭೀತಿವಲ್ಲರಿ ಮನೋಗದಮುಂ ತರಿಸಂದು ನಿಂದುದು
ದ್ಭೂತಮಹಾದ್ಭುತಂ ಮನದೊಳಂಗದೊಳಾಯ್ತು ವಿವರ್ಣವೃತ್ತಿ ಚಿಂ
ತಾತುರನಾಗಿ ಬೆಳ್ಪಡಸಿ ಬೇವಸಮುಂ ತಳೆದಂ ಧನಂಜಯಂ

ಉಳಿವೆಳಗು ಸಂಜೆ ನಸು ಮು
ಬ್ಳುರ್ದಂಬರದಂತೆ ತಿಳಿವು ರಾಗಂ ನೆಗಳ್ದ
ಮ್ಮಳಮನೊಳಕೊಂಡ ಬಗೆಯಿಂ
ತಳವೆಳಗಾಗುತ್ತೆ ಪಾರ್ಥನಂದಿಂತೆಂದಂ

ತಿಳಿದೆನೆ ಶಂಭುವೆಂದು ಬಹುಬಾಣದಿನೆಚ್ಚೊಡೆ ತಾಗದಂದದೇಂ
ತಿಳಿದೆನೆ ದಿವ್ಯಮಾರ್ಗಣದಿನಾನಿಸೆ ತಳ್ವದೆ ನುಂಗಿದಂದದೇಂ
ತಿಳಿದೆನೆ ಕೈಯ ಚಾಪಮನಡಾಯುಧಮಂ ಸೆಳೆದೀಳ್ದುಕೊಂಡೊಡಂ
ತಿಳಿವೊಳಸಾರ್ದುದಕ್ಕಟ ಪುರಾಕೃತಕರ್ಮದ ಪೆರ್ಮೆಯೆಂತುಟೋ

ಆವನ ಮಾಯೆಯಿಂ ತ್ರಿಜಗಮಾದುದು ಸೂರ್ಯಸುಧಾಕರರ್ಪೊದ
ಳ್ದಾವನ ತೇಜದಿಂ ಬೆಳಗುವರ್ಭುವನೋತ್ಕರರಕ್ಷೆ ಶಿಕ್ಷೆ ಮೇ
ಣಾವನಧೀನಮಾವನೊಳೆ ತೋರ್ಪುದು ವಿಶ್ವಮಿದೆಂದುಮಾಮಹಾ
ದೇವನೊಳಾಹವಂಗಡೆನಗದ್ಭುತಮೇನನೆಂದಪೆಂ

ಶಿವಶಿವ ಸಲ್ವುದೇ ಸಮರಮಿಂತೆನಗದ್ವಯನೊಳ್ಮಹೇಶನೊ
ಳ್ಭವಹರನೊಳ್ಮಹಾಮಹಿಮನೊಳ್ ಜ್ವಲನಾಕ್ಷನೊಳಕ್ಷಯಾಂಗನೊ
ಳ್ಪ್ರವಿದಿತನಾದಬಿಂದುಕಳೆಯಿಂ ಮಿಗೆ ಮೀರಿದನೊಳ್ ಶ್ರುತಿಸ್ಮೃತಿ
ಸ್ತವನಕತೀತನೊಳ್ಜಗದಜೀವರನಾಡಿಪ ಸೂತ್ರಧಾರನೊಳ್

ಅಂಗುಟದಿಂ ರಸಾತಳಕೆ ಮೆಟ್ಟಿದನಾ ದಶಕಂಠನಂ ಮಹಾ
ಸಂಗರದೊಳ್ವಿಭಂಗಿಸಿದನಂತಸುರರ್ಕಳನಾರ್ದು ಸುಟ್ಟನಾ
ರ್ಪಿಂ ಗಗನಸ್ಥಿತಾಸುರಪುರತ್ರಯಮಂ ಸದೆದಂ ಕೃತಾಂತನಂ
ತುಂಗಪರಾಕ್ರಮಂ ಗಿರಿಶನೀತನೊಳೆಂತುಟೊ ಗೆಲ್ಲಲುಜ್ಜುಗಂ

ಹರಹರ ತಾರ್ಕ್ಷ್ಯನೆತ್ತ ಫಣಿಯೆತ್ತ ಮಹಾವನವಹ್ನಿಯೆತ್ತ ಕಾ
ಳ್ಮರಮುಮದೆತ್ತ ವಜ್ರಧರನೆತ್ತ ಧರಾಧರಮೆತ್ತ ಮತ್ತಕೇ
ಸರಿಪತಿಯೆತ್ತ ವನ್ಯಗಜವೆತ್ತ ಪೊಣರ್ಕೆಗವೆಂತು ನಿಲ್ವುವಾ
ಪರಿ ಜಗದೇಕದೇವಶಿವನೆತ್ತ ಧನಂಜಯನೆತ್ತ ಧಾತ್ರಿಯೊಳ್

ಎಂದಿಂತು ಚಿಂತಿಸುತ ಪಲ
ವಂದದೆ ಬಗೆನೊಂದು ಹಂಮುದಂಬೋಗಿರೆ ಪಾ
ರ್ಥಂ ದಯೆಯಿಂದವನಿದ್ದೆಡೆ
ಗಿಂದುಧರಂ ತಳರ್ದು ತಣ್ಪುವೀರಿದನಾಗಳ್

ಪೊಗೆಯಳಿದಗ್ನಿಯಂತೆ ಮುಗಿಲೋಡಿದ ಭಾಸ್ಕರನಂತೆ ಮಾಯೆಮೈ
ದೆಗೆದ ನಿಜಾತ್ಮನಂತಿರೊರೆಯುರ್ಚಿದ ಕೂರಸಿಯಂತೆ ಕಾಂತಿ ಕೈ

ಮಿಗೆ ಶಬರಾಂಗಮಂ ತೊರೆದು ಪೂರ್ವನಿಜಾಕೃತಿವೆತ್ತಲಂಪಿನಿಂ
ಸೊಗಯಿಸುತಿರ್ದನಾಗವುಶಿರಂ ಪೊಗಳುತ್ತಿರೆ ಚಂದ್ರಶೇಖರಂ

ರವಿಕೋಟಿದ್ಯೋತಮೆತ್ತಂ ತೊಳಗೆಶಶಿಕಳಾಸ್ವರ್ಧುನೀಜೂಟನಂಗೋ
ದ್ಭವಭಸ್ಮಾಲಿಪ್ತನಕ್ಷಿತ್ರಯಕಲಿತನನಂತಾಹಿಭೂಷಂ ಮಹಾಕೃ
ತ್ತಿವಸಿನಂ ಪಂಚವಕ್ತ್ರಂ ದಶಭುಜನಸಿತಗ್ರೀವನೊಲ್ದೊಪ್ಪಿದಂ ಟಂ
ಕವರಾಭೀತಿತ್ರಿಶೂಲಾದ್ಯುಪಲಸಿತಕರಂ ದಿವ್ಯರೂಪಂ ಮಹೇಶಂ

ಎಳನೇಸರ ಬಿಂಬದ ಕೆಂ
ಬೆಳಗಂ ತೆಗಳ್ದಲರ್ದ ದಾಸಣದ ಪೊಸಕೆಂಪಂ
ಪಳಿಕೈದು ವಾಮದೇವೊ
ಜ್ವಳವದನಂ ಸೊಗಯಿಸಿರ್ದುದಗಜಾಧವನಾ

ಅಲರ್ದ ಪೊಸಕರ್ಣಿಕಾರದ
ಸುಲಲಿತನವಕನಕಕಂಜಕಿಂಜಲ್ಕದ ಮಂ
ಜುಲರುಚಿಯಂ ಪಳಿದೆಸೆದುದು
ವಿಲಸಿತತತ್ಪುರುಷವಕ್ತ್ರಮಹಿಕುಂಡಲನಾ

ಎಳಮುತ್ತಿನ ಶಂಖದ ಬೆ
ಳ್ಪೆಳಗಂ ಮುಕ್ಕುಳಿಸಿದಂತೆ ತೊಳತೊಳಗುವ ಸೈ
ಪಳವಡೆ ನಯನತ್ರಯಮಂ
ಜುಳಮಾಶಾನಾಸ್ಯಮೊಪ್ಪಿದುದು ಶಶಿಧರನಾ

ಬೆಮರ್ಪ ಕಳೇವರಂ ಸುರಿವ ಸಂತಸಗಂಬನಿ ತಳ್ತ ಕಂಪನಂ
ನಿಮಿರ್ದಸೆವಂಗರೋಮತತಿ ಕಂಗೊಳಿಸುತ್ತಿರೆ ತಳ್ವದೆಳ್ದು ಸಂ

ಭ್ರಮದ ಪೊದಳ್ಕೆಯಿಂ ಮುದದ ಪೆರ್ಚುಗೆ ಸಂದಣಿಗೊಳ್ವಿನಂ ಪದಾ
ಬ್ಜಮನವುದೊರ್ಪ್ಪಿಮೌಳಿ ಮಣಿದಂಮುಹಿಯುಂತನುಸೋಂಕೆ
ಪಾಂಡವಂ

ಅಂತೆಱಗಿ ಸರುಜಂ ಸಂಜೀವನವುಂ ಸವಿದಂತೆ ಬಡವಂ ಕಡವರಂ ಕಂಡಂತೆ ಕಡಲೊಳಾಳ್ವಂ ತೆಪ್ಪಮನಪ್ಪಿದಂತೆ ಜಾತ್ಯಂಧಂ ಕಣ್ಬಡೆದಂತೆ ನಿರತಿಶಯ ಸಂಮುದಮನೊಳಗೊಂಡು ಕರಾರವಿಂದಂಗಳಂ ಪಣಿಯೊಳ ಮುರ್ಚಿನಿಂದು

ಪದತಳದೊಳ್ತೊಡಂಕಿಪರಿದಾಡಿಪೂಳ್ದಿಸೆವಂಗದೇಶದೊಳ್
ಪದೆದುರದಲ್ಲಿಸೈವರಿದು ಮಂಜುಳಕಂಠಮನಪ್ಪಿ ವಕ್ತ್ರಪ
ದ್ಮದೊಳೆಡೆಗೊಂಡಸುತ್ತಿಸುಳಿದಾಡಿಬಳಲ್ದುಪರಿತ್ಸುಧಾಂಶುಗಳ್
ಪುದಿದ ತದೀಯವುೌಳಿಯೊಳೆ ವಿಶ್ರಮಿಸಿರ್ದುದು ದೃಷ್ಟಿ ಪಾರ್ಥನ

ಅಂತು ಸಡಗರದಿನವನಭವನನಭೀಕ್ಷಿಸಿ

ಜಯ ಜಗದೀಶ ದೇವ ಜಯ ಚಿನ್ಮಯರೂಪ ಜಯಾದ್ರಿಜಾಕುಚ
ದ್ವಯಹರಿಚಂದನಾಂಕ ಜಯನಿರ್ಜಿತಪಾಶ ಜಯಾಗಮಾಂತಸಂ
ಚಯನುತಪಾದಪದ್ಮ ಜಯಭೂಧರಧರ್ಮ ಜಯಾಶ್ರಯಾಶಸಂ
ಶ್ರಯನಿಜಫಾಲನೇತ್ರಜಯನಿರ್ಜರಪೂಜ್ಯಜಯಾಂತಕಾಂತಕಾ

ಭಕ್ತಕುಟುಂಬಿ ಭಕ್ತಜನವತ್ಸಲ ಭಕ್ತಭವಾದ್ರಿಶಂಬ ಸ
ದ್ಭಕ್ತಸಹಾಯ ಭಕ್ತಸುಖಸಿಂಧುಸುಧಾಕರ ಭಕ್ತಪಾಲನೋ
ದ್ಯುಕ್ತ ನಿರೀಹ ಭಕ್ತಪರಮೋಕ್ಷದ ಭಕ್ತಮನಸ್ಸರೋಜಸಂ
ಸಕ್ತ ಮರಾಳ ಭಕ್ತಪರಿಷದ್ವಿಪದರ್ಣವ ಕುಂಭಸಂಭವ

ಚಲಚಿತ್ತಂ ಜಾಡ್ಯವೃತ್ತಂಚಪಲಮತಿಮದಾಂಧಂಮಹಾ
ಮೋಹಮೂರ್ಛಾ
ವಿಲನಾಶಾಪಾಶಬದ್ಧಂ ಕುಟಿಲನಧಮನಾದೆನ್ನೊಳಾರ್ಪೈವುದಾನಿ
ರ್ಮ್ಮಲಭಕ್ತಿಜ್ಞಾನಭಾಸ್ವದ್ಗುಣಗಣವನುಮನಾನಾಥ ಸರ್ವಾಪರಾಧಂ
ಗಳನೀಗಳ್ತಾಳ್ವದೆಂತುಂ ಮರೆ ಪೊರೆ ಪುರುಳಿಲ್ಲಿಲ್ಲಮೆನ್ನೊಳ್ಮುರಾರೀ

ಅರಿದರಿದುಂಮತಿಭ್ರಮಿತನಾದ ಮದಾಂಧಕನಾನೆ ಕಂಡುಕಂ
ಡೆರಗದ ಕೂಳನಾನೆ ಕುರಿವಾನಿಸನಾನೆ ಕುಬುದ್ಧಿಯಾನೆ ಕ
ಟ್ಟರಿಕೆಯ ದುಷ್ಟನಾನೆ ಮರೆ ದೇವ ಮದೀಯಶತಾಪರಾಧಮಂ
ಮೆರೆ ಕರುಣಾಬ್ಧಿ ನಿನ್ನ ಸುಗುಣೋನ್ನತಿಯಿಂ ಭುವನೈಕವಲ್ಲಭ

ಸಕಲಾಧಿಷ್ಠಾತೃನೀನೆ ಪ್ರಕೃತಿಮಹದಹಂಕಾರಮುಂನೀನೆ ನಿತ್ಯಂ
ಸಕಲಾತ್ಮಂಸೂರ್ಯವೈಶ್ವಾನರರಧಿಗತವಿಶ್ವಾತ್ಮನುಂ ತೈಜಸಂ ಪ್ರಾ
ಜ್ಞಕನಾದಂನೀನೆ ದೇಹೇಂದ್ರಿಯಮುಕರಣಂಭೂತಮುಂನೀನೆತತ್ಸಾ
ಕ್ಷಿಕಸಾಕ್ಷಾದ್ಬ್ರಹ್ಮಮುಂಸರ್ವಮುಮೆಲೆಪೆರರಾನೀನೆವಿಶ್ವಾಧಿನಾಥಾ

ಎಂದು ಪರಮೋತ್ಸವದಿಂ ಸನ್ನುತಿಗೆಯ್ದು ಮತ್ತಮಿರದೆ

ಅತಿಕೋಪಾತುರನಾಗಿಮೂಳ್ಪತಪಮಂನೀಗಾಡಿ ಮುಂ ಬಿಳ್ದ ಸ
ಕ್ಷತಕಾಯೋಗ್ರವರಾಹಮಂ ಸವೆದದಂ ಕೊಳ್ವಾಸೆಯಿಂದಜ್ಞತಾ
ಸ್ಥಿತಿವೆತ್ತೆಚ್ಚು ಶರಂಗಳಿಂ ಪೊಣರ್ದೆನಿನ್ನಿಂ ದ್ರೋಹಿಯಾವಂ ಜಗ
ತ್ಪತಿ ನಿನ್ನಿಂ ವರನಾವನೀಭುವನದೊಳ್ದೇವಂ ಕ್ಷಮಾಸಂಯುತಂ

ಎಂದು ದೈನ್ಯಂದೋರಿ ಭಯಭಕ್ತಿಭಾವದಿಂ ಮುಗುಳ್ದು ದಂಡ
ಪ್ರಣಾಮ ಮಂಗೈದು ಪದಯುಗಮಂ ತೆಗೆದುಬಿಗಿದಪ್ಪಿನೆತ್ತಿಯೊಳ್ಪೊತ್ತು

ಮಣಿವಮರಲ್ದುನೋಡುವಕಡಂಗುವಪೊಂಗುವಸುತ್ತಿಬರ್ಪ್ಪ ೭೦
ಗಣಗುಣಿದಾರ್ದುಸಾರ್ದುನಲವೆಚ್ಚುವತೂಗುವಬೀಗುವಳ್ತಿ ಸಂ
ದಣಿಗೊಳಿಪಾಡುವಾಡುವಕರಂನುತಿಗೆಯ್ದು ಪದಾಬ್ಜಪೂಜೆಯಂ
ತಣಿಯದೆ ಮಾಳ್ಪಸಂಭ್ರಮಮುದೇಂಬಗೆಗೊಂಡುದೊಪಾಂಡು
ಪುತ್ರನಾ

ಪಾರ್ಥನ ಸಮುನ್ನತಭಕ್ತಿ ಭಾವಕ್ಕೆ ಭವಾನೀರಮಣಂ ಮೆಚ್ಚಿ ಮಸಂದಂದು

ಪದೆದಮರ್ದಪ್ಪಿದಂ ಗುಹಗಜಾಸ್ಯರನಪ್ಪುವ ತೋಳ್ಗಳಿಂದ ಮಾ
ಣದೆ ನರನಂ ಮೃಡಂ ಪರಸಿದಂ ನಿಗಮಂಗಳಪೆತ್ತ ಬಾಯ್ಗಳಿಂ
ಮುದಮಲರ್ವಂತೆ ಮೈದಡವಿದಂ ವರವೀವ ಕರಾಬ್ಜದಿಂದೆ ನೋ
ಡಿದನಖಿಳಾಘಮಂ ತೆಮರ್ವ ಕಣ್ಗಳಿನಾನರನೇಂ ಕೃತಾರ್ಥನೋ

ಅಂತು ಮನ್ನಿಸಿಮತ್ತಮಿರದೆ

ನಿನ್ನಕಟೂಕ್ತಿಮಂತ್ರಮೆನಗೆಚ್ಚಶರಾವಳಿ ಪುಷ್ಪಸಂಚಯಂ
ನಿನ್ನಸರೋಷವೀಕ್ಷಣದದೀಧಿತಿದೀಪಿಕೆಯರ್ಚನೋಚಿತಂ
ನಿನ್ನಧನುರ್ಲತಾಹತಿಯಬಾಸುಳಿಪೂಗಳಮಾಲೆಯೊಚ್ಚತಂ
ನಿನ್ನಯಮುಷ್ಟಿಯುದ್ಧಮದುಮತ್ಪದಪೂಜೆನಿಜಂಧನಂಜಯಾ !

ಎಂದು ಕೃಪಾಪಾಂಗದಿನಭೀಕ್ಷಿಸಿ

ಇದುನಿನ್ನವರಶರಾಸನ
ಮಿದುಶರಮಿದುಖಡ್ಗಮಿಂತಿದಂಪಿಡಿಯೆಂದಾ
ಮದನರಿಪುವಿತ್ತುಮುಂಕೊಂ
ಡುದನಾವುದುನಿನ್ನಭೀಷ್ಟಮದನೊರೆಯೆಂದಂ

ಆಗಳಿಜೇಷ್ಟಲಾಭಮುದಿತಾಂತಃಕರಣಂಪುರಂದರನಂದನಂಪುರಹರನ ಪೊರೆಯೊಳೆಸೆವಕರುಣಾರಸ ಭರಿತೆಯುಂ ಗಿರಿತನುಜೆಯುಂ ಕಂಡು ಸಾಷ್ಟಾಂಗವೆರಗಿ ನಿಂದುಕರಾಂಜಲಿವೆರಸಿ

ಮಾತೆ ಮಹೀಧ್ರರಾಜಾತೆ ಜಗದಂಬಿಕೆ ಜನ್ಮವಿದೂರೆ ಶಂಭುಸಂ
ಪ್ರೀತೆ ಸದಾಪುನೀತೆ ಶಶಲಕ್ಷ್ಮಕಳಾಧರಸರ್ವಲೋಕವಿ
ಖ್ಯಾತೆ ಕೃಪಾಸಮೇತೆ ಕರಖಡ್ಗನಿಕೃತ್ತಮದಾಂಧದೈತ್ಯಸಂ
ಘಾತೆ ಭೃತಾಂಗಜಾತೆ ಶರಣಾಗಮರಾರ್ಚಿತಪಾದಪಂಕಜೇ

ಕಮಲಭವಾಂಡಕೋಟಿಗಳನೇಕನಿಜಾಂಶದೆ ಪೆತ್ತು ಮೇಣವಂ
ಪ್ರಮುದದಿನೋವಿ ಚಿದ್ಗಗನರೂಪದಿನಾಂತರಬಾಹ್ಯದೊಳ್ಸಮಾ
ಕ್ರಮಿಸಿ ಮುಸುಂಕಿ ಸಂಹರಿಸುತಂತ್ಯದೊಳದ್ವಯಮಾದಬೊಮ್ಮದೊ
ಳ್ಸಮರಸವಾಳ್ವನಿನ್ನಿರವನಾರ್ಸಲೆ ಪೇಳ್ವರೊ! ಸರ್ವಮಂಗಳೆ

ಎಂದು ಸಂದಣಿಪಾನಂದದಿಂ ಸನ್ನುತಿಗೆಯ್ವ ಕರ್ಣರಿಪುವನ ಪರ್ಣಿ ಪೂರ್ಣ ಕೃಪೆಯಿಂದಭೀಕ್ಷಿಸಿ

ಬಾರೆಲೆ ಪದ್ಮಲೋಚನನಮೈದುನ ಪಾಂಡವ ನಿನ್ನಭಕ್ತಿವಿ
ಸ್ತಾರದಿಮಿಂದಿತ್ತು ದೆನ್ನಬಗೆಗುತ್ಸವಮಂ ಪಿಡಿ ಕೊಟ್ಟಪೆಂಭವ
ದ್ವೈರಿನಿಕಾಯಮಂಕ್ಷಣದೊಳರ್ದಿಪಬಾಣಮನೆಂದು ಸದ್ಗುಣಾ
ಧಾರೆ ಧರಾಧರೇಂದ್ರಸುತೆಯಿತ್ತಳುದಾರತರಾಂಜನಾಸ್ತ್ರಮಂ

ಮೊದಲೊಳಿದೊಂದುಪತ್ತುತೊಡುವಲ್ಲಿಶತಂ ಬಿಡುವಲ್ಲಿ ಸಾಸಿರಂ
ಪದಮಿಡುವಲ್ಲಿವೈರಿಶರಸಂಹತಿಯಂತರಿವಲ್ಲಿ ಲಕ್ಷಮು
ಗ್ಗದಗತಿಯಲ್ಲಿ ಕೋಟಿ ಸಮರಾಂಗಣದೊಳ್ಗಣನಾವಿಹೀನಮ
ಪ್ಪುದು ರಿಪುವೃಂದಮಂತವಿಸಿನಿನ್ನೆಡೆಗೆಯ್ದುಗುಮಿಾಮಹಾಶರಂ

ಎಂದೊರೆದುಕರುಣಿಸುತೆ ಗಿರಿ
ನಂದನೆ ಭುವನೈಕಮಾತೆಜಯಮಂಪಡೆ ನೀಂ
ಕಂದ! ಸಮರಾಂಗಣದೊಳೆನು
ತಂದಮರರ್ಪೊಗಳೆಪರಸಿದಳ್ಗಾಂಡಿವಿಯಂ

ಅಂಬರದೊಳ್ಜಯಧ್ವನಿವಿಜೃಂಭಿಸಿದತ್ತುಪೊದಳ್ದುಘೇವುಘೇ
ಯೆಂಬರವಂ ಸುರಪ್ರಕರದೊಳ್ನೆಗಳ್ದತ್ತುಮಹಾನಕಸ್ವನಾ
ಡಂಬರಮೊಪ್ಪೆಸೂಸಿದುದು ಪೂಮಳೆಶಂಕರನಂಘ್ರಿಯೊಳ್ಸಹ
ಸಾಂಬ್ರಕಸೂನುಗಾದುದು ಮನೋರಥಸಿದ್ಧಿಭವಂಮಹೋತ್ಸವಂ

**ಷಡಕ್ಷರದೇವ–ಶಬರಶಂಕರವಿಲಾಸ**
(೧೬೫೫)

# ೧೨೬. ಕುಮಾರೋದಯ

ನೆರೆಯೊಳ್ಕೈದಿಲೆ ನಾಣ್ಚಿಪಂತೆ ನಗೆ ತಾರಾನಾರಿಯರ್ನೋಡೆ ಬಂ
ದಿರುಳೆನ್ನಂ ಕರದಿಂದೆ ಮುಟ್ಟಿದನಿವಂ ದೋಷಾಕರಂ ವಕ್ತ್ರಮಂ
ಭರದಿಂ ಮುಚ್ಚಿದೆನೆಂದಿನಂಗಳಿನಿನಾದವ್ಯಾಜದಿಂ ಪೇಳೆ ತಾ
ವರೆ ಪಾದಾಗ್ರದೆ ನೂಂಕಿದಂ ಮುಳಿದವಂ ವಾರಾಶಿಯೊಳ್ಚಂದ್ರನಂ

ದಿನಮಣಿ ನೀನೆಲೆ ! ವನಿತಾ
ಜನಮಣಿಯಾನೆಂದು ಚುಂಬಿಸಿದ ಪೂರ್ವದಿಶಾಂ
ಗನೆಯ ಮುಖಕುಂಕುಮಂ ನೆ
ಟ್ಟನೆ ತಳ್ತಂತೆಸೆದುದರುಣರುಚಿ ದಿನಕರನಾ

ಭುವನಜಭವಾಂಡಭವನಕೆ
ಸವೆದುರುರವಿಬಿಂಬಮೆಂಬ ಬಾಂದಳದೊಳಪೊ
ಕ್ಕವಿರಳತದಂಡದ ಬಹಿ
ಸ್ಸುವರ್ಣರುಚಿ ಪರ್ಬಿದಂತೆ ಕೆಂಬಿಸಿಲೆಸೆಗುಂ

ಪರೆದಿರೆ ಸುಣ್ಗುರುಳ್ನೊಸಲೊಳಾಳ್ದಿರೆ ಕಣ್ಗಡೆ ಕೆಂಪನಿಟ್ಟ ಕ
ತ್ತುರಿಯ ಲಲಾಮಮುಚ್ಚಳಿಯದಂತಿರದೊಪ್ಪಿರೆ ಕೇಶಬಂಧಮೊಂ
ದಿರೆ ಶಿಥಿಲತ್ವಮಂ ನಸು ಬೆಮರ್ಮುಖಚಂದ್ರನೊಳುಣ್ಮೆ ಸುಯ್ಯೆಲ
ರ್ತರಹರವಾಂತು ಸೂಸೆ ಸತಿಯುಪ್ಪವಡಂಬಡೆದೊಪ್ಪಿ ತೋರಿದಳ್

ಮೊಗಸಸಿ ತಿಳಿಜೊನ್ನಮನೊ
ಲ್ದುಗುವಂತಿರೆ ತುಳ್ಕಿರದನರುಚಿ ರಮಣಂಗಾ
ಮೃಗಲೋಚನೆ ಪೇಳ್ದಳ್ಮುದ
ಮೊಗೆತರೆ ತಾಂ ಕಂಡ ಕನಸನೆಲ್ಲಮನಾಗಳ್

ಕೇಳ್ದದನೊಂದಿನಿಸುಳಿಯದೆ
ತಾಳ್ದತಿಮುದಮಂ ತನೂರುಹಂ ಗುಡಿಗಟ್ಟಿ
ತ್ತೆಳ್ದಿರೆ ತನುವೊಳ್ತರುಣಿಗೆ
ಪೇಳ್ದಂ ತತ್ಫಳಮನರಸನಿಂತೆಂದಾಗಳ್

ಕರಿಯಿಂ ಭದ್ರಯುತಂ ಸರೋಜದೆ ಗುಣಾಧಾರಂ ವೃಷಾಧೀಶನಿಂ
ಹರಭಕ್ತಂ ಕಮಳಾಪ್ತನಿಂ ಪ್ರಬಳತೇಜೋಯುಕ್ತನಾದರ್ಶದಿಂ
ಪರಸಂಪ್ರೀತಿದನಬ್ಧಿಯಿಂದತಿಗಭೀರಂ ಮೇರುವಿಂ ಭೂಮಿಭೃ
ದ್ವರನಬ್ಜಾಹಿತನಿಂ ಕಳಾಸಿಧಿ ಕುಮಾರಂ ಪುಟ್ಟುವಂ ನಿಶ್ಚಯಂ

ಎಂದ ಮನೋರಮಣನ ಮಾತಂ ಮನದೆಗೊಂಡು ಮನೋರಥಂ ಕೈಸಾರ್ದಂತೆ ನಂಬಿ ನಲವೇರಿ ಮೀರಿ ಪರಮಹರುಷಮನೊಳಕೊಂಡಿರುತ್ತಮಿರೆಯಿರೆ.

ಹೃದಯದೊಳೊದವಿದ ಶಿವಮಂ
ತ್ರದ ಕಳೆ ಸುಮುಹೂರ್ತದೊಳ್ಶಿವಪ್ರೇರಣೆಯಿಂ
ಸುದತಿಯ ಪುಣ್ಯೋದರದೊ
ಳ್ಪದಪಿಂದಿಳಿತಂದು ನೆಲಸೆ ಬೆಳೆದುದ, ಗರ್ಭಂ

ವಳಿಗಳ್ಪಿಂಗಿದುವಾಸ್ಯಮಿಂದುರುಚಿಯಂ ಕೈಕೊಂಡುದಾನಾಭಿ ಗು
ಣ್ಪಿಳಿದೊಪ್ಪಿತ್ತು ವಿಲಾಸಯಾನಮದು ಮಾಂದ್ಯಂಬೆತ್ತು ದಂಭೋಜಕು
ಟ್ಮಳವಕ್ಷೋರುಹದಗ್ರಮಾಳ್ಪುದೆಳಗರ್ಪಂ ನುಣ್ಪಿದಿರ್ದೇಹದೋ
ಳ್ಕೆಳೆಗೊಂಡತ್ತು ತನೂದರಂ ಬೆಳೆದುದಾತನ್ವಂಗಿಗಾಗರ್ಭದೋಳ್

ತರುಣಮರಾಳಮಂ ತಳೆದು ಕೊರ್ಬಿದ ಕೋಶಮನಾಂತ ಪದ್ಮಿನೀ
ತರುಣಿ ತರಂಗದಿಂ ನೆಗೆವ ಸೀರ್ಪನಿ ತಳ್ತಿರೆ ಭೃಂಗಮಾಲೆ ಮೇ

## ೧೨೭. ಕುಲವಧು

ಪತಿಭಕ್ತಿಯೊಂದು ಶ್ರೀಪತಿಭಕ್ತಿಯೊಂದಿದ
ರತಿಶಯಕಿನ್ನೆಣೆಯಿಲ್ಲ
ಮತಭೇದವುಂಟು ಮಾಧವಭಕ್ತಿಗಿದಕಾ
ಮತಭೇದವು ಮಗುಳಿಲ್ಲ

ಆದರದೊಡನಂತರಂಗದೊಳಾಣ್ಮನ
ಪಾದವ ಭಜಿಪ ಭಾವೆಯರ
ಪಾದಧೂಳಿಗಳಿಂದೆ ಪಾವನವಹುದೀ
ವೇದಿನಿಯೆನೆ ಮಿಕ್ಕುದೇನು

ಪತಿತರ ಪಾವನವೆನಿಸುವ ಬಲ್ಮೆಯೊ
ಳತಿಶಯವಡೆದ ತೀರ್ಥಗಳು
ಸತಿಯರ ಪಾದಸಂಸ್ಪರ್ಶದೆ ತಮ್ಮದು
ಷ್ಕೃತವ ಕಳೆಯಲೆಳಸುವುದು

ತಡೆಯದೆಲ್ಲೆಡೆಯೊಳಃ ತಾನು ಬೀಸುವೆನೀ
ಯೆಡರನೇಳಿಪೆನೆಂದೆಲರು
ಸಡಗರದಿಂದೆ ಸಾಧ್ವಿಯರಡಿಸೋಂಕಿದ
ಪುಡಿಯ ಮುಡಿಯೊಳಾನುವುದು

ತೇಜಿಗಳೆಡಹದೆ ತೇರುಡಿಯದೆ ತ
ನ್ನೋಜೆಯ ಎಡುಗದೆ ಭಾಸ್ಕರನು
ಈ ಜಾತಿ ಸಾಧ್ವಿಯರೆಸಕದೇಳಿಗೆಯಿಂದೆ
ತೇಜವಡೆದು ತಿರುಗುವನು

ಮಳೆಗರೆವುದು ಬೆಳೆಪೆರ್ಚುವುದಿಳೆ ತಳ
ಕಿಳಿದು ಪೋಗದೆ ತಡೆದಿಹುದು
ಪಳಿವಿಲ್ಲದ ಪತಿವ್ರತೆಯರ ನಡತೆಯ
ಬಳದೊಳೆಂಬರು ಬಲ್ಲವರು

ಪರಮಪತಿವ್ರತೆಯರ ಪಾದದರ್ಶನ
ದೊರೆಕೊಂಡುದೆ ಪುಣ್ಯದಿವಸ
ಪರಿದಿವರನು ಬಲವರೆ ಭೂಪ್ರದಕ್ಷಿಣ
ದಿರವನಿನ್ನೇವಣ್ಣಿಪೆನು

ತನ್ನಿನಿಯನ ತಾಯ ತಂದೆಯ ಕುಲಗಳ
ನುನ್ನತಿಗೆಯ್ದೊಪ್ಪುವಡೆದು
ಮನ್ನಣೆವೆತ್ತ ಸಾಧ್ವಿಯರ ಮಹಿಮೆಗಳ
ಸನ್ನುತಿಸುವೊಡೆನ್ನಳವೆ

ಇವರಿದ್ದೆಡೆ ಪುಣ್ಯತೀರ್ಥ ಪುಣ್ಯಕ್ಷೇತ್ರ
ವಿವರಿದ್ದ ಮನೆ ದೇವಭವನ
ಇವರೆ ಪ್ರತ್ಯಕ್ಷದೇವತೆಯರು ದಿಟವೆಂದು
ವಿವರಿಸುವರು ವೇದವಿದರು

ಪರಮಪತಿವ್ರತೆಯಿದ್ದ ಬಳಿಯೊಳಾ
ಸಿರಿರಾಣಿ ಸೇರಿ ಬಂದಿಹಳು
ಸರಸತಿ ಸಾವಿತ್ರಿಗಾಯತ್ರಿಯರು ಮಾ
ಪರಿಸರದೊಳು ಬಳಸಿಹರು

ಪಲವು ಸುಕೃತಮಿಂತು ಪರಿಣತಿವೆತ್ತುದೊ
ಕುಲದೇಳ್ಗೆ ಗುಂಪು ಕೂಡಿದುದೊ
ಸಲೆಪರಿಶುದ್ಧಿ ಸಾಕಾರವಾದುದೊಯೆನೆ
ಕುಲವಧು ಕುರುಹುಕೊಂಡಿಹಳು

ಪತಿಭಕ್ತಿರಸಮಿಂತುಬಲಿದುದೊಪರಿಶುದ್ಧ
ಮತಿಗಿಂತುಮೈದೊರಕಿದುದೊ
ವ್ರತದೇಳ್ಗೆಯಿಂತು ಬಿತ್ತರವಡೆದುದೊಯೆನೆ
ಸತಿಯರು ಜಸವಡೆದಿಹರು

**ಹೊನ್ನಮ್ಮ–ಹದಿಬದೆಯ ಧರ್ಮ**
(೧೬೮೦)

# ೧೨೮. ಸೀತಾ ಪರಿತ್ಯಾಗ

ಅರಸ ಕೇಳ್ಸೌಮಿತ್ರಿ ವೈದೇಹಿಯಂ ಕೊಂಡು
ತೆರಳುವ ರಥಾಗ್ರದೊಳ್ಚಲಿಸುವ ಪತಾಕೆ ರಘು
ವರನಂಗನೆಯನುಳಿದನೆಂದಡಿಗಡಿಗೆ ತಲೆಗೊಡಹುವಂತಿರಲ್ಕೆ
ಪರಮ ದಾರುಣಮಿದೆಂದರಿದಯೋಧ್ಯಾ ಪುರದ
ನೆರವಿ ನೆರವಿಯು ಜನಂ ಗುಜುಗುಜಿಸಿ ಶೋಕದಿಂ
ಕರಗಿ ಕಾತರಿಸುತಿರೆ ಪರಿಸಿದಂ ಕಾಳ್ಬಟ್ಟೆಗೊಂಡನಿಲ ವೇಗದಿಂದ

ಧುರದೊಳಾಂತರನಿರಿದು ಮೆರೆಯಲೇರುವ ರಥಂ
ತರಳೆಯಂ ಕಾನನಕೆ ಕಳುಹಲಡರ್ದಂತಾಯ್ತು
ಧರೆಯೊಳಾರ್ತರನೆಯ್ದೆ ರಕ್ಷಿಸುವ ಬುದ್ಧಿ ಕೋಮಲೆಯ ಕೊಲೆಗೆಲಸ
ಕಾಯ್ತು
ಕರುಣಮಿಲ್ಲದೆ ಹೊರೆವ ಹರಣಮಂ ಸುಡಲಿ ನಿ
ಷ್ಠುರದೊಳೀ ಕೃತ್ಯಕೆಂತೆಣಿಸಿ ರಾಘವೇ
ಶ್ವರನಿಂತಿದಕ್ಕೆ ಬೆಸಸಿದನೊ ತನಗೆನುತ ಸೌಮಿತ್ರಿ ಮರುಗುತ ನಡೆದನು

ಬಳ್ಳೊರಲ್ದುದು ಮುಂದೆ ಮಾರ್ಗಮಂ ದಾಂಟಿದುವು
ಕುಳ್ಳಿರ್ದ ಮೃಗಮೆದ್ದು ಬಲದ ಕಣ್ಣದಿರೆ ಕಂ
ಡಳ್ಳೆದೆಯುಲವನಿಸುತೆ ನೋಡು ಲಕ್ಷ್ಮಣ ದುರ್ನಿಮಿತ್ತಂಗಳಂ ಪಥದೊಳು
ಡಿಳ್ಳಮಾದಪುದೇವೆನೆನ್ನ ಮನಮಿದಕೆ ಮುಂ
ದೊಳ್ಳಿತಾಗಲಿ ರಾಮನಾಯುಷ್ಯಕೈಶ್ವರ್ಯ
ಕುಳ್ಳ ಭುಜ ಬಲಕಸುರರಂ ಗೆಲ್ದ ರಾಘವಂ ನಮ್ಮಂ ಸಲಹಲೆಂದಳು

ಆನ್ನೆಗಂ ಜಾನಕಿಯ ಕಣ್ಗೆ ತೋರಿತು ಮುಂದೆ
ಸನ್ನುತ ರಘೂದ್ವಹನ ಕೀರ್ತಿಯೆನೆ ಮೂವಟ್ಟೆ
ಯನ್ನಡೆದು ಮುಕ್ಕಣ್ಣನಂ ಸಾರ್ದು ಮೂಜಗದ ಪಾಪಮಂ ಮುರಿದು ಮುಕ್ಕಿ
ಮುನ್ನೀರುಮಂ ತಾಗಿ ಮೂದೇವರೊಳಗಾದ
ಮುನ್ನುಳ್ಳ ಮೂವತ್ತು ಮೂರ್ಕೋಟಿ ವಿಬುಧರಂ
ತನ್ನೊಳ್ಮುಳುಗಿದರಣಕಿಪ ಪೆಂಪೊದವಿ ಪರಿವ ಬೆಳ್ಪೊವನಲ್ದಿವಿಜ ನದಿಯು

ತರತರದ ಕಲ್ಲೋಲ ಮಾಲೆಗಳ ಲೀಲೆಗಳ
ಬೆರೆಬೆರೆವ ರಾಜ ಹಂಸಾಳಿಗಳ ಕೇಳಿಗಳ
ಪರಿಪರಿಯ ನೀರ್ವೂಗಳಾಕರದ ಶೀಕರದ ನೊರೆಯ ಬೊಬ್ಬುಳಿಯ ಸುಳಿಯ
ಮೊರೆಮೊರೆದು ಘೂರ್ಮಿಸುವ ಪರಿವುಗಳ ಮುರಿವುಗಳ
ತಿರುತಿರುಗಿ ಸುಳಿವ ಜಲ ಜಂತುಗಳ ಗೊಂತುಗಳ
ನೆರೆನೆರೆದು ಮುನಿ ಜನಂ ಸೇವಿಸುವ ಭಾವಿಸುವ ಗಂಗೆಗವನಿಜೆ ಬಂದಳು

ತೆಂಗೆಳಗವುಂಗು ಪನಸ ದ್ರಾಕ್ಷೆ ಜಂಬು ನಾ
ರಂಗ ಜಂಬೀರ ಖರ್ಜೂರ ಕಿತ್ತಳೆ ಮಾತು
ಳಂಗ ತಿಂತ್ರಿಣಿ ಚೂತ ನೆಲ್ಲಿ ಬಿಲ್ವ ಕಪಿತ್ಥಮೆಂಬ ನಾನಾ ತರುಗಳು
ತೊಂಗುವ ಫಲಾವಳಿಯ ಭಾರಂಗಳಾವಗಂ
ಪಿಂಗವಿವನಿಳೆಗಿಳುಪಬೇಕೆಂದು ಬಾಗಿ ಬಂ
ದಂಗಮೆನೆ ಕಣ್ಗೆಸೆದುವಿಕ್ಕೆಲದೊಳಾ ಜಾಹ್ನವಿಯ ತಡಿಯ ಬನಬನದೊಳು

ಇಳಿದು ರಥದಿಂದ ಮಂದಾಕಿನಿಗೆ ಪೊಡಮಟ್ಟು
ಬಳಿಕ ನಾವಿಕರೊಡನೆ ನಾವದೊಳ್ಗಂಗೆಯಂ
ಕಳೆದು ನಿರ್ಮಲ ತೀರ್ಥದೊಳ್ಮಿಂದು ಸೌಮಿತ್ರಿ ಮತ್ತೆ ಭೂಜಾತೆಸಹಿತ

ಒಳಗೊಳಗೆ ಮರುಗಿ ಬಿಸುಸುಯ್ದು ಚಿಂತಿಸುತ ಮುಂ
ದಳೆದುಗ್ರ ಮೃಗ ಪಕ್ಷಿ ಗುಣದಿಂದ ಘೂರ್ಣಿಸುವ
ಹಳುವಮಂ ಪೊಕ್ಕನಡಿಯಿಡುವೊಡಸದಳಮೆಂಬ ಕರ್ಕಶದಮಾರ್ಗದಿಂದ

ಇರುಳಂತೆ ಪಗಲಂತೆ ಮಖದಂತೆ ದಿವಿಯಂತೆ
ವರ ಪಯೋದಧಿಯಂತೆ ಕೈಲಾಸ ಗಿರಿಯಂತೆ
ನಿರುತಮುಂ ಸೋಮಾರ್ಕ ಶಿಖಿ ಸಹಸ್ರಾಕ್ಷ ಹರಿ ನುತ ಶಿವಾವಾಸವಾಗಿ
ಧುರದಂತೆ ಕೊಳದಂತೆ ಕಡಲಂತೆ ನಭದಂತೆ
ಶರ ಪುಂಡರೀಕ ವಿದ್ರುಮ ಋಕ್ಷಮುಯ್ಯದೊಳಿಡಿ
ದಿರುತಿರ್ದುದಾ ಮಹಾಟವಿ ಜಾನಕಿಯ ಕಣ್ಗೆ ಘೋರತರವಾಗಿ ಮುಂದೆ

ಅಟವಿಯ ಮಹಾಘೋರ ಗಹ್ವರಂ ಮುಂದೆ ದು
ರ್ಘಟವಾಗೆ ನಡನಡುಗಿ ಭೀತಿಯಿಂ ಸೀತೆ ಸಂ
ಕಟದಿಂದ ರಾಮ ನಾಮಂಗಳಂ ಜಪಿಸುತಲೆ ಸೌಮಿತ್ರಿ ಕಾನನಮಿದು
ಅಟನಕಸದಳಮಪ್ಪುದಿಲ್ಲಿ ಪುಣ್ಯಾಶ್ರಮದ
ಜಟೆಗಳಂ ವಲ್ಕಲವನುಟ್ಟ ಮುನಿ ವಧುಗಳಂ
ವಟುಗಳಂ ಶ್ರುತಿ ಘೋಷ ಹೋಮ ಧೂಮಂಗಳಂ
ಕಾಣೆನೆಂದಳವಳಿದಳು

ಎಲ್ಲಿ ಮುನಿಪೋತ್ತಮರ ಪಾವನದ ವನದೆಡೆಗ
ಳೆಲ್ಲಿ ಸಿದ್ಧಾಶ್ರಮಂಗಳ ಮಂಗಳಸ್ಥಳಗ
ಳೆಲ್ಲಿ ಸುಹವಿಗಳ ಕಂಪೊಗೆದ ಪೊಗೆದಳೆದಗ್ನಿಹೋತ್ರದ ಕುಟೀರಂಗಳು
ಎಲ್ಲಿ ಪರಿಚಿತವಾದ ವಾದ ವೇದಧ್ವನಿಗ
ಳಲ್ಲಿಗೊಯ್ಯದೆ ದಾರು ದಾರುಣದ ಕಟ್ಟಡವಿ
ಗಿಲ್ಲಿಗೇಕೈತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯ್ದಳು

ಪಾವನಕೆ ಪಾವನಂ ಮಂಗಳಕೆ ಮಂಗಳಮು
ದಾವನ ಚರಿತ್ರ ನಾಮಂಗಳಾ ರಾಘವಂ
ಜೀವನದೊಡೆಯನಾಗಿರಲ್ಕಾತನಂಘ್ರಿಯನಗಲ್ದು ನಾಂ ಬಂದ ಬಳಿಕ
ಈ ವನದೊಳಿನ್ನು ಪುಣ್ಯಾಶ್ರಮಂ ಗೋಚರಿಪು
ದೇ ವನಜದಲರನುಳಿದಾರಡಿಗೆ ಬೊಬ್ಬುಳಿಯ
ಪೂವಿನೊಳ್ಮಧುವುಂಟೆ ಸೌಮಿತ್ರಿ ಹೇಳೆಂದು ಸೀತೆ ಹೊದಕುಳಿಗೊಂಡಳು

ನರ ನಾಥ ಕೇಳವನಿ ಸುತೆ ನುಡಿದ ಮಾತಿಗು
ತ್ತರವನಾಡದೆ ಮನದೊಳುರೆ ನೊಂದು ರಾಘವೇ
ಶ್ವರನೆಂದ ಕಷ್ಟಮಂ ಪೇಳ್ದಪೆನೊ ಮೇಣುಸಿರದಿರ್ದಪೆನೊ ನಿಷ್ಠುರದೊಳು
ತರಣಿ ಕುಲ ಸಾರ್ವಭೌಮನ ರಾಣಿಯಂ ಬನದೊ
ಳಿರಿಸಿ ಪೋದಪೆನೆಂತೊ ಮರಳದಿರ್ದೊಡೆ ಸಹೋ
ದರನದೇನೆಂದಪನೊ ಹಾಯೆಂದು ಲಕ್ಷ್ಮಣಂ ಬೆಂದು ಬೇಗುದಿಗೊಂಡನು

ಉಕ್ಕಿದುವು ಕಂಬನಿಗಳಧರೋಷ್ಠಮದಿರಿತಲ
ಗಿಕ್ಕಿ ತಿರುಪಿದೊಲಾಯಿತೊಡಲೊಳಿಡೆವರಿಯದುಸಿ
ರೊಕ್ಕುದುರೆ ಕಂಪಿಸಿದುದವಯವಂ ಕರಗಿತೆದೆ ಸ್ಥೈರಣೆ ಸಮತೆಗೆಟ್ಟುದು
ಸಿಕ್ಕಿದುವು ಕಂಠದೊಳ್ಮಾತುಗಳ್ಸೆರೆ ಬಿಗಿದು
ಮಿಕ್ಕು ಮೀರುವ ಶೋಕದಿಂದ ಬೆಂಡಾಗಿ ಕಡು
ಗಕ್ಕಸದ ಕೆಲಸಮನುಸಿರಲರಿಯದವನೊಯ್ಯನವನಿ ಸುತೆಗಿಂತೆಂದನು

ದೇವಿ ನಿನಗಿನ್ನೆಗಂ ಪೇಳ್ದುದಿಲ್ಲಪವಾದ
ಮಾವರಿಸೆ ನಿನ್ನನೊಲ್ಲದೆ ರಘು ಕುಲೋದ್ವಹಂ
ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿ ಬಾಯೆಂದೆನಗೆ ನೇಮಿಸಿದೊಡೆ

ಆ ವಿಭುವಿನಾಜ್ಞೆಯಂ ಮಿಾರಲರಿಯದೆ ಮೆಲ್ಲ
ನೀ ವಿಪಿನಕೊಡಗೊಂಡು ಬಂದೆನಿನ್ನೊಯ್ಯೊಯ್ಯ
ನಾವಲ್ಲಿಗಾದೊಡಂ ಪೋಗೆಂದು ಲಕ್ಷ್ಮಣಂ ಬಾಷ್ಪ ಲೋಚನನಾದನು

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ
ದೆರೆಗೆ ಬೀಳದ ಮುನ್ನ ಹಮ್ಮೈಸಿ ಬಿದ್ದಳಂಗನೆ ಧರೆಗೆ ನಡನಡುಗುತ
ಮರೆದಳಂಗೋಪಾಂಗಮಂ ಬಳಿಕ ಸೌಮಿತ್ರಿ
ಮರುಗಿ ತಣ್ಣೀರ್ದಳಿದು ಪತ್ರದಿಂ ಕೊಡೆವಿಡಿದು
ಸೆರಗಿಂದ ಬೀಸಿ ರಾಮನ ಸೇವೆ ಸಂದುದೇ ತನಗೆಂದು ರೋದಿಸಿದನು

ಒಯ್ಯನರೆ ಗಳಿಗೆಯೊಳ್ಕಣ್ದೆರೆದು ದೈನ್ಯದಿಂ
ಸುಯ್ಯಲರನುರೆ ಸೂಸಿ ಸೌಮಿತ್ರಿಯಂ ನೋಡಿ
ಕೊಯ್ಯಲೊಲ್ಲದೆ ಕೊರಳನಿಂತುಮೆನ್ನಂ ಬಿಡಲ್ ಮಾಡಿದಪರಾಧಮುಂಟೆ
ಕಯ್ಯಾರೆ ಖಡ್ಗಮಂ ಕೊಟ್ಟು ತನ್ನರಸಿಯಂ
ಹೊಯ್ಯೆಂದು ಪೇಳದಡವಿಗೆ ಕಳುಹಿ ಬಾರೆಂದ
ನಯ್ಯಯ್ಯೊ ರಾಘವಂ ಕಾರುಣ್ಯ ನಿಧಿಯೆಂದಳಲ್ದಳಂಬುಜ ದಳಾಕ್ಷಿ

ಬಿಟ್ಟನೆ ರಘೂದ್ವಹಂ ನನ್ನನಕಟಕಟ ತಾಂ
ಮುಟ್ಟನೆ ನೆಗಳ್ದ ಬಾಳ್ಕೆಗೆ ಸಂಚಕಾರಮಂ
ಕೊಟ್ಟನೆ ಸುಮಿತ್ರಾ ತನುಜ ಕಟ್ಟರಣ್ಯದೊಳ್ಕಳುಹಿ ಬಾರೆಂದು ನಿನಗೆ
ಕೊಟ್ಟನೆ ನಿರೂಪಂ ತಾನೆನ್ನ ಕಣ್ಬಟ್ಟೆ
ಗೆಟ್ಟನೆ ಮನೋವಲ್ಲಭನನಗಲ್ದಡವಿಯೊ
ಳ್ಕೆಟ್ಟನೆ ಪಿಶಾಚದವೊಲೆಂತಿಹೆನೊ ಕೆಟ್ಟೆನಲ್ಲಾಯೆಂದೊರಲ್ದಳಬಲೆ

ಎಂದು ಕೌಶಿಕ ಮುನಿಪನೊಡನೆ ಮಿಥಿಳಾ ಪುರಕೆ
ಬಂದು ಹರ ಧನುವನುಡಿದೆನ್ನಂ ಮದುವೆಯಾದ
ನಂದು ಮೊದಲಾಗಿ ರಮಿಸಿದನೆನ್ನೊಳಾನಗಲ್ದೊಡೆ ತಾಂ ನವೆದನಲ್ಲದೆ
ಒಂದಿದನೆ ಸೌಖ್ಯಮಂ ರಾಮನೆನಗಾಗಿ ಕಪಿ
ವೃಂದಮಂ ನೆರಪಿ ಕಡಲಂ ಕಟ್ಟಿ ದೈತ್ಯರಂ
ಕೊಂದಗ್ನಿ ಮುಖದೊಳ್ಪರೀಕ್ಷಿಸಿದನೆನ್ನೊಳಪರಾಧಮಂ ಕಾಣಿಸಿದನೇ

ಕಲ್ಮುಳ್ಳಿಡಿದ ಕಾಡೊಳಂದೆನ್ನನುಪಚರಿಸಿ
ಪಲ್ಮೊರೆದು ಗರ್ಜಿಪ ವಿರಾಧನಂ ಮರ್ದಿಸಿದೆ
ಬಲ್ಮೆಯಿಂ ನಾಂ ಕಳುಪಿದೊಡೆ ಜನಸ್ಥಾನದಿಂ ಪೋದೆ ರಾಘವನ ಬಳಿಗೆ
ನಲ್ಮೆಯಂ ಮರೆದಪೆನೆ ಸೌಮಿತ್ರಿ ನೀನೆಲ್ಲ
ರೊಲ್ಮೆಯ್ದುನನೆ ತನಗೆ ಕಾನನದೊಳೆನ್ನನಿರಿ
ಸಲ್ಮನಂ ಬಂದಪುದೆ ತಂದೆ ನಿನಗೆಂದು ಕಂಬನಿ ಮಿಡಿದಳಂಬುಜಾಕ್ಷಿ

ತೊಳಪ ನಾಸಿಕದ ನುಣ್ಗದಪುಗಳ ಪೊಳೆವ ಕಂ
ಗಳ ತರುಗಿದೆವೆಯ ನಿಡುಪುರ್ಬುಗಳ ಪೆರೆ ನೊಸಲ
ಥಳಥಳಿಪ ಮಕುಟದ ಕಿವಿಯ ಮಕರ ಮಂಡಲದ ಕೋಮಲಿತ ಚುಬುಕಾಗ್ರದ
ಲಲಿತಾರುಣಾಧರದ ಮಿರುಗುವ ರದನ ಪಙ್ಕ್ತಿ
ಗಳ ಸೂಸುವೆಳನಗೆಯ ಮೋಹನದ ಚೆಲ್ವಿನೊ
ಬ್ಬುಳಿಯೆನಿಪ ರಾಘವನ ಸಿರಿ ಮೊಗವನೆಂತು ನೋಡದೆ ಮಾಣ್ಬೆನಕಟೆಂದಳು

ರಾಮನಂ ಭುವನಾಭಿರಾಮನಂ ಗುಣ ರತ್ನ
ಧಾಮನಂ ರಘು ಕುಲೋದ್ದಾಮನಂ ರೂಪ ಜಿತ
ಕಾಮನಂ ಸತ್ಕೀರ್ತಿ ಕಾಮನಂ ಶರಣ ಜನ ವಾರ್ಧಿಯಂ ಮಿಗೆ ಪೆರ್ಚಿಪ

ಸೋಮನಂ ಸೌಭಾಗ್ಯ ಸೋಮನಂ ಕುವಲಯ
ಶ್ಯಾಮನಂ ನಿಜ ತನುಶ್ಯಾಮನಂ ಘನ ಪುಣ್ಯ
ನಾಮನಂ ಸಂತತಂ ನಾ ಮನಂದಣಿಯೆ ರಮಿಸದೆ ಮಾಣ್ಬೆನೆಂತೆಂದಳು

ರಾಯ ಕೇಳಿಂತಿತು ರಾಘವೇಶ್ವರನ ರಮ
ಣೀಯ ಗುಣ ಮಾಲೆಯಂ ನೆನೆನೆನೆದು ಹಂಬಲಿಸು
ತಾಯತಾಂಬಕಿ ಮತ್ತೆ ವೈಮರೆಯುತೆಚ್ಚರುತ ಪಾವಗಿದ
ಪಸುಳೆಯೊಲಿರೆ
ತಾಯೆ ನಿನ್ನಂ ಬಿಟ್ಟು ಪೋಗಲಾರೆಂ ಪೋಗ
ದೀಯವಸ್ಥೆಯೊಳಿರ್ದೊಡಣ್ಣ ನೇಗೆಯ್ದಪನೊ
ಹಾಯೆಂದು ಲಕ್ಷ್ಮಣಂ ಶೋಕ ಗದ್ಗದನಾಗೆ ಸೀತೆಮಗುಳಿಂತೆಂದಳು

ತಂದೆ ಲಕ್ಷ್ಮಣ ನಿನ್ನೊಳೆಂದೊಡಿನ್ನೇನಹುದು
ಹಿಂದಣ ಜನಸ್ಥಾನದಂದದೊಳ್ಪೋಗು ನೀಂ
ಕೊಂದುಕೊಂಬೊಡೆ ತನ್ನ ಬೆಂದೊಡಲೊಳಿದೆ ಬಸಿರ ದಂದುಗಂ
ಕಾನನದೊಳು
ಬಂದುದಂ ಕಾಣ್ಬೆನಾನಿಂದು ಕೌಸಲೆಯಡಿಗೆ
ವಂದಿಸಿದೆನಪರಾಧಮೊಂದಮಿಲ್ಲದೆ ತನ್ನ
ಕುಂದನೆನ್ನಂ ತೊರೆದುದಂ ದೇವಿಗೊರೆವುದೆನುತಂದಳಲ್ದಳ್ಮೃಗಾಕ್ಷಿ

ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ
ಕಾಕುತ್ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನ
ಗೀ ಕಾಡೊಳುಗ್ರ ಜಂತುಗಳಲ್ಲಿ ರಘು ನಾಥನೇಕಾಕಿಯಾಗಿರ್ಪನು'
ಲೋಕದರಸೇಗೆಯ್ದೊಡಂ ತನ್ನ ಕಿಂಕರ
ರ್ಬೇಕು ಬೇಡೆಂದು ಪೇಳರೆ ಭರತ ಶತ್ರುಘ್ನ
ರೀ ಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ

ಆರಿರ್ದೊಡೇಗೆಯ್ವರಿದು ತನ್ನ ಮರುಳಾಟ
ಮಾ ರಾವಣನ ತಮ್ಮನೈಸಲೆ ವಿಭೀಷಣಂ
ಭೀರುಗಳನರಿದಪನೆ ಸೋದರಂಗುರೆ ಮುಳಿದ ಸುಗ್ರೀವನೆಂಬವಂಗೆ
ಕಾರುಣ್ಯಮಿರ್ದಪುದೆ ಮತ್ತುಳಿದ ಮಂತ್ರಿಗಳ
ದಾರುಂಟು ಪೇಳ್ವವರ್ದೇವರಂ ನೀನೊಪ್ಪಿ
ಘೋರಾಟವಿಗೆ ಕೊಂಡು ಬಂದೆ ಕಳುಪುವೊಡಿನ್ನೊರಲ್ದೊಡೇನಹು
ದೆಂದಳು

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡುಪಾತಕಂಗೆಯ್ದು ಪೆಣ್ಣಾಗಿ ಜನಿಸಿ ತ
ನ್ನೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಲ್ಬೇಡ ನೀನು
ನಡೆ ಪೋಗು ನಿಲ್ಲದಿರ್ನಗೆ ಮಾರ್ಗದೊಳಾಗ
ಲಡಿಗಡಿಗೆ ಸುಖಮೆಂದು ಸೀತೆ ಕಂಬನಿಗಳಂ
ಮಿಡಿದಾರ್ತೆಯಾಗಿರಲ್ಸೌಮಿತ್ರಿ ನುಡಿದನಾ ವಿಪಿನದಭಿಮಾನಿಗಳ್ಗೆ

ಎಲೆ ವನಸ್ಥಳಿಗಳಿರ ವೃಕ್ಷಂಗಳಿರ ಮೃಗಂ
ಗಳಿರ ಕ್ರಿಮಿ ಕೀಟಂಗಳಿರ ಪಕ್ಷಿಗಳಿರ ಲತೆ
ಗಳಿರ ತೃಣ ಗುಲ್ಮಂಗಳಿರ ಪಂಚ ಭೂತಂಗಳಿರ ದೆಸೆಗಳಿರ ಕಾವುದು
ಎಲೆ ಧರ್ಮ ದೇವತೆ ಜಗಜ್ಜನನಿ ಜಾಹ್ನವಿಯೆ
ಸಲಹಿಕೊಂಬುದು ತನ್ನ ಮಾತೆಯಂ ಜಾನಕಿಯ
ನೆಲೆ ತಾಯೆ ಭೂದೇವಿ ನಿನ್ನ ಮಗಳಿಹಳೆಂದು ಸೌಮಿತ್ರಿ ಕೈಮುಗಿದನು

ಮಾಳ್ಕೆಯಿನ್ನಾವುದಿಬ್ಬಗಿಯಾಗಿ ತನ್ನೊಡಲ
ಸೀಳ್ಕೆಡಹ ಬೇಡವೇ ಧರಿತ್ರಿಯೊಳ್ನಿಷ್ಠುರದ
ಬಾಳ್ಕೆಯಂ ಸುಡಲೆನುತ ದೇವಿಯಂ ಬಲವಂದು ಲಕ್ಷ್ಮಣಂ ನಮಿಸಿ
ಬಳಿಕ

ಬೀಳ್ಕೊಂಡು ನಡೆಯಲ್ಕೆ ಹಿಂದುಹಿಂದಕೆ ಮನಂ
ಸೀಳ್ಕುಳಿಗೊಳಲ್ಕೆಂದುಮುಗಲದಣ್ಣನ ಕಡೆಗೆ
ದೂಳ್ಕಾಯದೊಳ್ಪತ್ತಿ ಪೊರಳ್ವ ಸೀತೆಯ ಕಡೆಗೆ ತೂಗುಯ್ಯಲೆಯೊಲಾದನು

ನಡೆಗೊಳಲ್ಕಂಡು ಬಾಯ್ಸೂರ್ವರ್ಗಳಂ ಚೀರ್ವರ್ಗಳಂ
ಕಡಲಿಡುವ ಕಂಬನಿಯೊಳಾಳ್ವಳಂ ಬೀಳ್ವಳಂ
ಪುಡಿಯೊಳ್ಪೊರಳ್ವ ಬಸವಳಿವಳಂ ಸುಳಿವಳಂ ಭರತಾಗ್ರಜನನಗಲ್ದು
ಅಡಿಗಡಿಗೆ ತಿರುತಿರುಗಿ ನೋಡುವಂ ಬಾಡುವಂ
ಬಿಡದೆ ಬಿಸುಸುಯ್ವು ಬೆಂಡಾದಪಂ ಪೋದಪಂ
ಪೊಡೆಮರಳ್ವಂ ನಿಲ್ವನಳಲುವಂ ಬಳಲುವಂ ಬಟ್ಟೆಯೊಳ್ಪಿಟ್ಟಿಗೆಟ್ಟು

ತಾಯನೆಳಗರು ಬಿಚ್ಚುವಂತೊಯ್ಯನೊಯ್ಯನ
ತ್ಯಾಯಾಸದಿಂದಗಲ್ವಮರ ನದಿಯಂ ದಾಂಟಿ
ರಾಯ ಕೇಳ್ ದುಃಖಾರ್ತನಾಗಿ ಸೌಮಿತ್ರಿ ಸಾಗಿದನತ್ತಲವಳಿತ್ತಲು
ಬಾಯಾರಿ ಕಂಗೆಟ್ಟು ಲಕ್ಷ್ಮಣನ ತಲೆ ಮರಸ
ಲಾಯೆಂದೊರಲ್ದು ಭಯ ಶೋಕದಿಂದಸವಳಿದು
ಕಾಯಮಂ ಮರೆದವನಿಗೊರಗಿದಳ್ಮೂಲಮಂ ಕೊಯ್ದೆಳೆಯ ಬಳ್ಳಿಯಂತೆ

ಅರಸ ಕೇಳಲ್ಲಿರ್ದ ಪಕ್ಷಿ ಮೃಗ ಜಂತುಗ
ಳ್ಧರಣಿಸುತೆಯಂ ಬಳಸಿ ನಿಂದು ಮೈಯುಡುಗಿ ಜೋ
ಲ್ದಿರದೆ ಕಣ್ಣೀರ್ಗರೆದು ನಿಜ ವೈರಮಂ ಮರೆದು ಪುಲ್ಮೇವುಗಳನೆ ತೊರೆದು
ಕೊರಗುತಿರ್ದುವು ಕೂಡೆ ವೃಕ್ಷ ಲತೆಗಳ್ಬಾಡಿ
ಸೊರಗುತಿರ್ದುವು ಶೋಕ ಭಾರದಿಂ ಕಲ್ಮರಂ
ಕರಗುತಿರ್ದುವು ಜಗದೊಳುತ್ತಮರ ಹಾನಿಯಂ ಕಂಡು ಸೈರಿಸುವರುಂಟೆ

ಮೊರೆಯಲೊಲ್ಲವು ತುಂಬಿ ಕುಣಿಯಲೊಲ್ಲವು ನವಿಲ್
ಬೆರೆಯಲೊಲ್ಲವು ಕೋಕಿ ನಡೆಯಲೊಲ್ಲವು ಹಂಸೆ
ಕರೆಯಲೊಲ್ಲವು ಪಿಕಂ ನುಡಿಯಲೊಲ್ಲವು ಶುಕಂ ನಡಿಯಲೊಲ್ಲವು
ಚಕೋರಿ
ನೆರೆಯಲೊಲ್ಲವು ಹರಿಣಿಯೊಲೆಯಲೊಲ್ಲವು ಕರಿಣಿ
ಪೊರೆಯಲೊಲ್ಲವು ಚಮರಿ ಮೆರೆಯಲೊಲ್ಲವು ಸಿಂಗ
ಮರರೆ ಜಾನಕಿಯ ಶೋಕಂ ತಮ್ಮದೆಂದಾಕೆಯಂಗಮಂ ನೋಡಿನೋಡಿ

ಬೀಸಿದುವು ಬಾಲದೊಳ್ಚಮರಿಗಳ್ಚಮರಮಂ
ಪಾಸಿದುವು ಕರಿಗಳೆಳದಳಿರ ಮೃದು ತಳ್ಪಮಂ
ಸೂಸಿದುವು ಸಾರಸಂಗಳ್ತಮ್ಮ ಗರಿಗಳಂ ತೋದು ತಂದಂಬುಗಳನು
ಆ ಸಿರಿ ಮೊಗಕ್ಕೆ ಬಿಸಿಲಾಗದಂತಾಗಸದೊ
ಳೋಸರಿಸದಂಚೆಗಳೆರಂಕೆಯುನಗಲ್ಚಿ ನೆಳ
ಲಾಸೆ ಗೆಯ್ದುವು ರಾಘವನ ರಾಣಿ ದುಃಖ ಸಂತಪ್ತೆಯಾಗಿರುತಿರಲ್ಕೆ

ಸುರ ನದಿಯ ತೆರೆತೆರೆಯ ನಡುನಡುವೆ ಬಿದ್ದೆದ್ದು
ಬರಲಾರದಿರ್ದೊಡಂ ಮತ್ತೆ ಗಂಗೆಯೊಳಲ
ರ್ದರವಿಂದ ಗಂಧದತಿಭಾರಮಂ ಪೊರಲಾರದಿರ್ದೊಡಂ ಧರಣಿ ಸುತೆಯ
ಪರಿತಾಪಮಂ ತವಿಸದಿರಬಾರದೆಂದು ತರ
ಹರದೊಳೊಯ್ಯೊಯ್ಯನೆಯ್ತಂದು ಬೀಸಿತು ಸುಖ
ಸ್ಪರುಶ ವಾತಂ ಜಗದೊಳುಪಕಾರಿಯಾದವಂ ತನ್ನ ನೋವಂ ನೋಳ್ಪನೆ

ಪೃಥಿವಿಯಾತ್ಮಜೆ ಬಳಿಕ ಚೇತರಿಸಿ ತನಗಿನ್ನು
ಪಥವಾವುದೆಂದು ದೆಸೆದೆಸೆಗಳಂ ನೋಡಿ ಸಲೆ
ಶಿಥಿಲಮಾದವಯವದ ದೂಳಿಡಿದ ಮೈಯ ಬಿಡುಮುಡಿಯ
ವಿಕೃತಿಯನೆಣಿಸದೆ

ಮಿಥಿಳೇಂದ್ರ ವಂಶದೊಳ್ಜನಿಸಿ ರಘು ಕುಲದ ದಶ
ರಥ ನೃಪನ ಸೊಸೆಯಾಗಿಯಕಟ ಕಟ್ಟಡವಿಯೊಳ್
ವ್ಯಥಿಸುವಂತಾದುದೇ ವಿಧಿಯೆಂದು ಹಲುಬಿದಳ್ ಕಲ್ಮರಂ ಕರಗುವಂತೆ

ಲಕ್ಷ್ಮೀಶ–ಜೈಮಿನಿಭಾರತ
(ಸು. ೧೭೦೦)

## ೧೨೯. ಲವ–ಕುಶರ ಬಾಲ್ಯ

ಅನ್ನೆಗಂ ಮುಖಕೆ ಯೂಪವನರಸುತಾ ಬನಕೆ
ಸನ್ನುತ ತಪೋಧನಂ ವಾಲ್ಮೀಕಿ ಮುನಿವರಂ
ತನ್ನ ಶಿಷ್ಯರ್ವೆರಸಿ ನಡೆತಂದು ಕಾಡೊಳೊರ್ವಳಿ ಪೊಗಲ್ ದೆಸೆಗಾಣದೆ
ಬನ್ನದಿಂ ಬಗೆಗೆಟ್ಟು ಪಾಡಳಿದು ಗ್ರೀಷ್ಮಋತು
ವಿನ್ನವೆದ ಕಾಂತಾರದಧಿದೇವಿ ತಾನೆನ
ಲ್ಸನ್ನಗದ್ಗದಕಂಠೆಯಾಗಿ ರೋದಿಸುತಿರ್ದ ವೈದೇಹಿಯಂ ಕಂಡನು

ಆರಿವಳಿದೇತಕಿದ್ದಪಳೀ ವನಾಂತರದೊ
ಳಾರೈವೆನಿದನೆಂದು ನಡೆತಂದು ಕರುಣದಿಂ
ದಾ ಋಷಿ ನುಡಿದನೆಲೆ ತಾಯೆನೀನಾವಳೌ ಕಂಡ ಕುರುಪಾಗಿರ್ಪುದು
ಘೋರತರಗಹನಕೊರ್ವಳಿ ಬಂದೆಯೆಂತಕಟ
ಭೀರು ಹೇಳೌ ಬೆದರಬೇಡ ವಾಲ್ಮೀಕಿ ನಾಂ
ಭೂರಿ ಶೋಕಾರ್ತರಾಗಿರ್ದರಂ ಕಂಡು ಸುಮ್ಮನೆ ಪೋಪನಲ್ಲೆಂದನು

ಹರುಷವೊತ್ತರಿಸಿದುದು ಶೋಕವಿಮ್ಮಡಿಸಿದುದು
ಬೆರಸಿದುದು ಲಜ್ಜೆ ಭೂಮಿಜೆಗಂದು ಗದ್ಗದ
ಸ್ವರದಿಂದ ಸೀತೆ ತಾಂ ಲೋಕಾಪವಾದಕಪರಾಧಿಯಲ್ಲದೆ ತನ್ನನು
ತರಣಿಕುಲಸಂಭವಂ ಬಿಟ್ಟನೆಂದೀ ವನದೊ
ಳಿರಿಸಿ ಪೋದಂ ಸುಮಿತ್ರಾತ್ಮಜಂ ಜೀವಮಂ
ಪರಿಯವೇಳ್ಪುದೆ ಗರ್ಭವೊಡಲೊಳಿಹುದೇವೆನೆಂದೆರಗಿದಳ್
ಮುನಿಪದದೊಳು

ದೇವಿ ಬಿಡು ಶೋಕಮಂ ಪುತ್ರಯುಗಮಂ ಪಡೆವೆ
ಭಾವಿಸದಿರಿನ್ನು ಸಂದೇಹಮಂ ಜನಕಂಗೆ
ನಾವನ್ಯರಲ್ಲ ನಮ್ಮಾಶ್ರಮಕೆ ಬಂದು ನೀಂ ಸುಖದೊಳಿರ್ದೊಡೆನಿನ್ನನು

ಆವಾವ ಬಯಕೆಯುಂಟೆಲ್ಲಮಂ ಸಲಿಸಿ ತಾ
ನೋವಿಕೊಂಡಿರ್ಪೆನಂಜದಿರೆಂದು ಸಂತೈಸಿ
ರಾವಣಾರಿಯ ರಾಣಿಯಂ ನಿಜ ತಪೋವನಕೆ ವಾಲ್ಮೀಕಿ ಕರೆತಂದನು

ಚಿತ್ರಮಯಮಾಗಿ ಕಟ್ಟಿತು ಪರ್ಣಶಾಲೆ ಶತ
ಪತ್ರಲೋಚನೆಗೆ ಬಳಿಕಲ್ಲಿ ಋಷಿಪತ್ನಿಯರ
ಮಿತ್ರತ್ವಮಂ ತಳೆದು ವಾಲ್ಮೀಕಿಮುನಿಸನಾರ್ಥೈಕೆಯಿಂ ಸೀತೆ ತನ್ನ
ಪುತ್ರೋದಯದ ಕಾಲಮಂ ನೋಡುತಿರ್ದಳ್ ಧ
ರಿತ್ರಿಯೊಳ್ ದೃಢಪತಿವ್ರತೆಯರ್ಗೆ ನಿರ್ಮಲ ಚ
ರಿತ್ರಮೆಂತಾದೊಡಂ ವಿಪರೀತಮಾದಪುದೆ ಭೂಪಾಲ ಕೇಳೆಂದನು

ಜಾತಿವೈರಂಗಳಿಲ್ಲದ ಪಕ್ಷಿಮೃಗದ ಸಂ
ಘಾತದಿಂ ಋತುಭೇದಮಿಲ್ಲದ ಲತಾದ್ರುಮ
ವ್ರಾತದಿಂ ಪಗಲಿರುಳ ಶಂಕೆಯಿಲ್ಲದ ಪೂಗೊಳಂಗಳ ವಿಕಾಸದಿಂದ
ಶೀತೋಷ್ಣದಾಶರಿಲ್ಲದ ಸುಸ್ಥಳಂಗಳಿಂ
ಪ್ರೀತಿ ವಿರಹಿತ ದುಃಖಸುಖದ ಜಂಜಡವಿಲ್ಲ
ದಾ ತಪೋವನದೊಳಗೆ ಋಷಿವಧುಗಳೊಡಗೂಡಿ ವೈದೇಹಿ ಪದುಳಿಸಿದಳು

ಮುನಿವಟುಗಳೆಡೆಯಾಡಿ ಪರಿಚರಿಯಮಂ ಮಾಳ್ಪ
ರಿನಿದಾದ ವಸ್ತುವಂ ಋಷಿವಧುಗಳಿತ್ತಪರ್
ತಮತಮಗೆ ಸತ್ಕರಿಸುವರ್ ತಾಪಸೋತ್ತಮರ್ ವಾಲ್ಮೀಕಿ ಸಾದರದೊಳು
ದಿನದಿನಕೆ ಬೇಕಾದ ಬಯಕೆಯಂ ಸಲಿಸುವಂ
ಬನದೊಳಿಂತಿರುತಿರ್ದಳವನಿಸುತೆ ರಾಘವೇಂ
ದ್ರನ ಚರಣಕಮಲಯುಗಮಂ ಧ್ಯಾನಿಸುತ ಮರೆದಖಿಳ ರಾಜ್ಯಶ್ರೀಯನು

ಅವನಿಜೆಯ ಗರ್ಭಕ್ಕೆ ತುಂಬಿದುದು ನವಮಾಸ
ದವಧಿ ಬಳಿಕೊಂದಿರುಳು ಶುಭಲಗ್ನದೊಳ್ ಪಡೆದ
ಳವಳಿಮಕ್ಕಳನುಪಚರಿಸೆ ವಿದಗ್ಧಾಂಗನೆಯರಾ ಸೂತಿಕಾಗೃಹದೊಳು
ತವಕದಿಂದೈತಂದು ಮುನಿವಟುಗಳುಸುರಲು
ತ್ಸವದಿಂದ ವಾಲ್ಮೀಕಿಋಷಿ ಬಂದು ನೋಡಿ ಕುಶ
ಲವದಿಂದ ಸೇಚನಂಗೈದು ಕುಶಲವರೆಂದು ವೆಸರಿಟ್ಟನರ್ಭಕರ್ಗೆ

ದೆಸೆಗಳ್ ಪ್ರಸನ್ನತೆಯೊಳೆಸೆದವಾಗಸದೊಳುಡು
ವಿಸರಂಗಳೊಪ್ಪಿದುವು ಪೊಸಗಂಪಿಡಿದು ಗಾಳಿ
ಪಸರಿಸಿತು ತವೆ ಸುಪ್ರದಕ್ಷಿಣದೊಳುರಿದುದಗ್ನಿಜ್ವಾಲೆ ಕಡಲುಕ್ಕಿತು
ವಸುಧೆ ನಲಿದುದು ತಿಳಿದು ಪರಿದವು ನದಿಗಳಂದು
ಶಶಿರವಿಗಳುದುಯಿಸಿದರೇಕಕಾಲದೊಳಿನಲ್
ಶಿಶುಗಳಾಶ್ರಮದ ಮುನಿಗಳ ಕಣ್ಗೆ ಕಾಣಿಸಿದರೊಸಗೆ ಮೂಜಗಕಾಗಲು

ಬಾಲದೊಡಿಗೆಗಳೆಲ್ಲಮಂ ತೊಡಿಸಿ ನೋಡುವಂ
ಬಾಲಲೀಲೆಗಳನಾಡಿಸಿ ಮುದ್ದು ಮಾಡುವಂ
ಬಾಲಕರ್ಗೆನಿದಾದ ವಸ್ತುವಂ ನೀಡುವಂ ತನ್ನ ತೊಡೆಮಡಿಲೊಳಿಟ್ಟು
ಲಾಲಿಸುವನಾವಗಂ ಜಪತಪ ಸದಾಧಿಗಳ
ಕಾಲಮಂ ಬಗೆಯದೆ ಮುನೀಶ್ವರಂ ಕುಶಲವರ
ಮೇಲಣಕ್ಕರೊಳಿರ್ದನಾಶ್ರಮದೊಳುತ್ಸವಂ ಪೆರ್ಚಿದುದು
ದಿನದಿನದೊಳು

ದಶರಥ ನೃಪಾಲಸುತನರಮನೆಯ ಬೆಳುವಿಗೆಯ
ಶಿಶುಗಳ್ಗೆ ಕಾಂತಾರವಾಸದೊಳ್ ನವೆವ ಕ
ರ್ಕಶಮಿದೆತ್ತಣದೆಂದು ಮಿಥಿಳೇಂದ್ರಸಂಭೂತೆ ಚಿತ್ತದೊಳ್
ಮರುಗದಂತೆ

ವಿಶದಮಾನಸನಾಗಿ ವಾಲ್ಮೀಕಿ ಮುನಿವರಂ
ಕುಶಲವರನೋವಿದಂ ವಿವಿಧ ವೈಭವದಿಂದ
ಶಶಿಧರನ ಕಳೆಯು ತೆರದೊಳು ರಾಘವಾತ್ಮಜರ್ ದಿನದಿನಕೆ
ವರ್ಧಿಸಿದರ್ಱ

ಚೆಲ್ವೆರಡು ರೂಪಾಯ್ತೊ ವಿಮಲತೆ ಕವಲ್ತುದೋ
ಗೆಲ್ವ ದೆಸೆಯೊಳಗೊಂಡಡರ್ದುದೋ ಕೀರ್ತಿಯ ಮು
ಡಲ್ವಸುಧೆಯೊಳ್ ದ್ವಿಧಾಕೃತಿಯಾಯ್ತೊ ಸಂತಸದ ಬೆಳಸಿನ ಬೆಳೆದ
ಪಸುಗೆಯೋ
ಸಲ್ವ ಕುಲದೇಳ್ಗೆಯ ಸಸಿಯು ಕೋಡೊ ಮೋಹನದ
ಬಲ್ವನಲ ಸವಡಿಯೋ ಸೊಗಸಿನವಳಿಯ ಫಲವೊ
ಸೊಲ್ವಡಲ್ ಪೊಸತೆನಲ್ ಕುಶಲವರ್ ಕಣ್ಗೆಸೆದರಾ ಮುನಿಪ
ನಾಶ್ರಮದೊಳು

ತೊಟ್ಟಲೊಳ್ ನಲಿವ ನೆವಮಿಲ್ಲದೆ ನಗುವ ಬಾಯ್ಗೆ
ಬೊಟ್ಟಿಕ್ಕಿ ಪೀರ್ವ ಪಸಿದರೆ ಚೀರ್ವ ಮೊಲೆಯುಂಬ
ಪಟ್ಟಿರಿಸೆ ಪೊರಳ್ವಂಬೆಗಾಲಿಡುವ ಮೊಳೆವಲ್ಲ ಜೊಲ್ಲುಗೆ ತೊದಳಿಸಿ
ನುಡಿವ
ದಟ್ಟಡಿಯಿಡುವ ನಿಲ್ವ ತೊಡರ್ವ ಬೇಡುವ ಪಱಿವ
ಬಟ್ಟೆಯೊಳೊರಗುವ ಕಾಡುವ ಕುಣಿವ ಲೀಲೆಯಂ
ನೆಟ್ಟನೆ ಕುಮಾರಕರ್ ತೋರಿದರ್ ಜಾನಕಿಗೆ ವಾಲ್ಮೀಕಿ
ಮುನಿವರಂಗೆ

ಬಿಡದೆ ಪಾಲ್ವೆರವುದಂ ತಣಿದುಯೋರಗೆ ಮಕ್ಕ
ಳೊಡನೆ ಧೂಳಾಟ ಮೊದಲಾದ ಲೀಲೆಗಳ ಪಱಿ
ವಿಡಿಯಿಂದೆಸೆವ ಕುಮಾರರ್ಗೆ ಮುನಿಪತಿ ಚೌಲಕರ್ಮಂಗಳಂ
ಮಾಡಿಸಿ

ತೊಡಗಿಸಿದನಕ್ಷರಾಭ್ಯಾಸಮಂ ಬಳಿಕ ನಡೆ
ನುಡಿಯ ಜಾಣ್ಮೆಯ ಕಲೆಯ ರಾಜಲಕ್ಷಣದ ಚೆ
ಲ್ವಿಡಿದ ಲಲಿತಾಂಗದಿಂ ಕುಶಲವರ್ ಕುಶಲವರ್ಧನರಾಗಿ ರಂಜಿಸಿದರು

ಶ್ರೀಮಾಧವನ ಮನೋಹರದ ಸೌಂದರ್ಯಮಂ
ಕಾಮಜನಕನ ಕಾಮಿನಿಯ ಲಾವಣ್ಯಮಂ
ರಾಮಚಂದ್ರನ ರಾಮಣೀಯಕದ ರೂಪಮಂ ತಾಳ್ದೊಗೆದ ಸುಕುಮಾರರ
ಕೋಮಲಾಂಗದ ಸೊಬಗನಭಿವರ್ಣಿಸುವರುಂಟೆ
ಭೂಮಿಯೊಳ್ ಚೆಲ್ವಿಗೆ ವಸಂತನಂ ಮದನನಂ
ಸೋಮನಂ ಪಡಿಯಿಡಲ್ ಪುನರುಕ್ತಮಪ್ಪುದೆನೆ ಕುಶಲವರ್ ಕಣ್ಗೆಸೆದರು

ದ್ವಾದಶಾಬ್ದದ ಮೇಲೆ ಮುನಿಪಂ ಕುಮಾರರ್ಗೆ
ವೇದೋಕ್ತದಿಂದಲುಪನಯನಂಗಳಂ ಮಾಡಿ
ಭೂದೇವನಿಕರಕೆ ವಸಿಷ್ಠನೊಳ್ ವರಕಾಮಧೇನುವಂ ಬೇಡಿತಂದು
ಆದರಿಸಿ ಭೋಜನ ಸುಗಂಧಾಕ್ಷತೆಗಳಿಂದ
ಲಾದುದತಿ ವಿಭವದಿಂದುತ್ಸವಂ ಬಳಿಕ ತರು
ಣಾದಿತ್ಯಸನ್ನಿಭರ್ ತೊಳಗಿದರ್ ಜಾನಕಿಯ ಚಿತ್ತಕಾನಂದಮಾಗೆ

ಸರ್ವಕರ್ಮದ ವಿಧಿಯನಖಿಳನಿಗಮದ ಕಡೆಯ
ಸರ್ವಶಾಸ್ತ್ರದ ಬಗೆಯ ನುಡಿದ ಧರ್ಮದ ನೆಲೆಯ
ನುರ್ವೀಶ ನೀತಿಗಳ ನಿಶ್ಚಯವನೈದೆ ಸಾಂಗೋಪಾಂಗವಾಗಿ ಬರಿಸಿ
ತರ್ವಾಯೊಳಾ ಕುಮಾರರ್ಗೆ ಮುನಿನಾಥಂ ಧ
ನುರ್ವೇದಮಂ ಶಿಕ್ಷೆಗೈದು ರಾಮಾಯಣವ
ನಿರ್ವರುಂ ಪಾಡುವಂತೋದಿಸಿದನತಿ ಮಧುರಭಾವದಿಂ ತುದಿ ಮೊದಲ್ಗೆ

ಸೀತೆ ನಲಿವಂತೆ ವಾಲ್ಮೀಕಿ ಮೆಚ್ಚುವ ತೆರದೊ
ಳಾ ತಪೋವನದ ಮುನಿಗಣವೈದೆ ಕೊಂಡಾಡ
ಲಾ ತರುಣರೀರ್ವರುಂ ಮಧುರ ವೀಣೆಗಳ ಮೇಳಾಪದಾಲಾಪಂಗಳ
ಗೀತದೊಳ್ ಸಂಕೀರ್ಣ ಶುದ್ಧ ಸಾಳಂಗದಿ ಲ
ಯಾತಿಶಯಮೆನೆ ಪಾಡುವರ್ ದೇವನಗರಿಯ ನಿ
ಕೇತನ ಶ್ರೀಪತಿಯ ಚಾರಿತ್ರಮಪ್ಪ ರಾಮಾಯಣವನನುದಿನದೊಳು

**ಲಕ್ಷ್ಮೀಶ–ಜೈಮಿನಿ ಭಾರತ**
(೧೭೦೦)

## ೧೩೦. ಸರ್ವಜ್ಞ ವಚನಗಳು

ಒಬ್ಬನಲ್ಲದೆ ಜಗಕೆ ಇಬ್ಬರುಂಟೆ ಮತ್ತೆ
ಒಬ್ಬ ಸರ್ವಜ್ಞ ಕರ್ತನೀಜಗಕೆಲ್ಲ
ಒಬ್ಬನೇ ದೇವ ಸರ್ವಜ್ಞ

ಚಿತ್ರವನು ನವಿಲೊಳು ವಿಚಿತ್ರವನು ಗಗನದೊಳು
ಪತ್ರಪುಷ್ಪಗಳ ವಿವಿಧ ವರ್ಣಗಳಿಂದ
ಚಿತ್ರಿಸಿದರಾರು ಸರ್ವಜ್ಞ

ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
ದುರ್ಜನರ ಸಂಗದೊಡನಾಟ ಬಚ್ಚಲಿನ
ರೊಜ್ಜಿನಂತಿಹುದು ಸರ್ವಜ್ಞ

ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ
ಅಲ್ಲದಹುದೆಂಬ ಅಜ್ಞಾನಿಯೊಡನಾಟ
ಕಲ್ಲುಹಾದಂತೆ ಸರ್ವಜ್ಞ

ಮಾನಹೀನರ ಸಂಗವೇನು ಕೊಟ್ಟರು ಬೇಡ
ಮಾನವುಳ್ಳವರ ಸಂಗ ತಾ ಸಕ್ಕರೆಯು
ಜೇನು ಸವಿದಂತೆ ಸರ್ವಜ್ಞ

ದಂತಪಂಙ್ಕ್ತಿಯ ನಡುವೆ ಎಂತಿಪ್ಪುದದು ಜಿಹ್ವೆ
ಅಂತು ದುರ್ಜನರ ಬಳಸಿನಲಿ ಸಜ್ಜನನು
ನಿಂತಿಹನು ನೋಡ ಸರ್ವಜ್ಞ

ಒಳ್ಳಿದರ ಒಡನಾಡೆ ಕಳ್ಳನೊಳ್ಳಿದನಕ್ಕು
ಒಳ್ಳಿದನು ಕಳ್ಳರೊಡನಾಡೆ ಅವ ಶುದ್ಧ
ಕಳ್ಳ ತಾನಕ್ಕು ಸರ್ವಜ್ಞ

ಬರೆ ಕಂಡು ಕರೆಯದನ ಬರೆ ಕುಳ್ಳಿರೆನ್ನದನ
ಸರಸ ಸಜ್ಜನಿಕೆ ಇಲ್ಲದನ ಸಖ್ಯವ
ಬೆರಸಲೇ ಬೇಡ ಸರ್ವಜ್ಞ

ವಿದ್ಯೆ ಕಲಿತಡೆ ಇಲ್ಲ ಬುದ್ಧಿ ಕಲಿತಡೆ ಇಲ್ಲ
ಉದ್ಯೋಗ ಮಾಡಿದಡೆ ಇಲ್ಲ ಗುರು ಮುಖವು
ಇದ್ದಲ್ಲದಿಲ್ಲ ಸರ್ವಜ್ಞ

ತಂದೆಗೂ ಗುರುವಿಗೂ ಒಂದು ಅಂತರವುಂಟು
ತಂದೆ ತೋರುವನು ಸದ್ಗುರುವ ಗುರುರಾಯ
ಬಂಧನವ ಕಳೆವ ಸರ್ವಜ್ಞ

ಒಂದೊಂದು ಹನಿ ಬಿದ್ದು ನಿಂದಲ್ಲಿ ಮಡುವಕ್ಕು
ಸಂದ ಸತ್ಪುರುಷರೊಡನಾಡೆ ಪರಬೊಮ್ಮ
ಮುಂದೆ ಬಂದಕ್ಕು ಸರ್ವಜ್ಞ

ಈವಂಗೆ ದೇವಂಗೆ ಆವುದಂತರವಯ್ಯ
ದೇವನು ಜಗಕೆ ಕೊಡುತಿಹನು ಕೈಯಾರೆ
ಈವನೇ ದೇವ ಸರ್ವಜ್ಞ

ಉಣ್ಣೆ ಕೆಚ್ಚಲೊಳಿದ್ದು ಉಣ್ಣದದು ನೊರೆವಾಲ
ಪುಣ್ಯವನು ಮಾಡಿ ಉಣಲೊಲ್ಲದವನಿರವು
ಉಣ್ಣೆಗೂ ಕಷ್ಟ ಸರ್ವಜ್ಞ

ಉಳ್ಳಲ್ಲಿ ಉಣಲಿಲ್ಲ ಉಳ್ಳಲ್ಲಿ ಉಡಲಿಲ್ಲ
ಉಳ್ಳಲ್ಲಿ ದಾನ ಕೊಡಲೊಲ್ಲದವನೊಡವೆ
ಕಳ್ಳಗೆ ನೃಪಗೆ ಸರ್ವಜ್ಞ

ಇಚ್ಛೆಯನು ಅರಿದಿತ್ತ ನುಚ್ಚೊಂದು ಮಾಣಿಕವು
ಇಚ್ಛೆಯದು ತೀರ್ದ ಬಳಿಕಿತ್ತ ಮಾಣಿಕವು
ನುಚ್ಚಿಗು ಕಷ್ಟ ಸರ್ವಜ್ಞ

ಆಗ ಬಾ, ಈಗ ಬಾ, ಹೋಗಿ ಬಾ, ಎನ್ನದಲೆ
ಆಗಲೇ ಕರೆದು ಕೊಡುವನ ಧರ್ಮ ಹೊ
ನ್ನಾಗದೆ ಬಿಡದು ಸರ್ವಜ್ಞ

ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದಡೆ ಕೈಲಾಸ
ಬಿನ್ನಾಣವಕ್ಕು ಸರ್ವಜ್ಞ

ಸಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು ಕೈಲಾಸ
ನೆರೆಮನೆಯಕ್ಕು ಸರ್ವಜ್ಞ

ಕತ್ತಿಲಾದಾಗಾಯ ಮತ್ತಿರದೆ ಮಾಯುವುದು
ಸುತ್ತಲಾಡುತಿಹ ಜಿಹ್ವೆಯ ಗಾಯ ತಾ
ಸತ್ತು ಮಾಯುವುದೆ ಸರ್ವಜ್ಞ

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೆ ಮೇಲು
ಮೇಟಿಯಿಂ ರಾಟೆ ನಡೆದುದಲ್ಲದೆ ದೇಶ
ದಾಟವೇ ಕೆಡುಗು ಸರ್ವಜ್ಞ

ವಿದ್ಯೆಯುಳ್ಳನ ಮುಖವು ಮುದ್ದು ಬರುವಂತಿಕ್ಕು
ವಿದ್ಯೆಯಿಲ್ಲದನ ಬರಿ ಮುಖವು ಹಾಳೂರ
ಹದ್ದಿನಂತಕ್ಕು ಸರ್ವಜ್ಞ

ಓದಿದಾ ಓದು ತಾ ಮೇದ ಕಬ್ಬಿನ ಸಿಪ್ಪೆ
ಓದಿನ ಒಡಲಿನರಿದಿಹರೆ ಸಿಪ್ಪೆ ಕ
ಬ್ಬಾದಂತೆ ಕಾಣೊ ಸರ್ವಜ್ಞ

ವಿದ್ಯೆ ಕಲಿಸದ ತಂದೆ ಬುದ್ಧಿ ಕೊಡದಾ ಗುರುವು
ಬಿದ್ದಿರಲು ಬಂದು ನೋಡದಾ ತಾಯಿಯು
ಶುದ್ಧ ವೈರಿಗಳು ಸರ್ವಜ್ಞ

ಸತ್ಯಕ್ಕೆ ಸರಿಯಿಲ್ಲ ಮಿಥ್ಯಕ್ಕೆ ನೆಲೆಯಿಲ್ಲ
ಹೆತ್ತಮ್ಮನಿಂದ ಹಿತರಿಲ್ಲ ನರರೊಳಗೆ
ನಿತ್ಯರೇ ಇಲ್ಲ ಸರ್ವಜ್ಞ

ಸಾಲವನು ಕೊಂಬಾಗ ಹಾಲು ಹಣ್ಣುಂಡಂತೆ
ಸಾಲಿಗನು ಬಂದು ಎಳೆವಾಗ ಕಿಬ್ಬದಿಯ
ಕೀಲು ಮುರಿದಂತೆ ಸರ್ವಜ್ಞ

ಆರಯ್ದು ನುಡಿವವನು ಆರಯ್ದು ನಡೆವವನು
ಆರಯ್ದು ಪದವ ನಿಡುವವನು ಲೋಕಕ್ಕೆ
ಆರಾಧ್ಯನಕ್ಕು ಸರ್ವಜ್ಞ

ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ ?
ಜಾತಿ ವಿಜಾತಿಯೆನಬೇಡ, ದೇವನೊಲಿ
ದಾತನೇ ಜಾತ ಸರ್ವಜ್ಞ

ಬೆಕ್ಕು ಮನೆಯೊಳು ಲೇಸು ಮುಕ್ಕು ಕಲ್ಲಿಗೆ ಲೇಸು
ನಕ್ಕು ನಗಿಸುವ ನುಡಿಲೇಸು ಊರಿಂಗೆ
ಒಕ್ಕಲಿಗ ಲೇಸು ಸರ್ವಜ್ಞ

ಜೋಳದಾ ಬೋನಕ್ಕೆ ಬೇಳೆಯ ತೊಗೆಯಾಗಿ
ಕವಣೆಗಲ್ಲಷ್ಟು ಬೆಣ್ಣೆಯಿಡಲೂಟದ
ಹವಣ ನೋಡೆಂದ ಸರ್ವಜ್ಞ

ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ
ಬಲ್ಲಿದರು ಇದ್ದು–ಬಲವಿಲ್ಲ ಸಾಹಿತ್ಯ
ವೆಲ್ಲರಿಗಿಲ್ಲ ಸರ್ವಜ್ಞ

**ಸರ್ವಜ್ಞ** (೧೭೦೦)

## ೧೩೧. ಸುಧಾಸೂತಿ ಬಿಂಬ

ಹರ ನೃತ್ಯಾರಂಭ ಸಂರಂಭದೆ ಕೆದರ್ದ ಜಪಾಗುಚ್ಛಮೋ ಮೇಣ್ವಿ
ಯತ್ಸಿಂ
ಧುರಶೀರ್ಷೋಪಾತ್ತಸಿಂದೂರಮೊ ರವಿತುರಗ ಕ್ಷುಣ್ಣಪೂರ್ವೇ
ತರೋರ್ವೀ
ಧರಶೋಣಗ್ರಾವರೇಣುವ್ರಜಮೊ ಬಗೆಯೆರಾಜಾಗಮಾಬದ್ಧಶೋಭಾ
ಕರ ಮಾಣಿಕ್ಯಾವಳೀ ತೋರಣಮೊ ಎನೆ ಬೆಡಂಗಾಯ್ತು ಸಂಧ್ಯಾಂ
ಶುಜಾಲಂ

ಮುಗಿದುವು ತಾವರೆಗ ಳ್ಕೈ
ಮುಗಿವಂತಿರೆ ಸಂಧ್ಯೆಗಾಸರೋಜಿನಿ ಯೆಣೆವ
ಕ್ಕಿಗಳಗಲಿ ಸುತ್ತಿ ಸುಳಿದುವು
ಬಗೆಮಿಗೆ ಬಲವರ್ಪ್ಪ ತೆಱದೆ ತಿಳಿಗೊಳದೆಡೆಯೊಳ್

ಇನನಗಲಿ ಪೋದೊಡಾ ಪ
ದ್ಮಿನಿ ಜೀವನ ವ್ಯೈದೆ ಕೊರಲ ವರೆಗಂ ಕಱಿದಂ
ಜನಮಿಶ್ರಬಾಷ್ಪ ಬಿಂದುಗ
ಳೆನೆ ಮುಗಿದಂಬುಜದೆ ಸಿಲ್ಕಿದಳಿಕುಲ ಮೆಸೆಗುಂ

ಮದನನ ಜಯಯಾತ್ರಾರಂ
ಭದೆ ಪದಪಿಂ ಸಾಂಧ್ಯಕಾಲ ಸಾಂವತ್ಸರಿಕಂ
ಕೆದರ್ದ ಧವಳಾಕ್ಷತ ವ್ರಾ
ತದ ವೋಲ್ತುಱುಗಿತ್ತು ನಭದೆ ತಾರಾವಾರಂ

ಗಗನಾಂಭೋರಾಶಿ ಮುಕ್ತಾನಿಕರಮೊ ವಿಯದತ್ತುಂಗಮಾತಂಗ
ಕಂಠ
ಸ್ಥಗಿತೋದ್ಯದ್ರೌಪ್ಯಘಂಟಾ ಸರಮೊ ಬಗೆಯೆ ತಾರಾಧ್ವತಾಪಿಂಚ
ವಲ್ಲೀ
ಪ್ರಗತ ವ್ಯಾಕೋಚಪುಷ್ಪೌಘಮೊ ಖತಲಕಳಿಂದಾತ್ಮಜಾಪೀನಫೇನಾ
ಳಿಗಳೋ ಪೇಳೆಂಬಿನಂ ಕಣ್ಗೆಸೆದುದಮಳಿನ ದ್ಯೋತ ತಾರಾಪ್ರ
ತಾನಂ

ಜಾಱೆ ತಮಂ ನಭೋಂಕಣದೆ ತಾರೆ ಕರಂ ತಲೆದೋಱೆ ಕೈರವಂ
ಸೇರೆ ವಿಕಾಸಮಂ ಜಲಮ ನೂಱೆ ವಿಧೂಪಲ ಮಬ್ಧಿ ಮೇರೆಯಂ
ಮೀಱೆ ಚಕೋರಿ ಪೇಱೆ ಮುದಮಂ ಶಲೆ ಬೀರಮನಾಱೆಮನ್ಮಥಂ
ತೋಱಿದು ದೈಂದ್ರಿಯಿಟ್ಟಮಲಚಂದನಬಿಂದುವೊಲಿಂದು ಮಂಡಲಂ

ಹರಿದಿಕ್ಕಾಂತಾ ಕರಾಂಚತ್ತುಹಿನಕರ ಶಿಲಾ ದರ್ಪಣಂ ದರ್ಪ
ಕಕ್ಷ್ಮಾ
ವರ ಸಾಮ್ರಾಜ್ಯಾಭಿಷೇಕ ಸ್ಫಟಿಕಕಲಶ ಮಾಕಾಶ ಕಾಸಾರ ಹಂಸಂ
ವಿರಹಿ ವ್ರಾತಾಹಿ ತಾರ್ಕ್ಷ್ಯಂ ತಿಮಿರ ಗಜ ಘಟಾಟೋಪ ಸಂಹಾರ
ಸಿಂಹಂ
ಕರ ಧೌತಾಶಾಕದಂಬಂ ಸೊಗಯಿಸಿದು ದಳುಂಬಂ ಸುಧಾಸೂತಿ
ಬಿಂಬಂ

ಸೂಸಿದ ಸೇಸೆಯಕ್ಕಿಗಳವೋಲರೆ ಮೂಡಿದ ತಾರಕಾಳಿ ಯು
ಲ್ಲಾಸಿಪ ನೈದಿಲೊಳ್ಮೊರೆವಳಿಧ್ವನಿ ಮಂಗಳವಾದ್ಯಮಾಗೆ ತೀ
ರ್ವೈಸಿದ ಸಂಜೆ ಯೋಸರಿಸೆ ಕಾನಕಕಾಂಡಪಟಂಬೊಲಾಗಳು
ದ್ಭಾಸಿತ ರಾಗ ನಿಂದು ಪಸೆನಿಂವ ನುದಂಚಿತ ರಾತ್ರಿಕನ್ಯೆಯೊಳ್

ಪರಿಕಿಸೆ ಕಾಲಸಿದ್ಧಪುರುಷಂ ರಜನೀಕರ ರೌಪ್ಯಪಿಂಡಮಂ
ಪೊರೆದಮರ್ದೆಂಬ ಸಿದ್ಧರಸದಿಂ ನವಸಾಂಧ್ಯವಿಭಾನಲಾರ್ಚಿಯೊಳ್
ನೆಱೆಪುಟವಿಕ್ಕುತೂದಲೊಡನಾಯ್ತು ಸುವರ್ಣಮದೆಂಬವೊಲ್ಕೆಯಿಂ
ದರುಣಮರೀಚಿ ಕಂಚುಕಿತ ಮೊಪ್ಪಿದು ದುತ್ಪಲಬಂಧುಮಂಡಲಂ

**ಬಸಪ್ಪ ಶಾಸ್ತ್ರಿ–ದಮಯಂತಿ ಸ್ವಯಂವರ**
(೧೯೦೦)

# ೧೩೨. ಸಂಧಾನ

ಸಾರಿ ಕೊಂದರೆ ಪಾಪವಿಲ್ಲ ಮನ
ವಾರಯ್ಯದಿರುವುದು ನಡತೆಗೆ ಸಲ್ಲ

ಇನ್ನಾದರೆಮ್ಮನು ಕಂಡು ಸತಿ
ಯನ್ನು ತಂದಿತ್ತು ತಮ್ಮನ ಕೂಡಿಕೊಂಡು
ಚೆನ್ನಾಗಿದ್ದರೆ ಬಂದ ದಂಡು ಪೋಪು
ದನ್ಯಾಯವಲ್ಲ ಕೀರ್ತಿಯನು ಮುಂಕೊಂಡು

ಲಜ್ಜೆಯದೆಂದಂಜದಿರಲಿ ಕೆಡು
ಗಜ್ಜವನುಳಿವುದೆ ಯಶವೆಂದೆಣಿಸಲಿ
ಸಜ್ಜನರೊಡನಾಲೋಚಿಸಲಿ ತ
ನ್ನಜ್ಜನೊಡನೆ ಕೇಳುತಂತೆ ನಡೆಯಲಿ

ಭ್ರಾಂತು ಬುದ್ಧಿಗಳೆಲ್ಲ ಬಿಡಲಿ ತನ್ನ
ಪಂಥ ಪೌರುಷವೆಂಬುದೆಲ್ಲ ಕಟ್ಟೆಡಲಿ
ಸಂತಾನ ಸಹಿತ ಬಾಳಿರಲಿ ಮನ
ಕಿಂತೊಪ್ಪದೊಡೆ ನಮ್ಮೊಳಿದಿರಾಗಿ ಬರಲಿ

ಸಂಧಾನಕೊರ್ವನ ಕಳುಹಿ ನಾವೀ
ಗೆಂದ ಮಾತುಗಳ ರಕ್ಕಸನಿಗೆ ತಿಳುಹಿ
ಬಂದರೊಳ್ಳಿತು ಮಾತನುಳುಹಿ ! ಉಳುಹು
ವಂದವಿಲ್ಲದೊಡಾತ ಬರಲತ್ತಲಿಳುಹಿ

ಹುರುಳಲ್ಲಲ್ಲಿಗೆ ಸರಿಯೆನಿಪ ತರ
ವರಿದು ಹೊಲಿದು ನುಡಿಗಳ ಕಟ್ಟಲಾಪ
ಹುರುಪುಳ್ಳ ದೂತನಾರಪ್ಪ ಬಗೆ
ದೊರೆಯಬೇಕೆಂದು ಕೇಳಿದರು ರಾಮಪ್ಪ

ಪಾರ್ತಿಸುಬ್ಬ–ಅಂಗದಧ ಸಂಧಾನ
(೧೯೦೦)

# ೧೩೩. ಸಮುದ್ರವರ್ಣನೆ

ತಪ್ಪನೆಸಗಿದೆ ಪಿಂದೆ ಜಡಭರಿತನಾಗಿ ಮುಂ
ತಪ್ಪ ನರನಾಟಕದ ಲೀಲೆಯುಂ ಬಗೆಯದೈ
ತಪ್ಪ ರಾಘವನೊಳಿಂತಾದೊಡಂ ಕ್ಷಮಿಸಿ ತನ್ನಂ ಕಾದ ಕರುಣಿಯೆಂದು
ದಪ್ಪತೆರೆಗೈಗಳಿಂ ಮೇಣೊರ್ಮೆ ಕೊರ್ಮೆಯಿಂ
ದಪ್ಪಲೈದುವನೊ ಕಡಲೊಡೆಯನೆಂಬೊಲ್ ಮೇರೆ
ದಪ್ಪದಿರದಡಿಗಡಿಗೆ ಮಡಿಮಡಿದು ಬರ್ಪ ಪೆರ್ದೆರೆಗಳಿಂ ಕಡಲೆಸೆದುದು

ಪಗೆಗಗ್ರಜರ ದೂಱಲನಿಮಿಷರ್ ನಿನ್ನೊಳೀ
ಬಗೆಯಱಿತು ಖೂಳರಂ ಮಡುಹಿ ನಂಬಿದವರ್ಗೆ
ಸೊಗಮಿತ್ತೆ ನಾವುಮನಿಮಿಷರೆಮ್ಮನಗ್ರಜರ್ ದ್ವೇಷಿಪರ್ ಸುಮ್ಮನಕಟಾ
ಬಗಿದು ವೈರಿಗಳನೆಮ್ಮಂ ಕಾವುದಿನ್ನು ನಂ
ಬುಗೆ ಪೆಱರೊಳಿಲ್ಲವೆಂದೊರೆಯೆ ರಾಘವಗೆ ಮೇ
ಲ್ನೆಗೆದಪುವೊ ಕಾಣೆನೆನೆ ಮಱಿಮೀನ್ಗಳೆಡೆಯೆಡೆಯೊಳೆದ್ದುರುಳ್ದಪು
ವೆಲ್ಲಿಯುಂ

ಮಿಕ್ಕು ಧರ್ಮವನುಯ್ದು ಸೀತೆಯಂ ದೇವರೊಳ್
ಸೊಕ್ಕಿ ನಡೆದಱಿದ ದಶಕಂಧರಂ ಮೇಣ್ ಪೊಱಲೊ
ಳೊಕ್ಕಲಿರಬಹುದೆ ದುರ್ಯಶಮಪ್ಪುದೆನಗಿದಂ ಪಾಱಿಸಗಿ ಬಿಡುವೆನೆಂದು
ಉಕ್ಕಿ ಮೊಱೆದೈತರ್ಪ ಶರಧಿ ತನಗೀಕಾರ್ಯ
ತಕ್ಕುದಲ್ಲರರೆ ರಾಘವನಾಜ್ಞೆ ಪಿರಿದು ಮಱೆ
ವೊಕ್ಕವಂಗಿತ್ತನೆಂದಱಿದಟ್ಟಿ ಮರಳವೋಲಬ್ಧಿ ತಡಿವೊಡೆದು ಪೋಕುಂ

ಹರಹರಾ! ಕಾಲಮಿನ್ನೆಂತಿಹುದೊ! ಸೌಭಾಗ್ಯ
ಭರಿತನಾಗಿರ್ದಂದು ಸಕಲರೋಲೈಸಿದರ್
ಸುರರ ಪಾಲಾಗಲದು ಬಡತನಂ ಪೊರ್ದೆ ಭಂಗಕ್ಕಿನಿತು ಪಕ್ಕಾದೆನ್ನೈ
ಪೆಱೆಮುಗಂ ಬಾನೇರ್ದನಣುಗಿಯರಸನನುಯ್ದು
ಧರೆಯತ್ತ ಸೇರ್ದಳರಸಿಯರುಮೋರೊಂದೆಡೆಯೊ
ಳಿರುವರೆನಗಿಲ್ಲ ಗತಿ ನೀನೆಂದು ಹರಿಗೆ ಮೊಱೆಯಿಡುವುದೆನಲಬ್ಧಿ
ಮೊಱೆಗುಂ

ಕೊಡನಣುಗನರಸಿಗಿಂಬಿತ್ತೆನಾದೊಡಮವಂ
ಕುಡಿದನಂದಳಿಯುನೀರಾಘವಂ ಬಂಧಿಸಿದ
ನೆಡೆಗೊಂಡುದಂ ಮಱೆದು ವಜ್ರ ಜೀವನಮನಪಹರಿಸುವಂ
ಮೋಘಭಟರಿಂ
ಪಡೆದುಮೆನ್ನಿಂದಖಿಳಸಂಪದಮನೆಂದೊಡಱಿ
ವ್ವುಡನೊರ್ವ ವಿಷಮನಿತ್ತೊಡೆ ವಿಷಮನೆಣಿಸನೆ
ನ್ನೊಡೆಯನೆಂದಿರದೆ ಪೊಗಟ್ವವೊಲಬ್ಧಿ ಮೊಱೆವುದೋರೊರ್ಮೆ
ಕಿಱುಪೆರ್ದನಿಗಳಿಂ

ಸತ್ಯದೊಳ್ ಶರಣರಕ್ಷಣೆಯೊಳನುನಯದೊಳುಪ
ಕೃತ್ಯದೊಳ್ ಗಂಭೀರಭಾವದೊಳ್ ಸಾಹಸದೊ
ಳತ್ಯಧಿಕಕೀರ್ತಿಯೊಳ್ ಸತ್ವಾತಿಶಯದೊಳನುಗತವಾಹಿನೀನಿಕರದಿಂ
ನಿತ್ಯಲೀಲಾವಿನೋದಂಗಳೊಳ್ ಶ್ರೀಯೊಳೌ
ಚಿತ್ಯದಾನಂಗಳೊಳ್ ವಿಭವದೊಳ್ ದಶರಥಾ
ಪತ್ಯನಿಂ ಕಿಱಿಯನಲ್ಲೆಂಬಂತೆವೊಲ್ ಶರಧಿ ಘೋಷಿಸುತ್ತಿರ್ಪುದನಿಶಂ

ಪುತ್ರನೊರ್ವಂ ರಾಜನಣುಗಿಯೆ ಜಗನ್ಮಾತೆ
ಮಿತ್ರನಭವಂ ಧೂತಪಾಪೆ ತನ್ನರಸಿ ಶತ
ಪತ್ರನೇತ್ರಂ ಮನೆಯಳಿಯ ನೋಡೆ ಮುಮ್ಮಕ್ಕಳೆನಗೆ ರತಿಕಾಮರ್ಧೃಸೆ
ಗೋತ್ರರಾಜಂ ಮಾವನತ್ತಿಗೆಯೆ ಪಾರ್ವತಿ ಪ
ಮಿತ್ರನಾಂ ಮೊದಲೆ ತನಗೆಣೆಯಪ್ಪನಾವಂ ಧ
ರಿತ್ರಿಯೊಳಗೆಂದು ಘೋಷಿಪುದೆಂಬೊಲರ್ಣವಂ ಬಾಯ್ವಿಡುತ್ತಿ
ರ್ಪುದೆಂದುಂ

ಪಿರಿದು ರಾಷ್ಟ್ರಂ ಪ್ರಜೆಗಳನಿಮಿಷರ್ ಮಾರುತಂ
ಚರನಿರ್ಪನನುಸರಿಸಿ ವಾಹಿನೀಬಲಮುಂಟು
ಮಱಿಗೊಂಬುದೆನ್ನ ಭೂಭೃತ್ಕುಲಂ ರತ್ನಭಾಂಡಾಗಾರಮಿರ್ಪುದಿನ್ನು
ನಿರತಸತ್ವಾತಿಶಯಮಿರಲೇನನೆಸಗಿದೊಡ
ಮೊರೆವರಾರುಂಟು ಪುಲ್ಗೆಣೆಯಲ್ತೆ ಮುಳಿದೊಡಾಂ
ಸರಸಿಜಭವಾಂಡಮೆಂದುಬ್ಬರದೊಳಬ್ಬರಿಪೊಲರ್ಣವಂ ಘೂರ್ಣಿಸುವುದು

ಏನಿದಚ್ಚರಿ! ಬೇಡಿದರ್ಗೆ ಕರಿತುರಗಭೂ
ಧೇನುನವರತ್ನ ಕನ್ಯಾಕಲ್ಪಭೂರುಹನ
ವೀನಪೀಯೂಷವಸ್ತ್ರಾಭರಣಗೇಹನಿಜದೇಹಂಗಳಂ ಮಾಣದೆ
ದಾನಮಿತ್ತಾದುದೇನಿರ್ಪುದೆಮಗೀಯಲೆಂ
ದಾ ನೀರದಂಗಳಬ್ಧಿಯನಳ್ಕಿ ಬೇಡಿದೊಡೆ
ತಾನಂಜಿದನೆ ಜೀವನಂಗೊಟ್ಟನೆನೆ ಚಿತ್ರಮಲ್ತೆ ಧಾರ್ಮಿಕರ ಚರಿತಂ

ಸುರರಿಗಮೃತಂ ಬೇಕೆ ಮನಮುಂಟೆ ಕಾಲಕಂ
ಧರಗೆ ವಿಷದೊಳ್ ಬಾಲಚಂದ್ರಂಗೆ ಪಯಮಿಹುದೆ
ಶರಮುಂಟೆ ವೀರರ್ಗೆ ಕೀಲಾಲಮಸುರರ್ಗೆ ದೊರೆತುದೇ ಲಾವಣ್ಯಮಂ

ಸ್ಮರನಿಚ್ಛಿಪನೆ ಕುಶಮನಱಿಸುವರೆ ಯಮಿಗಳ್ ಘ
ನರಸಮಂ ಕೊಂಡರೆ ರಸಜ್ಞರುಂಟೆನ್ನ ಮಾ
ದರದೆ ತಾನೀವೆನೆಂದೊರೆವಂತೆ ಮೊಱೆವಂ ತೆಱೆತೆಱದಿಂದಬ್ಧಿರಾಜಂ

ಪೆರ್ಚಿರ್ದುದಧಿಕತರಸತ್ವದಿಂ ಸತ್ವದಿಂ
ದುರ್ಚಿ ಮೆಯ್ಗಱೆವ ರಾಜೀವಮಾ ಜೀವಮಂ
ಕರ್ಚಿ ಪಾಯ್ದುಡಗುವ ತರಂಗದಿಂ ರಂಗದಿಂದೆಟ್ಟಿ ವೆರ್ವಿನಿನಿಂದ
ಸಾರ್ಚಿ ಮುಂ ಸುಱಿವ ಜಲವಾಜಿಯಿಂ ವಾಜಿಯಿಂ
ದಿರ್ಚಿಡಿದ ವಿದ್ರುಮವಿತಾನದಿಂ ತಾನದಿಂ
ಬೆರ್ಚಿ ಪರಿದೋಡುವಾನೆಗಳಿಂದ ನೆಗಱಿಂದ ನೆಗಱಿಂದಲಾಸಮುದ್ರಂ

ಪಟ್ಟುಱಿದು ಸಂಚರಿಪ ಬಾಳೆಯಂ ಬಾಳೆಯಂ
ಮುಟ್ಟವಿಸಿ ನಡೆತರ್ಪ ನಕ್ರಮಂ ನಕ್ರಮಂ
ಮೆಟ್ಟಿ ಬಹ ಶಕುಲಮಂ ಶಕುಲಮಂ ಬೆಂಬತ್ತಿ ಪರಿವ ವರಮೀನ ಮೀನಂ
ಬಿಟ್ಟಡಂಗುವ ಜಲಗ್ರಾಹಮಂ ಗ್ರಾಹಮಂ
ದಿಟ್ಟಿಸುತೆ ಪಿಂಜರಿವ ಕಮಠಮಂ ಕಮಠಮಂ
ಕಟ್ಟೆಸಕದಿಂ ಪಾರ್ವುಲೂಪಿಯನುಲೂಪಿಯಂ ಬಣ್ಣಿಸಲ್ ನೆಱೆವರಾರ್

ಭವನಂತೆ ಗಿರಿಸುತಾನ್ವಿತನೆಂದೆನಿಸಿ ಮನೋ
ಭವನಂತೆ ಮಕರಕೇತನನಾಗಿ ಕಮಲಸಂ
ಭವನಂತೆವೋಲ್ ಸರಸ್ವತಿಯರಸನೆಂಬ ಪೆಸರಂ ಪಡೆದು ಲೋಕಮಱಿಯೆ
ಭವನಲ್ಲ ಮೇಣ್ ಮೆಯ್ಯೊಳೊಪ್ಪಿರ್ದುವಾತ್ಮಸಂ
ಭವನಲ್ಲ ಲಾವಣ್ಯಲೀಲೆಯಿಂದೆಸೆದಬ್ಜ
ಭವನಲ್ಲ ಸಕಲಭುವನಾಶ್ರಯಂ ತಾನೆನಿಸುತರ್ಣವಂ ಕಣ್ಗೊಳಿಪುದು

ಅಡಿಗಡಿಗೆ ಬರ್ಪ ಬಲ್ದೆರೆಗಳೇ ರೋಗಂಗ
ಳೊಡನೇೞ್ವ ಕಲ್ಲೋಲಮಾಲೆಯೆ ಬೆದರ್ಕೆ ಸಂ
ಗಡಿಸಿರ್ಪ ಸುೞಿಗಳೇ ರಾಗಂಗಳೇಱಿೞಿವೆ ಪಿರಿತನಂ ಬಡತನ ವಲಂ
ಬಡಬಾನಲಂ ಚಿಂತೆ ದುಃಖಮೆ ಪೊನಲ್ ಬಾೞ್ಕೆ
ಗಡ ಗುಳ್ಳೆ ಬೆಳ್ನೊರೆಯೆ ಸಂತಸಂ ಸುಖಮೆ ಮೇಲ್
ಸಿಡಿವ ಸೀರ್ಪನಿಯೆನಲ್ ಶರಧಿ ಭವಶರಧಿಯಂ ಪೋಲ್ತೆಸೆದುದಚ್ಚರಿಯೆನೆ

**ಮುದ್ದಣ—ಶ್ರೀರಾಮ ಪಟ್ಟಾಭಿಷೇಕಂ**
(೧೯೦೦)

## ೧೫೪. ನೀತಿಮಂಜರಿ

ಅಱಿದರ್ ಪೞಿಗಂಜುವವೋಲ್
ಪೆಱರಂಜುವರೇ ವಿವೇಕಶೂನ್ಯರ್ ಧರೆಯೊಳ್
ತುಱುಗಿದ ತಮದಿಂದಳ್ಕುತೆ
ಪೆಱಸಾರ್ವುದು ಪೇೞ ಕಾಣ್ಬ ಕಣ್ಣೋ ಕುರುಡೋ!

ಮುಳಿದೊಡೆ ನೀಚರ್ ಕಲ್ಲೋ
ಬ್ಬಿಳಿವೋಲ್ ಬೇಱಾಗಿ ಮತ್ತೆ ಬೆರೆಯರ್ ಪೊನ್ನೋ
ಬ್ಬಿಳಿವೋಲ್ ಮೆಲ್ಲನೆ ಮಧ್ಯಮ
ರಳವಡುವರ್ ಪಾರದಂಬೊಲಾಗಳೆ ಸುಜನರ್

ಆವಗಮೊಡವೆರೆದೊಡಮೇಂ
ಗಾವಿಲರೊಳ್ ರೂಢಮೂಲಮಕ್ಕುಮೆ ನೇಹಂ
ಆವಗಮುಂಬುವೊಳಿರ್ದುಂ
ಪಾವಸೆ ಬೇರಿೞಿವುದಿಲ್ಲ ಪದ್ಮಾಕರದೊಳ್

ತಮ್ಮಿಂದೆ ಬಡವರಂ ಕಂ
ಡೆಮ್ಮೊಡಮೆಯೆ ಪಿರಿದೆನುತ್ತೆ ತೋಷಿಸಿ ತಿಳಿದರ್
ತಮ್ಮಿಂದೆ ಕಲ್ತರಂ ಕಂ
ಡುಮ್ಮಳಿಸುವರೇವುದೆಮ್ಮ ಕಲ್ವಿಯೆನುತ್ತುಂ

ಮನದೊಳಮೆಸಕದೊಳಂ ಮಾ
ತಿನೊಳಂ ಸತ್ಪುರುಷರೇಕರೂಪರಕಲುಷರ್
ಮನದೊಳ್ ನುಡಿಯೊಳ್ ಕಜ್ಜದೊ
ಳನೇಕರೂಪರ್ ದುರಾತ್ಮರಂತಶ್ಶುದ್ಧರ್

ಜನಕಕಟ ಸತ್ಪದಾರ್ಥದೊ
ಳನಾದರಂ ದುಷ್ಟವಸ್ತುಗಳೊಳನುರಾಗಂ
ಮನೆಮನೆಗೆ ಪೊತ್ತು ಸುತ್ತಿದೊ
ಡಿನಿವಾಲ್ ಬೆಲೆವಡೆಗುಮಿರ್ಪ ತಾಣದೊಳೇ ಕಳ್

ಉಡುದುಣ್ಣದೆ ಜಸಕೆಳಸದೆ
ಬಡನಂಟರ ಸಂಕಟಂಗಳಂ ಕಳೆಯದೆ ಕಾ
ಪ್ಪಿಡೆಯೆ ಜನಮರ್ಥಮಂ ಬ
ಯ್ತಿಡುವಂಗಂ ನಿರ್ಧನಂಗಮೇಂ ಗಡ ಭೇದಂ

ಬಡವನ ಚಾಗಮೆ ಚಾಗಂ
ಕಡುಗಲಿಯೆನಿಸಿದನ ಸೈರಣೆಯೆ ಸೈರಣೆ ಸಂ
ಗಡಿಸಿದ ಸಿರಿಗಂ ಬಜ್ಜೆಗ
ಮೆಡೆಯೆನಿಸಿದರೆಡೆಯೊಳೆಸೆವ ವಿನಯಮೆ ವಿನಯಂ

ಉಪಕೃತಿಯಂ ಸ್ಮರಿಸದೆ ತಮ
ಗಪಕೃತಿಯನೊಡರ್ಚಿದರ್ಗಮೊಲವಿಂದಂ ಮ
ತ್ತುಪಕೃತಿಯನೆಸಗಲೆಳಸುವ
ನೃಪಪುಂಗವರ್ಗಾರೊ ಬರ್ಪರೊರೆಗಂ ದೊರೆಗಂ

ಪನೆಗುತ್ತಮರ್ಕಳಿಣೆ ಕೆಳೆ
ತನದೊಳ್ ತೆಂಗಿಂಗೆ ಮಧ್ಯಮರ್ಕಳ್ ತೊಣೆ ನೋ
ಟ್ಪಿನಮಧಮರ್ಕಳ್ ಕೌಂಗಿಂ
ಗೆನಸುಂ ಪಾಸಟಿಯೆನುತ್ತೆ ಪಿರಿಯರ್ ಪೇಟ್ವರ್

ಕಡಲ ತಡಿಯಲ್ಲಿ ನೆಲಸಿ
ದೊರ್ಡಮುಱಿಸುಗುಮಲ್ತೆ ಬಾವಿಯಂ ಜನಮೇನುಂ

ಕುಡದನ ಪೇರ್ಸಿರಿಯಿಂ
ಕುಡುವನ ಬಡತನಮೆ ನೋಡೆ ಲೇಸೆನಿಸದೆ ಪೇೞ್

ಸೊಡರ್ಗುಡಿಯುಂ ಖಳರೊಲವುಂ
ಪಡಿಯೆಂಬರ್ ಪಿರಿಯರೆಣ್ಣೆಗುಡಿವನ್ನೆವರಂ
ಸೊಡರ್ಗುಡಿ ತೊಳಗುಗುಮರ್ಥಂ
ಬಡೆವನ್ನೆವರಂ ಖಳರ್ಕಳೊಲವಂ ತೋರ್ಪರ್

ಮಾಡುವುದು ದುರಾಚಾರಂ
ನೋಡಲೊಡಂ ಮನೆಯ ಮುಂದೆ ಬೃಂದಾವನಮಂ
ದೇಡಿಸದಿರ್ಕುಮೆ ಲೋಕಂ
ನೀಡುಂ ದುರ್ವೃತ್ತನೆನಿಸಿದುಪದೇಶಕನಂ

ಪೊಱಗಣ ಕಣ್ಣಿಂ ಫಲಮೇ
ನೞವೆಂಬೊಳಗಣ್ ವಿಕಾಸಮೊಂದದೊಡದಱಿಂ
ದಱಿದರೆ ಕಣ್ಣುಳ್ಳರ್ ಮೇ
ಣಱಿಯದರಾನನದೊಳಿರ್ಪುವಾರಯೆ ಪುಣ್ಗಳ್

ಎಡರ್ಗಳ ಭಯದಿಂದಧಮರ್
ತೊಡಗರ್ ಕಜ್ಜಮನೆ ಮಧ್ಯಮರ್ಕಳ್ ಬಿಡುವರ್
ತೊಡಗಿರ್ಪ ಕಜ್ಜಮಂ ಬಿಡ
ರೆಡರ್ಗಳ್ ಪಲವೆಯ್ದಿದಂದುಮುತ್ತಮರಿಳೆಯೊಳ್

ಇಲ್ಲದುದಾವುದು ಮನೆಯೊಳ್
ಸಲ್ಲಲಿತಗುಣಾವತಂಸೆಯಾದೊಡೆ ನಲ್ಲಳ್
ಎಲ್ಲಮುಮಿರ್ದುಂ ನಲ್ಲಳ್
ಪೊಲ್ಲಳ್ ತಾನಾದೊಡುಳ್ಳುದಾವುದು ಮನೆಯೊಳ್

ಉಪಕೃತಿಗೆಂದುಂ ಮುಂ ಪಡೆ
ದುಪಕಾರದ ಮಿತಿಯೆ ಮೇರೆಯೆಂಬರ್ ಕೃಪಣರ್
ಉಪಕೃತಿವಡೆವರ ಪಾತ್ರತೆ
ಯುಪಕಾರದ ಮಿತಿಗೆ ಮೇರೆಯೆಂಬರುದಾರರ್

ತಮಗೆ ಕಡುಸೊರ್ಕಿನಿಂ ಪೊ
ಲ್ಲಮೆಯಂ ಮಾಡಿದ ದುರಾತ್ಮರಂ ಕ್ಷಮೆಯೆಂಬು
ತ್ತಮಮಾದ ಕೆಯ್ದುವಿಂದಂ
ಶ್ರಮಮಿಲ್ಲದೆ ಗೆಲ್ಗೆ ವಿಮಲಮತಿಗಳ್ ಧರೆಯೊಳ್

ಪರರೈಸಿರಿಯಂ ಕಾಣುತೆ
ಪಿರಿದುಂ ಮಚ್ಚರಿಸುವಂಗೆ ಸರಸೀರುಹಮಂ
ದಿರೆಯಿಂದಿರೆ ತಾನುಂ ಮ
ಚ್ಚರಿಸುತ್ತಕ್ಕಂಗೆ ತೋಱಿಯುವನಂ ಬಿಡುವಳ್

ಆರ್. ನರಸಿಂಹಾಚಾರ್–ನೀತಿಮಂಜರಿ
(೧೯೩೫)

# ಕವಿ ಕಾವ್ಯ ವಿಚಾರ

೧. **ತಮಟಕಲ್ಲಿನ ಶಾಸನ—** ಕಾಲ ಸು. (೫೦೦)? ಇಲ್ಲಿಯುವರೆಗೆ ಪದ್ಯರೂಪದಲ್ಲಿ ದೊರೆತ ಮೊದಲನೆಯ ಶಾಸನ.

೨. **ನೃಪತುಂಗ—** (೮೧೫-೭೭) ರಾಷ್ಟ್ರಕೂಟ ದೊರೆ—ಜೈನ. 'ಕವಿ ರಾಜಮಾರ್ಗ' ಲಕ್ಷಣ ಗ್ರಂಥ. ಕನ್ನಡ ಸಾಹಿತ್ಯದಲ್ಲಿ ಇಲ್ಲಿಯ ವರೆಗೆ ಸಿಕ್ಕ ಮೊದಲನೆಯ ಗ್ರಂಥ. ಇದರಲ್ಲಿ ಕನ್ನಡನಾಡು ನುಡಿ ಯ ಬಗೆಗೆ ಸವಿಸ್ತಾರವಾದ ವಿವರಣೆಯಿದೆ.

೩. **ಪಂಪ—** (೯೪೦) ಜೈನ.ಇಲ್ಲಿಯುವರೆಗೆದೊರೆತ **ಕನ್ನಡ ಸಾಹಿತ್ಯ** ದಲ್ಲಿ'ಆದಿಕವಿ'ಯೆನಿಸಿಕೊಂಡಿದ್ದಾನೆ. ೧)ಆದಿಪುರಾಣ. ೨) ವಿಕ್ರ ಮಾರ್ಜುನ ವಿಜಯ (ಪಂಪಭಾರತ) ಇವನ ಗ್ರಂಥಗಳು.

೪. **ಪೊನ್ನ—** (೯೫೦) ಜೈನ.ಕವಿಚಕ್ರವರ್ತಿಯೆಂದು ಬಿರುದು ಪಡೆದ ಮೊದಲನೆ ಕವಿ. ೧) ಶಾಂತಿಪುರಾಣ. ೨) ಭುವನೈಕ ರಾಮಾ ಭ್ಯುದಯ (ರಾಮುಕಥೆ) ಇವನು ಬರೆದ ಗ್ರಂಥಗಳು.

೫. **ನಾಗವರ್ಮ** (೧)— (೯೯೦) ಸ್ಮಾರ್ತ ಬ್ರಾಹ್ಮಣ.೧)ಛಂದೋ ಬುಧಿ. ೨) **ಕರ್ನಾಟಕ ಕಾದಂಬರಿ ಇವನ** ಗ್ರಂಥಗಳು.

೬. **ರನ್ನ—** (೯೯೩) ಜೈನ. ಕವಿಚಕ್ರವರ್ತಿ ಬಿರುದು ಪಡೆದ ಎರಡನೆ ಕವಿ. ೧) ಸಾಹಸ ಭೀಮವಿಜಯ (ಗದಾಯುದ್ಧ) ೨) ಪರಶು ರಾಮ ಚರಿತೆ. ೩) ಚಕ್ರೇಶ್ವರ ಚರಿತೆ. ೪) ಅಜಿತ ಪುರಾಣ. ೫) ರನ್ನಕಂದ ಇವು ರನ್ನ ರಚಿತ ಗ್ರಂಥಗಳು.

೭. **ದುರ್ಗಸಿಂಹ—** (೧೦೩೦) ಬ್ರಾಹ್ಮಣ. **ಇವನು ಪಂಚತಂತ್ರ** ವೆಂಬ ಗದ್ಯಪ್ರಧಾನ ಚಂಪೂ ಗ್ರಂಥವನ್ನು ಬರೆದಿದ್ದಾನೆ.

೮. **ಶಾಂತಿನಾಥ—** ಸು. (೧೦೭೦) ಜೈನ. ಇವನು ಬರೆದ ಗ್ರಂಥ ಸುಕುಮಾರ ಚರಿತೆ.

೯. **ನಾಗಚಂದ್ರ**— ಸು. (೧೧೦೦) ಜೈನ. ಇವನಿಗೆ ಅಭಿನವ ಪಂಪನೆಂದೂ ಕರೆಯುವ ವಾಡಿಕೆ. ೧) ಮಲ್ಲಿನಾಥ ಪುರಾಣ. ೨) ಚಂದ್ರ ಚರಿತ ಪುರಾಣ (ಪಂಪ ರಾಮಾಯಣ) ಇವನ ಗ್ರಂಥಗಳು.

೧೦. **ನಯಸೇನ—** (೧೧೦೦) ಜೈನ. 'ಧರ್ಮಾಮೃತ'ವೆಂಬುದು ಇವನ ಗದ್ಯ ಪ್ರಚುರ ಚಂಪೂ ಗ್ರಂಥ.

೧೧. **ಬ್ರಹ್ಮಶಿವ**— ಸು. (೧೧೫೦) ಜೈನ. ೧) ಸಮಯ ಪರೀಕ್ಷೆ, ೨) ತ್ರೈಲೋಕ್ಯ ಚೂಡಾಮಣಿ ಸ್ತೋತ್ರ ಇವನ ಗ್ರಂಥಗಳು.

೧೨. **ಕರ್ಣಪಾರ್ಯ—** ಸು. (೧೧೫೦) ಜೈನ. ನೇಮಿನಾಥ ಪುರಾಣ ಇವನು ಬರೆದ ಗ್ರಂಥ.

೧೩. **ನಾಗವರ್ಮ** (೨) — ಸು. (೧೧೫೦) ಜೈನ. ೧) ಭಾಷಾ ಭೂಷಣ. (೨) ಕಾವ್ಯಾವಲೋಕನ. ೩) ವಸ್ತುಕೋಶ ಇವನ ಗ್ರಂಥಗಳು.

೧೪. **ಹರಿಹರ**— ಸು. (೧೨೦೦) ವೀರಶೈವ. ಕನ್ನಡ ಸಾಹಿತ್ಯದ ಸೀಮಾ ಪುರುಷರಲ್ಲೊಬ್ಬನು. ೧) ಗಿರಿಜಾ ಕಲ್ಯಾಣ. ೨) ಪಂಪಾ ಶತಕ. ೩) ರಕ್ಷಾಶತಕ. ೪) ಮುಡಿಗೆ ಅಷ್ಟಕ. ೫) ಶಿವಗಣದ ರಗಳೆಗಳು ಇವನ ಗ್ರಂಥಗಳು.

೧೫. **ಕೆರೆಯ ಪದ್ಮರಸ**— ಸು. (೧೨೦೦) ವೀರಶೈವ. ದೀಕ್ಷಾ ಬೋಧೆ ಇವನ ಗ್ರಂಥ.

೧೬. **ರಾಘವಾಂಕ—** ಸು. (೧೨೨೫) ವೀರಶೈವ. ೧) ಹರಿಶ್ಚಂದ್ರ ಕಾವ್ಯ. ೨) ಸಿದ್ಧರಾಮ ಪುರಾಣ. ೩) ವೀರೇಶ್ವರ ಚರಿತೆ. ೪)

ಶರಭ ಚಾರಿತ್ರ. ೫) ಹರಿಹರ ಮಹತ್ವ ಇವನ ಗ್ರಂಥಗಳು. ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಮತ್ತು ಸ್ವತಂತ್ರವಾದ ದೇಶೀಯ ಷಟ್ಪದಿ ಛಂದಸ್ಸನ್ನು ಬಳಕೆಯಲ್ಲಿ ತಂದು ಮಾರ್ಗದರ್ಶಕನಾದವನು.

೧೬. **ನೇಮಿಚಂದ್ರ**— ಸು. (೧೨೦೦) ಜೈನ. ೧) ಲೀಲಾವತಿ. ೨) ನೇಮಿನಾಥ ಪುರಾಣಗಳನ್ನು ಬರೆದಿದ್ದಾನೆ.

೧೭. **ರುದ್ರಭಟ್ಟ**— ಸು. (೧೨೦೦) ಬ್ರಾಹ್ಮಣ. ಜಗನ್ನಾಥ ವಿಜಯ ಇವನ ಗ್ರಂಥ.

೧೮. **ಬೊಪ್ಪಣ ಪಂಡಿತ**— ಸು. (೧೨೦೦) ಜೈನ. ೧) ಬೆಳ್ಗೊಳದ ಗೊಮ್ಮಟೇಶ್ವರ ಸ್ತುತಿ. ೨) ನಿರ್ವಾಣ ಲಕ್ಷ್ಮೀಪತಿ ನಕ್ಷತ್ರ ಮಾಲಿಕೆ. ೩) ಸುಜನೋತ್ತಂಸ ನೀತಿಮಂಜರಿಗಳನ್ನು ಬರೆದಿದ್ದಾನೆ.

೨೦. **ಅಗ್ಗಳ**— ಸು. (೧೨೦೦) ಜೈನ. ಚಂದ್ರಪ್ರಭ ಪುರಾಣ ಇವನು ಬರೆದ ಗ್ರಂಥ.

೨೧. **ಪಾಲ್ಕುರಿಕೆಸೋಮನಾಥ**— ಸು. (೧೨೦೦) ವೀರಶೈವ. ೧) ಶೀಲ ಸಂಪಾದನೆ ೨) ಸೋಮೇಶ್ವರ ಶತಕ. ೩) ಸಹಸ್ರ ಗಣ ನಾಮ. ೪) ಪಂಚರತ್ನ. ೫) ಸದ್ಗುರು ರಗಳೆ. ೬) ಚನ್ನಬಸವ ಸ್ತೋತ್ರ — ಈ ಕೃತಿಗಳನ್ನು ರಚಿಸಿದ್ದಾನೆ.

೨೨. **ಆಚಣ್ಣ**— ಸು. (೧೨೦೦) ಜೈನ. ೧) ವರ್ಧಮಾನ ಪುರಾಣ. ೨) ಶ್ರೀಪದಾಶೀತಿ ಈ ಕೃತಿಗಳನ್ನು ವಿರಚಿಸಿದ್ದಾನೆ.

೨೩. **ಬಂಧುವರ್ಮ**— ಸು. (೧೨೦೦) ಜೈನ. ೧) ಹರಿವಂಶಾಭ್ಯುದಯ. ೨) ಜೀವಸಂಬೋಧನೆಗಳನ್ನು ಬರೆದಿದ್ದಾನೆ.

೨೪. **ದೇವಕವಿ**— ಸು. ೧೨೨೫) ಬ್ರಾಹ್ಮಣ. ಕುಸುಮಾವಳಿ ಎಂಬ ಗ್ರಂಥವನ್ನು ಬರೆದಿದ್ದಾನೆ.

೨೫. **ಪಾರ್ಶ್ವಪಂಡಿತ**— ಸು. (೧೨೨೫) ಜೈನ. ಪಾರ್ಶ್ವನಾಥ ಪುರಾಣ ಬರೆದಿದ್ದಾನೆ.

೨೬. **ಜನ್ನ**— ಸು. (೧೨೨೫) ಜೈನ. ಕವಿಚಕ್ರವರ್ತಿಯಾದ ಮೂರನೆ ಕವಿ. ೧) ಅನಂತನಾಥ ಪುರಾಣ. ೨) ಯಶೋಧರ ಚರಿತೆ ಎಂಬ ಗ್ರಂಥಗಳನ್ನು ಬರೆದಿದ್ದಾನೆ.

೨೭. **ಸೋಮರಾಜ**— ಸು. (೧೨೨೫) ವೀರಶೈವ. ಬರೆದ ಗ್ರಂಥ : ಶೃಂಗಾರ ಸಾರ ಅಥವಾ ಉದ್ಭಟ ಕಾವ್ಯ.

೨೮. **೨ನೆಯ ಗುಣವರ್ಮ**— ಸು. (೧೨೨೫) ಜೈನ. ಪುಷ್ಪದಂತ ಪುರಾಣ ಇವನ ಗ್ರಂಥ.

೨೯. **ಕಮಲಭವ**— ಸು. (೧೨೩೫) ಜೈನ. ಶಾಂತೀಶ್ವರ ಪುರಾಣ ಇವನ ಗ್ರಂಥ.

೩೦. **ಆಂಡಯ್ಯ**— ಸು. (೧೨೩೫) ಜೈನ. ಗ್ರಂಥ: ಕಬ್ಬಿಗರಕಾವ.

೩೧. **ಚೌಂಡರಸ**— ಸು. (೧೩೦೦) ಬ್ರಾಹ್ಮಣ. ಗ್ರಂಥಗಳು: ೧) ಅಭಿನವ ದಶಕುಮಾರ ಚರಿತೆ. ೨) ನಳಚರಿತೆ.

೩೨. **ಭೀಮಕವಿ**— ಸು. (೧೩೬೯) ವೀರಶೈವ. ಬರೆದ ಗ್ರಂಥಗಳು: ೧) ಬಸವ ಪುರಾಣ. ೨) ಭೀಮಕವೀಶ್ವರ ರಗಳೆ.

೩೩. **ಮಧುರ**— ಸು. (೧೩೮೫) ಜೈನ. ಗ್ರಂಥಗಳು: ೧) ಧರ್ಮ ನಾಥ ಪುರಾಣ. ೨) ಗೊಮ್ಮಟ ಸ್ತುತಿಯಷ್ಟಕ.

೩೪. **ಪದ್ಮಣಾಂಕ**— ಸು. (೧೩೮೫) ವೀರಶೈವ. ಬರೆದ ಗ್ರಂಥ: ಪದ್ಮರಾಜ ಪುರಾಣ.

೩೫. **ಭಾಸ್ಕರಕವಿ**— (೧೪೨೪) ಜೈನ. ಜೀವಂಧರ ಚರಿತೆಯನ್ನು ಬರೆದಿದ್ದಾನೆ.

೩೬. **ಚಾಮರಸ**—(೧೪೩೦) ವೀರಶೈವ. ಬರೆದ ಕಾವ್ಯ - ಪ್ರಭುಲಿಂಗ ಲೀಲೆ. ಈ ಕಾವ್ಯವು ಸಂಸ್ಕೃತ, ಮರಾಠಿ ಮತ್ತು ತೆಲುಗು ಭಾಷೆಗಳಲ್ಲಿ ವಿವಿಧ ಕವಿಗಳಿಂದ ಅನುವಾದಿಸಲ್ಪಟ್ಟಿದೆ.

೩೭. **ಕುಮಾರವ್ಯಾಸ**— (೧೪೩೦) ಬ್ರಾಹ್ಮಣ. ಕನ್ನಡ ಭಾರತದ ಮೊದಲ ಹತ್ತು ಪರ್ವಗಳನ್ನು ಬರೆದಿದ್ದಾನೆ.

೩೮. **ಮಗ್ಗೆಯ ಮಾಯಿದೇವ**— (೧೪೩೦) ವೀರಶೈವ. ಬರೆದ ಗ್ರಂಥಗಳು: (೧) ಅನುಭವಸೂತ್ರ (೨) ಶತಕತ್ರಯ (೩) ಪ್ರಭು ಗೀತೆ (೪) ಏಕೋತ್ತರ ಶತಸ್ಥಲದ ಷಟ್ಪದಿ (೫) ಮಗ್ಗೆಯ ಮಾಯಿದೇವ ವಚನ (೬) ಷಟ್ಸ್ಥಲ ಗದ್ಯ.

೩೯. **ಗುರುಬಸವ**— (೧೪೩೦) ವೀರಶೈವ. ಕಾವ್ಯಕೃತಿಗಳು: (೧) ಶಿವಯೋಗಾಂಗ ಭೂಷಣ (೨) ಸದ್ಗುರು ರಹಸ್ಯ (೩) ಕಲ್ಯಾಣೇಶ್ವರ (೪) ಸ್ವರೂಪಾಮೃತ. (೫) ವೃಷಭ ಗೀತೆ (೬) ಅವಧೂತ ಗೀತೆ (೭) ಮನೋವಿಜಯ ಕಾವ್ಯ.

೪೦. **ಚಂದ್ರಕವಿ**— (೧೪೩೦) ವೀರಶೈವ ಗ್ರಂಥಗಳು (೧) ವಿರೂಪಾಕ್ಷಸ್ಥಾನ (೨) ಗುರುಮೂರ್ತಿ ಶಂಕರ ಶತಕ.

೪೧. **ವಿಜಯಣ್ಣ**— (೧೪೪೮) ಜೈನ. ಗ್ರಂಥ: ದ್ವಾದಶಾನುಪ್ರೇಕ್ಷೆ.

೪೨. **ಬೊಮ್ಮರಸ**— (೧೪೫೦) ವೀರಶೈವ. ಕಾವ್ಯ ಗ್ರಂಥ: ಸೌಂದರ ಪುರಾಣ.

೫೩. **ಚತುರ್ಮುಖ ಬೊಮ್ಮರಸ**— (೧೫೦೦) ವೀರಶೈವ. ಬರೆದ ಗ್ರಂಥ: ರೇವಣ ಸಿದ್ಧೇಶ್ವರ ಪುರಾಣ.

೪೪. **ಕುಮಾರ ವಾಲ್ಮೀಕಿ**— (೧೫೦೦) ಬ್ರಾಹ್ಮಣ; ಕೃತಿಗಳು: (೧) ತೊರವೆ ರಾಮಾಯಣ (೨ ಮೈರಾವಣನ ಕಾಳಗ.

೪೫. **ಸಿಂಗಿರಾಜ**––(೧೫೦೦) ವೀರಶೈವ. ಸಿಂಗಿರಾಜ ಪುರಾಣ ಅಥವಾ ಮಲ ಬಸವರಾಜ ಚರಿತ್ರೆ.

೪೬. **ಮುಪ್ಪಿನ ಷಡಕ್ಷರಿ**— [೧೫೦೦] ವೀರಶೈವ. ಕೈವಲ್ಯ ಪದ್ಧತಿ. ಸುಬೋಧಸಾರ.

೪೭. **ನಿಜಗುಣ ಶಿವಯೋಗಿ**— ಸು. (೧೫೦೦) ವೀರಶೈವ. ಕಾವ್ಯ ಕೃತಿಗಳು : (೧) ಅನುಭವಸಾರ (೨) ಅರುವತ್ತಮೂರರತ್ರಿಪದಿ (೩) ಕೈವಲ್ಯ ಪದ್ಧತಿ (೪) ಪರಮಾನುಭವಬೋಧೆ (೫) ಪರಮಾರ್ಥಗೀತೆ (೬) ಪರಮಾರ್ಥ ಪ್ರಕಾಶಿಕೆ (೭) ವಿವೇಕ ಚಿಂತಾಮಣಿ.

೪೮. **ಸುರಂಗ ಕವಿ**-– [೧೫೦೦] ವೀರಶೈವ. ಕಾವ್ಯ. ತ್ರಿಷಷ್ಟಿಪುರಾತನರ ಚರಿತ್ರೆ.

೪೯. **ಮಂಗರಸ**— [೧೫೦೮.] ಜೈನ. ಗ್ರಂಥಗಳು : (೧) ಜಯನೃಪ ಕಾವ್ಯ (೨) ಪ್ರಭಂಜನ ಚರಿತೆ (೩) ಶ್ರೀಪಾಲ ಚರಿತೆ (೪) ನೇಮಿಜಿನೇಶ ಸಂಗತಿ (೫) ಸಮ್ಯಕ್ತ್ವ ಕೌಮುದಿ (೬) ಸೂಪ ಶಾಸ್ತ್ರ.

೫೦. **ಗುಬ್ಬಿ ಮಲ್ಲಣಾರ್ಯ**— (೧೫೧೩) ವೀರಶೈವ. ಗ್ರಂಥಗಳು : (೧) ಭಾವ ಚಿಂತಾರತ್ನ (೨) ವೀರಶೈವಾಮೃತ ಪುರಾಣ.

೫೧. **ಚಾಟುವಿಠಲನಾಥ**-- (೧೫೩೦) ಬ್ರಾಹ್ಮಣ. (೧) ಕನ್ನಡ ಭಾಗವತ (೨) ಭಾರತ (ಕೆಲವು ಭಾಗ.)

೫೨. **ಶ್ರೀಪಾದರಾಯರು**— ಬ್ರಾಹ್ಮಣ. ಕೀರ್ತನೆಗಳು.

೫೩. **ವ್ಯಾಸರಾಯರು**— (೧೫೨೫) ಬ್ರಾಹ್ಮಣ. ಕೀರ್ತನೆಗಳು.

೫೪. **ಪುರಂದರದಾಸ**— (೧೫೪೦) ಬ್ರಾಹ್ಮಣ. ಕೀರ್ತನೆಗಳು.

೫೫. **ಕನಕದಾಸ**— (೧೫೫೦) ಬೇಡ. (೧) ಕೀರ್ತನೆಗಳು (೨) ಮೋಹನ ತರಂಗಿಣಿ (೩) ರಾಮಧಾನ್ಯ ಚರಿಗೆ (೪) ನಳಚರಿತೆ (೫) ಹರಿಭಕ್ತಿಸಾರ.

೫೬. **ವಾದಿರಾಜ**— (೧೫೭೦) ರಾಘವೇಂದ್ರ ಸ್ವಾಮಿ (೧೫೭೦) ಗೋಪಾಲದಾಸ (೧೭೩೫) ವಿಜಯದಾಸ (೧೭೨೫) ಮೋಹನ ದಾಸ [೧೭೫೦] ಜಗನ್ನಾಥದಾಸ [೧೭೭೫] ಬಾಹ್ಮಣರು : ದಾಸ ಕೂಟ ಸಾಹಿತ್ಯದ ಪ್ರಮುಖ ಕೀರ್ತನೆಗಳ ಕೃತಿಕಾರರು.

೫೭. **ಸರ್ಪಭೂಷಣ ಶಿವಯೋಗಿಗಳು**— [೧೭೦೦] ನೈಲಾರದ ಬಸವಲಿಂಗ [೧೬೦೦] ಘನಮಠದಾರ್ಯರು(೧೮೩೦)ಮಹಾಂತ ಶಿವಯೋಗಿಗಳು [೧೬೨೩—೧೬೫೯] ವೀರಶೈವರು ; ಕೈವಲ್ಯ ದರ್ಪಣಕಾರರು.

೫೮. **ರತ್ನಾಕರವರ್ಣಿ**— (೧೫೫೭) ಜೈನ. ಭರತೇಶ ವೈಭವ [೨] ಅಪರಾಜಿತೇಶ್ವರ ಶತಕ [೩] ತ್ರಿಲೋಕ ಶತಕ [೪] ರತ್ನಾಕರಾ ಧೀಶ್ವರ ಶತಕ (೫) ಹಾಡುಗಳು ಇವನ ಗ್ರಂಥಗಳು. :

೫೯. **ವಿರೂಪಾಕ್ಷ ಪಂಡಿತ**— [೧೫೮೫] ವೀರಶೈವ. ಗ್ರಂಥ : ಚನ್ನ ಬಸವ ಪುರಾಣ.

೬೦. **ಸಿದ್ಧನಂಜೇಶ**—(೧೬೫೦)ವೀರಶೈವ. ಗ್ರಂಥ: ಗುರುರಾಜ ಚರಿತೆ.

೬೧. **ಷಡಕ್ಷರ ದೇವ**— (೧೬೫೫) ವೀರಶೈವ. ಬರೆದ ಗ್ರಂಥಗಳು : [೧] ರಾಜಶೇಖರ ವಿಲಾಸ [೨] ಬಸವರಾಜ ವಿಜಯ [೩] ಶಬರ ಶಂಕರ ವಿಲಾಸ [೪] ವೀರಭದ್ರ ದಂಡಕ (೫) ಕವಿ ಕರ್ಣ ರಸಾಯನ [ಸಂಸ್ಕೃತದಲ್ಲಿ].

೬೨. ಹೊನ್ನಮ್ಮ (೧೬೮೦) ಸಂಚಿಯ ಊಳಿಗದವಳು. ಗ್ರಂಥ: ಹದಿ ಬದೆಯ ಧರ್ಮ.

೬೩. **ಲಕ್ಷ್ಮೀಶ**-- [೧೭೦೦] ಬ್ರಾಹ್ಮಣ. ಜೈಮಿನಿ ಭಾರತ ಇವನ ಗ್ರಂಥ.

೬೪. **ಸರ್ವಜ್ಞ**— [೧೭೦೦] ವೀರಶೈವ. ತ್ರಿಪದಿಯಲ್ಲಿ ವಚನಗಳನ್ನು ರಚಿಸಿದ್ದಾನೆ.

೬೫. **ಬಸವಪ್ಪ ಶಾಸ್ತ್ರಿ**— [೧೯೦೦] ವೀರಶೈವ.'ಅಭಿನವ ಕಾಳಿದಾಸ' ಎಂಬ ಪ್ರಶಸ್ತಿ ಪಡೆದವ. ಬರೆದ ಗ್ರಂಥಗಳು : [೧] ದಮಯಂತೀ ಸ್ವಯಂವರ [೨] ಶಾಕುಂತಳಾ ನಾಟಕ [೩] ಚಂಡ ಕೌಶಿಕ ನಾಟಕ [೪] ಭರ್ತೃಹರಿ ಸುಭಾಷಿತ [೫] ನೀತಿಸಾರ ಸಂಗ್ರಹ (೬) ಉತ್ತರರಾಮ ಚರಿತ ನಾಟಕ [೭] ಶೂರಸೇನ ಚರಿತ ನಾಟಕ [೮] ರೇಣುಕಾರ್ಯ ವಿಜಯ (೯) ಶಾರದಾ ಸ್ತೋತ್ರ (ಸಂಸ್ಕೃತದಲ್ಲಿ).

೬೬. **ಮುದ್ದಣ**— (೧೯೦೦) ಬ್ರಾಹ್ಮಣ. ಈತನ ಹೆಸರು ನಂದಳಿಕೆ ಲಕ್ಷ್ಮೀನಾರಾಯಣಪ್ಪ. ಬರೆದ ಗ್ರಂಥಗಳು : (೧) ಶ್ರೀರಾಮ ಪಟ್ಟಾಭಿಷೇಕ. (೨) ಅದ್ಭುತ ರಾಮಾಯಣ [೩] ರಾಮಾಶ್ವ ಮೇಧ. ಮುಂತಾದುವುಗಳು.

೬೭. **ಆರ್.ನರಸಿಂಹಾಚಾರ್**– (೧೯೩೫) ಬ್ರಾಹ್ಮಣ. ಕನ್ನಡ ಸಾಹಿತ್ಯದ ರೂಪರೇಷೆ ಸ್ವರೂಪಗಳನ್ನು ವಿಮರ್ಶೆ ಮತ್ತು ಚರಿತ್ರಾತ್ಮಕ ದೃಷ್ಟಿಯಿಂದ ಬಯಲಿಗೆ ತಂದು ಕನ್ನಡನಾಡು ನುಡಿ ಸಾಹಿತ್ಯಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದ ಮಹನೀಯರು. ಕನ್ನಡ ಕವಿ ಚರಿತೆಯನ್ನು ಮೂರು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ನೀತಿ ಮಂಜರಿ, ಶಾಸನಪದ್ಯ ಮಂಜರಿ, ನಗೆಗಡಲು ಮುಂತಾದ ಗ್ರಂಥ ಗಳನ್ನು ಬರೆದು ಪ್ರಕಟಿಸಿದ್ದಾರೆ.

———

# ಶಬ್ದಕೋಶ

## ೧. ತಮುಟಕಲ್ಲಿನ ಶಾಸನ

ಬಿಣ - [ಸಂ] ಫಣ; ಹೆಡೆ
ಅಂತು - ಅಂತೆ. ಪೋಲ್.
ಭೋಗಿ - ಹೆಡೆಯುಳ್ಳ, ವಿಲಾಸಿಯಾದ
ಮಣಿವಿಲ್ - ಮಣಿಯಿಲ್ಲ
ಕೋಲ್ - ಬಾಣ
ಅಸಿತ - ಕಪ್ಪಾದ
ಪ್ರವರ - ಅತಿಶ್ರೇಷ್ಠ

## ೨. ಶ್ರವಣಬೆಳಗೊಳದ ಯತಿಗಳು

ಯುಗ್ಮ - ಎರಡು
ವಲ್ - ನಿಶ್ಚಯವಾಗಿ
ಅಳ್ಕಲ್ - ಕಡಿಮೆಯಾಗಲು
ವೆಳ್ಗೊಳ - ಬೆಳ್ಗೊಳ
ಅಶನ - ಅನ್ನ
ಅಪುನರ್ಭವ - ಮತ್ತೆ ಹುಟ್ಟಿಲ್ಲದ
ಎಱೆ - ಒಡೆಯ
ಕಟ್ವಿಪ್ಪಿನಸುೞ್ - [ಸಂ] ಕಟವಪ್ರ
ನೋಂತು - ವ್ರತಾಚರಣೆ ಮಾಡಿ
ನೆಱೆ - ಪೂರ್ಣ, ಹೆಚ್ಚಿನ
ಕಱೆಯಿಲ್ - ಕಳಂಕವಿಲ್ಲದ
ಸಸಿಮತಿ - ಶುಭ್ರಮತಿ
ಆಱು - ತ್ರಿಳಿ
ತೊಱೆ - ಬಿಟ್ಟುಬಿಡು
ಸುರಚಾಪ - ದೇವಧನಸ್ಸು, ಕಾಮನಬಿಲ್ಲು
ವಿದ್ಯುಲ್ಲತೆ - ಕೋಲ್ಮಿಂಚು
ಪರಮಾರ್ಥಂ - ಅತಿಶಯವಾಗಿ
ಧರಣಿಯುಳಿರವಾನ್ - ಭೂಮಿಯಲ್ಲಿರುವುದಿಲ್ಲ
ಗೈ - ಆಚರಿಸು, ಮಾಡು

## ೩. ಬಾದಾಮಿಯ ಶಾಸನ

ಕಲಿ - ಶೂರ
ಮಾಧವ - ಲಕ್ಷ್ಮೀರಮಣ

ವಿಷ್ಣು

ಪೆಱಂ - ಬೇರೆಯುವನು

ಕೆಟ್ಟೋದೇನ್ - ಕೇಡೇನಾಗುವುದು?

ಪೊಲ್ಲದು - ಹೊಲ್ಲದು, ಕೆಟ್ಟುದು.

ಸಿಂಘ - ಸಂ—ಸಿಂಹ

ಅಹಿತರ್ - ಶತ್ರುಗಳು

## ನೃಪತುಂಗ-ಕವಿರಾಜಮಾರ್ಗ

### ೪. ಕನ್ನಡನಾಡು

ವರಂ - ವರೆಗೆ

ವಸುಧಾವಳಯ - ಭೂಮಂಡಲ

ವಿಲೀನ - ಅಂತರ್ಗತವಾದ

ವಿಶದ - ವಿಸ್ತಾರವಾದ

ವಿಷಯ - ದೇಶ

ಕಿಸುವೊಳಲ್ - ಪಟ್ಟದಕಲ್ (ಈಗಿನ)

ಕೊಪಣನಗರ - ಕೊಪ್ಪಳ

ಪುರಿಗೆಱೆ - ಲಕ್ಷ್ಮೇಶ್ವರ (ಈಗಿನ)

ಸದಭಿಸ್ತುತ- ಸಜ್ಜನರಿಂದ ಹೆಚ್ಚಾಗಿ ಹೊಗಳಲ್ಪಟ್ಟ

ಆರಯಲುಂ - ವಿಚಾರಿಸಲು

ಆರ್ಪರ್ - ಸಮರ್ಥರು

ಕುಱಿತು - ಅಪೇಕ್ಷಿಸಿ, ಉದ್ದೇಶಿಸಿ

ಪರಿಣತ - ಅನುಭವವುಳ್ಳ

ಕಿಱುಮಕ್ಕಳ್ - ಸಣ್ಣಮಕ್ಕಳು

ಮೂಮೂಗರು - ಮಹಾ ಮೂಕರು

ಅಱಿಪಲ್ - ತಿಳಿಸಲು

ಪೂಣಿಗರ್ - ಪ್ರತಿಜ್ಞೆಯಾಂತವರು

ತಾಣ - ಸಂ—ಸ್ಥಾನ

### ೫. ಕವಿಕಾವ್ಯ

ನೆಱೆವಾತಂ - ಸಮರ್ಥನಾದವನು

ಕವಿವೃಷಭರ್ಕಳ್ - ಕವಿಶ್ರೇಷ್ಠರು

ದುಃಖೋಪಾತ್ತಂ - ದುಃಖದಿಂದ ಕೂಡಿರುವಂಥ

ಸಾಮಯಿಕ - ಕಾಲಕ್ಕೆ ತಕ್ಕ; ಸಂಪ್ರದಾಯದ

ವಿವಿಕ್ತ - ಬೇರೆಬೇರೆಯಾದ

ಉದ್ಯುಕ್ತ - ಕಾರ್ಯಶೀಲನು

ಕಲ್ಪಾಂತಸ್ಥಾಯಿ - ಯುಗ ಯುಗಾಂತರವರೆಗೂ ನಿಲ್ಲುವ
ವರ್ತಿತ - ಕೂಡಿರುವ

## ಪಂಪ ಭಾರತ

### ೬. ಕರ್ಣನ ಜನ್ಮ

ಪೃಚ್ಛವಣಂ - ಪರೀಕ್ಷೆ
ಶಫರ - ಮೀನ
ಉಚ್ಚಳಿತ - ಮೇಲಕ್ಕೆ ಹಾರುವ
ತರತ್ - ಚಲಿಸುವ
ತರಂಗೆ - ತೆರೆಗಳುಳ್ಳವಳು
ಮಿಂದು - ಸ್ನಾನಮಾಡಿ
ಇನ - ಸೂರ್ಯ
ದೊರೆಯನೆ - ಸರಿಸಮಾನನಾದ
ಆಕ್ಕೆ - ಆಗಲಿ
ದಶಶತಕಿರಣ - ಸೂರ್ಯ
ನಭ - ಆಕಾಶ
ಅರವಿಂದಬಾಂಧವ - ಕಮಲಪ್ರಿಯ, ಸೂರ್ಯ
ಕೊಡುಗೂಸು - ಕನ್ಯೆ
ಕಿಡಿನುಡಿದು - ಕೆಟ್ಟಮಾತಾಡಿ
ಏದೊರೆಯದು - ಎಷ್ಟರದು?
ಮರುಳಿ - ಹುಚ್ಚಿ
ಒದವು - ಉಂಟಾಗು
ಒಗೆತರು - ಹುಟ್ಟು, ಜನ್ಮಿಸು
ಕುಂಡಲ - ಕರ್ಣಾಭರಣ
ತೊಡರ್ದಿರು - ಅಂಟಿಕೊಳ್ಳು, ಕೂಡು, ಹೊಂದಿಕೊಳ್ಳು
ಒಡರಿಸು - ಉಂಟುಮಾಡು
ನಿಧಾನ - ನಿಧಿ, ಧನದರಾಶಿ
ಒಯ್ಯನೊಯ್ಯನೆ - ಮೆಲ್ಲಮೆಲ್ಲನೆ
ತಬ್ಬಿಕೈಸು - ಆಲಿಂಗಿಸು, ಅಪ್ಪಿಕೊಳ್ಳು
ಬಾಳದಿನೇಶ - ಬಾಲಸೂರ್ಯ
ಫಣೀಂದ್ರಾಳಯ - ಪಾತಾಳ
ಮೇಳಿಸಿದಪ್ಪುದು - ಆಕರ್ಷಿಸುವುದು
ಬೊದಿಲ್ಲನೆ - ದೊಡಮ್ಮನೆ
ಆದಂ - ಹೆಚ್ಚಾಗಿ, ವಿಶೇಷವಾಗಿ
ಒಸೆದಂ - ಸಂತೋಷಗೊಂಡನು

ಸುತನ ಸೂತಕ - ಮಗನ ಹುಟ್ಟು
ಅಗುಳ್ದ್ - ತೋಡು, ಅಗಿ
ಕುಟಿ - ಕುಣಿ, ತಗ್ಗು
ಅಟವಿ - ಶಕ್ತಿ, ಸಾಮರ್ಥ್ಯ
ಆಲೋಕಾಂತಂಬರಂ - ದಿಕ್ಕು ದಿಕ್ಕಿಗೂ
ಬಳಯೆ - ಹಬ್ಬಲು
ಉಪಾಂತ - ಹತ್ತಿರ, ಸಮೀಪ
ಜೇವೊಡೆಯೆ - ಬಿಲ್ಲಿಗೆಹಗ್ಗವನ್ನೆಳೆಯಲು; ಧನುಷ್ಟಂಕಾರಮಾಡಲು
ಸಿಡಿಲ್+ಪೊಡೆ - ಸಿಡಿಲಬಡೆ
ಅಟ್ಟಿಮುಟ್ಟಿ - ಬೆನ್ನು ಹತ್ತಿತಾಗಿ
ಆದ ಎಡರಂ - ಉಂಟಾದ ಕಷ್ಟವನ್ನು
ಎಡರದೆ - ಆತಂಕವಿಲ್ಲದೆ
ಬುಧ - ಪಂಡಿತ
ಚಾಗ - ಸಂ–ತ್ಯಾಗ
ಕೋಡು - ದಾನ [ಕೊಡು-ದಾತು]
ಬೀರ - ವೀರ
ಭುವನಭವನಕ್ಕೆಲ್ಲಂ - ಸಮಸ್ತ ಭೂಮಂಡಲಕ್ಕೂ
ಪೊಗಟ್ತೆ - ಹೊಗಳಿಕೆ
ನೆಗಟ್ತೆ - ಯಶಸ್ಸು, ಕೀರ್ತಿ
ಬರಿ - ಪಾರ್ಶ್ವ, ಪಕ್ಕೆ
ಈಡಾಡು - ಬಿಸುಡು
ಉಗಿದು - ಕಿತ್ತು
ವಟು - ಬ್ರಹ್ಮಚಾರಿ
ಅರಿ - ಕತ್ತರಿಸು
ರಾಧೇಯ - ಕರ್ಣ, ರಾಧೆಯ ಸಾಕುಮಗ
ಸೆರಗು - ಭಯ

## ೯. ಕೃಷ್ಣನ ಭೇದ

ರಥಾಂಗ - ಚಕ್ರ
ಮಗುಟ್ವೆ - ತಿರುಗುವೆಯಂತೆ
ದಲ್ - ನಿಶ್ಚಯವಾಗಿ
ಅಬ್ಬೆ - ಅವ್ವ, ತಾಯಿ
ಅಮ್ಮ - ಅಪ್ಪ
ಅಹರ್ಪತಿ - ಸೂರ್ಯ
ಪಡೆಮಾತು - ಲೋಕೋಕ್ತಿ
ನಿನತೆ - ನಿನ್ನದೆ
ಬಾಷ್ಪವಾರಿ - ಕಣ್ಣೀರು
ಪುಳಕ - ರೋಮಾಂಚನ
ಪೊಣ್ಮೆ - ಹೊರಡಲು, ಹುಟ್ಟಲು

ಅಂಪಿನಂ - ತಾಳುವಂತೆ
ಕೃತಮಂ - ಉಪಕಾರವನ್ನು
ಪೆಱಗಿಕ್ಕಿ - ಹಿಂದೆಹಾಕಿ ಅಲಕ್ಷಿಸಿ
ನಣ್ಪು - ಬಾಂಧವ್ಯ
ನೆತ್ತ - ಪಗಡೆಯ ಆಟ
ಲಂಬಣಂ - [ಮುತ್ತಿನ] ಹಾರವು
ಕೇಡು - ಬೀಳುವಿಕೆ
ಏವಂ ಇಲ್ಲದೆ - ಮನಸ್ತಾಪ ವಿಲ್ಲದೆ
ಬಿಸುಟ್ಟು - ಬೀಸಾಡಿ, ಬಿಟ್ಟು ಬಿಟ್ಟು
ಬೇಡ - (೧)ಬೇಡರವನು ಬೇಡಾದವನು

## ೧೦. ಕರ್ಣನ ನಿಶ್ಚಯ

ಅಂಗರಾಜ - ಕರ್ಣ
ಆಜಿ - ಯುದ್ಧ
ಮೇಲ್ಮಲೆಗೆಯ್ - ಹುರುಡಿಸು, ಅಸೂಯೆಮಾಡು
ಪೊರೆ - ಕಾಪಾಡು
ಕ್ರೊಕ್ಕರಿಸದೆ - ಹಿಂಜರಿಯದೆ
ತವಿಪೆಂ - ನಾಶಮಾಡಿ ಕೊಳ್ಳುವೆನು
ಅನ್ನರಂ - ನನ್ನಂಥವರನ್ನು
ಅಕ್ಕಱು - ಪ್ರೀತಿ, ಪ್ರೇಮ
ತಱಿಸಂದು - ನಿಶ್ಚಯಿಸಿ
ಒಡ್ಡು - ಸಮೂಹ
ಆಳ್ದ - ಯಜಮಾನ, ಸ್ವಾಮಿ
ತಳ್ತಿಱಿ - ಚೆನ್ನಾಗಿಯುದ್ಧ ಮಾಡಿ
ಕಟ್ಟಾಯ - ಹೆಚ್ಚಿನ ಪರಾಕ್ರಮ
ನಿಱಿಪೆಂ - ಸಾಯುವೆನು

## ೧೧. ಕುಂತಿ ಕರ್ಣ ಸಂವಾದ

ಎಱಕ - ಪ್ರೀತಿ
ನೊಸಲು - ಹಣೆ
ರಾಗ - ಪ್ರೇಮ, ಬಣ್ಣ
ಆಗರ - ಮನೆ
ಕೈಯ್ಯೆಡೆ - ನಿಕ್ಷೇಪ
ಅಪ್ಪೈಸು - ಒಪ್ಪಿಸು, ಅರ್ಪಿಸು
ಎಱಗು - ನಮಸ್ಕರಿಸು
ಉಱದೆ - ಲಕ್ಷಿಸದೆ, ಮಾತು ಕೇಳದೆ
ಪುರಿಗಣೆ - ದಿವ್ಯಾಸ್ತ್ರ

ಸಯ್ಪು - ಪುಣ್ಯ
ಅರಿದು - ಅಸಾಧ್ಯವು
ಎಡೆಮುಡಗದೆ - ಅಂತರಾಯ ವಿಲ್ಲದೆ
ತೊೞ್ತು - ತೊತ್ತು, ದಾಸ
ಬೆಸನ - ಕಾರ್ಯ
ಕಿಸುಱ್ - ಕೋಪವು, ಮನಸ್ತಾಪವು
ತಮ್ಮುತೆರಡುಂ - ತಮ್ಮೆರಡೂ
ಪಾೞಿ - ಕ್ರಮ,ನ್ಯಾಯ
ಒಕ್ಕು - ಮುರಿದು
ಜೋೞಕ್ಕೆ ತಪ್ಪು - ಋಣಕ್ಕೆತಪ್ಪು ಕೃತಘ್ನನಾಗದೆ
ನಿಲ್ಲದಿಕೆ - ಪೂರ್ತಿಗೊಳಿಸದೆ ಇರುವಿಕೆ
ಮೀೞಂಗುಲಿಗ - ಬೆಸ್ತರವ
ಎರ್ದೆ - ಎದೆ
ಬೆಟ್ಟನೆ - ಕಠೋರವಾಗಿ
ಮುತ್ತಿನ - ಜೇರೆಯು
ಪೊಂಪುಳಿವೋಗು - ಹೆಚ್ಚಾಗು
ಏರ್ದೊಡಂ - ಮೇಲೆ ಬಿದ್ದರೂ
ಅೞಿಯೆಂ - ನಾಶಮಾಡುವುದಿಲ್ಲ

## ೧೨. ಕರ್ಣನ ಯುದ್ಧ

ಅೞಲ್ - ದುಃಖ, ತಾಪ
ಬಿನ್ನನೆ - ಖಿನ್ನನಾಗಿ, ಸುಮ್ಮನೆ
ಪಣಿಕೇತನ - ದುರ್ಯೋಧನ
ಆವಗೆಯುರಿ - ಕುಂಬಾರರ ಆವಗೆಯುರಿ
ಅಟ್ಟಿವೋಲ್ - ದಹಿಸುವ ಹಾಗೆ
ಅೞುರೆ - ಪಸರಿಸಲು
ಮುಯ್ವಂ+ಅಂತು - ಹೆಗಲೊಡ್ಡಿ, ಹೆಮ್ಮೆಪಟ್ಟು
ಬೞ್ದುದಂ - ಬದುಕಿದ್ದುದನ್ನು
ಅಸು - ಪ್ರಾಣ
ಮುಟ್ಟೆವಂದಲ್ಲಿ - ಸಮೀಪಿಸಿದಾಗ
ವಿಕ್ರಾಂತತುಂಗಂ - ಶೂರಶ್ರೇಷ್ಠನಾದ (ಅರ್ಜುನನು)
ಆಹವ - ಯುದ್ಧ
ಪೆಱಸಿಂಗಿ - ಹಿಂದಕ್ಕೆ ಸರಿದು
ಬೆಳ್ಕುತ್ತಿರ್ದನಪ್ಪೊಡೆ - ಹೆದರುತ್ತಿದ್ದನಾದರೆ

ಏತೊದಳ್ - ಸುಳ್ಳೇನು ?

ದಿನನಾಥ - ಸೂರ್ಯ

ಕಸವರ - ಬಂಗಾರ, ಐಶ್ವರ್ಯ

ಪುರಡಿಸು - ಮತ್ಸರಗೊಳ್ಳು

ಪಿರುಗುಮೇ - ಮಾನ್ಯವಾಗುವುದೇ ?

ನೆಗೞ್ದೆಂ - ಮಾಡಿದೆನು

ಅಱಿವಡೆ ಮಾತಂ - ಸುಳ್ಳಾದ ವಾದವನ್ನು

ಕೆಮ್ಮನೆ - ಸುಮ್ಮನೆ

ಬಿದಿವಸ - ದೈವಾಧೀನ

ಬಿಯ - ಸಂ-ವ್ಯಯ

ಪಾಂಗು - ರೀತಿ

ಸಮಕಟ್ಟಿ - ನಿರ್ದೇಶಿಸಿ

ಪೊಸಮಸೆಯ - ಆಗತಾನೆ ಮಸೆದ, ಹರಿತವಾದ

ತಂದಲ - ಮಳೆ

ಮದ್ರರಾಜ - ಶಲ್ಯ

ನುಡಿವಳಿ - ಕೊಟ್ಟಮಾತು

ದೊಣೆ - ಬತ್ತಳಿಕೆ

ಅರ್ಧಾವಳೀಕ - ಸರ್ಪಾಸ್ತ್ರದ ಹೆಸರು

ವಿಸ್ಫುಲಿಂಗ - ಬೆಂಕಿಯ ಕಿಡಿ

ಪಿಂಗಳ - ಕೆಂಪು ಬಣ್ಣದ

ಆಭೋಗಂ - ಆಸರ್ಪಾಸ್ತ್ರವು

ಅಣ್ಮು - ಶಕ್ತಿತೋರಿಸು

ಅಗುರ್ವು - ಅಧಿಕತೆ, ಸಾಮರ್ಥ್ಯ

ತೆಗೆನೆಱೆದು - ಸಂಪೂರ್ಣವಾಗಿ ಎಳೆದು

ಉಡುಗು - ಸಣ್ಣದಾಗಿ ಮಾಡು

ಉರ - ಎದೆ

ಅವಧರಿಸು - ಲಕ್ಷ್ಯಗೊಟ್ಟು ಕೇಳು

ತೊದಳ್ - ಸುಳ್ಳು

ಮಾಣ್ದಿರು - ಬಿಡು

ಒಳ್ಪಿನ - ಉತ್ತಮವಾದ

ನನ್ನಿ - ಸತ್ಯ

ಬನ್ನ - ಸಂ-ಭಗ್ನ, ಭಂಗ ತಪ್ಪುವಿಕೆ

ಉಱು - ಹೊಂದಿಕೆಯಾಗು, ಸರಿಹೋಗು

ಪೆಂಪು - ಹಿರಿಮೆ

ಊನ - ಕಡಿಮೆ

ಕಱುತ್ತು - ಮತ್ಸರಿಸಿ

ಅಱಿಪಲ್ - ತಿಳಿಸಬೇಡ

ವೈಕರ್ತನ - ಕರ್ಣ

ಎಱಕಂಬೆತ್ತಿರೆ - ಹೊಂದಿಕೆಯಾಗುವಂತೆ

ಬಲ್ಸರಿ - ದೊಡ್ಡ ಮಳೆ
ನೆರಂ - ಸಹಾಯ
ತುರಿಪದೆ - ವೇಗದಿಂದ
ಚೋದಿಸು - ನಡೆಯಿಸು
ಆರ್ದು - ಗರ್ಜಿಸಿ
ಇಸು - ಬಾಣಬಿಡು
ಭಟ್ಟಿನ - ದುಂಡಗಾದ, ಹರಿತವಾದ
ಮುಯ್ಯೇೞ್ - ಮೂರು + ಏೞು= ಇಪ್ಪತ್ತೊಂದು
ಸೂೞ್ - ಬಾರಿ, ಸಾರೆ
ಒಲ್ಲಣಿಗೆಯ - ಒದ್ದೆ ಬಟ್ಟೆಯನ್ನ
ಪಿೞ್ - ಹಿಂಡು
ಕೊಕ್ಕರಿಸು - ಹೇಸು, ಅಸಹ್ಯಪಡು
ಬಱುವಂ - ಬರಿದಾಗಿರುವವನು
ಮಱೆ - ಕವಚ
ಇಱಿ - ಕೊಲ್ಲು, ತಿವಿ
ಕೂರ್ಮೆ - ಪ್ರೀತಿ
ಭೂಧರ - ಕೃಷ್ಣ
ಅಸುರಾಂತಕ - ಕೃಷ್ಣ
ಸುಗಿಪಿನಂ - ಹೆದರುವಹಾಗೆ
ಪಡಿಚಂದ - ಸಂ—ಪ್ರತಿಚ್ಛಂದ, ಸರಿಸಮಾನ
ಅಳಱು - ಭಯಪಡು
ಧ್ವಾಂಕ್ಷ - ಕಾಗೆ
ಧಾಂಕ್ಷಧ್ವಜ - ಕರ್ಣ
ಪೞಿಯಿಗೆ - ಪತಾಕೆ, ಭಾವುಟ
ಅಲ್ಲೞಿವೋಲ್ - ಸೀಳಿಹೋಗುವಹಾಗೆ
ಅವಗೞಿಯಿಸು - ಹೆಚ್ಚಾಗು
ಗೊಣೆ - ಬಿಲ್ಲಿನ ತುದಿ
ಸೊಡರ್ - ದೀಪ
ಅಗ್ಗಳಿಸು - ಹೆಚ್ಚಾಗು
ಪೊೞ್ತರ್ - ಹೊತ್ತು
ಪಜ್ಜಳಿಸು - ಪ್ರಜ್ವಲಿಸು
ನಿಶಿತ - ಹರಿತವಾದ
ವಿಕರ್ಣ - ಬಾಣ
ಬೆಳಱದೆ - ಅಂಜದೆ
ಬೆಸಕೆಯ್ - ಸೇವಿಸು
ಕೞಿಯೆ - ಸಾಯುವಹಾಗೆ
ಕಸೆ - ಚಾಟಿ
ಬಾರಿಸಿ - ವಾರಿಸಿ, ತಡೆದ
ಪೆಱತು - ಬೇರೆ

ತ್ರೆಲ್ಲಟ - ಬಹುಮಾನ ಕಾಣಿಕೆ
ಉರ್ವರೆ - ಭೂಮಿ
ಅಜಾಂಡ - ಬ್ರಹ್ಮಾಂಡ
ಪಿಡುಗು - ನಡುಗು, ಕಂಪಿಸು
ಉಡುಗು - ಸಂಕೋಚ ವಾಗು
ಕದನ ತ್ರಿಣೇತ್ರ - ಯುದ್ಧದಲ್ಲಿ, ಶಿವನಂತಿರುವ ಅರ್ಜುನ
ಅಮೋಘ - ಪ್ರತಿಯಿಲ್ಲದ
ಕರ್ಣಾಂತಂಮಾಡಲ್ - ಕರ್ಣನ ನಾಶವನ್ನು ಮಾಡಲು
ಶಿಖಿಶಿಖಾ - ಬೆಂಕಿಯು ಜ್ವಾಲೆ
ಔರ್ವಜ್ವಳ - ವಡವಾಗ್ನಿ
ಅಟಂದು - ಮೇಲೆಬಿದ್ದು
ಅಳುರುತ್ತುಂ - ಪಸರಿಸುತ್ತ
ಉಚ್ಚಳಿಸು - ಮೇಲೆಹಾರು
ಉತ್ತಮಾಂಗ - ಶಿರ, ತಲೆ
ಅಗುಂದಲೆ - ಅತಿಶಯ
ಅಟ್ಟೆ - ಶರೀರ
ಒಳ್ಪಿನ - ಉತ್ತಮವಾದ
ಗುಣಾರ್ಣವ - ಸದ್ಗುಣ ಸಮುದ್ರ
ಅದಿರು - ನಡುಗು
ಕರಿಕರ್ಣತಾಳಸಂಚಳೆ - ಆನೆಯ ಕಿವಿಯು ಓಲೆಯು ಚಲಿಸುವ ಹಾಗೆ ಚಂಚಲಳು.
ಉರುಳಿ - ಉಂಡೆ
ಒಡಂಬಡಂ - ಐಕ್ಯವನ್ನು
ಎರಬ್ಬಿಡಿ - ಸುಳ್ಳು
ಗಡಣ - ಗುಂಪು
ಏಜು - ಗಾಯ
ಅಂಕದ - ಪ್ರಸಿದ್ಧವಾದ
ಕರ್ಣರಸಾಯನ - ಸುಶ್ರಾವ್ಯವಾದ

## ೧೩. ಬಾಹುಬಲಿಯ ವಿರಾಗ

ವಿಷಧಿ - ಸಮುದ್ರ
ನಂಜು - ವಿಷ
ಆಸ್ವಾದನೆ - ಸೇವನೆ
ಅಗಿ - ಭಯಪಡು
ಕಟ್ಟುಬರು - ಸೆಣಿಸು
ಆರ್ಕುಮೇ - ಸಾಧ್ಯ ವಾಗುವುದೇ ?
ಕಲುಷ - ದೋಷ

## ೧೪. ವತ್ಸಕಾವತೀ ವರ್ಣನ

ಕಮನೀಯ - ಮನೋಹರ ವಾದ

ನಿಮ್ನ - ತಗ್ಗಾದ
ಪಸರ - [ತ್ಸ] ಪ್ರಸರ
ಸರಸೀರುಹಾಕರ - ಸರೋವರ
ವಿದಳಿತ - ಅರಳಿದ, ಬಿರಿದ
ತಾಮರಸ - ತಾವರೆ [ತದ್ಭವ]
ಸಾಂದ್ರ - ದಟ್ಟವಾದ
ತತಿ - ಸಮೂಹ
ಮನೋಭವ - ಕಾಮ
ಅೞ್ತಿ - ಪ್ರೀತಿ
ಮನೋಜಕಾಂತೆ - ರತಿ
ಕಣ್ಬೊಲ - ದೃಷ್ಟಿಪಥ
ಕೆಯ್ವೊಲ - ಗದ್ದೆ
ಎಱಗಿದ - ಬಾಗಿದ
ಅಮೇಯ - ಅಳತೆಗೆ ನಿಲುಕದ
ಶಾಲಿವನ - ಬತ್ತದಪೈರು
ಕಳಮ - ಬತ್ತ
ಕಂಚುಕ - ಬಟ್ಟೆ
ವಿಳಸತ್ - ಪ್ರಕಾಶಿಸುವ
ಕಣಿಶ - ತೆನೆ
ಕಬಳ - ತುತ್ತು
ಇಳಾಕಾಮಿನಿ - ಭೂರಮಣಿ
ಪೊನ್ನ ಭಟ್ಟ - ಬಂಗಾರದ ಚೆಂಡು

ಉಪಾಂತ - ಸಮೀಪ
ಇವಮ್ಮಾವು - ಇನಿದು + ಮಾವು
ಬಹುಪೋಷ - ವೃಕ್ಷ ವಿಶೇಷ
ಅರಿದು - ಅಸಾಧ್ಯವು
ಎಗ್ಗ ! ಮೊಗ್ಗೆ - ಮೂರ್ಖನೆ ! ಸಾಧ್ಯವೇ
ಧವಳೇಕ್ಷು - ಬಿಳಿಯ ಕಬ್ಬು
ಜನಪದ - ದೇಶ
ದುಗ್ಧಾಬ್ಧಿ - ಹಾಲಿನ ಸಮುದ್ರ
ಫೇನಪಿಂಡ - ನೊರೆಯ ಸಮೂಹ
ಸುಧಾ - ಅಮೃತ
ರಾಜತ್ - ಹೊಳೆಯುವ
ನಿಕಾಶ - ಸದೃಶ,
ಕೆಯ್ಗಳ್ - ಗದ್ದೆಗಳು
ಮೆಯ್ವಸ - ದೇಹಾಲಸ್ಯ
ಅಳ್ಳೆಗೊಂಬು - ಅಲುಗುವ ಶಾಖೆ
ಕೋರಕ ವಿಪಾಟನ - ಮೊಗ್ಗನ್ನು ಸೀಳುವ
ಅಕ್ಕಮೆ - ಅಜೀರ್ಣ
ಅವಚತ್ತು - ಬೇಸರಗೊಂಡು
ಸವಿಗಾಱದೆ - ಸಿಹಿಗೆ ಶಕ್ತಿ ಸಾಲದೆ

ಮಧುಪ - ಜೇನ ನೊಣವು
ಕೀರ - ಗಿಳಿ
ಪಿಕಾಳಿ - ಕೋಗಿಲೆಗಳ ಸಮೂಹ
ಚೀರಘಟ್ಟ - ವಿಶ್ವಶಿಲ್ಪಿ

## ೧೫. ದಿವ್ಯ ತಪಸ್ವಿನಿ

ನವಮೌಕ್ತಿಕ - ಹೊಸಮುತ್ತು
ಮೃಣಾಳ - ಕಮಲದ ದಂಟು
ರುಚಿರ - ಮನೋಹರವಾದ
ಅಮೃತಾಂಶು - ಚಂದ್ರ
ರಶ್ಮಿ - ಕಿರಣ
ಕುಂಚಿಗೆ - ಕುಂಚ
ಕಚ್ಚುರ - ತೊಳೆ
ಕರಮೆ - ಅತಿಶಯವಾಗಿ
ಎಳನೇಸಱ್ - ಬಾಲಸೂರ್ಯ
ಒಳ್ದಳಿರ್ಗಳ್ - ಕೋಮಲವಾದ ತಳಿರುಗಳು
ಮಡಲ್ತು - ವೃದ್ಧಿ ಹೊಂದು
ಮೃಗಾಂಕಮೌಳಿ - ಚಂದ್ರಮೌಳಿ, ಶಿವ
ಪಾ:ಕಣ - ನೀರಿನ ಹನಿ
ಭವ - ಶಿವ
ವನರುಹ - ಕಮಲ
ವನರುಹನಾಭ - ವಿಷ್ಣು
ಪದ್ಮಗರ್ಭ - ಬ್ರಹ್ಮ
ಪೊದಟ್ದಿ - ಹುಟ್ಟಿದ
ಮೌಕ್ತಿಕಾಕ್ಷವಲಯ - ಮುತ್ತಿನಜಪ ಸರವು
ಎಳವೆಱೆ - ಬಾಲಚಂದ್ರ
ಕದಿರ್ಗಳ್ - ಕಿರಣಗಳು
ಪವಣು - [ಸಂ] ಪ್ರಮಾಣ ಅಳತೆ
ವರಿಸ - ಸಂ-ವರ್ಷ
ಮಣಿ ದೀಪ್ತಿ - ರತ್ನದ ಬೆಳಕು
ದಂತ ಮರೀಚಿ - ಹಲ್ಲಿನ ಕಿರಣ
ಊರ್ಜಿತ - ಮಹತ್ತಾದ
ಪಾಶುಪತವ್ರತೆ - ಶಿವಭಕ್ತಿ ಸಂಪನ್ನಳು
ಅವನಿತಳ - ನೆಲ
ಷಂಡ - ಸಮೂಹ
ಸರೋರುಹ - ಕಮಲ
ಭವಾಲಯ - ಶಿವಾಲಯ
ಜಾವ - ಸಂ-ಯಾಮ
ಭವಾದ್ರಿ - ಕೈಲಾಸ ಪರ್ವತ

ನಭ - ಆಕಾಶ
ಉಬ್ಬೆಗ - ಸಂ-ಉದ್ವೇಗ
ಆಯತನ - ಮನೆ, ಆಲಯ
ಅವಸಾನ - ಅಂತ್ಯ
ವಲ್ಲಕೀ - ವೀಣೆ
ಮಧುಕರ - ಜೇನುನೊಣ
ಸ್ವನ - ಧ್ವನಿ, ಸ್ವರ
ಒಸೆದು - ಸಂತೋಷದಿಂದ
ಅಂಬು - ನೀರು
ಬರ - ವರ
ಪದಪು - ಆನಂದ
ದಕ್ತೃಪ್ತಿ - ದೃಷ್ಟಿ ತುಷ್ಟಿ
ತಗುಳ್ದು - ಮೊದಲು
ಮಹಾಭಾಗ - ಮಹಾಶಯ
ವೇೞ್ಕು - ಬೇಕು
ಅೞ್ಕಱು - ಪ್ರೀತಿ
ಬೆಂಬೞಿವಿಡಿದು – ಹಿಂದೆ ಹಿಂದೆ ಹೋಗಿ
ಕಿರಿದು+ಅಂತರ – ಸಲ್ಪ ದೂರ
ಮರ್ವು – ಮಬ್ಬು, ಕತ್ತಲು
ತಮಾಲ – ಹೊಂಗೆಮರ
ಗಾವರ – ಶಬ್ದ, ಧ್ವನಿ
ಸ್ಫಾಲನ – ಹೊಡೆತ, ಆಘಾತ

ಶೀಕರ ಪ್ರಸರ – ತುಂತುರಹನಿಗಳ ಸಮೂಹ
ಸುರಭೂಜ – ಕಲ್ಪವೃಕ್ಷ
ವಲ್ಕವಸನ – ನಾರು ಬಟ್ಟೆ
ನೇೞ್ದುದು – ನೆಟ್ಟಗೆನಿಂತದು ತೂಗುಹಾಕಿದುದು
ಜೋಗವಟ್ಟಿಗೆ – ಸಂ–ಯೋಗಪಟ್ಟಿಕಾ
ದರ್ಭಾಸನ – ಹುಲ್ಲಿನ ಚಾಪೆ
ತೀವು – ತುಂಬು
ಸ್ವಾದು – ಸಿಹಿ
ಶಿಲಾತಳ – ಹಾಸುಗಲ್ಲು
ರತ್ನಾಕರ – ಸಮುದ್ರ
ಬಿತ್ತರಿಸು – ವಿಸ್ತರಿಸು (ಸಂ)
ಗೞಪು – ಗಳಹು, ಹರಟು
ಕೌತುಕಾವಹಂ – ಕತೂಹಲ ಜನಕವು
ಜೇಗ – ವೇಗ (ಸ) ಹೊತ್ತು
ಮಿಳಿರ್ವ – ಅಲ್ಲಾಡುವ
ಅಲರ್ಗಂಗಳ್ – ಹೂವಿನಂತಹ ಕಣ್ಣುಗಳು
ನಯನಾಂಬು – ಕಣ್ಣೀರು

ಅಣಂ – ಸ್ವಲ್ಪವೂ
ಕಣ್‌ಮುಗುೞ್ದಳ್ – ಕಣ್ಣನ್ನು ಹಿಂದಿರುಗಿಸಿದಳು
ಅಗ್ಗಳಿಪ – ಹೆಚ್ಚಾದ
ಅೞಲು – ದುಃಖ, ತಾಪ
ರಸೆ – ಭೂಮಿ
ಕಲ್ಪಾಂತದ – ಪ್ರಳಯ ಕಾಲದ
ಓರಂದದಿಂ – ಒಂದೆ ಸಮನಾಗಿ
ಮುೞ್ಗಿಸು = ಆರಿಸು ಕಡಮೆಮಾಡು
ಉಮ್ಮಳಿಸಿ – ವ್ಯಥೆಗೊಂಡು
ವ್ಯಗ್ರ – ಕಳವಳ
ಪ್ರಕ್ಷಾಳನಾರ್ಥ – ತೊಳೆಯುವುದಕ್ಕಾಗಿ
ಅಂಜುಳಿ – ಬೊಗಸೆ
ಭೂಪನಿಳಿಂಪ – ರಾಜಶ್ರೇಷ್ಠ
ಉಪರೋಧಿಸು – ತಡೆ
ಅಳವು – ಶಕ್ತಿ
ವಲ್ಲಾಂಚಲ – ನಾರಬಟ್ಟೆಯ ಸೆರಗು
ಉರಗ – ಸರ್ಪ
ದಂಷ್ಟ್ರ – ದವಡೆಹಲ್ಲು
ದುರಿತಾರ್ಣವ – ಪಾಪಸಮುದ್ರ
ಅಂತರಿತೆ – ದೂರವಾದವಳು
ತತ್ಪ್ರಪಂಚಮಂ – ಆವಿಸ್ತಾರವಾದ ಕಥೆಯನ್ನು
ಭಾಜನೆ – ಕಾರಣೀಭೂತಗಳು
ರನ್ನ – ಅಜಿತತೀರ್ಥಕರ ಪುರಾಣ

## ೧೬. ವಸಂತಲಕ್ಷ್ಮಿ

ಭೂರುಹ – ಗಿಡ
ಓಳಿವಟ್ಟು – ಸಾಲ ಸಾಲಾಗಿ
ರುಂದ್ರ – ವಿಸ್ತಾರವಾದ
ಸುರೇಂದ್ರ ಚಾಪ – ಕಾಮನ ಬಿಲ್ಲು
ರುಚಿರ ಶ್ರೀಯಂ – ಸೊಗಸಾದ ಸೊಬಗನ್ನು
ಉಲಿದುವು – ಶಬ್ದ ಮಾಡಿದುವು
ಆಮ್ರದ್ರುಮ – ಮಾವಿನ ಗಿಡ
ಮಧು ಪ್ರವೇಶ – ವಸಂತ ಕಾಲದ ಪ್ರಾರಂಭ
ಸಾತ್ಕೃತ – ಸಾತ್ [ತದ್ಧಿತ] + ಕೃತ
ಚೂತತರು – ಮಾವಿನ ಮರ
ಸುರತರು – ಕಲ್ಪವೃಕ್ಷ
ಎಳವೆಱೆ – ಬಾಲಚಂದ್ರ

ಮಿಳಿರ್ವ – ಅಲ್ಲಾಡುವ
ಮನಂಗೊಳೆ – ಚಿತ್ತಾಕರ್ಷಕವಾಗಿ
ಮಧುಮಾಸಕೇಸರಿ - ವಸಂತಮಾಸವೆಂಬ ಸಿಂಹವು
ವಿಯೋಗಿಗಳ್ – ವಿರಹಿಗಳು
ಕೀರ – ಗಿಳಿ
ತರ್ಜಿತ – ಬೆದರಿಕೆ
ಉತ್ಕ – ವೈಮರಿತ
ಕಳಿಕಾ – ಮೊಗ್ಗು
ಕುಟ್ಮಲ – ಮೊಗ್ಗು
ಮಧೂತ್ಸವ – ವಸಂತೋತ್ಸವ
ಮಿಳಿರ್ವ – ಅಲ್ಲಾಡುವ
ಒಡವೆ – ಆಭರಣ
ಲೆಕ್ಕವಣಿಗೆ – ಲೆಖ್ಖ
ಪದೆದು – ಸಂತೋಷಿಸಿ
ಪದಂ – ಯೋಗ್ಯವು
ಸಹಕಾರ ಮಹೀರುಹ - ಮಾವಿನ ಮರ
ಪ್ರಸೂನ – ಹೂವು
ಕಂಠಿಕೆ – ಕಂಠಿಯಸರ
ಸ್ಮರಶರ – ಕಾಮಬಾಣ
ಏವುವು – ಏನುಮಾಡುತ್ತವೆ

ಶಿಶಿರಾಂಶು – ಚಂದ್ರ
ತಣ್ಗದಿರ್ – ತಂಪ್ರಕಿರಣ
ತೆಂಬೆಲರ್ – ತೆಂಕಣಗಾಳಿ
ಕಳಕಂಠ – ಕೋಗಿಲೆ
ಬಗ್ಗಣೆ – ಕೂಗು
ಗಾವರಿಪ – ಧ್ವನಿಮಾಡುವ
ಗೋಷಣೆ – ಸಂಘೋಷಣ
ಬದ್ದರಂ – [ಸಂ] ಭದ್ರ
ವಾರಣ – ಆನೆ
ವಿಲಸಲ್ – ಪ್ರಕಾಶಿಸುವ
ತಲಂ – ಪಾದ
ವಿಕಚಾಬ್ಜದಳ – ಅರಳಿದ ಕಮಲದ ದಳವು
ಕಲ – ಮಧುರವಾದ
ನಿಸ್ವನ – ಧ್ವನಿ
ಸಸೌರಭ – ಗಂಧಯುಕ್ತವಾದ
ಅನಿಲ – ಗಾಳಿ
ನಿಶ್ವಸಿತ – ಉಸಿರು
ಅಸ್ಥಿರ – ಚಲಿಸುವ
ಅಲಕ – ಮುಂಗುರುಳು

## ೧೭. ಅಭಿಮಾನಧನ ಸುಯೋಧನ

ನಿರ್ವೈಸು – ಬೇಸರಗೊಳ್ಳು

ದೈವಾಯತ್ತಂ – ದೈವಾಧೀನವು
ಪುರುಷಾಕಾರಂ – ಪುರುಷ ಪ್ರಯತ್ನವು
ಒಂದೆಮೆಯ್ಯೊಳ್ – ಏಕೈಕ ವೀರನಾಗಿ
ಆಂತು – ಎದುರಿಸಿ
ಇಱಿ – ಹೋರಾಡು
ಚಲ – ಸಂ-ಛಲ
ಸಿಂಧೂದ್ಭವ – ಭೀಷ್ಮ
ಕುಂಭಜನ್ಮ – ದ್ರೋಣ
ದಿನಕೃತ್ಪುತ್ರ – ಕರ್ಣ
ನೆಱೆಯಂ – ಸಮರ್ಥನಾಗನ್ನು
ಸೆರಗಂ – ಸಹಾಯವನ್ನು
ಸಾರ್ದಪೆಂ – ಅಪೇಕ್ಷಿಸುವೆನು
ನೆರವು – ಸಹಾಯ
ಎಂಗುಂ – ಎಂದು ಹೇಳುವುದು
ಬಿದುವಂ – ಕುಂಭಸ್ಥಳವನ್ನು
ವಿದಾರಣಂಗೆಯ್ದು – ಸೀಳಿ
ಕಂಠೀರವ – ಸಿಂಹ
ಒಳರೇ – ಉಂಟೇ? [ಇಲ್ಲವೆಂಬರ್ಥ]
ಕಾಲದಂಡ – ಯಮದಂಡ
ಪ್ರಚಂಡ – ಭಯಂಕರವಾದ
ಅಳವಡಿಸಿಕೊಂಡು - ಇಟ್ಟುಕೊಂಡು
ಮಹಾರಥ - ಹತ್ತು ಸಾವಿರ ಯೋಧರ ಮೇಲೆ ಯುದ್ಧಮಾಡಲು ಸಮರ್ಥ
ಸಮರಥ - ಒಬ್ಬನ ಮೇಲೆ ಯುದ್ಧ ಮಾಡಲು ಸಮರ್ಥ
ಪಿಂಗಾಕ್ಷ - ದುರ್ಯೋಧನ
ಪರುಷ - ಕರ್ಕಶ
ಆವೇಶಧರನಾಗಿ - ಆವೇಶಗೊಂಡು
ಪೆಱನೊರ್ವಂ - ಇನ್ನೊಬ್ಬ; ಮತ್ತೊಬ್ಬ
ಬಿಲ್ಲೋಜ - ಚಾಪವಿದ್ಯಾಗುರು ದ್ರೋಣ
ಸಿಂದುಪುತ್ರ – ಗಂಗೆಯಮಗ ಭೀಷ್ಮ
ಕರ್ಕಶತನು – ಕಠಿಣವಾದ ದೇಹ

ಉನ್ನತವಂಶ – ಎತ್ತರವಾಗಿ ಬೆಳೆದ ಬಿದಿರು

ಸ್ವಚ್ಛಂದಾನುವೃತ್ತಿ – ಇಷ್ಟಕ್ಕೆ ಅನುಸಾರವಾಗಿ ವರ್ತಿಸುವುದು

ಕ–ಆರಾಧ್ಯಂ ನಪ್ರಕೋಪಯೇತ್ – ಪೂಜ್ಯರಾದವರನ್ನು ಸಿಟ್ಟಿಗೆಬ್ಬಿಸಬಾರದು

ನಿಸರ್ಗ – ಸ್ವಭಾವ, ಪ್ರಕೃತಿ

ಕಯ್ಗೆ ಮಾಳ್ಪುದು – ವಶಪಡಿಸಿಕೊಳ್ಳಬೇಕು

ತ್ರಿದಶ ನದಿ – ದೇವಗಂಗೆ

ಕಳಶಸಂಭವ – ದ್ರೋಣ

ಇನಜ – ಕರ್ಣ

ಕೈಯ್ದುಸೊರೆ – ವಿಷದ ಸೋರೆಕಾಯಿ

ಮುಡಿವೊಡೆ – ನಾಶವಾಗಬೇಕಾದರೆ

ಪಗೆ – ವೈರಿಗಳು

ಕಾನೀನಂ – ಕನ್ಯಾಪುತ್ರನಾದ ಕರ್ಣ

ಗಳಿತ – ಉದುರುತ್ತಿರುವ

ಇಱಿಸಿ – ಕೊಲ್ಲಿಸಿ

ಸರ್ವಾಂಗವಿಕಳರ್ – ಜರ್ಜರಿತವಾದ ಶರೀರವುಳ್ಳವರು

ಮನಃಕ್ಷತಮಂ – ಮನಸ್ಸಿಗೆ ನೋವನ್ನು

ಸವಳದೆ – ಪ್ರಾತಃಕಾಲದಲ್ಲಿ

ವಿಕಳ – ನೊಂದ, ದುಃಖಿತ

ಪಾರ್ಥಿವನಿತಂಬಿನೀಜನ – ರಾಜಸ್ತ್ರೀಯರು

## ೧೮. ಧೃತರಾಷ್ಟ್ರ ಗಾಂಧಾರೀ ಸಂದರ್ಶನ

ಆರಯ್ಯಲುಂ – ವಿಚಾರಿಸಲು

ಮೂರ್ಧ – ಮಸ್ತಕ, ತಲೆ

ಪಱಿಯಿಸು – ಪ್ರಲಾಪಿಸು

ಸರ – ಸಂ–ಸ್ವರ

ಉದ್ಧೃತ – ಎತ್ತಿದ

ಗೋತ್ರ – ೧. ಬೆಟ್ಟ, ೨. ವಂಶ

ವಜ್ರಾಘಾತ – ವಜ್ರಾಯುಧದ ಹೊಡೆತ

ಸಿಗ್ಗು – ನಾಚಿಕೆ

ಒಸಗೆ - ಸಂತೋಷದ ವಾರ್ತೆ
ತೂರ್ಯಸ್ವನ - ವಾದ್ಯಧ್ವನಿ
ಪೊಣ್ಮೆ - ಹುಟ್ಟುತ್ತಿರುವಾಗ ಆಗುತ್ತಿರುವಾಗ
ನಿಗಳಿತ - ಕಳೆದುಕೊಂಡ
ಅವಿರಳ ಸತತವಾಗಿ ಬರುವ
ಬಾಷ್ಪ - ಕಣ್ಣೀರು
ಆನತಂಮಾಡೆ ಬಾಗಿಸಲು
ಸಮರಾನುಬಂಧಮಂ · ಯುದ್ಧದ ವಿಷಯವನ್ನು
ಮಾಣ್ಬುದು ಬಿಡಬೇಕು
ಎನ್ನೆಂಬುದುಂ - ನಾವು ಹೇಳಿದುದನ್ನು
ಇಂಬುಕಯ್ವುದು - ಕೇಳಬೇಕು, ಒಪ್ಪಿಕೊಳ್ಳಬೇಕು
ಸಮಭ್ಯರ್ಥಿಸಿ ಸಮರ್ಥನೆ ಮಾಡಿ
ಬಿಜಯಂಗೆಯ್ - ದಯಮಾಡಿಸಬೇಕು
ಉಳ್ಳೊಡೆ ಇದ್ದುದಾದರೆ
ಸಲ್ವುದು - ಸಾಕು
ಅಸು - ಪ್ರಾಣ
ನಿವೇದಿಸು - ಅರ್ಪಿಸು
ಅೞಿ - ಕೆಟ್ಟ
ಎನ್ನವರ್ - ನನ್ನವರು
ಪುದುವಾೞ್ - ಕೂಡಿಬದಕು
ಸೇರ್ಪಡುಗಿಡದೆ - ಹೊಂದಿಕೆ ಕೆಡದಂತೆ
ಅಂಬೆಸಕಯ್ವೆಂ - ನಾನು ನಿಮ್ಮ ಅಪ್ಪಣೆಯನ್ನು ಪಾಲಿಸುತ್ತೇನೆ
ನೆಗೞ್ - ಮಾಡು
ಕಜ್ಜ - ಸಂ—ಕಾರ್ಯ

## ೧೯. ದುರ್ಯೋಧನ ಪ್ರಲಾಪ

ಇಭ - ಆನೆ
ರುಧಿರಸ್ರೋತ - ರಕ್ತಪ್ರವಾಹ
ಇಭದೋಃ - ಆನೆಗಳ ಸೊಂಡಿಲುಗಳೆಂಬ
ನೀಲಲತಾಪ್ರತಾನ - ಕಪ್ಪುಬಳ್ಳಿಗಳ ಸಮೂಹ
ವಿಪಿನವ್ರಾತ - ಅರಣ್ಯಗಳ ಸಮೂಹ
ಉೞಿದೆ - ಲಕ್ಷ್ಯ ಮಾಡದೆ
ಶಿರಸ್ಕಂಧ - ಹೆಗಲು

| | |
|---|---|
| ಶರಜಾಲ | – ಬಾಣಗಳ ಸಮೂಹ |
| ಜರ್ಜರಿತ | ಪುಡಿಪುಡಿಯಾದ |
| ಗಾತ್ರತ್ರಾಣ | – ಮೈಕವಚ |
| ನಿಸರ್ಗದುಷ್ಟ | – ಸ್ವಭಾವದಿಂದ ದುಷ್ಟ |
| ವಿಲುಳಿತ | – ಕತ್ತರಿಸಲ್ಪಟ್ಟ |
| ಭಾರದ್ವಾಜ | – ದ್ರೋಣ |
| ಇರವಂ | – ಸ್ಥಿತಿಯನ್ನು |
| ಅಱಿಯುಮೆ | – ಗೊತ್ತಿಲ್ಲವೆ? |
| ಬಿನ್ನಣ | – ಸಂ-ವಿಜ್ಞಾನ, ವಿದ್ಯೆ |
| ಪಿನಾಕಪಾಣಿ | – ಶಿವ |
| ಉಪೇಕ್ಷೆ | – ನಿರ್ಲಕ್ಷ್ಯ |
| ಅಲರ್ದ | – ಅರಳಿದ |
| ಅಸುರತರಮಾಗೆ | – ಭಯಂಕರವಾಗಿರಲು |
| ಅವಡು | – ಕೆಳದುಟಿ |
| ಶರಪ್ರಹಾರ | – ಬಾಣದ ಹೊಡೆತ |
| ಲೋಹಿತವಾರ್ಧಿ | – ನೆತ್ತರಿನ ಕಡಲು |
| ಅಟ್ದು | – ಮುಳುಗಿ |
| ಏಕದೇಶ | – ಒಂದು ಭಾಗ |

| | |
|---|---|
| ಆಸ್ಯ | – ಮುಖ |
| ರಿಪುಕುಕ್ಷಿ | – ಶತೃವಿನ ಹೊಟ್ಟೆ |
| ನಕ್ತಂಚರೀ | – ರಾಕ್ಷಸಿ |
| ಭೀಮಭೀಮಗದೆ | – ಭೀಮನ ಭಯಂಕರವಾದ ಗದೆ |
| ಪಂಚತ್ವ | – ಮರಣ |
| ಒಳನ್ | – ಇದ್ದಾನೆ |
| ಇನ್ನುಂ | – ಈಗಲೂ |
| ಮಾಣ್ದ | · ಬಿಟ್ಟ |
| ಒಳೆನ್ | – ಇದ್ದೇನೆ |
| ಕೂರ್ಮೆ | – ಪ್ರೀತಿ |
| ಸೌಧರ್ಮಿಕೆ | – ಕರ್ತವ್ಯಧರ |
| ಮುಂಚಿದರ್ | – ಮುಂದಾದ |
| ದಿನಕರತನೂಜ | – ಕರ್ಣ |
| ಮನ್ಯು | – ದುಃಖ |
| ಉದ್ಗತಕಂಠ | – ಉಬ್ಬಿದ ಕುತ್ತಿಗೆ |
| ಶೋಕಾನಲ | – ದುಃಖಾಗ್ನಿ |
| ದಹ್ಯಮಾನ | – ಸುಡಲ್ಪಟ್ಟ |
| ದಲ್ | – ನಿಜವಾಗಿ |
| ಕೞಿದ ಬೞಿಕ್ಕೆ | – ಸತ್ತುಹೋದ ಮೇ |
| ಮಗುೞ್ದು | - ಮತ್ತೆ |

ಅನೃತ - ಸುಳ್ಳು
ಲೋಭ - ದುರಾಶೆ
ನನ್ನಿ - ಸತ್ಯ
ಚಾಗ - [ಸಂ]ತ್ಯಾಗ
ಅಣ್ಮು - ಪರಾಕ್ರಮ
ಪೀಟಿಗೆ - ಸಂ-ಪೀಠಿಕಾ ಸಿಂಹಾಸನ
ಬಟ್ಟಿಂ - ಬಾಳಿದವನು
ಒಳನೆ - ಉಂಟೇ
ಅಸುಮೋಕ್ಷಂ - ಪ್ರಾಣತ್ಯಾಗವು
ಬಾಷ್ಪಾಂಬುಮೋಕ್ಷಂ- ಕಣ್ಣೀರನ್ನು ಸುರಿಸುವುದು
ಅನ್ಯಮಂಡಲ - ಶತ್ರುಸಮೂಹ
ಪ್ರತಾಪಶಿಖಿ - ಪ್ರತಾಪಾಗ್ನಿ
ಸತ್ಕ್ರಿಯಾನಳನಿಂ - ಮಂತ್ರಾಗ್ನಿಯಿಂದ
ಕೂರ್ತೆನೋ - ಪ್ರೀತಿಯನ್ನು ತೋರಿಸಿದೆನೊ ?
ದೀಕ್ಷಾವಿಧಿಗಳ್ಗೆ - ಯಜ್ಞ ಮುಂತಾದ ಕಾರ್ಯಗಳಿಗೆ
ಆಟ್ದಿಂ - ರಾಜ, ಒಡೆಯ
ಆನೆಯೊಳ್ - ಆನೆಯಂಥ ಭಂಟ

ಇಱಿವಾಳ್ - ಯೋಧ
ಕಟ್ಟಾಯ - ಅತಿಸಾಮರ್ಥ್ಯ
ತುಱಿಲಾಳ್ - ಸೈನಿಕ
ಮೇಳದಾಳ್ - ಸಂಗಡಿಗ
ಮಾರ್ಪಡೆ - ಶತ್ರುಸೈನ್ಯ
ದಂದಶೂಕ - ಸರ್ಪ
ದಂದಶೂಕಪತಾಕ - ಸರ್ಪಧ್ವಜ, ದುರ್ಯೋಧನ
ಅಂದಮಂ - ರೀತಿಯನ್ನು
ಶರಶಯನಗತನಾಗಿರ್ಪ - ಬಾಣಗಳ ಹಾಸಿಗೆಯ ಮೇಲೆ ಮಲಗಿದ
ನದೀನಂದನ - ಭೀಷ್ಮ
ಅಸ್ತ್ರವೇದನ – ಬಾಣನೆಡುವುದರಿಂದುಟಾದಬೇನೆ
ಎಂತುಟಾದುದೋ - ಹೇಗೆ ಸಂಭವಿಸಿತೋ
ಒಕ್ಕು – ಬಿಟ್ಟು
ಇಳಿಂಕೆಗೊಂಡು – ನಿರ್ಲಕ್ಷಿಸಿ
ಅನಿಲನಂದನ – ವಾಯುಪುತ್ರ ಭೀಮ
ಕಡಂಗಿದೆಂ – ಪ್ರೋತ್ಸಾಹಿಸಿದೆನು
ಸರಿತ್ಸುತ – ಭೀಷ್ಮ

ವಿಸ್ಮಯಾಕ್ರಾಂತಸ್ವಾಂತ - ಆಶ್ಚರ್ಯಚಕಿತಚಿತ್ತ
ಆತಪತ್ರ - ಕೊಡೆ, ಛತ್ರಿ
ಅಹಿಕೇತನ - ಸರ್ಪಧ್ವಜ
ಮೃಗೇಂದ್ರಾಸನ - ಸಿಂಹಾಸನ
ಇಂಬುಕೆಯ್ಯದೆ - ಒಪ್ಪದೆ
ಈಸಮಕಟ್ಟಿಂ - ಈಆಲೋಚನೆ, ಏರ್ಪಾಡು
ಸಮಕೊಳಿಸು - ಏರ್ಪಡಿಸು
ಕಟ್ವಾಳ್ - ಅತಿ ವೀರ ಕಡಿದು+ಆಳ್
ಮಱುವಾೞ್ - ಮತ್ತೆ ಬಾಳುವುದೇ?
ನೆರಂ - ಸಹಾಯವನ್ನು
ಪಾರ್ವನೇ - ಅಪೇಕ್ಷಿಸುವನೇ
ಕಲ್ವೋಜ - ವಿದ್ಯೆಯಕ್ರಮ
ಇಚ್ಚೆಗಾರತನ - ಸ್ವಾಚ್ಛಂದ್ಯ
ಪಿಸುಣ್ - ಚಾಡಿ
ಅಪ್ಪುಕೆಯ್ - ಸ್ವೀಕರಿಸು
ಬಾಡ - ಹಳ್ಳಿ, ಗ್ರಾಮ
ಪಡಿಸು - ಅಣಕಿಸು
ಜಱೋಡಿಸು - ಹಾಸ್ಯಮಾಡು
ಪವನನಂದನ - ವಾಯುಪುತ್ರ
ಅಣ್ಣುಗಾಳ್ - ಪ್ರೀತಿಯಬಂಟ
ಅಣ್ಣುಗದಮ್ಮ - ಪ್ರೀತಿಯತಮ್ಮ

ಅಸುವುಳ್ಳಿನಂ - ಪ್ರಾಣವಿರುವವರೆಗೆ
ಅಂತಕಾತ್ಮಜ - ಧರ್ಮರಾಜ
ಅೞಲು - ದುಃಖವು
ಆಱಿದೊಡೆ - ಶಮನವಾದರೆ
ಅಣಂ - ಸ್ವಲ್ಪವಾದರೂ
ಧವಳಾತಪತ್ರ - ಶ್ವೇತಛತ್ರ
ಏಭಂಡಂ? - ಏನು ಪ್ರಯೋಜನ?
ಖಂಡಿತಂ - ಭಾಗಮಾಡಿದ
ಇರೆಂ - ಇರುವುದಿಲ್ಲ
ಅನ್ನೆಗಂ - ವರೆಗೆ
ಮೆಯ್ಗಱಿದು - ಬಚ್ಚಿಟ್ಟುಕೊಂಡು
ಕಾಲವಂಚನಂಗೆಯ್ವುದು - ಕಾಲಹರಣಮಾಡಬೇಕು
ಅರಿಯರ್ - ಅಸಾಧ್ಯರಾದವರು
ಬಿದಿ - ಸಂ-ವಿಧಿ, ಬ್ರಹ್ಮನು
ಕರ್ಚಿ - ತೊಳೆದು
ಪ್ರಕ್ಷಾಳನ - ತೊಳೆಯುವಿಕೆ
ಜಲಜಾಕರ - ಸರೋವರ
ಮಿನಾಗುತ - ಉಚ್ಚರಿಸುತ್ತ

ದೂರಪ್ರಣತನಾಗಿ - ದೂರದಿಂದ ನಮಸ್ಕರಿಸಿ
ತೃಷ್ಣಾ - ನೀರಡಿಕೆ
ಆಪ್ಯಾಯನಕಾರಿಯಪ್ಪ - ಹಿತಕಾರಿಯಾದ
ಅಡಿವಜ್ಜೆ - ಪಾದತಳ
ಪವನತನಯ - ಭೀಮ

## ೨೧. ಭೀಮಸೇನಾಡಂಬರ

ಕಿರಾತ - ಬೇಡ
ಬೂತು - ದೆವ್ವ
ಭೃಕುಟಿ - ಹುಬ್ಬು
ಕೋಡು - ಚಳಿ, ತಂಪು
ಅಳವು - ಸಾಮರ್ಥ್ಯ
ಅಚಳವಜ್ರಂ - ಪರ್ವತಗಳಿಗೆ ವಜ್ರಾಯುಧ ಪ್ರಾಯನು
ಅವಗಡಿಸು - ತಿರಸ್ಕರಿಸು
ಕೃಷ್ಣಾ - ದ್ರೌಪದಿ
ಅಂಬರಕೇಶ - ಸೀರೆ ಮತ್ತು ಕೂದಲು
ಆಕೃಷ್ಟಿ - ಎಳೆತ, ಸೆಳೆತ
ಕೌಂತೇಯರು - ಪಾಂಡವರು
ಮೂದಲಿಸು - ಮರ್ಮಕ್ಕೆ ತಗುಲುವ ಮಾತುಗಳನ್ನಾಡು
ಉದ್ದಾಮಭೀಮ- ಅತಿಭಯಂಕರನಾದ
**ಅಜಾಂಡ** - ಬ್ರಹ್ಮಾಂಡ
ಪಿಟಿ - ಹಿಂಡು
ರವ ಧ್ವನಿ
ಕಂಠೀರವರವ - ಸಿಂಹಗರ್ಜನೆ
ನಿರಸ್ತ - ಇಳಿಕೆಗೆಯ್ವ
ಘನರವ - ಮೇಘಗರ್ಜನೆ ಗುಡುಗು
ಅರುಣ - ಕೆಂಪಾದ
ಉರಗಪತಾಕ ಸರ್ಪಧ್ವಜ, ದುರ್ಯೋಧನ
ಎಣ್ದೆಸೆ - ಎಂಟು ದಿಕ್ಕು
ನಿಟಲ - ಹಣೆ
ಕೀಲಾಕ್ಷಿ - ಅಗ್ನಿ ನೇತ್ರ
ದಳ್ಳಿಸು - ಪ್ರಜ್ವಲಿಸು
ಅದ್ಭುತನಟ - ಮಹಾತಾಂಡವವನ್ನಾಡುವ ನಟರಾಜ
ಲಂಘಿಸಿದೆಂ - ತಿರಸ್ಕರಿಸಿದೆನು
ಸಮಕಟ್ಟು - ಏರ್ಪಡಿಸು

## ೨೨. ಗದಾಯುದ್ಧ

ವಾರಣ - ಆನೆ
ರಕ್ತಸಿಕ್ತ - ರಕ್ತದಿಂದ ಒದ್ದೆಯಾದ

ನೃಗರಾಜ - ಸಿಂಹ
ಯುಗ – ಎರಡು, ಜೋಡಿ
ಪ್ರಸೂನು – ಹೂವು
ರಾಗ – ಕೆಂಪು ಬಣ್ಣ
ಕಿಂಸುಕದ್ರುಮ – ಮುತ್ತುಗದ ಮರ
ಧಾತು – ಕೆಂಪುಬಣ್ಣದ ಜಾಜಗಲ್ಲುಗಳಿಂದ ಕೂಡಿದ
ಕುಭೃದ್ಯುಗಕ್ಕೆ - ಪರ್ವತಗಳ ಜೋಡಿಗೆ
ಸಿಂಧೂರಿತ - ಸಿಂಧೂರದಿಂದ ಲೇಪಿಸಲ್ಪಟ್ಟ
ಕೋಣೆ - ನುಂಗು
ಉರ:ಸ್ಥಳ - ಎದೆ
ಕ್ಷರತ್ - ಸುರಿಯುವ
ಅಸ್ರಾಂಬು - ರಕ್ತ
ಅವದೆ - ಕರುಣವಿಲ್ಲದೆ
ಲಾಕ್ಷಾಗೇಹ - ಅರಗಿನಮನೆ
ಕೃತಕ - ಸಹಜವಲ್ಲದ
ಅಗಲುರುವಂ - ಅಗಲವಾದ ಎದೆಯನ್ನು
ಬಿಪಂ ನಿಟ್ಟಿಸಿ - ಇಂಬುನೋಡಿ
ಮತಿವಿಕಳನಾಗಿ - ಎಚ್ಚರತಪ್ಪಿ
ಧಾತುನಿರ್ಜರಗಿರಿ - ಜಾಜಗಲ್ಲ ಅಮರಾದ್ರಿಯು

ಕೋಳ್ - ಶೈತ್ಯ, ತಂಪು
ಕೂರದರ್ - ಪ್ರೀತಿಸದೆ ಇದ್ದವರು
ಪೊಡೆಯುಲರಾತಂ- ಕಮಲನಾಭ, ಕೃಷ್ಣ
ನೆಜಂ - ಮರ್ಮಸ್ಥಾನ
ಪೊಲಗಿಡದೆ - ಸ್ಥಾನ, ತಪ್ಪದೆ
ಮಾಜುದ್ದಿ - ಎದರು ಹೊಸೆದು, ಉಜ್ಜಿ
ಸೂಸಿದ - ಬಿದ್ದ
ಸಿಡಿಲೇಟಿಗ್ಗಿಯಿಂದ- ಸಿಡಿಲಿನ ವೇಗದಿಂದ
ಎಜಗಿ - ಮೇಲೆಹಾಯ್ದು
ಕುರುಕುಭೃತ್ - ಕುರುರಾಜನಾದ ದುರ್ಯೋಧನನ
ಚಂಡ - ಭಯಂಕರವಾದ
ನೆಲನನಾನಿದನೆಂತುಂ ಬಿಡೆಂ - ಈ ಭೂಮಿಯನ್ನು ಎಂದೂ ಪಾಂಡವರಿಗೆ ಕೊಡುವುದಿಲ್ಲ
ಕೆಡೆವಂದದೆ - ಬೀಳುವಹಾಗೆ
ಪಂಕಜ - ಕಮಲ
ಸುಹೃತ್ - ಮಿತ್ರ
ತೇಜ - (೧) ಬಿಸಿಲು (೨) ತೇಜಸ್ಸು

ಕರ - [೧] ಕಿರಣ
(೨) ಕೈಗಳು
ಚಕ್ರಾಂಕ - [೧] ಚಕ್ರವಾಕ
ಪಕ್ಷಿ(೨) ಚಕ್ರವರ್ತಿ ಎಂಬ ಹೆಸರು
ಅಂಬರ - [೧] ಆಕಾಶ
[೨] ವಸ್ತ್ರ
ಉರ್ವಿಗೆ ಅಂದಃಕಾರ- [೧] ಭೂ
ಮಿಗೆ ಕತ್ತಲ [೨] ದೇಶಕ್ಕೆ ದುಃಖ
ಕುರುಕುಲಾರ್ಕ - ಕುರುವಂಶಕ್ಕೆ
ಸೂರ್ಯ ಸದೃಶನು
ಅರ್ಕ - ಸೂರ್ಯ
ಅಸ್ತಮೆಯ್ದಿದರ್ - ಮುಳುಗಿದರು
ಪೂಣ್ದಪೂಣ್ಕೆ - ಮಾಡಿದ ಪ್ರತಿಜ್ಞೆ
ನೇರ್ಪಡೆ - ನೆರವೇರುವ
ಹಾಗೆ
ಅಳ್ಕದೆ - ಅಂಜದೆ
ಬಳ್ಕದೆ - ಚಲಿಸದೆ
ಅಭಿಮಾನಧನಂ - ಅಭಿಮಾನವೇ
ಧನವಾಗಿಯುಳ್ಳವನು

## ೨೩. ರಾಜ ನೀತಿ

ಆಱಿಡಿ - ಚಾಡಿ
ಒಟ್ಟೈಚೆ - ಗುಂಪು
ಡಾವರ - ಪೀಡೆ
ಅರಾತಿತರು - ವೈರಿ ವೃಕ್ಷ
ಸೀಂಟು - ಚಿವುಟು
ಪೆರ್ಗೊಡಲಿ - ದೊಡ್ಡಕೊಡಲಿ
ಪೊಂಗು - ಅಲುಗಾಡಿಸು
ಉಚ್ಚಿ - ಹರಟು, ಕೂಗು
ಉಪಧಾ - ಮೋಸ
ವೆಗ್ಗಡೆ - ಪೆರ್ಗಡೆ, ಹೆಗಡೆ
ಒಂದಿದವನು - ಸೇರಿದವನು
ಆತ್ಮಂಭರಿ - ಸ್ವಾರ್ಥಿ,ಲೋಭಿ
ಕುಕ್ಕುಟ - ಕೋಳಿ
ಮೇಷ - ಆಡು, ಮೇಕೆ
ಮಹಿಷ - ಕೋಣ
ಇಭ - ಆನೆ
ತೃಷಾ - ನೀರಡಿಕೆ
ದ್ಯೂತ - ಜೂದು [ದ್ಯೂ]
ಮೃಗವ್ಯ - ಬೇಟೆ
ಗಾಂಪ - ಮೂರ್ಖ

## ೨೪. ನಾಗಶ್ರೀಯ ಪಾಂಡಿತ್ಯ ಸೌಂದರ್ಯ

ವಕ್ಕಾಣಿಸಿ - ಸ್ಪಷ್ಟಪಡಿಸಿ
ಬಾಪ್ಪೆಂಬನ್ನೆಗಂ - ಶಾಬಾಶ್
ಅನುವಂತೆ

## ೨೫. ಚಂದ್ರೋದಯ

ಉಗಿದುವು ಹೊರಕ್ಕೆ ಹಾಕಿ
ದುವು

| | |
|---|---|
| ರ್ವತಗೃಹ | - ಗುಡ್ಡದಲ್ಲಿದ್ದಗವಿ |
| ಂವಾಂಶು | - ಚಂದ್ರ |
| ೇವಸದ್ಮ | - ದೇವರಮನೆ |
| ಚಿಟಯಟ್ಟು | - ಬೆನ್ನಟ್ಟು |
| ಂಗುಡಿಯಿಡು | - ವೃದ್ಧಿಹೊಂದು |
| ಂಗಡಲು | - ಕ್ಷೀರಸಮುದ್ರ |
| ೊಳೆವೋದುದು | - ಅಂಕುರಿತವಾದುದು |
| ೋದಿದುದು | - ಕಂದಿತು ನಾಶವಾಯಿತು |
| ಧ | - ಅರಮನೆ ಪ್ರಾಸಾದ |
| ಲ್ಸರಿ | - ಅತಿವೃಷ್ಟಿ |
| ುಧಾಂಶು | - ಚಂದ್ರ |
| ದನ | - ಮನೆ |
| ಜಿ | - ನದಿ |
| ಳ್ಪಂಗೆಡೆ | - ಶುಭ್ರತೆಯನ್ನು ಪಸರಿಸು |
| ಳಿಂದಿ | - ಯಮುನಾನದಿ |
| ಗ್ಧವಾರ್ಧಿ | - ಕ್ಷೀರಸಮುದ್ರ |
| ನೀ | - ಕಮಲ (ಹಗಲು ಅರಳುವ) |
| ನೋಜಾನಳ | - ಕಾಮಾಗ್ನಿ |

## ೨೬. ರಾವಣನ ಎರಡು ಚಿತ್ರಗಳು

### [೧] ರಾವಣನ ವ್ಯಾಮೋಹ

| | |
|---|---|
| ಪುಟಿಲ್ | - ತೋಪು |
| ಸಂಕಲೆ | - ಸಂಶೃಂಖಲೆ, ಬೇಡಿ |
| ಕಣ್ಬೊಲ | - ದೃಷ್ಟಿಪಥ |
| ಚಳನಯನ | - ಚಂಚಲನೇತ್ರ |
| ಮಂಜರಿ | - ಗೊಂಚಲು |
| ದೊರೆ | - ಸಮಾನ, ಸರಿ |
| ಹೃದ್ಭವ | - ಮನ್ಮಥ |
| ಅಮರಿಯರ್ | - ದೇವತಾ ಸ್ತ್ರೀಯರು |
| ಒಲವು | - ಪ್ರೇಮ |
| ಬಗೆ | - ಮನಸ್ಸು |
| ಏಸು | - ಹೊಡೆತ |
| ಸುಮನಶ್ಶಿಲೀಮುಖ | - ಪುಷ್ಪಬಾಣ |
| ಏಳಿದನಾದಂ | - ತುಚ್ಛನಾದನು |
| ಎನ್ನರುಂ | - ಎಂಥವರು ಕೂಡ |
| ಅನ್ವಯ | - ವಂಶ |
| ಕಯ್ಗಾಯದೆ | - ಪಾಲಿಸದೆ |
| ಸ್ಪೃಹೆ | - ಆಶೆ, ಇಚ್ಛೆ |

| | |
|---|---|
| ಅಬ್ಧಿ | - ಸಮುದ್ರ |
| ವಿಷಾಹಿ | - ವಿಷಸರ್ಪ |
| ಆಳಿಪು | - ದುರಾಶೆ |
| ಅಪತ್ಯ | - ಮಗ |
| ಅಪ್ರಯತ್ನದಿಂ | - ಲೀಲಾಜಾಲವಾಗಿ |
| ಆರಯ್ಯೆ | - ವಿಚಾರಿಸಲು |
| ಕಾವಬೆಸಂ | - ರಕ್ಷಿಸುವ ಕಾರ್ಯ |
| ಕಾವರೆ | - ರಕ್ಷಿಸುವವರೆ |
| ಕಣೆಗೊಂಡರ್ | - ಶಿಕ್ಷಿಸಿದರು, ದಂಡಿಸಿದರು |
| ಮುನ್ನೀರ್ | - ಸಮುದ್ರ |
| ಬೆನ್ನೀರ್ | - ಬೆಚ್ಚನ್ನ ನೀರು |
| ವೀತಶಂಕಂ | - ಶಂಕೆಯಿಲ್ಲದವನು |
| ಇನ್ನರ್ | - ಇಂಥವರು |
| ವಿದ್ವೇಷಣಂ | - ಅತಿ ಹಗೆಯು |
| ತೆಱೆಯೆ | - ಸ್ಪಷ್ಟವಾಗಿ |
| ಪಟಹ | - ವಾದ್ಯ |
| ಏಗೊಳ್ | - ಒಪ್ಪು |
| ಕೇಱು | - ಕೇಳು |
| ಅಂತಪರೆ | - ಎದುರಿಸಬಲ್ಲರೆ |
| ಕಸಲ್ಪು | - ಸಿಟ್ಟಾಗಿ |
| ಆಯತ್ತ | - ಸ್ವಾಧೀನ |
| ಎಸಕ | - ಶಕ್ತಿ, ಕಾರ್ಯ |
| ವೈಕಲ್ಯ | - ಚಂಚಲತೆ, ವಿಪರೀತತೆ |
| ಕಾಪು | - ರಕ್ಷಣೆ |
| ಓಪಳು | - ಹೆಂಡತಿ |
| ತವಿಸು | - ನಾಶಮಾಡು |
| ಅವಂಧ್ಯ | - ಅಮೋಘವಾದ |
| ಆಳಿಪು | - ಕೆಟ್ಟ ಆಶೆ |
| ಸಾರ್ಗೆ | - ಸಮೀಪಕ್ಕೆ |
| ಪೞಿ | - ದೂರು, ನಿಂದೆ |
| ಕಾಳೋರಗ | - ಕರಿನಾಗರ ಹಾವು |

## ೨. ರಾವಣನ ಉದ್ವೇಗ

| | |
|---|---|
| ಇದಿರ್ಚುವನ್ನರ್ | - ಎದುರಿಸುವಂಥವರು |
| ಕಾತರ | - ಆತುರ |
| ಅಲರಂಬು | - ಪುಷ್ಪಬಾಣ |
| ಗಂಡಗಾಡೆ | - ಪರಾಕ್ರಮ |
| ಪೊಲ್ಲವಾರ್ತೆ | - ಕೆಟ್ಟಸುದ್ದಿ |

ಸಿಸಾನನ - ಕಮಲದಂಥ ಮುಖ
ತಲ್ಲಟಿ - ತಲ್ಲಣ, ಪರಿತಾಪ
ನುಜುವಕ್ಷ - ಶತ್ರುಪಕ್ಷ
ಪಚ್ಚಿನ - ಪ್ರೀತಿಯ
ವಿಹ್ವಲೀಭೂತ - ಚಿಂತಾಕ್ರಾಂತ
ಮಿಯ್ಯನೊಕ್ಕು - ಬಿದ್ದು
ಸಂವಳ್ - ಹೊಂದಿದಳು
ಅನುಕಂಪ - ಪಶ್ಚಾತ್ತಾಪ
ುರ - ಹೆಚ್ಚು
ಅಘ - ಪಾಪ, ದುರಿತ
ೀಶೀರಾಗಂ - ದ ರ್ಮೋಹ
ಕದಡಿದ - ಕಲಕಿದ
ಪತ್ತುವಿಡದೆ - ಬಿಡದೆ, ತ್ಯಜಿಸದೆ
ಸಹಜ ಪರಿಣತಿಯೊಳ್ - ಸಹಜವಾದ ಉದಾತ್ತವಾದ ಗುಣದಿಂದ
ವಸನ - ಬಟ್ಟೆ
ಅಂಗರಾಗ - ಲೇಪನದ್ರವ್ಯ
ಪೆಂಪು - ಗೌರವ
ದಿಶಾ - ದಿಕ್ಕು
ದುರ್ಯಶ - ಅಪಕೀರ್ತಿ

ಪಟಹ - ದುಂದುಭಿ
ವ್ಯಸನಾಭಿಭೂತ - ದುರ್ವಸನಿಯಾದ
ಅಳಿವು - ನಾಶ
ಬನ್ನ - ಸಂಭಗ್ನ, ಚ್ಯುತಿ
ಸುಗತಿ - ಮೋಕ್ಷ, ಒಳ್ಳೆಯ ಗತಿ
ಜೀವಸ - ವ್ಯಸನ, ದುಃಖ
ವಿಷಯಾಸವ - ಲಂಪಟ ಪೇಬ ಹೆಂಡ
ಕಡುಪು - ಪರಾಕ್ರಮ
ಜೀಠರ - ವ್ಯರ್ಥ
ದೋರ್ಗರ್ವ - ಬಾಹುಬಲದ ಹೆಮ್ಮೆ
ಇರ್ವಲಂ - ಶತ್ರುಮಿತ್ರಪಕ್ಷದವರು

## ೨೨. ಒಳ್ಳೆಯಕಾವ್ಯದ ಲಕ್ಷಣ

ದೇಸಿ - ಸಹಜಚೆಲುವು
ಬೆಡಂಗು - ಸೊಬಗು
ಓಜೆ - ತೇಜಸ್ಸು
ಕುಸುಜು - ಕಲೆ, ವಿದ್ಯಾ
ವ್ಯಾವರ್ಣಿಸು - ಸೊಗಸಾಗಿ ವರ್ಣಿಸು

ಕೂಡಲಾಱದೆ - ರಚಿಸಲು ಸಾಧ್ಯವಾಗದೆ
ಮಿಸುಕದ - ಕಠಿಣವಾದ, ಸಹಜ ಅರ್ಥ ಮಾಡಲು ಬಾರದ
ಘೃತ - ತುಪ್ಪ
ತೈಲ - ಎಣ್ಣೆ
ಖರಕರ - ಚಂಡಕಿರಣ, ಸೂರ್ಯ
ಸಯ್ತಾಗೆ - ಹಿತವಾಗು ವಂತೆ
ಪೊಲ್ಲಮೆ - ನೆಟ್ಟಗಿಲ್ಲದ್ದು

## ೨೮. ಸುನೀತಿಸಾರ

ವಿಭಾವ - ವಿಪರೀತ ಭಾವ
ಅಪವರ್ಗೋಚಿತಮಾರ್ಗಂ - ಮೋಕ್ಷಕ್ಕೆ ಯೋಗ್ಯವಾದ ಮಾರ್ಗ
ಪಡಿಯಿಂ - ಪಡೆಯುಲಿ
ನಿರ್ವಾಣ - ಮೋಕ್ಷ
ಪೆಱಪೆಱತಂ - ಬೇರೆಬೇರೆಯಾದುದನ್ನು
ಕರ್ಣಪಾರ್ಯ - ನೇಮಿನಾಥ ಪುರಾಣ

## ೨೯. ವನಶ್ರೀ: ಸು [೧೧೫೦]

ಅನುಪಮ - ಅಸದೃಶ–ಉಪಮೆಯಿಲ್ಲದ
ಉರ್ವಿ - ಉಬ್ಬಿ
ಉಲಿಲ್ವ - ಧ್ವನಿಮಾಡುವ ಹಾಡುವ
ಇಂಚರ - ಇಂಪಾದ ಸ್ವರ
ಸರಸಿರುಹಗರ್ಭ - ಬ್ರಹ್ಮ
ಬಗ್ಗಿಪ - ಹಾಡುವ
ಅಗ್ಗದ - ಶ್ರೇಷ್ಠವಾದ
ಷಡಯನ - ಷಟ್ಪದ,ಭ್ರಮರ
ಪಡಿಯುವಜಪಕ್ಕಿ - ಕೋಗಿಲೆ
ಮೃಡರಿಪು - ಶಿವನವೈರಿ, ಕಾಮ
ಚೂತಮಹೀಜ - ಮಾವಿನಮರ
ಕುಟ್ಮಳನಿಕಾಯ - ಮೊಗ್ಗುಗಳ ಸಮೂಹ
ವಿಕೀರ್ಣತಿಪೆತ್ತು - ಅರಳಿ
ಕಂಪುಗೆ - ಕಂಪುಹೊರಡುತ್ತಿರಲು
ಕುಸುಮಿಸಿದ - ಹೂಬಿಟ್ಟ
ಜಿಹ್ವಾಕಳಾಪ - ನಾಲಗೆಗಳ ಸಮೂಹ
ಉರ್ವು - ಆವೇಶ, ಉದ್ರೇಕ

ಕುಸುಮಿಸಿದ - ಹೂಬಿಟ್ಟ
ಭೂಜವ್ರಾತ - ಮರಗಳ ಸಮೂಹ
ನಾಗವರ್ಮ - ಕಾವ್ಯಾವಲೋಕನ

## ೩೦. ಬಂಧುರಕಾವ್ಯ ನಿಬಂಧ

ಪ್ರಚಯ - ಹೆಚ್ಚಿನ
ವೃದ್ಧಂ - ಪರಿಣತನು
ಶ್ರುತವಾರಿನಿಧಿ - ವಿದ್ಯಾಶಾಸ್ತ್ರ ಸಮುದ್ರ
ಪಾರಮಂ - ದಾಟುವುದು, ಅಂತ್ಯವನ್ನು ಕಾಣುವುದು
ಅಭಿಯೋಗರ್ - ಸಂಪನ್ನರು
ವಿಶ್ರುತ - ಪ್ರಸಿದ್ಧವಾದ
ಇಭ - ಆನೆ
ಮಧು - ಮಕರಂದ, ಜೇನು
ಅಪೂರ್ವ - ಪರಾಕ್ರಮ
ವಿದಗ್ಧತೆ - ಪಾಂಡಿತ್ಯ
ಪೆಜಿತು - ಬೇರೆ
ಅಱಿಯೆ - ತಿಳಿದೂ ತಿಳಿದೂ
ದರ್ಪಣ - ಕನ್ನಡಿ
ಒಂದದಂತೆ - ಬಾರದಹಾಗೆ
ಪಿಂಗಿಸಾಗೆ - ಹಿಂಗಿಸಲಿ,ದೂರ ಮಾಡಲಿ
ಹರಿಹರ - ಗಿರಿಜಾಕಲ್ಯಾಣ ಸು (೧೨೦೦)

## ೩೧. ಗಿರಿಜೆಯ ಬಾಲ್ಯ

ಮಾಂಗಾಯ್ - ಮಾವಿನಕಾಯಿ ರೂಪದ ಅಲಂಕಾರ ವಸ್ತು
ಹರಿಸ - (ಸಂ) ವರ್ಷ
ರಾಗಿಸಳ್ - ಪ್ರೇಮಿಸುವಳು
ಲತಾವಿತಾನ - ಒಳ್ಳಿಗಳ ಸಮೂಹ
ಕೃತಕಾಚಲ - ನಿರ್ಮಿತ ಪರ್ವತ
ತಟಾಕ - ಸರೋವರ
ಪ್ರುಳಿನಸ್ಥಳ - ಉಸುಕಿನಸ್ಥಾನ
ಭರ್ಗ - ಶಿವ
ಕಣ್ಮಲರ್ - ಕಮಲ ನೇತ್ರ
ಪುಳಕ - ರೋಮಾಂಚನ
ಉಣ್ಮು - ಉಂಟಾಗು
ಸುಣ್ಮಳಲ್ - ಮೃದುವಾದ ಮಳಲು
ಕರಾಂಗುಲಿ - ಕೈಬೆರಳು
ಭಾರತಿ - ಸರಸ್ವತಿ
ಓರನ್ನವಳ್ - ಸಮನವಾದವಳು
ಪರಿತಂದು - ಓಡಿಬಂದು
ನಗಾಧಿಪ - ಪರ್ವತರಾಜ

ಸೈಕತ - ಮಳಲು, ಉಸಕು

ಕಜ್ಜುವಿಡು - ಎರಕಹೊಯ್

## ೩೨. ತಪೋಮೂರ್ತಿ ವಿರೂಪಾಕ್ಷ

ವಿಳಸತ್ - ಶೋಭಿಸುವ

ವಪು - ಶರೀರ, ದೇಹ

ವಲ್ಕಲ - ನಾರಬಟ್ಟೆ

ಸ್ನಿಗ್ಧ - ಎಣ್ಣೆಯಂತೆ ಹೊಳೆಯುವ ಪ್ರೇಮದಿಂದ ಮನೋಹರವಾದ

ಆಸ್ಯ - ಮುಖ

ಮುಕುಳಿತ - ಅರ್ಧ ತೆರೆದ, ಅರ್ಧ ಅರಳಿದ

ಸಿಷ್ಟಂಪ - ಸಿಷ್ಟಲತೆ

ಪಿಂಗಳವರ್ಣ - ಪಾಟಲಬಣ್ಣ

ಪ್ರಭವ - ಹೆಚ್ಚಾಗಿ ಹುಟ್ಟಿದ

ಪ್ರಭಾ - ಕಾಂತಿ

ಪ್ರಸರ - ವಿಸ್ತಾರತೆ

ರುಚಿ - ಬೆಳಕು, ಕಾಂತಿ

ದಿಕ್ಸಂಕುಳ - ಸರ್ವದಿಕ್ಕಿನ ಸಮೂಹ

ನಿರ್ಮಳೀಕೃತ - ಬೆಳಗಲ್ಪಟ್ಟ

ವಪ್ಪೈಯಿಡು - ನಮಸ್ಕರಿಸು

ನಿಧಾನ - ಭಂಡಾರ

ಕಲ್ಪಮಹೀಜ - ಕಲ್ಪವೃಕ್ಷ

ಉಣ್ಮು - ಹುಟ್ಟು, ಉದಯಿಸು

ಬೀಳಲು - ಕೊಂಬೆಯು ಬೇರು

ಮಂದಾನಿಳ - ಮಂದಮಾರುತ

ಕುಸುಮಚಾಪ - ಕಾಮ

ವಾಮಭಾಗ - ಎಡಸಕ್ಕೆ

ಕುಱುಪು - ಗುರುತು

ಲಲಾಟ - ಹಣೆ

ಕಾರ್ಪಣ್ಯ - ದೀನಭಾವ

ನಿರ್ವೇದ - ದುಃಖ

ಊರ್ಜಿತ - ಸತ್ವಶಾಲಿ

ಭವ - ಶಿವ

ಆಢ್ಯ - ಒಡೆಯ, ಯಜಮಾನ

ಭೂಭೃತ್ಕುಲಾಧೀಶ - ಪರ್ವತರಾಜ

## ೩೩. ಪುಷ್ಪಾರ್ಚನೆ

ಕುಮುದ - ರಾತ್ರಿ ಅರಳುವ ಕಮಲ

ಶಶಿಕಲೆ - ಚಂದ್ರಲೇಖೆ

ವಾರಿರುಹ - ಕಮಲ

ಇಂದಿರೆ - ಲಕ್ಷ್ಮಿ

ಸುಖಾಕರೆ - ಸುಖದಾತವರ್ತನೆ

ತಪತ್ರ - ಕಮಲ
ಗವಂತಿಯರಲು - ಇರವಂತಿಹೂ
ಸು - ಬಾಣದಿಂದ ಹೊಡೆ
ಕ್ಷೆ - ಹೊಡೆದ
ಭವಾಂಘ್ರಿ - ಶಿವನಪಾದ
ಜಾಸುಯ್ಯ - ಕಂಪಾದ
ನಿಶ್ವಾಸ, ಸುವಾಸನೆಯುಳ್ಳಉಸಿರು
ಸಲ್ - ಹಣೆ
ಳ್ಪು - ಮುಳುಗಿ
ರ್ವಾನಿ - ಪಾರ್ವತಿ
ಮಿರ್ವಳ್ - ಉತ್ಸಾಹಗೊಳ್ಳುವಳು
ನಾರುತರ – ಮನೋಹರವಾದ
ಸುಕುಮಾರ – ಅತಿಕೋಮಲವಾದ
ತಾರಾಚಳ – ರಜತಾದ್ರಿ, ಬೆಳ್ಳಿಬೆಟ್ಟ, ಕೈಲಾಸಪರ್ವತ
ಡಿಮಿಡಿಗೊಳ್ – ತಳಮಳಿಸು
ಮೃಗಧರ – ಚಂದ್ರ
ಗಿರಿಜಾವಧು – ಕನ್ಯೆಯಾದ ಪಾರ್ವತಿ

## ೩೪. ಕಾಮದಹನ

ಶಂಬರರಿಪು – ಕಾಮ
ಪುಷ್ಪಾಸ್ತ್ರ – ಪುಷ್ಪಬಾಣ
ಉಜ್ಜುಗ – ಸಂ ಉದ್ಯೋಗ
ಆಕಾಶಸ್ಥ – ಆಕಾಶದಲ್ಲಿರುವ
ನಾಕೌಕರ್ – ಸ್ವರ್ಗನಿವಾಸಿಗಳು, ದೇವತೆಗಳು
ಅಗಜಾ – ಪಾರ್ವತಿ
ಅಭಿಲಾಷಾವಿತತಿ – ಮನೋರಥಗಳ ರಾಶಿ
ಭೂತೇಶ – ಗಣನಾಥ, ಶಿವ
ಉದ್ಯತ್ – ಘನವಾದ, ಉದಾತ್ತವಾದ
ನಾಡೆ – ಅತಿಶಯವಾಗಿ
ನಿಟಲೇಕ್ಷಣ – ಹಣೆಗಣ್ಣ
ಬಾನ್ – ಆಕಾಶ
ಅಗಿಯದೆ – ಹೆದರದೆ
ಪೂಗಣೆಯ – ಕಾಮ

ಘೋಷಾನಲ ವಿಸ್ಫುಲಿಂಗ - ಘೋಷಗಳ ಆಘ್ರಾತದಿಂದ ಹೊರಟ ಬೆಂಕಿಯ ಕಿಡಿಗಳು
ಪ್ರದ್ಯೋತ – ಅತಿ ಬೆಳಕು
ಭಾಳಾಭೀಳ – ಅತಿ ಭಯಂಕರವಾದ ಹಣೆ
ನಿರ್ಜರ – ದೇವತೆ
ಕಂದರ್ಪ – ಮನ್ಮಥ, ಕಾಮ
ಶತಪತ್ರನೇತ್ರ – ವಿಷ್ಣು
ಅನಂಗ – ಕಾಮ
ಭಸ್ಮೋದ್ಧೂಳಿತ – ಭಸ್ಮದಿಂದ ಲೇಪಿಸಲ್ಪಟ್ಟ
ಗಾತ್ರಂ – ದೇಹವುಳ್ಳವನು
ಅಹಿಧರ – ಸರ್ಪಭೂಷಣ
ಅಂತರ್ಧಾನಕ್ಕೆ ಸಂದಂ – ಮಾಯವಾದನು, ಕಣ್ಣಿಗೆ ಕಾಣದಂತಾದನು

## ೩೫. ರತಿಪ್ರಳಾಪ

ಅಧಿಕಾಕ್ಷಿ – ಮೂರನೆಯ ಕಣ್ಣು, ಹಣೆಗಣ್ಣು
ಶಿಖಿ – ಬೆಂಕಿಯುರಿ
ಅಳ್ಕು – ಹೆದರು, ಭಯಪಡು
ಇಂದುಗೆ – ಚಂದ್ರನಿಗೆ
ಉಪದ್ರವ – ತೊಂದರೆ, ಸಂಕಟ [ಗ್ರಹಣ]
ಅಸ್ತರತಿಯೆಂ – ಭೋಗ ವಿಲಾಸಗಳನ್ನು ಕಳೆದುಕೊಂಡ
ಬಿಸುಗಣ್ – ಉರಿಗಣ್, ಅಗ್ನಿನೇತ್ರ
ಕೋಟಲೆ – ಚಿಂತೆ, ಉಪದ್ರವ
ಲಾವಣ್ಯ – ಸೌಂದರ್ಯ
ಮೆಯ್ಮೆ – (ಸಂ) ಮಹಿಮೆ
ಮಕರಪತಾಕ – ಕಾಮ
ಮದಕರಿ – ಮದಿಸಿದ ಆನೆ
ವದನಸರೋಜಭೃಂಗ – ಮುಖಕಮಲಕ್ಕೆ ಭ್ರಮರಸ್ವರೂಪ
ಮಳ್ಗು – ನಾಶವಾಗು

ತವಿಲಾದೆ – ನಾಶವಾದೆ
ಕಱೆಗೊರಲ – ನೀಲಕಂಠ
ಅಲಘುತರ – ಭಾರವಾದ, ಅತಿಯಾದ
ಅಘೌಘ – ಪಾಪರಾಶಿಯನ್ನು ಮಾಡಿದವಳು
ಒಳಕೊಳ್ಳು – ಹೊಟ್ಟೆಯಲ್ಲಿ ಹಾಕಿಕೊಳ್ಳು, ರಕ್ಷಿಸು
ಹತ್ತಿಸಾರು - ಸಮೀಪಕ್ಕೆ ಸಾರು
ತಡವು - ಮೈಮೇಲೆ ಕೈಯಾಡಿಸು
ಪುಯ್ಯಲ್ಚು - ಕೂಗಿಕೊಳ್ಳು
ಅಂತಕಹರ - ಮೃತ್ಯುಂಜಯ, ಶಿವ
ಅಚಳಪತಿ - ಪರ್ವತರಾಜ
ರಜತಗಿರಿ - ಬೆಳ್ಳಿಯ ಬೆಟ್ಟ, ಕೈಲಾಸಪರ್ವತ
ಅವ್ಯಗ್ರ - ಬೇರೆಕಡೆ ಕದಲದ
ನಗಪ್ರಾಗ್ರ - ಪರ್ವತದ ತುತ್ತ ತುದಿ

ಕುಜಪ್ರತತಿ - ಮರಗಳ ಸಮೂಹ
ಸರಸೀಕುಳ - ಸರೋವರಗಳ ಸಮೂಹ
ಶರ್ವ - ಶಿವ
ಆರ್ತಿ - ಪ್ರಿಯಳು
ಮಾರ್ತಾಂಡಂ - ಸೂರ್ಯ
ಸಲಕುಲ - ಸಮೂಹ
ಅಗುರ್ವಪ್ಪಿನಂ - ಬೆರಗುಗೊಳ್ಳುವ ಹಾಗೆ
ಸೀದು - ಕಮರಿಸಿ
ರಸೆ - ಭೂಮಿ
ದವಶಿಖಿ - ದಾವಾಗ್ನಿಯುರಿ
ಅಮೋಘ - ಪ್ರತಿಯಿಲ್ಲದ
ನಿದಾಘ - ಬೇಸಗೆ
ದಶಭುಜನ - ಶಿವನ
ಚಾದಗೆವಕ್ಕಿ - ಚಾತಕಪಕ್ಷಿ [ಸಂ]
ಪಶ್ಚಿಮಾನಿಳ - ಪಡವಣಗಾಳಿ
ಪೂದೊಡಂಬೆ - ಹೂಗೊಂಚಲು
ಮುಗಿಲೊಡ್ಡಣೆ - ಮೋಡಗಳ ಸಮೂಹ

ಕಾರಕೊರ್ವು - ಮಳೆಗಾಲ ದುಬ್ಬರ
ಪಿಸಟಂಬರಿ - ಪ್ರವಹಿಸು
ತಳೆ - ಕೊಡೆ,ಛತ್ರಿ
ನೀರೋಡು - ಶಕ್ತಿಗುಂದು
ರಥಾಂಗ - ಚಕ್ರವಾಕಪಕ್ಷಿ
ಮಾಗಿಯ - ಚಳಿಗಾಲದ
ಭಾಳಲೋಚನ - ಫಾಲಾಕ್ಷ, ಹಣೆಗಣ್ಣ
ಪನ್ನಗಭೂಷಣ - ಸರ್ಪಭೂಷಣ ಶಿವ
ಒರೆದು - ತಿಕ್ಕಿ,ಪರೀಕ್ಷಿಸಿ
ಶೀತಾಂಶು - ಚಂದ್ರ
ಪ್ರಾಣಾನಿಳಂ - ಪ್ರಾಣ ವಾಯು
ಶಿಖಿ - ನವಿಲು, ಬೆಂಕಿ
ಮರಾಳ - ಹಂಸ
ಪೂರ್ಣಕಾಸಾರ - ತುಂಬಿದ ಸರೋವರ
ಪಲ್ಲವಿಸು - ಚಿಗುರು
ಪೂತುದು - ಹೂಬಿಟ್ಟಿತು
ಅನ್ಯಭೃತ - ಕೋಗಿಲೆ, ಪರಪುಟ್ಟ
ದಕ್ಷಿಣಾನಿಲ - ತೆಂಕಣಗಾಳಿ
ತೀಡಿತು - ಬೀಸಿತು

ಶಿಶಿರಋತು - ಮಾಗಿಯ ಕಾಲ
ಶಶಿಮೌಳಿ - ಚಂದ್ರಶೇಖರ, ಶಿವ
ಪಥಶ್ರಮ - ದಾರಿಯ ದಣಿವು
ಅನೂನ - ಕೊರತೆಯಿಲ್ಲದ ಸಂಪೂರ್ಣವಾದ
ಇರ್ಕೆಲ - ಎರಡು ಬದಿ
ಪೊರ್ದಿದಂ - ಸೇರಿದನು
ಚೂತಮಂ - ಮಾವಿನ ಮರವನ್ನು
ಕಪರ್ದಿ - ಶಿವ
ಅಪೂರ್ವಿಗಂ - ಹೊಸಬ, ಹಿಂದೆಎಂದೂ ಕಾಣದೆ ಇದ್ದವನು
ಈಷದ್ - ಸ್ವಲ್ಪ
ಲಸಿತ - ಶೋಭಿಸುವ
ಲಲಾಟ - ಹಣೆ
ಆಮ್ರಫಲ - ಮಾವಿನಹಣ್ಣು
ಕದಳೀಫಲ - ಬಾಳೆಹಣ್ಣು
ತೀವಿ - ತುಂಬಿ
ಕ್ಷುಧೆ - ಹಸಿವು
ಬೆಸಗೊಳ್ - ಕೇಳು

ತಪೋನಿರೋಧ - ತಪಸ್ಸಿನ ನಿರ್ಬಂಧ, ತಪಸ್ಸಿನ ತೊಂದರೆ
ಓಸರಿಸಿ - ಸರಿಪಡಿಸಿ
ಮಧುರ - ಲಲಿತ, ಮನೋಹರ
ಆತುರ ಪುಳಕಮಂ - ತೀವ್ರಗತಿಯಿಂ ದೇಳುವ ರೋಮಾಂಚನವನ್ನು
ಅಂತುಮಿಂತು - ಹಾಗೂ ಹೀಗೂ
ಭುಜಾಳಿ - ಭುಜಗಳ ಸಮೂಹ, ದಶಭುಜಗಳು
ಊರು - ತೊಡೆ
ವೃಷೇಂದ್ರ - ವೃಷಭೇಂದ್ರ, ನಂದೀಶ್ವರ
ಕಚ - ಕೂದಲು
ಏಱುಂಜವ್ವನ - ವೃದ್ಧಿಯಾಗುತ್ತಿರುವ ಯೌವನ
ಆಕ್ಷೇಪಗರ್ಭಿತ - ದೋಷಾರೋಪ ಭಾವವುಳ್ಳ
ಅಶ್ರು - ಕಣ್ಣೀರು
ಧರಾಮರ - ಭೂಸುರ, ಬ್ರಾಹ್ಮಣ

ಪಿತೃವನ - ಸುಡುಗಾಡು, ರುದ್ರಭೂಮಿ
ಕೃಪಾಣ - ಖಡ್ಗ
ರಂಭೆ - ಬಾಳೆಗಿಡ
ಕರಿ - ಆನೆ
ಕೃಶಾನು - ಅಗ್ನಿ
ಕುಮುದ - ರಾತ್ರಿಯಲ್ಲಿ ಅರಳುವ ಕಮಲ
ಮರಾಳ -ಹಂಸ
ಇನಿಯಳ್ - ಮಧುರ ಸ್ವಭಾವದವಳು
ತೊವಲ್ - ತೊಗಲು, ಚರ್ಮ
ತೊಡಿಗೆ - ಆಭರಣ
ಪಂದಲೆ - ಪಚ್ಚನೆ+ತಲೆ–ಹಸಿಯಾದ ರುಂಡ
ಮೃಗಾಂಕಮೌಳಿ - ಚಂದ್ರಮೌಳಿ, ಶಿವ
ದಿಟ - [ಸಂ] ದೃಢ, ಸತ್ಯ
ಮುಗಿಲ - ಮೇಘದ, ಮೋಡದ
ಬಗೆದ - ಉಂಟಾದ
ತಮಂ - ಕತ್ತಲಮಯ

ತರುಣತರಣಿ - ಬಾಲಸೂರ್ಯ
ತಳ್ಗಿದ - ತಗ್ಗಿದ
ಉಡುಪತಿಕಲೆ - ಚಂದ್ರಕಲೆ

## ೩೮. ಬೀಳ್ಕೊಡುವಿಕೆ

ತರಣಿ - ಸೂರ್ಯ
ಪ್ರಭಾದುಕೂಲ - ರಶ್ಮಿಯಿಂದ ಮಾಡಿದ ರೇಶಿಮೆ ಬಟ್ಟೆ
ಮಂಗಳವಾದ - ಕಲ್ಯಾಣ
ಇದಿರ್ಗಂಡು - ಪ್ರತ್ಯಕ್ಷವಾಗಿ
ಹೊಮ್ಮು - ಹೆಚ್ಚಾಗು
ತಕ್ಕೈಸು - ಅಪ್ಪಿಕೊಳ್ಳು
ಶಿವದಿಟ್ಟಿ - [ಸಂ] ಶಿವದೃಷ್ಟಿ
ಅಗ್ಘವಣಿ - ನೀರು, ಜಲ
ಆರೋಗಣೆ - ಊಟ
ಮೋಹದಮುನಿಸು - ಪ್ರೇಮದಸಿಟ್ಟು
ನಿರ್ವೇಗ - ದುಃಖ
ಪಟ್ಟಿರ್ದಿರೆ - ಮಲಗಿರಲು ಧಾ: ಪಡು
ನಿರೋಧ - ಅಡ್ಡಿ, ಕಷ್ಟ
ತ್ರ್ಯಕ್ಷ - ಮುಕ್ಕಣ್ಣ, ಶಿವ
ಅಣುಗರ್ಗೆ - ಪ್ರೀತಿಯುವರಿಗೆ, ಭಕ್ತರಿಗೆ
ಸೆರೆ - ಸರ
ನೇಹ - [ಸಂ] ಸ್ನೇಹ
ಸಂಬಳ - ವಿಶೇಷಬಲ

## ೩೯. ಭಕ್ತ ಹರಿಹರ

ಹರಿಪುದು - ಪರಿಹಾರ ಮಾಡುವುದು
ಮನಸ್ವಿ - ಸ್ವತಂತ್ರ್ಯವುಳ್ಳ
ಅಳ್ಳಾಡದ - ಚಲಿಸದ, ಕದಲದ
ಅಳ್ಕರು - ಪ್ರೀತಿ
ದೇಹೋಹಂ - ದೇಹವೇನಾನು
ಮತ್ - ನನ್ನ
ಕೊಜಿಚಾಡು - ಚ.ಚ್ಚು ಮಾತಾಡು, ನಿಂದಿಸು
ಹಾಹೆ - ಪಾಪೆ, ಗೊಂಬೆ
ಅಲಂಪು - ಸಂತೋಷ
ಉರು - ಹೆಚ್ಚಾದ
ತೊಳ್ತು - ತೊತ್ತು
ಒಚ್ಚತ - ಪ್ರೇಮ
ಲೋಚನ - ಕಣ್ಣು
ಅಂಕುರಪೇಱು - ರೋಮಾಂಚನವಾಗು
ತಾರೆ - ತರಲಿಲ್ಲ
ಒಯ್ಯೆ - ಒಯ್ಯುವುದಿಲ್ಲ

ಎಹಗೆ - ಹೇಗೆ

## ೪೮. ವಿಶ್ವೇಶ್ವರ ಸಾಕ್ಷಾತ್ಕಾರ

ಹೆಂವದ - ಚಲಿಸದ, ಸ್ಥಿರವಾದ

ತರುಣೇಂದುಧರ - ಬಾಲಚಂದ್ರಧರ, ಶಿವ

ತಿಮಿರಪಟಲ - ಕತ್ತಲೆಯ ಸಮೂಹ

ಅಮಿತ್ರ - ಶತ್ರು

ನೇಣು - ಹಗ್ಗ

ಮೋಹು - ಸೇರಿಸು

ಅಷ್ಟದೇಹಿ - ಶಿವ

ಮೋಹರ - ಗುಂಪು

ಚಂದ್ರಾರ್ಕತಾರಾಂರಂ – ಸೂರ್ಯ ಚಂದ್ರ ನಕ್ಷತ್ರಗಳಿರುವವರೆಗೆ

ಅಂಬರ - ಆಕಾಶ

ಗನ್ನಗತಕ - ಅತಿ ಮೋಸ

ನನ್ನಿಕಾಜಿ - ಸತ್ಯವಂತ

ಚಾಂದ್ರಾಯಣ - ಒಂದು ವ್ರತದ ಹೆಸರು

ಭಾಳ : ಹಣೆ, ಫಾಲ [ಸಂ]

## ೪೨. ಬಾಲ್ಯದ ಮರೆಯ ಬೊಮ್ಮ

ಕಱುಗಾವ - ದನಕಾಯುವ

ಮಡಲಿಱಿದು - ಗುಂಪು ಗುಂಪಾಗಿ

ಅಡಸಿ - ಸಾಂದ್ರವಾಗಿ

ಕ್ಷೈಯ್ಯ - ಗದ್ದೆಯ, ಹೊಲದ

ಹರವರಿಯು - ನಿವಾಸದ

ಈರೈದು - ಎರಡು+ಐದು –ಹತ್ತು

ಗರಳ - ವಿಷ

ಅಹಿಭೂಷಣ - ಸರ್ಪಭೂಷಣ

ಉಸಿರಲಮ್ಮದ - ಹೇಳಲು ಸಾಧ್ಯವಾಗದ

ಹಂಜಕ್ಕಿ - ಬೆಳಸಿ,ಸೀತೆನೆ

ಸುರಪತಿ - ದೇವೇಂದ್ರ

ಸುರಭಿ - ಕಾಮಧೇನು

ನಸಿದು - ಕೃಶವಾಗಿ

ಅವಲು - ಅವಲಕ್ಕಿ

ಕಲ್ಪಭೂಜ - ಕಲ್ಪತರು

ಚಿಣ್ಣ - ಸಣ್ಣವನು, ಹುಡುಗ

ಮದನವನದಾವಂ - ಕಾಮನೆಂಬ ಕಾಡಿಗೆ ಕಾಡಾಗ್ನಿ ಸ್ವರೂಪನು

ಅಱಸು - ಹುಡುಕು

ಅಳೆ - ಮಜ್ಜಿಗೆ
ಅಂಬಕಳ - ಅಂಬಲಿ
ಅಮ್ಮಾವು - ಕಾಡಹಸು
ಓಗರ - ಅನ್ನ
ಕೆತ್ತೆ - ಹಾರಲು
ಒಪ್ಪವಳಿದಿರಲು - ಕಾಂತಿಹೀನ, ವಾಗಿರಲು
ಹೊಲಬು - ರೀತಿ, ದಾರಿ ಮಾರ್ಗ
ಕೆಯ್ - ಹೊಲ, ಗದ್ದೆ
ಎಹಗ - ಹೇಗೆ
ತುಱುವಿಂಡು - ಆಕಳ ಗುಂಪು
ಬನ್ನ - [ಸಂ] ಭಗ್ನ, ಕಷ್ಟ, ದುಃಖ
ಧಾತುಗೆಡು - ಶಕ್ತಿಹೀನ ವಾಗು
ಅಂದಣ - ಪಲ್ಲಕ್ಕಿ
ಮಾತಂಗ - ಆನೆ
ಇಱುಹೆ - ಇರುವೆ
ನೆರವು - ಸಹಾಯ, ಆಶ್ರಯ
ದುರಿತ - ಪಾಪ
ಅಲವತ್ತು - ಸಂಕಟಪಟ್ಟು
ಅಲವಱು - ಸಂಕಟ ಪಡು [ಧಾತು]

ಅವ್ವೆಗೆತ್ತು - ತಾಯಿಯೆಂದು ಭ್ರಮಿಸಿ
ಹೆಱೆ - ಚಂದ್ರ
ತೊಱೆ - ನದಿ
ಕಱೆ - ಕಪ್ಪು
ನೊಸಲು - ಹಣೆ
ಆಸತ್ತು - ಬೇಸತ್ತು, ಧಾ: ಆಸಱು
ಅಳಲುರಿ - ದುಃಖಾಗ್ನಿ
ಓತೆಂ - ಪ್ರೀತಿಸಿದೆನು
ಏಳಿಲವ - ನಿರ್ಲಕ್ಷ್ಯ, ತಿರಸ್ಕಾರ
ಮಱಿದಿಂಗಳು - ಬಾಲಚಂದ್ರ
ಕಂಗಳಿಂಗಳ - ನೇತ್ರಾಗ್ನಿ
ಕಮ್ಮರಿ - ಪ್ರಪಾತ, ಕಣಿವೆ
ಏಗುವೆಂ - ಏನುಮಾಡಲಿ
ಭಾಷೆಯಂಪಿಡಿ - ವ್ರತಹಿಡಿ
ಗುಣ್ಪು - ಆಳ
ಅನುಗೆಯ್ - ಸಿದ್ಧವಾಗು
ಅಸಮಾಕ್ಷ - ಕಣ್ಣು ಸಮಾನವಿಲ್ಲದ, ಶಿವ
ಉರಗ - ಸರ್ಪ
ಈರೈದು - ಹತ್ತು
ಗರಳಗಳ - ವಿಷಕಂಠ

ಇಭಚರ್ಮ - ಆನೆದೊಗಲು
ಕುಂಬಿಕ್ಕು - ನಮಸ್ಕರಿಸು

### ೪೩. ಕವಿಗಳ ಅಗ್ಗಳಿಕೆ

ಅಯಶ - ಅಪಕೀರ್ತಿ
ಉಱದೆ - ಲಕ್ಷಿಸದೆ
ಸೌರಭ – ಗಂಧ
ವಾಮನಕ್ರಮ – ವಾಮನ ಹೆಜ್ಜೆಯು
ವಾಮನ – ವಟುವೇಷದ ವಿಷ್ಣು
ಅಳವು – ಶಕ್ತಿ
ಅಗ್ಗಳ – ಹೆಚ್ಚಿನ
ಮರ – ಕಲ್ಪತರ
ಮಣಿ – ಚಿಂತಾಮಣಿ
ಪಶು – ಕಾಮಧೇನು
ಪೀಯೂಷ – ಅಮೃತ
ಉರ್ವರೆ – ಭೂಮಿ
ಗುಣ – ೧) ದಾರ ೨) ಕಾವ್ಯಗುಣ
ಬಣ್ಣ – ೧) ವರ್ಣನೆ ೨) ಬಣ್ಣ
ಚತುರಾಳಿ – ೧) ಪಂಡಿತರ ಸಮೂಹ ೨) ಬುದ್ಧಿವಂತ ಭ್ರಮರ
ಉಬ್ಬಿನಮಾಗೆ – ವಿನೋದವಾಗುವ ಹಾಗೆ
ಬೆಳ್ಳಕ್ಕರಿಗ – ಅಜ್ಞ
ಪಣ – ಹಣ
ಮಲಯಾನಿಲ – ಮಲಯಪರ್ವತದಿಂದ ಬರುವ ಗಾಳಿ
ಮನೋಜ – ಮನ್ಮಥ
ಕೌಮುದಿ – ಬೆಳದಿಂಗಳು

### ೪೪. ಪುರಾಂಗನೆಯರು

ಕಾವಣ – ಹಂದರ, ಚಪ್ಪರ
ಕುಳಿರ್ವ – ಶೀತವಾದ
ಜೊಂಪ – ಗೊಂಚಲು
ಅಣ್ಪು – ಲೇಪನ
ಕರ್ಣಪೂರ – ಕರ್ಣಾಭರಣ
ಪಚ್ಚೆಸಾರ – ಸುಗಂಧದ್ರವ್ಯ
ಲಂಬಣ – ಉದ್ದವಾದ ಹಾರ
ಎಲರ್ – ಗಾಳಿ
ಕುರಳು – ಉಂಗುರ ಗೂದಲು
ನೂಪುರ – ಕಾಲಿನ ಆಭರಣ

ಎಲರ್ - ಗಾಳಿ
ಕುಂದಕುಟ್ಮಳ - ಮಲ್ಲಿಯ ಮೊಗ್ಗೆ
ಅರಲ್ - ಹೂ
ಸಮೆದು - ಮಾಡಿ
ಪಸದನ - [ಸಂ] ಪ್ರಸಾಧನ, ಅಲಂಕಾರ
ನೇಲ್ದು - ತೂಗುಹಾಕಿ
ಸೋಗೆ - ನವಿಲು
ಕಟಿ - ನಿತಂಬ
ತರಳ - ಚಂಚಲವಾದ
ಮೃಗಮದ - ಕಸ್ತೂರಿ
ಪೊಗರು - ಕಾಂತಿ

## ರುದ್ರಭಟ್ಟ–ಜಗನ್ನಾಥ ವಿಜಯ

### ೪೫. ಬಾಲಲೀಲೆ

ಪೊಂಗವಡಿಕೆ - ಬಂಗಾರದ ಕವಡಿ
ಅಸುರವೈರಿ - ಕೃಷ್ಣ
ನಸುಪೊಣ್ಮಿದಂತು - ಸ್ವಲ್ಪಾದರೂ ಹೊರಹೊರಡದಂತೆ
ಪರಿತಂದು - ಓಡಿಬಂದು
ಮುಸಲಿ - ಬಲರಾಮ
ಮಂಜೀರ - ಕಾಲಂದುಗೆ
ಮಂಜು - ಮನೋಹರ
ಕಿಂಕಿಣಿ - ಘಂಟೆ
ರುತಿ - ಧ್ವನಿ, ಶಬ್ದ
ವಕ್ರಿತ – ಬಾಗಿದ
ಕಂಧರ – ಗೋಣು, ಕುತ್ತಿಗೆ
ಸ್ಮೇರವಕ್ತ್ರ – ನಗುವ ಮುಖ
ಆಯತ – ದೀರ್ಘವಾದ ಉದ್ದವಾದ
ಕೈಪಱಿ = ಕೈ ಚಪ್ಪಾಳೆ
ನೀರದೋತ್ಪಲವರ್ಣಂ–(ಮುಗಿಲು) ನೀಲಕಮಲದ ಬಣ್ಣವುಳ್ಳವನು
ಚಾರು – ಮನೋಹರವಾದ
ಹಾಸ – ನಗೆ
ಪೂತನಾಂತಕ – ಪೂತನಿಯನ್ನು ಕೊಂದವನು
ಶಕಟಾಸುರ – ಬಂಡಿರಾಕ್ಷಸ
ಯಮಳ – ಅವಳಿಜವಳಿ
ಕೈವಾರ – ಸ್ತುತಿ
ರಾಗ – ಪ್ರೇಮ
ಅನುಷ್ಠಿತ – ಮಾಡಿದ
ಕಿಸುಗಣ್ – ಕೆಂಪಾದ ಕಣ್ಣು

ಕುಳೋರ್ವೀಧರವೇೞು– ಏಳು ಕುಲ ಪರ್ವತಗಳು
ಈರೇೞು – ಎರಡು×ಏಳು ಹದಿನಾಲ್ಕು
ಆನನ – ಮುಖ

### ೪೬. ಗೊಮ್ಮಟ ಸ್ತುತಿ

ಅತಿತುಂಗ – ಬಹು ಎತ್ತರವಾದ
ಆಕೃತಿ – ಮೂರ್ತಿ, ರೂಪ
ಊರ್ಜಿತ – ಉದಾತ್ತವಾದ
ಕ್ಷಿತಿ – ಭೂಮಿ
ನಾಗಲೋಕ – ಪಾತಾಳ
ಭಿತ್ತಿ – ಗೋಡೆ
ತಾರೌಘ – ನಕ್ಷತ್ರಗಳ ಸಮೂಹ
ವಿತಾನ – ಸಮೂಹ

### ೪೭. ನೀತಿ

ಅಱಿಯದಬೞಿಕ– ಗೊತ್ತಿಲ್ಲದ ಮೇಲೆ
ಏತವನು – ಕಪ್ಪಲಿಯನು
ಏವುದು – ಏತಕ್ಕೆ ಬರುತ್ತದೆ ?
ತಱಿದು – ಕತ್ತರಿಸಿ
ಕಾಲಿನ – ಕಾಲುವೆಯ, ಪ್ರವಾಹದ

### ೪೮. ಸಿರಿಗರಂ ಪೊಡೆದವರು

ಅಭಿಷವಾರಿ – ಅಭಿಷೇಕದ ನೀರು
ಸಮುದ್ಯತ್ – ಉಂಟಾಗುವ
ದುಂದುಭಿಧ್ವಾನ – ಭೇರಿಯಶಬ್ದ
ತೊದಳು – ೧) ತೊದಳು ೨) ಸುಳ್ಳು
ಕಿಸುಗಣ್ಚಿ – ೧) ಕೆಂಪು ಕಣ್ಣು ಮಾಡಿಕೊಂಡು ೨) ಕೋಪದಿಂದ
ಮದಿರ – ಹೆಂಡ, ಕಳ್ಳು
ಸಿರಿಗರ – ಐಶ್ವರ್ಯವೆಂಬ ಗ್ರಹ
ಕನಕ – ಬಂಗಾರ
ಅಭಿಧಾನ – ಹೆಸರು
ಪಾಣ್ಬೆ – ಜಾರಸ್ತ್ರೀ

### ೪೯. ವಾಣಿ

ಛಾಂದಸಿಕೆ – ಮನಬಂದಂತೆ ನಡೆಯುವುದು
ದುರಿತವ್ರಾತ – ಪಾಪಸಮೂಹ
ಕೃಪಾಣಿ – ಖಡ್ಗವುಳ್ಳವಳು

ತರಣದ್ರೋಣಿ – ದಾಟಿಸುವ ದೋಣಿ
ಪ್ರಾಸಾದ – ಅರಮನೆ, ಮೇಲ್ಮಾಳಿಗೆ
ವಿಸರತ್ – ವಿಸ್ತಾರವಾದ

## ೫೦. ಬೇಡರು

ಕುಟಿಲಕೋಟಿ – ಅತಿ ಮೋಸ ವುಳ್ಳ
ಕೌಲೇಯಕ – ನಾಯಿ
ಕೃತಾಂತದೂತರ್ – ಯಮದೂತರು

## ೫೧. ಪಾಮರಿಯರು

ತರಳ – ಚಂಚಲವಾದ
ಅಪಾಂಗಮರೀಚಿ – ಕಟಾಕ್ಷದ ಕಿರಣಗಳು
ಕಳವು – ಬತ್ತ
ಬೆಳ್ವಾರ – ಒಂದು ತರದ ಬಲೆ
ಸೋವ – ಹಾರಿಸುವ, ಓಡಿಸುವ
ಗೋರಿ – ಸಮಾಧಿ
ಪಾರಥರ್ – ದಾರಿಕಾರರು
ಮಂಡಳಿಸಿ – ಗುಂಪುಗುಂಪಾಗಿ
ಚಾರು – ಮನೋಹರವಾದ
ಕಾಂತದ – ಆಕರ್ಷಿಸುವ
ಸತ್ತಿಗೆ – (ಸಂ) ಛತ್ರಿಕಾ

## ೫೨. ಸೋಮೇಶ್ವರ ಶತಕ

ತೆರಬಲ್ಲರ್ – ಕೊಡಲು ಶಕ್ತರು
ಪ್ರೋಣಿ – ಹೊಣೆ
ಕೈಯಾಸೆ – ಲಂಚ
ರಜನಿ – ರಾತ್ರಿ
ಅಂಬೋಜಾಳಿ – ಕಮಲಗಳ ಸಮೂಹ
ಓವು – ಸಾಕು, ರಕ್ಷಿಸು
ಮುಕುರ – ಕನ್ನಡಿ
ನ್ಯಗ್ರೋಧ ಬೀಜ – ಆಲದ ಬೀಜವು
ಪೆರ್ಮರ – ದೊಡ್ಡಗಿಡ
ಗೋಷ್ಠಿ – ಮಾತು

## ೫೩. ಬಲರಾಮನ ಪ್ರಲಾಪ

ಇಂ – ಇನ್ನುಮೇಲೆ
ಮನದಿಚ್ಛೆ – ಮನಸ್ಸಿನ ಬಯಕೆ
ಕೆಮ್ಮನೆ – ಸುಮ್ಮನೆ
ನಿನತು – ನಿನ್ನ

ಓಲೆವಾಗ್ಯಂ - ಓಲೆಯ ಭಾಗ್ಯವು
ಓಸರಿಸು - ಹಿಂದಕ್ಕೆ ಸರಿ
ಮೆಯ್ಗರೆ - ಅಡಗು, ಮರೆಯಾಗು
ಬಾೞ್ಮೊದಲಂ - ಜೀವನಕ್ಕೆ ಮೊದಲಿಗನಾದ
ನುಣ್ಚರ - ಇಂಪಾದ ಸ್ವರ
ದೇಸೆ - ಚೆಲುವು
ಜವ - (ಸಂ) ಯಮ

## ೫೪. ಜೀವಸಂಬೋಧನೆ

ಪೞಿ - ನಿಂದೆ
ಆೞಲು - ಬೇಸರಪಡು
ಅಘ - ಪಾಪ
ಒಡಮೆ - ಸಂಪತ್ತು, ವೈಭವ, ಐಸಿರಿ
ಇನ್ನೆಗಂ - ಇಲ್ಲಿಯವರೆಗೆ
ಗಾವಿಲಿಕೆ - ಮೂರ್ಖತನ
ತಕ್ಕೈಡೆಯೊಳ್ - ಸತ್ಪಾತ್ರದಲ್ಲಿ
ಪಂದೆ - ಹೇಡಿ
ಅೞಿಸುಕ - ದುಷ್ಟಸುಖ
ಓವದೆ - ರಕ್ಷಿಸದೆ
ಸುರಧನು - ಕಾಮನಬಿಲ್ಲು

ಜಳಬುದ್ಬುದು - ನೀರುಗುಳ್ಳೆ
ಕಿಸುಸಂಜೆ - ಕೆಂಪುಬಣ್ಣದಿಂದ ಕೂಡಿದ ಸಂಧ್ಯಾಕಾಲ
ಮುಗಿಲೊಡ್ಡಣ - ಮೇಘಸಮೂಹ
ಕಳತ್ರ - ಹೆಂಡತಿ
ಪರಾಭವ - ಸೋಲು
ಮಿಟ್ಟಿ - [ಸಂ]ವ್ಯತ್ಯ
ಔಂಕು - ಹಿಚುಕು, ಒತ್ತು, ಮುತ್ತು
ಸೇದೆ - ಸೆರೆ, ಕಷ್ಟ

## ೫೫. ಸುಪ್ರಭಾತ

ಕೋಕ - ಚಕ್ರವಾಕ ಪಕ್ಷಿ
ಪತತ್ರಿ - ಪಕ್ಷಿ
ತೂಂಕಡ - ತೂಕಡಿಕೆ
ಅಲರ್ಕೆ - ಅರಳುವಿಕೆ
ಸಮನಿಸು - ಉಂಟುಮಾಡು
ಪ್ರೋದ್ಭೂತ - ಹೆಚ್ಚಾಗಿ ಹುಟ್ಟಿದ
ಶೀತಾನಿಲಂ - ತಂಗಾಳಿ
ಓಸರಿಸು - ತೊಲಗು, ಹಿಂದೆ ಬೀಳು

ನಿಟ್ಟೆಱಂಕೆ - ಉದ್ದವಾದ ರೆಕ್ಕೆ
ಎರಟಿಕ್ಕೆಲ - ಎರಡು ಬದಿ
ಕುಲಾಯ - ಗೂಡು
ಮಹೀಜ - ಗಿಡ, ವೃಕ್ಷ
ಅಚ್ಚಿಱುಗುಟುಕು - ಪ್ರೀತಿಯ ಗುಟುಕು (ತಿನಿಸು)
ಐಕಿಲ್ - ಬರ್ಫ,ಹಿಮ
ಆಱದೆ - ಸಹಿಸಲು ಸಮರ್ಥವಾಗದೆ
ಸರಸಿ - ಸರೋವರವು
ತುಂಬಿವೆರಸಿ - ಭ್ರಮರ ದೊಡನೆ ಕೂಡಿದ
ಒಸಗೆ - ಸಂತೋಷದ ವಾರ್ತೆ
ತಮದಸೆಱೆ - ಕತ್ತಲಿನ ಬಂಧನ
ಇನ - ಸೂರ್ಯ
ವಧೂಟ - ಹೆಂಡತಿ, ಸ್ತ್ರೀ

## ೫೬. ರಾಜಧೂತ

ಅಗ್ರಾಮ್ಯ - ಒರಟುತನ ವಿಲ್ಲದೆ
ಅಮ್ಮದೆ - ಸಮರ್ಥ ವಾಗದೆ

## ೫೭. ಚಂಡಶಾಸನನ ದುರಂತ

ದರ್ಪಾಪಹಂ - ಸೊಕ್ಕನ್ನು ಹೋಗಲಾಡಿಸುವ
ಖರಶಾಣ - ಹರಿತವಾದ ಸಾಣೆಕಲ್ಲು
ನಿಷ್ಪಿಷ್ಟ - ಉಜ್ಜಲ್ಪಟ್ಟ
ಕಣ್ಮಲರ್ - ಕಣ್ಣೆಂಬ ಹೂ
ಉಪಾಯನ - ಕಾಣಿಕೆ
ಸಾತ್ಕೃತಂ - ಆನಂದಿಸಲ್ಪಟ್ಟದ್ದು
ಮೃಗನಾಭೀಸಾರ - ಕಸ್ತೂರಿ
ಅಭ್ರಂ - ಆಕಾಶ
ವಿಭೂತಿ - ವೈಭವ
ಚಾರುರವ - ಮನೋಹರವಾದ ಧ್ವನಿ
ಪೊಣರ್ಕೆ - ಕುಸ್ತಿ, ಕಾಳಗ
ವಾರುವ - ಕುದುರೆ
ಮೇಷ - ಟಗರು
ಕಂದುಕ - ಚೆಂಡು
ಕರವಾಳ್ - ಕೈಗತ್ತಿ
ಅದವಟಲು - ದುಃಖ

ಆದಂ - ಹೆಚ್ಚಾಗಿ
ಸೌರಭ - ಗಂಧ
ದೀವ - ಬೇಟೆಯನ್ನು ಹಿಡಿಯಲು ಆಕರ್ಷಕವಾಗಿ ಉಪಯೋಗಿಸುವ ಪ್ರಾಣಿ
ಅಲರ್ವ - ಅರಳಿದ
ಕೆತ್ತುವ - ಹಾರುವ
ಎಬಿಲ್ವ - ಜೋತಾಡುವ
ನವಿರ್ - ಕೂದಲು
ಪರಿಮಿತಿ - ಕೆಲವುಮಾತ್ರ
ಪರಿತೆ - ಕೂಡಿದವಳು
ಅಳ್ಳೆರ್ದೆ - ಹಾರುತ್ತಿರುವ ಎದೆಯು
ಉರಗ – ಹಾವು
ಕಡುಜರು – ಕಡುಜೀರಿಗೆ ಹುಳು
ಹಮ್ಮದಂಪೋಗು -- ಮೂರ್ಛೆ ಹೋಗು
ಪುಯಿಲ್ – ರೋಧನ
ಆಟಿಸು – ಬಯಸು
ಕನಲ್ – ಸಿಟ್ಟಾಗು
ರಸಾಲ – ಮಾವಿನ
ಶ್ಲಥ – ಅಸ್ತವ್ಯಸ್ತವಾದ

ಆಕ್ರಂದಿತ – ರೋದನೆಯಿಂದ ಕೂಡಿದ
ಬಂಡಣ – ಯುದ್ಧ
ವಿಧಾತೃ – ಬ್ರಹ್ಮ
ಕೋಳ್ಪಡು – ಸೆರೆಹಿಡಿ, ಬಂಧಿಸು
ಅಹಿತ ಪ್ರಾಣಾನಿಲ -- ವೈರಿಯೆಂಬ ಪ್ರಾಣವಾಯು
ಕೃಪಾಣಾಹಿ – ಖಡ್ಗವೆಂಬ ಸರ್ಪ
ಊಡು – ಉಣಿಸು
ವ್ಯತಿಕರ – ಸಂದರ್ಭ
ಪಣ್ಣು – ಸಿದ್ಧವಾಗು
ಪಲ್ಲಣಿಸು – ಜೀನುಹಾಕು
ತಿಂತಿಣಿಸು – ಗುಂಪಾಗು
ವಿಹ್ವಲ – ದುಃಖಿತ
ತಳ್ಳಂಕಗೊಳ್ಳು – ಕಳವಳಗೊಳ್ಳು
ತೂರ್ಯ – ವಾದ್ಯ
ಆಳಕಿ -- ಕೂದಲುಳ್ಳವಳು
ವಾರ್ಬಿಂದು – ನೀರಿನ ಕಣ
ಪ್ಲುಷ್ಟ – ಕಂದಿದ
ಅವಗುಂಠನ - ಮುಸುಕು
ಪಾಂಡುರುಚಿ - ಬಿಳಿಬಣ್ಣ

ಸಾರ್ದಂ - ಸಮೀಪಿಸಿದನು
ಬಾಳಮೃಣಾಲ - ಎಳೆಯಕಮಲ
ಒಡಂಬಡಂ - ಒಪ್ಪಿಗೆ, ಸಮ್ಮತಿ
ತೊೞ್ತು - ತೊತ್ತು, ದಾಸಿ
ದೇಸಿಗಿತಿ - ದಿಕ್ಕಿಲ್ಲದವಳು ಪರದೇಶಿ
ಮದ್ಭುಜಸ್ರಜಂ - ನನ್ನ ತೋಳೆಂಬ ಮಾಲೆ
ಸಯೆ - ಸಾಯೆ
ಅಳಿಪು - ಕೆಟ್ಟಆಶೆ
ಕಿತದ - ಮೋಸಗಾರ
ಕೈತವ - ಮೋಸ, ಕಪಟ
ಸೆಟ್ಟೈದು - ಸೋತಿತು
ಅೞಿ - ನಾಶವಾಗು
ಪಂದಲೆ - ರಕ್ತದಿಂದ ಕೂಡಿದ ತಲೆ
ಕೇಯೂರ - ತೋಳ್ಸರಿಗೆ
ಪ್ರೞಿಪಗೆ - ದುಷ್ಟವೈರಿ, ನೀಚಶತ್ರು
ತೞ್ಕೈಸು - ಆಲಿಂಗಿಸು
ಮಳಯಜ - ಗಂಧ
ಧೂಮಸೌಧ - ಹೊಗೆಯ ಅರಮನೆ
ಶಿಖಿಪಲ್ಲವರಾಗತಲ್ಪ - ಬೆಂಕಿಯೆಂಬ ಎಲೆಗಳ ಬಣ್ಣದ ಹಾಸಿಗೆ
ಪರಿಚ್ಛೇದಿಸು - ನಿರ್ಧರಿಸು
ರಾಜಕೀರ - ಅರಗಿಳಿ
ತಳ್ತೆವೆ - ಸಾಂದ್ರವಾದ ಎವೆಗಳು
ಇಭವ್ರಾತ - ಆನೆಗಳ ಸಮೂಹ
ಶೋಕಾಕುಳ - ದುಃಖದಿಂದ ಕೂಡಿದ
ತಿಣ್ಣಮಾಗು - ಹೆಚ್ಚಾಗು
ವೃತ್ತಕ - ವರ್ತಮಾನ
ಕರುವಿಡು - ಎರಕ ಹೊಯ್ಯು
ಕಱಿಪ್ಪೂ - ಬಾಡಿದಹೂ
ಬಾೞ್ವೆಣ - ಜೀವದಹೆಣ
ಬೇಳಂಬ - ಹವ್ಯಾಸ

## ೫೮. ಮನಸಿಜನ ಮಾಯೆ

ವಿಷಯ - ದೇಶ
ಆಸ್ಯ - ಮುಖ
ನಾಸಾಕುಟ್ಮಳ - ಮೂಗೆಂಬ ಮೊಗ್ಗು
ದೊರೆವಡೆದ - ಪ್ರಸಿದ್ಧಿಯನ್ನು ಹೊಂದಿದ

ನನೆಯ ನಾರು - ಹೂವಿನ ಬಿಲ್ಲಿನ ದಾರ

ದೀವ - ಬೇಟೆಯುನ್ನು ಸೆಳೆಯಲು ಇಟ್ಟ ಪ್ರಾಣಿ

ಸುಮನೋಬಾಣ - ಮನ್ಮಥ

ಗೋರಿಹೊಳಿಸು - ಪರಿತಪಿಸು, ಆಕರ್ಷಿಸು

ಅಂಬರತರಂಗಿಣಿ - ಆಕಾಶಗಂಗೆ

ದವಳಾರ - ಧವಳಾಗಾರ [ಸಂ] ಶುಭ್ರ ಗೃಹ

ಗರಟಿಕೆ - ಗಸ್ತಿ

ಉಕ್ಕಡ - ಊರುಬಾಗಿಲು, ಠಾಣೆ

ಮಳ್ಗು - ಅಡಗು, ಕಡಿಮೆಯಾಗು

ಬದಗಂ - ನೀಚಸೇವಕ

ಬಿನದ - [ಸಂ] ವಿನೋದ

ಶತಕಬೀಜ - ಕದಡಿದ ನೀರನ್ನು ಸ್ವಚ್ಛ ಮಾಡುವ ಬೀಜ

ಪಸಾಯದಾನ - ಮೆಚ್ಚಿಗೆಯ ದಾನ

ದಂತಿಪ - ಮಾವುತ

ಸ್ವಾಂತೆ - ಮನಸ್ಸುಳ್ಳವಳು

ಅಪಾತ್ರೇರಮತೇನಾರೀ- ಅಯೋಗ್ಯರಲ್ಲಿ ಸ್ತ್ರೀಯರು ರಮಿಸುತ್ತಾರೆ

ವಿಷಣ್ಣ - ದು:ಖದಿಂದ ಕೂಡಿದ

ಉಚ್ಛ್ವಸನಿತಪ್ತಾಧರರುಚಿಯಂ- ಉಸಿರು ಬಿಡುವುದರಿಂದ ಕಾಯ್ದು ಕೆಂಪಾದ ಕೆಳದುಟಿಯುಳ್ಳವಳು

ಕಂತು - ಕಾಮ, ಮನ್ಮಥ

ಕೂರಸಿ - ಹರಿತವಾದ ಖಡ್ಗ

ಗರಗರಿಕೆ - ಗದ್ಗದ

ಅಸಿಯಳ - ಕೋಮಲಾಂಗಿಯೇ

ಕೂರ್ತೆ - ಪ್ರೇಮ ಮಾಡಿದೆ

ಈದೊರೆಯಂ - ಇಂಥವನು

ಬಿಬ್ಬಿಜುವಲ್ (ಪಲ್) - ಉಬ್ಬಿನ ಹಲ್ಲು

ಕುಚಿ - ಕುಣಿ, ತಗ್ಗು

ನೊಸಲ್ - ಹಣೆ

ಕುಱುಗಣ್ಣು - ಸಣ್ಣ ಕಣ್ಣು
ಮೋೞಿಗೆ - ಕಟ್ಟಿಗೆಯ ಹೊರೆ
ಮುರುಡು - ವಕ್ರ, ಸೊಟ್ಟ
ಕೊಂಕು - ಡೊಂಕಾದ
ವಾರ್‌ಬಿಂದು - ನೀರಿನಹನಿ
ಮಲಯಜ - ಗಂಧದ ಗಿಡ
ಸ್ಮರಚಾಪ - ಕಾಮನಬಿಲ್ಲು
ಪೊಲ್ಲಮೆ - ಕೆಟ್ಟದ್ದು, ದೋಷ
ಎರವಿಗೊಂಡು - ಬೇಡಿಕೊಂಡು
ಪೋಗಂಡ - ನೀಚಗಂಡಸು
ಬಿದಿ - ದೈವ [ವಿಧಿ-ತ್ಸ]
ಮನಸಿಜ - ಕಾಮ
ವಿಧಿವಿಳಸನ - ದೈವಲೀಲೆ
ನೆರ - ಸಹಾಯ

## ೫೯. ಮಾಗಿ

ಜಾದಿ - ಜಾಜಿಯ ಹೂ
ಪಿಕಪ್ರಣಾದ - ಕೋಗಿಲೆಯ ಕೂಗು
ಅನಿಲ - ಗಾಳಿ
ತುಹಿನಾಚಳ - ಹಿಮಪರ್ವತ
ಪಾಂಡುರತ್ವ - ಬಿಳಿಯಬಣ್ಣ
ತುಷಾರನಿಕರ - ತುಂತುರು ಹನಿಗಳ ಸಮೂಹ
ನೇಸರ್ - ಸೂರ್ಯ
ವಿಯತ್ - ಆಕಾಶ
ನಿಶೀಥಿನಿ - ರಾತ್ರಿ
ತುಹಿನಾಗಮ - ಚಳಿಪ್ರವೇಶ
ಭರ್ತಾರ - ಗಂಡ
ಅಬ್ಜಸಖ - ಸೂರ್ಯ
ಇಂದ್ರದಿಗ್ಭಾಮಿನಿ - ಪೂರ್ವಾಂಗನೆ
ಹಿಮರುಚಿಬಿಂಬ - ಚಂದ್ರಬಿಂಬ
ಅರಸಂಚೆ - ರಾಜಹಂಸ
ಹೃತ್ಕಂಜಗಳ್ - ಹೃದಯ ಕಮಲಗಳು
ಕುಜೋತ್ಕರ - ಗಿಡಗಳ ಸಮೂಹ
ವಿತತ ತಟಾಕ - ವಿಸ್ತಾರವಾದ ಸರೋವರ
ಸಲಿಲ - ನೀರು
ಶಿಶಿರಾಗಮ - ಚಳಿಗಾಲ ಪ್ರವೇಶ

## ೬೦. ಗ್ರೀಷ್ಮ

ಪುತ್ತು – ಹುತ್ತು
ಚಂಡಮರೀಚಿ – ಸೂರ್ಯ

ಮರೀಚಿ – ಕಿರಣ
ಪರಲ್ಗಳ್ – ಹರಳುಗಳು
ಆರಲ್ಗಳ್ – ಅರಳುಗಳು
ವಕ್ತ್ರವಿಷಾನಲ – ಬಾಯಿಯ ವಿಷವೆಂಬ ಬೆಂಕಿ
ವಿಸ್ಫುಲಿಂಗ – ಕಿಡಿ
ನಿದಾಘ – ಬೇಸಿಗೆ
ಅಜಾಂಡ – ಬ್ರಂಹ್ಮಾಂಡ
ದೂವೆಗಿಚ್ಚು – ಹೊಗೆಯಿಂದ ಕೂಡಿದ ಕಿಚ್ಚು
ಬೆಂಚಿ – ಹೊಂಡ, ಕೆರೆ
ವನ್ಯಲುವಾಯು – ಕಾಡಕೋಣ

**೬೧. ಸಂಧ್ಯಾರಾಗ**

ಕಾಂಚನಾಚಳ – ಸುವರ್ಣ ಗಿರಿ ಮೇರುಪರ್ವತ
ಆತಪ – ಬಿಸಿಲು
ದೀಧಿತಿ – ಕಿರಣ
ವಾರಣೀಸೌಂದರಿ – ಪಶ್ಚಿಮಾಂಗನೆ
ಪವಮಾನ ಪಥಾಂತರ- ಆಕಾಶ ಮಾರ್ಗ
ಅಪರಾಚಳೇಂದ್ರ – ಪಶ್ಚಿಮಾದ್ರಿ ಪಶ್ಚಿಮಬೆಟ್ಟ
ವನನಿಧಿ – ಸಮುದ್ರ
ಗುಣ್ಪು – ಆಳ
ಮಕುಟ – ಕಿರೀಟ
ಬಿಸರುಹಮಿತ್ರ – ಸೂರ್ಯ
ಇನ – ಪ್ರಿಯ,ಗಂಡ
ರಾಜ – ಚಂದ್ರ
ಲುಳಿತವಿಳಾಸ – ಬೆಡಗನ್ನು ಕಳೆದುಕೊಂಡ
ಪದ್ಮಿನಿ – ಹಗಲು ಅರಳಿದ ಕಮಲ
ಉತ್ಪಳಿನಿ – ರಾತ್ರಿ ಅರಳುವ ಕಮಲ
ಕುಟ್ಮಳಿತ ಸರೋರುಹ– ಮೊಗ್ಗಾದ ಕಮಲ
ಸ್ವನ – ನಾದ, ಸ್ವರ
ಅಬ್ಜಿನಿ – ಕಮಲಸ್ತ್ರೀ
ಕೋಕಾಂಗನೆ – ಹೆಣ್ಣು ಚಕ್ರವಾಕ ಪಕ್ಷಿ
ಆಲೋಲ – ಸಂಚರಿಸುವ, ಬೀಸುವ
ಅಂಜನಕುಂಜರ – ಪಶ್ಚಿಮ ದಿಕ್ಕಿನ ಆನೆ
ಮಿತ್ರ – ಸೂರ್ಯ, ಗೆಳೆಯ

## ೬೨. ಪುನರ್ಮಿಲನ

ಬಾಂದೊಱೆದಲೆಯ– ಶಿವ, ಗಂಗಾಧರ
ಪೂಗಣೆಯ – ಕಾಮ
ಮುಚ್ಚಿವೋಗಿ – ಮೂರ್ಛೆಗೊಂಡು
ಪಱಿಗಿಡೆ – ಕಣ್ಪರೆಯು ಕೆಡುವಂತೆ
ಅಳುಂಬ – ಅಧಿಕ್ಯ
ಕುಳಿರ್ವ – ತಂಪಾದ
ಕಾವಣ – ಮಂಡಪ
ಆಱಳ್ – ಸಮರ್ಥಳಾಗಲಿಲ್ಲ
ಕಾಲ್ಗಳ್ – ಕಾಲುವೆಗಳು
ಪರಿತರ್ಪ – ಹರಿಯುವ
ಇಚ್ಚೆಗಾರ್ತಿ – ಇಚ್ಛೆಯನ್ನು ತಿಳಿದವಳು, ಪ್ರಿಯಳು
ನನೆದಿಲ್ಲ -- ಕಾಮ, ಮನ್ಮಥ
ಪುರುಳಿ – ಗಿಳಿ
ಅಂಚೆ – (ತ್ಸ) ಹಂಸ
ಅರಯ್ದು – ಹುಡುಕಿ
ಕೈವಂದ – ಪಕ್ವವಾದ
ಕಡವರ – ಬಂಗಾರ
ನೀಱೆ – ಕುಲೀನಸ್ತ್ರೀ
ಕಾಲ್ಪೊಯ್ಯು – ಕಾಲಿನ ಹೊಡೆತ, ಒದೆಯುವಿಕೆ
ಅಸುಗೆ – ಅಶೋಕವೃಕ್ಷ
ಸೂಟೈಸು – ಬಾರಿಸು
ನಿಸ್ಸಾಳ – ಕಹಳೆ
ಕೊಡಂಕೆ – ಕಿವಿ
ಪೇರುರ – ಪಿರಿದು–ಉರ ದೊಡ್ಡಎದೆ
ದಿಟ್ಟಿ – ದೃಷ್ಟಿ (ತ್ಸ) ದೃಷ್ಟಿ
ಅಳವಱಿದು – ಯೋಗ್ಯತಾನುಸಾರ
ನೊಸಲು – ಹಣೆ
ಕುರುಳೋೞಿ – ಉಂಗುರ ಗೂದಲಿನ ಸಮೂಹ
ಜೊನ್ನ - (ತ್ಸ)ಜೋತ್ಸ್ನ
ಅಗ್ಗದ - ಶ್ರೇಷ್ಠರಾದ
ಸುಗಿ - ಉರಿ
ಪಳುಕ - (ತ್ಸ) ಸ್ಫಟಿಕಾ
ಜಕ್ಕವಕ್ಕಿ - (ತ್ಸ) ಚಕ್ರವಾಕ ಪಕ್ಷಿ
ತುಱುಗಿದ - ಸಾಂದ್ರವಾದ
ಎಲರು - ಗಾಳಿ

ಅಲರು - ಹೂವು

ಕರ್ವುರಗೋಲ - ಕಬ್ಬಿನ ಬಾಣ

### ೬೩. ಸಲಿಲಕೇಳಿ

ಸಲಿಲಕೇಳಿ - ಜಲಕ್ರೀಡೆ

ನಳಿನ - ಕಮಲ

ಆಸ್ಯ - ಮುಖ

ಮರಾಳ - ಹಂಸ

ಯಾನ - ನಡಿಗೆ

ಪಾಠೀನ - ಒಂದು ತರ ಹದ ಮೀನು

ಸೈಕತ - ಉಸುಕು

ನಿತಂಬ - ಕಟಿಪ್ರದೇಶ

ನಿಭ - ಸಮಾನ ವಾದ

ಕುಂತಳ - ಕೂದಲು

ಜಲರುಹ - ಕಮಲ

ವಕ್ತ್ರ - ಮುಖ

ಶಫರ - ಒಂದು ತರ ಹದ ಮೀನು

ಪುಳಿನ - ಮರಳಿನ ದಿನ್ನೆ

ಕಂಬು - ಶಂಖ

ಕಂಧರ - ಕಂಠ

ವಿದ್ರುಮ - ಹವಳ

ಸನ್ನಿಭ - ಸಮಾನ ವಾದ

ಓಷ್ಠ - ತುಟಿ

ಜಾಹ್ನವಿ - ಗಂಗೆ

ಕಂಚುಕ - ಸೆರಗು

ಜೀರ್ಕೊಳವೆ - ಪಿಚಕಾರಿ

ತ್ರ್ಯಂಬಕ - ಮುಕ್ಕಣ್ಣ, ಶಿವ

ವಳಿ - ನಿರಿಗೆ, ಪೊದರು

ಜಘನ - ನಿತಂಬ

ಶೈವಳಂ - (ಶೈವಾಲ ಸ ನಾ. ಹಾವುಸೆ

ಕರ್ಪುರ - ಕಪ್ಪು

ಅಧರ - ಕೆಳದುಟಿ

ಉದ್ಘ - ಹೆಚ್ಚಿನ

ವಿತತಿ - ಸಮೂಹ

ನಿಷಂಗ - ಬತ್ತಳಿಕೆ

ಪದಪು - ಸಂತೋಷ

ಕುಳಿರ್ವ - ತಂಪಾದ

ಭಾಜನ - ಆಶ್ರಯ, ಗುರಿ

ಪಳಿ - ನಿಂದೆ

ವಿದಗ್ಧ - ಚತುರೆ

ಅಹಿ - ಸರ್ಪ

ಸಿತಾಕ್ಷಿ - ಶುಭ್ರಲೋಚನೆ

ದೃಕ್ - ಕಣ್ಣು

ಬಿಸಜ - ಕಮಲ
ವ್ರಾತ - ಸಮೂಹ

### ೬೪. ಬಸವಣ್ಣನ ಭಕ್ತಿ

ಜಡಧರ - ಮೋಡ
ಶಕ್ರಚಾಪ - ಕಾಮನಬಿಲ್ಲು
ಹಿಮಭಾನು - ಚಂದ್ರ, ಶೀತ ಕಿರಣ
ದಂತಿ - ಆನೆ
ದಾನ - ಮದೋದಕ
ಮೋಹರ - ಕಾಳಗ
ಸೂನೃತ - ಸತ್ಯ
ಆಲಾಪ - ಮಾತು
ತನೂಭವ - ಮಗ
ಭೂವರ - ಅರಸು
ಆರವೆ - ತೋಟ
ಚಾಗಿ - ದಾನಿ
ಹದುಳ - ಸಂತೋಷ, ಆರೋಗ್ಯ

### ೬೫. ನವ್ಯಕಾವ್ಯ

ವಿಲೋಮ - ತಿರವುಮುರವು
ಪಿಕ್ಕು - ಹಳಿ
ಸುಮನ - ಪುಷ್ಪ, ಬುಧ
ಇಂಗಡಲ್ - ಕ್ಷೀರಸಮುದ್ರ
ಪಂದೆ - ಹೇಡಿ
ಪ್ಲವಗ - ಕೋತಿ
ಸ್ತಬಕ - ತಾಟು, ಹರಿವಾಣ

### ೬೬. ವನಲಕ್ಷ್ಮಿ

ಯಮಿ - ತಪಸ್ವಿ
ನನೆ - ಪುಷ್ಪ
ಓಪರು - ದಂಪತಿಗಳು
ಕುಸುಮೇಷು - ಪುಷ್ಪಬಾಣ
ಅಸುಗೆ - ಅಶೋಕ
ಪನಸು - ಹಲಸು
ಪಡಿಯುರವಕ್ಕಿ - ಗಿಳಿ
ಬಿಸಜಾಕ್ಷ - ಕಮಲಾಕ್ಷ, ಕೃಷ್ಣ
ಪರದ - ಬಣಜಿಗ, ವ್ಯಾಪಾರಿ
ಶಾಲಿಯುವನ - ಬತ್ತದ ಗದ್ದೆ
ಕಳವೆದೆನೆ - ಬತ್ತದ ತೆನೆ
ಪಾಮರಿ - ಗದ್ದೆಯುರಕ್ಷಕಿ
ರಯ್ಯ - ರಮ್ಯ
ಪಗಲಬಲ್ಲಹ - ದಿನನಾಥ, ಸೂರ್ಯ
ಬರಿಕಯ್ಯ - ಸೊಂಡಿಲು
ಬ್ರಂಹಿತ - ಆನೆಯ ಕೂಗು
ಪಕ್ಕರಕ್ಕೆ - ಜೂಲ
ಅತನು - ಮನ್ಮಥ
ತೊಂಗಲ್ - ಗುಚ್ಚ
ರಿಕ್ಕಟ - ವ್ಯರ್ಥ

## ೬೭. ವನಲಲನೆ

ನಿಕರ - ಸಮೂಹ
ಸೀಗುರಿ - ಚಾಮರ
ಕಚ - ಕೂದಲು
ಕೀರ - ಗಿಳಿ
ರಂಭೋರು - ಬಾಳೆಯ ದಿಂಡಿನಂತೆ ತೊಡೆ
ಹರ್ಮ್ಯ - ಅರಮನೆ
ಕುಜ - ಗಿಡ
ಸಹಕಾರ - ಮಾವಿನ ಮರ
ಕೇತಕಿ - ಕೇದಿಗೆ
ಮದೇಭ - ಮದಿಸಿದ ಆನೆ
ಪಲಾಶಪಮರ - ಮುತ್ತುಗದ ಮರ

## ೬೮. ಮಾಯೆಯ ಸೋಲು

ವಿಕಳತನ - ದುಷ್ಟತನ
ಅನಿಮಿಷತೆ - ಏಕದೃಷ್ಟಿ
ಹಮ್ಮೈಸು - ಮೂರ್ಛೆ ಹೋಗು
ಈರೇಳು – ಹದಿನಾಲ್ಕು
ತರಹರ – ತಾಪ
ಲಾಕುಳ – ಯೋಗದಂಡ
ಯೋಗಪಟ್ಟಿಕಾ – (ಸಂ) ಜೋಗ ವಟ್ಟಿಗೆ
ಬೋಳೆಯ – ದೇವತೆ
ಹರಿತಹ – ಓಡಿಬರುವ
ಬೇಳುವೆ – ಪಾಪ
ಲೋಗರ – ಲೋಕದ
ಆಟಮಟಿಗ – ಮೋಸಗಾರ
ವಿರಂಚಿ – ಬ್ರಹ್ಮ
ಕಟಕ – ಸಮೂಹ
ಕಚ್ಚುಟ – ಕೌಪೀನ
ಲೋಚು – ಕೂದಲನ್ನು ಕೀಳಿಸಿಕೊಳ್ಳುವ ಜೈನ ಪದ್ಧತಿ
ಜೋಡಾಡಿ – ಮೂದಲಿಸು
ಇಮ್ಮೆ – ಎರಡುಸಲ
ಹೂಣಿಕೆ – ಇಚ್ಛೆ
ಚಾಗುಗೆ – ಭಾಪುರೆ
ಗಸಣಿ – ಘರ್ಷಣೆ
ಪೈಜೆ – ಪಂಥ

## ೬೯. ಪಾಂಡುರಾಜನ ದುರಂತ

ವ್ಯಾಳ – ಸರ್ಪ
ವಿಪಿನ – ಅರಣ್ಯ
ಸೆಗಳಿಕೆ – ತಾಪ
ಸಬಳ – ಕತ್ತಿ
ವಳಯ – ಮಂಡಲ
ಹೊರೆದು – ವ್ಯಾಪಿಸಿ

## ೭೦. ದ್ರೌಪದೀ ಸ್ವಯಂವರ

ಖಚರ – ದೇವತೆ
ವಿಡಾಯ – ಸೊಬಗು
ಪರುಠವಿಸು – ಶೃಂಗರಿಸು
ರಿಂಗಣ – ಕುಣಿತ

ಚಾರಣ – ಭಟ್ಟಂಗಿ
ಭುಜಗರು – ನಾಗರು
ತ್ರಿಗುರ – ಕಸ್ತೂರಿ
ದಶನ – ಹಲ್ಲು
ಸೃಣಿ – ಅಂಕುಶ
ಕಲಭ - ಆನೆಯ ಮರಿ
ಇಕ್ಷು – ಕಬ್ಬು
ಕರಿಕಳಭ – ಮರಿಯಾನೆ
ಗರುವಾಯಿ – ಬೆಡಗು
ಹಿಜಿ – ಚಂದ್ರ
ಕಿಂಕಿಣಿ – ಗೆಜ್ಜೆ
ನಾಕಪತಿ – ಇಂದ್ರ
ಮಖ – ಯಜ್ಞ
ಕೇವಣಿಪು – ಹೂಡು
ವೈನತೆ – ಗರುಡ
ಸಮಿಧೆ – ಯಜ್ಞಕಟ್ಟಿಗೆ
ತಿರುವ – ಸಿಂಜಿನಿ
ಲಾಗುವೇಗ – ಕೈಚಳಕ
ಏಡ್ಡೈಸು – ಹೆಚ್ಚಾಯಿತು

## ೭೧. ಅಕ್ಷಯಾಂಬರ

ಕೈತವ – ಮೋಸ
ವಾಳಿಯುವೆ – ಯೋಗ್ಯವೆ ?
ರಹಣಿ – ಸೊಬಗು
ಸದರವೆ – ಸಾಧ್ಯವೆ
ಕೇಯೂರ – ತೋಳಬಂದಿ

ದೃಗ – ಕಣ್ಣು
ಪಸಾಯ – ಉಡುಗರೆ
ಯೂಥಪತಿ – ಆನೆಗಳ ಸಮೂಹದ ನಾಯಕ
ಹಬಿವು – ಬಾಲ್ಯ
ವಿಹ್ವಳ – ಶೋಕ
ಹೊಲ್ಲೆ – ಮೊರೆ

## ೭೨. ಉತ್ತರನ ಪೌರುಷ

ತುಱು – ಆಕಳು
ಭಾರಣೆ – ಅತಿಶಯ
ಢಗೆ – ತಾಪ
ಗಾವಳಿ – ಸಮೂಹ
ಮಹಿ – ಭೂಮಿ
ಸಗಾಢ – ಅತಿಶಯ
ಮೇಲುದ – ಮುಸುಕು
ಬವರ – ಯುದ್ಧ
ಅಂಘವಣೆ – ಶರೀರ ಧಾರ್ಢ್ಯ
ನವಾಯ - ನೂತನವಾದ
ಧುರ - ಯುದ್ಧ
ವಹಿಲ - ಶೀಘ್ರ
ಥಟ್ಟು - ಸಮೂಹ, ಸೈನ್ಯ
ಸೈವರಿ - ಬೆರಗಾಗು
ಇಟ್ಟಣಿಸಿ - ಕೂಡು
ಭಾಷ್ಕಳ - ಹೆಚ್ಚಾಗಿ
ಅಹವ - ಯುದ್ಧ

## ೭೩. ವೀರದ್ರೌಪದಿ

ಸಮೀರ - ಗಾಳಿ
ಆರಾತಿ - ಶತ್ರು
ಸೂನು - ಪುತ್ರ
ಲಾವಕ - ಚಾಡಿಕೋರ
ಕೃತಾಂತ - ಯಮ
ಪವಮಾನ - ಗಾಳಿ
ಸಂಗರ - ಸಮರ, ಯುದ್ಧ
ಬಲಾಹಕ - ಕೊಕ್ಕರೆ
ಸಂಪ್ರತಿ - ಸಂಧಿ
ಕೈವಾರ - ಹೊಗಳಿಕೆ
ಬಾಳದಕ್ಕರ - ಹಣೆಯಬರಹ
ಹರಿಬ - ಕಾರ್ಯ
ಕಬರಿ - ಜಡೆ

## ೭೪. ವಿದುರನ ಭಕ್ತಿಕೇಳಿ

ಗಾವಳಿ - ಸಮೂಹ
ಒಲವರ - ಪ್ರೇಮ, ಭಕ್ತಿ
ವಿಡಾಯಿ - ಠೀವಿ
ಕಂಜಸಂಭವ - ಬ್ರಹ್ಮ
ವಿಭಾಡ - ಸಂಹಾರಕ
ಸಿಂಹವಿಷ್ಟರ - ಸಿಂಹಾಸನ
ಪಡಿಗ - ಪೀಕದಾನಿ
ಮಯೂಖ - ಕಿರಣ
ತತಿ - ಸಮೂಹ
ಅಧ್ರುವ - ಕ್ಷಣಿಕ
ಹಿಸುಣ - ಚಾಡಿ
ಹಾಹೆ - ಗೊಂಬೆ
ಹಳಚು - ಹೊಡೆ

## ೭೫. ದಾತಾರನ ಕೈವಾರ

ದಾತಾರ - ದಾನಿ
ಸೂದನ - ಸಂಹಾರಕ
ಹವಣಿ - ಬೇಕಾದವ
ಶೌರಿ - ಶೌರ್ಯ
ಸೂರಿಯ - ಸೂರ್ಯ
ದೃಗುಜಲ - ಕಣ್ಣೀರು
ಓರಧಿ - ಸಮುದ್ರ
ಅಡಗು - ಮಾಂಸ
ಚರುವು - ಹವಿಸ್ಸು
ಸವಿತ್ - ಯಜ್ಞದ ಉರುವಲು
ಔಘ - ಸಮೂಹ
ವೀನಿತ - ಸಭ್ಯ
ಸಂಪ್ರತಿ - ಸಂಧಿ
ಹಿಸುಣರು - ಚಾಡಿಕೋರರು
ಸಿರಿಲೋಲ - ಕೃಷ್ಣ

## ೭೬. ಸುರನದೀನಂದನನ ಹರಕೆ

ಸುರನದಿನಂದನ - ಭೀಷ್ಮ
ಮೊನೆ - ಯುದ್ಧ
ಓಲಗಿಸು - ಸಮಾಧಾನಪಡಿಸು

ಖಾತಿ - ಕೋಪ
ನೆಱೆವಣಿಗೆ - ಪೂರ್ಣತೆ
ಹೋರಾಟ - ಕದನ
ಏಱು - ಗಾಯ
ಆಮ್ನಾಯ - ವೇದ
ಮಂದಿವಾಳ - ಮೂರ್ಖತನ
ನಿಡುಗೆಡೆ - ದೀರ್ಘದಂಡ ಪ್ರಣಾಮ
ಹೊಂಪುಳಿ - ರೋಮಾಂಚನ
ತೀದುದು - ಕೊನೆಗೊಂಡಿತು
ಎರಕೆ - ರೆಕ್ಕೆ
ಬೇಳು - ಯಜ್ಞಮಾಡು, ಸುಡು

## ೭೭. ವೀರ ಅಭಿಮನ್ಯು

ಪಳಹರ - ವಾದ್ಯ
ಸತ್ತಿಗೆ - [ಸಂ] ಛತ್ರಿಕಾ
ವಾಸವ - ಇಂದ್ರ
ಭಾರ್ಗವ - ಪರಶುರಾಮ
ಕಳಶಜ - ದ್ರೋಣ
ವಿಧುಂತುದ - ರಾಹು
ರಜ - ಧೂಳಿ, ರಜೋಗುಣ
ಮೋಹರ - ಸೈನ್ಯ
ಕದಳಿ - ಬಾಳೆ
ಅಮ್ಕು - ಸಮರ್ಥವಾಗು
ಇಭ - ಆನೆ
ಇಸು - ಬಾಣಬಿಡು
ಕಂಠೀರವ - ಸಿಂಹ
ತರುವಲಿ - ಅನಾಥ, ಏಕಾಕಿ
ಗಱಿ - ರೆಕ್ಕೆ
ಹಿಳುಕು - ಬಾಣದ ಗರಿಯು ಇರುವ ಭಾಗ
ಹುರುಡ - ಅಸೂಯೆ
ಸಾಯಕ - ಬಾಣ
ಹಳವಿ - ಧ್ವಜ
ಅಂಬಕ - ಕಣ್ಣು
ಕೇಸುರಿ - ಕೆಂಪಾದ ಉರಿ
ಮಿಹಿರಸುತ - ಕರ್ಣ
ಪಾವುಡ - ಹಚ್ಚಡ, ಕಾಣಿಕೆ
ಆಕೆವಾಳ - ಶೂರ
ಗೋನಾಳಿ - ಗಂಟಲು
ಸೂನಿಗೆ - ಆಯುಧ, ಅಂಗರಕ್ಷಕ

ಅರುಣ ಜಲ - ರಕ್ತ
ದಂಷ್ಟ್ರ - [ಷ್ಟ್ರ] ದಾಡೆ
ಬಡಬನ - ದಾವಾಗ್ನಿ
ವಿಶಿಖ - ಬಾಣ
ಜಂಬುಕ - ನರಿ
ಸಘಾಟಿಕೆ - ಶೌರ್ಯ
ಒಗ್ಗ - ಸಮೂಹ
ಗನ್ನದಲ್ಲಿ - ಮೋಸದಲ್ಲಿ
ಒರೆ - ಸುರಿ, ಸೋರು
ಠೆಕ್ಕೆ - ಧ್ವಜ, ಪತಾಕೆ
ಘೂಕ - ಗೂಬೆ
ಧ್ವಾಂಕ್ಷ - ಕಾಗೆ
ನಾರಾಚ - ಬಾಣ
ಓಣಿಲು - ಜಡೆ
ಶಕ್ರ - ದೇವೇಂದ್ರ

## ೭೮. ಕಾವ್ಯವಿಹಾರ

ದರ್ಪಣ - ಕನ್ನಡಿ
ಪಶ್ಯಂತಿ - ನೋಡು
ಪಿಪಾಶೆ - ನೀರಡಿಕೆ
ಹಂದೆ - ಹೇಡಿ
ನಿರಯ - ನರಕ
ಭೂರುಹ - ಗಿಡ
ಪಿಸಟಂಬರಿ - ಪಸರಿಸು
ಪಿಸುಣತಿ - ಚಾಡಿ
ಇಂಗಡಲು - ಕ್ಷೀರಸಮುದ್ರ
ಕಾರ್ಮುಕ - ಬಿಲ್ಲು, ಚಾಪ
ಓವು - ರಕ್ಷಿಸು
ಎರಲೆ - ಜಿಂಕೆ

## ೭೯. ಶ್ರೀರಾಮುನ ವನವಾಸ ಪ್ರತಿಜ್ಞೆ

ಇನಕುಲ - ಸೂರ್ಯ ವಂಶ
ಉಗುವ - ಹೊರ ಹೊರಡು
ಸಜ್ಜೆ - ಹಾಸಿಗೆ
ಆರವೆ - ತೋಟ

## ೮೦. ಪ್ರಾಣಲಿಂಗಿ ಬಸವಣ್ಣ

ಪ್ರಾಣಲಿಂಗಿಸ್ಥಳ - ವೀರಶೈವರ ಷಟ್‌ಸ್ಥಳಗಳಲ್ಲಿ ನಾಲ್ಕನೆಯ ಸ್ಥಳ
ವಹಿಲತೆ - ಶೀಘ್ರತೆ

## ೮೧. ಸುಬೋಧಸಾರ

ಉಮ್ಮಳಿಸೆ - ಮನಃಪೂರ್ವಕವಾಗಿ, ಉತ್ಕಟೇಚ್ಛೆ
ಹಮ್ಮೈಸು - ಮೂರ್ಛೆ ಹೋಗು
ಆರೈದು - ಸೂಕ್ಷ್ಮದೃಷ್ಟಿಯಿಂದ ನೋಡು
ಅಗ್ಗವಣಿ - ನೀರು

## ೮೨. ಜಾಣ ಕೋಗಿಲೆ

ಕೋಟಲೆ - ತೊಂದರೆ
ಮನಸಿಜ - ಕಾಮ
ಬಾಲೇಂದುಧರ - ಶಿವ

ಕಂತು - ಕಾಮ

## ೮೩. ಬೇಡುವೆನಭವ

ಅಘಟು - ಧೈರ್ಯ

ವಿತರಣ - ದಾನ

ಪರಿ - ಬೇರೆ

## ೮೪ ಬೇಂಟೆ

ಜಾಘ - ಸಮೂಹ

ವೃಂದ – ಸಮೂಹ

ಕ್ಷಾತ್ರಧರ – ಬಿಟ್ಟ

ಶಬರ – ಬೇಡ

ಋಕ್ಷ – ಕರಡಿ

ಏಣ – ಜಿಂಕೆ

ಎಕ್ಕಲ – ಹಂದಿ

ಸೈರಿಭ – ಕೋಣ

ಪರೆ – ವಾದ್ಯ

ಎಯ್ಯಮಿಗ – ಮುಳ್ಳುಹಂದಿ

ಲುಲಾಯ – ಕಾಡು ಕೋಣ

ಸಲ್ಲಕೀ – ಕರಿಕೆಯಹುಲ್ಲು

ಪ್ರಕ್ವದಿಂ – ಕಟವಾಯಿಯಿಂದ

ಕೊಣಸು – ಜಿಂಕೆಯ ಮರಿ

ಲುಬ್ಧ – ಬೇಡ

ರವ – ಧ್ವನಿ

ಕಾಂತಾರ – ಅಡವಿ

ತೋಹು – ಹೊಂಚಿನ ಸ್ಥಳ

ಜಿಳ್ಳಾರ – ಒಂದು ತೆರ ನಾದ ಬಲೆ

ಪರಪು – ಹರಡು

ಇಂಗಳ – ಜಿಂಕಿ

ಎಳೆವೆರೆ – ಬಾಲಚಂದ್ರ

ಸೂಕರ – ಹಂದಿ

ಧ್ವಾನ – ಧ್ವನಿ

ಕುರ್ಕುರ – ನಾಯಿ

ಅನೀಕ – ಸಮೂಹ

ವ್ಯಾಧ – ಬೇಡ

ಉಡಿ – ಬೀಳು,ಉದಿರು

ಕಾಯ್ಪು – ಕೋಪ

ಕ್ಷಿತಿ – ಭೂಮಿ

ಆಸ್ಯ – ಮುಖ, ದಿಕ್ಪಾಲಕ

ಅದ್ರಿ – ಪರ್ವತ

ವಾಲ – ಬಾಲ

ವಿಸ್ಫುಲಿಂಗ – ಕಿಡಿ

ದ್ಯುತಿ – ಬೆಳಕು

ಸ್ಮಶ್ರು – ಮೀಸೆ

ಅಭೀಲ – ಭಯಂಕರವಾದ

ಪಟಹ – ಡೋಲು, ತಮ್ಮಟೆ

ಸಂದ – ಪ್ರಸಿದ್ಧ

### ೮೫. ಬಿರುದುಗಳು

ಕೂರ್ಮೆ – ಪ್ರೀತಿ
ಪೆರ್ಮೆ – ಹೆಚ್ಚಳ
ಆಯು – ಆರೋಗ್ಯ, ಆಯುಷ್ಯ
ಚೂಡ – ತಲೆ
ತೊಡರೆ = ಆಶ್ರಯಿಸಲು
ವಿದಗ್ಧ – ಪಂಡಿತ
ಅನೃತ – ಸುಳ್ಳು

### ೮೬. ಭೀಮಾರಣ್ಯ

ಪುರ – ಪುರ
ಖಡ್ಗಿ – ಖಡ್ಗಮೃಗ
ಎರಲುಣಿ – ಸರ್ಪ
ಬಿಂಜ – ವಿಂಧ್ಯ [ಸಂ]
ಪಗಲೆಱೆಯ – ಸೂರ್ಯ
ಕದಿರ – ಕಿರಣ
ತಾರಾಪಥ - ಆಕಾಶ
ನನ್ನಿ - ಸತ್ಯ
ಸೊಣಗ - ನಾಯಿ
ಎಂಟಡಿ - ಶರಭ
ನಿಕುರುಂಬ - ಸಮೂಹ
ಅವನಿಜ - ಮರ
ಭರಿಕ್ಕೆ - ಸೊಂಡಿಲು
ಎರೆ - ಹುಳು
ಪಕ್ಕಿ - ಪಕ್ಷಿ
ಸಲಗ - ಆನೆಯ ಹಿಂಡಿನ ಮುಖ್ಯ
ಕಮ್ಮಱ - ಕಮ್ಮಾರ
ಸುರಭಿ - ಗಂಧ
ಸೆಳೆ - ಉದ್ದವಾದ
ಕಜ್ಜಲ - ಕಾಡಿಗೆ
ತಮಾಲ - ಹೊಂಗೆಯ ಮರ
ಕಚ - ಕೂದಲು
ಪುರಂಧ್ರಿ - ಸ್ತ್ರೀಯರು

### ೮೭. ಸುಮನಸ ಮಹಾವಿಲಾಸ

ಬಾವನ್ನ - ಗಂಧ
ಪೂಗ - ಅಡಿಕೆಯ ಮರ
ಪುನ್ನಾಗ - ಕಸ್ತೂರಿ
ಪೂಗಣೆಯ - ಮನ್ಮಥ
ತುಱುಗಿದ - ಪೂರ್ಣ ತುಂಬಿದ
ಅಂಗಭವ - ಮನ್ಮಥ
ಬಿಯದ - [ಸಂ] ವ್ಯಾಧ, ಬೇಡ
ಎಲರು - ಗಾಳಿ

ಸೋವು - ಓಡಿಸು
ಪುಗಲ್ - ಪ್ರವೇಶಿಸ ಬೇಡಿ

## ೮೮. ಶರತ್ಕಾಲ

ಓವು - ರಕ್ಷಣೆಮಾಡು, ಸಾಕು
ಕಳ - ಹುಲ್ಲು
ಗೊಂದಣ - ಸಮೂಹ

## ೮೯. ಚೋಳದೇಶ

ಕಾಮದುಘ - ಕಾಮಧೇನು
ಸೂರಿ - ಕಪಿ
ವೀಚಿ - ತೆರೆ, ಅಲೆ
ಕಲವೆ - ನೆಲ್ಲು, ಭತ್ತ
ಕೋಕ - ಚಕ್ರವಾಕ
ಅಂಚೆ - ಹಂಸ
ಪಿಂಛ - ನವಿಲುಗರಿ

## ೯೦. ಕಾಲಲೀಲೆ

ರಜಕ - ಅಗಸ
ಧವಲ - ಶುಭ್ರ
ಅಂಬರ - ಬಟ್ಟೆ, ಆಕಾಶ
ಪಂಕ - ಕೆಸರು
ಜಲಜಭವ - ಕಮಲದಲ್ಲಿ ಹುಟ್ಟಿದವ, ಬ್ರಹ್ಮ
ವಾರಿಶಯನ – ಸಮುದ್ರ ಶಯನ, ವಿಷ್ಣು
ಗೋತ್ರಭಿನ್ನ - ಇಂದ್ರ
ಗೋತ್ರ - ಪರ್ವತ
ಅಂಜನ - ಕಾಡಿಗೆ
ಪಯೋಧರ - ೧) ಕುಚ
೨) ಮೋಡ

## ೯೧. ಪ್ರಹ್ಲಾದ

ಧ್ರುಮ - ಮರ
ಸಹೃತಮ - ಸಹೃದಯಿ
ಮುರಗೇಡಿ - ಮುರವೈರಿ,

## ೯೨–೧೧೧. ದಾಸರು

ಗ್ರಾಸ - ಊಟ
ಅನಿಮಿಷರು - ದೇವತೆಗಳು
ಬರಲು - ಬಂಜೆ
ಕನಲು - ಸಿಟ್ಟಾಗು
ಹುತವಹ - ಅಗ್ನಿ,
ಪಾವಕ - ಬೆಂಕಿ
ನಿನದ - ಧ್ವನಿ
ಭೋಗಿ - ಸರ್ಪ
ಪನ್ನಗ - ಸರ್ಪ
ಪನ್ನಗಾರಿ - ಗರುಡ

ಗರಳ - ವಿಷ
ಅಕ್ಷ - ಪಗಡಿ
ಹಲಧರ - ಬಲರಾಮ
ವಿತ್ತ - ಧನ
ತಲ್ಪ - ಹಾಸಿಗೆ
ನಗಧರ - ವಿಷ್ಣು
ಸುಪರ್ಣ - ಗರುಡ
ಭೂರುಹ - ಗಿಡ
ಉಡುಪ - ಚಂದ್ರ
ಶಾತಕುಂಭ - ಬಂಗಾರ
ದಿವೌಕಸರು - ದೇವತೆಗಳು
ಕ್ಷರಾಕ್ಷರ - ನಿತ್ಯಾನಿತ್ಯ
ವೃಜಿನ - ಪಾಪ
ದುಕೂಲ - ರೇಷ್ಮೆವಸ್ತ್ರ
ಸಂಸೃತಿ - ಸಂಸಾರ
ಪಾದಪ - ಗಿಡ
ಉಲೂಖಲ - ಒರಳು

**೧೧೨–೧೧೮. ಶಿವಯೋಗಿಗಳು**

ಶಮೆ - ಅಂತರೇಂದ್ರಿಯ ನಿಗ್ರಹ
ದಮೆ - ಬಹಿರೇಂದ್ರಿಯ ನಿಗ್ರಹ
ಅರುಪು - ತೋರು, ತಿಳಿಸು
ನಿಟಿಲ - ಹಣೆ
ಭ್ರೂ - ಹುಬ್ಬು

**೧೧೯–೧೨೨. ರತ್ನಾಕರವರ್ಣೆ**

ಹೊಲ್ಲದ - ಆಯೋಗ್ಯವಾದ
ಛವಿ - ಪ್ರಕಾಶ, ತೇಜಸ್ಸು
ಬೀರಸಿರಿ - (ಸಂ) ವೀರಶ್ರೀ
ನರು - ಸುಗಂಧಯುಕ್ತವಾದ
ಗಾಡಿಕಾರ - ಸೊಗಸುಕಾರ
ಪಾಡರಿದು - ಸಮಯ ಮರಿತು
ಕರುವಿಟ್ಟು - ಎರಕ ಹೊಯ್ದು
ಬಹಾಗ - ಬರುವಾಗ
ಮತಂಗ - ಮದಿಸಿದ ಆನೆ
ಅಪ್ರತಿಹ - ಪ್ರತಿಯಿಲ್ಲದ
ಸೂಡು - ಧರಿಸು, ಹಾಕು
ಸ್ವರ್ಧುನಿ - ದೇವಗಂಗೆ
ಆಂಕೆಗೊಂಡು - ಎದುರೆದುರಾಗಿ

ಉಚ್ಚಳಿಸುವ - ಅತಿಯಾಗಿ ಹರಿವ
ಕಾಸಿ - ಚಡ್ಡಿ
ಕಿಂಕಿಣಿ - ಗೆಜ್ಜೆ
ಲಾವಣ್ಯ - ಉಪ್ಪಿನಿಂದ ಕೂಡಿದ
ಮುಸುಳದೆ - ಮಸುಕಾಗದೆ

## ೧೨೩. ರಾಜನೀತಿ

ಅಭ್ರ - ಮೇಘ
ಕಾಳಿಕೆ - ಕಾಡಿಗೆ
ಗಳಹತನ - ಹರಟೆ
ಒಡ್ಡವಣೆ - ಸಮೂಹ
ಪಿಸುಣ - ಚಾಡಿಕೋರ
ಮಹೀತಳ - ಭೂಮಿ
ಕರುಬು - ಅಸೂಯೆ
ಬಲ್ಲಿವಿಕೆ - ಅಧಿಕತನ
ಕವತೆ - ಕಳ್ಳತನ
ಲಾವಕರು - ಚಾಡಿಕೋರರು
ತಿಮಿರ - ಕತ್ತಲು
ನೀರೋಜ - ಕಮಲ

## ೧೨೪. ನೀತಿ

ಹವಿಡು - ಹಾಸ್ಯ

## ೧೨೫. ಪಾಶುಪತಾಸ್ತ್ರ ಪ್ರಧಾನ

ಇದಿರ್ಚು - ಇದಿರಿಸು
ಪಡಿ - ಬಾಗಿಲು
ಇಡಿತಿರು - ಸಾಂದ್ರವಾಗು
ಷತ್ರ - ಬೆವರು
ಬಗೆ - ಮನಸ್ಸು
ಮಡಲ್ತು - ಪದಪುಪದರಾಗಿ
ಭೀತು - ಹೋಗು
ಬೀವಸ - (ಸಂ) ವ್ಯಸನ
ಅಳುರ್ದ - ಕೂಡಿದ
ಉಮ್ಮಳ - ಕಳವಳ
ಮಾರ್ಗಣ - ಬಾಣ
ಜ್ವಲನಾಕ್ಷ - ಅಗ್ನಿನೇತ್ರ, ಶಿವ
ಕೃತಾಂಕ - ಯಮ
ತಾರ್ಕ್ಷ್ಯ - ಗರುಡ
ವಹ್ನಿ - ಬೆಂಕಿ
ಧರಾಧರ - ಪರ್ವತ
ಕೇಸರಿಪತಿ - ಸಿಂಹರಾಜ
ಪೊಣರ್ಕೆ - ಯುದ್ಧ
ಹಂಮುದಂಬೋಗು - ಮೂರ್ಛೆಹೋಗು

ಕೂರಸಿ – ಹರಿತವಾದ ಖಡ್ಗ
ಕೈಮಿಗೆ – ಹೆಚ್ಚಾಗಲು
ಅಂಗೋದ್ಭವ – ಕಾಮ
ಕೃತ್ತಿ – ಚರ್ಮ
ಅಸಿತಗ್ರೀವ – ನೀಲಕಂಠ
ಉಪಲಸಿತ – ಶೋಭೆಯಿಂದ ಕೂಡಿದ
ಕರ್ಣಿಕಾರ – ಕಣಗಿಲ ಹೂ
ಕಂಜ - ಕಮಲ
ಕಿಂಜಲ್ಕ - ಕಮಲ ದಂಟುವಿನ ಎಳೆ
ಕಳೇವರ - ಶರೀರ
ತಳ್ತ - ಧರಿಸಿದ
ಮೌಳಿ - ಮಸ್ತಕ
ಸರುಜಂ - ರೋಗವುಳ್ಳವ
ಸಂಮದ - ಆನಂದ
ಅದ್ರಿಜಾ - ಪಾರ್ವತಿ
ಧರ್ಮ - ಬಿಲ್ಲು
ನಿರ್ಜರ - ದೇವತೆ
ನಿರೀಹ - ಆಶೆಯಿಲ್ಲದ
ಮರಾಳ - ಹಂಸ
ಅರ್ಣವ - ಸಮುದ್ರ
ಭಾಸತ್ - ಹೊಳೆಯುವ

ಕುರಿವಾನಿಸ - ಕುರಿಯಂಥ ಮನುಷ್ಯ
ಅಧಿಕ್ಷಾತೃ - ಬೇಡಿದ್ದನ್ನು ನೀಡುವವ
ವೈಶ್ವಾನರ - ಅಗ್ನಿ
ಮಗುಳ್ದು - ಪುನಃ
ಗುಹ - ಷಣ್ಮುಖ
ಗಜಾಸ್ಯ - ಗಣಪತಿ
ದೀಧಿತಿ - ಪ್ರಕಾಶ
ಹತಿ - ಹೊಡೆತ
ಒಚ್ಚತಂ - ಪ್ರೇಮಪೂರ್ವಕ
ಅಪಾಂಗ - ವಾರಿನೋಟ
ಶರಾಸನ - ಬತ್ತಳಿಕೆ
ಅಭೀಷ್ಟ - ಇಚ್ಛೆ
ಪುರಂದರ - ಇಂದ್ರ
ಮಹೀಧರ - ಪರ್ವತ
ಶಶ - ಮೊಲ
ಲಕ್ಷ್ಮ - ಅಂಕಿತ, ಚಿನ್ಹ
ಸಂಘಾತೆ - ಸಂಹರಿಸಿದವಳು
ಕಮಲಭವಾಂಡ - ಬ್ರಂಹ್ಮಾಂಡ
ವನಪರ್ಣಿ - ಸಂನ್ಯಾಸಿ
ಗಾಂಢೀವಿ - ಅರ್ಜುನ

ಆಕನಸ್ವನ - ವಾದ್ಯಧ್ವನಿ
ಸಹಸ್ರಾಂಬಿಕ - ಇಂದ್ರ

### ೧೨೬. ಕುಮಾರೋದಯ

ದೋಷಾಕರ ಚಂದ್ರ
ಇನ - ೧) ಗಂಡ
೨) ಸೂರ್ಯ
ವಾರಾಶಿ - ಸಮುದ್ರ
ಭುವನಜ - ಬ್ರಹ್ಮ
ಅಳಿನಿ - ಹೆಣ್ಣುಭ್ರಮರ
ವ್ಯಾಜ - ನೆವ
ಉಣ್ಮು - ಉಂಟಾಗಲು
ರದನ . ಹಲ್ಲು
ತನೂರುಹ - ಕೂದಲು
ಭೂಮಿಭೃತ್ - ಪರ್ವತ
ಪೊದಪು - ಸಂತೋಷ
ವಕ್ಷೋರುಹ - ಕುಚ
ತನ್ವಂಗಿ - ಕೋಮಲ ಶರೀರ ಉಳ್ಳವಳು
ತನೂದರ - ಬಡನಡು
ನೀರೆ - ಸ್ತ್ರೀ
ಅರ್ಭಕ - ಕೂಸು
ಪಟ್ಟಿರಿಸು - ಮಲಗಿಸು

### ೧೨೭. ಕುಲವಧು

ಭಾಸ್ಕರ - ಸೂರ್ಯ
ಪೆರ್ಚು - ಹೆಚ್ಚು
ಜಸ - ಯಶ

### ೧೨೮–೧೨೯. ಲಕ್ಷ್ಮೀಶ

ವೈದೇಹಿ - ಸೀತೆ
ಅನ್ನೆಗಂ - ಅಷ್ಟರಲ್ಲಿ
ದಿವಜನದಿ - ದೇವಗಂಗೆ
ಅಟವಿ - [ದ್ಭ] ಅಡವಿ
ವಿಪಿನ - ಅರಣ್ಯ
ಆಯತ - ವಿಸ್ತಾರವಾದ
ಅಂಬಕಿ - ಕಣ್ಣುಳ್ಳವಳು
ದೇವರ - ಮೈದುನ
ಕರಿಣಿ - ಹೆಣ್ಣುಆನೆ
ಮಖ - ಯಜ್ಞ
ಯೂಪ - ಯಜ್ಞಪಶುವನ್ನು ಕಟ್ಟುವ ಕಂಬ

### ೧೩೧. ಸುಧಾಸೂತಿ ಬಿಂಬ

ಸುಧಾಸುತಿ - ಚಂದ್ರ
ಸಿಂಧುರ . ಆನೆ
ಕ್ಷುಣ್ಣ - ತುಳಿಯಲ್ಪಟ್ಟ
ಶೋಣಗ್ರಾವ - ಕೆಂಪುಗಲ್ಲು
ಎಣೆವಕ್ಕಿ - ಚಕ್ರವಾಕಪಕ್ಷಿ
ರಾಪ್ಯ - ಬೆಳ್ಳಿಯ
ವ್ಯಾಕೋಚ - ಅರಳಿದ

ಖತಲ - ಆಕಾಶಸ್ಥಳ
ಕಳಿಂದಾತ್ಮಜೆ - ಗಂಗೆ
ವಿಧೂಪಲ - ಚಂದ್ರಕಾಂತ ಶಿಲೆ
ಐಂದ್ರಿ - ಪೂರ್ವಾಂಗನೆ
ಹರಿದಿಕ್ - ಇಂದ್ರದಿಕ್ಕು, ಪೂರ್ವ
ತುಹಿನಕರ - ಚಂದ್ರ

## ೧೩೩. ಸಮುದ್ರ ವರ್ಣನೆ

ಅನಿಮಿಷರು - ದೇವತೆಗಳು, ಮೀನುಗಳು
ಕೊಡಸಣುಗ - ಅಗಸ್ತ್ಯ
ವಿಷ - ೧) ನೀರು ೨) ನಂಜು
ಶತಪತ್ರನೇತ್ರ - ಕಮಲನೇತ್ರ, ವಿಷ್ಣು
ಜೀವನ - ೧) ನೀರು, ೨) ಪ್ರಾಣ
ಶರ - ೧) ನೀರು, ೨) ಬಾಣ
ಪಯ - ೧) ಹಾಲು ೨) ನೀರು
ಕೀಲಾಲ - ೧) ರಕ್ತ, ೨) ನೀರು
ದಶರಥಾಪತ್ಯ - ರಾಮ
ಅನಿಶಂ - ಯಾವಾಗಲೂ
ಅರ್ಣವ - ಸಮುದ್ರ
ನೀರದ - ಮೋಡ
ಲಾವಣ್ಯ - ೧) ನೀರು ೨) ಚೆಲುವು
ಕುಶ - ೧) ನೀರು, ಪವಿತ್ರ ಹುಲ್ಲು
ರಾಜೀವ - ೧) ನೀರು, ೨) ಮೀನು
ವಿದ್ರುಮ - ಹವಳ
ನೆಗಳ್ - ೧) ಮೊಸಳೆ ೨) ಕೀರ್ತಿ
ಬಾಳೆ - ೧) ಬಾಳೆ ೨) ಮೀನು
ನಕ್ರ - ಮೊಸಳೆ
ಶಕಲ - ೧) ಮೀನು ೨) ಚಿಪ್ಪು
ಜಲಗ್ರಾಹ - ನೀರಾನೆ
ಗ್ರಾಹ - ಮೊಸಳೆ
ಕಮಠ - ೧) ಆಮೆ, ೨) ಕಮಂಡಲ

## ೧೩೪. ನೀತಿಮಂಜರಿ

ಗಾವಿಲ - ಮೂಢ

# ಒಪ್ಪೋಲೆ

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೧ | ೪ | ಮಧುರಾಂಕ್ಷ | ಮಧುರಾಂಕ |
| ೨ | ೫ | ಮನಗಾಣ್ಬರೆಂದು | ಮನಂಗಾಣ್ಬರೆಂದು |
| ೧೦ | ೨ | ವಿದ್ಯೆಯಾಳ | ವಿದ್ಯೆಯೊಳ |
| ೧೨ | ೩ | ಬಿಟ್ಟಿದ್ದಿಮ್ರ | ಬಿಟ್ಟಿದ್ದಿಮ್ರಂ |
| ೧೩ | ೧೦ | ಮುಂಚೆ | ಮುಂಚಿ |
| ೨೦ | ೬ | ಕಡಿಕೆಯ್ದು | ಕಡುಕೆಯ್ದು |
| ೨೨ | ೧೧ | ವಿಸ್ಫಲಿಂಗ | ವಿಸ್ಫುಲಿಂಗ |
| ೨೫ | ೧೧ | ವಲಮಯ | ವಲಯಮ |
| ೨೬ | ೧೨ | ಪುಣ | ಪುಣ್ಯ |
| ೨೭ | ೧೩ | ನಿಕಾಶಮಪು | ನಿಕಾಶಮಪ್ಪು |
| ೫೦ | ೨೦ | ನೆಗುಟಿಲ್ | ನೆಗಟಿಲ್ |
| ೫೧ | ೯ | ಬಗೆವಿರೆ | ಬಗೆದಿರೆ |
| ೫೪ | ೧೧ | ಮೂದಲಸಿ | ಮೂದಲಿಸಿ |
| ೫೯ | ೧೮ | ಅಚ್ಛೆ | ಅಚ್ಚೆ |
| ೬೩ | ೧೭ | ಮೇಲ್ಪಾಯೊಡಂ | ಮೇಲ್ವಾಯ್ದೊಡಂ |
| ೬೪ | ೧೬ | ಮವೆಲೋಕಿನಿ | ಮವಲೋಕಿನಿ |
| ೬೬ | ೪ | ಪೆಳ್ದಿ | ಪೇಳ್ದಿ |
| ೭೧ | ೧೧ | ಕೂಡಲಾರಜಿ | ಕೂಡಲಾಜಿ |
| ೮೦ | ೬ | ಕೋಟಿರುಚಿ | ಕೋಟಿರುಚಿರ |
| ೮೩ | ೩ | ಗಿರಶಂಗೆ | ಗಿರಿಶಂಗೆ |

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೮೩ | ೨೦ | ಪೆರೆಸಾರ್ವರ್ಳ್ | ಪೆಱಸಾರ್ವ್ಳ್ |
| ೯೪ | ೧೭ | ಎಲೆಯತಿಥೀ | ಎಲೆಯತಿಥಿ |
| ೯೬ | ೭ | ಗಿತಿಜೆ | ಗಿರಿಜೆ |
| ೧೦೫ | ೧೬ | ಮಾಣೆಲಪೊ | ವಾಣೆಲವೊ |
| ೧೦೬ | ೧೦ | ಮೆಂತುಬಿಡೆ | ಮೆಂತುಂಬಿಡೆ |
| ೧೧೬ | ೩ | ಮನೆಯಲ್ಲಿ | ಮನೆಯೊಲ್ಲಿ |
| ೧೨೩ | ೧೧ | ತರುಣಾಬ್ಧಿ | ಕರುಣಾಬ್ಧಿ |
| ,, | ೧೩ | ಕರುಣೇಂದು | ತರುಣೇಂದು |
| ೧೨೭ | ೧೧ | ನೆಜಲಿಕ್ಕೆ | ನೆಟಲಿಕ್ಕೆ |
| ೧೩೩ | ೮ | ದಗ್ಗ್ರ | ದರ್ಗ |
| ೧೩೫ | ೧೪ | ಧುತ್ತೂರಂ | ದುತ್ತೂರಂ |
| ೧೪೮ | ೮ | ಖರಶಾಣಿ | ಖರಶಾಣ |
| ೧೫೨ | ೧೬ | ಬುಲ್ಪಿಂ | ಬಲ್ಪಿಂ |
| ೧೫೩ | ೩ | ಭೋಜನಶಾಳಿ | ಭೋಜನಶಾಲಾ |
| ೧೫೬ | ೧೦ | ನಿನ್ನೊಡಂಬಡಂ | ನಿನ್ನನೊಡಂಬಡಂ |
| ೧೫೮ | ೭ | ಪತಿಯರೆ | ಪತಿಯಿರೆ |
| ೧೬೦ | ೧೦ | ಅಂತಃರ | ಅಂತಃಪುರ |
| ೧೬೨ | ೨ | ಹೃದಯುಚ್ಛ್ವಾಸ | ಹೃದಯೋಚ್ಛ್ವಾಸ |
| ೧೭೪ | ೧೯ | ತಂದೊನ್ನೊಡ | ತಂದೆನ್ನೊಡೆ |
| ೧೮೪ | ೬ | ಕಳಯೊಳ್ | ಕಳೆಯೊಳ್ |
| ೧೯೮ | ೩ | ಕಾಮಿಯುಂಬಂತೆ | ಕಾಮಿಯೆಂಬಂತೆ |
| ೨೦೭ | ೧೫ | ತಾಯೆತೇ | ತಾಯಿತೇ |

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೨೧೫ | ೧೮ | ದಿವಸ | ಸಮಯ |
| ೨೧೬ | ೮ | ಗಳನಾಳ | ಗಳಗಾಳ |
| ,, | ೧೦ | ತುಂಬೆ | ತುಂಬಿ |
| ೨೧೭ | ೩ | ತುಂಬೆ | ತುಂಬಿ |
| ,, | ೧೬ | ಳೊರ್ವಶಿ | ಳೂರ್ವಶಿ |
| ,, | ೧೮ | ತಾನಿಂನಾವ | ತಾನಿನ್ನಾವ |
| ,, | ೨೦ | ವೇಗಲೆಂ | ವೇಗದಲೆಂ |
| ೨೧೮ | ೧೭ | ಡೊಂಬಿಗನಾಗಮ | ಡೊಂಬಿನಾಗಮ |
| ೨೧೯ | ೮ | ಕನ್ನಿಕೆಯೆ | ಕನ್ನಿಕೆಯ |
| ೨೩೧ | ೯ | ಕಹಳ | ಕಹಳೆ |
| ೨೩೨ | ೧೧ | ಕೈಯುರೆಗಿಳಿ | ಕೈಯುರಗಿಳಿ |
| ೨೩೫ | ೯ | ಮದುವೆಯ | ವಧುವಿನ |
| ೨೩೬ | ೭ | ಇದೇ | ಇದೆ |
| ೨೭೬ | ೬ | ಭೂತ(ರಿ?) | ಭೂರಿ |
| ೨೮೭ | ೧೪ | ನಾದ | ನಾಡ |
| ೩೦೧ | ೯ | ದಗ್ಗದ | ನಗ್ಗದ |
| ೩೦೭ | ೮ | ಮುಱಿ | ಮುಱಿ |
| ,, | ೨೧ | ರಿವಿ | ರೀವಿ |
| ೩೧೧ | ೧ | ನೀರಾಚಲ | ನೀಲಾಚಲ |
| ೩೩೦ | ೧೯ | ಜಲರಾಜ್ಯ | ಜಲದಾಜ್ಯ |
| ೩೩೭ | ೧ | ತೀದು | ತೀರ್ದು |
| ೩೯೯ | ೧ | ಅಕಳಂಕ | ಅಕಳಂಕ |

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೪೦೯ | ೫ | ಬಿರಿತೊಡೆ | ಬಿರುತೊಡೆ |
| ,, | ೬ | ದೇಣಿ | ದೇಣ |
| ೪೮೮ | ೭ | ವೇಣಿ | ವೇಣು |
| ೪೯೧ | ೩ | ನೋಡಿವಿ | ನೋಡುವ |
| ೫೧೭ | ೮ | ಸಹಸಾಂಬಕ | ಸಹಸ್ರಾಂಬಕ |
| ೫೨೦ | ೬ | ನರ್ವ | ನರ್ವ |
| ,, | ೧೮ | ವೊಪು | ಪುವೊ |
| ೫೨೨ | ೮ | ವೇದಿನಿ | ಮೇದಿನಿ |
| ೫೩೪ | ೧೮ | ತನ್ನ | ತನ್ನ |
| ೫೩೬ | ೧ | ವುುಖಕೆ | ಮುಖಕೆ |
| ೫೩೮ | ೧೬ | ಸದೂಧಿ | ಸಮಾಧಿ |
| ೫೬೯ | ೪ | ವುಣೆಯಿಲ್ಲ | ಬಾಗು ಇಲ್ಲದ |
| ,, | ೨೬ | ಭೂಮಿಯಲ್ಲಿರುವುದಿಲ್ಲ | ಭೂಮಿಯಲ್ಲಿ ಇರುವಿಕೆಯನ್ನು |
| ೫೭೧ | ೧೬ | ಕಿಡಿ | ಕಿಡೆ |
| ೫೭೩ | ೭ | ಬೀಳುವಿಕೆ | ನಾಶ |
| ,, | ೩ | ಪೆರಗಿಕ್ತಿ | ಪೆರಗಿಕ್ಕಿ |
| ,, | ೧೮ | ನನ್ನಂಥವರನ್ನು | ಅಂಥವರನ್ನು |
| ೫೭೬ | ೭ | ಭಟ್ಟನ | ಬಟ್ಟನ |
| ,, | ೧೯ | ಸುಗಿಪಿನಂ | ಸುಗಿವಿನಂ |
| ೫೭೮ | ೨೦ | ತತ್ತು | ತುತ್ತು |
| ,, | ೨೨ | ಪೊನ್ನಭಟ್ಟ | ಪೊನ್ನಬಟ್ಟು |

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೫೮೦ | ೧೮ | ಸಲ್ಪು | ಸ್ವಲ್ಪು |
| ,, | ೨೧ | ಸ್ಫಾಲನ | ಆಸ್ಫಾಲನ |
| ,, | ೩೫ | ಕತೂಹಲ | ಕುತೂಹಲ |
| ೫೮೧ | ೨೩ | ರನ್ನ ಅಜಿತ ತೀರ್ಥಂಕರ ಪುರಾಣ | |
| ೫೮೩ | ೧೬ | ವಿದಾರಣು | ವಿದಾರಣಂ |
| ೫೮೪ | ೧೦ | ಕೈಯ್ಪು | ಕೆಯ್ಪು |
| ,, | ೧೩ | ಪತ್ರ | ಪುತ್ರ |
| ೫೮೫ | ೨೧ | ಸೇರ್ಪಡು | ನೇರ್ಪಡು |
| ೫೮೭ | ೧೧ | ಶತ್ರ | ಶತ್ರು |
| ೫೮೮ | ೨೪ | ಅಜಿದೊಡೆ | ಅಱಿದೊಡೆ |
| ,, | ೩೮ | ಮೀನಾಗುತ | ಮಿನುಗುತ |
| ೫೯೧ | ೧೯ | ಅಲುಗಾಡಿಸು | ಉಬ್ಬು |
| ೫೯೨ | ೧೫ | ಶುಭ್ರತೆಯನ್ನು ಪಸರಿಸು | ಪ್ರವಾಹವಾಗಿ ಬೀಳು |
| ೫೯೩ | ೩೫ | ಗಂಡಗಾಡೆ | ಗಂಡಗಾಡಿ |
| ೫೯೪ | ೧೧ | ದರ್ವೋಹ | ಸ್ಥಿರವಾದ ಪ್ರೀತಿ |
| ,, | ೨೮ | ಬೀಠರ | ಬೀಸರ |
| ೫೯೫ | ೧೦ | ಮಾರ್ಪಂ | ಮಾರ್ಗಂ |
| ,, | ೧೧ | ಪಡಿಯಿಂ | ಪಡೆಯಿಂ |
| ,, | ,, | ಪಡೆಯುಲಿ | ಪಡೆಯಿಂ |
| ,, | ೧೪ | ಕರ್ಣಪಾರ್ಯ ನೇಮಿನಾಥ ಪುರಾಣ | |
| ೬೦೦ | ೧೯ | ಸಲಕುಲ | ಸಂಕುಲ |

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ೬೦೧ | ೨ | ಪ್ರವಹಿಸು | ವಿಸ್ತಾರವಾಗಿ ಹರಿ |
| ೬೦೩ | ೨೨ | ವಿಶೇಷಬಲ | ಬುತ್ತಿ |
| ೬೦೪ | ೩೪ | ಕಾಡಾಗ್ನಿ | ಅಗ್ನಿ |
| ೬೦೬ | ೧೮ | ಚತುರಾಶಿ | ಚತುರಾಳಿ |
| ೬೦೯ | ೧೨ | ಸಮಾಧಿ | ಮೃಗಗಳನ್ನು ಮೋಹಿಸುವ ಗಾನ |
| ,, | ೧೩ | ಪಾರಥರ್ | ಪಾಂಥರ್ |
| ೬೧೧ | ೨೫ | ಆಕಾಶ | ಮೋಡ |
| ೬೧೩ | ೧೬ | ಪ್ರಟುಪಗೆ | ಪುಟುವಗೆ |
| ,, | ೨೯ | ಬಾಡಿಡ | ಬಾಡಿದ |
| ೬೧೪ | ೧ | ನಾರು | ನಾರಿ |
| ,, | ೪ | ಗೋರಿಹೊಳಿಸು | ಗೋರಿಗೊಳಿಸು |
| ,, | ೧೨ | ಶತಕಬೀಜ | ಕತಕಬೀಜ |
| ೬೧೫ | ೧೦ | ಮೋಗಂಡ | ಪೋಗಂಡ |
| ,, | ೧೬ | ಪ್ರಣಾಹ | ಪ್ರಣಾದ |
| ೬೧೭ | ೩ | ಮುಚ್ಚೈವೊಗಿ | ಮುಚ್ಚೈವೋಗಿ |
| ,, | ೧೨ | ನನೆದಿಲ್ಲ | ನನೆವಿಲ್ಲ |
| ,, | ೩೧ | ಉರಿ | ಹೆದರು |
| ೬೧೯ | ೨೨ | ತಾಟು | ಹರಿವಾಣ, ಗೊಂಚಲು |
| ೬೨೧ | ೧೪ | ಕೇವಣಿಪು | ಕೇವಣಿಸು |
| ,, | ೧೫ | ವೈನತೆ | ವೈನತೇಯ |
| ೬೨೨ | ೪ | ಚಾಡಿಕೋರ | ಅಲ್ಪ, ನೀಚ |

| ಪುಟ | ಪಂಕ್ತಿ | ತಪ್ಪು | ಒಪ್ಪು |
|---|---|---|---|
| ,, | ೯ | ಕೊಕ್ಕರಿ | ಮೋಡ |
| ,, | ૩೬ | ಓರಧಿ | ಓಷಧಿ |
| ೬೨೩ | ೨೯ | ಹುರುಡ | ಹುರುಡು |
| ,, | ૩೧ | ಹಳವಿ | ಹಳವಿಗೆ |
| ೬೨೪ | ૩ | ಬಡಬನ | ಬಡಬ |
| ,, | ೭ | ವಗ್ಗ | ವಗ್ಗು |
| ,, | ೨೪ | ಹಿಸುಣತಿ | ಹಿಸುಣೆತಿ |
| ೬೨೫ | ೧೨ | ಏಣೆ | ಏಣ |
| ,, | ೧೫ | ವರೆ | ಪಙಕ್ತಿ |
| ೬೨೯ | ೨ | ಕಾಸಿ | ಕಾಸೆ |
| ,, | ೧೨ | ಮಹಿತಾಳ | ಮಹೀತಳ |
| ,, | ೧೮ | ನಿರೋಜ | ನೀರೇಜ |
| ,, | ೨೦ | ಪ್ರಧಾನ | ಪ್ರದಾನ |
| ,, | ೨೪ | ಇಡಿಸಿರು | ಇಡಿಕೆಱು |
| ,, | ೨೫ | ಷರ್ಮ | ಧರ್ಮ |
| ,, | ೨೭ | ಪೊದರುಪೊದರಾಗಿ | ಹಬ್ಬಿ |
| ,, | ૩೪ | ಕೃತಾಂಕ | ಕೃತಾಂತ |
| ೬૩೦ | ೪೧ | ಗಾಂಢೀವಿ | ಗಾಂಡೀವಿ |
| ೬૩೧ | ೧ | ಆಕನಸ್ವನ | ಆನಕಸ್ವನ |
| ,, | ೧೪ | ಪೊದಪು | ಪದಪು |
| ,, | ૩೮ | ಸುಧಾಸುತಿ | ಸುಧಾಸೂತಿ |
| ,, | ೪૩ | ಕಾಪ್ಯ | ರೂಪ್ಯ |